ಪ್ರಾಚೀನ ಕನ್ನಡ ಸಾಹಿತ್ಯ ಶಿಲ್ಪ

ಪಂಪ ಯುಗ ಸಂಪುಟ-೧



ಗೌರವ ಸಂಪಾದಕರು :

ಪ್ರೊ. ಜಿ. ಅಶ್ವತ್ ನಾರಾಯಣ

ಡಾ. ಪ್ರಮೀಳಾ ಮಾಧವ

ಡಾ. ಜ್ಯೋತಿ ಶಂಕರ್

ಪ್ರಧಾನ ಸಂಪಾದಕರು

ವಸು ವತ್ಸಲೆ (ವತ್ಸಲಾ ಸುರೇಶ)

ಸ್ಪರ್ಧಾತ್ಮಕ ಪರೀಕ್ಷೆಗಳಿಗೂ ಸ್ಫೂರ್ತಿ

ಪ್ರಾಚೀನ
ಕನ್ನಡ ಸಾಹಿತ್ಯ ಶಿಲ್ಪ

ಪಂಪಯುಗ ಸಂಪುಟ –೧

ಪ್ರಧಾನ ಸಂಪಾದಕರು

ವಸು ವತ್ಸಲೆ, (ವತ್ಸಲ ಸುರೇಶ್)

ಗೌರವ ಸಂಪಾದಕರು :

ಪ್ರೊ. ಜಿ. ಅಶ್ವತ್ಥ ನಾರಾಯಣ

ಡಾ. ಪ್ರಮೀಳಾ ಮಾಧವ

ಡಾ. ಜ್ಯೋತಿ ಶಂಕರ್

ಅವ್ಯಕ್ತ ಪ್ರಕಾಶನ

ಬೆಂಗಳೂರು – 560068

ಮೊ. : 9900229868

ಅವ್ಯಕ್ತ ಪ್ರಕಾಶನ

Prachina Kannda sahithya shilpa

Edited by : **Vasu Vatsale** (Vatsala Suresh)

Published by : **Avyakta Prakashana**
102 SLV Shruthi, 7th Cross Vyasaraja Road
Bengaluru - 560068
: Mob : 8792693438

ISBN No : **978-81-964207-9-6**

ಪ್ರಾಚೀನ ಕನ್ನಡ ಸಾಹಿತ್ಯ ಶಿಲ್ಪ ಸಂಪುಟ – ೧

ಸಂಪಾದಕರು : ವಸು ವತ್ಸಲೆ (ವತ್ಸಲ ಸುರೇಶ್)

ಪ್ರಕಾಶಕರು : ಅವ್ಯಕ್ತ ಪ್ರಕಾಶನ,
102 ಎಸ್‌ಎಲ್‌ವಿ ಶ್ರುತಿ, 7ನೇ ಕ್ರಾಸ್,
ವ್ಯಾಸರಾಜ ರಸ್ತೆ, ಬೆಂಗಳೂರು – 560068
ಮೊ. : 8792693438

ಮುದ್ರಣ : 2023

ಬಳಸಿದ ಕಾಗದ : 1/18 ಡೆಮಿ 80 ಜಿ.ಎಸ್.ಎಂ., ಎನ್.ಎಸ್. ಮ್ಯಾಪ್‌ಲಿಥೋ

ಪುಟಗಳು : xxii+490 =512+ 2

ಬೆಲೆ : ರೂ. 599/–

ಮುಖಪುಟ ಚಿತ್ರ : ಶ್ರೀ ಶಂಕರ ಬೆನ್ನೂರ

ಅಕ್ಷರ ಜೋಡಣೆ : ಶ್ರೀಮತಿ ಜ್ಯೋತಿ ಬಿ.ಸಿ.

ಮುದ್ರಕರು : ರೀಗಲ್ ಪ್ರಿಂಟರ್ಸ್, ಬೆಂಗಳೂರು

ಅರ್ಪಣೆ

ಪ್ರಾಚೀನ ಕಾವ್ಯಗಳು, ಶಾಸನಗಳು, ಹಸ್ತಪ್ರತಿಗಳು,
ತಾಳೆಗರಿಗಳನ್ನು ಶೋಧಿಸಿ ಸಂರಕ್ಷಿಸಿ,
ಮುಂದಿನ ಪೀಳಿಗೆಗೆ ರವಾನಿಸಲು ಶ್ರಮಿಸಿದ ಎಲ್ಲಾ
ಸಾಹಿತಿಗಳಿಗೆ, ಸಂಶೋಧಕರಿಗೆ, ವಿಮರ್ಶಕರಿಗೆ,
ಹಸ್ತಪ್ರತಿಕಾರರಿಗೆ, ಉತ್ಖನನಕಾರಿಗೆ, ಪ್ರಕಾಶಕರಿಗೆ,
ಪ್ರೀತಿಯ ಓದುಗ ಮಹಾಶಯರಿಗೆ....

ಪ್ರಸ್ತಾವನೆ

ಕನ್ನಡವು ಕಸುವು ತುಂಬಿದ ಉತ್ಕೃಷ್ಟ ಭಾಷೆ

ಸ್ಥಿತ್ಯಂತರಗೊಳ್ಳುತ್ತಿರುವ ಚಾರಿತ್ರಿಕ ಮಹತ್ವದ ಕಾಲಘಟ್ಟದಲ್ಲಿ, ಆತ್ಮ ಪ್ರತ್ಯಯದಿಂದ ಉದ್ದೀಪನಗೊಂಡು ಬೃಹದಾಕಾರವಾಗಿ ಬೆಳೆದ ಬಗೆಯೇ ಇಂದಿನ ಸಾಹಿತ್ಯಕ್ಕೆ, ಭಾಷಾ ಕುಶಲತೆಗೆ ಈ ಪ್ರಾಚೀನ ಕಾವ್ಯಗಳು ಅಡಿಗಲ್ಲೆಂದೇ ಹೇಳಬೇಕು. ಸಾಹಿತ್ಯಶ್ರೀಯನ್ನು ಸಾಕ್ಷಾತ್ಕರಿಸಿಕೊಂಡ ಸಂಕ್ರಮಣ ಕಾಲದಿಂದ ಹಿಡಿದು ಇಲ್ಲಿಯ ತನಕ, ಸಾಹಿತ್ಯ ಚರಿತ್ರೆಯು ಹೊಸ ಬಗೆಯಲ್ಲಿ ಸಂಚಯನಗೊಂಡು ಅಕ್ಷಯವಾಗುತ್ತಲೇ ಇದೆ. ಈ ದಿಸೆಯಲ್ಲಿ ಹೊಸ ಹೊಳಪುಗಳೊಂದಿಗೆ ಪುನರ್ಭರಣಗೊಳಿಸುವ ಹಾದಿಯಲ್ಲಿ ಪ್ರಾಚೀನತೆಯೊಂದಿಗೆ ಆಧುನಿಕತೆಯನ್ನು ಬೆರೆಸಿ ಚೆಂದಗಾಣಿಸುವ ಪ್ರಯತ್ನವನ್ನು ನಡೆಸುತ್ತಲೇ ಇರಬೇಕಾದದ್ದು ಹೊಸ ಪೀಳಿಗೆಯ ಆದ್ಯ ಕರ್ತವ್ಯವೂ ಹೌದು. ಹಳೆಬೇರು ಹೊಸಚಿಗುರು ಒಂದಾದರೆ ಮರ ಸೊಬಗು ಎನ್ನುವಂತೆ ಪ್ರಾಚೀನ ಸಾಹಿತ್ಯ ಶಿಲ್ಪವು ಆಧುನಿಕ ಕನ್ನಡ ಸಾಹಿತ್ಯದ ಒಸುಗೆಯಲಿ ಬೆಸುಗೆಯಾಗಬಲ್ಲುದು. ಆದ್ದರಿಂದ ಸಾಧನಕೇರಿ ಪ್ರತಿಷ್ಠಾನ ಮತ್ತು ಅವ್ಯಕ್ತ ಪ್ರಕಾಶ ಸಹಯೋಗದಲ್ಲಿ 'ಪ್ರಾಚೀನ ಕನ್ನಡ ಸಾಹಿತ್ಯ ಶಿಲ್ಪ' ಕೃತಿಯನ್ನು ಹೊರ ತರುವ ಪ್ರಯತ್ನ ಮಾಡಿರುವುದು ಉತ್ತಮ ಕಾರ್ಯವಾಗಿದೆ.

ಕನ್ನಡ, ಕರ್ಣಾಟಕ, ಕರ್ನಾಟಕ ಎಂಬ ಶಬ್ದಗಳು ಭಾಷಾ ವಾಚಕವಾಗಿ, ದೇಶವಾಚಕವಾಗಿ ಹಾಗೂ ಜನಾಂಗ ವಾಚಕವಾಗಿ ಬಳಕೆಯಾಗುತ್ತಾ ಬಂದಿದೆ. 'ಪಳಗನ್ನಡ' ಅಥವಾ ಹಳಗನ್ನಡ ಎನ್ನುವಾಗ ಇದು ಭಾಷಾವಾಚಿಯಾಗಿದೆ. 'ಒಕ್ಕುಂದದ ನಡುವಣ ನಾಡೆ ಕನ್ನಡದ ತಿರುಳ್' ಎಂಬಲ್ಲಿ ಕವಿರಾಜ ಮಾರ್ಗಕಾರನಾದ ಶ್ರೀವಿಜಯನು, 'ಕನ್ನಡಮೆನಿಪ್ಪ ನಾಡು ಚೆಲ್ವಾಯಿತು' ಎಂಬಲ್ಲಿ ಆಂಡಯ್ಯ ಕನ್ನಡವನ್ನು ಪ್ರದೇಶವಾಚಿಯಾಗಿ ಬಳಸಿದ್ದಾನೆ. ಕರುನಾಡರ್, ಕರುನಾಡುಗನ್, ಕನ್ನಡಿಗರು ಮುಂತಾದ ಪ್ರಯೋಗಗಳು ಕನ್ನಡವು ಪ್ರದೇಶ ಮತ್ತು ಜನಾಂಗವಾಚಿಯಾಗಿ ಬಳಕೆಯಾಗಿದೆ. ಇಂದು ಕನ್ನಡ ಭಾಷಾವಾಚಿಯಾಗಿ ಮತ್ತು ಕರ್ನಾಟಕ ಪ್ರದೇಶವಾಚಿಯಾಗಿ ಸ್ವೀಕೃತವಾಗಿದೆ.

ದ್ರಾವಿಡ ಭಾಷಾ ಪರಿವಾರದಲ್ಲಿ ಶಾಸ್ತ್ರೀಯ ಪ್ರಬುದ್ಧತೆಯನ್ನು, ಸಮೃದ್ಧತೆಯನ್ನು ಹೊಂದಿರುವ ಭಾಷೆ ಕನ್ನಡ. ತನ್ನದೇ ಆದ ಇತಿಹಾಸವನ್ನು ಹೊಂದಿರುವ ಕನ್ನಡ ನಾಡು, ತನ್ನ ಭಾಷಾ ವೈಶಾಲ್ಯದ ಬಗ್ಗೆ ಕವಿರಾಜಮಾರ್ಗದಲ್ಲಿ "ಕಾವೇರಿಯಿಂದಮಾ ಗೋದಾವರಿವರಮಿರ್ದ ನಾಡಾದ ಕನ್ನಡದೊಳ್' ಎಂಬ ಮಾತನ್ನು ಉಲ್ಲೇಖಿಸಲಾಗಿದೆ. ಈಗಿನ ಭಾಷಾ ವಿಸ್ತಾರಕ್ಕಿಂತ ರಾಷ್ಟ್ರಕೂಟರ ಕಾಲದ ಭಾಷಾ ವ್ಯಾಪ್ತಿ ಮತ್ತು ಭೌಗೋಳಿಕ ವಿಸ್ತಾರ ಹಿರಿದಾಗಿತ್ತು ಎಂದು ಶಾಸನಗಳೂ ಸಹ ದೃಢೀಕರಿಸುತ್ತವೆ. ಹಾಗೇ 7ನೇ ಶತಮಾನದಲ್ಲಿನ ಕಪ್ಪೆ ಅರಭಟ್ಟನ ಶಾಸನ 'ಸಾಧುಗೆ ಸಾಧು ಮಾಧುರ್ಯಂಗೆ ಮಾಧುರ್ಯಂ' ಎಂಬ ಪದ್ಯದ ಸೊಗಸು 7ನೇ ಶತಮಾದಲ್ಲಿದ್ದ 'ಕನ್ನಡ ಸಾಹಿತ್ಯ' ಅದೆಷ್ಟು ಪ್ರಬುದ್ಧವಾಗಿತ್ತೆಂಬುದನ್ನು ಸ್ಪಷ್ಟಪಡಿಸುತ್ತದೆ.

ಕನ್ನಡ ಸಾಹಿತ್ಯ ಕ್ರಿಸ್ತ ಶಕದ ಆರಂಭದಿಂದಲೂ ಇದ್ದಿರ ಬಹುದಾದರೂ ಕ್ರಿ.ಶ. 850 ರವರೆಗೆ ಯಾವೊಂದು ಕೃತಿಯೂ ದೊರೆಯುವುದಿಲ್ಲ. ಆದರೆ 'ಕನ್ನಡ ಸಾಹಿತ್ಯ' ಕಾವ್ಯರಚನೆಗೆ ಹುರಿಗೊಂಡಿತ್ತೆಂಬ ಬಗ್ಗೆ ಕ್ರಿ.ಶ. 5 ಮತ್ತು 7 ರ ಶಾಸನಗಳಿಂದ ಮಾಹಿತಿ

ವ್ಯಕ್ತಗೊಳ್ಳುತ್ತದೆ. ಕವಿರಾಜಮಾರ್ಗವೇ ನಮ್ಮ ಮೊದಲ ಉಪಲಬ್ಧ ಕೃತಿ. ಅದರ ಪೂರ್ವದಲ್ಲೂ ಒಂದು ಸಾಹಿತ್ಯ ಪರಂಪರೆ ಇದ್ದ ಬಗ್ಗೆ ಕವಿರಾಜಮಾರ್ಗವೇ ಸಾಕ್ಷೀಕರಿಸುತ್ತದೆ.

"ಪರಮ ಶ್ರೀವಿಜಯ ಕವೀ
ಶ್ವರ ಪಂಡಿತ ಚಂದ್ರ ಲೋಕಪಾಲಾದಿಗಳಾ
ನಿರತಿಶಯ ವಸ್ತು ವಿಸ್ತರ
ವಿರಚನೆ ಲಕ್ಷ್ಯಂ ತದಾದ್ಯ ಕಾವ್ಯಕ್ಕೆಂದುಂ
ವಿಮಲೋದಯ ನಾಗಾರ್ಜುನ
ಸಮೇತ ಜಯಬಂಧು ದುರ್ವಿನೀತಾದಿಗಳೀ
ಕ್ರಮದೊಳ್ನೆಗಳ್ಚಿಗದ್ಯಾ
ಶ್ರಮ ಪದ ಗುರುತಾ ಪ್ರತೀತಿಯಂ ಕೈಕೊಂಡರ್

ಲಕ್ಷಣ ಗ್ರಂಥ ಕವಿರಾಜಮಾರ್ಗದಲ್ಲಿ ಹೀಗೆ ಗದ್ಯಕಾರರ ಪದ್ಯಕಾರರ ಹೆಸರಿರುವುದೂ ಹಲವಾರು ಶತಮಾನಗಳ ಹಿಂದಿನಿಂದಲೂ ಸಾಹಿತ್ಯವಿತ್ತೆಂಬುದಕ್ಕೆ ಆಧಾರ ಕೊಡುತ್ತದೆ. ಅಷ್ಟಲ್ಲದೆ ಸ್ಪಷ್ಟ ಸಾಹಿತ್ಯ ರಚನೆಯಾಗದೆ ಕವಿರಾಜಮಾರ್ಗದಂಥಹ ಲಕ್ಷಣ ಗ್ರಂಥವೊಂದು ಉದಯಿಸಲು ಸಾಧ್ಯವಿಲ್ಲ ಅಲ್ಲವೇ!!

ಕನ್ನಡ ಭಾಷೆಯ ಪ್ರೌಢ ಪರಂಪರೆಯಲ್ಲಿ ಪ್ರಾಚೀನ ಕಾವ್ಯಗಳಿಗೆ ವಿಶೇಷ ಸ್ಥಾನ ನೀಡಿದ್ದೇವೆ. ಪಂಪಾದಿ ಕವಿಗಳು ಮೌಲ್ಯ ಪ್ರಜ್ಞೆಯೊಂದಿಗೆ ಭಾಷೆಯನ್ನು ಬಳಸಿಕೊಂಡ ರೀತಿ ಬೆರಗು ಹುಟ್ಟಿಸುತ್ತದೆ. ಈ ವಿವಿಧ ಕೃತಿಗಳು ರಸವತ್ಫಲಗಳಿಂದ, ವರ್ಣನಾವೈಖರಿಗಳಿಂದ, ಉಕ್ತಿ ಚಾತುರ್ಯಗಳಿಂದ ಕಾವ್ಯಪ್ರಿಯರ ಹೃನ್ಮನಗಳನ್ನು ತಣಿಸುವಲ್ಲಿ ಶತಮಾನಗಳಿಂದಲೂ ಸಫಲವಾಗಿವೆ. ಕವಿರಾಜ ಮಾರ್ಗದ ಕರ್ತೃವಾದ ಶ್ರೀವಿಜಯನಾದಿಯಾಗಿ ಪಂಪ, ರನ್ನ, ಪೊನ್ನ ಮೊದಲಾದ ಕವಿಗಳು ಕನ್ನಡ ಸರಸ್ವತಿಯ ಮುಕುಟಕ್ಕೆ ಅನರ್ಘ್ಯವಾದ ಕೃತಿ ರತ್ನಗಳನ್ನು ಅರ್ಪಿಸಿ ಪುನೀತರಾಗಿದ್ದಾರೆ.

ಕವಿ ಕಾವ್ಯ : ಪಂಪ, ಪೊನ್ನ, ರನ್ನ ಈ ಮೂವರು ಹೆಚ್ಚು ಕಡಿಮೆ ಸಮಕಾಲೀನರು. ಗದ್ಯ-ಪದ್ಯ ಮಿಶ್ರಿತವಾದ ಕಾವ್ಯ ರೂಪದ ಪರಿಣತಿಯೊಂದಿಗೆ, ಕನ್ನಡ ಸಂಸ್ಕೃತ ಬಳಕೆಯ ಸುಂದರ ಸಮನ್ವಯತೆಯನ್ನು ಈ ಕವಿರತ್ನತ್ರಯರ ಕೃತಿಗಳಲ್ಲಿ ಕಾಣಬಹುದು. ಹತ್ತನೇ ಶತಮಾನದಲ್ಲಿ ಪಂಪನಿಂದ ಆರಂಭವಾದ ಈ ಕಾವ್ಯ ಪರಂಪರೆ ಹೊಸ ಆಲೋಚನಾ ವಿಧಾನಗಳಿಗೆ ನಾಂದಿ ಹಾಡಿತು. ಮುಂದೆ ಪೊನ್ನ, ರನ್ನ, ನಾಗಚಂದ್ರ, ನಾಗವರ್ಮರಂತಹ ಮಹಾನ್ ಕವಿಗಳು ಇದೇ ಪ್ರಕಾರದಲ್ಲಿ ಕೃತಿಗಳನ್ನು ರಚಿಸುತ್ತಾ ಸಾಗಿದರು. ರಾಜಕಾರಣ, ಮತಧರ್ಮಗಳ ಬಿಗುವಿನ ಕಾಲದಲ್ಲೂ, ವೈಚಾರಿಕ ನೆಲೆಯನ್ನು, ಆಧ್ಯಾತ್ಮವನ್ನು ಸಮತೋಲನವಾಗಿ ತೂಗಿಸಿ ಲೌಕಿಕ, ಅಲೌಕಿಕ ಕಾವ್ಯಗಳನ್ನು ಬರೆದರು. ಮುಂದೆ ವಚನ ಸಾಹಿತ್ಯ, ಕೀರ್ತನ ಸಾಹಿತ್ಯದ ನೆಲೆಯಲ್ಲಿ ಆಧ್ಯಾತ್ಮಿಕತೆ, ವಾಸ್ತವಿಕತೆ ಮತ್ತು ವೈಚಾರಿಕತೆಗಳ ನಾಯಕತ್ವಕ್ಕೆ ಹೊಸ ಸಾಧ್ಯತೆಗಳನ್ನು ಅಭಿಜಾತ ಪರಂಪರೆಯೊಂದಿಗೆ ಬರಮಾಡಿಕೊಳ್ಳಲು ಅಡಿಪಾಯವಿಟ್ಟದ್ದು ಈ ಪಂಪಯುಗ.

ಪಂಪಯುಗ : ಹತ್ತನೆಯ ಶತಮಾನವು ಕನ್ನಡ ಸಾಹಿತ್ಯದ ಸುವರ್ಣ ಯುಗವೆಂದೇ ಪ್ರಸಿದ್ಧವಾಗಿದೆ. ಇದಕ್ಕೆ ಬಹುಮಟ್ಟಿಗೆ ಕಾರಣ ಕವಿ ಪಂಪ. ಸಂಸ್ಕೃತದಲ್ಲಿ ವಾಲ್ಮೀಕಿ ಆದಿಕವಿಯಾದಂತೆ ಕನ್ನಡ ಕಾವ್ಯ ಪರಂಪರೆಯಲ್ಲಿ ಪಂಪ ಆದಿಕವಿ. ನಾಗರಾಜನೆಂಬ ಕವಿ ಆರು ನೂರು ವರುಷಗಳ ಹಿಂದೆಯೇ "ಪಸರಿಪ ಕನ್ನಡಕ್ಕೊಡೆಯನೋರ್ವನೆ ಸತ್ಕವಿ ಪಂಪನಾವಗಂ' ಎಂದು ಸಾರಿದ. ಪಂಪ ಹತ್ತನೆಯ ಶತಮಾನದ ಪ್ರಾತಿನಿಧಿಕ ಕವಿ. ಅವನು ಕಾಲದ ದೃಷ್ಟಿಯಿಂದ ಮಾತ್ರವಲ್ಲದೆ ಕಲೆಯ ದೃಷ್ಟಿಯಿಂದಲೂ ಅಗ್ರಗಣ್ಯನು.

ಕದಲೀಗರ್ಭಶ್ಯಾಮಂ
ಮೃದು ಕುಟಿಲ ಶಿರೋಹರಂ ಸರೋರುಹ ವದನಂ
ಮೃದು ಮಧ್ಯ ಮತನು ಹಿತ-ಮಿತ
ಮೃದು ವಚನಂ ಲಲಿತ ಮಧುರ ಸುಂದರ ವೇಶಂ

ಇಂತಹ ಸುಂದರಾಂಗ ಪಂಪನು ಕೃತಿಕಾರ್ಯಕ್ಕೆ ಚಂಪೂ ಶೈಲಿಯನ್ನೇ ಸಮರ್ಥ ವಾಹಕವನ್ನಾಗಿ ಮಾಡಿಕೊಂಡು, ಲೌಕಿಕ ಹಾಗೂ ಆಗಮಿಕ ಕಾವ್ಯಗಳಾದ ಆದಿಪುರಾಣ ಮತ್ತು ಪಂಪ ಭಾರತವನ್ನು ರಚಿಸುವ ಮೂಲಕ 1ನೇ ಗುಣವರ್ಮನನ್ನು ಅನುಸರಿಸಿದ. ಜೈನ ಧರ್ಮವೇ ಪ್ರಬಲವಾಗಿದ್ದುದರಿಂದ ಇವನ ನಂತರ ಬಂದ ಕವಿಗಳು ಇದೇ ಸಂಪ್ರದಾಯವನ್ನು ಅನುಸರಿಸಿದರೆಂದರೆ ಅತಿಶಯೋಕ್ತಿಯಾಗಲಾರದು. ಪಂಪಯುಗದ ಕವಿಗಳ ಹಲವು ಕವಿಗಳ ಕಾವ್ಯಗಳ ಪರಿಚಯಾತ್ಮಕ ಲೇಖನಗಳನ್ನು ಈ ಪಂಪಯುಗದ ಪುಸ್ತಕದಲ್ಲಿ ಸಂಕಲಿಸಲು ಪ್ರಯತ್ನಿಸಿದ್ದೇವೆ.

ಪೊನ್ನ : ಪೊನ್ನ ಹತ್ತನೇ ಶತಮಾನದ ನಟ್ಟ ನಡುವಣ ಕಾಲದವನು. ಇವನು ಭುವನೈಕರಾಮಾಭ್ಯುದಯ ಮತ್ತು ಶಾಂತಿಪುರಾಣವನ್ನು ರಚಿಸಿದ್ದಾನೆ. ಸಂಸ್ಕೃತ ಕವಿ ಅಸಗನ ಶಾಂತಿಪುರಾಣವನ್ನು ಆಧಾರವಾಗಿಟ್ಟುಕೊಂಡು ಕನ್ನಡದಲ್ಲಿ ಶಾಂತಿಪುರಾಣವೆಂದು ಕೃತಿ ರಚಿಸಿದ.

ರನ್ನ : ಪಂಪನಂತೆ ರನ್ನನೂ ಕನ್ನಡದ ಮಹತ್ವದ ಕವಿಗಳಲ್ಲಿ ಒಬ್ಬ. 'ರನ್ನನಿರುವ ಕನ್ನಡಕ್ಕೆ ಅನ್ಯರಿಂದ ಬಹುದೇ ಧಕ್ಕೆ? ಬರಿಯ ಕವಿಯೆ ಸಿಡಿಲ ಚಕ್ಕೆ' ಎಂಬ ಖ್ಯಾತಿಗೆ ರನ್ನ ಪಾತ್ರನಾದವನು. ರನ್ನ ರಚಿಸಿರುವ ಕೃತಿಗಳಲ್ಲಿ 'ಸಾಹಸಭೀಮ ವಿಜಯಂ' ಅತಿ ಮುಖ್ಯವಾದದ್ದು. ರನ್ನನ ಚಿತ್ತಾಕರ್ಷಕವಾದ ಕಾವ್ಯವನ್ನು ಒಮ್ಮೆ ಓದಲಾರಂಭಿಸಿದರೆ ಮತ್ತೆ ಓದಬೇಕೆನಿಸುವುದು ಸಹಜ. ಒಟ್ಟಾರೆ ಕನ್ನಡ ಸಾಹಿತ್ಯದ ಇತಿಹಾಸದಲ್ಲಿ ರನ್ನನಿಗೆ ವಿಶಿಷ್ಟವಾದ ಸ್ಥಾನವಿದೆ.

ಚಾವುಂಡರಾಯ : ಚಾವುಂಡರಾಯ ವಿರಚಿತ ಸಂಸ್ಕೃತದಲ್ಲಿ ಜಿನಸೇನ ಗುಣಭದ್ರನಿಂದ ರಚಿತವಾದ ಮಹಾಪುರಾಣದ ಸರಳ ಕನ್ನಡ ರೂಪವೇ 'ತ್ರಿಶಷ್ಟಿ ಲಕ್ಷಣ ಮಹಾಪುರಾಣ'. ಇದನ್ನು ರೂಢಿಯಿಂದ ಚಾವುಂಡರಾಯ ಪುರಾಣವೆಂದು ಕರೆಯಲಾಗುತ್ತದೆ. ಜೈನ ಸಾಹಿತ್ಯ ಕ್ಷೇತ್ರದಲ್ಲಿ 'ಚಾವುಂಡರಾಯ ಪುರಾಣ' ತನ್ನದೇ ಆದ ಮಹತ್ವವನ್ನು ಪಡೆದುಕೊಂಡಿದೆ.

ಒಂದನೇ ನಾಗವರ್ಮ : ಒಂದನೇ ನಾಗವರ್ಮನು ಎರಡು ಕೃತಿಗಳನ್ನು ರಚಿಸಿದನು. ಛಂದೋಂಬುಧಿ ಮತ್ತು ಕರ್ನಾಟಕ ಕಾದಂಬರಿ. ಇದರಲ್ಲಿ ಮೊದಲನೆಯದು ಶಾಸ್ತ್ರಗ್ರಂಥವಾದರೆ, ಎರಡನೆಯದು ಚಂಪೂಕಾವ್ಯ. 'ಛಂದೋಂಬುಧಿ' ಕನ್ನಡದಲ್ಲಿ ಉಪಲಬ್ಧವಿರುವ ಮೊಟ್ಟಮೊದಲ ಶಾಸ್ತ್ರ ಗ್ರಂಥವೆನಿಸಿದೆ. 'ಕರ್ನಾಟಕ ಕಾದಂಬರಿ' ಬಾಣದಿಂದ ರಚಿತವಾದ ಗದ್ಯಕಾವ್ಯದ ಪದ್ಯಾನುವಾದವಾಗಿದೆ.

ದುರ್ಗಸಿಂಹ : ಹನ್ನೊಂದನೇ ಶತಮಾನದ ಪೂರ್ವಾರ್ಧದಲ್ಲಿದ್ದ ದುರ್ಗಸಿಂಹ ಒಬ್ಬ ಜನಪ್ರಿಯ ಕವಿ. ಇವನ ಕೃತಿ 'ಕರ್ನಾಟಕ ಪಂಚತಂತ್ರ'. ಪಂಚತಂತ್ರದ ಕಥೆಗಳು ಮೂಲತಃ ಜನಪದ ಕಥೆಗಳ ಮಾದರಿಯ ಮೇಲೆ ರಚಿತವಾದವು. ದುರ್ಗಸಿಂಹನ ಪಂಚತಂತ್ರದ ಭಾಷಾ ಶೈಲಿಗಳು ಒಂದು ಸಂಕ್ರಮಣ ಸ್ಥಿತಿಯದು. ಮಾರ್ಗದಿಂದ ದೇಸಿಗೆ ಕ್ರಮಿಸುತ್ತಿರುವ ಸೂಚನೆಗಳು ದೊರೆಯುವುದು ಇದಕ್ಕೆ ಕಾರಣ. ಪಂಪ ರನ್ನಾದಿಗಳ ಪರಂಪರೆಯನ್ನೇ ದುರ್ಗಸಿಂಹ ತನ್ನ ಶೈಲಿಯಲ್ಲಿ ಮುಂದುವರಿಸಿದ್ದನಾದರೂ ಕೆಲವು ಪದ್ಯ ಗದ್ಯಗಳಲ್ಲಿ ದೀರ್ಘ ಸಮಾಸಗಳನ್ನು ಅಲ್ಲಲ್ಲಿ ತಂದಿರುವುದು ಪ್ರೌಢವಾಗಿದೆ.

ಶ್ರೀಧರಾಚಾರ್ಯ : ಕ್ರಿ.ಶ. ಸುಮಾರು 1041ರ ಕಾಲದಲ್ಲಿದ್ದ ಶ್ರೀಧರಾಚಾರ್ಯನು ಕನ್ನಡದ ಮೊದಲ ಜ್ಯೋತಿಷ್ಯ ಶಾಸ್ತ್ರ ಜಾತಕ ತಿಲಕವನ್ನು ಬರೆದಿದ್ದಾನೆ. 'ಜಾತಕ ತಿಲಕ' ಗ್ರಂಥದಲ್ಲಿ ಶ್ರೀಧರಾಚಾರ್ಯನು ಶಬ್ದ ಸೌಂದರ್ಯ ಪ್ರಸಾದ ಗುಣಗಳಿಂದ ಶಾಸ್ತ್ರವನ್ನು ಕಾವ್ಯದಂತೆ ಹೇಳಿದ್ದಾನೆ. ಇದು ಕಂದ ಮತ್ತು ವೃತ್ತಗಳಿಂದ ಕೂಡಿದೆ

ಶಾಂತಿನಾಥ : ಕನ್ನಡ ಸಾಹಿತ್ಯದಲ್ಲಿ 11ನೇ ಶತಮಾನವನ್ನು ಬರಡು ಕಾಲವೆಂದು ಕರೆಯಲಾಗಿತ್ತು. ಶಾಂತಿನಾಥನು ತನ್ನ ಕೃತಿಯಿಂದ ಹನ್ನೊಂದನೇ ಶತಮಾನಕ್ಕೆ ಜೀವ ಕಳೆ ತುಂಬಿದ ಕವಿ ಎನಿಸಿದ್ದಾನೆ. ಶಾಂತಿನಾಥನು ಸುಕುಮಾರಸ್ವಾಮಿಯ ಕಥೆಯ ಆಧಾರವಾಗಿಟ್ಟುಕೊಂಡು, ಸುಮಾರು ಒಂದು ಸಾವಿರ ಪದ್ಯಗಳ ಚಂಪೂ ಕಾವ್ಯವನ್ನು ಬರೆಯುವುದರ ಮೂಲಕ ತನ್ನ ಮೇಲ್ಮಟ್ಟದ ಜಾಣ್ಮೆಯನ್ನು ಈ ಕೃತಿಯಲ್ಲಿ ತೋರಿಸಿದ್ದಾನೆ.

ನಾಗಚಂದ್ರ : ಅಭಿನವ ಪಂಪನೆನೆಸಿರುವ ನಾಗಚಂದ್ರನು 11ನೇ ಶತಮಾನದ ಕವಿ. 'ರಾಮಚಂದ್ರಚರಿತ ಪುರಾಣ' ಮತ್ತು 'ಮಲ್ಲಿನಾಥ ಪುರಾಣ' ಎಂಬ ಎರಡು ಚಂಪೂ ಕಾವ್ಯಗಳನ್ನು ಈತ ರಚಿಸಿದ್ದಾನೆ. ತೀರ್ಥಂಕರನಾದ ಮಲ್ಲಿನಾಥನ ಕಥೆಯನ್ನು ನಿರೂಪಿಸುವ ಹದಿನಾಲ್ಕು ಆಶ್ವಾಸಗಳ ಕೃತಿ ಮಲ್ಲಿನಾಥ ಪುರಾಣವಾಗಿದೆ. ಅವನ ಮತ್ತೊಂದು ಮುಖ್ಯ ಕೃತಿ 'ರಾಮಚಂದ್ರಚರಿತಪುರಾಣ'. ಇದರಲ್ಲಿ 16 ಆಶ್ವಾಸಗಳ ಆಖ್ಯಾನವಿದೆ. ಇದು ವಾಲ್ಮೀಕಿ ಪರಂಪರೆಯ ರಾಮಾಯಣವಲ್ಲ. ಜೈನ ಪರಂಪರೆಯ ರಾಮಾಯಣ. ಇಡೀ ಕೃತಿಯಲ್ಲಿ ಜೈನ ವಾತಾವರಣವೇ ಹರಡಿರುವುದು ವಿಶೇಷ.

ನಯಸೇನ : ನಯಸೇನ ಮತ್ತೊಬ್ಬ ಮುಖ್ಯ ಕವಿಯಾಗಿದ್ದವನು. ಕ್ರಿ.ಶ, 1112ರ ಭಾಗದಲ್ಲಿ ಜೀವಿಸಿದ್ದ ಜೈನ ಕವಿ. ಈತನು ಚಂಪೂ ಕಾವ್ಯದಲ್ಲಿ ದೇಸೀ ಭಾಷೆಯನ್ನು ಬಳಸಿ 'ಧರ್ಮಾಮೃತ' ಎಂಬ ಕೃತಿಯನ್ನು ರಚಿಸಿದ್ದಾನೆ. ಹದಿನಾಲ್ಕು ಆಶ್ವಾಸಗಳಲ್ಲಿ ಮಾಲೋಪಮೆ ಬಳಸಿ ರಚಿಸಿದ್ದಾನೆ.

ಬ್ರಹ್ಮಶಿವ : ಬ್ರಹ್ಮಶಿವನ 'ಸಮಯ ಪರೀಕ್ಷೆ'ಯು ಒಂದು ಅಪರೂಪದ ಕೃತಿ. ಮೂಲತಃ ಇದೊಂದು ವಾದ ಗ್ರಂಥ. ಆಪ್ತಸ್ವರೂಪನಿರೂಪಣಂ, ಆಪ್ತಾಗವರ್ಣನಂ ಮುಂತಾದ ಹದಿನೈದು ಅಧಿಕಾರಗಳು ಈ ಕೃತಿಯಲ್ಲಿವೆ. ಜಿನಧರ್ಮದ ಮಾರ್ಗದಲ್ಲಿ ನಿಶ್ಚಲವಾಗಿ ನಿಂತು, ಅದರ ತಾತ್ವಿಕತೆ ಹಾಗೂ ಬೌದ್ಧಿಕತೆ ಪೋಷಿಸುವ, ಅವುಗಳ ಮೌಲ್ಯವನ್ನು ಪ್ರತಿಪಾದಿಸಿ ಉಪದೇಶಿಸುವ ಸಂಕಲ್ಪ ಈ ಕವಿಯದಾಗಿದೆ.

ಕರ್ಣಪಾರ್ಯ : ಕರ್ಣಪಾರ್ಯನು ಒಬ್ಬ ಜೈನ ಕವಿ. ಇವನು 'ನೇಮಿನಾಥಪುರಾಣ' ಮತ್ತು 'ವೀರೇಶ ಚರಿತೆ' ಕೃತಿಗಳನ್ನು ಬರೆದಿದ್ದಾನೆ. ನೇಮಿನಾಥ ಪುರಾಣದಲ್ಲಿ ಜಿನಸೇನರ ಹರಿವಂಶ ಪುರಾಣವನ್ನು ಚಾವುಂಡರಾಯ ಪುರಾಣದ ಮೂಲಕವಾಗಿ ಗುಣಭದ್ರಾಚಾರ್ಯರ ಮಹಾಪ್ರಾಣ ಮಾರ್ಗವನ್ನೂ ಯಥೋಚಿತವಾಗಿ ಸಮ್ಮಿಳನ ಮಾಡಿಕೊಂಡಿರುವ ಕೃತಿ.

2ನೇ ನಾಗವರ್ಮ : ಎರಡನೇ ನಾಗವರ್ಮನಿಂದ 'ಅಭಿದಾನ ವಸ್ತುಕೋಶ', 'ಕಾವ್ಯಾವಲೋಕನ', 'ಕರ್ನಾಟಕ ಭಾಷಾ ಭೂಷಣ' ಕೃತಿಗಳು ರಚಿತವಾಗಿದೆ. ಅಭಿಧಾನ ವಸ್ತುಕೋಶವು ಸಂಸ್ಕೃತ ನಿಘಂಟುಗಳಿಗೆ ಕೋಶದ ರಚನೆಗೆ ಪ್ರೇರಣೆಯಾಗಿದೆಯೆಂದು ನಿಘಂಟುಕಾರರು ಹೇಳಿದ್ದಾರೆ. ಈ ಕೋಶವು ಸಂಸ್ಕೃತ ಕೋಶ ಶಿಲ್ಪದ ಹಾಗೆ 'ಏಕಾರ್ಥ ಕಾಂಡ', 'ನಾನಾರ್ಥ ಕಾಂಡ' ಮತ್ತು 'ಸಾಮಾನ್ಯ ಕಾಂಡ' ಎಂಬ ಮೂರು ಕಾಂಡಗಳನ್ನು ಒಳಗೊಂಡಿದೆ. ಇನ್ನು 'ಕಾವ್ಯಾವಲೋಕನ'ವು ಅಲಂಕಾರ ಶಾಸ್ತ್ರವನ್ನು ಕುರಿತ ಕೃತಿ. ಆದರೆ ವ್ಯಾಕರಣವನ್ನು ಕುರಿತ ಶಬ್ದ ಸ್ಮೃತಿ ಎಂಬ ಇಡೀ ಅಧ್ಯಾಯವನ್ನು ಅಳವಡಿಸಲಾಗಿದೆ. ಕಾವ್ಯ ಮಲವ್ಯಾವೃತ್ತಿ, ಗುಣವಿವೇಕ, ರೀತಿಕ್ರಮರಸನಿರೂಪಣ ಮತ್ತು ಕವಿಸಮಯ ಎಂಬ ತಲೆ ಬರಹಗಳನ್ನು ಪಡೆದಿದೆ. ನಾಗವರ್ಮನು ತನ್ನ ಪುಸ್ತಕ, ಇತರೆ ಕವಿಗಳ ಕೈಗನ್ನಡಿಯೆಂದು ಹೇಳಿಕೊಂಡಿದ್ದಾನೆ.

ಕವಿರಾಜಮಾರ್ಗದಲ್ಲಿ ಬರುವ ಪ್ರಾಸಂಗಿಕ ಉಲ್ಲೇಖಗಳನ್ನು ಹೊರತುಪಡಿಸಿದರೆ ಕರ್ನಾಟಕ ಭಾಷಾಭೂಷಣವೇ ನಮಗೆ ಸಿಕ್ಕಿರುವ ಮೊಟ್ಟಮೊದಲ ಕನ್ನಡ ಭಾಷಾ ವ್ಯಾಕರಣ ಗ್ರಂಥ. ಇದರಲ್ಲಿ 269 ಸೂತ್ರಗಳನ್ನು ಒಳಗೊಂಡಿರುವ 10 ಅಧ್ಯಾಯಗಳಿವೆ. ಸಂಜ್ಞಾ, ಸಂಧಿ, ವಿಭಕ್ತಿ, ಕಾರಕ, ಶಬ್ದರೀತಿ, ಸಮಾಸ, ತದ್ದಿತ, ಆಖ್ಯಾತ, ಅವ್ಯಯ ಮತ್ತು ನಿಪಾತ ಎನ್ನುವ ಶೀರ್ಷಿಕೆಗಳಿವೆ. ಈ ಪುಸ್ತಕ ಕನ್ನಡ ಭಾಷೆಯ ಧ್ವನಿ ರಚನೆ ಮತ್ತು ಶಬ್ದ ರಚನೆಗಳನ್ನು ಕುರಿತ ಹಾಗೆ ಸಾಕಷ್ಟು ಸಮರ್ಪಕವಾದ ಮಾಹಿತಿಯನ್ನು ಕೊಡುತ್ತದೆ.

ಹತ್ತನೇ ಶತಮಾನವು ಅನೇಕ ದೃಷ್ಟಿಗಳಿಂದ ಮುಖ್ಯವಾಗಿದೆ. ರಾಜಕೀಯ ಘರ್ಷಣೆಯ ಕಾಲವಾದರೂ ಕಾವ್ಯಧೋರಣೆಯನ್ನು ಬದಲಾಯಿಸುವುದನ್ನಾಗಲಿ ಇತಿಹಾಸವನ್ನು ತಿರಚುವುದನ್ನಾಗಲಿ ಮಾಡಲಿಲ್ಲ. ಬದಲಾಗಿ ಕಾವ್ಯಗಳ ನೆಲೆಯನ್ನು ವಿಸ್ತರಿಸಿಕೊಳ್ಳಲು ಪ್ರಯತ್ನಿಸಿದರು. ಈ ಕಾಲದಲ್ಲಿ ಜೈನ ಧರ್ಮವೇ ಮುಖ್ಯವಾದುದರಿಂದ ಅತಿ ಹೆಚ್ಚು ಕೃತಿಗಳು ಜೈನ ಧರ್ಮದ ಮೇಲೆ ರಚನೆಗೊಂಡಿರುವುದು ಕಂಡು ಬರುತ್ತದೆ.

ಪ್ರಾಚೀನ ಕನ್ನಡ ಸಾಹಿತ್ಯ ಶಿಲ್ಪ :

ಈ ಮೇಲಿನ ಎಲ್ಲಾ ಪ್ರಾಚೀನ ಕಾವ್ಯಗಳ ಕುರಿತು ಬೇರೆ ಬೇರೆ ಕಾಲಘಟ್ಟಗಳಲ್ಲಿ ವಿವಿಧ ದೃಷ್ಟಿಕೋನಗಳಿಂದ ಬರೆಯಲಾಗಿದೆ. ಅವುಗಳನ್ನು ಹಲವು ಆಯಾಮಗಳಲ್ಲಿ ನೋಡುವ ಅಗತ್ಯವಿದೆ. ಸಮಕಾಲೀನ ಪ್ರಜ್ಞೆಯನ್ನು ಜೊತೆಯಲ್ಲಿಟ್ಟುಕೊಂಡೇ ಆಯಾ ಕಾವ್ಯಗಳ ಸಾಮಾಜಿಕ, ಸಾಂಸ್ಕೃತಿಕ, ತಾತ್ವಿಕ, ಭಾಷಿಕ, ಐತಿಹಾಸಿಕ ತೌಲನಿಕ ಅಧ್ಯಯನಗಳಕಡೆಗೂ ಅನಿವಾರ್ಯವಾಗಿ ಗಮನಹರಿಸಬೇಕಾಗುತ್ತದೆ. ಕಾವ್ಯಗಳ ಅಧ್ಯಯನವು ಮುಖ್ಯವಾಗಿ ಅದರ ದ್ರವ್ಯವನ್ನು ವಿಶ್ಲೇಷಿಸುವುದರತ್ತ ಸಾಗಬೇಕಾಗಿದೆ. ಈ ಕುರಿತು ಹಲವು ಅಧ್ಯಯನಗಳು ನಡೆದಿರುವುದಾದರೂ ವ್ಯಾಪಕವಾಗಿ ಸಮಗ್ರ ದೃಷ್ಟಿಯಲ್ಲಿ ನಡೆದಿಲ್ಲ ಎಂಬುದು ವಿದ್ವಾಂಸರ ವಾದ. ಪ್ರಸ್ತುತತೆಯ ಅನಿವಾರ್ಯದಿಂದ ಹೊಸ ಬಗೆಯ ಚಿಂತನೆಗಳನ್ನು ದಾಖಲಿಸುತ್ತಾ, ಈ ಕೃತಿಗಳ ಬಗ್ಗೆ ಮತ್ತೆ ಅಧ್ಯಯನಶೀಲ, ಪರಿಚಯಾತ್ಮಕ ಲೇಖನಗಳನ್ನು ಸಂಗ್ರಹಿಸಿ ಪುಸ್ತಕ ರೂಪಕ್ಕೆ ತರುವ ಉದ್ದೇಶವನ್ನು ಮನಗಂಡೆವು. ಏಕೆಂದರೆ ನಮ್ಮ ಬಹು ಮುಖ್ಯ ಪ್ರಾಚೀನ ಕವಿಗಳ ಕುರಿತು ಸಾಕಷ್ಟು ಅಧ್ಯಯನ ನಡೆದಿದ್ದರೂ ಸಹ ಸಾಹಿತ್ಯ ಚರಿತ್ರೆಯ ಬರವಣಿಗೆಯನ್ನು ಒಟ್ಟಾರೆ ಗಮನಿಸಿದಾಗ ಉಳಿದ ಅನೇಕ ಕವಿಗಳ ಬಗ್ಗೆ ಅಂತಿಮವಾದ ಮಾತನ್ನು ಯಾರೂ ಹೇಳಲು ಸಾಧ್ಯವಾಗಿಲ್ಲ. ನಮ್ಮ ಎಷ್ಟೋ ಕವಿಗಳ ಕೃತಿಗಳು ಇನ್ನೂ ಹಸ್ತ ಪ್ರತಿಯಲ್ಲೇ ಉಳಿದಿರುವುದು ನಮಗೆಲ್ಲರಿಗೂ ತಿಳಿದಿರುವ ವಿಷಯ. ಅದರಲ್ಲೂ ಪ್ರಕಟವಾದ ಕೆಲವು ಕೃತಿಗಳು ನಮಗೆ ನೋಡಲು ಸಹ ದೊರೆಯುತ್ತಿಲ್ಲ. ಹೀಗಾಗಿ ಪ್ರಾಚೀನ ಕನ್ನಡದ ಹಲವು ಕವಿಗಳನ್ನು ಸಮರ್ಥವಾಗಿ ಒಳ ಪ್ರವೇಶಿಸುವುದು ಇವತ್ತಿಗೂ ಕಷ್ಟವಾಗಿದೆ. ಜೊತೆಗೆ ಆಧುನಿಕತೆಯ ಮೊರೆತದಲ್ಲಿ ಪ್ರಾಚೀನ ಸಾಹಿತ್ಯದೆಡೆಗಿನ ಒಲವು ಕಡಿಮೆಯಾಗಿರುವುದೂ ಒಂದು ಮುಖ್ಯ ಕಾರಣ.

ಛಂದೋ ಬದ್ಧತೆಯಿಂದ ಮುಕ್ತತೆಯೆಡೆಗೆ ಸಾಗುತ್ತಿರುವ ನವ್ಯ ಸಾಹಿತ್ಯವು, ಕಾವ್ಯದ ಶಾಸ್ತ್ರೀಯ ಗುಣಗಳನ್ನು ದಾಟಿರುವುದರಿಂದ, ಪ್ರಾಚೀನ ಸಾಹಿತ್ಯದ ಅಧ್ಯಯನದ ಅವಶ್ಯಕತೆಯೂ ದೂರ ಉಳಿದಿದೆ.

ವಿದ್ಯಾರ್ಥಿಗಳಿಗೆ ಹಳಗನ್ನಡವೆಂದರೆ ಕ್ಲಿಷ್ಟವೆನ್ನುವ ಭಾವವೇ ಹೆಚ್ಚು. ಅಂಕಗಳ ಅನಿವಾರ್ಯಕ್ಕೆ ಸಿಲುಕಿ ಕಾವ್ಯಗಳಲ್ಲಿನ ನಿಜದ ರಸಭಾವ ದಕ್ಕಿಸಿಕೊಳ್ಳುವ ಪ್ರಯತ್ನಗಳಿಗೆ ಅವರು ಮುಂದಾಗುತ್ತಿಲ್ಲ. ಯುವ ಸಂಶೋಧಕರು ನೀರಸ ಅಧ್ಯಯನಗಳಲ್ಲಿ ತೊಡಗಿ ಹೊಸ ಹೊಳಹುಗಳ ಸಂಶೋಧನೆಗಳತ್ತ ಮುಖ ಮಾಡದೆ ವಿಮುಖವಾಗುತ್ತಿರುವುದು ಆತಂಕ ಉಂಟು ಮಾಡುತ್ತಿದೆ. ಹಳಗನ್ನಡ ಅಧ್ಯಯನದ ಅನಿವಾರ್ಯತೆ ಏಕೆ? ಅದು ಅನುಪಯುಕ್ತ ಎಂದು ವಾದಿಸುವ ಪ್ರಾಧ್ಯಾಪಕರ ತಂಡವೂ ಇಲ್ಲದಿಲ್ಲ. ಇಷ್ಟೆಲ್ಲದರ ನಡುವೆ ಡಾ.ಸಿದ್ದಲಿಂಗಯ್ಯನವರ ಆಸಕ್ತಿಯ ಮೇರೆಗೆ, ಒಂದು ಓದಿಗೆ ತೊಡಗಿಕೊಳ್ಳುವ ಪ್ರಬಲ ಇಚ್ಛೆಯಿಂದ ಹಳಗನ್ನಡ ಸಾಹಿತ್ಯ ಶಿಲ್ಪದ ಕೆಲಸದಲ್ಲಿ ತೊಡಗಿಕೊಂಡೆ.

ಒಂದು ಶ್ರೇಷ್ಠ ಕೃತಿಯು ಸಮಕಾಲೀನವೂ, ಅದೇ ಸಮಯದಲ್ಲಿ ಸರ್ವಕಾಲೀನವೂ ಆಗಿರಬೇಕಾಗುತ್ತದೆ. ಕಾಲಾತೀತವಾದ ಜೀವನ ಮೌಲ್ಯಗಳು ಅಭಿವ್ಯಕ್ತಿ ನೀಡಲು ಹೊರಟರೆ ಸಮಕಾಲೀನತೆಯಿಂದ ವಂಚಿತವಾಗುವುದಿಲ್ಲ. ಏಕೆಂದರೆ ಒಬ್ಬ ಶ್ರೇಷ್ಠ ಕವಿ ತನ್ನ ಕಾಲದ ಮೂಲಕವೇ ಮಾತಾನಾಡಬೇಕಾದ್ದರಿಂದ ಅವನು ತನ್ನ ಕಾಲದ ಶ್ರೇಷ್ಠ ಪ್ರತಿನಿಧಿಯೂ ಆಗಿರುತ್ತಾನೆ. ಆದ್ದರಿಂದ ಐತಿಹಾಸಿಕವಾಗಿ, ಸಾಹಿತ್ಯಕವಾಗಿ ಆಯಾ ಕಾಲಘಟ್ಟದಲ್ಲಿ ರಚಿತವಾದ ಕಾವ್ಯಗಳು ಮುಖ್ಯ ದಾಖಲೆಗಳಾಗಿರುತ್ತವೆ ಎನ್ನುವುದನ್ನು ಮರೆಯುವಂತಿಲ್ಲ. ಜಗತ್ತು ನಾಗರೀಕರಣಕ್ಕೆ ಎಷ್ಟೇ ಒಗ್ಗಿಕೊಂಡರೂ, ಪಾರಂಪರಿಕ ಅನುಭವ ಮತ್ತು ತಿಳಿವು ಮುಂದಿನ ನಡೆಗೆ ಅಗತ್ಯವಾದದ್ದು. ಅಂತಹ ಸೂಕ್ಷ್ಮತೆಯನ್ನು ಪೀಳಿಗೆಗಳಿಗೆ ರವಾನಿಸಲು ಸಾಧ್ಯವಾಗುವುದು ಪಾರಂಪರಿಕ ಕಾವ್ಯಗಳಿಗೆ ಮಾತ್ರ. ಪ್ರಾಚೀನ ಕಾವ್ಯಗಳ ಸೂಕ್ಷ್ಮತೆಯನ್ನು ಅಧ್ಯಯನ ಮಾಡದೆ, ಅರಿಯದೆ ಹೊಸದೊಂದು ಸಾಹಿತ್ಯ ಸೃಷ್ಟಿಸುವುದು ಕೃತಕವಷ್ಟೇ. ಆಗಿನ ಭಾಷಾ ವೈಖರಿಯನ್ನು ಸುಧಾರಿಸಿ ಬದಲಿಸಿ ಸಾಹಿತ್ಯದ ಅನನ್ಯ ಪ್ರಕಾರಗಳನ್ನು ರೂಢಿಸಿಕೊಂಡಿದ್ದರೂ, ಅವುಗಳಲ್ಲಿ ಅಡಕವಾಗಿರುವ ಭಾವವನ್ನು ನಾವು ಎರವಲು ಪಡೆಯದೆ ಏನನ್ನೂ ಸೃಷ್ಟಿಸಲಾರೆವು.

ಹಿಂದೆ ನಡೆದ ಹಾದಿಯ ಸುಳಿವಿಲ್ಲದೆ ಮುಂದೆ ನಡೆಯಲಾದೀತೆ? ಆದ್ದರಿಂದ ನಮ್ಮ ಸಾಹಿತ್ಯ ಬಗೆಗಿನ ಓದನ್ನು ಪ್ರಾರಂಭಿಸುವ ಮೂಲದ ರೂಹುಗಳು ಪ್ರಾಚೀನ ಸಾಹಿತ್ಯವೇ ಆಗಿರಲಿ ಎಂದು ಆಶಿಸುತ್ತೇನೆ.

ಇದೇ ಹೊತ್ತಿನಲ್ಲಿ ಪ್ರಾಚೀನ ಕನ್ನಡ ಕಾವ್ಯಗಳು ಸಮಾನ ಆಸಕ್ತಿಯ ಕೇಂದ್ರಗಳಾಗಲಾರವು. ಬದಲಾಗುತ್ತಾ ಬಂದ ಜನ ಜನಜೀವನದ ಪಾರಂಪರಿಕ ಅನುಭವ ಮತ್ತು ತಿಳಿವು, ಗರಿಷ್ಠ ಮಟ್ಟದ ಪರಿಶೀಲನೆಗೆ ಒಟ್ಟಿನಲ್ಲಿ ಒಂದು ದೊಡ್ಡ ಕೊರತೆ. ಆದ್ದರಿಂದ ನಾನು ಇಲ್ಲಿ ಯಾವುದೇ ಕಾವ್ಯವನ್ನು ವಿಮರ್ಶೆಗೆ ಒಳಪಡಿಸುವ ಉದ್ದೇಶವನ್ನು ಲೇಖಕರ ಮುಂದೆ ಇಟ್ಟಿರಲಿಲ್ಲ. ಅದರ ಅಗತ್ಯವೂ ನನಗೆ ಕಾಣಲಿಲ್ಲ. ವಿಭಿನ್ನ ವಿಷಯಗಳಲ್ಲಿನ ಸೂಕ್ಷ್ಮಗಳ ಕಡೆಗೆ ಬೆಳಕು ಹರಿಸುವ ಕೆಲಸವನ್ನು ಮಾಡಬೇಕೆಂದುಕೊಂಡು ಹಿರಿಯ ಲೇಖಕರ ಮಾರ್ಗದರ್ಶನದಿಂದ ಮುಂದಡಿ ಇಟ್ಟು, ಅವರಲ್ಲೂ ಲೇಖನಗಳನ್ನು ಪಡೆದೆ.

ಸಾಕಷ್ಟು ಓದುಗರಿಗೆ ಪ್ರಾಚೀನ ಕಾವ್ಯಗಳಲ್ಲಿ ಕೆಲವೇ ಕವಿಗಳ ಕೃತಿಗಳಷ್ಟೇ ಪರಿಚಿತ. ಆದ್ದರಿಂದ ಆಯಾ ಕಾಲದಲ್ಲಿ ರಚನೆಯಾದ ಲಭ್ಯ ಕೃತಿಗಳ ಪರಿಚಯಾತ್ಮಕ ಲೇಖನಗಳನ್ನು ಬರೆಸುವ ಪ್ರಯತ್ನ ಮಾಡಿದ್ದೇನೆ. ಲೇಖಕರು ಭಾಗಶಃ ಆ ಕೃತಿಗಳ ಮೇಲೆ ಸಂಶೋಧನೆ ನಡೆಸಿದವರೇ ಆಗಿದ್ದಾರೆ. ಅವರಿಷ್ಟದ ಕಾವ್ಯಗಳನ್ನು ಆರಿಸಿಕೊಂಡು ಲೇಖನಗಳನ್ನು ಬರೆದು ಕೊಟ್ಟಿರುವುದಕ್ಕೆ ನಾನು ಅವರಿಗೆಲ್ಲ ಆಭಾರಿ.

ಕಲಾತ್ಮಕತೆಯನ್ನು ಜೊತೆಯಲ್ಲಿಟ್ಟುಕೊಂಡೇ ಆಯಾ ಕಾಲದ ಸಾಂಸ್ಕೃತಿಕ, ತಾತ್ವಿಕ, ಭಾಷಿಕ, ಐತಿಹಾಸಿಕ ಅಧ್ಯಯನಗಳಿಗೆ ಅನಿವಾರ್ಯವಾಗಿ ಕೆಲವು ಲೇಖಕರು ಗಮನಹರಿಸಿದ್ದಾರೆ. ಪ್ರಾಚೀನ ಕನ್ನಡ ಕಾವ್ಯಗಳನ್ನು ವಿಮರ್ಶೆ ಮಾಡುವುದಕ್ಕಿಂತ ಅಧ್ಯಯನ ಮಾಡುವುದೇ ಅತ್ಯಂತ ಸೂಕ್ತ ಎಂದು ಭಾವಿಸಿ ಈ ಪುಸ್ತಕದಉದ್ದೇಶಗಳನ್ನು ರೂಪಿಸಿದ್ದೇವೆ. ಕಾವ್ಯಗಳ ಪರಿಚಯವನ್ನು ಸರಳವಾಗಿ ಅರ್ಥಮಾಡಿಕೊಳ್ಳಲು ಅನುವಾಗಬೇಕು, ಕನ್ನಡದ ಪ್ರಾಚೀನ ಕಾವ್ಯಗಳ ಗ್ರಹಿಕೆಗೆ ಕೆಲಮಟ್ಟಿಗಾದರೂ ನೆರವಾಗಬೇಕು ಎಂಬ ಆಶಯದ

ಹಿನ್ನೆಲೆಯಲ್ಲಿ ಪ್ರಸ್ತುತ "ಪ್ರಾಚೀನ ಕನ್ನಡ ಸಾಹಿತ್ಯ ಶಿಲ್ಪ' ಕೃತಿಯು ಪ್ರಕಟವಾಗುತ್ತಿದೆ. ಪಂಪಯುಗದಲ್ಲಿ ಲಭ್ಯವಾಗಿರುವ ಎಲ್ಲಾ ಕೃತಿಗಳ ಪರಿಚಯಾತ್ಮಕ ಲೇಖನಗಳನ್ನು ಒಗ್ಗೂಡಿಸಿ, ಪಂಪಯುಗ ಸಂಪುಟ–೧ ಈಗ ಪ್ರಕಟಿಸಲಾಗುತ್ತಿದೆ. ಎರಡನೆಯ ಸಂಪುಟದಲ್ಲಿ ನಡುಗಾಲದ ಸಾಹಿತ್ಯ ಕೃತಿಗಳ ಪರಿಚಯವನ್ನು ಶೀಘ್ರವಾಗಿ ತರಲು ತಯಾರಿನಡೆದಿದೆ. ಮೂರನೆಯ ಸಂಪುಟದಲ್ಲಿ ಆಧುನಿಕ ಸಾಹಿತ್ಯದತ್ತ ಹೆಜ್ಜೆ ಹಾಕುವ ನಿರೀಕ್ಷೆ ಇದೆ.

ಪಂಪಯುಗದಲ್ಲಿ ರಚನೆಗೊಂಡ ಬಹುತೇಕ ಲಭ್ಯ ಕೃತಿಗಳ ಲೇಖನಗಳನ್ನು ಸಂಪಾದಿಸುವ ಪ್ರಯತ್ನ ಮಾಡಿದ್ದೇನೆ. ಸಂಪಾದನೆಯ ಹೊಣೆ ಹೊತ್ತು ನಿಂತಾಗ ಪ್ರಾಚೀನ ಕಾವ್ಯಗಳ ಬಗ್ಗೆ ಹೆಸರಿನ ಹೊರತಾಗಿ ಏನೂ ತಿಳಿದಿರಲಿಲ್ಲ. ಕಾರ್ಯಾರಂಭವಾಗುತ್ತಲೇ ಲೇಖನಗಳ ವಿಷಯ ಸಂಪದೀರಣಕ್ಕಾಗಿ ಒಂದಷ್ಟು ಓದು, ಜ್ಞಾನಾರ್ಜನೆಗೆ ನನ್ನ ಬಹುಪಾಲು ಸಮಯ ಮೀಸಲಿಟ್ಟಿದ್ದು ಅಮೂಲ್ಯವೆನಿಸಿತು. ಈ ಪುಸ್ತಕ ಮೌಲ್ಯಯುತವಾಗಿ ರೂಪುಗೊಳ್ಳಲು ಡಾ. ಪ್ರಮೀಳಾ ಮಾಧವ್ ಮತ್ತು ಡಾ. ಜ್ಯೋತಿ ಶಂಕರ್ ಅವರ ಸಹಕಾರ ಅತ್ಯುನ್ನತವಾದದ್ದು. ಎರಡು ವರ್ಷಗಳ ದೀರ್ಘ ಪ್ರಯತ್ನದಿಂದ ಈ ಕೃತಿಯನ್ನು ಆಸಕ್ತ ಓದುಗ ಸಮುದಾಯಕ್ಕೆ ಅರ್ಪಿಸುತ್ತಿದ್ದೇವೆ. ಧನ್ಯೋಸ್ಮಿ

ವಸು ವತ್ಸಲೆ
ಸಂಪಾದಕರು

ಪ್ರಕಾಶಕರ ನುಡಿ

'ಪ್ರಾಚೀನ ಕನ್ನಡ ಸಾಹಿತ್ಯ ಶಿಲ್ಪ' ಒಂದು ಅತ್ಯಮೂಲ್ಯ ಕೃತಿಯಾಗಿ ಅವ್ಯಕ್ತ ಪ್ರಕಾಶನದಿಂದ ಪ್ರಕಟಗೊಳ್ಳುತ್ತಿರುವುದು ಅತ್ಯಂತ ಆನಂದಭರಿತನನ್ನಾಗಿ ಮಾಡಿದೆ. ಕನ್ನಡ ಸಾಹಿತ್ಯದ ರೂಹುಗಳನ್ನು ಹುಡುಕುತ್ತಾ ಹೋದಂತೆ ಪ್ರಾಚೀನ ಕನ್ನಡ ಸಾಹಿತ್ಯದ ಭವ್ಯತೆ ಕಣ್ಮನಗಳನ್ನು ತಣಿಸುತ್ತದೆ. ಆ ಅಮೂಲ್ಯ ಕಾವ್ಯಗಳ ಓದೇ ಸಂಭ್ರಮ. ಹಳಗನ್ನಡವನ್ನು ಅದೇ ರೂಪದಲ್ಲಿ ಓದುವುದು ಎಲ್ಲರಿಗೂ ಅಸಾಧ್ಯ. ಆದ್ದರಿಂದ ಆ ಕಾವ್ಯಗಳ ಸ್ಥೂಲ ಪರಿಚಯವಿರುವ ಕೃತಿಗಳ ಅಗತ್ಯವಿದೆ. ಆದ್ದರಿಂದ ಡಾ. ಸಿದ್ದಲಿಂಗಯ್ಯನವರ ಆಣತಿಮೇರೆಗೆ ವಸು ವತ್ಸಲೆಯವರು ಈ ಕಾರ್ಯ ಆರಂಭಿಸಿದರು. ಆದರೆ ಡಾ. ಸಿದ್ದಲಿಂಗಯ್ಯನವರು ಈಗ ನಮ್ಮೊಂದಿಗಿಲ್ಲ. ಆದರೂ ಅವರ ಆಶೀರ್ವಾದ ನಮ್ಮೊಂದಿಗಿದೆ ಎಂಬ ತುಂಬು ನಂಬಿಕೆ ನಮಗಿದೆ.

ಶ್ರೀಮತಿ ವತ್ಸಲ ಸುರೇಶ್ ಅವರು ಸುಧೀರ್ಘ ಎರಡು ವರ್ಷಗಳ ಕಾಲ ಈ ಪುಸ್ತಕಕ್ಕಾಗಿ ಶ್ರಮಿಸಿದ್ದಾರೆ. ಪಂಪ ಯುಗದಲ್ಲಿ ರಚನೆಯಾದ ಕಾವ್ಯಗಳನ್ನು ಕುರಿತಾಗಿ ಅಮೂಲ್ಯ ಮತ್ತು ಅರ್ಥಪೂರ್ಣ ಲೇಖನಗಳನ್ನು ಸಂಗ್ರಹಿಸಿ ಒಂದು ಸಂಪುಟವನ್ನು ಸಿದ್ಧಪಡಿಸಿದ್ದಾರೆ. ಇನ್ನುಳಿದ ಎರಡು ಸಂಪುಟಗಳು ಈಗಾಗಲೇ ಸಿದ್ಧವಾಗುತ್ತಿರುವ ಬಗ್ಗೆ ಹೆಮ್ಮೆ ಇದೆ. ಹಿರಿಯರು, ತಜ್ಞರು, ವಿದ್ವಾಂಸರು ಬರೆದಂತಹ ಲೇಖನಗಳು ಈ ಪುಸ್ತಕದಲ್ಲಿರುವುದು ನಿಜಕ್ಕೂ ಹೆಮ್ಮೆಯ ವಿಷಯ. ಆ ಎಲ್ಲಾ ಹಿರಿಯ, ಕಿರಿಯ ಲೇಖಕರಿಗೂ ಅವ್ಯಕ್ತ ಪ್ರಕಾಶನವು ಆಭಾರಿಯಾಗಿದೆ. ಅಂತಾರಾಷ್ಟ್ರೀಯ ವಿಚಾರ ಸಂಕಿರಣವನ್ನು ಆಯೋಜಿಸಿರುವ ಸಾಧನಕೇರಿ ಪ್ರತಿಷ್ಠಾನ ಮತ್ತು ಪ್ರತಿಷ್ಠಿತ ಬೆಂಗಳೂರಿನ ಮೌಂಟ್ ಕಾರ್ಮೆಲ್ ಕಾಲೇಜು ಅವರಿಗೂ ಆತ್ಮೀಯ ವಂದನೆಗಳು. ಇಂತಹ ಅತ್ಯುತ್ತಮ ಪುಸ್ತಕವನ್ನು ಓದುಗರ ಕೈಗೆ ತಲುಪಿಸುವುದು ಒಂದು ಸಾರ್ಥಕ ಕ್ಷಣ. ಎಲ್ಲರಿಗೂ ಧನ್ಯವಾದಗಳು.

ಸುರೇಶ್ ಎಲ್

ಅವ್ಯಕ್ತ ಪ್ರಕಾಶನ, ಬೆಂಗಳೂರು

ಕೃತಜ್ಞತೆಗಳು.

* ಹಳಗನ್ನಡ ಸಾಹಿತ್ಯದ ಬಗ್ಗೆ ವಿಶೇಷ ಒಲವನ್ನು ಹೊಂದಿದ್ದಲ್ಲದೆ, ಈ ಕಾರ್ಯವನ್ನು ಮಾಡಲು ಪ್ರೋತ್ಸಾಹಿಸಿದ ನನ್ನ ಗುರು, ಸಾಧನಕೇರಿ ಪ್ರತಿಷ್ಠಾನದಲ್ಲಿ ಗೌರವಾಧ್ಯಕ್ಷರಾಗಿದ್ದ ಕವಿ ಡಾ.ಸಿದ್ದಲಿಂಗಯ್ಯನವರಿಗೆ ಅನಂತ ಧನ್ಯವಾದಗಳು.

* ಪುಸ್ತಕದ ಕಾರ್ಯವನ್ನು ಆರಂಭಿಸಿದಂದಿನಿಂದ ನನಗೆ ಹಲವಾರು ಸಲಹೆಗಳನ್ನು ನೀಡಿದ ಪ್ರೊ. ಜಿ.ಅಶ್ವತ್ಥನಾರಾಯಣ್ ಸರ್ ಅವರಿಗೆ ನನ್ನ ಹೃತ್ಪೂರ್ವಕ ಧನ್ಯವಾದಗಳು.

* ಪುಸ್ತಕದ ಆರಂಭದ ದಿನಗಳಿಂದಲೂ ನನ್ನ ಕಾರ್ಯಕ್ಕೆ ಹೆಗಲು ಕೊಟ್ಟು ಮಾರ್ಗದರ್ಶನ ಮಾಡಿದವರು ನಿವೃತ್ತ ಪ್ರಾಧ್ಯಾಪಕರು ಡಾ.ಪ್ರಮೀಳಾ ಮಾಧವ್. ಮೇಡಂರವರು ಲೇಖನಗಳನ್ನು ಬರೆದುಕೊಟ್ಟು, ಇನ್ನಿತರ ಲೇಖನಗಳನ್ನು ಬರೆಯಿಸಿಕೊಳ್ಳಲು ತಮ್ಮದೇ ವಲಯದ ಸಾಕಷ್ಟು ವಿದ್ವಾಂಸರ ಪರಿಚಯ ಮಾಡಿಕೊಟ್ಟವರು. ಅಷ್ಟಲ್ಲದೇ, ತಮ್ಮ ಬಿಡುವಿಲ್ಲದ ವೇಳೆಯಲ್ಲೂ ಅತ್ಯಂತ ಕಾಳಜಿಯಿಂದ ಇಷ್ಟು ದೊಡ್ಡ ಪುಸ್ತಕದ ಕರಡನ್ನು ಎರಡು ಬಾರಿ ತಿದ್ದಿಕೊಡುವುದರ ಮೂಲಕ ನನ್ನಲ್ಲಿ ಧೈರ್ಯ ತುಂಬಿ, ವಿಶ್ವಾಸ ಹೆಚ್ಚಿಸಿದ ಮಾತೃ ಹೃದಯಿಗೆ ಅನಂತ ಧನ್ಯವಾದಗಳು.

* 'ಪ್ರಾಚೀನ ಸಾಹಿತ್ಯ ಶಿಲ್ಪ' ಪುಸ್ತಕದ ಕಾರ್ಯ ಕೈಗೊಂಡಾಗ ಹಲವು ಗೊಂದಲಗಳಿಂದ ತಡಕಾಡುತ್ತಿದ್ದೆ. ಆಗ ಪುಸ್ತಕದ ರೂಪುರೇಷೆಗಳನ್ನು ಹಾಕಿಕೊಟ್ಟು, ಲೇಖನಗಳನ್ನೂ ಬರೆದುಕೊಟ್ಟು, ಧೈರ್ಯ ತುಂಬಿದವರು ನೆಚ್ಚಿನ ಲೇಖಕರು ನನ್ನ ಗುರು ಡಾ. ಜ್ಯೋತಿ ಶಂಕರ, ಮುಕ್ತ ವಿಶ್ವವಿದ್ಯಾಲಯ, ಮೈಸೂರು. ಅವರಿಗೂ ಸಹ ನಾನು ಕೃತಜ್ಞಳು.

* ಜೈನ ಸಾಹಿತ್ಯದಲ್ಲಿ ಆಳವಾದ ತಜ್ಞತೆಯನ್ನು ಹೊಂದಿದವರು ಡಾ.ಎಸ್.ವಿ ಸುಜಾತ ಮೇಡಂ. ನನಗೆ ಜೈನ ಸಾಹಿತ್ಯಕ್ಕೆ ಬೇಕಾದ ಕೆಲವು ಅವಶ್ಯಕ ಲೇಖನಗಳನ್ನು ಬರೆದುಕೊಟ್ಟಿದ್ದಲ್ಲದೆ, ಬಹಳ ಒಳ್ಳೆಯ ಕೆಲಸ

ಮಾಡುತ್ತಿರುವಿರಿ ಎಂದು ಪ್ರೋತ್ಸಾಹಿಸುತ್ತಾ, ಹಲವು ಲೇಖನಗಳನ್ನು ಮೊದಲ ಸಂಪುಟಕ್ಕೂ ಹಾಗೂ ಎರಡನೇ ಸಂಪುಟಕ್ಕೂ ತಮ್ಮ ಪರಿಚಿತ ವಲಯದವರಿಂದಲೂ ಬರೆಯಿಸಿಕೊಟ್ಟ ಸುಜಾತ ಮೇಡಂರವರಿಗೂ ಅನಂತ ಕೃತಜ್ಞತೆಗಳು.

* ಅಗತ್ಯ ಲೇಖನ ಬರೆದುಕೊಟ್ಟ ಲೇಖಕರೇ ಈ ಪುಸ್ತಕದ ಜೀವಾಳ. ಡಾ. ಕೃಷ್ಣ ಭಟ್, ಡಾ. ಪಿ. ವಿಷ್ಣುಭಟ್, ಡಾ. ಪುರುಷೋತ್ತಮ ಬಿಳಿಮಲೆ, ಜಿ.ಎನ್. ಉಪಾಧ್ಯ, ಕಾ.ವೆಂ ಶ್ರೀನಿವಾಸಮೂರ್ತಿ, ಶ್ರೀ ವಾಸುದೇವ ನಾಡಿಗ್, ಶ್ರೀ ಲೋಕೇಶ್, ಡಾ. ಜಿ ರವಿ, ಡಾ ಎಚ್.ಡಿ ಜಯಪದ್ಮಕುಮಾರ್, ಡಾ. ಸತ್ಯವತಿ, ಡಾ. ನಳಿನಿ ವೆಂಕಟೇಶ್, ಶ್ರೀ ರವಿಶಂಕರ್ ಯು.ಎಸ್.ಎ., ಡಾ. ಎಸ್ ಕಾರ್ತಿಕ್, ಡಾ. ರವಿಶಂಕರ್, ಡಾ. ಶ್ರೀಧರ್ ಎನ್, ಡಾ. ಭಾರತೀ ರವೀಂದ್ರ, ಶ್ರೀಮತಿ ಅನಿತ ಕೆ.ವಿ, ಶ್ರೀಮತಿ ಕಲ್ಪನಾ, ಡಾ. ಮಂಜುನಾಥ ಕೆ, ಡಾ. ಆನಂದ ಸಾಲಿಗ್ರಾಮ, ಡಾ.ಪೂರ್ಣಿಮಾ ಸುಧಾಕರ ಸೆಟ್ಟಿ ಮುಂಬೈ ಮುಂತಾದವರು ಅತ್ಯಂತ ಪ್ರೀತಿಯಿಂದ ಲೇಖನಗಳನ್ನು ಬರೆದು ಸಕಾಲಕ್ಕೆ ತಲುಪಿಸಿದ ಎಲ್ಲ ಲೇಖಕರಿಗೂ ಅನಂತ ಧನ್ಯವಾದಗಳು.

ಈ ಪುಸ್ತಕವನ್ನು ಹೊರ ತರಲು ಅನುವು ಮಾಡಿಕೊಟ್ಟ ಸಾಧನಕೇರಿ ಪ್ರತಿಷ್ಠಾನದ ಪಾತ್ರ ಹಿರಿದಾದದ್ದು. ಸಾಧನಕೇರಿ ಪ್ರತಿಷ್ಠಾನವು ಪ್ರಾಚೀನ ಸಾಹಿತ್ಯದ ಬಗ್ಗೆ ವಿಶೇಷ ಒಲವು ಹೊಂದಿರುವ ಸಂಸ್ಥೆ. ಆ ಸಂಸ್ಥೆಯಿಂದಲೇ ಪ್ರಕಾಶನ ಮಾಡುವ ಉದ್ದೇಶದಿಂದ ಪ್ರಾರಂಭವಾದ ಈ ಪುಸ್ತಕದ ಕಾರ್ಯ, ಕೆಲವು ತಾಂತ್ರಿಕ ದೋಷಗಳಿಂದ ಸಾಧ್ಯವಾಗಲಿಲ್ಲ. ಆದರೂ ಪ್ರಾಚೀನ ಕನ್ನಡ ಸಾಹಿತ್ಯದ ಬಗ್ಗೆ ಅಂತರಾಷ್ಟ್ರೀಯ ವಿಚಾರ ಸಂಕಿರಣವನ್ನು ಆಯೋಜಿಸಿ ಪುಸ್ತಕ ಬಿಡುಗಡೆ ಮಾಡಲು ಅನುವು ಮಾಡಿಕೊಟ್ಟದ್ದಕ್ಕೆ ಮನಃಪೂರ್ವಕ ಧನ್ಯವಾದಗಳು. ಈ ಪುಸ್ತಕದ ಅಂತಿಮ ಕರಡನ್ನು ತಿದ್ದಿಕೊಟ್ಟ ಸಾಧನಕೇರಿಯ ಹಿರಿಯರಾದ ಮಂಜುನಾಥ್ ಸರ್ ಅವರಿಗೆ ವಿಶೇಷವಾದ ಧನ್ಯವಾದಗಳು ಹಾಗೂ ನಾಗರಾಜರಾವ್ ಕಲ್ಕಟ್ಟೆ, ಪ್ರಸಾದ್ ನಾಯಕ್, ಅನಿತಾ ಕೆ.ವಿ. ಮತ್ತು ಎಲ್ಲಾ ಪದಾಧಿಕಾರಿಗಳಿಗೂ ಅನಂತ ಧನ್ಯವಾದಗಳು.

* ಮೌಂಟ್ ಕಾರ್ಮೆಲ್ ಬೆಂಗಳೂರಿನಲ್ಲೇ ಒಂದು ಪ್ರತಿಷ್ಠಿತ ವಿದ್ಯಾಸಂಸ್ಥೆ. ಪ್ರಾಚೀನ ಕನ್ನಡ ಸಾಹಿತ್ಯ ವಿಚಾರ ಸಂಕಿರಣವನ್ನು ಸಾಧನಕೇರಿ ಪ್ರತಿಷ್ಠಾನದೊಂದಿಗೆ ಆಯೋಜಿಸಿ, ಉತ್ತಮ ಸಹಕಾರ, ವೇದಿಕೆ ನೀಡಿ ಪುಸ್ತಕದ ಉದ್ದೇಶಕ್ಕೆ ಅರ್ಥಕೊಟ್ಟ ಕಾಲೇಜಿನ ಆಡಳಿತ ಮಂಡಳಿಯ ನಿರ್ದೇಶಕರಾದ ಸಿಸ್ಟರ್ ಎಂ ಅಲ್ಬಿನ್, ಕಾರ್ಯದರ್ಶಿಗಳು ಮತ್ತು ಖಜಾಂಚಿಗಳಾದ ಡಾ ಸಿಸ್ಟರ್ ಅರ್ಪಣ, ಪ್ರಾಂಶುಪಾಲರಾದ ಡಾ. ಜಾರ್ಜ್ ಲೇಖಾ ಅವರಿಗೂ, ಕನ್ನಡ ವಿಭಾಗದ ಮುಖ್ಯಸ್ಥರು ಹಾಗೂ ಪ್ರಾಧ್ಯಾಪಕರಿಗೂ ನಾನು ಆಭಾರಿಯಾಗಿದ್ದೇನೆ.

ಈ ಅದ್ಭುತ ಗ್ರಂಥ ತರುವಲ್ಲಿ ನೆರವಾದ ಅವ್ಯಕ್ತ ಪ್ರಕಾಶನದ ಪ್ರಕಾಶಕರಾದ ನನ್ನ ಪತಿ ಸುರೇಶ್ ಎಲ್. ರವರಿಗೂ ಅನಂತ ಧನ್ಯವಾದಗಳು. ನನ್ನ ದೊಡ್ಡ ಕನಸುಗಳನ್ನು ಸಾಕಾರಗೊಳಿಸಲು ನನ್ನ ತಂದೆ, ತಾಯಿ, ಅತ್ತೆಯವರ ಆಶೀರ್ವಾದ, ಸಹೋದರಿಯರ, ಮಕ್ಕಳ ಸಹಕಾರ ಎಂದೂ ಶ್ರೀರಕ್ಷೆ. ಅವರೆಲ್ಲರಿಗೂ ನಾನು ಋಣಿ. ಪ್ರತ್ಯಕ್ಷವಾಗಿ ಪರೋಕ್ಷವಾಗಿ ನೆರವಾದ ಎಲ್ಲರಿಗೂ, ಈ ಪುಸ್ತಕವನ್ನು ಕೊಂಡು ಓದುವ ಸಹೃದಯ ಓದುಗ ಮಹಾಶಯರಿಗೂ ಧನ್ಯವಾದಗಳು.

ಪುಸ್ತಕದ ಒಳಪುಟ ವಿನ್ಯಾಸ ಮಾಡಿದ ಶ್ರೀಮತಿ ಜ್ಯೋತಿ ಬಿ.ಸಿ, ಅಂದದ ಮುಖಪುಟನ್ನು ರಚಿಸಿದ ಶ್ರೀ ಶಂಕರ ಬೆನ್ನೂರ, ಪುಸ್ತಕವನ್ನು ಎಂದಿನಂತೆ ಅಂದವಾಗಿ, ಜೋಪಾನವಾಗಿ ಮುದ್ರಿಸಿಕೊಟ್ಟ ಸಹೃದಯಿ ರೀಗಲ್ ಪ್ರಿಂಟರ್ಸ್ ವೆಂಕಟೇಶ್ ಅವರಿಗೂ ಹೃತ್ಪೂರ್ವಕ ಧನ್ಯವಾದಗಳು.

ಈ ಪುಸ್ತಕ ತರಲು ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಸಹಕರಿಸಿದ ಎಲ್ಲಾ ಸಹೃದಯರಿಗೂ ಅನಂತ ಧನ್ಯವಾದಗಳು.

ಪರಿವಿಡಿ

ಹಳಗನ್ನಡ ಭಾಷೆ-ಸಾಹಿತ್ಯಗಳ ಅಧ್ಯಯನ : ಕೆಲವು ವಿಚಾರಗಳು

– ಡಾ. ಪಾದೇಕಲ್ಲು ವಿಷ್ಣು ಭಟ್

ಕನ್ನಡದಲ್ಲಿ ಹಳೆಯ ಕಾಲದಲ್ಲಿ ಬಳಕೆಯಲ್ಲಿದ್ದ 'ಹಳಗನ್ನಡ' ಎಂಬ ಭಾಷೆಯಿದ್ದುದೂ ಹೊಸಕಾಲದಲ್ಲಿ 'ಹೊಸಗನ್ನಡ'ವೆಂದು ಕರೆಯಲಾಗುವ ಭಾಷೆಯಿರುವುದೂ ನಮಗೆ ತಿಳಿದಿರುವ ವಿಷಯಗಳೇ ಆಗಿವೆ. ಇವೆರಡು ಭಾಷೆಗಳನ್ನು ಗಮನಿಸುವಾಗಲೇ ಇವೆರಡರ ನಡುವೆ 'ನಡುಗನ್ನಡ' ಎಂದು ಹೆಸರಾಗಿರುವ ಕನ್ನಡದ ರೂಪವೊಂದು ಇರುವ ವಿಚಾರವೂ ನಮಗೆ ತಿಳಿದಿದೆ. ಹಳಗನ್ನಡ ಭಾಷೆಯನ್ನು ಬಳಸಿಕೊಂಡಿದ್ದ ಕಾಲಕ್ಕಿಂತ ಪೂರ್ವಕಾಲದಲ್ಲಿ 'ಪೂರ್ವದ ಹಳಗನ್ನಡ' ಎಂಬ ಭಾಷಾರೂಪವಿತ್ತೆಂದೂ ಅದು ಹಳಗನ್ನಡಕ್ಕಿಂತ ಒಂದಿಷ್ಟು ಭಿನ್ನತೆಯನ್ನು ಹೊಂದಿತ್ತೆಂದೂ ನಮಗೆ ಮಾಹಿತಿಯಿದೆ. ಪೂರ್ವದ ಹಳಗನ್ನಡದಲ್ಲಿ ದೊರಕುವುದಕ್ಕಿಂತ ಎಷ್ಟೋ ಹೆಚ್ಚು ಪ್ರಮಾಣದಲ್ಲಿ ಇತರ ಮೂರು ಭಾಷಾರೂಪಗಳಲ್ಲಿ ಲಿಖಿತಸಾಮಗ್ರಿ ಅಥವಾ ಲಿಖಿತವಾಙ್ಮಯವು ಇರುವುದನ್ನು ನಾವು ತಿಳಿದಿದ್ದೇವೆ. ಹೊಸಗನ್ನಡವು ನಮ್ಮ ಸಮಕಾಲೀನವಾದ ಭಾಷೆಯಾದುದರಿಂದ ಈ ಭಾಷಾರೂಪದಲ್ಲಿ ನಿರ್ಮಿತವಾದ ಮತ್ತು ನಿರ್ಮಿತವಾಗುತ್ತಿರುವ ವಾಙ್ಮಯರಾಶಿಯು ಉಳಿದ ಭಾಷಾರೂಪಗಳಲ್ಲಿ ದೊರಕುವ ವಾಙ್ಮಯಸಂಚಯಕ್ಕಿಂತ ತುಂಬ ದೊಡ್ಡದೆಂಬುದೂ ನಮಗೆ ಗೊತ್ತಿರುವ ವಿಚಾರವೇ ಆಗಿದೆ.

ಇಷ್ಟು ಹಿನ್ನೆಲೆಯ ವಿಷಯಗಳೊಡನೆ ಈ ಭಾಷಾರೂಪಗಳು ಮತ್ತು ಅವುಗಳಲ್ಲಿ ರಚಿತವಾದ ಸಾಹಿತ್ಯವನ್ನು ಕುರಿತು ಕೆಲವು ವಿಷಯಗಳನ್ನು ಆಲೋಚಿಸಬಹುದಾಗಿದೆ. ಇವುಗಳಲ್ಲಿ ಮೊದಲನೆಯ ವಿಷಯವೆಂದರೆ, ಈ ಭಾಷಾರೂಪಗಳಿಗೆ ಈ ರೀತಿಯಲ್ಲಿ ಹೆಸರುಗಳನ್ನು ನೀಡಿದವರು ಯಾರು ಎಂಬ ಪ್ರಶ್ನೆಯಾಗಿದೆ. ಮನುಷ್ಯಜೀವನವನ್ನು ಗಮನಿಸಿ ಹೇಳುವುದಾದರೆ, ಯಾವನೇ ವ್ಯಕ್ತಿಯು ತನ್ನ ಹೆಸರನ್ನು ತಾನೇ ಇರಿಸಿಕೊಳ್ಳುವುದಿಲ್ಲ. ಇತರರು ಕರೆದು ರೂಢಿಗೆ ತಂದ ಹೆಸರನ್ನು ತನ್ನದೆಂದು ಸ್ಥಿರವಾಗಿ ನಂಬಿ, ಅದನ್ನೇ ತನ್ನ ಹೆಸರೆಂದು ಇತರರೊಡನೆ ಹೇಳುತ್ತಾ ಆತನು ತನ್ನ ಜೀವನವನ್ನು ಕಳೆಯುತ್ತಾನೆ. ಕೆಲವೇ ಕೆಲವು ಸಂದರ್ಭಗಳಲ್ಲಿ ವ್ಯಕ್ತಿಗಳು ತಮಗೆ ತಾವೇ ಹೆಸರನ್ನಿರಿಸಿಕೊಳ್ಳುವ ಸಂದರ್ಭಗಳು ಇರಬಹುದಾದರೂ ಇತರರು ಇರಿಸಿಕೊಟ್ಟ ಹೆಸರುಗಳೇ ರೂಢಿಯಲ್ಲಿ ಇರುವುದೆಂಬುದು ಅನುಭವದಿಂದ ಸಿದ್ಧವಾಗಿದೆ. ಹಾಗಾದರೆ ಭಾಷೆಯ ಬಗೆಗಿನ ಚಿಂತನೆಯಲ್ಲಿ ಭಾಷೆಯ ಹೆಸರನ್ನಿರಿಸಿದವರು ಯಾರೆಂಬ ಪ್ರಶ್ನೆಯನ್ನು ಉತ್ತರಿಸುವುದು ಹೇಗೆ? ವ್ಯಕ್ತಿಜೀವನದ ಹೋಲಿಕೆಯನ್ನೇ ಅವಲಂಬಿಸುವುದಾದರೆ, ನಮ್ಮ ಭಾಷೆಗೆ 'ಕನ್ನಡ'ವೆಂಬ ಹೆಸರನ್ನಿರಿಸಿದವರು ಬೇರೆಯವರು ಎಂದರೆ ಬೇರೆ ಭಾಷೆಯವರು, ಎಂದು ತಿಳಿಯಬೇಕಾಗುತ್ತದೆ. ಅರ್ಥಾತ್ ನಮ್ಮ ನಾಡಿನವರು ಆಡುವ ಭಾಷೆ ತಮ್ಮ ಭಾಷೆಗಿಂತ ಭಿನ್ನವಾಗಿರುವುದನ್ನು ಕಂಡ ಬೇರೆ ಭಾಷೆಗಳವರು ನಮ್ಮ ಮಾತನ್ನು ತಮ್ಮ ಭಾಷೆಗಿಂತ ಪ್ರತ್ಯೇಕವಾಗಿ ಗುರುತಿಸಲು 'ಕನ್ನಡ' ಎಂಬ ಹೆಸರನ್ನು ನೀಡಿರಬೇಕು. ಹಾಗೆಯೇ ಅವರಾಡುತ್ತಿದ್ದ ಭಾಷೆ ನಮ್ಮದಕ್ಕಿಂತ ಭಿನ್ನವಾಗಿರುವುದನ್ನು ಗಮನಿಸಿದ ನಮ್ಮವರು ಅವರ ಆಡುಮಾತುಗಳಿಗೆ ತೆಲುಗೆಂದೋ ತಮಿಳೆಂದೋ ಹೆಸರನ್ನಿರಿಸಿ ಗುರುತಿಸಿರಬೇಕು.

ಯಾವುದೇ ಭಾಷೆಗೆ ಆ ಭಾಷೆಯನ್ನಾಡುವವರಿಗಿಂತ ಭಿನ್ನಭಾಷೆಯ ಜನಗಳು ಹೆಸರನ್ನಿತ್ತರೆಂಬ ಈ ವಿಷಯವು ಈ ಬಗೆಗಿನ ಸಿದ್ಧಾಂತರೂಪದ ಮಾತಲ್ಲ; ಒಂದು ಊಹೆಯ ಮಾತೆಂದಷ್ಟೇ ಹೇಳಬಹುದು. ಏಕೆಂದರೆ ಈ ಭಾಷೆಗಳನ್ನಾಡುವವರಿಗೆ ಆಯಾ ಭಾಷೆಗಳ ಹೆಸರುಗಳು ಪರಂಪರೆಯಿಂದ ಬಂದಿವೆ. ಮಾತ್ರವಲ್ಲ, ಇಂತಹದೊಂದು

ಪ್ರಶ್ನೆಯೂ ಅಸಂಗತವೆಂದು ಹೇಳಬಹುದಾದ ಪರಿಸ್ಥಿತಿಯಲ್ಲಿ ನಾವಿದ್ದೇವೆ. ಆಯಾ ಭಾಷೆಗಳವರಿಗೆ ಆಯಾ ಭಾಷೆಗಳ ಹೆಸರುಗಳು ಎಷ್ಟರ ಮಟ್ಟಿಗೆ ರೂಢಿಯಾಗಿವೆಯೆಂದರೆ ಇಂತಹ ಪ್ರಶ್ನೆಯೂ ಒಂದು ಹುಚ್ಚಾಟದ ಅಥವಾ ಕುಚೋದ್ಯದ ಪ್ರಶ್ನೆಯೆಂದು ಹೇಳುವಷ್ಟು, ಈ ರೀತಿ ಪ್ರಶ್ನೆ ಕೇಳುವುದು ಅನಗತ್ಯವೆಂಬಷ್ಟು; ಈ ಪ್ರಶ್ನೆಯನ್ನು ಕೇಳಬಾರದೆಂಬಷ್ಟು.

'ಭಾಷೆಯೆಂಬುದು ನಿಂತ ನೀರಿನಂತಲ್ಲ; ಹರಿಯುವ ನೀರಿನಂತೆ' ಎಂಬುದು ಜೀವಂತಭಾಷೆಯ ಬಗೆಗೆ ಹೇಳುವ ಮಾತು. ನದಿಯ ನೀರು ಹೇಗೆ ಹೊಸ ಹೊಸ ನೀರಿನ ಮೂಲಗಳನ್ನು ಪಡೆಯುತ್ತಾ ಅವುಗಳನ್ನು ತನ್ನ ಜೊತೆಗೆ ಸೇರಿಸಿಕೊಂಡು ಮುಂದುವರಿಯುತ್ತದೋ ಹಾಗೆಯೇ ಭಾಷೆಯೂ ಕಾಲ ಕಾಲಕ್ಕೆ ಬೇರೆ ಬೇರೆ ಮೂಲಗಳಿಂದ ಬಂದ ಶಬ್ದರೂಪಗಳನ್ನೂ ವಾಕ್ಯ ರಚನಾಕ್ರಮಗಳನ್ನೂ ಪಡೆದು ತನ್ನದನ್ನಾಗಿಸಿಕೊಂಡು ಮುಂದುವರಿಯುತ್ತದೆಂದು ಭಾಷೆಯ ಬಗೆಗೆ ಚಿಂತಿಸಿದ ವಿದ್ವಾಂಸರು ಹೇಳುತ್ತಿರುತ್ತಾರೆ. ಆದುದರಿಂದಲೇ ಉಚ್ಚಾರಣೆ, ಸ್ವರಭಾರ, ಶಬ್ದಗಳ ಅರ್ಥಚ್ಛಾಯೆಗಳು, ವಾಕ್ಯವಿನ್ಯಾಸ ವಿಧಾನಗಳು, ಭಾಷಾರೂಢಿಗಳು, ಅವಧಾರಣೆಯ ವಿಧಾನಗಳು, ಅನ್ಯಭಾಷಾ ಪದಗಳ ಬಳಕೆ ಇತ್ಯಾದಿಗಳಲ್ಲಿ ಯಾವುದೊಂದು ಭಾಷೆಯನ್ನಾಡುವ ವಿವಿಧ ಪ್ರದೇಶಗಳಲ್ಲಿ ವ್ಯತ್ಯಾಸಗಳನ್ನು ಕಾಣುತ್ತೇವೆ. ಹಾಗೆಯೇ ವಿವಿಧ ಕಾಲಘಟ್ಟಗಳಲ್ಲೂ ಈ ವ್ಯತ್ಯಾಸಗಳು ಕಂಡುಬರುತ್ತವೆ. ಈ ವ್ಯತ್ಯಾಸಗಳ ತೀವ್ರತೆಯಿಂದ ಭಾಷೆಗಳು ವಿಭಿನ್ನವೆಂದು ಗುರುತಿಸಲ್ಪಡುತ್ತವೆ. ಎಂದರೆ, ಈ ರೀತಿಯ ಹಲವು ಕಾರಣಗಳಿಂದಲೇ ಮೂಲದಲ್ಲಿ ಒಂದೇ ಆಗಿದ್ದ ಭಾಷೆ ಕವಲೊಡೆದು ಬೇರೆ ಬೇರೆಯಾಗಿ ಗುರುತಿಸಲ್ಪಡುತ್ತದೆ. ಆಧುನಿಕ ಕಾಲದ ಕನ್ನಡದಲ್ಲಿಯೂ ಹೀಗೆ ಪ್ರಾದೇಶಿಕ ಪ್ರಭೇದಗಳಿವೆ; ವಿವಿಧ ಕಾಲಘಟ್ಟಗಳಿಗೆ ಸಂಬಂಧಿಸಿದ ಪ್ರಭೇದಗಳೂ ಇವೆ. ಮಂಗಳೂರು ಕನ್ನಡ, ಮೈಸೂರು ಕನ್ನಡ, ಧಾರವಾಡ ಕನ್ನಡ, ರಾಯಚೂರು ಕನ್ನಡ ಎಂದು ಮುಂತಾಗಿ ಗುರುತಿಸುವುದು ಪ್ರಾದೇಶಿಕ ಭೇದಗಳನ್ನಾದರೆ, ಹೊಸಗನ್ನಡ, ನಡುಗನ್ನಡ, ಹಳಗನ್ನಡ ಎಂದು ಗುರುತಿಸುವುದು ವಿವಿಧ ಕಾಲಘಟ್ಟಗಳಿಗೆ ಸಂಬಂಧಿಸಿದ ಭೇದಗಳನ್ನು. ಈಗ ಬಳಕೆಯಲ್ಲಿರುವ ಭಾಷೆಯ ಪ್ರಾದೇಶಿಕ

ಭೇದಗಳನ್ನು ನಾವು ಅವು ನಮ್ಮ ಕಾಲದವೇ ಆಗಿರುವುದರಿಂದ ಕೇಳಿ ಗಮನಿಸಿ ತಿಳಿಯಬಲ್ಲೆವಾದರೂ ಆ ಹಿಂದಿನ ಕಾಲದ ಬಳಕೆಯ ಧ್ವನಿಭಾರವೇ ಮೊದಲಾದ ಸೂಕ್ಷ್ಮವಿವರಗಳನ್ನು ಇಂದು ತಿಳಿಯಲಾರೆವೆಂಬುದನ್ನು ಕೂಡ ಗಮನಿಸಬೇಕು. ಕನ್ನಡ ಭಾಷೆಯ ಕಾಲಿಕ ಭೇದಗಳಾದ ಪೂರ್ವದ ಹಳಗನ್ನಡ, ನಡುಗನ್ನಡ, ಹೊಸಗನ್ನಡ ಎಂಬ ಹೆಸರುಗಳನ್ನು ನೀಡಿದವರು ಯಾರು ಎಂಬುದನ್ನು ಗಮನಿಸಿದರೆ ಹೊಸಕಾಲದಲ್ಲಿ ಈ ಭಾಷೆಯನ್ನು ಬಳಸಿದವರೇ ಎಂಬುದು ಸ್ಪಷ್ಟವಾಗುತ್ತದೆ. ನಮ್ಮ ಕಾಲದಲ್ಲಿ ಕನ್ನಡ ಭಾಷೆಯ ಬಗೆಗೆ ಚಿಂತನೆ ನಡೆಸಿದವರೇ ಈ ಕಾಲಿಕ ಪ್ರಭೇದಗಳಿಗೆ ಹೆಸರನ್ನೀಯುತ್ತಾ ತಮ್ಮ ಕಾಲದ ಭಾಷೆಗೂ ಹೆಸರನ್ನಿತ್ತರು. ಆ ಹೆಸರೇ ಹೊಸಗನ್ನಡವೆಂಬುದು. ನಮ್ಮ ಪ್ರಾಚೀನರು ತಾವಾಡುವ ಭಾಷೆಗೆ 'ಹಳಗನ್ನಡ'ವೆಂಬ ಹೆಸರನ್ನಿತ್ತಿರಲಿಲ್ಲ ಮತ್ತು ಹಾಗೆ ಹೆಸರನ್ನಿಡಲು ಸಾಧ್ಯವೂ ಇಲ್ಲ. ಹಳಗನ್ನಡವೆಂದು ನಾವು ಗುರುತಿಸುವ ಗ್ರಂಥಗಳಲ್ಲಿ ಹಳಗನ್ನಡ (ಪೞಗನ್ನಡಂ) ಎಂಬ ಉಲ್ಲೇಖಗಳು ಬರುತ್ತವೆ. ಈ ಉಲ್ಲೇಖಗಳು ಅವರ ಸಮಕಾಲೀನವಾದ ಕನ್ನಡವನ್ನು ಹೇಳದೆ ಆ ಗ್ರಂಥಗಳಿಗಿಂತ ಪ್ರಾಚೀನವಾದ ಕನ್ನಡ ಭಾಷಾರೂಪವನ್ನು ನಿರ್ದೇಶಿಸುತ್ತವೆಂಬುದು ಸ್ಪಷ್ಟ. ಹಳಗನ್ನಡ ಗ್ರಂಥಗಳಲ್ಲಿ 'ಪೞಗನ್ನಡ'ವೆಂದು ಗುರುತಿಸಿ ಉಲ್ಲೇಖಿಸಿದ ಕನ್ನಡವನ್ನು ಸ್ಪಷ್ಟವಾಗಿಸಿಕೊಳ್ಳಲಿಕ್ಕಾಗಿ ನಾವು 'ಪೂರ್ವದ ಹಳಗನ್ನಡ' ಎಂಬ ಹೆಸರನ್ನಿರಿಸಿ ಗುರುತಿಸತೊಡಗಿದೆವು. ಹಳಗನ್ನಡ ಕಾಲದ ಭಾಷಾಚಿಂತಕರು ಅವರಿಗಿಂತ ಹಿಂದಿನ ಕಾಲದ ಗ್ರಂಥಗಳ ಭಾಷೆಯನ್ನು 'ಪೞಗನ್ನಡ'ವೆಂದು ಗುರುತಿಸಿರುವಾಗ ಅವರ ಸಮಕಾಲೀನವಾದುದು 'ಪೊಸಗನ್ನಡ'ವೆಂದು ಅವರ ಚಿಂತನೆಯಾಗಿತ್ತೆಂಬುದು ಸ್ಪಷ್ಟ. ಹೀಗೆ ನಮ್ಮ ಹಿರಿಯರೇ ಅವರಿಗಿಂತ ಹಿರಿಯರ ಕಾಲದ ಭಾಷೆಗೆ ಹೆಸರುಗಳನ್ನು ನೀಡಿ ಗುರುತಿಸತೊಡಗಿದರು; ನಾವು (ಹೊಸಕಾಲದವರು) ನಮ್ಮ ಹಿಂದಿನವರು ಆಡುತ್ತಿದ್ದ ಭಾಷಾರೂಪಗಳಿಗೆ ಹೆಸರುಗಳನ್ನಿತ್ತು ಗುರುತಿಸಿದೆವು. ಈ ರೀತಿಯಲ್ಲಿ ನಮ್ಮ ಹಿಂದಿನ ಭಾಷಾರೂಪಗಳನ್ನು 'ಕನ್ನಡ'ವೆಂಬ ಭಾಷಾನಾಮಕ್ಕೆ ಬೇರೆ ವಿಶೇಷಣಗಳನ್ನು ಸೇರಿಸಿ ಗುರುತಿಸಿದೆವಷ್ಟೇ ಹೊರತು, ಬೇರೆಯೇ

ಆದ ಹೆಸರುಗಳನ್ನು ನೀಡಲಿಲ್ಲ. ಆದರೆ ಹಿಂದಿನವರು ನೀಡಿದ ಹೆಸರುಗಳನ್ನು ಬದಲಾಯಿಸಿಕೊಂಡೆವು. ಪ್ರಾಚೀನರು 'ಪಟಿಗನ್ನಡ'ವೆಂದುದನ್ನು ನಾವು 'ಪೂರ್ವದ ಹಳಗನ್ನಡ'ವೆಂದೆವು. ಅವರು 'ಹೊಸಗನ್ನಡ'ವೆಂದು ಭಾವಿಸಿದ ಭಾಷೆಯನ್ನು 'ಹಳಗನ್ನಡ'ವೆಂದೆವು 'ನಡುಗನ್ನಡ'ವೆಂದು ಹೊಸತೊಂದು ಹೆಸರನ್ನು ಹಳಗನ್ನಡದ ಅನಂತರವಾದರೂ ನಮಗಿಂತ ಸಾಕಷ್ಟು ಹಿಂದಿನ ಕಾಲದ ಕನ್ನಡಕ್ಕೆ ನೀಡಿದೆವು. ನಮ್ಮ ಕಾಲದ ಕನ್ನಡವನ್ನು 'ಹೊಸಗನ್ನಡ'ವೆಂದೆವು.

ಈಗ ಇಲ್ಲಿ ಇನ್ನೊಂದು ಪ್ರಶ್ನೆ ಬರುತ್ತದೆ – ಅದೆಂದರೆ, ಮುಂದಿನ ಕಾಲದ ಕನ್ನಡದ ಬಗೆಗೆ. ಈಗಿನ ಕನ್ನಡವು ಇನ್ನೂ ಕೆಲವು ಶತಮಾನಗಳ ಅನಂತರ ಹೀಗೆಯೇ ಇರುತ್ತದೆಯೆ ಎಂದು ಪ್ರಶ್ನಿಸಿಕೊಂಡರೆ; 'ಇಲ್ಲ, ಭಾಷೆಯ ಸಹಜಲಕ್ಷಣದಂತೆ ಅದು ಬದಲಾಗಿಯೇ ಆಗುತ್ತದೆ' ಎಂಬ ಉತ್ತರವೇ ಬರುತ್ತದೆ. ಹಾಗೆ ಬದಲಾದಾಗ ಆ ಭವಿಷ್ಯಕಾಲದ ಭಾಷೆ ಆ ಸಮಕಾಲೀನರಿಗೆ 'ಹೊಸಗನ್ನಡ'ವೇ ಆಗಿರಬೇಕಾಗುತ್ತದೆ. ಆ ಹೊಸಗನ್ನಡವು ಅವರ ಆ ಹೊಸಕಾಲದಲ್ಲಿ 'ಹೊಸಗನ್ನಡ'ವೆಂದು ಗುರುತಿಸಲ್ಪಡುವಾಗ ನಮ್ಮ ಕಾಲದ ಹೊಸಗನ್ನಡವು ಅವರಿಗೆ ಹಳತೇ ಆಗುತ್ತದಷ್ಟೆ. ಈ ಹಂತವನ್ನು ಆ ಮುಂದಿನ ಕಾಲದವರು ಬೇರೊಂದೇ ಹೆಸರಿನಿಂದ ಗುರುತಿಸಬೇಕಾಗುತ್ತದೆ. ಆಗ ನಮ್ಮ ಈಗಿನ ಹೊಸಗನ್ನಡವು ಬೇರೊಂದು ಹೆಸರಿನಿಂದಲೇ ಗುರುತಿಸಲ್ಪಡಬಹುದು. ಇದೇನಿದ್ದರೂ ದೀರ್ಘಕಾಲದ ಹರಹಿನಲ್ಲಿ ಆಗುವಂತಹದಷ್ಟೆ ಹೊರತು ಒಂದೆರಡು ದಶಕಗಳಲ್ಲಿ ಆಗುವಂತಹದಲ್ಲ. ಹೀಗೆ ಆ ಕಾಲದಲ್ಲಿ ಹೊಸ ಹೆಸರನ್ನಿಡುವವರು ನಮ್ಮವರೇ ಆಗಿರುತ್ತಾರೆ. ನಾವು ನಮ್ಮ ಕಾಲದ ಕನ್ನಡದವರೆಗಿನ ಕಾಲಿಕರೂಪಗಳಿಗೆ ಹೆಸರನ್ನಿಡಬಲ್ಲೆವೆ ಹೊರತು ನಮ್ಮ ಅನಂತರಕಾಲದಲ್ಲಿ ಆಗುವ ಬದಲಾವಣೆಗಳ ಬಗೆಗೆ ನಿರ್ದಿಷ್ಟವಾಗಿ ಹೇಳಲಾರೆವೆಂಬುದು ಕೂಡ ಗಮನಿಸಬೇಕಾದ ವಿಷಯವಾಗಿದೆ.

ಕೇಶಿರಾಜ ತನ್ನ 'ಶಬ್ದಮಣಿದರ್ಪಣ'ವೆಂಬ ವ್ಯಾಕರಣಗ್ರಂಥವನ್ನು ರಚಿಸುವಾಗ ತನಗಿಂತ ಹಿಂದಿನ ಒಂದು ಗ್ರಂಥರಾಶಿಯನ್ನು ಆಧಾರವಾಗಿರಿಸಿಕೊಂಡುದಾಗಿ ಆತನೇ ಹೇಳಿಕೊಂಡಿದ್ದಾನೆ. ಆತ

ಹೇಳಿದುದು ಹೀಗಿದೆ:

> **ಗಜಗನ ಗುಣನಂದಿಯ ಮನ**
> **ಸಿಜನಸಗನ ಚಂದ್ರಭಟ್ಟ ಗುಣವರ್ಮ ಶ್ರೀ**
> **ವಿಜಯರ ಪೊನ್ನನ ಪಂಪನ**
> **ಸುಜನೋತ್ತಂಸನ ಸುಮಾರ್ಗಮಿದಱೊಳೆ ಲಕ್ಷ್ಯಂ**

(ಶಬ್ದಮಣಿದರ್ಪಣ, ಪೀಠಿಕಾಭಾಗ, ಸೂತ್ರ 5)

ಕೇಶಿರಾಜ ಇಲ್ಲಿ ಹಲವು ಕವಿಗಳ ಹೆಸರುಗಳನ್ನು ಹೇಳಿದ್ದಾನೆ. ಈ ಪಟ್ಟಿಯಲ್ಲಿರುವ ಹಲವು ಕವಿಗಳ ಗ್ರಂಥಗಳು ಇಂದು ನಮಗೆ ದೊರಕಿಲ್ಲ. ಈ ಕವಿಗಳಲ್ಲದೆ ಇನ್ನೂ ಹಲವು ಮಂದಿ ಕವಿಗಳ ಗ್ರಂಥಗಳನ್ನು ಉಪಯೋಗಿಸಿಕೊಂಡಿರುವುದಾಗಿ ಈ ಸೂತ್ರದ ವೃತ್ತಿಯಲ್ಲಿ ಕೇಶಿರಾಜ ಹೇಳಿದ್ದಾನೆ. ಅವನ ಪ್ರಕಾರ ಈ ಪ್ರಸಿದ್ಧಕವಿಗಳ ಭಾಷಾಮಾರ್ಗವೆಂಬುದು 'ಸುಮಾರ್ಗ'. ಕಾಲದ ದೃಷ್ಟಿಯಿಂದ ಗಮನಿಸಿದರೆ ಆತ ನಿರೂಪಿಸಿದ ಎಲ್ಲ ಕವಿಗಳು ಹಳಗನ್ನಡದ ಕಾಲದವರು. ಕೇಶಿರಾಜನ ಕಾಲವನ್ನು ಗಮನಿಸಿದರೆ, ಆತ ನಡುಗನ್ನಡವೆಂದು ಗುರುತಿಸಲ್ಪಡುವ ಕಾಲದವನು. ನಡುಗನ್ನಡ ಕಾಲವು ಸಾಕಷ್ಟು ದೀರ್ಘವಾಗಿ ವ್ಯಾಪಿಸಿದ್ದು, ಆ ಕಾಲವ್ಯಾಪ್ತಿಯ ಪ್ರಾರಂಭ ಭಾಗಕ್ಕೆ ಆತ ಸಂಬಂಧಿಸಿದವನು. ಎಂದರೆ, ಆತನ ಕಾಲಕ್ಕಾಗುವಾಗ ಕನ್ನಡ ಭಾಷಾರೂಪದಲ್ಲಿ ಸಾಕಷ್ಟು ಬದಲಾವಣೆಯಾಗಿತ್ತು. ಆದರೆ ಆತ ವ್ಯಾಕರಣರಚನೆ ಮಾಡಿರುವುದು ಹೀಗೆ ಬದಲಾದ ಆತನ ಕಾಲದ ಭಾಷೆಗಲ್ಲ; ಹಿಂದಿನ ಕಾಲದ ಕಾವ್ಯಗ್ರಂಥಗಳಲ್ಲಿ ಲಿಖಿತವಾದ ಕನ್ನಡಕ್ಕೆ. ಆ ಭಾಷೆಯನ್ನು 'ಪಟಗನ್ನಡ'ವೆಂದು ಹೇಳಿಕೊಳ್ಳದಿದ್ದರೂ ಆತನ ಮನಸ್ಸಿನಲ್ಲಿದ್ದ ಕನ್ನಡ ಅದುವೇ. ಅದುವೇ ಸರಿಯಾದ ಕನ್ನಡವೆಂಬುದು ಕೇಶಿರಾಜನ ನಿಲುವು. ಆದುದರಿಂದಲೇ ಆತ ಆ ಭಾಷಾಮಾರ್ಗವನ್ನು 'ಸುಮಾರ್ಗ'ವೆಂದಿದ್ದಾನೆ. ಭಾಷೆಯ ಬದಲಾವಣೆ ಮತ್ತು ಆಡುಮಾತಿನ ರೂಪಗಳು ಕೇಶಿರಾಜನ ಅರಿವಿನಲ್ಲಿಲ್ಲದಿಲ್ಲ. ಆದರೆ ಅದು 'ಸುಮಾರ್ಗ'ವಲ್ಲವೆಂಬುದು ಆತನ

ಅಭಿಪ್ರಾಯವಾಗಿತ್ತೆಂದು ತಿಳಿಯಬೇಕಾಗುತ್ತದೆ. 'ಸುಮಾರ್ಗ'ವೆಂಬ ಪದಪ್ರಯೋಗವನ್ನು ಆತ ಉದ್ದೇಶಪಟ್ಟೇ ಮಾಡಿದ್ದಾನೆಂದು ತಿಳಿಯಬೇಕಾಗುತ್ತದೆ. ಕೇಶಿರಾಜ ಎಷ್ಟೋ ಪದಗಳಿಗೆ ಅಥವಾ ಪ್ರಯೋಗಗಳಿಗೆ ಎರಡೆರಡು ರೂಪಗಳಿರುವುದನ್ನು ಹೇಳಿದ್ದಾನೆ. ಪ್ರಾಯಶಃ ಅಂತಹ ಪ್ರಯೋಗಗಳನ್ನು ಆತ 'ಸುಮಾರ್ಗ'ದ ಗ್ರಂಥಗಳಲ್ಲಿ ಕಂಡಿರಬೇಕು. ಆದರೆ ಸುಮಾರ್ಗದಲ್ಲಿ ಕಾಣದೆ ದಿನನಿತ್ಯದ ಭಾಷಾರೂಢಿಯಲ್ಲಿರುವ ಪದರೂಪಗಳನ್ನು ಆತ ಅಸಾಧುವೆಂದು ನಿರೂಪಿಸುತ್ತಾನೆ. ಉದಾಹರಣೆಗೆ: ಪೊಯಲುಂ – ಪೊಯ್ಯಲುಂ; ಗೆಯಲುಂ – ಗೆಯ್ಯಲುಂ; ಕೊಯಲುಂ – ಕೊಯ್ಯಲುಂ (ಸೂತ್ರ 80); ತಾಮರೆ – ತಾವರೆ; ಸಾಮಂತಂ – ಸಾವಂತಂ; ತಿಮಿರ್ – ತಿವಿರ್; ತೆಮರ್ – ತೆವರ್; ಸಾಮಿ – ಸಾವಿ (ಸೂತ್ರ 115); ಇಂದೊಳಂ – ಇಂದೋಳಂ; ಆರೊಗಿಸಿದಂ – ಆರೋಗಿಸಿದಂ; ಎಣಗೊಣಂ – ಎಣಗೋಣಂ; ಗೆಯ್ಯೊಗಂ – ಗೆಯ್ಯೋಗಂ (ಸೂತ್ರ 128); ಮುಂದು – ಮುಂತು; ಪಿಂದು – ಪಿಂತು; ಪಿಂದೆ – ಪಿಂತೆ; ಮುಂದೆ – ಮುಂತೆ (ಸೂತ್ರ 130); ಎತ್ತಣದು – ಎತ್ತಣ್ತು; ಆರದು – ಆರ್ತು (ಸೂತ್ರ 160); ಆವಂ – ಆವೊಂ; ನುಡಿದಂ – ನುಡಿದೊಂ; ಪಾಡಿದಂ – ಪಾಡಿದೊಂ (ಸೂತ್ರ 198); ಪಲಗೆ – ಹಲಗೆ; ಪಂದರ್ – ಹಂದರ್; ಪಾಸು – ಹಾಸು; ಪಂದಿ – ಹಂದಿ; ಪುಲಿ – ಹುಲಿ; ಪಸಲು – ಹಲಸು (ಸೂತ್ರ 170) ಈ ಉದಾಹರಣೆಗಳಲ್ಲಿ ಕೇಶಿರಾಜನು ಪದಗಳ ಬೇರೆಬೇರೆ ರೂಪಗಳನ್ನು ಸಾಧುರೂಪಗಳೆಂದು ಒಪ್ಪಿಕೊಂಡಿದ್ದಾನೆ. ಇನ್ನು ಕೆಲವು ಉದಾಹರಣೆಗಳನ್ನು ನೋಡೋಣ.

ಮರಲರಲೆರಲೆಂಬಿದಱಿಂ

ತರಾಳರೇಫಕ್ಕೆ ಲತ್ವಮುಂ ದೊರೆಕೊಳ್ಳುಂ

ಪಿರಿದುಂ ಮಲರಲರೆಲರೆಂ

ದೊರೆವುದು ಕೃತಿಯೊಳ್ ವಿಕಲ್ಪವಿಧಿಯಿಂದಮಿವಂ

(ಶಬ್ದಮಣಿದರ್ಪಣ ಸೂತ್ರ 39)

ಮರಲ್, ಅರಲ್, ಎರಲ್ - ಇವು ಮಲರ್, ಅಲರ್, ಎಲರ್ – ಎಂದು ರೂಪಾಂತರ ಹೊಂದಿರುವುದನ್ನು ಸೂತ್ರದಲ್ಲೇ ನಿರೂಪಿಸಿ ಕೇಶಿರಾಜ ಒಪ್ಪಿಕೊಂಡಿದ್ದಾನೆ. ಆದರೆ ಆತನ ಇನ್ನೊಂದು ಸೂತ್ರ ಹೀಗಿದೆ:

ಬೆರಲೊರಲೆರಲ್ಕೊರಲ್ ಸರ

ಲರಲ್ ಪರಲ್ ಮರಲುಮಂತೆ ನರಲುಂ ಮುಂಗೈ

ಸರಲುಂ ಲಾಂತಮಿವಂ ಗ್ರಾ

ಮ್ಯರಯದುಚ್ಚರಿಸುವರ್ ಕುಳಾಂತಭ್ರಮೆಯಿಂ

(ಶಬ್ದಮಣಿದರ್ಪಣ, ಸೂತ್ರ 38)

ಬೆರಲ್, ಒರಲ್, ಎರಲ್, ಕೊರಲ್, ಸರಲ್, ಪರಲ್, ನರಲ್, ಮುಂಗೈ ಸರಲ್ – ಈ ಶಬ್ದಗಳನ್ನು ಬೆರಳ್, ಒರಳ್, ಎರಳ್, ಕೊರಳ್, ಸರಳ್, ಪರಳ್, ನರಳ್, ಮುಂಗೈ ಸರಳ್ – ಎಂದು ಗ್ರಾಮ್ಯರು ಉಚ್ಚರಿಸುವುದು ಉಚ್ಚಾರಣೆಯ ಕ್ರಮವನ್ನು ಸರಿಯಾಗಿ ತಿಳಿಯದಿರುವುದರಿಂದ ಎಂದು ಕೇಳಿರಾಜ ಹೇಳಿದ್ದಾನೆ. ಶಬ್ದಗಳ ನಿಜರೂಪಗಳನ್ನು ತಿಳಿಯದೆ ಇವು ಳಾಂತ (ಕುಳಾಂತ) ಎಂದು ಭ್ರಮಿಸಿ ಹೀಗೆ ಉಚ್ಚರಿಸುತ್ತಾರೆಂದು ಆತನ ಖಚಿತಾಭಿಪ್ರಾಯ. ವಾಸ್ತವವೆಂದರೆ, ಆತ ಸುಮಾರ್ಗದಲ್ಲಿ ಕಂಡುಬಂದ ರೂಪಭೇದಗಳನ್ನು ಒಪ್ಪಿಕೊಂಡು ಅವುಗಳಿಗೆ ನಿಯಮಗಳನ್ನು ಹೇಳಿ ಸಾಧುಪ್ರಯೋಗಗಳೆಂದಿದ್ದಾನೆ. ತಾನು ಗ್ರಂಥಗಳಲ್ಲಿ ನೋಡದ ರೂಪಗಳು ರೂಢಿಯಲ್ಲಿದ್ದರೂ ಅವುಗಳು ಅಸಾಧುರೂಪಗಳೆಂದು ನಿರ್ಣಯಿಸಿದ್ದಾನೆ. ಕೇಶಿರಾಜ ತನ್ನ ಪರಿಸರದ ಆಡುಮಾತನ್ನು ಗಮನಿಸಿದರೂ ಗ್ರಂಥಗಳಲ್ಲಿ ಸ್ವೀಕೃತರೂಪಗಳು ಸಾಧುವೆಂಬುದೂ ಕೇವಲ ರೂಢಿಯುಲ್ಲಿದ್ದು ಗ್ರಂಥಗಳೊಳಗೆ ಉದಾಹರಣೆಗಳಿಲ್ಲದ ರೂಪಗಳು ಗ್ರಾಮ್ಯರು ತಿಳಿಯದೆ ಮಾಡುವ

ಉಚ್ಚಾರಗಳೆಂದೂ ಆತ ಖಚಿತವಾಗಿ ನಂಬಿದ್ದಾನೆ. 'ಗ್ರಾಮ್ಯ'ವೆಂಬುದು ಕಾವ್ಯಗಳಲ್ಲಿ ದೋಷವೆಂದು ಪರಿಗಣಿತವಾಗುವ ವಿಷಯವೆಂದು ಆತನಿಗೆ ಗೊತ್ತಿತ್ತು. ಗ್ರಾಮ್ಯಪದಗಳನ್ನು ಕಾವ್ಯಗಳಲ್ಲಿ ಬಳಸಬಾರದೆಂಬುದು ನಮ್ಮ ಕಾವ್ಯಮೀಮಾಂಸಕರ ನಿಲುವು. 'ಅಗ್ರಾಮ್ಯತ್ವವೇ ಉದಾರತೆಯೆಂಬ ಗುಣ' ಎಂದು ಆಲಂಕಾರಿಕರು ನಿರೂಪಿಸಿದ್ದಾರೆ. ಗ್ರಾಮ್ಯತ್ವವೆಂಬುದು ಕಾವ್ಯದೋಷ ಮಾತ್ರವಲ್ಲ ಸ್ವಚ್ಛವಾದ ಭಾಷಾಪ್ರಯೋಗದಲ್ಲಿಯೂ ಪರಿಗಣಿತವಾಗುವ ದೋಷವೆಂದು ಕೇಶಿರಾಜ ಭಾವಿಸಿದ್ದಾನೆ. ಒಟ್ಟಿನಲ್ಲಿ ಕೇಶಿರಾಜ ತನ್ನ ಸುತ್ತಲಿನ ಬಳಕೆಯ ಆಡುಮಾತನ್ನು ಗಮನಿಸಿದ್ದಾನಾದರೂ ಆತ ಗ್ರಂಥಭಾಷೆಯ ಕಡೆಗೇ ಒಲವನ್ನು ಹೊಂದಿದವನೆಂಬುದು ಸ್ಪಷ್ಟ.

ಕೇಶಿರಾಜ ಈ ರೀತಿಯಲ್ಲಿ ಆಡುಮಾತಿನ ರೂಪಗಳನ್ನು ಒಪ್ಪದೆ ನಿಷೇಧಿಸಿದರೂ ಭಾಷಾಪ್ರಯೋಗದ ಪ್ರವಾಹವು ಇಂತಹ ಅಡೆತಡೆಗಳನ್ನು ಗಮನಿಸದೆ ಮುಂದುವರಿಯಿತೆಂಬುದು ಬೇರೆ ವಿಷಯ. ಇಂದು ನಾವು ಕೇಶಿರಾಜ ನಿಷೇಧಿಸಿದ ರೂಪಗಳನ್ನು ಸಾಧುರೂಪಗಳೆಂದು ಪರಿಗಣಿಸಿದ್ದೇವೆ. ಕನ್ನಡವು ಕೇಶಿರಾಜನ ಕಾಲದಲ್ಲಿ 'ಗ್ರಾಮ್ಯ'ವೆಂದು ಕರೆಯಲಾಗುತ್ತಿದ್ದ ರೂಪಗಳನ್ನೂ ಮೀರಿ ಮುಂದಿನ ಕಾಲದಲ್ಲಿ ಬೇರೆ ರೂಪಗಳನ್ನು ಪಡೆಯಿತು. ಈಗ ಪ್ರಶ್ನೆಯಿರುವುದು ಹೀಗೆ ಬದಲಾದ ರೂಪಗಳನ್ನು ಅಥವಾ ಗ್ರಾಮ್ಯವೆಂದು ಪರಿಗಣಿತವಾದುವುಗಳನ್ನು ಸಾಧುವೆಂದು ಪರಿಗಣಿಸಿದ ಹೊಸಭಾಷೆಯನ್ನು ನಾವು ಹೊಸಗನ್ನಡವೆನ್ನುತ್ತೇವಾದರೂ, ನಿಜವಾಗಿ ಇದು ಕನ್ನಡವೆ? ಅಥವಾ ಹಳಗನ್ನಡವೆಂಬ ಆ ಕನ್ನಡಕ್ಕಿಂತ ಬೇರೆಯೇ ಆದ ಭಾಷೆಯೆ? ಸರಳವಾಗಿ ಹೇಳುವುದಾದರೆ ಹಳಗನ್ನಡ ಹೊಸಗನ್ನಡವೆರಡನ್ನೂ ಒಂದೇ ಭಾಷೆಯೆಂದು ಹೇಳಬೇಕೇಕೆ? ಅವನ್ನು ಬೇರೆಯೇ ಭಾಷೆಗಳೆಂದು ಭಾವಿಸಬಹುದಲ್ಲವೆ?

ಈ ಪ್ರಶ್ನೆಯನ್ನು ಪ್ರಾಕೃತ ಲೇಖಕನು ಮುಂದಿರಿಸಿದುದಲ್ಲ. ಕನ್ನಡ-ಸಂಸ್ಕೃತ ಭಾಷೆಗಳ ಹಿರಿಯ ವಿದ್ವಾಂಸರೂ ಅನೇಕ ಶಾಸ್ತ್ರ-ಕಾವ್ಯ ನಿಪುಣರೂ ಆದ ಮಹಾಮಹೋಪಾಧ್ಯಾಯ ವಿದ್ವಾನ್ ರಂಗನಾಥ ಶರ್ಮಾ ಅವರು ಮುಂದಿರಿಸಿದ ಪ್ರಶ್ನೆಯಿದು. ಅವರು ಈ ಬಗೆಗೆ

ಎಲ್ಲಿಯಾದರೂ ಬರೆದಿರುವರೋ ಎಂಬುದು ತಿಳಿಯದು. ಉಡುಪಿಯಲ್ಲಿ ಅವರು ತಮ್ಮ ಮಗನ ಮನೆಯಲ್ಲಿದ್ದಾಗ ನಾನು ಹಲವು ಬಾರಿ ಅವರನ್ನು ಭೇಟಿ ಮಾಡಿದುದುಂಟು. ಆ ಸಂದರ್ಭದಲ್ಲಿ ಅವರು ನನ್ನೊಡನೆ ಮಾತನಾಡುತ್ತ ವ್ಯಕ್ತಪಡಿಸಿದ ಅಭಿಪ್ರಾಯವಿದು. ಹಳಗನ್ನಡಕ್ಕೂ ಹೊಸಗನ್ನಡಕ್ಕೂ ಇರುವ ವಿಶೇಷವಾದ ಭಿನ್ನತೆಗಳನ್ನು, ಮುಖ್ಯವಾಗಿ ಉಚ್ಚಾರಣೆ, ಪದಪ್ರಯೋಗ, ವ್ಯಾಕರಣ ನಿಯಮಗಳು, ಭಾಷೆಯ ಕೋಶ ಇವೆಲ್ಲವನ್ನು ಪರಿಶೀಲಿಸಿದಾಗ ಕಾಣುವ ಭಿನ್ನತೆಗಳನ್ನು ಆಧರಿಸಿ ಹೊಸಗನ್ನಡವನ್ನು ಬೇರೆ ಭಾಷೆಯೆಂದು ಹೇಳಬಾರದೆ? ಎಂಬುದು ಅವರ ಪ್ರಶ್ನೆಯಾಗಿತ್ತು. ಹಳಗನ್ನಡದಿಂದ ಹೊಸಗನ್ನಡವು ಹುಟ್ಟಿತೆಂಬ ಮಾತನ್ನು ಒಪ್ಪಿಕೊಂಡರೂ ಈ ಪ್ರಶ್ನೆ ಉಳಿದೇ ಉಳಿಯುತ್ತದೆಂದು ಅವರ ಅಭಿಪ್ರಾಯ. ಈ ಪ್ರಶ್ನೆಯ ಸಾಧುತ್ವಕ್ಕೆ ಅವರು ಮಾದರಿಯಾಗಿ ತೋರಿಸುವುದು ಉತ್ತರ ಭಾರತದ ಆಧುನಿಕ ಭಾಷೆಗಳನ್ನು. ಇಂದು ಉತ್ತರಭಾರತದ ವಿವಿಧ ಭಾಗಗಳಲ್ಲಿ ಹಿಂದೀ, ಪಂಜಾಬೀ, ಒರಿಯಾ, ಬಂಗಾಲೀ, ಮರಾಠೀ ಮುಂತಾದ ಹಲವು ಭಾಷೆಗಳಿವೆ. ಈ ಭಾಷೆಗಳು ಯಾವ ಮೂಲದಿಂದ ಬಂದುವೆಂಬುದು ನಮಗೆ ತಿಳಿದಿದೆ. ಹಿಂದೊಂದು ಕಾಲದಲ್ಲಿ ಬಳಕೆಯಲ್ಲಿದ್ದ ವಿವಿಧ ಪ್ರಾಕೃತಗಳು ರೂಪಾಂತರ ಹೊಂದಿ ಈ ಭಾಷೆಗಳುಂಟಾದುವು. ಪ್ರಾಕೃತ ಭಾಷೆಗಳಲ್ಲಿಯೂ ಸಾಕಷ್ಟು ಗ್ರಂಥ ರಚನೆಯಾಗಿದ್ದು, ಅವು ಉಳಿದು ಬಂದಿವೆ. ಆ ಔತ್ತರೇಯರ ಬಳಕೆಯ ಭಾಷೆಗಳನ್ನು ಪ್ರಾಕೃತಗಳೆಂದೋ ಆಧುನಿಕ ಪ್ರಾಕೃತವೆಂದೋ ಹೇಳಬೇಕಾಗಿತ್ತಷ್ಟೆ. ಆದರೆ ಹಾಗೆ ಹೇಳುವುದು ಕಂಡು ಬರುವುದಿಲ್ಲ. ಹೊಸ ಕಾಲದ ಭಾಷೆಗಳಿಗೆ ಬೇರೆಯೇ ಹೆಸರುಗಳಿವೆ. ಹೀಗಿರುವಾಗ ಹಳಗನ್ನಡದಿಂದ ಹುಟ್ಟಿ ವಿಭಿನ್ನವಾಗಿ ಬೆಳೆದುಬಂದ ಹೊಸಗನ್ನಡವನ್ನು ಕನ್ನಡವೆಂಬ ಆ ಹೆಸರಿನಿಂದ ಕರೆಯುವುದು ಹೇಗೆ? ಹೊಸ ಕಾಲದ ಕನ್ನಡವು ಹಳಗನ್ನಡಕ್ಕಿಂತ ತೀರ ಭಿನ್ನವೆಂದು ಹೊಸಗನ್ನಡವನ್ನು ಬಲ್ಲ ಎಲ್ಲರೂ ತಮ್ಮ ತಮ್ಮ ಅನುಭವಗಳಿಂದಲೇ ತಿಳಿದವರಾದುದರಿಂದ ಹೊಸಗನ್ನಡವು ಬೇರೆಯೇ ಹೆಸರಿನಿಂದ ಗುರುತಿಸಲ್ಪಡುವುದಕ್ಕೆ ಯೋಗ್ಯವಲ್ಲವೆ – ಎಂಬುದು ವಿದ್ವಾನ್ ರಂಗನಾಥ ಶರ್ಮಾ ಅವರ ಪ್ರಶ್ನೆ. ಹೊಸಗನ್ನಡವನ್ನು ಉಪಯೋಗಿಸುವ ಈ ಕಾಲದಲ್ಲಿ

ಹಳಗನ್ನಡವನ್ನು ಕಲಿಯುವುದೆಂದರೆ ಬೇರೆಯೇ ಭಾಷೆಯನ್ನು ಕಲಿತಂತಿರುವುದರಿಂದ ಅವರ ಪ್ರಶ್ನೆ ಸತಾರ್ಕಿಕವಲ್ಲವೆನ್ನುವುದೆಂತು?

ಈ ಪ್ರಶ್ನೆಯನ್ನು ಕುರಿತು ಇನ್ನೂ ಮುಂದುವರಿದು ವಿಚಾರಿಸುವುದಾದರೆ 'ಕನ್ನಡ' ಎಂಬ ಭಾಷಾನಾಮವನ್ನು ನಾವು ಯಾವುದಕ್ಕೆ ಉಪಯೋಗಿಸಬೇಕು? ಹಳಗನ್ನಡವನ್ನು ಕನ್ನಡವೆನ್ನಬೇಕೆ? ಹೊಸಕಾಲದ ಕನ್ನಡವನ್ನು ಕನ್ನಡವೆನ್ನಬೇಕೆ? ಈಗಿನ ಬಳಕೆಯಲ್ಲಿ ಕನ್ನಡವೆಂಬುದು ಎರಡು ಭಾಷಾರೂಪಗಳ ಸಂದರ್ಭಗಳಲ್ಲಿಯೂ ಬಳಕೆಗೊಳ್ಳುತ್ತದೆ. ಆದರೆ ನಿಜವಾಗಿ ಬೇರೆ ಹೆಸರಿರಬೇಕಾದುದು ಬದಲಾಗಿ ಹೊಸರೂಪವನ್ನು ಪಡೆದಿರುವ ಭಾಷಾರೂಪಕ್ಕೇ ಅಲ್ಲವೆ? ರಾಮನೆಂಬ ವ್ಯಕ್ತಿಗೆ ಮಗನಾಗಿ ಹುಟ್ಟಿದವನನ್ನು 'ಹೊಸರಾಮ'ನೆಂದೋ 'ಆಧುನಿಕರಾಮ'ನೆಂದೋ ಹೇಳದೆ ವ್ಯಾವಹಾರಿಕ ಪ್ರಯೋಜನಕ್ಕಾಗಿ ಬೇರೆ ಹೆಸರನ್ನೇ ನೀಡುವುದಿಲ್ಲವೆ? ಪ್ರಾಕೃತದಿಂದ ಹುಟ್ಟಿದ ಭಾಷೆ ಹಿಂದಿಯೋ ಬಂಗಾಲಿಯೋ ಒರಿಯಾವೋ ಆಯಿತಷ್ಟೇ ಹೊರತು 'ಹೊಸ ಪ್ರಾಕೃತ' ಅಥವಾ 'ಆಧುನಿಕ ಪ್ರಾಕೃತ'ವಾಗಲಿಲ್ಲವಷ್ಟೆ. ಹಾಗೆಯೇ ಇಂದು ನಾವು ಹಳಗನ್ನಡವೆನ್ನುತ್ತೇವಾದರೂ ಅಂದಿನ 'ಕನ್ನಡ'ದಿಂದ ಹುಟ್ಟಿದ ಭಾಷೆ 'ಹೊಸಗನ್ನಡ'ವಾಗದೆ ಬೇರೆ ಹೆಸರನ್ನೇ ಪಡೆಯಬೇಕಾಗಿತ್ತಲ್ಲವೆ? ಎಂದರೆ 'ಕನ್ನಡ'ವೆಂಬ ಹೆಸರು ಅಂದಿನ ಕನ್ನಡಕ್ಕೆ ಸಲ್ಲುವುದಷ್ಟೆ. 'ಹೊಸಗನ್ನಡ' ಎಂಬುದನ್ನೇ ಸಾಧುವೆನ್ನುವುದಾದರೆ 'ಹೊಸಪ್ರಾಕೃತ' ಎನ್ನುವುದೇ ಸರಿ. ಮಾತ್ರವಲ್ಲ, ಆಧುನಿಕ ಕಾಲದ ಔತ್ತರೇಯ ಭಾಷೆಗಳ ಹೊಸ ಹೆಸರುಗಳು ಕೂಡ ಸರಿಯಲ್ಲವೆಂದೇ ಹೇಳಬಹುದಲ್ಲವೇ? ಈ ಪ್ರಶ್ನೆ ವಿಚಾರಮಾಡಲು, ಚರ್ಚಿಸಲು ಬಳಸಬೇಕಾದುದಷ್ಟೆ ಹೊರತು ಭಾಷಾವಿಷಯದಲ್ಲಿ ಗೊಂದಲವನ್ನುಂಟುಮಾಡಲಿಕ್ಕಾಗಿ ಇರುವಂತಹದಲ್ಲವೆಂದು ಸ್ಪಷ್ಟವಾಗಿ ತಿಳಿಯಬೇಕು. ವಿದ್ವಾನ್ ರಂಗನಾಥ ಶರ್ಮರು ಆ ಉದ್ದೇಶದಿಂದ ಈ ಮಾತುಗಳನ್ನು ಹೇಳಿದ್ದಲ್ಲವೆಂಬುದು ಸ್ಪಷ್ಟ. ಹಳಗನ್ನಡವನ್ನು ಚೆನ್ನಾಗಿ ಬಲ್ಲ ಹಿರಿಯರೂ 'ಹೊಸಗನ್ನಡ ವ್ಯಾಕರಣ'ವೆಂಬ ಪುಸ್ತಕವನ್ನೇ ಬರೆದವರೂ ಆದ ಅವರ ಈ ಪ್ರಶ್ನೆಯೇ ಅಪ್ರಸ್ತುತವೆಂದು

ತಿರಸ್ಕರಿಸುವಂತಿಲ್ಲ. ಕೇವಲ ತಾರ್ಕಿಕವಾಗಿ ನೋಡುವುದಾದರೆ, ಹಳಗನ್ನಡವೆಂದು ನಾವು ಗುರುತಿಸುವ ಭಾಷೆಯೇ ಕನ್ನಡ; ಇಂದು ನಾವು ಬಳಸುತ್ತಿರುವುದು ಅದರಿಂದ ಹುಟ್ಟಿದ ಇನ್ನೊಂದೇ ಆಡುಮಾತು, ಇರಲಿ.

ಹಳಗನ್ನಡದ ಸಾಹಿತ್ಯದೆಡೆಗೆ ಬಂದಾಗ ಹಲವು ಪ್ರಶ್ನೆಗಳೇಳುತ್ತವೆ. ಕನ್ನಡವನ್ನು ತಾಯ್ನುಡಿಯಾಗಿ ಬಳಸುವವನೇ ಆದರೂ, ಓದಲು ಬರೆಯಲು ಬಲ್ಲವನೇ ಆದರೂ ಯಾವುದೇ ಹಿನ್ನೆಲೆಯಿಲ್ಲದೆ ಹಳಗನ್ನಡವನ್ನು ಸುಲಭವಾಗಿ ಓದಲಾರನು; ಸಹಜವಾಗಿ ಅರ್ಥಮಾಡಿಕೊಳ್ಳಲಾರನು. ಹಿಂದೆಯೇ ಹೇಳಿದಂತೆ ಬೇರೊಂದು ಭಾಷೆಯನ್ನು ಅಧ್ಯಯನ ಮಾಡಿದಂತೆಯೇ ಹಳಗನ್ನಡವನ್ನು ಅರಿತುಕೊಳ್ಳಲು ಶ್ರಮಪಡಬೇಕಾಗುತ್ತದೆ. ಹಳಗನ್ನಡದ ಶಬ್ದಕೋಶವು ಹೊಸಗನ್ನಡದ ನಮ್ಮ ದಿನಬಳಕೆಯ ಶಬ್ದಕೋಶಕ್ಕಿಂತ ಭಿನ್ನವಾಗಿಯೂ ವಿಸ್ತೃತವಾಗಿಯೂ ಇರುವುದು, ಹಳಗನ್ನಡದ ವಾಕ್ಯರಚನೆ ಹೊಸಗನ್ನಡಕ್ಕಿಂತ ಭಿನ್ನವಾಗಿರುವುದು, ಹಳಗನ್ನಡದ ಎಷ್ಟೋ ಶಬ್ದರೂಪಗಳು ಹೊಸಗನ್ನಡದ ರೂಪಗಳಿಗಿಂತ ಭಿನ್ನವಾಗಿರುವುದು, ಹಳಗನ್ನಡದ ರಚನೆಗಳು ಛಂದೋಬದ್ಧವಾಗಿರುವುದು, ವಿವಿಧ ವೃತ್ತಗಳು ಮತ್ತು ಕಂದ ಹಾಗೂ ಇತರ ರಚನೆಗಳಿಗಾಗಿ ವಾಕ್ಯದೊಳಗಿನ ಭಾಗಗಳು ಅಸ್ತವ್ಯಸ್ತವಾಗಿ ಜೋಡಿಸಲ್ಪಟ್ಟಿರುವುದು, ಸಂಸ್ಕೃತ– ಪ್ರಾಕೃತಪದಗಳು ಹಾಗೂ ತದ್ಭವ ರೂಪಗಳು ವಿಪುಲವಾಗಿರುವುದು, ದೀರ್ಘ ಸಮಾಸಗಳಿಂದ ಕೂಡಿದ ವಾಕ್ಯಗಳಿರುವುದು, ಹೊಸಗನ್ನಡದಲ್ಲಿಲ್ಲದ ಕೆಲವು ಅಕ್ಷರಗಳು ಹಳಗನ್ನಡದಲ್ಲಿರುವುದು, ಕವಿಸಮಯದಂತಹ ಕಾವ್ಯನಿರ್ಮಾಣ ಪರಿಕರಗಳನ್ನು ಬಳಸಿರುವುದು, ಹೊಸಗನ್ನಡದ ಹಿನ್ನೆಲೆಯವರಿಗೆ ಮಿತಿಮೀರಿಯೆಂಬಂತೆ ತೋರುವ ವರ್ಣನೆಗಳಿರುವುದು, ನಿರೂಪಣೆ ಅತ್ಯುಕ್ತಿನಿಬಿಡವಾಗಿರುವುದು. ಕೃತಿಗಳಲ್ಲಿ ಸಾಂದರ್ಭಿಕವಾಗಿ ನಿರೂಪಿಸುವ ಹಿನ್ನೆಲೆಯ ಕತೆಗಳು ಅಪರಿಚಿತವಾಗಿರುವುದು – ಹೀಗೆ ಹಲವಾರು ಕಾರಣಗಳಿಂದ ಹೊಸಗನ್ನಡದವನಿಗೆ ಹಳಗನ್ನಡದ ಸಾಹಿತ್ಯಲೋಕವು ನಡೆಯಲು ಕಷ್ಟವಾದ ಕಾಡುದಾರಿಯಂತೆ ಕಂಡುಬರಬಹುದು. ಆದರೂ

ಭಾಷಾನಿಷ್ಠೆ, ಅಧ್ಯಯನಶ್ರದ್ಧೆ ಮತ್ತು ಪರಿಶ್ರಮದ ಸಿದ್ಧತೆಯಿದ್ದ ಆಸಕ್ತನು ಹಳಗನ್ನಡದ ಸಾಹಿತ್ಯರಾಶಿಯನ್ನು ಪ್ರವೇಶಿಸಬಹುದಾಗಿದೆ. ಮೊದಲಿಗೆ ಕಾಡುದಾರಿಯಂತೆ ಕಂಡದ್ದು ಮುಂದೆ ಆತನಿಗೆ ಸಹಜಮಾರ್ಗವಾಗಿ ಪರಿಣಮಿಸುವುದು. ಒಂದೆರಡು ಗ್ರಂಥಗಳ ಸರಿಯಾದ ಅಧ್ಯಯನದಿಂದ ಹಲವು ಗ್ರಂಥಗಳನ್ನು ಅಧ್ಯಯನ ಮಾಡುವ ಉತ್ಸಾಹ, ಧೈರ್ಯಗಳು ಉಂಟಾಗಬಹುದು.

ಹಳಗನ್ನಡದ ಗ್ರಂಥರಾಶಿಯು ಈ ರೀತಿ ಸಮಸ್ಯಾತ್ಮಕವಾಗಿ ಕಂಡುಬರುವುದು ಅಸಹಜವಲ್ಲ. ಏಕೆಂದರೆ, ಹೊಸಕಾಲದ ನಮ್ಮ ಜೀವನದಲ್ಲಿ ಯಾವ ರೀತಿಯಲ್ಲಿಯೂ ಹಳಗನ್ನಡದ ಸಂಪರ್ಕವೇ ಇಲ್ಲದ ಸ್ಥಿತಿಯಲ್ಲಿ ಸಾವಿದ್ದೇವೆ. ನಮ್ಮ ಮನೆಗಳಲ್ಲಿ ಹಳಗನ್ನಡದ ಕೃತಿಗಳನ್ನು ಓದುವ, ಕೇಳುವ, ಕೇಳಿಸುವ ಸಂದರ್ಭಗಳಿಲ್ಲ; ಹಳಗನ್ನಡವು ಕಿವಿಗಳಿಗೆ ಬೀಳುವ ರೀತಿಯ ವಾತಾವರಣವಿಲ್ಲ. ಎಲ್ಲಕ್ಕಿಂತ ಹೆಚ್ಚಾಗಿ ವ್ಯಾವಹಾರಿಕ ಪ್ರಪಂಚದಲ್ಲಿ ಹಳಗನ್ನಡವು ಯಾವ ಉಪಯೋಗಕ್ಕೂ ಬಾರದ ವಸ್ತುವೆಂಬಂತೆ ತಿಳಿಯಲಾಗುತ್ತದೆ. ನಮ್ಮ ದೈನಂದಿನ ವ್ಯವಹಾರದಲ್ಲಿ ಹಳಗನ್ನಡದ ಅರಿವಿಲ್ಲದಿರುವುದು ಯಾವ ಕೊರತೆಯೂ ಅಲ್ಲ. ಕೇವಲ ನಿತ್ಯವ್ಯವಹಾರಗಳಲ್ಲಿ ತೃಪ್ತರಾಗುವವರಿಗೆ ಹಳಗನ್ನಡವೆಂಬೊಂದು ಭಾಷಾರೂಪವುಂಟೆಂಬುದು ಕೂಡ ತಿಳಿಯದು. ಅಷ್ಟಿಷ್ಟು ಶಾಲಾ ವಿದ್ಯಾಭ್ಯಾಸ ಮಾಡಿದವರೂ ಹಳಗನ್ನಡದ ಕಡೆಗೆ ಹೆಚ್ಚು ಆಕರ್ಷಿತರಲ್ಲ. ಹಳಗನ್ನಡದ ಅಷ್ಟೋ ಇಷ್ಟೋ ಭಾಗಗಳನ್ನು ಪಠ್ಯದಲ್ಲಿ ನೀಡಲಾಗಿದ್ದರೂ ಅವನ್ನು ಓದುವ ಕಷ್ಟವೇ ಬೇಡವೆಂದು ದೂರವಿರಿಸುವ ವಿದ್ಯಾರ್ಥಿಗಳಿದ್ದಾರೆ; ಆ ಭಾಗಗಳನ್ನು ಓದದೆಯೂ ಉತ್ತೀರ್ಣರಾಗಬಹುದೆಂಬ ಬುದ್ಧಿವಂತಿಕೆಯನ್ನು ಬೋಧಿಸುವ ಅಧ್ಯಾಪಕರೂ ಇದ್ದಾರೆ. ನಮ್ಮ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ 'ಗೈಡು' ಪುಸ್ತಕಗಳನ್ನಿರಿಸಿಕೊಂಡು ಪಾಠಮಾಡುವ ಅಧ್ಯಾಪಕ ವರ್ಗದವರೂ ಇದ್ದಾರೆಂಬುದನ್ನು ಕೇಳಿ ನನಗೆ ಆಶ್ಚರ್ಯವಾದುದುಂಟು. ಅಂತಹ ಅಧ್ಯಾಪಕರು ಹಳಗನ್ನಡದಲ್ಲಿ ವಿದ್ಯಾರ್ಥಿಗಳಿಗೆ ಆಸಕ್ತಿ ಹುಟ್ಟುವ ಕೆಲಸಗಳನ್ನು ಮಾಡಬಹುದೆಂಬ ನಿರೀಕ್ಷೆಯನ್ನಿರಿಸುವುದೂ ಸಾಧ್ಯವಿಲ್ಲ.

ನಿತ್ಯವ್ಯವಹಾರಗಳಲ್ಲಿ ಉಪಯೋಗವಾಗದ ಎಷ್ಟೋ ವಿಷಯಗಳು ನಮ್ಮ ಸಾಂಸ್ಕೃತಿಕ ಲೋಕಕ್ಕೆ ಸಂಬಂಧಿಸಿವೆ. ಸಾಂಸ್ಕೃತಿಕ ಲೋಕದ ವಿಷಯಗಳನ್ನು ಪರಿಗಣಿಸದೆಯೂ ಮನುಷ್ಯನ ಜೀವನ ನಡೆಯಬಹುದು. ಆದರೆ ಆ ಜೀವನದಲ್ಲಿ ಸಾಂಸ್ಕೃತಿಕ ಶ್ರೀಮಂತಿಕೆ ಇಲ್ಲದೇ ಹೋಗಬಹುದು. ನಮ್ಮ ಇತಿಹಾಸ, ನಮ್ಮ ಭಾಷೆಯ ಇತಿಹಾಸ, ನಮ್ಮ ಸಾಹಿತ್ಯದ ಇತಿಹಾಸ – ಇವುಗಳನ್ನು ತಿಳಿಯುವುದೆಂದರೆ ನಮ್ಮ ಹಿರಿಯರನ್ನೂ ನಮ್ಮ ಪರಂಪರೆಯನ್ನೂ ಅರ್ಥಮಾಡಿಕೊಳ್ಳುವುದೆಂದೇ ಅರ್ಥ. ಹಾಗೆ ಅರ್ಥಮಾಡಿಕೊಂಡಷ್ಟು ನಮ್ಮ ಒಟ್ಟು ಸಮಾಜದ ಸಾಂಸ್ಕೃತಿಕ ಬಲ ಹೆಚ್ಚುತ್ತದೆ; ನಮ್ಮ ಬದುಕು ಹೆಚ್ಚು ಅರ್ಥವತ್ತಾಗುತ್ತದೆ. ಹಾಗೆ ಅರ್ಥವತ್ತಾದ ಜೀವನ ಮಾಡಲು ನಮ್ಮ ಅಧ್ಯಯನವನ್ನು ವಿಸ್ತರಿಸಿಕೊಳ್ಳಬೇಕು. ಇದಕ್ಕೆ ನಮ್ಮವರ ಬಗೆಗಿನ ಪ್ರೀತಿ ನಮ್ಮಲ್ಲಿರಬೇಕು. ನಮ್ಮ ಭಾಷಾಪ್ರೀತಿ – ಸಾಹಿತ್ಯಪ್ರೀತಿಗಳು ನಮ್ಮ ಜೀವನವನ್ನು ಹೆಚ್ಚು ಸುಗಮಗೊಳಿಸಬಲ್ಲುವು.

ನಮ್ಮ ಇತಿಹಾಸವನ್ನು ಗಮನಿಸಿದರೆ ನಮ್ಮಲ್ಲಿ ಪ್ರಾಕೃತಿಕವಾದ ಆಘಾತಗಳಲ್ಲದೆ ಅನೇಕ ರೀತಿಯ ಆಕ್ರಮಣಗಳು, ಯುದ್ಧಗಳು ನಡೆದುದೂ ತಿಳಿಯುತ್ತದೆ. ಈ ಕಾರಣಗಳಿಂದ ನಮ್ಮ ಪ್ರಾಚೀನ ಗ್ರಂಥರಾಶಿಯಲ್ಲಿ ಇದ್ದ ಎಷ್ಟೋ ಗ್ರಂಥಗಳು ನಾಶವಾಗಿವೆ. ನಮ್ಮದೇ ಮರೆವಿನಿಂದ, ಅಧ್ಯಯನದ ಕೊರತೆಯಿಂದ, ಉಪೇಕ್ಷೆಯಿಂದ, ಸಮಾಜರಕ್ಷಕ ಶಕ್ತಿಗಳ ದೌರ್ಬಲ್ಯದಿಂದ ಸಾಂಸ್ಕೃತಿಕ ಸಂಪತ್ತು ನಾಶವಾಗಿದೆ. ಆದರೂ ನಾಶವಾಗದೆ ಉಳಿದ ಸಂಪತ್ತು ಕಡಮೆಯೇನಲ್ಲ. ಸಾಮಾಜಿಕ ಸ್ಥಿತ್ಯಂತರಗಳು, ಸಾಂಸ್ಕೃತಿಕ ಆಘಾತಗಳು ನಮ್ಮ ಅಧ್ಯಯನ ಪರಂಪರೆಯನ್ನು ವಿಚ್ಛಿತ್ತಿಗೊಳಿಸಿವೆ. ಆದರೂ ನಮ್ಮೊಡನೆ ಉಳಿದಿರುವ ಸಂಪತ್ತನ್ನು ಕಾಪಾಡುವ ಹೊಣೆಗಾರಿಕೆ ನಮ್ಮ ಮೇಲಿದೆ. ಪ್ರಾಚೀನ ಗ್ರಂಥಗಳ, ಸಾಹಿತ್ಯದ ಮತ್ತು ಭಾಷೆಯ ಅಧ್ಯಯನವನ್ನು ಪುನರಪಿ ಗಟ್ಟಿಗೊಳಿಸುವ ಕಾರ್ಯ ನಡೆಯಬೇಕಿದೆ.

ವ್ಯಾಕರಣ, ನ್ಯಾಯಶಾಸ್ತ್ರ ಮತ್ತು ನಿಘಂಟು ಇವನ್ನು ಸರಿಯಾಗಿ ಅಧ್ಯಯನ ಮಾಡುವುದು ಶಾಸ್ತ್ರ ಮತ್ತು ಸಾಹಿತ್ಯಮಾರ್ಗಗಳಲ್ಲಿ ಸಾಧನೆ ಮಾಡಲು ಭದ್ರವಾದ ನೆಲೆಗಟ್ಟನ್ನೊದಗಿಸುತ್ತದೆಂಬುದು ನಮ್ಮ ಪ್ರಾಚೀನರ

ದೃಷ್ಟಿಯಾಗಿತ್ತು. ಯಾವುದೇ ವಿಷಯದಲ್ಲಿ ಸರಿಯಾದ ಅಧ್ಯಾಪನ ಮತ್ತು ನಿರೂಪಣೆಗಳಿಗೆ ಈ ಮೂಲಭೂತ ಅಧ್ಯಯನ ಬೇಕೇಬೇಕಾಗಿತ್ತು. ನಮ್ಮ ಗುರುಕುಲಗಳಲ್ಲಿ, ಮಠಗಳಲ್ಲಿ, ಅಗ್ರಹಾರಗಳಲ್ಲಿ ಮತ್ತು ವಿದ್ಯಾಕೇಂದ್ರಗಳಲ್ಲಿ ಈ ರೀತಿಯ ಅಧ್ಯಯನಗಳೂ ಗ್ರಂಥರಚನೆಗಳೂ ಗ್ರಂಥಪ್ರತಿಕಾರ್ಯಗಳೂ ನಡೆಯುತ್ತಿದ್ದುವು. ಹವ್ಯಾಸಿ ಮತ್ತು ವೃತ್ತಿಲಿಪಿಕಾರರಿಂದ ಗ್ರಂಥಗಳನ್ನು ಪ್ರತಿಮಾಡುವ ಕೆಲಸ ನಿರಂತರವಾಗಿ ನಡೆಯುತ್ತಿತ್ತು. ಕವಿಗಳಿಂದಲೂ ಶಾಸ್ತ್ರಜ್ಞರಿಂದಲೂ ಹೊಸ ಗ್ರಂಥಗಳು ರಚಿತವಾದೊಡನೆ ಪ್ರೀತಿ – ಆಸಕ್ತಿಗಳಿಂದ ಅವನ್ನು ಪ್ರತಿಮಾಡುವ ಕಾರ್ಯ ನಡೆಯುತ್ತಿತ್ತು.

ನಾಡೊಡೆಯರು, ಪ್ರಭುಗಳು, ಅಧಿಕಾರಸ್ಥರು, ಆಢ್ಯರು ಗ್ರಂಥಗಳನ್ನು ಪ್ರತಿಮಾಡಿಸುತ್ತಿದ್ದರು; ಪ್ರತಿಗಳನ್ನು ತಮ್ಮಲ್ಲಿ ಓದುವುದಕ್ಕಾಗಿ ಮತ್ತು ಓದಿಸುವುದಕ್ಕಾಗಿ ಇರಿಸಿಕೊಳ್ಳುತ್ತಿದ್ದರು. ಗ್ರಂಥರಚಕರನ್ನೂ ಲಿಪಿಕಾರರನ್ನೂ ಪ್ರೋತ್ಸಾಹಿಸುತ್ತಿದ್ದರು. ಆದರೂ ಆದ ಗ್ರಂಥನಾಶದ ಪ್ರಮಾಣ ಸಣ್ಣದಲ್ಲ.

ನಮ್ಮ ಮಠಗಳಲ್ಲಿ, ಗುರುಮನೆಗಳಲ್ಲಿ ಮತ್ತು ಪಂಡಿತ–ವಿದ್ವಾಂಸರ ಪರಿಸರದಲ್ಲಿ ಸಂಸ್ಕೃತ ವಿದ್ಯಾಭ್ಯಾಸವೂ ಶಾಸ್ತ್ರ ವಿದ್ಯಾಭ್ಯಾಸವೂ ನಡೆಯುತ್ತಿದ್ದಂತೆ ಕನ್ನಡ ಭಾಷಾಭ್ಯಾಸ–ಸಾಹಿತ್ಯಾಭ್ಯಾಸಗಳೂ ನಡೆಯುತ್ತಿದ್ದುವೆಂಬುದು ಸ್ಪಷ್ಟವಾಗಿದೆ. ಹಳಗನ್ನಡವನ್ನು ಗಮನಿಸಿದರೆ ಅದರಲ್ಲಿ ಹಲವು ಬಗೆಯ ನಿಘಂಟುಗಳು ವಿದ್ವಾಂಸರಿಂದ ರಚಿತವಾಗಿರುವುದು ತಿಳಿಯುತ್ತದೆ. ಈ ನಿಘಂಟುಗಳ ರಚನೆಯೆಂಬುದು ಅಧ್ಯಯನ ಪರಂಪರೆ ಗಟ್ಟಿಯಾಗಿದ್ದುದಕ್ಕೆ ಪ್ರಬಲ ಸಾಕ್ಷ್ಯವಾಗಿದೆ. ಈ ಹಳೆಯ ನಿಘಂಟುಗಳಾವುವೂ ನಮ್ಮ ಇಂದಿನ ಪದ್ಧತಿಯ ನಿಘಂಟುಗಳಲ್ಲ. ಆದರೆ ನಮ್ಮ ಹಿರಿಯರು ಇಂತಹ ನಿಘಂಟುಗಳನ್ನು ಉಪಯೋಗಿಸಿ ಪೂರ್ವದ ಗ್ರಂಥಗಳನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸುತ್ತಿದ್ದರೆಂಬುದರಲ್ಲಿ ಸಂದೇಹವಿಲ್ಲ. ಸಾಹಿತ್ಯ ಗ್ರಂಥಗಳ ಮತ್ತು ಧಾರ್ಮಿಕ ಗ್ರಂಥಗಳ ಸಾಕಷ್ಟು ಹಸ್ತಪ್ರತಿಗಳು ಲಬ್ಧವಾಗುವಂತೆ ಶಾಸ್ತ್ರ ಗ್ರಂಥಗಳ ಪ್ರತಿಗಳೂ ಲಬ್ಧವಾಗಿರುವುದು ಅಧ್ಯಯನ ಪರಂಪರೆ ಗಟ್ಟಿಯಾಗಿದ್ದುದಕ್ಕೆ ಆಧಾರವೆನ್ನಬಹುದು. (1882ರಲ್ಲಿ ಕಿಟ್ಟೆಲ್ ಅವರು ಶಬ್ದಮಣಿದರ್ಪಣವನ್ನು ಸಂಪಾದಿಸಲು ಒಂಬತ್ತು ಹಸ್ತಪ್ರತಿಗಳನ್ನು

ಅವಲಂಬಿಸಿದ್ದರು. 1875ರಲ್ಲಿ ನಾಗವರ್ಮನ ಛಂದೋಂಬುಧಿಯನ್ನು ಸಂಪಾದಿಸಲು ಸಂಗ್ರಹಿಸಿದ ಮುದ್ರಿತ ಮತ್ತು ಅಮುದ್ರಿತ ಪ್ರತಿಗಳ ಸಂಖ್ಯೆ17.)

ನಮ್ಮ ನಾಡಿನಲ್ಲಿ ಆಧುನಿಕತೆಯ ಗಾಳಿ ಬೀಸಿದಾಗ, ಮುಖ್ಯವಾಗಿ ನಮಗೆ ಪಾಶ್ಚಾತ್ಯ ಸಂಪರ್ಕವಾದಾಗ, ಒಂದೆಡೆಯಿಂದ ನಮ್ಮದರ ಬಗೆಗೆ ಉಪೇಕ್ಷೆ ಬೆಳೆದಂತೆ ಇನ್ನೊಂದೆಡೆಯಿಂದ ಪಾಶ್ಚಾತ್ಯರ ತಂತ್ರಜ್ಞಾನವನ್ನು ಉಪಯೋಗಿಸಿಕೊಂಡು ನಮ್ಮ ಗ್ರಂಥಗಳನ್ನು ಉಳಿಸುವ ಪ್ರಯತ್ನಗಳೂ ನಡೆದುವು. ಉದಾಹರಣೆಗೆ, ಕಾಗದದ ಬಳಕೆ ಹೆಚ್ಚಾಗುತ್ತ ಹೋದಂತೆ ಓಲೆಯಲ್ಲಿ ಬರೆಯುವ ವಿಧಾನ ಮರೆಯಾಯಿತು. ಆದರೆ ಪಾಶ್ಚಾತ್ಯರ ಮುದ್ರಣ ತಂತ್ರಜ್ಞಾನವನ್ನು ಉಪಯೋಗಿಸಿಕೊಂಡು ನಮ್ಮ ಪ್ರಾಚೀನ ಗ್ರಂಥಗಳನ್ನು ಬಹುಸಂಖ್ಯೆಯಲ್ಲಿ ಮುದ್ರಿಸುವ ಕೆಲಸ ತೊಡಗಿತು. ಹಿಂದೆ ಲಿಪಿಕಾರವೃತ್ತಿಯುವರಿರುತ್ತಿದ್ದರು. ಆದರೆ ಗ್ರಂಥಗಳನ್ನು ಆಧರಿಸಿ ಉದ್ಯಮವೆಂಬುದಿರಲಿಲ್ಲ. ಹೊಸ ತಂತ್ರಜ್ಞಾನದ ಆಗಮನದಿಂದ 'ಪುಸ್ತಕೋದ್ಯಮ'ವೆಂಬ ಹೊಸ ಉದ್ಯೋಗಕ್ಷೇತ್ರವೇ ತೆರೆದುಕೊಂಡಿತು. ಆದರೆ ಆಸಕ್ತರ ಮನೆ-ಮನೆಗಳಲ್ಲಿ ಅವರವರ ಆಸಕ್ತಿಯ ಗ್ರಂಥಗಳನ್ನು ಪ್ರತಿ ಮಾಡುವ ಕಾರ್ಯ ನಡೆಯುತ್ತಿದ್ದುದು ತೀವ್ರವಾಗಿ ಕುಂಠಿತವಾಯಿತು.

ಇಂದು ಮುದ್ರಣ ತಂತ್ರಜ್ಞಾನ ಅಗಾಧವಾಗಿ ಬೆಳೆದಿದೆ; ಪುಸ್ತಕೋದ್ಯಮವೂ ಬೆಳೆದಿದೆ; ಪುಸ್ತಕ ಪ್ರಕಾಶನ ಸಂಸ್ಥೆಗಳೂ ಹಲವು ಇವೆ. ಆದರೆ ಇನ್ನೂ ಹಸ್ತಪ್ರತಿ ರೂಪದಲ್ಲೇ ಇರುವ ಎಷ್ಟೋ ಗ್ರಂಥಗಳು ಸರಿಯಾಗಿ ಸಂಪಾದಿತವಾಗಿ ಅಚ್ಚಿನ ಮನೆಯನ್ನು ಕಂಡಿಲ್ಲ. ಆಧುನಿಕ ಜೀವನದ ಆದ್ಯತೆಗಳು ಬದಲಾಗಿ ಭಾಷಾಧ್ಯಯನ – ಸಾಹಿತ್ಯಾಧ್ಯಯನಗಳು ಕುಂಠಿತವಾಗಿವೆ. ಹಿಗಾಗಬಾರದೆಂದಾದರೆ ಪ್ರಾಚೀನ ಗ್ರಂಥಗಳ ಅಧ್ಯಯನ ಮಾಡುವ ಆಸಕ್ತಿಯುಳ್ಳ ಹಲವಾರು ತಂಡಗಳು ನಮ್ಮ ನಾಡಿನಲ್ಲಿ ರೂಪುಗೊಳ್ಳಬೇಕು. ನಮ್ಮ ಗ್ರಂಥರಾಶಿಯಲ್ಲಿ ಮುದ್ರಣ ಕಾಣದಿರುವ ಗ್ರಂಥಗಳನ್ನು ಅಧ್ಯಯನ ಮಾಡಿ ಸಂಪಾದಿಸಿ ಪ್ರಕಟಿಸುವ ಕಾರ್ಯವು ಶ್ರದ್ಧೆಯಿಂದ ನಡೆಯಬೇಕು. ಹಳಗನ್ನಡ-ನಡುಗನ್ನಡಗಳ ಬಗೆಗೆ ಉಪೇಕ್ಷೆ ತೊಲಗಬೇಕು. ನಮ್ಮ ರಾಜ್ಯದ ಸಾಂಸ್ಕೃತಿಕ ನೀತಿಯಲ್ಲಿ ಗ್ರಂಥಗಳ ಸಂಪಾದನೆ, ಪರಿಷ್ಕರಣ, ಮುದ್ರಣ, ಪ್ರಸರಣ ಕಾರ್ಯಕ್ಕೆ ಸೂಕ್ತವಾದ

ಗೌರವವೂ ಆದ್ಯತೆಯೂ ಪ್ರಾಪ್ತವಾಗಬೇಕು. ಹೊಸ ಕಾಲದ ಸ್ಪರ್ಧಾಪ್ರಪಂಚದಲ್ಲಿ ನಮ್ಮ ಪ್ರಾಚೀನ ಗ್ರಂಥಗಳು ತಾವಾಗಿ ಸ್ಪರ್ಧೆಗೆ ನಿಂತು ತಮ್ಮನ್ನು ತಾವು ಪ್ರದರ್ಶಿಸಿಕೊಳ್ಳಲಾರವು. ಅವುಗಳ ಮಹತ್ತ್ವವನ್ನು ಜನತೆಗೆ ತಿಳಿಸುವ ವ್ಯವಸ್ಥೆಗಳಾಗಬೇಕು.

ನಮ್ಮ ವಿಶ್ವವಿದ್ಯಾಲಯಗಳಲ್ಲಿ ಮತ್ತು ಬೇರೆ ಕೆಲವು ಸಂಸ್ಥೆಗಳಲ್ಲಿ ಸಂಗ್ರಹಗೊಂಡಿರುವ ಪ್ರಾಚೀನ ಹಸ್ತಪ್ರತಿಗಳ ಸರಿಯಾದ ರಕ್ಷಣೆ ಮತ್ತು ಸಂಪಾದನೆ ನಡೆಯದಿದ್ದಲ್ಲಿ ನಮ್ಮ ಕೈಗೆ ದೊರಕಿದ ಸಾಂಸ್ಕೃತಿಕ ಸಂಪತ್ತೂ ನಾಶದ ಕಡೆಗೆ ಹೋಗುವ ಸಂಭವವಿದೆ. ಅಪಾಯ ಸಂಭವಿಸುವ ಮೊದಲೇ ಈ ಬಗೆಗೆ ಕಾರ್ಯನಿರ್ವಹಿಸಬೇಕಾಗಿದೆ. ಆಸಕ್ತಿ ಮತ್ತು ತಜ್ಞತೆಯುಳ್ಳವರ ಸಹಾಯದಿಂದ ಈ ಕಾರ್ಯವು ಆದ್ಯತೆಯಿಂದ ನಡೆಯಬೇಕಿದೆ.

ನಮ್ಮ ಪ್ರಾಚೀನ ವೈಯಾಕರಣ ಕೇಶಿರಾಜ ಹೇಳಿದ ಗಜಗಾದಿಗಳ ಗ್ರಂಥಗಳು ಇನ್ನು ದೊರಕುವುವೋ ಇಲ್ಲವೋ, ಆದರೆ ದೊರಕಿರುವ ಗ್ರಂಥಗಳನ್ನು ಉಳಿಸಬೇಕಾದುದು ಮುಖ್ಯವಲ್ಲವೆ? ಹೊಸ ಪುಸ್ತಕಗಳು, ಸಂಶೋಧನೆಗಳು, ವಿಚಾರ ಧೋರಣೆಗಳು, ವಾದ ವಿವಾದಗಳು, ಸುಧಾರಣೆಗಳು ಬೇಡವೆಂದಲ್ಲ; ಹೊಸಕಾಲಕ್ಕೆ ಅವೆಲ್ಲ ಬೇಕು. ಹೊಸತನ್ನು ಹುಡುಕುವುದು, ಪಡೆಯುವುದು, ಸೃಷ್ಟಿಸುವುದು ಜೀವನದ ಲಕ್ಷಣವೇ ಸರಿ. ಆದರೆ ನಮ್ಮ ಹಳಗನ್ನಡ-ನಡುಗನ್ನಡಗಳಲ್ಲಿರುವ ಸಾಂಸ್ಕೃತಿಕ ಸಂಪತ್ತನ್ನು ಉಳಿಸಲು ಹೊರಗಿನವರು ಯಾರೂ ಬರುವ ಸಂದರ್ಭಗಳಿಲ್ಲ. ನಮ್ಮದನ್ನು ನಾವೇ ಉಳಿಸಬೇಕು. ಅದಕ್ಕಾಗಿ ಭಾಷಾಭ್ಯಾಸ-ಸಾಹಿತ್ಯಾಭ್ಯಾಸಗಳನ್ನು ಮಾಡಿದ, ಸಾಂಸ್ಕೃತಿಕ ಸಂಪತ್ತಿನ ಬಗೆಗೆ ಕಾಳಜಿಯುಳ್ಳ ಅಧ್ಯಯನಶೀಲ ಯುವ ವಿದ್ವಾಂಸರು ಬೇಕಾಗಿದ್ದಾರೆ. ಯಾವುದೇ ಪೂರ್ವಗ್ರಹಗಳಿಲ್ಲದೆ ಅಧ್ಯಯನೈಕ ನಿಷ್ಠೆಯಿಂದ ಕೆಲಸಮಾಡಬಲ್ಲ ಯುವ ವಿದ್ವಾಂಸರಿಂದ ನಮ್ಮ ಹಳಗನ್ನಡ ಉಳಿಯಬಲ್ಲುದು. ಬೇರೆಯೇ ಭಾಷೆಯ ಅಧ್ಯಯನ ಮಾಡಿದಂತೆ ಹಳಗನ್ನಡವನ್ನು ಅಧ್ಯಯನ ಮಾಡಬೇಕಾಗಿ ಬಂದಿದ್ದರೂ ನಮಗೂ ಅದಕ್ಕೂ ಇರುವ ಸಂಬಂಧ ಇಂದು ನಿನ್ನೆಯದಲ್ಲ. ಇಂತಹ ಅಧ್ಯಯನಕ್ಕೆ

ನಾಡಿನಲ್ಲಿ ಸ್ಫೂರ್ತಿಯುಂಟಾಗಲಿ; ಅಧ್ಯಯನ ಮಾಡುವವರಿಗೆ ಯೋಗ್ಯವಾದ ಬೆಂಬಲ ಒದಗಲಿ; ಪ್ರೋತ್ಸಾಹ ದೊರಕಲಿ; ಅಧ್ಯಯನದಿಂದ ಉಂಟಾಗುವ ಸಂತೋಷದ ಅರಿವು ನಮ್ಮ ಜನತೆಗಾಗಲಿ.

ಈ ಲೇಖನದಲ್ಲಿ ಪೂರ್ತಿಯಾಗಿ ಹೊಸತೇ ಆದುದನ್ನು ಹೇಳಿಲ್ಲವಾದರೂ ನಮ್ಮ ನಾಡಿನಲ್ಲಿ ಅವಶ್ಯವಾಗಿ ಆಗಬೇಕಾದ ಕನ್ನಡದ ಕೆಲಸಗಳ ಬಗೆಗೆ ಗಮನ ಸೆಳೆಯಲಾಗಿದೆ. ಲೇಖನದಲ್ಲಿ ಗಮನದಲ್ಲಿರಿಸಿದ ವಿಷಯಗಳನ್ನು ಸಾರಾಂಶರೂಪದಲ್ಲಿ ಹೇಳುವುದಾದರೆ ಅವು ಹೀಗಿವೆ:

1. ಹಳಗನ್ನಡದ ಸಾಹಿತ್ಯಸಂಪತ್ತು ದೊಡ್ಡದು.
2. ಕೇಶಿರಾಜನೇ ಮೊದಲಾದವರು ತಮ್ಮ ಕಾಲಕ್ಕಿಂತ ಹಿಂದಿನ ಲಿಖಿತ ಸಾಹಿತ್ಯವನ್ನು ಪ್ರಾತಿನಿಧಿಕವೆಂದು ಗಮನಿಸಿದರು.
3. ಹಳಗನ್ನಡವೆಂದು ನಾವು ಗುರುತಿಸುವ ಕನ್ನಡವೇ ನಿಜವಾದ ಕನ್ನಡವೆಂದು ಕೇಶಿರಾಜನ ಅಭಿಪ್ರಾಯವಾಗಿತ್ತು. ಆ ಕಾಲದ ಇತರ ಶಾಸ್ತ್ರಕಾರರೂ ವಿದ್ವಾಂಸರೂ ಹಾಗೆಂಯೇ ಭಾವಿಸಿದ್ದಿರಬಹುದು.
4. ಇಂದು ಹಳಗನ್ನಡವೇ ಬೇರೆ ಭಾಷೆ – ಹೊಸಗನ್ನಡವೇ ಬೇರೆ ಭಾಷೆ ಎಂಬಷ್ಟು ಭಿನ್ನತೆಗಳು ಇವುಗಳೊಳಗಿವೆ.
5. ಹಳಗನ್ನಡವನ್ನು ಅಧ್ಯಯನ ಮಾಡಬೇಕಾದರೆ ಬೇರೊಂದೇ ಭಾಷೆಯನ್ನು ಅಧ್ಯಯನ ಮಾಡಿದಷ್ಟು ಪರಿಶ್ರಮ ಅವಶ್ಯವಿದೆ.
6. ಸಂಸ್ಕೃತದ ಅಧ್ಯಯನದೊಡನೆ ಕನ್ನಡದ ಅಧ್ಯಯನವೂ ನಮ್ಮ ನಾಡಿನಲ್ಲಿ ಕ್ರಮಬದ್ಧವಾಗಿ ನಡೆಯುತ್ತಿತ್ತು. ವ್ಯಾಕರಣ, ನಿಘಂಟು ಮತ್ತು ಇತರ ಶಾಸ್ತ್ರಗ್ರಂಥಗಳು ಇಂತಹ ಗಂಭೀರಾಧ್ಯಯನ ನಡೆಯುತ್ತಿತ್ತೆಂಬುದಕ್ಕೆ ಆಧಾರವಾಗಿ ಉಳಿದುಕೊಂಡಿವೆ.
7. ನಾವು ಹಳಗನ್ನಡ ಗ್ರಂಥಗಳನ್ನು ಅಧ್ಯಯನ ಮಾಡಬೇಕಾದುದು ಕೇವಲ ವ್ಯಾವಹಾರಿಕ ಪ್ರಯೋಜನದ ದೃಷ್ಟಿಯಿಂದ ಅಲ್ಲ.
8. ಸಾಂಸ್ಕೃತಿಕ ಪ್ರಜ್ಞೆಯನ್ನು ಬೆಳೆಸಿಕೊಂಡು ನಾವು ಹಳಗನ್ನಡದ ಗ್ರಂಥಗಳ ಅಧ್ಯಯನವನ್ನು ಮಾಡಬೇಕಿದೆ.
9. ಹಳಗನ್ನಡವು ನಮ್ಮ ಹಿರಿಯರ ಭಾಷೆ, ಹಳಗನ್ನಡ ಸಾಹಿತ್ಯವು

ನಮ್ಮ ಹಿರಿಯರ ಸಾಹಿತ್ಯ, ಈ ಸಾಹಿತ್ಯದ ಅಧ್ಯಯನ ಪ್ರಸರಣಗಳು ನಮ್ಮಿಂದಲೇ ನಡೆಯಬೇಕು. ಇದಕ್ಕೆ ಬೇರಾರೋ ಬರಲಾರರು.

10. ನಮ್ಮ ಪ್ರಾಚೀನ ಗ್ರಂಥಗಳ ಮಹತ್ತ್ವವೇನೆಂಬುದನ್ನು ಹೊರಗಿನವರು ನಮಗೆ ತಿಳಿಸಿ ಬುದ್ಧಿಹೇಳುವ ಪ್ರಸಂಗ ಬರಬಾರದು.

11. ಹೊಸಗನ್ನಡದ ಕಾಲದಲ್ಲಿ ಹಳಗನ್ನಡದ ಬಗೆಗೆ ಬಹಳ ಉಪೇಕ್ಷೆಯಿದೆ. ಈ ಉಪೇಕ್ಷೆಯೆಂಬುದು ಇಲ್ಲದಾಗಬೇಕು.

12. ಹಳಗನ್ನಡದ ಗ್ರಂಥರಾಶಿಯಲ್ಲಿ ಎಷ್ಟೋ ಅಂಶ ನಾಶದೆಡೆಗೆ ಸಂದಿದೆ.

13. ಉಳಿದುಕೊಂಡ ಗ್ರಂಥಗಳಲ್ಲಿ ಎಷ್ಟೋ ಗ್ರಂಥಗಳು ಇನ್ನೂ ಮುದ್ರಣಗೊಂಡಿಲ್ಲ; ಸಂಪಾದಿತವಾಗಿಲ್ಲ.

14. ಅಪ್ರಕಟಿತ ಪ್ರಾಚೀನ ಗ್ರಂಥಗಳನ್ನು ಸಂಪಾದಿಸಿ ಪ್ರಕಟಿಸುವುದು ಅವಶ್ಯ. ಇದಕ್ಕೆ ನಿಯತಕಾಲದ ಯೋಜನೆಗಳನ್ನು ರೂಪಿಸಿಕೊಳ್ಳುವುದು ಒಳಿತು.

15. ಗ್ರಂಥಸಂಪಾದನೆಯ ಕಾರ್ಯಕ್ಕೆ ಶ್ರದ್ಧೆಯುಳ್ಳ ಆಸಕ್ತರಾದ ತರುಣರ ತಂಡಗಳು ಬೇಕು.

16. ನಮ್ಮ ಸರಕಾರವು ಭಾಷಾ–ಸಾಂಸ್ಕೃತಿಕ ನೀತಿಯಲ್ಲಿ ಹಳಗನ್ನಡದ ಅಧ್ಯಯನ–ಗ್ರಂಥಸಂಪಾದನೆ–ಮುದ್ರಣ–ಪ್ರಸರಣ ಇತ್ಯಾದಿಗಳಿಗೆ ಸರಿಯಾದ ಸ್ಥಾನವನ್ನು ಕಲ್ಪಿಸಬೇಕು.

17. ನಮ್ಮ ಪ್ರಾಚೀನ ಗ್ರಂಥರಾಶಿಯ ಬಗೆಗೆ ಯಾವ ರೀತಿಯ ಉಪೇಕ್ಷೆಯೂ ಸಲ್ಲದು. ಇವು ನಮ್ಮ ಪ್ರಾಚೀನರದು – ಆದುದರಿಂದ ನಾವಿದಕ್ಕೆ ನಿಜವಾದ ಹಕ್ಕುದಾರರೆಂಬ ಪ್ರಜ್ಞೆ ನಮ್ಮಲ್ಲಿ ಮೂಡಬೇಕು. ಅದರೊಂದಿಗೆ ಕರ್ತವ್ಯಪ್ರಜ್ಞೆಯು ಬೆಳೆಯಬೇಕು.

ಈ ಎಲ್ಲಾ ವಿಷಯಗಳನ್ನೂ ಸಾಕಷ್ಟು ವಿಸ್ತಾರವಾಗಿ ಚಿಂತಿಸುವ ಮತ್ತು ಕಾರ್ಯಪ್ರವೃತ್ತವಾಗುವ ಆವಶ್ಯಕತೆಯಿದೆ.

****

ಕನ್ನಡ ಶಾಸನಗಳಲ್ಲಿ ಕಾವ್ಯ ವರ್ಣನೆ

– ಎಂ. ಲೋಕೇಶ್
ಸಂತ ಫ್ರಾನ್ಸಿಸ್ ಪದವಿಪೂರ್ವ ಕಾಲೇಜು,
ಕೋರಮಂಗಲ, ಬೆಂಗಳೂರು.

ಕರ್ನಾಟಕದ ಐತಿಹಾಸಿಕ ಹಾಗೂ ಸಾಂಸ್ಕೃತಿಕ ಹಿರಿಮೆಯನ್ನು ಸಾರುವ ಜೀವಂತ ಸಾಕ್ಷಿಗಳು ಶಾಸನಗಳು. ಬಹುಕಾಲ ಉಳಿಯಬಲ್ಲ ಗಟ್ಟಿಯಾದ ಸಾಮಗ್ರಿಯ ಮೇಲೆ ಕೆತ್ತಿರುವ ಬರಹಗಳೇ ಶಾಸನಗಳು. ಚಾರಿತ್ರಿಕ ಅಧ್ಯಯನದ ಆಧಾರ ಸ್ತಂಭಗಳಾದ ಶಾಸನಗಳನ್ನು ಬಿ. ಸಿ. ಛಬ್ರಾ ಅವರು 'ಶಾಸನಗಳು ಭಾರತೀಯ ಇತಿಹಾಸದ ಜೀವನಾಡಿ' ಎಂದಿದ್ದಾರೆ. ಶಾಸನಗಳು ಶಿಲಾಫಲಕಗಳ ಮೇಲೆ ಅರಳಿದ ಕಾವ್ಯಗಳೂ ಹೌದು. ಸ್ಥಳಾವಕಾಶದ ಮಿತಿಯಿಂದಾಗಿ ಗಾತ್ರದಲ್ಲಿ ಚಿಕ್ಕವಾಗಿದ್ದರೂ, ಕಿರಿದರಲ್ಲೇ ಹಿರಿದು ಅರ್ಥವನ್ನು ಕೊಡುವಂತೆ ಹೇಳಬೇಕಾದ ವಿಚಾರವನ್ನು ರಸವತ್ತಾಗಿ, ಪರಿಣಾಮಕಾರಿಯಾಗಿ ಹೇಳುತ್ತವೆ.

ಕನ್ನಡ ಶಾಸನಗಳಲ್ಲಿ ಹಳಗನ್ನಡ ಕಾವ್ಯಗಳಲ್ಲಿರುವಂತೆ ಸಂಸ್ಕೃತದ ಪ್ರಭಾವ ನಿಚ್ಚಳವಾಗಿ ಕಂಡುಬರುತ್ತದೆ. ಗದ್ಯಗಂಧಿಯಾದ ಶಾಸನಗಳಲ್ಲಿ ಕಾವ್ಯಾತ್ಮಕವಾಗಿ ವರ್ಣಿಸಿರುವ ಶಾಸನಗಳೂ ಸಹ ಇವೆ. ತ್ರಿಪದಿ, ರಗಳೆ, ವೃತ್ತ, ಕಂದ ಮೊದಲಾದ ಛಂದೋಬಂಧಗಳಿಂದ ಅಲಂಕಾರಿಕವಾಗಿ ರಚಿತವಾದ ಹಲವು ಶಾಸನಗಳೂ ಇವೆ. ಕೆಲವು ಶಾಸನಗಳು ಶುದ್ಧ ಕಾವ್ಯಗಳೇ ಆಗಿವೆ. ಸಾಹಿತ್ಯದ ದೃಷ್ಟಿಯಿಂದ ಪದಸಂಪತ್ತಿನಿಂದ ಸುಂದರ ಕಾವ್ಯಗಳನ್ನು ಒಳಗೊಂಡ, ವಿಸ್ತಾರವಾದ ವರ್ಣನೆಗಳಿಂದ, ಸಾಹಿತ್ಯಕ

ಸೌಂದರ್ಯದಿಂದ ಕೂಡಿರುವ ಶಾಸನಗಳು ಬಹಳಷ್ಟಿವೆ. ಅದರಲ್ಲೂ ಹೊಯ್ಸಳರ ಕಾಲದ ಶಾಸನಗಳಲ್ಲಿ ಬಹುತೇಕ ಶಾಸನಗಳು ಕಾವ್ಯಾಂಶವುಳ್ಳ ಶಾಸನಗಳೇ ಆಗಿವೆ. ಅಲ್ಲದೆ ಇವರ ಕಾಲದಲ್ಲಿ ಅತಿ ಹೆಚ್ಚು ಕನ್ನಡದ ಶಾಸನಗಳು ರಚಿತವಾಗಿವೆ. ಮಹಾಕಾವ್ಯಗಳಲ್ಲಿ ಕಂಡುಬರುವ ಅಷ್ಟಾದಶ ವರ್ಣನೆಯಂತೆ ಶಾಸನಗಳಲ್ಲೂ ಹಲವು ವರ್ಣನೆಗಳನ್ನು ಕಾಣಬಹುದು. ವ್ಯಕ್ತಿಗಳ ವರ್ಣನೆ, ರಾಜರ ಶೌರ್ಯ-ಸಾಹಸಗಳ ವರ್ಣನೆ, ಯುದ್ಧದಲ್ಲಿ ಹೋರಾಡಿದ ವೀರರ ವರ್ಣನೆ, ರಾಣಿಯರ ವರ್ಣನೆ, ಕೋಟೆ - ಕೊತ್ತಳಗಳ ವರ್ಣನೆ, ಭೌಗೋಳಿಕ ಪ್ರದೇಶದ ವರ್ಣನೆ, ಸ್ಥಳದ ವರ್ಣನೆ, ಸವಾಧಿ ವುರಣ ಹೊಂದಿದ ಯತಿಗಳ ವರ್ಣನೆ ಇತ್ಯಾದಿ ವರ್ಣನೆಗಳಿಂದ ಕಾವ್ಯ ಸೊಗಸಿನಿಂದ ಕಂಗೊಳಿಸುವ ಹಲವು ಶಾಸನಗಳನ್ನು ಕಾಣಬಹುದಾಗಿದೆ.

ಶಾಸನಕಾರರು, ದೊಡ್ಡ ವಿದ್ವಾಂಸರೂ, ಕವಿಗಳೂ ಆಗಿದ್ದರು. ಇತರ ಕವಿಗಳಂತೆ ಬಿರುದುಗಳನ್ನು ಹೊಂದಿದ್ದರು. ಕನ್ನಡ ಸಂಸ್ಕೃತ ಭಾಷೆಗಳೆರಡರಲ್ಲೂ ಪಾಂಡಿತ್ಯವನ್ನು ಹೊಂದಿದ್ದರು. (ಹಲವರು ಶ್ರೇಷ್ಠ ಕವಿಗಳೂ ಸಹ ಆಗಿದ್ದರು.) ಅರಸೀಕೆರೆ ತಾಲ್ಲೂಕಿನ ಕಣಿಕಟ್ಟೆಯ ಶಾಸನವನ್ನು ಬರೆದ ಶಾಂತಿನಾಥ ಕವಿಯಾಗಿದ್ದಾನೆ. ಪೊನ್ನ ಕವಿಯು ಆತಕೂರು, ಮಾವನೂರು ಶಾಸನಗಳನ್ನು, ಜನ್ನ ಕವಿಯು ಅಮೃತಾಪುರ, ಆನೆಕೆರೆ ಶಾಸನಗಳನ್ನು ರಚಿಸಿದ್ದಾರೆ. ಲಕ್ಕುಂಡಿ, ವಿಜಾಪುರ, ಬೆಳ್ಗೊಳ ಶಾಸನಗಳನ್ನು ಕವಿ ರನ್ನನು ಬರೆದಿದ್ದಾನೆ. ಕ್ರಿ.ಶ. 1187 ರಲ್ಲಿ ರಚಿತವಾಗಿರುವ ಅರಸೀಕೆರೆ ತಾಲ್ಲೂಕಿನ ಕರುಗುಂದದ ಶಾಸನದ ಕರ್ತೃ ಮಲ್ಲೋಜನ ಬಿರುದು 'ಕಟಕದ ಬಿರುದಗ ಲೇಖಕೋಪಾಧ್ಯಾಯ' ಎಂದಿದೆ. ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಸೀಗೆಬಾಗಿಯ ಶಾಸನವನ್ನು ರಚಿಸಿದ ಕಾಳಿದಾಸಿ ಎಂಬುವನಿಗೆ 'ಚತುರ್ಪದಿ ಚಕ್ರವರ್ತಿ' ಎಂಬ ಬಿರುದಿತ್ತು. ಇವನು ಕಾವ್ಯರಚನೆಯಲ್ಲಿ ವಿಶೇಷ ಕೌಶಲ್ಯವನ್ನು ಪಡೆದಿದ್ದನು ಎಂದು ತಿಳಿದುಬರುತ್ತದೆ. ಹೊಯ್ಸಳ ನರಸಿಂಹನ ಕಾಲದಲ್ಲಿ ಹಲವಾರು ಶಾಸನಗಳನ್ನು ರಚಿಸಿರುವ ಸೂರ್ಯಣ ಎಂಬ ಶಾಸನ ಕವಿಯು 'ಮದನಮಹೇಶ್ವರ' ಎಂಬ ಬಿರುದನ್ನು ಗಳಿಸಿದ್ದನು. ಈತ ಕನ್ನಡ ಮತ್ತು ಸಂಸ್ಕೃತ ಭಾಷೆಗಳೆರಡರಲ್ಲೂ ಪಾಂಡಿತ್ಯವನ್ನು ಹೊಂದಿರುವ ಬಗ್ಗೆ ತಿಳಿದುಬರುತ್ತದೆ.

ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಹೆಗ್ಗೆರೆ ಗ್ರಾಮದ ಶಾಸನದ ಕರ್ತೃ ದೇವಭದ್ರಮುನಿ. ಕ್ರಿ.ಶ 1164 ರ ಈ ಶಾಸನದ ಕೊನೆಯಲ್ಲಿ ಬರುವ ಒಂದು ಪದ್ಯದಲ್ಲಿ ತನ್ನ ಶಾಸನ ಕಾವ್ಯವನ್ನು ಕುರಿತು.

"ಉಚಿತ ಪದಾಕಾರಂ
ಪ್ರಚುರರಸಂ ನೆಗಳಲಿಂತು ಜಿನಶಾಸನಮಂ
ರಚಿಯಸಿದಂ ಹರಹಾ
ದ್ರುಚಿರಯಶಂ ದೇವಭದ್ರಮುನಿ ಪೋತ್ತಂಸಂ"

ತನ್ನ ಕಾವ್ಯವು ಉಚಿತವಾದ ಪದ, ಅಲಂಕಾರ ಹಾಗೂ ಪ್ರಸಿದ್ಧವಾದ ನವರಸಗಳಿಂದ ಕೂಡಿದೆ ಎಂದು ತನ್ನ ಕವಿತಾ ಪಾಂಡಿತ್ಯವನ್ನು ಪ್ರಶಂಶಿಸಿದ್ದಾನೆ. ಬೆಳತೂರಿನ ದೇಕಲೆಯ ಶಾಸನದ ರೂವಾರಿ ಮಲ್ಲನ ಬಿರುದು 'ಕವಿರಾಜ ಬಾಂಧವ' ಎಂದು ಉಲ್ಲೇಖಿಸಲಾಗಿದೆ. (ಹೀಗೆ ಶಾಸನ ಕವಿಗಳೂ ಸಹ ಹಲವು ಬಿರುದನ್ನು ಹೊಂದಿದ್ದರು.)

ಕನ್ನಡದ ಮೊಟ್ಟಮೊದಲ ಶಾಸನ, ಕ್ರಿ.ಶ. 450ರ ಹಲ್ಮಿಡಿ ಶಾಸನದ ಆರಂಭದಲ್ಲಿ ಸಂಸ್ಕೃತ ಶ್ಲೋಕವನ್ನು ಹೊರತುಪಡಿಸಿದರೆ, ಮತ್ತೆಲ್ಲವೂ ಸಂಸ್ಕೃತ ಮಿಶ್ರಿತವಾದ ಗದ್ಯವನ್ನು ಒಳಗೊಂಡಿರುವುದರಿಂದ ಕಾವ್ಯಾಂಶದಿಂದ ಈ ಶಾಸನವು ಪ್ರಮುಖವಲ್ಲ. ಪೂರ್ವದ ಹಳಗನ್ನಡ ಗದ್ಯಶೈಲಿಯ ದೃಷ್ಟಿಯಿಂದ ಪ್ರಮುಖವಾದುದು. ಕಾವ್ಯಾಂಶದ ದೃಷ್ಟಿಯಿಂದ ನಮಗೆ ಗೋಚರವಾಗುವ ಮೊದಲ ಶಾಸನವೆಂದರೆ ಕ್ರಿ.ಶ. 5ನೇ ಶತಮಾನದ ಚಿತ್ರದುರ್ಗದ ತುಮಟಕಲ್ಲು ಶಾಸನ. ನಂತರದಲ್ಲಿ ಕಂಡುಬರುವ ಪ್ರಮುಖವಾದ ಶಾಸನವೆಂದರೆ 7ನೇ ಶತಮಾನದ ಬಾದಾಮಿಯ ಕಪ್ಪೆ ಅರೆಭಟ್ಟನ ಶಾಸನ. ಕಾವ್ಯಸೌಂದರ್ಯದಿಂದ ಕನ್ನಡ ಕಾವ್ಯ ಶಾಸನಗಳ ಹೊಸ್ತಿಲಲ್ಲಿ ತೋರಣದಂತೆ ಶೋಭಿಸುವ ಶಾಸನವಿದು. ದೇಶೀ ಛಂದಸ್ಸಾದ ತ್ರಿಪದಿ ಶೈಲಿಯಲ್ಲಿ ಕಪ್ಪೆ ಅರಭಟ್ಟನ ಶೌರ್ಯ, ಪರಾಕ್ರಮ ಹಾಗೂ ಔದಾರ್ಯದ ಗುಣವನ್ನು ಸೊಗಸಾಗಿ ವರ್ಣಿಸಲಾಗಿದೆ. ರಂ.ಶ್ರೀ. ಮುಗಳಿ ಅವರು "ಒಬ್ಬ ಕನ್ನಡ ವೀರನ ಅವೇಶಯುತವಾದ ಸ್ವಭಾವಚಿತ್ರವು ಅಲ್ಲಿದೆ. ಅದರಲ್ಲಿ ಭಾವ ಭಾಷೆಗಳ ಯೋಗ್ಯ ಮಿಲನವುಳ್ಳ

ಸ್ವಯಂ ಪೂರ್ಣವಾದ ಭಾವಗೀತೆಯ ಸತ್ವವೂ ತುಂಬಿದೆ" ಎಂದಿದ್ದಾರೆ. ಆರಂಭದಲ್ಲಿ ಕಪ್ಪೆ ಅರಭಟ್ಟನ ಗುಣಸ್ತುತಿಯೊಳಗೊಂಡ ಸಂಸ್ಕೃತ ಶ್ಲೋಕದಿಂದ ಆರಂಭವಾಗುವ ಈ ಶಾಸನದ ಕೊನೆಯ ಮೂರು ತ್ರಿಪದಿಗಳು ಅಚ್ಚ ಕನ್ನಡದಲ್ಲಿ ರಚಿತವಾಗಿವೆ.

ಸಾಧುಗೆ ಸಾಧು ಮಾಧುರ್ಯ್ಯನ್ಗೆ ಮಾಧುರ್ಯ್ಯಂ
ಭಾದಿಪ್ಪ ಕಲಿಗೆ ಕಲಿಯುಗ ವಿಪರೀತನ್
ಮಾಧವನೀತನ್ ಪೆಱನಲ್ಲ.

ಎಂಬುದಾಗಿ ಕಪ್ಪೆ ಅರಭಟ್ಟನ ಗುಣವರ್ಣನೆ ಮಾಡಿರುವ ಈ ಶಾಸನದಲ್ಲಿ ಮಾಧವನೀತಂ, ಕಟ್ಟಿದ ಸಿಂಘಮನ್ 'ಕೆಟ್ಟೋದೆನ್ ಎಮಗೆಂದು ಬಿಟ್ಟವೋಲ್' ಎಂಬ ಅಲಂಕಾರಿಕ ಪದಗಳು ಸೊಗಸಾಗಿವೆ. ಅಲ್ಲದೆ ಸಾಧುಪುರುಷನ ಶೌರ್ಯಸ್ವಭಾವವು ಉಚಿತವಾದ ಪದಗಳಿಂದ ಶೋಭಿಸಿದೆ.

ಹಲವು ಶಾಸನಗಳಲ್ಲಿ ರಾಜರ ಪಟ್ಟಾಭಿಷೇಕ, ರಾಜರ ಯುದ್ಧವರ್ಣನೆ ರಾಜರು ಸನ್ಯಾಸವನ್ನು ಪಡೆದ ಪ್ರಸಂಗ, ರಾಜರು ಮರಣ ಹೊಂದಿದ ಸಂದರ್ಭದ ವರ್ಣನೆ, ರಾಜನ ಸಾಮಂತರ ದಂಡನಾಯಕರ ಸೊಗಸಾದ ವರ್ಣನೆಗಳನ್ನು ಕಾಣಬಹುದಾಗಿದೆ. ಹಲವು ವೀರರು ಯುದ್ಧದಲ್ಲಿ ಹೋರಾಡಿ ಮಡಿದ ಶೌರ್ಯವರ್ಣನೆಗಳು ಅದ್ಭುತವಾಗಿ ಚಿತ್ರಿತವಾಗಿದೆ. ಕ್ರಿ.ಶ.949ರ ಮಂಡ್ಯ ಶಾಸನದಲ್ಲಿ ಚೋಳರ ರಾಜಾದಿತ್ಯನಿಗೂ ರಾಷ್ಟ್ರಕೂಟರ 3ನೇ ಕೃಷ್ಣನಿಗೂ ನಡೆದ ಯುದ್ಧದಲ್ಲಿ ಮಣಲೇರ ಎಂಬುವವನು ಹೋರಾಡಿ ಮಡಿದ ವಿಚಾರವನ್ನು ಚಂಪಕಮಾಲಾ ವೃತ್ತದಲ್ಲಿ ಈ ರೀತಿ ಬಣ್ಣಿಸಲಾಗಿದೆ.

ಉರದಿದಿರಾಂತ ಚೋೞಚತುರಂಗಬಲಂಗಳನಟ್ಟಿ ಮುಟ್ಟತ
ೞ್ತಿರಿವೆಡೆಗೊರ್ವ್ವರಪ್ಪೊಡಮಿದಿರ್ಚುವ ಗಂಡರನಾಂಪೆವೆಂದು ಪೊ
ಚ್ಚರಿಸುವ ಬೀರರಂ ನೆರೆಯೆ ಕಾಣೆಮೆ ಚೊೞನೇ ಸಕ್ಕಿಯಾಗೆ
ೞ್ತಿರಿದುದನಾಮೆ ಕಂಡೆವೆನೆ ಮೆಚ್ಚದೊರಾರ್ ಸಗರತ್ರಿಣೇತ್ರನಂ

ಮಣಲೇರನು ಚೋಳನ ಚದುರಂಗ ಬಲಕ್ಕೆ ಹೆದರದೆ ಹೋರಾಡಿದ ಪರಿಗೆ ಚೋಳನೇ ಸಾಕ್ಷಿಯಾಗಿದ್ದನು ಎಂದು ಆತನ ಶೌರ್ಯವನ್ನು

ಕುರಿತು ಬಣ್ಣಿಸಿದ್ದಾನೆ. ಈ ಯುದ್ಧವೀರನನ್ನು ಕವಿ ಕದನೈಕಶೂದ್ರಕ, ಸಗರತ್ರಿಣೇತ್ರ ರೂಪಕಗಳನ್ನು ಬಳಸಿ ಕೊಂಡಾಡಿದ್ದಾನೆ. ಕ್ರಿ.ಶ.1145ರ ಶ್ರವಣಬೆಳಗೊಳ ಶಾಸನದಲ್ಲಿ ಹೊಯ್ಸಳ ವಿಷ್ಣುವರ್ಧನನು ಹಾನಗಲ್ಲು ಕೋಟೆ ಮುತ್ತಿಗೆ ಹಾಕಿದಾಗ ಅವನ ಜೊತೆ ವೀರಾವೇಶದಿಂದ ಹೋರಾಡಿ ಶೌರ್ಯವನ್ನು ಮೆರೆದು ಹತನಾದ ಕಲಿರಾಯು ಎಂಬುವವನ ಶೌರ್ಯವರ್ಣನೆಯು ಚಂಪಕಮಾಲಾವೃತ್ತ ಪದ್ಯದಲ್ಲಿ ಹೀಗೆ ಮೂಡಿಬಂದಿದೆ.

ಸುರಿವ ಸರಲ್ಗೆ ಚಾತುರಂಗದಳಕ್ಕಣಿದಾರ್ದು ನೂಂಕುವಾ
ಸುರತರಮಪ್ಪ ಸಿಂಧುರಘಟಾವಳಿಗಳ್ಕದೆ ಕಾದಿ ಬೀರರ
ಚ್ಚರಿವಡೆ ಮಾಚಗೌಂಡನ ಮಗಂ ಕಲಿರಾಯನೆ ಕೀರ್ತಿಯಂ ವಸು
ಧರೆ ಪೊಗಳ್ವಿನ್ನೆಗಂ ಪಡೆದನಾಹವದೊಳ್ ರಣರಂಗಶೂದ್ರಕಂ

ಸುರಿಯುತ್ತಿದ್ದ ಬಾಣಗಳಿಗೆ ಚದುರಂಗ ಸೇನೆಗೆ ಆನೆಗಳ ಭಯಂಕರವಾದ ಸಮೂಹಗಳಿಗೆ ಹೆದರದೇ, ವೀರರೇ ಅಚ್ಚರಿಪಡುವಂತೆ ಹೋರಾಡಿದ ಮಾಚಗೌಡನ ಮಗ ಕಲಿರಾಯನು ಭೂಮಿಯೇ ಸ್ತುತಿಸುವಂತೆ ಹೋರಾಡಿ ಮಡಿದನು ಎಂದು ವರ್ಣಿಸಲಾಗಿದೆ. ಕಲಿರಾಯನಿಗೆ ರಣರಂಗಶೂದ್ರಕ ನೆಂಬ ರೂಪಕ ಅಲಂಕಾರವನ್ನು ಬಳಸಿರುವುದು ವಿಶೇಷ. ಆತನ ಪರಾಕ್ರಮ ವರ್ಣನೆಯು ರನ್ನನ ಗದಾಯುದ್ಧ ಕಾವ್ಯದ ಅಭಿಮನ್ಯುವನ್ನು ನೆನಪಿಸುವಂತಿದೆ. ಭೂಮಿಯೇ ಸ್ತುತಿಸುವಂತೆ ಹೋರಾಡಿ ವೀರಮರಣ ಹೊಂದಿದ ಮಾಚಗೌವುಂಡನ ಮಗ ಕಲಿರಾಯನನ್ನು ಸುರಗಣಿಕೆಯರು ವಿಸ್ತಾರವಾದ ಪುಷ್ಪಕ ವಿಮಾನದಲ್ಲಿ ಕೂರಿಸಿ ಸ್ವರ್ಗಕ್ಕೆ ಕರೆದೊಯ್ದರೆಂದು ವರ್ಣಿಸಲಾಗಿದೆ.

ಕ್ರಿ.ಶ. 1183ರ ಶಾಸನದಲ್ಲಿ ಶಾಂತಿನಾಥ ಕವಿ, ನರಸಿಂಹನನ್ನು ಯುದ್ಧದಲ್ಲಿ ಆತನು ತೋರಿದ ಪರಾಕ್ರಮವನ್ನು ಕುರಿತು ಕಂದ ಪದ್ಯವೊಂದರಲ್ಲಿ ಹೀಗೆ ವರ್ಣಿಸಿದ್ದಾನೆ.

"ಇದಿರಾದರಿಭೂಪಾಳರ
ಮದದಾನೆಯ ಕೊಂಬನುಡಿದು ದಂತದ ಬಳೆಯಂ

ಬಿದುವಿನ ಮುತ್ತಿನಹಾರಮ
ನೊದವಿಸಿ ಜಯಸಿರಿಗೆ ತುಡಿಸುವಂ ನರಸಿಂಹಂ"

ತನ್ನೆದುರು ಬಂದ ಭೂಪರ ಮದಿಸಿದ ಆನೆಯ ದಂತವನ್ನು ಮುರಿದು ಅದರಿಂದ ಜಯಲಕ್ಷ್ಮಿಗೆ ಬಳೆಗಳನ್ನು, ಮುತ್ತಿನ ಹಾರವನ್ನು ಮಾಡಿ ತೊಡಿಸಿದನು ಎಂದು ನರಸಿಂಹನ ಶೌರ್ಯವನ್ನು ಕವಿ ಸೊಗಸಾಗಿ ವರ್ಣಿಸಿದ್ದಾನೆ.

ಚಾಲುಕ್ಯ ರಾಜನಾದ ಭುವನೈಕಮಲ್ಲನೇ ದಂಡನಾಯಕನಾದ ಲಕ್ಷ್ಮರಸನ ತ್ಯಾಗ ಹಾಗು ಶೌರ್ಯದ ಗುಣಗಳನ್ನು ಕುರಿತು 11ನೇ ಶತಮಾನದ ಶಿಕಾರಿಪುರದ ಶಾಸನದಲ್ಲಿ ಮುವತ್ತಾರು ಸಾಲುಗಳಲ್ಲಿ ಮನೋಜ್ಞವಾಗಿ ಹೇಳಲಾಗಿದೆ. ಈ ಶಾಸನ ಪದ್ಯದಲ್ಲಿ ಕವಿಯು ಶಾರ್ದೂಲವಿಕ್ರೀಡಿತ ಪದ್ಯವನ್ನು ಬಳಸಿದ್ದಾನೆ. 'ಈಯಲ್ ಬಂದೊಡೆ ಕಲ್ಪವೃಕ್ಷಮಿದಿರಂ ಬಂದಾತಂ ವಿದ್ವಿಷ್ಟರಂ' ಎಂಬ ಪದ್ಯದಲ್ಲಿ ರಾಜನು ದಾನದ ವಿಚಾರದಲ್ಲಿ ಕಲ್ಪವೃಕ್ಷವಿದ್ದಂತೆ, ಸಮರದಲ್ಲಿ ಈತನು ವೀರಭದ್ರನಂತೆ, ಶಿವನಂತೆ, ಮಾರಿಯಂತೆ, ಯಮನಂತೆ ಪರಾಕ್ರಮಿಯಾದವನೆಂದು ಶ್ಲೇಷಾಲಂಕಾರವನ್ನು ಬಳಸಿ ವರ್ಣಿಸಲಾಗಿದೆ. ಶ್ರವಣಬೆಳಗೊಳದ ಕ್ರಿ.ಶ. 1118ರ ಶಾಸನದಲ್ಲಿ ಹೊಯ್ಸಳರ ರಾಜ ವಿಷ್ಣುವರ್ಧನನ ದಂಡನಾಯಕನಾಗಿದ್ದ ಗಂಗರಾಜನನ್ನು ಕುರಿತು ವರ್ಣಿಸಿರುವ

ಎತ್ತಿದನೆಲ್ಲಿಗಲ್ಲಿನೆಲೆವೀಡನೆ ಮಾಡಿದನೆಲದಲಿಗಲ್ಲಿ ಕಂ
ಡಿತ್ತು ಸಮಸ್ತವಸ್ತುಗಳನಾಳ್ತನಮಂ ಸಲೆ ಪೂಣ್ದ ಸಂತತಂ
ಸುತ್ತಲುಮೋಲಗಿಪ್ಪರೆನೆ ಮುನ್ನಿನವರ್ಗಮನೇಕಕರಾದವ
ರ್ಗತ್ತಳಗಂ ಪೊಗಳ್ತೆಗೆನೆ ಬಣ್ಣಿಪನಾವನೊ ವಿಷ್ಣು ಭೂಪನಂ

ಈ ಪದ್ಯದಲ್ಲಿ ಬಳಸಲಾಗಿರುವ ಛೇಕಾನುಪ್ರಾಸ ಸೊಗಸಾಗಿ ಮೂಡಿಬಂದಿದ್ದು, ಈ ಪದ್ಯವನ್ನು ಉತ್ಪಲಾಮಾಲಾವೃತ್ತದಲ್ಲಿ ರಚಿಸಿದ್ದಾನೆ.

ಬೇಲೂರಿನ ಚಟ್ಟಗಾವುಂಡನ ದಾನಗುಣ, ಆತನ ಚಾರಿತ್ರ್ಯಶೀಲತೆ, ಆತನ ಶೌರ್ಯ-ಸಾಹಸವನ್ನು ಹಲವು ಶಾಸನಗಳು ಹೊಗಳಿವೆ. ಈತನಿಂದ ನಿರ್ಮಿಸಲ್ಪಟ್ಟ ಚಟ್ಟಸಮುದ್ರ ಕೆರೆಯ ವರ್ಣನೆಯಲ್ಲಿ ಈತನ

ವರ್ಣನೆಯು 1160ರ ಬೇಲೂರು ಶಾಸನದಲ್ಲಿ ಕಂಡುಬರುತ್ತದೆ. ಕಲಿಯುಗ ಬಲಿ, ಕಲಿಯುಗ ಶಿಬಿ, ಕಲಿಯುಗ ವಿದ್ಯಾಧರೇಶಿ, ಕಲಿಯುಗ ಕರ್ಣಂ, ಕಲಿಯುಗ ಕಲ್ಪಕ್ಷ್ಮಾಜಂ, ಕಲಿಯುಗ ಸುರಧೇನು ಎಂದು ವಿಸ್ತಾರವಾಗಿ ವಣಿಸಲಾಗಿದೆ. ಅಲ್ಲದೆ ಸೊರಬದ ಶಾಸನವೊಂದರಲ್ಲಿ ಈತನನ್ನು ಕುರಿತ ಕಂದಪದ್ಯವೊಂದು ಹೀಗಿದೆ.

ಚಟ್ಟಂ ಪರವನಿತೆಯರಂ
ಮುಟ್ಟಂ ವಿತರಣಮಾಮರ ಭೂರುಹದೊಳ್ ಕೋ
ಡಿಟ್ಟಂ ಪಾಪದ ಪಥಮಂ
ಮೆಟ್ಟಂ ಶಾಶ್ವತ ಪದಕ್ಕೆ ಕಳಶಮನಿಇಟ್ಟಂ

ಚಟ್ಟಗಾವುಂಡನು ಪರಸ್ತ್ರೀಯರ ಬಗ್ಗೆ ಗೌರವ ಭಾವವನ್ನು ಹೊಂದಿದವನು. ಈ ಭೂಮಿಯ ಮೇಲಿನ ಪಾಪದ ಮಾರ್ಗವನ್ನು ಅನುಸರಿಸದವನು. ಆತನು ವಿನಯದ ದೊರೆ, ಧರ್ಮದ ತವರ್ಮನೆ, ಸತ್ಯದ ಜನ್ಮಭೂಮಿ ಹಲವು ಬಗೆಯಲ್ಲಿ ಇವನನ್ನು ಶಾಸನ ಕವಿಯು ಹೀಗೆ ಬಣ್ಣಿಸಿದ್ದಾನೆ. ಬೆಳ್ಳಿಗಾವೆಯ ಶಾಸನದಲ್ಲಿ 1162ರ ಕಲಚುರಿ ಬಿಜ್ಜಳನ ಪರಾಕ್ರಮ ಚಂಪಕಮಾಲಾವೃತ್ತದಲ್ಲಿ ರಚಿತವಾಗಿರುವ 'ಸುರಿದ ಕರುಳ್ ಕರುಳ್ ತೊಡರೆ ಬಿಳ್ದಭಟರ್ ಭಟರಸ್ತಘಾತದಿಂ', ಎಂಬ ಪದ್ಯದಲ್ಲಿ ಕವಿಯು ಛೇಕಾನುಪ್ರಾಸವನ್ನು ಬಳಸಿರುವುದು ಪದ್ಯದ ಸೊಗಸನ್ನು ಹೆಚ್ಚಿಸಿದೆ.

ಕ್ರಿ.ಶ.1167ರ ಶಿಕಾರಿಪುರದ ಬೆಳ್ಳಿಗಾವೆ ಕೋಡಿಮಠದ ಶಾಸನವು ವಚನ, ವೃತ್ತ, ಹಾಗೂ ಕಂದಪದ್ಯಗಳಿಂದ ಸುಮಾರು 60 ಸಾಲುಗಳುಳ್ಳ ವಿಸ್ತಾರವಾದ ಶಾಸನವಾಗಿದೆ. ಇಲ್ಲಿ ಬಿಜ್ಜಳನ ಬಳಿ ಕೆಲಸ ಮಾಡುತ್ತಿದ್ದ ಕಸಪಯ್ಯ ಎಂಬ ಅಧಿಕಾರಿಯ ಕುರಿತಾದ ವರ್ಣನೆಯು ಸುಂದರವಾಗಿ ಮೂಡಿಬಂದಿದೆ. ಆತನ ಬಗ್ಗೆ ಕಂದಪದ್ಯವೊಂದರಲ್ಲಿ

ಹರಚರಣಕಮಳಯುಗಷಟ್
ಚರಣಂನುತ ವಿವಿಧ ವಿಬುಧ ವಿನುತಸಮಗ್ರಾ
ಭರಣಂ ಸುಭಟಜನೈಕಾ
ಭರಣಂ ಕೇವಳಮೆ ಕಸಪಯಂ ವಸುಮತಿಯೊಳ್

ಕಸಪಯ್ಯನು ಹರನ ಚರಣಗಳಲ್ಲಿ ದುಂಬಿಯಂತೆ, ವಿವಿಧ ಜ್ಞಾನಶಾಖೆಗಳಲ್ಲಿ ಪಾರಂಗತರಾದ ಪ್ರಸಿದ್ಧ ಪಂಡಿತರಿಂದ ಸುತ್ತುವರಿಯಲ್ಪಟ್ಟವನು. ಉತ್ತಮ ಯೋಧರ ಏಕೈಕ ಆಭರಣ ಇವನೆಂದು ಬಣ್ಣಿಸಲಾಗಿದೆ. ಅಲ್ಲದೆ ಚಂಪಕಮಾಲಾವೃತ್ತದಲ್ಲಿ ರಚಿತವಾಗಿರುವ 'ಕಸವೆನಿತಿರ್ದ್ದಡಂ ನಿಜನಿರೀಕ್ಷಣ ಮಾತದೆ ತತ್ಕ್ಷಣಂಕರಂ' ಎಂಬ ಒಂಭತ್ತನೆಯ ಪದ್ಯದಲ್ಲಿ 'ಕಸ' ಎಂಬ ಶಬ್ದವನ್ನು ಪದದಾದಿಯಲ್ಲಿ ಎಲ್ಲ ಸಾಲಿನಲ್ಲಿ ಬರುವಂತೆ ವಿಶೇಷವಾಗಿ ಬಳಸಿ ಕಸಪಯ್ಯನ ಶಾಸನ ಸಹಾಸವನ್ನು ಹಿರಿಮೆಯನ್ನು ಕೊಂಡಾಡಿದ್ದಾನೆ.

ಸ್ತ್ರೀಯರ ತ್ಯಾಗ, ಶೀಲ, ದಾನ ಹಾಗೂ ರೂಪ-ಸೌಂದರ್ಯ ಕುರಿತಾದ ವರ್ಣನೆಗಳು ಹೇರಳವಾಗಿದ್ದು ಸೊಗಸಾದ ವರ್ಣನೆಗಳಿಂದ ಕೂಡಿವೆ. ಕ್ರಿ.ಶ. 1007ರ ಗದಗ ತಾಲೋಕಿನ ಲಕ್ಕುಂಡಿಯ ಅತ್ತಿಮಬ್ಬೆಯ ಶಾಸನವು ಎಂಭತ್ತೆಂಟು ಸಾಲುಗಳುಳ್ಳ ಅತ್ಯಂತ ದೊಡ್ಡ ಶಾಸನವಾಗಿದೆ. ಈ ಶಾಸನದ ಕರ್ತೃ ಸಿರಿಪಾಲನ ಮಗ ಬಾಹುಬಲಿ ಎಂದು ಉಲ್ಲೇಖಿತವಾಗಿದೆ. ಮಲ್ಲಪ್ಪಯ್ಯ ಮತ್ತು ಅಪ್ಪಕಬ್ಬೆಯ ಮಗಳಾದ ಅತ್ತಿಮಬ್ಬೆಯು ಜಿನಧರ್ಮಪತಾಕೆ, ಕವಿವರ ಕಾಮಧೇನು, ದಾನಚಿಂತಾಮಣಿ ಮುಂತಾದ ಬಿರುದನ್ನು ಪಡೆದಿದ್ದವಳು. ಹಲವು ಜಿನಾಲಯಗಳನ್ನು ಕಟ್ಟಿಸಿದವಳು. ರನ್ನ ಮೊದಲಾದ ಹಲವು ಕವಿಗಳಿಗೆ ನೆರವು ನೀಡಿದವಳು. ಈ ಶಾಸನದಲ್ಲಿ ಕಂದಪದ್ಯ ಹಾಗೂ ವೃತ್ತ ಜಾತಿಯ ಪದ್ಯಗಳ ಬಳಕೆಯಾಗಿದ್ದು ಆನೆಯೊಂದು ಆಕೆಯ ಕಾಲಿಗೆರಗಿದ ಸಂದರ್ಭ ಕುರಿತಾದ ಕಂದಪದ್ಯವೊಂದು ಹೀಗಿದೆ.

ಮದವತ್ಕರಿ ಸೆರೆಯಂ ಪರಿ
ದೊದವಿದಮುಳಿಸಿಂದೆಬೋರನೆಯ್ತಂದೊಡದ
ರ್ಕದಿರದಿರೆ ಭಕ್ತಿಯಿಂದದು
ಪದಯುಗಕೆರಗಿದುದು ದಾನಚಿಂತಾಮಣಿಯಾ

ಮದವೇರಿದ ಆನೆಯೊಂದು ಹಾಕಿದ್ದ ಸರಪಳಿಯನ್ನು ಕಿತ್ತು ಕೋಪದಿಂದ ಮುನ್ನುಗ್ಗುತ್ತಿರುವಾಗ ಹೆದರದೆ ನಿಂತ ಅತ್ತಿಮಬ್ಬೆಯ ಕಾಲಿಗೆ ಅದು ಭಕ್ತಿಯಿಂದ ಎರಗಿತು ಎಂದಿದ್ದಾನೆ. ಅತ್ತಿಮಬ್ಬೆಯನ್ನು ಕುರಿತು ಬುಧಜನವಂದಿತೆ, ಕವಿವರಕಾಮಧೇನು, 'ಜಿನಪದಪಂಕಜಭ್ರಮರ' 'ಜಿನಶಾಸನಮಂ ಬೆಳಗುತ್ತಮಿರ್ದಪಳ್' ಎಂದು ಕೊಂಡಾಡಿದ್ದಾನೆ.

ಬೇಲೂರು ತಾಲ್ಲೂಕಿನ ಕ್ರಿ.ಶ. 1160 ರ ಹುಲಿಕೆರೆಯ ಶಾಸನದಲ್ಲಿ ಹೊಯ್ಸಳರ ರಾಜ ನರಸಿಂಹನ ಮಡದಿ ಚಾಗಲೆಯನ್ನು ಶಾಸನ ಕವಿಯು

"ಸಿರಿಸದಹೂವಿನಮಾಲೆಯ
ಸರಿಯೆನಿಸುವ ಸಿರಿಯನೆಸೆಯೆ ತಾಳ್ದಿದ ನಳಿತೋಳ್
ನರಸಿಂಹಂಗಿದು ವಜ್ರ
ಸ್ಥಿರಪಂಜರ ಬಂಧಮೆನಿಸಿದುದು ಚಾಗಲೆಯಾ"

ಎಂದು ಬಣ್ಣಿಸಿದ್ದಾನೆ. ನರಸಿಂಹ ನರೇಂದ್ರನ ರಾಣಿ ಚಾಗಲೆ ತನ್ನ ಪರಿವಾರಕ್ಕೆ ಪ್ರೀತಿಯ ಅಮೃತವನ್ನು ಕರೆಯುವ ಕಾಮಧೇನುವಾಗಿದ್ದಳು, ಸಂಪದ್ಭರಿತವಾದ ಹೂವಿನ ಮಾಲೆಯಂತೆ ಕಂಗೊಳಿಸುವ ನರಸಿಂಹನರೇಂದ್ರನ ಮಹಿಷಿ ಚಾಗಲೆ ನರಸಿಂಹನಿಗೆ ವಜ್ರದ ಪಂಜರವಾಗಿದ್ದಳು ಎಂದು ವರ್ಣಿಸಲಾಗಿದೆ.

ನಮ್ಮಲ್ಲಿ ಸಿಕ್ಕಿರುವ ಮಹಾಸತಿಕಲ್ಲು ಶಾಸನಗಳಲ್ಲಿ ದೇಕಬ್ಬೆಯ ಶಾಸನವೇ ದೊಡ್ಡದಾಗಿದ್ದು, ಮೈಸೂರಿನ ಹೆಗ್ಗಡದೇವನ ಕೋಟೆಯ ತಾಲ್ಲೂಕಿನ ಬೆಳತೂರು ಗ್ರಾಮದಲ್ಲಿ ದೊರೆತಿದೆ. ಇದು 'ಕವಿರಾಜಬಾಂಧವ' ಎಂಬ ಬಿರುದನ್ನು ಹೊಂದಿದ್ದ ಶಾಸನಕವಿ ಮಲ್ಲನಿಂದ 1157 ರಂದು ರಚಿತವಾದುದು. ಮಹಾಸತಿಯ ವರ್ಣನೆಯು ಹಲವು ಛಂದೋಬಂಧಗಳಿಂದ ಕೂಡಿದೆ. ಶಾಸನದಲ್ಲಿ ಕಂದಪದ್ಯ, ಪಿರಿಯಕ್ಕರ, ಚಂಪಕಮಾಲೆ, ಸ್ರಗ್ಧರೆ, ಮಹಾಸ್ರಗ್ಧರೇ ಹಾಗೂ ಲಲಿತ ವೃತ್ತಗಳನ್ನು ಒಳಗೊಂಡ ಸುಂದರವಾದ ಪದ್ಯಗಳನ್ನು ಕಾಣಬಹುದು. ಇಪ್ಪತ್ತಮೂರು ಸುಂದರ ಪದ್ಯಗಳಿಂದ ಕೂಡಿರುವ ಈ ಶಾಸನವನ್ನು ಕುರಿತು ಬಿ.ಎಲ್.ರೈಸ್ ಅವರು "ಈ ಶಾಸನವು ತನ್ನ ಸರಳತೆ ಮತ್ತು ವಿಷಾದದಿಂದ ಮನಸೆಳೆಯುವ ಭಾವಗೀತೆಯಂತಿದೆ." ಎಂದಿದ್ದಾರೆ.

ನಗುನಾಡಧಿಪತಿ ರವಿಗನ
ಮಗಳಾಗಿಯುಮಂತೆ ನವಿಲೆನಾಡಧಿಪತಿಗಾಂ
ನೆಗಳೆಸತಿಯಾಗಿ ಬಾಳ್ವುದು
ಬಗೆದರ್ಬೆನೆ ಕೊಟ್ಟಕೊಂಡ ಮನೆಯಸಮಳಿಯಲ್

ನಗುನಾಡಿನ ಪ್ರಭುವಾದ ರವಿಗನ ಮಗಳಾಗಿ ನಗುನಾಡಿನ ಅಧಿಪನಾದ ಏಚನ ಹೆಂಡತಿಯಾಗಿ ಕೀರ್ತಿಪಡೆದಿರುವ ನಾನು ಬಾಳಿ

ಬದುಕುವ ಮನಸ್ಸು ಮಾಡಬಲ್ಲನೆ? ಕೊಟ್ಟಮನೆಗೆ ಸೇರಿದ ಮನೆಗೆ ಇರುವ ಹೆಸರನ್ನು ಅಳಿಸಲುಂಟೆ? ಎಂದು ಆಕೆಯ ಸಹಗಮನ ಹೊಂದಿದ ಪ್ರಸಂಗವು ವರ್ಣಿತವಾಗಿದೆ.

ಗುರುಗಳ ಯತಿಗಳ ವರ್ಣನೆಗಳು ಅವರು ನಿಶಿಧಿ ಮರಣ ಹೊಂದಿದ ಸಂದರ್ಭವನ್ನು ಕುರಿತ ಹಲವಾರು ಶಾಸನಗಳು ರಚಿತವಾಗಿವೆ. ಈ ಬಗ್ಗೆ ಉಲ್ಲೇಖವಿರುವ ಮೊದಲ ಶಾಸನವೆಂದರೆ ಶ್ರವಣಬೆಳಗೊಳದ ನಂದಿಸೇನ ಮುನಿಯ ವೈರಾಗ್ಯವನ್ನು ತಿಳಿಸುವ 7ನೇ ಶತಮಾನದ ಶಾಸನ. ಇದು ಸಾಹಿತ್ಯದ ದೃಷ್ಟಿಯಿಂದ ಗಮನಾರ್ಹವಾದ ಶಾಸನವಾಗಿದೆ. ಈ ಶಾಸನವು ಮಹಾಸ್ರಗ್ಧರಾ ವೃತ್ತದಲ್ಲಿ ರಚಿತವಾಗಿದೆ. ಈ ಶಾಸನದಲ್ಲಿ ಜೈನ ಮುನಿಯ ವೈರಾಗ್ಯದ ಸಂದರ್ಭವು ಮನಮುಟ್ಟುವಂತೆ ಈ ರೀತಿ ಚಿತ್ರಿತವಾಗಿದೆ:

ಸುರಚಾಪಂಬೋಲೆ ವಿದ್ಯುಲ್ಲತೆಗಳ ತೆಱವೋಲ್ ಮಂಜುವೋಲ್ ತೋರಿ ಬೇಗಂ
ಪಿರಿಗುಂ ಶ್ರೀ ರೂಪಲೀಲಾಧನವಿಭವ ಮಹಾರಾಶಿಗಳ್ ನಿಲ್ಲವಾರ್ಗ್ಗಂ
ಪರಮಾರ್ತ್ಥಂ ಮೆಚ್ಚಿ ನಾನೀ ಧರಣಿಯೊಳ್ ಇರವಾನದ ಎಂದು ಸನ್ಯಾಸನಂಗೆ
ಯ್ದುರುತ್ವನ್ ನಂದಿಸೇನಪ್ರವರ ಮುನಿವರನ್ ದೇವಲೋಕಕ್ಕೆ ಸಂದಾನ್

ಇಲ್ಲಿ ಕವಿಯು ಉಪಮಾಲಂಕಾರವನ್ನು ಬಹಳ ಸೊಗಸಾಗಿ ಬಳಸಿದ್ದಾನೆ. ಇಹಲೋಕದ ಭೋಗಭಾಗ್ಯಗಳು ಕಾಮನಬಿಲ್ಲಿನಂತೆ, ಮಿಂಚಿನ ಬಳ್ಳಿಯಂತೆ, ಮಂಜಿನಂತೆ ಕ್ಷಣಿಕವಾದವು. ಇವು ಯಾರಲ್ಲಿಯೂ ಸ್ಥಿರವಾಗಿರವು. ಈ ಅಸ್ಥಿರವಾದ ಲೌಕಿಕ ಸುಖವನ್ನು ನಾನು ಮೆಚ್ಚುವುದಿಲ್ಲ. ಈ ಭೂಮಿಯ ಸುಖ ಬೇಡವೆನಗೆಂದು ಸನ್ಯಾಸವನ್ನು ಸ್ವೀಕರಿಸಿ ನಂದಿಸೇನ ಮುನಿಯು ದೇವಲೋಕಕ್ಕೆ ಹೋದನು ಎಂದು ವರ್ಣಿಸಲ್ಪಟ್ಟಿದೆ.

1176 ಶ್ರವಣಬೆಳಗೊಳದ ನಯಕೀರ್ತಿ ಎಂಬ ಯತಿಯು ಮರಣಹೊಂದಿದ ವಿಚಾರವನ್ನು ಮತ್ತೇಭವಿಕ್ರೀಡಿತ ವೃತ್ತದಲ್ಲಿ ಈ ರೀತಿ ವರ್ಣಿಸಲಾಗಿದೆ.

ಗುರುವಾದಂ ಖಚರಾಧಿಪಂಗೆ ಬಲಿಗಂ ದಾನಕ್ಕೆ ಬಿಣ್ಪಿಂಗೆ ತಾಂ
ಗುರುವಾದಂ ಸುಭೂಧರಕ್ಕೆ ನೆಗಳ್ದಾ ಕೈಲಾಸಶೈಲಕ್ಕೆ ತಾಂ
ಗುರುವಾದಂ ಮಿನುತಂಗೆ ರಾಜಿಸುವಿರುಂಗೋಳಂಗೆ ಲೋಕಕ್ಕೆ ಸ
ದ್ಗುರುವಾದಂ ನಯಕೀರ್ತಿದೇವಮುನಿಪಂ ರಾದ್ಧಾಂತಚಕ್ರಾಧಿಪಂ.

ಎಲ್ಲ ಸಾಲಿನಲ್ಲಿಯೂ ಗುರುವಾದಂ ಎಂಬ ಪದವು

ಬಳಕೆಯಾಗಿದ್ದು ಯಮಕಾಲಂಕಾರದಿಂದ ಶೋಭಿಸಿದೆ. ಅಲ್ಲದೆ, ಇಲ್ಲಿ ಕವಿಯು ಸದ್ಗುರು ನಯಕೀರ್ತಿ ಮುನಿಯನ್ನು ಸಿದ್ಧಾಂತ ಚಕ್ರವರ್ತಿ ಎಂಬುದಕ್ಕೆ ಬದಲಾಗಿ ರಾದ್ಧಾಂತ ಚಕ್ರವರ್ತಿ ಎಂದು ಕರೆದಿರುವುದು ವಿಶೇಷವಾಗಿದೆ.

ಚಂಪೂ ಕಾವ್ಯಗಳಲ್ಲಿ ಕಂಡು ಬರುವ ಅಷ್ಟಾದಶ ವರ್ಣನೆಗಳಂತೆ ಶಾಸನಗಳಲ್ಲೂ ನಾಡಿನ ಭೌಗೋಳಿಕ ವರ್ಣನೆ, ನಿಸರ್ಗಸೌಂದರ್ಯ ಸುಖಸಂಪತ್ತು, ಕೆರೆ, ಕಾಲುವೆ ಇತ್ಯಾದಿಗಳ ವರ್ಣನೆಗಳನ್ನು ಜೊತೆಗೆ ಪುರಜನರ ವರ್ಣನೆ, ಕೋಟೆ, ದೇವಾಲಯ, ಅಗ್ರಹಾರಗಳ ವರ್ಣನೆ ಇತ್ಯಾದಿ ವರ್ಣನೆಗಳನ್ನು ಕಾಣಬಹುದು. ಪಂಪಭಾರತದಲ್ಲಿ ಬರುವ ಬನವಾಸಿಯ ವರ್ಣನೆಯಂತೆ ಹಲವು ಶಾಸನಗಳಲ್ಲಿ ಬನವಾಸಿಯ ಸುಂದರ ವರ್ಣನೆಗಳು ಕಂಡುಬರುತ್ತವೆ. 1145ರ ಸೊರಬದ ಶಾಸನದಲ್ಲಿ ಬನವಾಸಿಯನ್ನು 'ಬನವಾಸಿದೇಶಮುದು ಭೋಗಕ್ಕಾಗರಂ ಸೌಖ್ಯಸಾಗರಮಾಹ್ಲಾದಕರಂ ನಿರಂತರವಿಳಾಸಾವಾಸ ಲಕ್ಷ್ಮೀಕರಂ' ಎಂದು ವರ್ಣಿಸಲಾಗಿದೆ. ಶಿಕಾರಿಪುರದ ಶಾಸನದಲ್ಲಿ ಬನವಾಸಿಯ ಸಂಮೃದ್ಧತೆಯನ್ನು ಕುರಿತು

ಫಲಭರದಿಂ ಮನಂಗೊಳಿಪ ಪೂಗವನಂ ವನದೊಳ್ ಸರೋಜಲಂ
ಜಲದ ಪಸಲ್ಗಳಿಂ ಬೆಳೆದು ಕತ್ತಲಿಸಿರ್ಪೆಳೆವಳ್ಳಿ ಬಳ್ಳಿಗೊಂ
ಡುಲಿವ ಪಿಕಂ ಪಿಕಧ್ವನಿಗಳಿಂ ನಲಿದಾಡುವನಂಗನಂಗನಾ
ಕುಲಮದೆ ಲಕ್ಷ್ಮಿಲಕ್ಷ್ಮಿಗೆ ಸಮೃದ್ಧಿಕರಂ ಬನವಾಸಿದೇಶದೊಳ್.

ಬನವಾಸಿಯು ಸಮೃದ್ಧವಾದ ಫಲಗಳಿಂದ, ಮನವನ್ನು ಆಕರ್ಷಿಸುವ ಹೂಬನಗಳಿಂದ, ವನಗಳಿಂದ, ಸರೋವರಗಳಿಂದ, ಜಲದ ಸಸ್ಯಾವಳಿಗಳಿಂದ, ಬೆಳೆದು ಕತ್ತಲಾಗಿಸಿರುವ ಎಲೆ ಬಳ್ಳಿಗಳಿಂದ, ಕೋಗಿಲೆಯ ಧ್ವನಿಗಳಿಂದ, ಅಂಗನೆಯರಿಂದ ಲಕ್ಷ್ಮಿಯಂತೆ ಕಂಗೊಳಿಸುವ ಸಮೃದ್ಧವಾದ ದೇಶ ಬನವಾಸಿ ಎಂದು ಬಣ್ಣಿಸಲಾಗಿದೆ. ಇಲ್ಲಿ ಪ್ರಯೋಗವಾಗಿರುವ ವನಂವನ, ಪಿಕಂಪಿಕ, ಲಕ್ಷ್ಮಿಲಕ್ಷ್ಮಿ ಎಂಬ ದ್ವಿರುಕ್ತಿಗಳ ಬಳಕೆ ಕಾವ್ಯದ ಸೊಗಸನ್ನು ಹೆಚ್ಚಿಸಿದೆ.

ಕ್ರಿಶ 1162ರ ಹುಣಸೂರು ತಾಲ್ಲೂಕಿನ ಧರ್ಮಾಪುರದ ಶಾಸನದಲ್ಲಿ ಅರಿದವಾಳ್ಕೆ ಎಂಬ ಪ್ರದೇಶದ ವರ್ಣನೆ ಈ ರೀತಿ ಇದೆ.

"ಅಱಿದೆಱೆವಟ್ಟು ರಾಗದ ತವರ್ಮನೆ ಕುಂದದೆಲಕ್ಷ್ಮಿಯಿರ್ಪಹೇ

ರಜೆಕೆಯ ಶೇಷಸೌಖ್ಯನಿಳಯಂ ಬೆಳೆಗೆಯ್ಗಳ ಗೊತ್ತು ಸಂದ
ಪೆರ್ಗೆರೆಗಳ ಜನುಮ ಭೂಮಿಯೆಳೆಗೌಂಗಿನ ಬಾಳ್ನೆಲನೆಂದೊಡಿನ್ನದಂ
ನೆಜೆಪೆಯನದಾವನುಂ ಪೊಗಟಲಾರಿದವಾಳ್ಕೆಯ ಪೆಂಪನಾವನುಂ"

ಅರಿದವಾಳಿಕೆ ಎಂಬ ಪ್ರದೇಶವು ಧರ್ಮದ ತವರುಮನೆ, ಪ್ರೀತಿಯ ಮೂಲಸ್ಥಾನ, ಲಕ್ಷ್ಮಿನೆಲೆಸಿರುವ ಸೌಖ್ಯನಿಲಯ, ಸೊಂಪಾದ ಬೆಳೆಗಳಿಂದ ತುಂಬಿದ ಪ್ರದೇಶ, ದೊಡ್ಡ ದೊಡ್ಡ ಕೆರೆಗಳ ಜನ್ಮಭೂಮಿ, ಎಳೆಯ ಅಡಿಕೆ ತೋಟಗಳಿಂದ ಕೂಡಿದ ತವರುಮನೆ ಎಂದು ಈ ಪ್ರದೇಶದ ಪ್ರಾಕೃತಿಕ ಸೌಂದರ್ಯವನ್ನು ವರ್ಣಿಸಲಾಗಿದೆ. ಜೊತೆಗೆ ಲಕ್ಷ್ಮಿ ನೆಲೆಸಿರುವ ಸೌಖ್ಯನಿಲಯ ಎಂದು ಹೇಳುವ ಮೂಲಕ ಈ ಪ್ರದೇಶವನ್ನು ವೈಕುಂಠಕ್ಕೆ ಸಮೀಕರಿಸಲಾಗಿದೆ. ತುಮಕೂರು ಜಿಲ್ಲೆಯ ಕೈದಾಳದ ದೊರೆತಿರುವ ಕ್ರಿ.ಶ 1151ರ ಶಾಸನದಲ್ಲಿ ಕೈದಾಳದ ಪ್ರಾಕೃತಿಕ ಪರಿಸರವನ್ನು ಕವಿ ಈ ರೀತಿ ವರ್ಣಿಸಿದ್ದಾನೆ.

"ತುಱುಗಿದಮಾಮರದಿಂ ಬೆಳೆ
ದಱಗಿದ ಸೌಗನ್ಧಶಾಳಿಯಿಂ ಪೂಗೊಳದ
ಕೆರೆಯಿಂ ದೇವಾಳಯದಿಂ
ನೆರೆ ಸೊಗೆಯ್ಸಿ ತೋರ್ಕ್ಕು ಲೀಲೆಯಿಂ ಕಯ್ದಾಳಂ"

ಬೆಳದು ನಿಂತ ಮಾಮರಗಳ ತೋಪಿನಿಂದ, ಬೆಳೆದು ಬಾಗಿದ ಸೌಗಂಧಶಾಲಿ ಭತ್ತದ ಗದ್ದೆಗಳಿಂದ, ಹೂವಿನ ಕೊಳದಂತಿರುವ ಕೆರೆಗಳಿಂದ, ದೇವಾಲಯಗಳಿಂದ ಕಯ್ದಾಳವು ಸೊಗಸಿನಿಂದ ಕೂಡಿತ್ತು: ಶೋಭಿಸುತ್ತಿತ್ತು ಎಂದು ವರ್ಣಿಸಿದ್ದಾನೆ. ಹಲವು ಶಾಸನಗಳಲ್ಲಿ ಕೆರೆ-ಕಟ್ಟೆಗಳ ವರ್ಣನೆಗಳು ಕಂಡುಬರುತ್ತವೆ. ಚಟ್ಟಗಾವುಂಡ ಎಂಬುವನಿಂದ ನಿರ್ಮಿಸಲ್ಪಟ್ಟ ಚಟ್ಟಸಮುದ್ರ ಕೆರೆಯ ವರ್ಣನೆಯು ಹಲವು ಶಾಸನಗಳಲ್ಲಿ ಉಲ್ಲೇಖವಾಗಿದ್ದು, ಕ್ರಿ.ಶ. 1160 ರ ಬೇಲೂರಿನ ಹುಲಿಕೆರೆಯ ಶಾಸನದಲ್ಲಿ ಕೆರೆಯನ್ನು ಕವಿ ಈ ರೀತಿ ವರ್ಣಿಸಿದ್ದಾನೆ.

ಎಳನೀರಂ ಸವಿ ಲಾಘವಂ ಗಗನಮಂ ತಣ್ಪಾಹಿಮಾದ್ರೀಂದ್ರಮಂ
ತಳಿರ ಬಣ್ಣಿಗೆ ಶುದ್ಧಿ ಬಾಂದೊಳಿ ಯನಾಗಾಂಭೀರ್ಯಮಂ ಭೋಧಿಸಂ
ಕುಳಮಂ ಕೀಳ್ಪಡಿಸುತ್ತಿರಲ್ಕೆ ವಿಸರತ್ಸೌರಭ್ಯಸೌಲಭ್ಯಸಂ
ಕಳಿತಂ ಚಟ್ಟಸಮುದ್ರಮುದ್ಧೃತಜಗತ್ತಾಪಂ ಸಮಂತೊಪ್ಪುಗುಂ

ಚಟ್ಟ ಸಮುದ್ರವು ಎಳನೀರಿನ ಸವಿಯ ಮೀರಿಸುವಂತೆ, ಗಗನವನ್ನೇ

ತಣಿಸುವ ಹಿಮಾಲಯ ಪರ್ವತದಂತೆ, ಹಸಿರಿನ ಬಣ್ಣಕ್ಕೆ ಕಾರಣವಾಗುವ ದೇವಗಂಗೆಯಂತೆ, ಗಾಂಭೀರ್ಯದಿಂದ ಕೂಡಿರುವ ಸಾಗರದಂತೆ, ಚಟ್ಟಸಮುದ್ರ ಜಗತ್ತಿನ ತಾಪವನ್ನು, ಬೇಗೆಯನ್ನು ಪರಿಹರಿಸುತ್ತಿರುವುದು, ಎಂದು ಕವಿ ಸುಂದರ ಉಪಮೆಗಳಿಂದ ವರ್ಣಿಸಿದ್ದಾನೆ.

ದೇವಾಲಯಗಳ ವರ್ಣನೆಗಳು ಸಹ ಹಲವು ಶಾಸನಗಳಲ್ಲಿ ವರ್ಣಿತವಾಗಿವೆ. ಹಾಸನ ತಾಲ್ಲೂಕಿನ ಕೋರಮಂಗಲದ ಶಾಸನದಲ್ಲಿ ನರಸಿಂಹನ ಅಧಿಕಾರಿ ನಾಕಣ್ಣ ಎಂಬುವನು ನಿರ್ಮಿಸಿದ ದೇವಾಲಯವನ್ನು ಕುರಿತು

> **"ನೆಲದೊಳುಪೊಂಗಳನೇಕೆಪೂಳ್ವರೆನುತಂ ತಾಂ ಲುಬ್ಧರಂ ಮಾಣದಂ**
> **ದಲೆಯತ್ತಿರ್ಪ ವಿವೇಕಿ ನಾಕಿ ಪಡೆದಾ ಸರ್ವಸ್ವಮಂ ಕೋರವಂ**
> **ಗಲದೊಳು ತಂನ್ನಯ ಜನ್ಮಭೂಮಿಯನಿಳಾ ವಿಖ್ಯಾತವಪ್ಪಂತಿರಲ್**
> **ಶಿಲೆಯೊಳ್ ಬಯ್ತನುಮೇಶ್ವರಾಲಯ ಕೃತಿವ್ಯಾಪಾರಪಾರಾಯಣ"**

ಕೆಲವರು ಹಣವನ್ನು ಮಣ್ಣಲ್ಲಿ ಹೂತಿಟ್ಟು ಅಕಾಲಮರಣ ಹೊಂದಿದಾಗ ಅವರೊಂದಿಗೆ ಸಂಪತ್ತೂ ಸಹ ಮಣ್ಣಾಗುತ್ತದೆ. ಆದರೆ ನಾಕಣ್ಣನು ತಾನು ಸಂಪಾದಿಸಿದ ಹಣವನ್ನು ಶಿಲೆಯಲ್ಲಿ ಹೂತಿಟ್ಟಿದ್ದರಿಂದ ಅದು ಶಾಶ್ವತವಾಗಿ ಉಳಿಯಿತು. ಜೊತೆಗೆ ಆತನ ಜನ್ಮಭೂಮಿಯಾದ ಕೋರವಂಗಲದ ಕೀರ್ತಿಯೂ ಸಹ ಲೋಕವಿಖ್ಯಾತಿಯನ್ನು ಪಡೆಯಿತು ಎಂದು ವರ್ಣಿಸಿದ್ದಾನೆ.

ಶಾಸನಗಳ ಮೂಲ ಉದ್ದೇಶ ರಾಜಕೀಯ ಘಟನೆಗಳನ್ನು ದಾಖಲಿಸುವುದಾದರೂ, ಶಾಸನಗಳನ್ನು ರಚಿಸುವ ಕವಿ ಪ್ರತಿಭೆಯಿಂದ ಶಾಸನಗಳ ನಿರೂಪಣೆ, ಭಾಷಾಬಳಕೆ, ಅಲಂಕಾರ, ಕವಿಯ ಕಲ್ಪಕತೆ ಇತ್ಯಾದಿಗಳಿಂದ ಶಾಸನ ಪದ್ಯಗಳೂ ಸಹ ಸಾಹಿತ್ಯದ ರಸಾನುಭವವನ್ನು ನೀಡುತ್ತವೆ. ಹಲವು ಶಾಸನಗಳಲ್ಲಿ ಕರ್ನಾಟಕದ ಭವ್ಯವಾದ ಇತಿಹಾಸ ವರ್ಣನೆಯ ಜೊತೆಗೆ ಕಾವ್ಯಾತ್ಮಕವಾದ ವರ್ಣನೆಗಳನ್ನು ಕಾಣಬಹುದು. ಚಿದಾನಂದ ಮೂರ್ತಿಯವರು "ನಾಡಿನ ಇತಿಹಾಸ ಸಂಸ್ಕೃತಿ ಇವುಗಳ ಅಧ್ಯಯನ ದೃಷ್ಟಿಯಿಂದ ಶಾಸನಗಳಿಗೆ ಮುಖ್ಯ ಸ್ಥಾನವು ಸಂದಿದೆ. ಅದರ ಜೊತೆಗೆ ಅವುಗಳ ಕಾವ್ಯಗುಣವನ್ನು

ಅಲಕ್ಷಿಸುವಂತಿಲ್ಲ" ಎಂದಿದ್ದಾರೆ. ಶಾಸನಗಳು ಸಾಹಿತ್ಯ ಪ್ರಕಾರಗಳು ವಿಕಾಸಗೊಂಡ ರಂಗಸ್ಥಳ. ಹಲವು ಶಾಸನ ಕವಿಗಳು ತಮ್ಮ ಕಾವ್ಯಶಕ್ತಿ ಹಾಗೂ ಪ್ರತಿಭಾಶಕ್ತಿಯನ್ನು ಕಲ್ಲಿನಮೇಲೆ ಅರಳಿಸಿ ಪ್ರದರ್ಶಿಸಿದ್ದಾರೆ. (ಇತರ ಸಾಹಿತ್ಯ ಕೃತಿಗಳಲ್ಲಿ ಶಾಸನಗಳಲ್ಲಿ ಪದ್ಯಗಳು ಉಲ್ಲೇಖವಾಗಿರುವ ಉದಾಹರಣೆಗಳನ್ನು ಕಾಣಬಹುದು). ನರಸಿಂಹನ ಪರಾಕ್ರಮವನ್ನು ವರ್ಣಿಸಿರುವ ಬೇಲೂರಿನ ಶಾಸನದಲ್ಲಿ ಬರುವ ಪದ್ಯವನ್ನು ಕೇಶಿರಾಜ ತನ್ನ ಶಬ್ದಮಣಿದರ್ಪಣ ಕೃತಿಯಲ್ಲಿ ನಾಮಪ್ರಕರಣಕ್ಕೆ ಸಂಬಂಧಿಸಿದ ಸೂತ್ರದಲ್ಲಿ ಶಾಸನ ಪದ್ಯದಲ್ಲಿ ಬರುವ ಸಾಲುಗಳನ್ನು ಬಳಸಿರುವುದನ್ನು ಕಾಣಬಹದಾಗಿದೆ. ಶಾಸನಗಳಲ್ಲಿ ಗಂಭೀರವಾದ ಗದ್ಯ ಶೈಲಿಯ ಹಾಗೂ ಕನ್ನಡ ಸಾಹಿತ್ಯದ ಪ್ರಧಾನ ಲಕ್ಷಣವಾದ 'ಚಂಪೂ' ಸಾಹಿತ್ಯ ಪ್ರಕಾರವು ಪ್ರಮುಖವಾದ ಸ್ಥಾನಪಡೆದುಕೊಂಡಿದೆ. ಅದರಲ್ಲೂ ಚಂಪಕಮಾಲಾವೃತ್ತ ಹಾಗೂ ಕಂದಪದ್ಯಗಳದ್ದೇ ಸಿಂಹಪಾಲು. ಶಾಸನ ಕಾವ್ಯ ವರ್ಣನೆಗಳಲ್ಲಿ ಅರ್ಥಾಲಂಕಾರ ಶಬ್ದಾಲಂಕಾರದಿಂದ ಹಲವು ಉಪಮೆ ರೂಪಕ ಬಳಕೆ ಮಾಡಲಾಗಿದೆ. ಅದರಲ್ಲೂ ರೂಪಕಾಲಂಕಾರ ಶ್ಲೇಷಾಲಂಕಾರದ ಬಳಕೆ ಹೆಚ್ಚಾಗಿ ಕಂಡುಬರುತ್ತದೆ. ಹೀಗೆ ಬಹಳಷ್ಟು ಶಾಸನಗಳು ಸುಂದರವಾದ ಕಾವ್ಯವರ್ಣನೆಗಳಿಂದ ಕೂಡಿದ್ದು, ಮನವನ್ನು ಆಕರ್ಷಿಸುವ ಭಾವಗೀತೆಗಳಂತಿವೆ.

ಆಕರ ಗ್ರಂಥಗಳು

1. ಚಿದಾನಂದಮೂರ್ತಿ ಎಂ – ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ.
2. ನರಸಿಂಹಚಾರ್ ಆರ್ – ಕರ್ಣಾಟಕ ಕವಿಚರಿತೆ ಸಂಪುಟ – 1, 2, 3.
3. ನರಸಿಂಹಚಾರ್ ಆರ್ – ಶಾಸನ ಪದ್ಯಮಂಜರಿ.
4. ಕರ್ನಾಟಕ ಪರಂಪರೆ – ಕನ್ನಡ ಮತ್ತು ಸಂಸ್ಕೃತಿ ಇಲಾಖೆ
5. ಕನ್ನಡ ನಾಡಿನ ಶಾಸನ ಕವಿಗಳು – ಶ್ರೀ ಮೇವುಂಡಿ
6. ಕನ್ನಡ ಸಾಹಿತ್ಯ ಚರಿತ್ರೆ – ರಂ.ಶ್ರೀ. ಮುಗಳಿ

****

ಪಂಪಪೂರ್ವ ಯುಗದ ಕನ್ನಡ ಸಾಹಿತ್ಯ

– ಡಾ. ಪ್ರಮೀಳಾ ಮಾಧವ್
ನಿವೃತ್ತ ಪ್ರಾಧ್ಯಾಪಕರು, ಕಾಸರಗೋಡು

ಕನ್ನಡ ಸಾಹಿತ್ಯದ ಇತಿಹಾಸದಲ್ಲಿ ಹತ್ತನೆಯ ಶತಮಾನ ಒಂದು ಪ್ರಧಾನ ಕಾಲಘಟ್ಟವಾಗಿದೆ. ಕನ್ನಡ ಸಾಹಿತ್ಯದ ಸುವರ್ಣಯುಗವೆಂದು ಕರೆಯಲ್ಪಟ್ಟ ಆ ಕಾಲದಲ್ಲಿ ಕನ್ನಡ ಕೃತಿಗಳು ಸಮೃದ್ಧವಾಗಿಯೂ ವೈವಿಧ್ಯಪೂರ್ಣವಾಗಿಯೂ ರಚನೆಗೊಂಡುದು ಮಾತ್ರವಲ್ಲದೆ ಪ್ರಾಚೀನ ಕವಿಕೃತಿಗಳನ್ನು ಕುರಿತಾದ ಮಾಹಿತಿಗಳೂ ಉಪಲಬ್ಧವಾಗಿವೆ. ಹತ್ತನೆಯ ಶತಮಾನದ ಉಪಲಬ್ಧ ಕೃತಿಗಳಲ್ಲಿ ಕ್ರಿ.ಶ. ಸು. 941 ರ ಕಾಲದ ಪಂಪನ ಕಾವ್ಯಗಳು ಅತ್ಯಂತ ಶ್ರೇಷ್ಠವಾಗಿದ್ದು ಪಂಪ ಆದಿಮಹಾಕವಿಯೆಂದೂ, ನಾಡೋಜನೆಂದೂ ಪ್ರಖ್ಯಾತನಾಗಿದ್ದಾನೆ.

ಪಂಪ ಹತ್ತನೆಯ ಶತಮಾನದ ಯುಗಮಾನ್ಯ ಕವಿಯಾಗಿರುವುದರಿಂದ ಆ ಕಾಲದ ಹಿಂದು ಮುಂದಿನ ಕೆಲವು ಶತಕಗಳ ಸಾಹಿತ್ಯಚರಿತ್ರೆಯನ್ನು ಪಂಪಯುಗದ ಸಾಹಿತ್ಯವೆಂದೇ ಕರೆಯಲಾಗಿದೆ. ಪಂಪಕವಿಯ ಪೂರ್ವ ಕಾಲದ ಕನ್ನಡ ಸಾಹಿತ್ಯದ ಬಗ್ಗೆ ಒಂದು ಪರಿಚಯಾತ್ಮಕ ಟಿಪ್ಪಣಿಯನ್ನು ಬರೆಯುವುದೇ ಪ್ರಸ್ತುತ ಲೇಖನದ ಉದ್ದೇಶವಾಗಿದೆ.

'ಕನ್ನಡ' ಎಂಬ ಪದವನ್ನು ನಾಡು, ನುಡಿ, ಜನಪದ – ಹೀಗೆ ವಿಶಾಲವಾದ ಅರ್ಥಗಳಲ್ಲಿ ಪರಿಭಾವಿಸಿದಾಗ ರಾಮಾಯಣ, ಮಹಾಭಾರತ ಕಾಲದಿಂದಲೇ ಅದಕ್ಕೆ ಕುರುಹುಗಳು ಲಭ್ಯವಾಗುತ್ತವೆ. ಹಾಗೆಯೇ ಕನ್ನಡ ನುಡಿ ಮತ್ತು ಕನ್ನಡ ಜನಪದಕ್ಕೆ ಸುಮಾರು ಎರಡುಸಾವಿರ ವರ್ಷಗಳಿಗೂ ಹೆಚ್ಚಿನ ಇತಿಹಾಸವಿದ್ದರೆ ಕನ್ನಡ ನುಡಿಯಿಂದ ಮುಂದುವರಿದ ಸಾಹಿತ್ಯಕ್ಕೆ ಸುಮಾರು 1500 ವರ್ಷಗಳ ಇತಿಹಾಸವಿದೆ ಎನ್ನುವುದನ್ನು ವಿದ್ವಾಂಸರು ಗುರುತಿಸಿದ್ದಾರೆ. ಆರಂಭದಲ್ಲಿ ಬೌದ್ಧ, ಜೈನ, ವೀರಶೈವ ಮುಂತಾದ ಧರ್ಮಾವಲಂಬಿ ಕವಿಗಳು ಭಾರತದ ಸನಾತನ ಧರ್ಮ ಸಂರಕ್ಷಣೆಯ ಹಿನ್ನೆಲೆಯಲ್ಲಿ ಜನರನ್ನು ಸನ್ಮಾರ್ಗದ ಕಡೆಗೆ ಸಾಗಿಸುವ ಉದ್ದೇಶದಿಂದ ಸಾಹಿತ್ಯರಚನೆಯನ್ನು ಮಾಡುತ್ತಿದ್ದರು. ಆ ಕಾಲದಲ್ಲಿ ರಚಿತವಾದ ಸಾಹಿತ್ಯ ಸಂಸ್ಕೃತ ಭಾಷೆಯಲ್ಲಿದ್ದು ಪಂಡಿತ ಮನ್ನಣೆಯನ್ನು ಗಳಿಸುವ ಕಾವ್ಯಗಳೇ ರಚನೆಯಾಗುತ್ತಿದ್ದುವು. ಆ ಕಾಲದಲ್ಲಿ ಭಾರತದಲ್ಲಿ ಪ್ರಧಾನವಾಗಿ ಜನಮನ್ನಣೆಯನ್ನು ಪಡೆದ ಭಾಷೆ ಸಂಸ್ಕೃತವೇ ಆಗಿತ್ತು. ಹಾಗಾಗಿ ಕನ್ನಡ ಕವಿಗಳೂ ತಮ್ಮ ಮನೆಮಾತು ಕನ್ನಡವಾಗಿದ್ದರೂ ಸಂಸ್ಕೃತದಲ್ಲಿಯೇ ಮೊದಮೊದಲು ಕಾವ್ಯರಚನೆ ಮಾಡುತ್ತಿದ್ದರು.

ಕನ್ನಡ ಭಾಷೆಗೆ ಸಂಬಂಧಿಸಿದಂತೆ ಕ್ರಿ. ಪೂ. 3ನೆಯ ಶತಮಾನದ ಕರ್ನಾಟಕದ ಬ್ರಹ್ಮಗಿರಿಯಲ್ಲಿರುವ ಅತಿ ಪ್ರಾಚೀನವಾದ ಅಶೋಕನ ಪ್ರಾಕೃತ ಭಾಷೆಯ ಶಾಸನದಲ್ಲಿ ಇರುವ 'ಇಸಿಲ' ಎಂಬ ಪದ ಕನ್ನಡವಾಗಿರಬೇಕೆಂದೂ ಇದೇ ಕನ್ನಡದಲ್ಲಿ ಉಪಲಬ್ಧವಾಗುವ ಮೊದಲ ಕನ್ನಡ ಪದವೆಂದೂ ಡಿ.ಎಲ್. ನರಸಿಂಹಾಚಾರ್ಯರೇ ಮೊದಲಾದ ವಿದ್ವಾಂಸರು ಅಭಿಪ್ರಾಯ ಪಟ್ಟಿದ್ದಾರೆ. ಇದು ನಿಜವಾದರೆ ಕನ್ನಡ ಭಾಷೆಗೆ ಕ್ರಿ.ಪೂ. 3ನೆಯ ಶತಮಾನದಷ್ಟು ಪ್ರಾಚೀನತೆ ಲಭ್ಯವಾಗುತ್ತದೆ.

ಕನ್ನಡ ಭಾಷೆಯನ್ನು ಮಾತನಾಡುತ್ತಿದ್ದ ಜನಪದರು ಕ್ರಿ.ಪೂ. ದಲ್ಲಿಯೇ ಕನ್ನಡ ನಾಡಿನಲ್ಲಿದ್ದರೂ ಅದನ್ನು ಸಮರ್ಥಿಸತಕ್ಕ ಖಚಿತ ಸಾಕ್ಷ್ಯಾಧಾರಗಳು ಕಾಣಿಸುವುದಿಲ್ಲ. ಕ್ರಿ.ಶ. ಒಂದನೆಯ ಶತಮಾನದಲ್ಲಿ ರಚಿತವಾದುದೆನ್ನಲಾದ ಗ್ರೀಕ್ ಪ್ರಹಸನಗಳಲ್ಲಿ ಕಾಣುವ ಹಲವು ಪದಗಳು ಕನ್ನಡವೆಂದು ಗೋವಿಂದ ಪೈಗಳೇ ಮೊದಲಾದ ಸಂಶೋಧಕರು

ಸಾಬೀತುಪಡಿಸಿದ್ದಾರೆ. ಇವು ಸದ್ಯಸ್ಥಿತಿಯಲ್ಲಿ ಉಪಲಬ್ಧವಾಗಿರುವ ಕನ್ನಡದ ಅತ್ಯಂತ ಪ್ರಾಚೀನವಾದ ನುಡಿಗಳು. ಕನ್ನಡ ಭಾಷೆಯ ಮೊತ್ತ ಮೊದಲ ಲಿಖಿತ ದಾಖಲೆಯಾಗಿ ಪ್ರಸಿದ್ಧವಾಗಿರುವುದು ಕ್ರಿ.ಶ. 450 ರ ಕಾಲದ ಹಾಸನ ಜಿಲ್ಲೆಯ ಹಲ್ಮಿಡಿ ಶಾಸನ. 5ನೆಯ ಶತಮಾನದಿಂದ ಕನ್ನಡದ ಮೊದಲ ರಾಜವಂಶವಾದ ಕದಂಬರ ಕಾಲದಲ್ಲಿ ಆರಂಭವಾದ ಕನ್ನಡ ಬರಹ ನಿಧಾನವಾಗಿ ಅಭಿವೃದ್ಧಿ ಹೊಂದುತ್ತ 7 ಮತ್ತು 8ನೆಯ ಶತಮಾನಕ್ಕಾಗುವಾಗ ಸಂಸ್ಕೃತ ಕೃತಿಗಳ ಜೊತೆ ಜೊತೆಗೆ ಪೂರ್ಣರೂಪದ ಕನ್ನಡ ಸಾಹಿತ್ಯ ಕೃತಿಗಳೂ ರಚನೆಯಾಗತೊಡಗಿದುವು.

ಕನ್ನಡ ಸಾಹಿತ್ಯ ಚರಿತ್ರೆಯನ್ನು ಒಂದು ಶಿಸ್ತಿಗೆ ಒಳಪಡಿಸಿ ಕನ್ನಡಿಗರಿಗೆ ಲಭ್ಯವಾಗಿಸಿದ ಕೀರ್ತಿ ಡಾ. ಇ.ಪಿ.ರೈಸ್ ಅವರಿಗೆ ಸೇರುತ್ತದೆ. ಆರ್. ನರಸಿಂಹಾಚಾರ್, ಡಿಎಲ್ಎನ್, ರಂ.ಶ್ರೀ. ಮುಗಳಿ, ತ.ಸು. ಶಾಮರಾವ್, ಎಂ.ಎಂ. ಕಲ್ಬುರ್ಗಿ ಮುಂತಾದವರು ಸಂಶೋಧನೆಯಲ್ಲಿ ಅಪಾರವಾದ ಕೆಲಸವನ್ನು ಮಾಡಿ ಕಾಲಗರ್ಭದಲ್ಲಿ ಅಡಗಿ ಹೋದ ಪ್ರಾಚೀನ ಕನ್ನಡ ಸಾಹಿತ್ಯ ಕೃತಿಗಳನ್ನು ಬೆಳಕಿಗೆ ತಂದು ಕನ್ನಡ ಸಾಹಿತ್ಯಾಸಕ್ತರಿಗೆ ಮಹದುಪಕಾರ ಮಾಡಿದ್ದಾರೆ. ಮೈಸೂರು, ಬೆಂಗಳೂರು ವಿಶ್ವ ವಿದ್ಯಾಲಯಗಳು ಕೂಡ ಹಲವಾರು ಸಂಪುಟಗಳಲ್ಲಿ ಕನ್ನಡ ಸಾಹಿತ್ಯದ ಇತಿಹಾಸವನ್ನು ಕಟ್ಟಿಕೊಟ್ಟಿವೆ.

ಹಲ್ಮಿಡಿ, ಬಾದಾಮಿ ಮತ್ತು ಶ್ರವಣಬೆಳ್ಗೊಳ ಶಾಸನಗಳಲ್ಲಿ ಕನ್ನಡ :

ಕರ್ನಾಟಕದ ಹಾಸನ ಜಿಲ್ಲೆಯ ಹಲ್ಮಿಡಿ ಎಂಬಲ್ಲಿ ದೊರೆತ ಶಾಸನ ಒಂದು ದಾನಶಾಸನವಾಗಿದ್ದು ಕನ್ನಡಭಾಷೆ, ರಚನೆ ಮತ್ತು ಸಂಸ್ಕೃತಿಯ ದೃಷ್ಟಿಯಿಂದ ಬಹು ವಿಶಿಷ್ಟವಾಗಿದೆ. ತ್ಯಾಗಸಂಪನ್ನನಾದ ಕದಂಬ ರಾಜ ಕಕುಸ್ಥನ ಕಾಲದಲ್ಲಿ ಮೃಗೇಂದ್ರ ಮತ್ತು ನಾಗ ಎಂಬವರು ನರಿದಾವಿಳೆ ಎಂಬ ನಾಡನ್ನು ಆಳುತ್ತಿದ್ದರು. ಆಗ ಎಲ್ಲ ಭಟಾರಿಯನ ಮಗನಾದ 'ವಿಜ' ಎಂಬ ಅರಸನು ಸೇಂದ್ರಕ ಮತ್ತು ಬಾಣ ಎಂಬ ಎರಡು ವಂಶದ ವೀರರ ಸಮಕ್ಷಮದಲ್ಲಿ ಕೇಕಯ ಮತ್ತು ಪಲ್ಲವರೊಡನೆ ಕಾದಿ ಗೆದ್ದನು. ಅದನ್ನು ಮೆಚ್ಚಿ ಮೃಗೇಂದ್ರ ಮತ್ತು ನಾಗರು ಅವನಿಗೆ ಹಲ್ಮಿಡಿ ಮತ್ತು ಮೂಳಿವಳ್ಳಿಯೆಂಬ ಎರಡು ಗ್ರಾಮಗಳನ್ನು ದಾನಮಾಡಿದರೆನ್ನುವುದು ಶಾಸನದ ವಸ್ತು.

ಹಲ್ಮಿಡಿ ಶಾಸನದಲ್ಲಿ ಸಾಹಿತ್ಯವೆನ್ನಬಹುದಾದ ಅಂಶಗಳು ಅಷ್ಟಾಗಿ ಕಂಡುಬರದಿದ್ದರೂ 'ಅರಿ ಕುಲಾಮಲವ್ಯೋಮತಾರಾಧಿನಾಥನ್' ಎಂಬ ಪ್ರಯೋಗ ಕನ್ನಡ ಭಾಷೆಯ ಮೇಲೆ ಸಂಸ್ಕೃತದ ಪ್ರಭಾವ ಹಾಗೂ ಸಂಸ್ಕೃತ ಮತ್ತು ಕನ್ನಡದ ಮಧುರ ಮೈತ್ರಿಯನ್ನು ಸಾರುತ್ತದೆ.

ಕ್ರಿ.ಶ. ಏಳನೆಯ ಶತಮಾನದ ಕಪ್ಪೆ ಅರಭಟ್ಟನ ಬಾದಾಮಿ ಶಾಸನ ಮತ್ತು ಶ್ರವಣ ಬೆಳಗೊಳದ ಶಾಸನಗಳಲ್ಲಿ ಕಾವ್ಯಮಯವಾದ ಅನೇಕ ತುಣುಕುಗಳು ಗೋಚರವಾಗುತ್ತವೆ. ಇದರಿಂದ ಆ ಕಾಲಕ್ಕಾಗಲೇ ಕನ್ನಡಿಗರು ಪ್ರಬುದ್ಧ ಕವಿಗಳಾಗಿ ಸ್ವತಂತ್ರವಾಗಿ ಕನ್ನಡದಲ್ಲಿ ಕೃತಿ ರಚನೆಗೆ ಆರಂಭಿಸಿರಬಹುದೆಂದು ಊಹಿಸಬಹುದಾಗಿದೆ.

ಕಪ್ಪೆ ಅರಭಟ್ಟನ ಶಾಸನ ಕನ್ನಡ ಭಾಷೆ, ಛಂದಸ್ಸು ಮತ್ತು ಸಾಹಿತ್ಯದ ದೃಷ್ಟಿಯಿಂದಲೂ ಸುಪ್ರಸಿದ್ಧವಾಗಿದೆ. ಇದೊಂದು ವೀರಶಾಸನವಾಗಿದ್ದು ಕಪ್ಪೆ ಅರಭಟ್ಟನೆಂಬ ವೀರನ ವ್ಯಕ್ತಿತ್ವವನ್ನು ಬಹು ಸುಂದರವಾಗಿ ದಾಖಲಿಸುತ್ತದೆ. ತನ್ಮೂಲಕ ಕನ್ನಡಿಗರು ಸ್ವಾಭಿಮಾನ, ಶೌರ್ಯ, ಔದಾರ್ಯಗಳ ಪ್ರತೀಕರಾಗಿದ್ದರು ಎಂಬುದನ್ನೂ ಶ್ರುತಪಡಿಸುತ್ತದೆ.

ತ್ರಿಪದಿ ಛಂದಸ್ಸಿನಲ್ಲಿ ರಚಿತವಾಗಿರುವ ಶಾಸನದ ಸಾಲುಗಳು ಹೀಗಿವೆ:

ಸಾಧುಗೆ ಸಾಧು ಮಾಧುಯರ್ಂಗೆ ಮಾಧುಯರ್ಂ
ಬಾಧಿಪ್ಪ ಕಲಿಗೆ ಕಲಿಯುಗ ವಿಪರೀತನ್
ಮಾಧವನೀತನ್ ಪೆಱನಲ್ಲ

ಒಳ್ಳಿತ್ತ ಕಯ್ವೊರಾರ್ ಪೊಲ್ಲದುಮದರಂತೆ
ಬಲ್ಲಿತ್ತು ಕಲಿಗೆ ವಿಪರೀತಾ ಪುರಾಕೃತ
ಮಿಲ್ಲಿ ಸಂದಿಕ್ಕುಮದು ಬಂದು

ಕಟ್ಟಿದ ಸಿಂಘಮನ್ ಕೆಟ್ಟೋದೇನೆಮಗೆಂದು
ಬಿಟ್ಟವೊಲ್ ಕಲಿಗೆ ವಿಪರೀತಂಗಹಿತರ್ಕಳ್
ಕೆಟ್ಟರ್ ಮೇಣ್ ಸತ್ತರವಿಚಾರಂ

ನಾಯಕನೊಬ್ಬನ ಗುಣಸ್ವಭಾವವನ್ನು ಬಣ್ಣಿಸುವ ಈ ಶಾಸನ 'ಭಾಷೆ ಮತ್ತು ಭಾವಗಳೆರಡೂ ಕೂಡಿ ಒಂದು ಸುಂದರ ಭಾವಗೀತೆಯಾಗಿದೆ' ಎನ್ನುವುದು ವಿದ್ವಜ್ಜನರ ಅಭಿಪ್ರಾಯ.

ಶ್ರವಣಬೆಳ್ಗೊಳದಲ್ಲಿ ಉಪಲಬ್ಧವಾಗುವ ಶಾಸನ ಭಾಷೆ, ಸಾಹಿತ್ಯ ಮತ್ತು ಜೀವನಮೌಲ್ಯದ ದೃಷ್ಟಿಯಿಂದಲೂ ಗಮನಾರ್ಹವಾಗುತ್ತದೆ. ಲೌಕಿಕ ಜೀವನದ ಅಸಾರತೆಯನ್ನು ಬೋಧಿಸುವ ಒಂದು ಶಾಸನ ಅತ್ಯಂತ ಕಾವ್ಯಮಯವಾಗಿ ನಿರೂಪಿತವಾಗಿದ್ದು, ನಂದಿಸೇನರೆಂಬ ಯತಿವರರು ಇಹಲೋಕದ ಭೋಗಭಾಗ್ಯಗಳು ಕ್ಷಣಿಕವೆಂಬ ಸತ್ಯವನ್ನು ಮನಗಂಡು, ತಾನಿನ್ನು ಈ ಲೋಕದಲ್ಲಿ ಇರಲಾರೆನೆಂದು ಬಗೆದು ವೈರಾಗ್ಯ ಪರವಶರಾಗಿ ದೇವಲೋಕಕ್ಕೆ ಹೋದರು ಎಂಬ ವಿಚಾರವನ್ನು ಪದ್ಯ ಹೀಗಿದೆಯೆಂದು ತಿಳಿಸುತ್ತದೆ.

ಸುರಚಾಪಂಬೋಲೆ ವಿದ್ಯುಲ್ಲತೆಗಳ ತೆರವೊಲ್ ಮಂಜುವೋಲ್ ತೋರಿ ಬೇಗಂ
ಪಿರಿಗುಂ ಶ್ರೀರೂಪ ಲೀಲಾಧನವಿಭವ ಮಹಾರಾಶಿಗಳ್ ನಿಲ್ಲವಾರ್ಗಂ
ಪರಮಾರ್ಥಂ ಮೆಚ್ಚೆ ನಾನೀ ಧರಣಿಯುಳಿರವಾನೆಂದು ಸನ್ಯಾಸನಂಗೆ
ಯ್ದುರುಸತ್ವನ್ ನಂದಿಸೇನ ಪ್ರವರ ಮುನಿವರನ್ ದೇವಲೋಕಕ್ಕೆ ಸಂದಾನ್

ಇಲ್ಲಿ ಬದುಕಿನ ನಶ್ವರತೆಯನ್ನು ಕಾಮನಬಿಲ್ಲಿಗೆ, ಮಿಂಚಿನ ಬಳ್ಳಿಗೆ, ಮಂಜಿನ ಹನಿಗಳಿಗೆ ಹೋಲಿಸಿರುವುದು ಅತ್ಯಂತ ಅರ್ಥಪೂರ್ಣವೂ ಆಲಂಕಾರಿಕವೂ ಆಗಿದ್ದು ಈ ಶಾಸನವನ್ನು ಬರೆದಾತ ಕವಿ ಹೃದಯವುಳ್ಳವನೆಂಬುದು ಮನವರಿಕೆಯಾಗುತ್ತದೆ. 7ನೆಯ ಶತಮಾನದಲ್ಲೇ ಕನ್ನಡ ಭಾಷೆ ಇಷ್ಟು ಸೊಗಸಾದ ಕಾವ್ಯಭಾಷೆಗೆ ಒಗ್ಗಿದೆ ಎನ್ನುವಾಗ ಇದರ ತಯಾರಿ ಬಹು ಹಿಂದಿನಿಂದಲೇ ಅಂದರೆ ಎರಡು ಮೂರು ಶತಮಾನಕ್ಕೆ ಪೂರ್ವದಿಂದಲೇ ಆರಂಭವಾಗಿರಬೇಕೆಂದೂ ಬೇರೆಬೇರೆ ಪ್ರಕಾರಗಳಲ್ಲಿ ಕೃತಿ ರಚನೆ ಆಗಿರಬೇಕೆಂದೂ ವಿದ್ವಾಂಸರು ಊಹಿಸಿರುವುದು ಯಥಾರ್ಥವಾಗಿದೆ.

ಶಾಸನಗಳು ಉಲ್ಲೇಖಿಸುವ ಪಂಪಪೂರ್ವಯುಗದ ಕವಿಗಳ ಬಗ್ಗೆ ನೋಡಿದರಂತೂ ಅಚ್ಚರಿಯೆನಿಸುವಷ್ಟು ಹೆಸರುಗಳು ಉಪಲಬ್ಧವಾಗುತ್ತವೆ. ಅವರಲ್ಲಿ ಅಚಲನ್, ದಿವಾಕರ, ರೂವಯ್ಯ, ನಾಗಮಯ್ಯ, ಬೆಳ್ದೇವ,

ಸೇನಬೋವಂ, ಗುಣವರ್ಮಂ, ರವಿನಾಗಭಟ್ಟ, ನಾಗವರ್ಮ, ಕವಿರಾಜ, ಬೀರಯ್ಯ, ಕಬ್ಬದ ನಾಗಮಯ್ಯ, ಕಾಚಯ್ಯ, ಶಾಮಕುಂದ ಇತ್ಯಾದಿ ಹೆಸರುಗಳು ಮಾತ್ರವಲ್ಲ ಅವರು ರಚಿಸಿದ ಶಾಸನಗಳೂ ಉಪಲಬ್ಧವಾಗಿವೆ. ಈ ಶಾಸನಕಾರರು ಸಾಮಾನ್ಯರಲ್ಲವೆಂಬುದೂ ಕೆಲವರು ಕವಿಗಳೂ ಆಗಿದ್ದು ಅವರ ಶಾಸನದ ಬರಹಗಳಿಂದ ಪಂಪನೇ ಮೊದಲಾದ ಅನಂತರದ ಕವಿಗಳು ಪ್ರಭಾವಿತರಾಗಿದ್ದಾರೆಂಬುದೂ ಗಮನಿಸಬೇಕಾದ ಅಂಶ. (ಪಂಪಪೂರ್ವಯುಗದ ಕನ್ನಡ ಕವಿಗಳು. ಡಾ. ಮಾಧವ ಪೆರಾಜೆ. ಪು.129)

ಕನ್ನಡ ಸಾಹಿತ್ಯ-ಲಿಖಿತ ದಾಖಲೆಗಳು

ವಡ್ಡಾರಾಧನೆ

ಪಂಪ ಪೂರ್ವಯುಗದ ಕನ್ನಡಸಾಹಿತ್ಯದ ಉಪಲಬ್ಧ ಕೃತಿಗಳಲ್ಲಿ ಮೊತ್ತ ಮೊದಲನೆಯದು 'ವಡ್ಡಾರಾಧನೆ'. ಶಿವಕೋಟ್ಯಾಚಾರ್ಯ ಎಂಬವನು ರಚಿಸಿದ ಒಂದು ಅತ್ಯುತ್ತಮ ಗದ್ಯಕೃತಿಯಾದ ಇದು ಹತ್ತೊಂಬತ್ತು ಕತೆಗಳ ಗುಚ್ಛವಾಗಿದ್ದು ಜೈನಧರ್ಮದ ಸಿದ್ಧಾಂತಗಳನ್ನು ಬಿತ್ತರಿಸುವ ಪ್ರಮುಖ ಉದ್ದೇಶವನ್ನು ಹೊಂದಿದೆ. ಕತೆಯೊಳಗೆ ಕತೆಗಳನ್ನು ಹೆಣೆದಿರುವ ಈ ಸುಂದರ ಕಥಾಮಾಲಿಕೆ ಜೈನಧರ್ಮದ ತತ್ವ, ಸಿದ್ಧಾಂತ, ನಂಬಿಕೆ, ಆಚರಣೆಗಳನ್ನು ಜನಸಾಮಾನ್ಯರಿಗೆ ಮನವರಿಕೆ ಮಾಡುವ ದೃಷ್ಟಿಯಿಂದ ರಚನೆಗೊಂಡ ಒಂದು ಯಶಸ್ವೀ ಕೃತಿಯಾಗಿದೆ.

ವಡ್ಡಾರಾಧನೆಯ ಕಾಲ ಕ್ರಿ.ಶ. ಸು.920. ಡಾ. ಚಿದಾನಂದಮೂರ್ತಿ ಅವರು ವಡ್ಡಾರಾಧನೆಯ ಕರ್ತೃ, ಕಾಲ, ಮೂಲ ಎಲ್ಲವೂ ವಿವಾದಾಸ್ಪದವಾಗಿದೆ ಎಂದೂ, ಎ.ಎನ್. ಉಪಾಧ್ಯೆಯವರ ಸಂಶೋಧನೆಯ ಕೆಲವು ಸಾಕ್ಷ್ಯಾಧಾರಗಳ ಮೂಲಕ ನೋಡಿದರೆ ವಡ್ಡಾರಾಧನೆ ಪಂಪನ ಅನಂತರದಲ್ಲಿ ರಚಿತವಾದ ಕೃತಿಯೆಂದೂ ಇದರ ಭಾಷೆಯಲ್ಲಿ ಪಂಪನ ಪ್ರಭಾವವನ್ನು ಗುರುತಿಸಬಹುದೆಂದೂ ಹೇಳಿದ್ದಾರೆ. ಆದರೆ ಸದ್ಯ ಇದನ್ನು ಪಂಪಪೂರ್ವಯುಗದ ಸಾಹಿತ್ಯಕೃತಿಯೆಂದೇ ಪರಿಭಾವಿಸಬಹುದಾಗಿದೆ.

ವಡ್ಡಾರಾಧನೆ ಸ್ವತಂತ್ರ ಕೃತಿಯಲ್ಲ. ಕ್ರಿ.ಶ. ಒಂದನೆಯ ಶತಮಾನದ

ಶಿವಕೋಟ್ಯಾಚಾರ್ಯನೆಂಬವನು ಪ್ರಾಕೃತ ಭಾಷೆಯಲ್ಲಿ ಬರೆದ 'ಭಗವತೀ ಆರಾಧನಾ' ಎಂಬ ಗ್ರಂಥದ ಗಾಥೆಗಳನ್ನು ವಿಸ್ತರಿಸಿಕೊಂಡು ಹರಿಷೇಣನೆಂಬ ಕವಿ ಸಂಸ್ಕೃತದಲ್ಲಿ ಬೃಹತ್ಕಥಾ ಕೋಶವನ್ನು ರಚಿಸಿದನೆಂದೂ ಆ ಬೃಹತ್ಕಥಾ ಕೋಶದಿಂದ ಹತ್ತೊಂಬತ್ತು ಕತೆಗಳನ್ನು ಆರಿಸಿಕೊಂಡು ಕನ್ನಡದ ಶಿವಕೋಟ್ಯಾಚಾರ್ಯನು 'ವಡ್ಡಾರಾಧನೆ'ಯನ್ನು ರಚಿಸಿದನೆಂದೂ ತಿಳಿದು ಬರುತ್ತದೆ. ಈ ಕೃತಿಗೆ 'ಉಪಸರ್ಗ ಕೇವಲಿಗಳ ಕತೆ' ಎಂಬ ಇನ್ನೊಂದು ಅರ್ಥಪೂರ್ಣ ಹೆಸರೂ ಇದೆ. ಇದರ ವಿವರಣೆಯನ್ನು ಕವಿಯೇ ಗ್ರಂಥದ ಪೀಠಿಕಾ ಭಾಗದಲ್ಲಿ ನೀಡಿದ್ದಾನೆ: 'ಶ್ರೀ ವೀರ ವರ್ಧಮಾನ ಭಟ್ಟಾರಕರ್ಗೆ ನಮಸ್ಕಾರಂ ಗೆಯ್ದು ದೇವೋಪಸರ್ಗ ಮನುಷ್ಯೋಪಸರ್ಗ ತಿರ್ಯಕೋಪಸರ್ಗ ಅಚೇತನೋಪಸರ್ಗ ವೆಂದಿಂತು ಚತುರ್ವಿಧಮಪ್ಪ ಉಪಸರ್ಗಮುಮಂ ಪಸಿವು ನೀರಳ್ಕೆ ಮೊದಲಾಗೊಡೆಯ ಇಪ್ಪತ್ತೆರಡು ಪರೀಷಹಂಗಳುಮಂ ಸೈರಿಸಿ ಅಯ್ದುಮಿಂದ್ರಿಯಂಗಳಂ ಗೆಲ್ದು ಬಾಹ್ಯಾಭ್ಯಂತರ ಪರಿಗ್ರಹಂಗಳಂ ತೊರೆದು ದ್ವಾದಶವಿಧಮಪ್ಪ ತಪದೊಳ್ ನೆಗಳ್ದು ಪ್ರಾಯೋಪಗಮನದಿಂ ಸಂನ್ಯಸನಂಗೆಯ್ದು ಕರ್ಮಕ್ಷಯಂ ಗೆಯ್ದು ಮೋಕ್ಷಕ್ಕೆ ವೋದಂ..' 'ವಡ್ಡಾರಾಧನೆ' ಪ್ರಮುಖ ಸಿದ್ಧಾಂತಗಳೊಂದಿಗೆ ಇಹಲೋಕದಲ್ಲಿ ದೇವ, ಮನುಷ್ಯ, ಪ್ರಾಣಿ ಮತ್ತು ಅಚೇತನಗಳಿಂದ ಬರುವ ನಾಲ್ಕು ಬಗೆಯ ಕಷ್ಟಪರಂಪರೆಗಳನ್ನು, ಶರೀರದಲ್ಲಿ ಉಂಟಾಗುವ ಹಸಿವು, ಬಾಯಾರಿಕೆ ಮುಂತಾದ ಇಪ್ಪತ್ತೆರಡು ಸಂಕಟಗಳನ್ನು, ಐದು ಇಂದ್ರಿಯಗಳಿಂದ ಎದುರಾಗುವ ವಿಪತ್ತುಗಳನ್ನು ಸಹಿಸಿ, ಆತ್ಮಶಕ್ತಿಯಿಂದ ಗೆದ್ದು ಮೋಕ್ಷಕ್ಕೆ ಸಲ್ಲುವ ಪುಣ್ಯಜೀವದ ಸಾಧನೆಯನ್ನು ನಿರೂಪಿಸುವ ಗ್ರಂಥವಾಗಿದ್ದು ಇದನ್ನು 'ಉಪಸರ್ಗ ಕೇವಲಿಗಳ ಕತೆ' ಎಂದಿರುವುದು ಉಚಿತವಾಗಿದೆ. ವೈರಾಗ್ಯ ಮತ್ತು ನೀತಿ ಬೋಧೆಯಿಂದ ಕೂಡಿದ ಸಂಕಲನದ ಸೊಗಸಾದ ಕತೆಗಳು ಕತೆಗಾರನ ಉತ್ತಮ ಅಭಿರುಚಿ ಮತ್ತು ಕಥನ ಕಲೆಯ ಪ್ರೌಢಿಮೆಯನ್ನು ಸಾಬೀತುಪಡಿಸುತ್ತವೆ.

ಕವಿರಾಜಮಾರ್ಗ

ಕ್ರಿ. ಶ. ಸು. 850 ರ ಕಾಲದಲ್ಲಿ ರಚಿತವಾದುದೆನ್ನಲಾದ 'ಕವಿರಾಜ ಮಾರ್ಗ'ವೆಂಬ ಶಾಸ್ತ್ರಗ್ರಂಥ ಪ್ರಾಚೀನ ಕನ್ನಡ ಸಾಹಿತ್ಯದ ಸಂದರ್ಭದಲ್ಲಿ ಅತ್ಯಂತ ಅಮೂಲ್ಯವಾದ ಕೃತಿ. ಇದು ಕನ್ನಡ ಸಾಹಿತ್ಯ ಪರಂಪರೆಯ

ಮೈಲಿಗಲ್ಲು. ಸಾಹಿತ್ಯಕವಾಗಿ, ಸಾಮಾಜಿಕವಾಗಿ, ಧಾರ್ಮಿಕವಾಗಿ, ಭೌಗೋಳಿಕವಾಗಿ 'ಕವಿರಾಜಮಾರ್ಗ'ದ ಕೊಡುಗೆ ಅಪರಿಮಿತ. 9ನೆಯ ಶತಮಾನದಲ್ಲಿ ಕನ್ನಡ ನಾಡನ್ನು ರಾಷ್ಟ್ರಕೂಟ ದೊರೆಗಳು ಆಳುತ್ತಿದ್ದ ಕಾಲದಲ್ಲಿ 64 ವರ್ಷ ರಾಜ್ಯಭಾರ ಮಾಡಿದ ಅಮೋಘವರ್ಷ ನೃಪತುಂಗನೆಂಬ ರಾಜನ ಆಸ್ಥಾನ ಕವಿಯಾಗಿದ್ದ ಶ್ರೀವಿಜಯನೆಂಬವವನಿಂದ ರಚಿತವಾದ ಈ ಕೃತಿ 'ಭಾವಿಪ ಕವಿಜನಕೆ ಕನ್ನಡಿಯುಂ ಕೈದೀವಿಗೆಯುಂ' ಎಂದು ದುರ್ಗಸಿಂಹಾದಿ ಕವಿಗಳ ಮೆಚ್ಚುಗೆಗೆ ಪಾತ್ರವಾಗಿದೆ.

ಕವಿರಾಜಮಾರ್ಗದ ವೈಶಿಷ್ಟ್ಯ

ಕವಿರಾಜಮಾರ್ಗ ಪ್ರಧಾನವಾಗಿ ಕನ್ನಡ ಕಾವ್ಯಲಕ್ಷಣಗಳನ್ನು ತಿಳಿಸುವ ಒಂದು ಅಲಂಕಾರ ಗ್ರಂಥ. ಇದರಲ್ಲಿ ದೋಷಾ - ದೋಷಾನುವರ್ಣನ ನಿರ್ಣಯ, ಶಬ್ದಾಲಂಕಾರ, ಅರ್ಥಾಲಂಕಾರ, ಎಂಬ ಮೂರು ಪರಿಚ್ಛೇದಗಳಿವೆ. ವಿಶೇಷವೆಂದರೆ ಇದು ಕಾವ್ಯಲಕ್ಷಣಗಳನ್ನಲ್ಲದೆ ಕನ್ನಡ ನಾಡಿನ ಭೌಗೋಳಿಕ ವಿಸ್ತೀರ್ಣ, ತಿರುಳುಗನ್ನಡದ ಭಾಗಗಳು, ಕನ್ನಡ ನಾಡವರ ಗುಣವಿಶೇಷಗಳನ್ನೂ ಕನ್ನಡದಲ್ಲಿ ಆಗಿಹೋದ ಹಲವಾರು ಗದ್ಯ ಮತ್ತು ಪದ್ಯಕವಿಗಳ ಉಲ್ಲೇಖವನ್ನೂ ಮಾಡಿರುವುದು ಗಮನಾರ್ಹ ಅಂಶ. ಮೂಲತಃ ಇದು ಶಾಸ್ತ್ರಗ್ರಂಥವಾಗಿರುವುದರಿಂದ ಅದಕ್ಕಿಂತ ಮೊದಲೇ ಸಾಹಿತ್ಯ ರಚನೆ ನಡೆಯುತ್ತಿತ್ತು ಎಂಬ ಮಾಹಿತಿ ಕೂಡ ಅಮೂಲ್ಯವಾದುದು.

ಕವಿರಾಜಮಾರ್ಗದಲ್ಲಿ ಉಲ್ಲೇಖಿತರಾದ ಗದ್ಯ, ಪದ್ಯ ಕವಿಗಳು:

ಕವಿರಾಜಮಾರ್ಗದಲ್ಲಿ ಉಲ್ಲೇಖಿತರಾದ ಸಮಂತಭದ್ರ, ಕವಿಪರಮೇಷ್ಠಿ, ಪೂಜ್ಯಪಾದ, ಶ್ರೀವರ್ಧದೇವ, ಶ್ಯಾಮಕುಂದಾಚಾರ್ಯ, ವಿಮಲ, ಉದಯ, ನಾಗಾರ್ಜುನ, ಜಯಬಂಧು, ದುರ್ವಿನೀತ ಪರಮ ಶ್ರೀವಿಜಯ, ಕವೀಶ್ವರ, ಪಂಡಿತ, ಚಂದ್ರ, ಲೋಕಪಾಲ, ಜಯಬಂಧು ನಂದನ, ಸೈಗೊಟ್ಟ ಶಿವಮಾರ, ಅಸಗ, ಗುಣನಂದಿ, ಗುಣವರ್ಮ, ಕವಿ ವ್ಯಾಸ, ದಂಡನಾಥ, ರವಿನಾಗಭಟ್ಟ, ಗೊಜ್ಜಗದೇವ ಇತ್ಯಾದಿ ಹೆಸರುಗಳನ್ನು ಗಮನಿಸುವಾಗ ಪಂಪಪೂರ್ವ ಯುಗದಲ್ಲೇ ಇಷ್ಟೊಂದು ಕವಿಗಳು

ಕನ್ನಡದಲ್ಲಿ ಕೃತಿಗಳನ್ನು ರಚಿಸಿದ್ದಾರೆನ್ನುವುದು ಸಂತೋಷ ಮತ್ತು ಅಭಿಮಾನವನ್ನು ಉಕ್ಕಿಸುವ ವಿಷಯವಾದರೂ ಅವು ಯಾವುವೂ ನಮಗೆ ದೊರಕದಿರುವುದು ಅಷ್ಟೇ ವಿಷಾದವನ್ನೂ ಉಂಟುಮಾಡುತ್ತದೆ. ಇವರಲ್ಲಿ ವಿಮಲ, ಉದಯ, ನಾಗಾರ್ಜುನ, ದುರ್ವಿನೀತರು ಪ್ರಸಿದ್ಧ ಗದ್ಯ ಕವಿಗಳೆಂದೂ, ಕ್ರಿ.ಶ. ಏಳನೆಯ ಶತಮಾನದ ಶ್ರೀವಿಜಯ, ಕವೀಶ್ವರ, ಪಂಡಿತ, ಚಂದ್ರ, ಲೋಕಪಾಲರು ಪ್ರಸಿದ್ಧ ಪದ್ಯಕವಿಗಳೆಂದೂ ವಿದ್ವಾಂಸರು ಊಹಿಸುತ್ತಾರೆ. ಕವಿರಾಜಮಾರ್ಗಕಾರ ಈ ಎಲ್ಲ ಕವಿಗಳ ಕೃತಿಗಳನ್ನು ತನ್ನ ಲಕ್ಷಣ ಕಾವ್ಯಕ್ಕೆ ಲಕ್ಷ್ಯವಾಗಿ ಸ್ವೀಕರಿಸಿದ್ದಾನೆ. ಈ ಪುರಾತನ ಕವಿಗಳು ತಮ್ಮ ಕಾವ್ಯದಲ್ಲಿ ಛಂದೋಬಂಧಗಳಾದ ಚತ್ತಾಣ, ಬೆದಂಡೆಗಳಲ್ಲದೆ ಮದನವತಿ, ಅಕ್ಕರ, ಅಕ್ಕರಿಕೆ, ಏಳೆ, ಉತ್ಸಾಹ, ತ್ರಿಪದಿ, ಚೌಪದಿ, ಷಟ್ಪದಿ, ಗೀತಿಕೆ, ಛಂದೋವತಂಸ ಮುಂತಾದ ಅಚ್ಚಗನ್ನಡ ಛಂದಸ್ಸನ್ನು ಬಳಸಿರುವ ವಿಚಾರವೂ ಅತಿ ಮುಖ್ಯ. ಒಟ್ಟಿನಲ್ಲಿ ಉಪಲಬ್ಧ ಮಾಹಿತಿಗಳು ಕವಿರಾಜಮಾರ್ಗಕ್ಕಾಗಲೇ ಅತಿ ವಿಪುಲವಾಗಿ ಕನ್ನಡ ಸಾಹಿತ್ಯ ರಚನೆಯಾಗಿದ್ದುವು ಎಂಬುದಕ್ಕೆ ಸಾಕಷ್ಟು ಸಮರ್ಥನೆಯನ್ನು ನೀಡುತ್ತವೆ.

ಹತ್ತನೆಯ ಶತಮಾನದಲ್ಲಿ ಕನ್ನಡ ನಾಡಿನಲ್ಲಿ ಜೈನ ಧರ್ಮ ಪ್ರಬಲವಾಗಿದ್ದು ಪಂಪನ ಪೂರ್ವೋತ್ತರ ಕನ್ನಡ ಕವಿಗಳಲ್ಲಿ ಬಹಳಷ್ಟು ಜನ ಜೈನಧರ್ಮೀಯರೇ ಆಗಿದ್ದರೆನ್ನುವುದು ನಿರ್ವಿವಾದ. ರಾಜರ ಆಸ್ಥಾನ ಕವಿಗಳಾಗಿ, ರಾಜಧರ್ಮ ಮತ್ತು ಸ್ವಧರ್ಮನಿಷ್ಠರಾಗಿ ಲೌಕಿಕ ಮತ್ತು ಆಗಮಿಕ ಕಾವ್ಯಗಳನ್ನು ರಚಿಸುವ ಪದ್ಧತಿಯನ್ನು ಅವರು ಬೆಳೆಸಿದ್ದರು. ಅದು ಪಂಪಾದಿಗಳಿಗೂ ಪ್ರಚೋದನೆಯನ್ನು ನೀಡಿತ್ತು. 'ಆನೆ ನಡೆದುದೇ ಬೀದಿಯಲ್ಲವೇ' ಎಂಬ ಮಾತು ಪಂಪನ ಕಾಲದಿಂದ ಪ್ರಚಾರಕ್ಕೆ ಬಂದಿದ್ದರೂ ಅದರ ಹೆಗ್ಗಳಿಕೆ ಸಲ್ಲಬೇಕಾದುದು ಪಂಪಪೂರ್ವಯುಗದ ಕವಿಗಳಿಗೇ ಆಗಿದೆ. ಪಂಪಪೂರ್ವಯುಗದ ಜೈನಕವಿ ಪರಂಪರೆಗಿಂತ ಹಿಂದೆ ಬೌದ್ಧಕವಿ ಪರಂಪರೆ ಇತ್ತೆಂದು ಊಹಿಸಲಾಗಿದೆ. ಆದರೆ ಬೌದ್ಧಧರ್ಮದ ಕವಿಕೃತಿಗಳು ಯಾವುದೂ ಉಪಲಬ್ಧವಿಲ್ಲ.

ಕವಿರಾಜ ಮಾರ್ಗದಲ್ಲಿ ಮಾತ್ರವಲ್ಲದೆ ಇತರ ಶಾಸ್ತ್ರಗ್ರಂಥಗಳಾದ ಕಾವ್ಯಾವಲೋಕನ, ಶಬ್ದಮಣಿದರ್ಪಣ ಹಾಗೆಯೇ ಸಂಕಲನ ಗ್ರಂಥಗಳಾದ ಸೂಕ್ತಿಸುಧಾರ್ಣವ, ಕಾವ್ಯಸಾರ ಮುಂತಾದ ಕೃತಿಗಳಲ್ಲಿಯೂ

ಪಂಪಪೂರ್ವಯುಗದ ಸಾಹಿತ್ಯ ರಚನೆಯ ವಿಪುಲ ಮಾಹಿತಿಗಳು ಲಭಿಸುತ್ತವೆ. ಈ ಶಾಸ್ತ್ರ ಕವಿಗಳು ಉದಾಹರಣೆಗೆ ಆರಿಸಿದ ಕಾವ್ಯಗಳ ಭಾಗಗಳೂ ಪಂಪಪೂರ್ವಯುಗದ ಅಜ್ಞಾತ ಕವಿಗಳ ಸಾಹಿತ್ಯ ಕೃತಿಯಿಂದ ಎನ್ನುವುದು ಸ್ಪಷ್ಟ. ಇವರು ತಮ್ಮ ಲಕ್ಷ್ಯಕ್ಕಾಗಿ (ಲಕ್ಷ್ಯ ಲಕ್ಷಣ ಸಮನ್ವಯ) ಪೂರ್ವಕೃತಿಗಳಿಂದ ಆರಿಸಿದ ಪದ್ಯಗಳು ಕ್ವಚಿತ್ತಾಗಿದ್ದರೂ ಆ ಪದ್ಯಭಾಗಗಳು ಅನ್ನದ ಪಾಕವನ್ನು ಅಗಳಿನಿಂದ ಅರಿಯುವಂತೆ ಅವರಲ್ಲಿ ಹಲವರು ಕನ್ನಡದ ಶ್ರೇಷ್ಠಕವಿಗಳಾಗಿದ್ದರು ಎಂಬುದನ್ನು ಸಾಬೀತುಪಡಿಸುತ್ತವೆ.

ಸು. 1260 ರಲ್ಲಿ ರಚಿತವಾದ ಕೇಶಿರಾಜನ ಶಬ್ದಮಣಿದರ್ಪಣದಲ್ಲಿ ಪ್ರಸ್ತಾಪಿಸಲಾದ ಗಜಗ, ಗುಣನಂದಿ, ಮನಸಿಜ, ಅಸಗ, ಚಂದ್ರಭಟ್ಟ, ಗುಣವರ್ಮ, ಶ್ರೀವಿಜಯ, ಪೊನ್ನ, ಪಂಪ, ಸುಜನೋತ್ತಂಸ ಮುಂತಾದವರಲ್ಲಿ ಪಂಪ, ಪೊನ್ನ, ಸುಜನೋತ್ತಂಸರು ಪಂಪಯುಗದವರಾದರೆ ಗಜಗ, ಗುಣನಂದಿ, ಮನಸಿಜ, ಅಸಗ, ಚಂದ್ರಭಟ್ಟ, ಗುಣವರ್ಮ, ಶ್ರೀವಿಜಯ ಇವರು ಪಂಪಪೂರ್ವ ಯುಗದ ಕವಿಗಳು. ಈ ಕವಿಗಳಲ್ಲದೆ ಇನ್ನೂ ಹಲವಾರು ಕವಿಗಳ ಕೃತಿಗಳಿಂದಲೂ ಕೇಶಿರಾಜ ಉದಾಹರಣೆಗಳನ್ನು ತೆಗೆದುಕೊಂಡಿದ್ದಾನೆ. ಕನ್ನಡದಲ್ಲಿ ಬರೆದಿರಬಹುದಾದ ರಾಮಾಯಣ, ಭಾರತ, ಪುರಾಣ ಕತೆಗಳ ಉದಾಹರಣೆಗಳೂ ಲಭಿಸುತ್ತವೆ.

ಕಾವ್ಯ, ಶಾಸ್ತ್ರ ಮತ್ತು ಸಂಕಲನಗ್ರಂಥಗಳಲ್ಲಿ ಹೆಸರು ಲಭ್ಯವಾಗಿರುವ ಕವಿಗಳ ಅಲ್ಪಸ್ವಲ್ಪ ಮಾಹಿತಿಗಳು ಹೀಗಿವೆ :

ಸಮಂತಭದ್ರ :

ಸಮಂತಭದ್ರನನ್ನು ಕ್ರಿ.ಶ. ಸುಮಾರು 783ರಲ್ಲಿ ಪೂರ್ವಪುರಾಣವನ್ನು ಬರೆದ ಜಿನಸೇನಚಾರ್ಯನೂ ಕ್ರಿ.ಶ. ಸುಮಾರು 978ರಲ್ಲಿ ಚಾವುಂಡರಾಯ ಪುರಾಣವನ್ನು ಬರೆದ ಚಾವುಂಡರಾಯನೂ ಸ್ತುತಿಸಿದ್ದಾರೆ. ಕ್ರಿ.ಶ. ಸುಮಾರು 600ರಲ್ಲಿ ಪೂಜ್ಯಪಾದನೆಂಬ ವೈಯಾಕರಣಿ ತನ್ನ ವ್ಯಾಕರಣ ಗ್ರಂಥದಲ್ಲಿ ಈತನನ್ನು ಉಲ್ಲೇಖಿಸಿದ್ದಾನೆ. ರಾಜಾವಳೀ ಕಥಾಸಾರವನ್ನು ಬರೆದ ದೇವಚಂದ್ರ ಕವಿ ತನ್ನ ಕೃತಿಯ 5ನೆಯ ಅಧ್ಯಾಯದಲ್ಲಿ ಪೂರ್ವಕವಿಗಳ ಕಥಾಮಾಲಿಕೆಯಲ್ಲಿ ಈತನನ್ನು ಕುರಿತು ಒಂದು ಕತೆಯನ್ನೇ ಹೆಣೆದಿದ್ದಾನೆ. ಇವನ ಬಗ್ಗೆ ಪ್ರಸ್ತಾಪಿಸುತ್ತ ಆರ್. ನರಸಿಂಹಾಚಾರ್ಯರು ಈತ ಕ್ರಿ.ಶ.400ರ ಕಾಲದವನಾಗಿರಬಹುದೆಂದೂ ಬಹುದೊಡ್ಡ ವಿದ್ವಾಂಸನಾಗಿರಬಹುದೆಂದೂ

ಆದರೆ ಆತ ಬರೆದ ಯಾವುದೇ ಕೃತಿಗಳು ಉಪಲಬ್ಧವಿಲ್ಲವೆಂದೂ ತಿಳಿಸುತ್ತಾರೆ.

ಕವಿ ಪರಮೇಷ್ಠಿ :

ಈ ಹೆಸರಿನ ಕವಿಯನ್ನು ಕುರಿತು ಪಂಪ, ಚಾವುಂಡರಾಯ, ಜಿನಸೇನಾಚಾರ್ಯರೇ ಮೊದಲಾದವರು ಸ್ಮರಿಸಿದ್ದಾರೆ. ಈತ ಪಂಪಪೂರ್ವ ಯುಗದ ಕವಿಯಾಗಿದ್ದು ಈತ ಬರೆದ ತ್ರಿಷಷ್ಠಿಶಲಾಕಾಪುರುಷರ ಪುರಾಣವನ್ನು ಆಧರಿಸಿಯೇ ಜಿನಸೇನಾಚಾರ್ಯರು ಪೂರ್ವಪುರಾಣವನ್ನು ಬರೆದಿದ್ದಾನೆಂದೂ ಈತ ಕ್ರಿ.ಶ. 550ರ ಕಾಲದವನೆಂದೂ ಊಹಿಸಲಾಗಿದೆ.

ಪೂಜ್ಯಪಾದ :

ಈತನನ್ನು ಚಾವುಂಡರಾಯ ಹಾಗೂ ಪಂಪಯುಗೋತ್ತರ ಕವಿಗಳು ಸ್ತುತಿಸಿದ್ದಾರೆ. ಶ್ರವಣಬೆಳ್ಗೊಳ ಶಾಸನಗಳಲ್ಲಿಯೂ ಈತನ ಉಲ್ಲೇಖವಿದೆ. ಜಿನಸೇನಾಚಾರ್ಯರು ಈತ ಜೈನೇಂದ್ರ ವ್ಯಾಕರಣವನ್ನು ಬರೆದವನೆಂದು ಉಲ್ಲೇಖಿಸಿದ್ದಾರೆ. ಈತನನ್ನು ಜಯಾದಿತ್ಯ, ಅಕಳಂಕ ದೇವ, ವಾಮನ ಮುಂತಾದವರು ಸ್ಮರಿಸಿದ್ದಾರೆ. ಇವನ ಕಾಲ ಕ್ರಿ.ಶ. 600 ಇರಬಹುದೆಂದು ಅಂದಾಜಿಸಲಾಗಿದೆ.

ಶ್ರೀವರ್ಧದೇವ :

ಈ ಕವಿಯ ಬಗ್ಗೆ ಬಿ.ಎಲ್‌ರೈಸ್, ಆರ್. ನರಸಿಂಹಾಚಾರ್, ಗೋವಿಂದ ಪೈ, ಎಂ.ಎಂ. ಕಲ್ಬುರ್ಗಿಯವರೂ ಸೇರಿದಂತೆ ಹಲವರು ಭಿನ್ನ ಭಿನ್ನ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. 96000 ಅಥವ 84000 ಗ್ರಂಥಪ್ರಮಾಣದ ಕೃತಿಯನ್ನು ಬರೆದವನೆನ್ನಲಾದ ತಂಬುಲಾಚಾರ್ಯ, ತಂಬೂಲಾರಾಚಾರ್ಯ ಕವಿಯೇ ಶ್ರೀವರ್ಧದೇವನೆಂದೂ ಈತನೇ ಶ್ರವಣಬೆಳ್ಗೊಳದ 97ನೆಯ ಶಾಸನದಲ್ಲಿ ಹೇಳಲಾದ ಚೂಡಾಮಣಿ ಗ್ರಂಥವನ್ನು ಬರೆದವನೆಂದೂ ಎರಡು ಹೆಸರುಗಳೂ ಒಂದೇ ಕೃತಿಯನ್ನು ಉದ್ದೇಶಿಸಿವೆ ಎಂದೂ ಹೇಳಿದ ಪೂರ್ವವಿದ್ವಾಂಸರ ಅಭಿಪ್ರಾಯವನ್ನು ನಿರಾಕರಿಸಿ ತಂಬುಲಾಚಾರ್ಯನೆಂಬವನು ಬರೆದ 'ಚೂಡಾಮಣಿ' ಗ್ರಂಥ ಷಟ್ಖಂಡಾಗಮ – ಕಷಾಯ ಪ್ರಾಭೃತಗಳಿಗೆ ಬರೆದ ವ್ಯಾಖ್ಯಾನಗ್ರಂಥವೆಂದೂ ಶ್ರೀವರ್ಧದೇವ ಬರೆದ

‘ಚೂಡಾಮಣಿ’ ಒಂದು ಕಾವ್ಯವೆಂದೂ ಇಬ್ಬರೂ ಬೇರೆಬೇರೆಯವರೆಂದೂ ಕಲ್ಬುರ್ಗಿಯವರು ಅಭಿಪ್ರಾಯ ಪಡುತ್ತಾರೆ. ಈತನ ಕಾಲ ಕ್ರಿ.ಶ. ಸು. 650 ಎನ್ನಲಾಗಿದೆ.

ಶ್ಯಾಮಕುಂದಾಚಾರ್ಯ :

ಶ್ಯಾಮಕುಂದಾಚಾರ್ಯನೆಂಬವನು ಪ್ರಾಕೃತ, ಸಂಸ್ಕೃತ ಮತ್ತು ಕನ್ನಡದಲ್ಲಿಯೂ ಕೃತಿ ಬರೆದಿದ್ದಾನೆಂಬ ಉಲ್ಲೇಖವಿದೆ. ಈತನನ್ನು ಚಾವುಂಡರಾಯನು ಸ್ತುತಿಸಿದ್ದಾನೆ. ‘ಪ್ರಾಭೃತ’ ಎಂಬ ಕೃತಿಯನ್ನು ಈತನೇ ಬರೆದಿರುವುದಾಗಿ ಮಾಹಿತಿಗಳಿವೆ. ಈತನ ಕಾಲ ಕ್ರಿ. ಶ. 650 ಎಂದು ಊಹಿಸಲಾಗಿದೆ.

ತಂಬಲೂರಾಚಾರ್ಯ :

ಕ್ರಿ.ಶ.7ನೆಯ ಶತಮಾನದ ತಂಬಲೂರಾಚಾರ್ಯನಿಂದ ರಚಿತವಾದ ಚೂಡಾಮಣಿ ಗ್ರಂಥದಲ್ಲಿ 96000 ಗ್ರಂಥಗಳ ಉಲ್ಲೇಖವಿದೆಯೆನ್ನುವ ಮಾಹಿತಿ ಇದೆ. ಆದರೆ ಆ ಗ್ರಂಥವಾಗಲೀ ಅದು ಉಲ್ಲೇಖಿಸಿದ ಕೃತಿಗಳಾಗಲೀ ಯಾವುದೂ ಉಪಲಬ್ಧವಿಲ್ಲ.

ವಿಮಲ :

ಇವನೊಬ್ಬ ಜೈನ ಕವಿ. ಜೈನ ಶ್ವೇತಾಂಬರ ಶಾಖೆಯ ವಿಮಲನೆಂಬ ಕವಿ ಸಂಸ್ಕೃತದಲ್ಲಿ ಪ್ರಶ್ನೋತ್ತರ ಮಾಲಾ ಎಂಬ ಕೃತಿಯನ್ನು ಬರೆದಿದ್ದು ಶ್ರವಣಬೆಳ್ಗೊಳದ 67ನೆಯ ಶಾಸನದಲ್ಲಿ ವಿಮಲ ಎಂಬ ಹೆಸರಿನ ದಿಗಂಬರ ಪಂಥದವನ ಹೆಸರೂ ಉಕ್ತವಾಗಿದ್ದು ಕವಿರಾಜಮಾರ್ಗಕಾರ ಹೇಳಿದ ವಿಮಲಕವಿ ಯಾರೆಂಬುದೂ ಅವನ ಕೃತಿ ಯಾವುದೆಂಬುದೂ ಸ್ಪಷ್ಟವಾಗುವುದಿಲ್ಲ. ಸಂಸ್ಕೃತದಲ್ಲಿ ಪ್ರಶ್ನೋತ್ತರ ಮಾಲಾ ಎಂಬ ಗ್ರಂಥವನ್ನು ಬರೆದವನು ಕವಿರಾಜಮಾರ್ಗದಲ್ಲಿ ಹೇಳಲಾದ ವಿಮಲನಾಗಿರಲಾರನೆಂಬುದು ಆರ್. ನರಸಿಂಹಾಚಾರ್ಯರ ಅಭಿಪ್ರಾಯ.

ಸೈಗೊಟ್ಟ ಶಿವಮಾರ :

ಈತ ಗಂಗರ ರಾಜ. ಈತ ಗಜಶಾಸ್ತ್ರಕ್ಕೆ ಸಂಬಂಧಿಸಿದ ಶಿವಮಾರ ಮತ ('ಗಜಾಷ್ಟಕ') ವೆಂಬ ಕೃತಿಯನ್ನು ರಚಿಸಿದುದಾಗಿ ತಿಳಿದುಬರುತ್ತದೆ. ಈತನ ಕಾಲ ಕ್ರಿ.ಶ. 900 ಎಂದು ಅಂದಾಜಿಸಲಾಗಿದೆ.

ನಾಗಾರ್ಜುನ :

ಇವನ ಹೆಸರಷ್ಟೇ ಪ್ರಮಾಣವಲ್ಲದೆ ಕೃತಿಗಳ ಬಗ್ಗೆ ಯಾವ ನಿಖರ ಮಾಹಿತಿಗಳೂ ಇಲ್ಲ. ಎಂ.ಎಂ. ಕಲ್ಬುರ್ಗಿಯವರು ನಾಗಾರ್ಜುನನೆಂಬ ಹೆಸರಿನ ಮಹಾಯಾನ ಶಾಖೆಯ ಸ್ಥಾಪಕನಿದ್ದನೆಂದೂ ಮಹಾಮಂತ್ರಿಕ ಬಿರುದಿರುವ ನಾಗಾರ್ಜುನನೂ ಇವನೂ ಒಬ್ಬರೋ ಇಬ್ಬರೋ ತಿಳಿಯದೆಂದೂ ಹೆಚ್. ಡಿ. ವೇಲಂಕರ್ ಎಂಬವರ ಜಿನರತ್ನಕೋಶದಲ್ಲಿ ಕರ್ಣಾಟಕ ಮಣಿದರ್ಪಣ ಗ್ರಂಥವನ್ನು ನಾಗಾರ್ಜುನನೆಂಬವನು ಬರೆದಿದ್ದಾನೆಂಬ ಮಾತಿದೆಯೆಂದೂ ಆದರೆ ಕೃತಿ ಅಲಭ್ಯವೆಂದೂ ತಿಳಿಸಿದ್ದಾರೆ.

ದುರ್ವಿನೀತ :

ಮಾಗಡಿಯಲ್ಲಿ ದೊರೆತ ಕ್ರಿ. ಶ. 966 ರ ಶಾಸನದಲ್ಲಿ ಈತನ ಹೆಸರು ಬರುತ್ತದೆ. ಈತ ಗಂಗವಂಶದ ರಾಜ ಮಾತ್ರವಲ್ಲ ಒಬ್ಬ ಶ್ರೇಷ್ಠ ಕವಿಯೂ ಆಗಿದ್ದಾನೆ. ಈತನ ಆಸ್ಥಾನದಲ್ಲಿ ಭಾರವಿ ಎಂಬ ಸಂಸ್ಕೃತ ಕವಿ ಇದ್ದ. ಭಾರವಿಯ ಅವಂತಿ ಸುಂದರಿ ಕಥಾಸಾರ ವೆಂಬ ಕೃತಿಯ ಮೂಲಕ ದುರ್ವಿನೀತ ಪೂರ್ವ ಚಾಲುಕ್ಯರ ಮೊದಲರಾಜ ವಿಷ್ಣುವರ್ಧನ ಹಾಗೂ ಕಂಚಿಯ ಪಲ್ಲವ ರಾಜ ಸಿಂಹವಿಷ್ಣುವಿನ ಸಮಕಾಲೀನ. ಈತ ಪಾಣಿನಿಯ ವ್ಯಾಕರಣಕ್ಕೆ ಶಬ್ದಾವತಾರವೆಂಬ ವ್ಯಾಖ್ಯಾನ ಕೃತಿಯನ್ನು ರಚಿಸಿದುದಾಗಿ ತಿಳಿದುಬರುತ್ತದೆ. ಮಾತ್ರವಲ್ಲ ಈತ ಭಾರವಿಯ ಕಿರಾತಾರ್ಜುನೀಯ ಕಾವ್ಯದ 15ನೆಯ ಸರ್ಗಕ್ಕೆ ವ್ಯಾಖ್ಯಾನವನ್ನು ಬರೆದಿರುವ ಮಾಹಿತಿ ಕೂಡ ಇದೆ. ಗುಣಾಢ್ಯನೆಂಬ ಕವಿ ಪೈಶಾಚಿ ಭಾಷೆಯಲ್ಲಿ ಬರೆದ ವಡ್ಡಕಥ ಅಥವ ಬೃಹತ್ಕಥಾವನ್ನು ಈತ ಸಂಸ್ಕೃತದಲ್ಲಿ ಬರೆದನೆಂದೂ ತಿಳಿದುಬರುತ್ತದೆ. ಈತನ ಕಾಲ ಕ್ರಿ.ಶ. 600 ಎನ್ನಲಾಗಿದೆ.

ಅಸಗ :

ಪಂಪಪೂರ್ವಯುಗದ ಪಂಡಿತಕವಿಗಳಲ್ಲಿ ಬಹುಶ್ರೇಷ್ಠನಾದವನು ಅಸಗ. ಈತನ ಕಾಲ ಕ್ರಿ.ಶ. ಸು. 854 ಎಂದು ಭಾವಿಸಲಾಗಿದೆ. ಈತನನ್ನು ಪೊನ್ನ, ನಯಸೇನ, ದುರ್ಗಸಿಂಹ, ಕೇಶಿರಾಜ ಮುಂತಾದವರು ಸ್ಮರಿಸಿದ್ದಾರೆ. ನಯಸೇನ 'ಅಸಗನ ದೇಸೆ' ಯನ್ನು ಹೊಗಳಿದರೆ ದುರ್ಗಸಿಂಹ 'ಇಳೆಗೇನೆಸೆದವೋ ಸುಕುವಿಗಳೆನೆ ಮನಸಿಜಸಗನ ಚಂದ್ರಭಟ್ಟರ ಕೃತಿಗಳ್' ಎಂದು ಕೊಂಡಾಡಿದ್ದಾನೆ. ಕೇಶಿರಾಜ ತಾನು ಲಕ್ಷ್ಯಪದ್ಯಗಳಿಗಾಗಿ ಆಯ್ಕೆಮಾಡಿದ ಕವಿಪಂಕ್ತಿಗಳಲ್ಲಿ ಅಸಗನ ಹೆಸರನ್ನು ಉಲ್ಲೇಖಿಸಿದ್ದಾನೆ. ಪೊನ್ನಕವಿ ತನ್ನ ಶಾಂತಿಪುರಾಣದಲ್ಲಿ ತನ್ನ ಕಾವ್ಯದ ಹೆಗ್ಗಳಿಕೆಯನ್ನು ಹೇಳುವ ಸಂದರ್ಭದಲ್ಲಿ

ಕನ್ನಡ ಕವಿತೆಯೊಳ್ ಅಸಗಂ
ಗಂ ನೂರ್ಮಡಿ ರೇಖೆಗಗ್ಗಳಂ ಸಕ್ಕದದೊಳ್
ಮುನ್ನುಳ್ಳ ಕಾಳಿದಾಸಂ
ಗಂ ನೂರ್ಮಡಿ ರಚನೆಯೊಳ್ ಕುರುಳ್ಗಳ ಸವಣಂ

(ಕನ್ನಡದಲ್ಲಿ ಅಸಗನಿಗಿಂತ ನೂರುಪಟ್ಟು ಹಾಗೂ ಸಂಸ್ಕೃತದಲ್ಲಿ ಕಾಳಿದಾಸನಿಗಿಂತ ನೂರು ಪಟ್ಟು ಮಿಗಿಲು) ಎಂದು ತನ್ನನ್ನು ಕೊಚ್ಚಿಕೊಂಡಿದ್ದಾನೆ. ಅಸಗನ ಕನ್ನಡ ಕಾವ್ಯಗಳು ನಮಗೆ ಸಿಗದಿದ್ದರೂ ಪೊನ್ನನ ಈ ಹೇಳಿಕೆಯ ಪ್ರಕಾರ ಅಸಗ ಕನ್ನಡದ ಶ್ರೇಷ್ಠ ಕವಿಯಾಗಿರುವುದರಲ್ಲಿ ಅನುಮಾನವಿಲ್ಲ. ಏಕೆಂದರೆ ಕಾಳಿದಾಸನ ಶ್ರೇಷ್ಠತೆ ಬಹುಶ್ರುತವಾಗಿದೆ. ಪೊನ್ನಕವಿ ಸಂಸ್ಕೃತದಲ್ಲಿ ತನ್ನನ್ನು ಕಾಳಿದಾಸನಂಥ ಮಹಾಕವಿಗೆ ಹೋಲಿಸಿರುವಾಗ ಕನ್ನಡದಲ್ಲಿ ಅಷ್ಟೇ ಸುಪ್ರಸಿದ್ಧನಾದ ಕವಿಗೆ ಹೋಲಿಸುವ ಸಾಧ್ಯತೆಯೇ ಹೆಚ್ಚು. ನಯಸೇನನೂ ತನ್ನ ಧರ್ಮಾಮೃತದಲ್ಲಿ ಅಸಗನ ದೇಸೆಯನ್ನು ಕೊಂಡಾಡಿದ್ದಾನೆ.

ಅಸಗ ಕನ್ನಡದಲ್ಲಿ ಮಾತ್ರವಲ್ಲ ಸಂಸ್ಕೃತದಲ್ಲಿಯೂ ಅಸಾಮಾನ್ಯ ಪಂಡಿತನೂ ಕವಿಯೂ ಆಗಿರಬೇಕೆಂದು ವಿದ್ವಾಂಸರು ತರ್ಕಿಸುತ್ತಾರೆ. 'ಅಸಗ ಭೂಪಕೃತೇ ವರ್ಧಮಾನ ಚರಿತೇ' ಎಂಬ ಉಲ್ಲೇಖವಿದ್ದು ಈತ ರಾಜನೂ ಆಗಿರಬಹುದೆಂದು ಅನುಮಾನಿಸಲಾಗಿದೆ. ಅಸಗ ಕನ್ನಡ ಮತ್ತು ಸಂಸ್ಕೃತ ಭಾಷೆಗಳಲ್ಲಿ ಒಟ್ಟು ಹತ್ತು ಕೃತಿಗಳನ್ನು ಬರೆದಿದ್ದಾನೆಂದೂ

ಅವನು ಸಂಸ್ಕೃತದಲ್ಲಿ ಬರೆದ 'ಶಾಂತಿಪುರಾಣ'ವೇ ಪೊನ್ನನ ಶಾಂತಿಪುರಾಣಕ್ಕೆ ಪ್ರೇರಣೆಯಾಗಿರಬಹುದೆಂದೂ ವಿದ್ವಾಂಸರು ಊಹಿಸುತ್ತಾರೆ. ಅಸಗನ ಇನ್ನೊಂದು ಸಂಸ್ಕೃತ ಕಾವ್ಯ 'ವರ್ಧಮಾನ ಪುರಾಣ'ವೆಂದೂ ತಿಳಿಯುತ್ತದೆ. ಈತ ಕನ್ನಡದಲ್ಲಿ 'ಕರ್ನಾಟಕ ಕುಮಾರಸಂಭವ ಕಾವ್ಯಂ' ಎಂಬ ಕೃತಿಯನ್ನು ರಚಿಸಿರುವುದನ್ನು ಜಯಕೀರ್ತಿ ತನ್ನ 'ಛಂದೋನುಶಾಸನ'ದಲ್ಲಿ ಉಲ್ಲೇಖಿಸಿದ್ದಾನೆ. ಇದು ಕಾಳಿದಾಸನ ಕುಮಾರಸಂಭವದ ಅನುವಾದವಿದ್ದರೂ ಇರಬಹುದೆಂಬ ಅನುಮಾನವಿದೆ. ಈತನ ಕಾಲ ಕ್ರಿ.ಶ, 853 ಎಂದು ಅಂದಾಜಿಸಲಾಗಿದೆ.

ಗುಣನಂದಿ :

ಈತ ಕ್ರಿ.ಶ. 900ರಲ್ಲಿ ಇದ್ದಿರಬಹುದಾದ ಕವಿ. ಈತನನ್ನು ಮಲ್ಲಿಕಾರ್ಜುನ, ಕೇಶಿರಾಜ, ನಂಜುಂಡ, ಭಟ್ಟಾಕಳಂಕ ಮುಂತಾದವರು ಸ್ಮರಿಸಿದ್ದಾರೆ. ನಂಜುಂಡ ಕವಿಯಂತೂ 'ಇಂಪುವಡೆದ ಕವಿತಾರಸಲಹರಿಯ ಸೊಂಪಿನಿಂ ವಾರ್ಧಿಗಳೆರ್ದೆಗೆ ಕಂಪನವನು ಹುಟ್ಟಿಸುವ ಗುಣನಂದಿಯ ನಾಂ ಪೊಗಳುತ ಬೆಸಗೊಂಬೆಂ' ಎಂದು ಗೌರವಿಸುತ್ತಾನೆ. 'ಗುಣನಂದಿಯ ತೊಂಡು.. ಸಮಾನುರಕ್ತಿಯಿಂ ನೆಲಸಿರ್ಪುವೀ ಸುಕವಿ ಮಲ್ಲನ ಕಾವ್ಯವಿಳಾಸ ಗೇಹದೊಳ್' ಎಂದು ಸೂಕ್ತಿಸುಧಾರ್ಣದಲ್ಲಿ ಹೇಳಲಾಗಿದೆ. ಶ್ರವಣ ಬೆಳ್ಗೊಳದ 66, 117, 127ನೆಯ ಶಾಸನಗಳಲ್ಲಿ ಈತನ ಹೆಸರು ಉಕ್ತವಾಗಿದೆ. ಈತನನ್ನು ಓರ್ವ ಪಂಡಿತ ಯತಿಯೆಂದೂ ತರ್ಕವ್ಯಾಕರಣಗಳಲ್ಲಿ ಅತಿ ನಿಪುಣನಾದವನೆಂದೂ ಸಾಹಿತ್ಯ ವಿದ್ಯಾಪತಿಯೆಂದೂ ಗುರುತಿಸಲಾಗಿದೆ. ಈತ ಪೂಜ್ಯಪಾದ ಎಂಬವನ ಜೈನೇಂದ್ರ ವ್ಯಾಕರಣಕ್ಕೆ ಸಂಸ್ಕೃತದಲ್ಲಿ 'ಪ್ರಕ್ರಿಯಾವತಾರ'ವೆಂಬ ವ್ಯಾಖ್ಯಾನ ಗ್ರಂಥವನ್ನು ಬರೆದಿದ್ದಾನೆ. ಶ್ರವಣ ಬೆಳ್ಗೊಳದ 66, 117, 127 ನೆಯ ಶಾಸನಗಳಲ್ಲಿ ಗುಣನಂದಿ ತರ್ಕ, ವ್ಯಾಕರಣಶಾಸ್ತ್ರಗಳಲ್ಲಿ ಪ್ರಗಲ್ಭನೆಂಬ ವಿವರಗಳಿರುವುದನ್ನು ನೋಡಬಹುದು. ಪಂಪನ ಗುರುವಾದ ದೇವೇಂದ್ರಮುನಿ ಈತನ ಶಿಷ್ಯನೆಂದು ತಿಳಿಯಲಾಗಿದೆ. ಕ್ರಿ.ಶ. ಸು. 1604ರ ಭಟ್ಟಾಕಳಂಕನೆಂಬ ಕನ್ನಡ ವ್ಯಾಕರಣಕಾರ 'ಭಗವಾನ್ ಗುಣನಂದಿಃ' ಎಂದು ಇವನನ್ನು ಸ್ತುತಿಸಿದ್ದಾನೆ. ಮಲ್ಲಿಕಾರ್ಜುನ ಕವಿಯ 'ಸೂಕ್ತಿ ಸುಧಾರ್ಣವ' ವೆಂಬ ಸಂಕಲನ ಗ್ರಂಥದಲ್ಲಿ ಈತನ ಹೆಸರಿದೆ. ಈತ ಕನ್ನಡದಲ್ಲಿಯೂ ಕಾವ್ಯರಚನೆ ಮಾಡಿರಬಹುದಾದ ಸಾಧ್ಯತೆ

ಇದೆಯೆಂದು ವಿದ್ವಾಂಸರು ಊಹಿಸುತ್ತಾರೆ. ಕೇಶಿರಾಜ ಕೂಡ 'ಚುರ್ಚಿದವೊಲ್ ಬಿಸಿಲಳುರೆ ಕಿಮುಳ್ಚಿದ ಲತೆಯಂತೆ ನೊಂದು-ಗುಣನಂದಿ' ಎಂಬ ಗುಣನಂದಿಯ ಹೆಸರಿನಲ್ಲಿರುವ ಬಹು ಸೊಗಸಾದ ಪದ್ಯಸಾಲನ್ನು ಉದ್ಧರಿಸಿದ್ದಾನೆ.

1ನೆಯ ಗುಣವರ್ಮ :

ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ಗುಣವರ್ಮ ಹೆಸರಿನ ಇಬ್ಬರು ಕವಿಗಳಿದ್ದು ಪಂಪಪೂರ್ವಯುಗದ ಗುಣವರ್ಮನನ್ನು ಒಂದನೆಯ ಗುಣವರ್ಮನೆಂದು ಪರಿಗಣಿಸಲಾಗಿದೆ. ಕೂಡಲೂರು ತಾಮ್ರಶಾಸನದ ಆಧಾರದಿಂದ ಈತ ಒಬ್ಬ ರಾಜನೆಂದು ಗುರುತಿಸಲಾಗಿದೆ. ಈತನ ಕಾಲ ಕ್ರಿ.ಶ. ಸು. 900. ಈತ 'ಶೂದ್ರಕ' ಮತ್ತು 'ಹರಿವಂಶ'ಗಳೆಂಬ ಎರಡು ಕೃತಿಗಳನ್ನು ರಚಿಸಿರುವುದಾಗಿ ತಿಳಿದು ಬರುತ್ತದೆ. ಇವುಗಳಲ್ಲಿ 'ಶೂದ್ರಕ' ಲೌಕಿಕ ಕಾವ್ಯವೆಂದೂ 'ಹರಿವಂಶ' ಆಗಮಿಕ ಕಾವ್ಯವೆಂದೂ ಇವೆರಡೂ ಚಂಪೂ ಛಂದಸ್ಸಿನಲ್ಲಿ ರಚಿತವಾಗಿರಬಹುದೆಂದೂ ವಿದ್ವಾಂಸರು ಊಹಿಸುತ್ತಾರೆ. ನಯಸೇನ. ಪಾರ್ಶ್ವಪಂಡಿತ, ಎರಡನೆಯ ಗುಣವರ್ಮ, ಕೇಶಿರಾಜ ಮುಂತಾದ ಕವಿಗಳು ತಮ್ಮ ಪೂರ್ವಕವಿ ಸ್ತವನದಲ್ಲಿ ಗುಣವರ್ಮನನ್ನು ಸ್ಮರಿಸಿರುವುದರ ಹಿನ್ನೆಲೆಯಲ್ಲಿ ಗುಣವರ್ಮ ಕೂಡ ಪಂಪಪೂರ್ವಯುಗದ ಒಬ್ಬ ಸುಪ್ರಸಿದ್ಧ ಕವಿಯಾಗಿರಬಹುದೆಂದು ನಂಬಲಾಗಿದೆ. ನಯಸೇನ ಕವಿ ತನ್ನ 'ಧರ್ಮಾಮೃತ'ದಲ್ಲಿ 'ಗುಣವರ್ಮನ ಜಾಣ್' ತನ್ನ ಕಾವ್ಯದಲ್ಲಿ ನೆಲಸಲಿ ಎಂದು ಪ್ರಾರ್ಥಿಸಿದ್ದಾನೆ. ಕೇಶಿರಾಜ 'ಶಬ್ದಮಣಿದರ್ಪಣ'ದಲ್ಲಿ ಷಷ್ಠಿವಿಭಕ್ತಿ ಪ್ರತ್ಯಯಕ್ಕೆ ದೀರ್ಘ ಬರುವ ಸಂದರ್ಭದಲ್ಲಿ ಗುಣವರ್ಮನ 'ಈಂದ ಪುಲಿಯಾವೊಲಿರ್ದಳ್' ಎಂಬ ಪ್ರಯೋಗವನ್ನು ಉದಾಹರಿಸುತ್ತಾನೆ. ಇದು ಗುಣವರ್ಮನ 'ಹರಿವಂಶ'ದ ಪ್ರಯೋಗವೆಂದೂ ಹೇಳಿದ್ದಾನೆ. ಈ ಸಾಲು ಸ್ಫುರಿಸುವ ಅರ್ಥವೈಭವವನ್ನು ಗಮನಿಸಿದರೆ ಗುಣವರ್ಮ ಕವಿ ಉನ್ನತ ಪ್ರತಿಭಾವಂತನಾಗಿರಬೇಕೆಂದು ಊಹಿಸಬಹುದು. ಡಾ. ಮಾಧವ ಪೆರಾಜೆಯವರು ಗುಣವರ್ಮನ ಶೂದ್ರಕ ಕಾವ್ಯದಿಂದ ಆರಿಸಲಾದ ಪದ್ಯಗಳೆಂದು ಸು.83 ಪದ್ಯಗಳನ್ನು ಸಂಗ್ರಹಿಸಿದ್ದಾರೆ. (ಪೂರ್ವೋಕ್ತ. ಪು213–226) ಅವುಗಳಲ್ಲಿ ಒಂದು ಪದ್ಯ ಹೀಗಿದೆ:

ಎನಿತ್ತೆನಿತ್ತಂಬುಜ ಪತ್ರನೇತ್ರೆಯಾ
ಘನಸ್ತನಂಗಳ್ ಬಳೆಗುಂ ಕಿರಾತೆಯಾ
ಅನಿತ್ತನಿತ್ತಂ ವನದೊಳ್ ವನೇಚರಂ
ತನತ್ತು ಬಿಲ್ಲಾನದನಂತೆ ಕೀಸುವಂ

(ಕೇಶಿರಾಜನ ಶಬ್ದಮಣಿದರ್ಪಣದಲ್ಲಿ ಈ ಪದ್ಯ ಉಲ್ಲೇಖಿತವಾಗಿದೆ. ಬೇಡಯುವಕನೊಬ್ಬನ ಪ್ರಣಯ ಅಥವ ವಿರಹವನ್ನು ಬಣ್ಣಿಸುವ ಈ ಪದ್ಯ ಕವಿಯ ರಸಿಕಪ್ರಜ್ಞೆಯನ್ನು ಅತಿ ಸೊಗಸಾಗಿ ನಿರೂಪಿಸುತ್ತದೆ)

ಹಾಗೆಯೇ ಸಮುದ್ರವರ್ಣನೆಯ ಇನ್ನೊಂದು ಪದ್ಯವನ್ನು ನೋಡಬಹುದು:

ಗಂಭೀರ ಸ್ಫಾರ ವೇಳಾ ಬಹುಳ ಪರಿವೃತೋಲ್ಲೋಲ ಕಲ್ಲೋಲಮಾಲಾ
ರಂಭ ಪ್ರೋಡ್ಡೀನ ಫೇನ ಪ್ರಬಳ ಜಲಚರೋಲ್ಲೋಲ ಪಾಠೀನ ಕುಂಭ
ತ್ಕುಂಭೀಳಾಭೀಳ ನಕ್ರ ಪ್ರಕರಕಮಠ ನೀರೇಭ ರತ್ನ ಪ್ರಭಾವೋ
ಜ್ಜೃಂಭತ್ಪ್ರೋದ್ಭಾಸಿವೀಚೀ ನಿಚಯ ಘನ ಘನಾರಾವ ರೌದ್ರಂ ಸಮುದ್ರಂ

(ಕನ್ನಡ ಪದಗಳೇ ಇಲ್ಲದ ಈ ಪದ್ಯ ಪ್ರಾಚೀನ ಕನ್ನಡ ಸಾಹಿತ್ಯ ಎಷ್ಟರಮಟ್ಟಿಗೆ ಸಂಸ್ಕೃತಮಯವಾಗಿದ್ದುವು ಎಂಬುದಕ್ಕೂ ಒಂದು ದೃಷ್ಟಾಂತವಾಗುತ್ತದೆ)

ಕನ್ನಡ ಸಾಹಿತ್ಯಕೃತಿಗಳಲ್ಲಿ ಗಿರಿಜಾ ಕಲ್ಯಾಣಕ್ಕೆ ಸಂಬಂಧಿಸಿದ ಮೊತ್ತ ಮೊದಲ ಉಪಲಬ್ಧ ಕಾವ್ಯ ಹರಿಹರನ ಗಿರಿಜಾಕಲ್ಯಾಣ. ಆದರೆ ಕವಿರಾಜಮಾರ್ಗ, ಕಾವ್ಯಾವಲೋಕನ, ಶಬ್ದಮಣಿದರ್ಪಣ, ರಸರತ್ನಾಕರ ಮುಂತಾದ ಶಾಸ್ತ್ರ ಗ್ರಂಥಗಳಲ್ಲಿ, ಸೂಕ್ತಿ ಸುಧಾರ್ಣವ, ಕಾವ್ಯಸಾರವೇ ಮೊದಲಾದ ಸಂಕಲನ ಗ್ರಂಥಗಳಲ್ಲಿ ಗಿರಿಜೆಯ ವಿವಾಹ ಸಂಬಂಧವಾದ, ಇವತ್ತು ಉಪಲಬ್ಧವಾಗುವ ಯಾವ ಕೃತಿಗಳಲ್ಲೂ ಇಲ್ಲದ ಕೆಲವು ಪದ್ಯಗಳು ಕಾಣಿಸುತ್ತವೆ. ಶ್ರೀ. ಎನ್. ಅನಂತರಂಗಾಚಾರ್ ಅವರು ಮಲ್ಲಿಕಾರ್ಜುನನ 'ಸೂಕ್ತಿಸುಧಾರ್ಣವ'ದ ಪೀಠಿಕೆಯಲ್ಲಿ 'ಇವು ಹರಿಹರನ 'ಗಿರಿಜಾಕಲ್ಯಾಣ'ದ ಭಾಗಗಳಲ್ಲ. ಇದುವರೆಗೆ ಪರಿಚಿತವಾಗಿರುವ ಕನ್ನಡ ಸಾಹಿತ್ಯ ಚರಿತ್ರೆಗೆ ಅಗೋಚರವಾದವು' ಎಂದು ಬರೆಯುತ್ತಾರೆ. ಮಲ್ಲಕವಿಯು 'ಕಾವ್ಯಸಾರ'ದಲ್ಲಿ ಹರಿಹರನ 'ಗಿರಿಜಾಕಲ್ಯಾಣ'ಕ್ಕೆ ಹೊರತಾಗಿರುವ ಈ

ಪದ್ಯಗಳನ್ನು ಕುರಿತು ಅವು ಅಸಗನ 'ಕುಮಾರಸಂಭವ'ದ ಭಾಗಗಳಾಗಿರಬಹುದೇನೋ ಎಂಬ ಅನುಮಾನವನ್ನೂ ಅವರು ವ್ಯಕ್ತಪಡಿಸುತ್ತಾರೆ. ಆದರೆ ಪ್ರೊ. ಎಂ.ಎಂ.ಕಲ್ಬುರ್ಗಿಯವರು ಈ ಪದ್ಯಗಳ ಭಾಷೆ ಅಸಗನದೆಂದು ಊಹಿಸುವಷ್ಟು ಪ್ರಾಚೀನವಾಗಿಲ್ಲದಿರುವುದೂ ಅಸಗನ 'ಕುಮಾರಸಂಭವ'ದ ಕಥಾವಸ್ತುವಿನ ಬಗ್ಗೆಯೇ ಭಿನ್ನಾಭಿಪ್ರಾಯವಿರುವುದೂ ಕಾರಣವಾಗಿ ಆ ಪದ್ಯಗಳ ಆಕರದ ಬಗ್ಗೆ ನಿಖರತೆಯಿಲ್ಲವೆಂದು ಅಭಿಪ್ರಾಯಿಸುತ್ತಾರೆ. (ಕವಿರಾಜಮಾರ್ಗ ಪರಿಸರದ ಕನ್ನಡ ಸಾಹಿತ್ಯ.ಪು.207)

ಮಲ್ಲಿಕಾರ್ಜುನ ಕವಿಯ 'ಸೂಕ್ತಿ ಸುಧಾರ್ಣವ' ಪ್ರಾಚೀನ ಕನ್ನಡ ಕಾವ್ಯಗಳಲ್ಲಿ ನಿರೂಪಿತವಾದ ಅಷ್ಟಾದಶವರ್ಣನೆಗಳನ್ನು ಮಾತ್ರ ಆರಿಸಿ ಕೋದ ಪದ್ಯಮಾಲೆ. ಈ ಸಂಕಲನ ಕೇವಲ ವರ್ಣನೆಗೆ ಮೀಸಲಾಗಿದ್ದರೂ ಇದರಲ್ಲಿನ ಕೆಲವು ಪದ್ಯಗಳು ವರ್ಣನೆಗಳ ಸಾದೃಶ್ಯ ಸಂಪತ್ತಿನಿಂದ ಶಿವಪಾರ್ವತೀ ಕಥಾಸಂಬಂಧವಾದ ತುಣುಕುಗಳಾಗಿರಬಹುದೇನೋ ಎಂಬ ಅನುಮಾನವನ್ನು ಹುಟ್ಟಿಸದೆ ಇಲ್ಲ. ಪರ್ವತ ವರ್ಣನ ಭಾಗದಲ್ಲಿ ತಪಸ್ಸು ಮಾಡುವ ಯೋಗಿಯ ಚಿತ್ರಣ, (ಪ. 182, 83, 84) ಋತುವರ್ಣನ ಭಾಗದಲ್ಲಿ ಶಿವನ ತಪೋಭಂಗ ಹಾಗೂ ಕಾಮದಹನಕ್ಕೆ ಸಂವಾದಿಯಾಗಬಲ್ಲ ವರ್ಣನೆ (ಪ.206)ಗಳನ್ನು ನೋಡಬಹುದು.

11ನೆಯ ಶತಮಾನದ 2ನೆಯ ನಾಗವರ್ಮನ 'ಕಾವ್ಯಾವಲೋಕನ' ಎಂಬ ವ್ಯಾಕರಣ ಕೃತಿಯಲ್ಲಿ 'ಗಿರಿಜಾಕಲ್ಯಾಣ'ಕ್ಕೆ ಸಂಬಂಧಿಸಿದ 13 ಪದ್ಯಗಳಿವೆಯೆಂದು ವಿದ್ವಾಂಸರು ಗುರುತಿಸಿದ್ದರು. ಆದರೆ ಕೃತಿಯನ್ನು ಇನ್ನಷ್ಟು ಪರಿಶೋಧಿಸಿದಾಗ 16 ಪದ್ಯಗಳು ಗೋಚರವಾದುವು. ಮತ ಸಂಬಂಧವಾದ ತೀವ್ರ ಪೈಪೋಟಿ ಇದ್ದ ಕಾಲದಲ್ಲೂ ನಾಗವರ್ಮನಂಥ ಜೈನಕವಿಯೊಬ್ಬ ಶಿವಪಾರ್ವತಿಯರ ವಿವಾಹ ಸಂಬಂಧಿತ ಪದ್ಯಗಳನ್ನು ಉಲ್ಲೇಖಿಸಿರುವುದು ಕುತೂಹಲಕಾರಿಯಾಗಿದೆ.

'ಅಯ್ಯನೆನೆ ಬಳ್ಕಿ..', 'ಮೃಡನಾ ಗಂಗಾಂಬುಧಾರಾ..', 'ಕರೆ ಕೊರಳೊಳ್..,' 'ಸರಿಗೆಗೆ ಕೊರಲ್..', 'ಪಿಂಗೆ ಪೂಸಿದ.. ವ್ರತಕೆಂತಾಯ್ತಿೇಗಳ್, 'ತಳಿರಮೇಗಣಲರೋಳಿಗಳೋ', 'ಪಯವುಲಿಗಳ್..', 'ಮೃಡನುಡುಗಣ.' ಇತ್ಯಾದಿ ಪದ್ಯಗಳನ್ನು ಗಮನಿಸಬಹುದು. ಇವುಗಳಲ್ಲಿ

ಕೆಲವು ಪದ್ಯಾಂಶಗಳು ಕಾಳಿದಾಸನ 'ಕುಮಾರಸಂಭವ'ದ ಪದ್ಯಗಳನ್ನು ನೆನಪಿಸುತ್ತಿವೆ. ಈ ಅಂಶ ಜೈನನಾದ ಅಸಗ ಕಾಳಿದಾಸನ 'ಕುಮಾರಸಂಭವ'ಕ್ಕೆ ಮನಸೋತು ಅದನ್ನೇ ಕನ್ನಡಕ್ಕೆ ಅನುವಾದ ಮಾಡಿ ರಚಿಸಿರಬಹುದೆನ್ನುವ, ನಾಗವರ್ಮ ಅಸಗನ ಕೃತಿಯನ್ನು ತನ್ನ ಲಕ್ಷ್ಯವನ್ನಾಗಿ ಪರಿಗ್ರಹಿಸಿರಬಹುದೆನ್ನುವ ಪ್ರಮೇಯಕ್ಕೆ ಹೆಚ್ಚಿನ ಒತ್ತು ನೀಡುತ್ತದೆ. (ನೋಡಿ: ಕುಮಾರಸಂಭವ ಹಾಗೂ ಗಿರಿಜಾ ಕಲ್ಯಾಣ–ಒಂದು ತೌಲನಿಕ ಅಧ್ಯಯನ: ಡಾ ಪ್ರಮೀಳಾ ಮಾಧವ್, ಪು.261)

'ಶಬ್ದಮಣಿದರ್ಪಣ'ದಲ್ಲಿ ಲಕ್ಷ್ಯವಾಗಿ ಉದಾಹೃತವಾದ ಕೆಲವು ಪದ್ಯಗಳು ಗಿರಿಜೆಯ ವಿವಾಹಕ್ಕೆ ಸಂಬಂಧಿಸಿದ ಪದ್ಯಗಳೆಂದು ವಿದ್ವಾಂಸರು ಅನುಮಾನಿಸಿದ್ದಾರೆ. ಉದಾ: 'ಪೂವಿನ ಬಿಲ್ಲ ಕೊಪ್ಪ..', 'ಮಿರುಗುತ್ತಿರ್ಪ ತ್ರಿಶೂಲದಿಂ..', 'ಕಮ್ಮಂಗಣೆಯಿಂದೆ', 'ಕುಡುವಿಲ್ಲನೆಚ್ಚಿ..', 'ಸಾಧಿಸಿದನಿಂತು ಕಂತು–', 'ನಿಮಿರ್ದುವು ಪೊಳೆದುವು..', 'ಲಲಾಟದೊಳ್ ಮಿರುಪ..' ಮುಂತಾದ ಪದ್ಯಸಾಲುಗಳನ್ನು ನೋಡಬಹುದು. ಇವು ಹರಿಹರನ ಕಾವ್ಯದ ಪದ್ಯಗಳಲ್ಲವಾದ್ದರಿಂದ ಇವೂ ಅಜ್ಞಾತ ಕಾವ್ಯದ ತುಣುಕುಗಳಾಗಿರಬಹುದೆಂದು ಪರಿಭಾವಿಸುವುದಕ್ಕೆ ಎಡೆಯಿದೆ. (ನೋಡಿ: ಅದೇ. ಪು.262)

'ಗಿರಿಜಾಕಲ್ಯಾಣ' ಸಂಬಂಧವಾದ ಕಾವ್ಯಭಾಗಗಳೆಂದು ಖಚಿತವಾಗಿ ಊಹಿಸಬಹುದಾದ ಎರಡು ಪದ್ಯಗಳು ಸಾಳ್ವಕವಿಯ 'ರಸರತ್ನಾಕರ'ವೆಂಬ ಅಲಂಕಾರ ಗ್ರಂಥದಲ್ಲಿವೆ. ಶಿವ ಪಾರ್ವತಿಯನ್ನು ಪರೀಕ್ಷಿಸಲು ಬರುವ ಸಂದರ್ಭದಲ್ಲಿ ತನ್ನ ವೇಷವನ್ನು ಮರೆಮಾಚಿದ ವರ್ಣನೆ ಹಾಗೂ ಮನ್ಮಥ ದಹನದ ಸಂದರ್ಭದಲ್ಲಿ ರತಿಯ ಶೋಕ. ಹಾಸ್ಯಕ್ಕೂ ಮೋಹಕ್ಕೂ ಉದಾಹರಣೆಯಾಗುವ ಈ ಪದ್ಯಗಳು ಉತ್ತಮ ಸಾಹಿತ್ಯಾಭಿರುಚಿಯಿಂದಲೂ ಕೂಡಿವೆ.

ಪದ್ಯಗಳು ಹೀಗಿವೆ:

ತೊಟ್ಟಹಿಯನಿಟ್ಟು ಬೂದಿಯ
ನುಟ್ಟಜಿನವನೀಶನೆಯ್ದೆ ತನ್ನಿರವಂ ತಾಂ
ದಿಟ್ಟಿಸಿ ಮನದೊಳೆ ನಕ್ಕಂ
ಬೆಟ್ಟದ ಮಗಳಕ್ಷಿಗಿನಿದನೀಗುಮೆನುತ್ತುಂ(ಸೂ. 49, ಲಕ್ಷ್ಯ 100)

ಉರಿಗಣ್ಣಿಂ ನೆನೆವಿಲ್ಲನಂ ತಿಸುಳಿ ಸುಟ್ಟಂದಾಗಳೆಯ್ತಂದು ತ
ತ್ಸರ ದೇಹಾಕೃತಿಯಿಂದೆ ಭಸ್ಮವಿರೆ ಕಂಡಾಲಿಂಗಿಸಲ್ ಬೀಳ್ದು ಶೋ
ಕರಸಾವೇಶದೆ ಮೂರ್ಛೆವೆತ್ತು ರತಿ ತಾಂ ಪಂಚೇಂದ್ರಿಯೋನ್ಮೋಹದಿಂ
ದಿರೆ ಲೇಸಾದುದೀಕೆಗೆಳ್ಚರು ವಿಷಂ ತಾವೆಂದರಾ ಪ್ರೇಕ್ಷಕರ್ (ಪ. 20)

ಈ ಪದ್ಯಗಳು ಹರಿಹರನ ಗಿರಿಜಾ ಕಲ್ಯಾಣದಲ್ಲಿಲ್ಲವಾದ್ದರಿಂದ ಇವು ಕೂಡ ಅಜ್ಞಾತಕಾವ್ಯದ ಪದ್ಯಗಳಾಗಿರಬಹುದೆಂದು ತೀರ್ಮಾನಿಸಬಹುದು.

ಪಂಪಯುಗದ ಪೂರ್ವೋತ್ತರ ಸಾಹಿತ್ಯದ ಬಗ್ಗೆ ಇನ್ನಷ್ಟು ಸಂಶೋಧನೆಯ ಅಗತ್ಯವಿದೆ. ಸಂಶೋಧನೆ ನಡೆಯುತ್ತಲೂ ಇದೆ. ವಿದ್ವಾಂಸರು ಪಂಪಪೂರ್ವ ಯುಗದಲ್ಲಿ ಈಗಾಗಲೇ ಸುಮಾರು 60ಕ್ಕೂ ಹೆಚ್ಚು ಕೃತಿಕಾರರು ಆಗಿಹೋಗಿದ್ದಾರೆಂದೂ ಆದರೆ ಅವರ ಕೃತಿಗಳು ಯಾವುದೂ ಸಿಗಲಿಲ್ಲವೆಂದೂ ವಿಷಾದಿಸುತ್ತ ಕನ್ನಡ ಸಾಹಿತ್ಯದ ಆರಂಭದ ಘಟ್ಟವನ್ನು ಕಾವೇರಿ ನದಿಗೆ ಹೋಲಿಸಿರುವುದು ಉಚಿತವಾಗಿದೆ. ಕಾವೇರಿ ನದಿ ಕರ್ನಾಟಕದ ಕೊಡಗು ಜಿಲ್ಲೆಯ ಬ್ರಹ್ಮಗಿರಿ ಬೆಟ್ಟದಲ್ಲಿ ಹುಟ್ಟಿದರೂ ಅದರ ಆರಂಭದ ಹರಿವು ಎಲ್ಲಿ ಎಂಬುದು ಕಾಣುವುದಿಲ್ಲ. ಆದರೆ ನದೀಪಾತ್ರ ಅಂತರ್ಗಾಮಿಯಾಗಿ ಹರಿದು ತಲಕಾವೇರಿಯಲ್ಲಿ ಒಮ್ಮೆಗೇ ಸಮೃದ್ಧವಾಗಿ ಗೋಚರಿಸುತ್ತದೆ. ಹಾಗೆಯೇ ಆರಂಭದ ಕನ್ನಡ ಸಾಹಿತ್ಯ ಕೃತಿಗಳು ಕಾಲಗರ್ಭದೊಳಗೆ ಹುದುಗಿ ಅಗೋಚರವಾಗಿದ್ದರೂ ಹತ್ತನೆಯ ಶತಮಾನದಲ್ಲಿ ಸಮೃದ್ಧವಾದ ರಚನೆ ಕಾಣಿಸುತ್ತವೆ. ಒಟ್ಟಿನಲ್ಲಿ ಅತ್ಯಂತ ಪ್ರಾಚೀನ ಕಾಲದಿಂದಲೇ ಕನ್ನಡ ಸಾಹಿತ್ಯ ಅತ್ಯಂತ ಶ್ರೀಮಂತವೂ ಸಂಪದ್ಭರಿತವೂ ಆಗಿ ಬೆಳೆದು ಬಂದಿದೆಯೆಂದು ಅಭಿಮಾನಿಸುತ್ತ ಕತ್ತಲೆಯ ಗರ್ಭದಲ್ಲಿ ಕಳೆದುಹೋಗಿರುವ ಕೃತಿಗಳೆಲ್ಲ ಬೆಳಕಿನ ಲೋಕಕ್ಕೆ ಬರಲಿ, ಕನ್ನಡಿಗರ ಅಭಿಮಾನವನ್ನು ಇನ್ನಷ್ಟು ವರ್ಧಿಸಲಿ ಎಂದು ಹಾರೈಸೋಣ.

****

ಹಂಪನಾ ಹೊಸ ಶೋಧ :
ಕನ್ನಡದ ಆದಿಕವಿ ಶ್ರೀವಿಜಯ

– ಡಾ. ಜಿ.ಎನ್.ಉಪಾಧ್ಯ, ಮುಂಬೈ

"ಕನ್ನಡದ ಆದಿಕವಿ ಪಟ್ಟವನ್ನು ಶ್ರೀವಿಜಯನಿಗೆ ಕಟ್ಟಬೇಕು. ಅದರಲ್ಲಿ ಅರ್ಥವಿದೆ; ಔಚಿತ್ಯವಿದೆ. ಪಂಪ ಕನ್ನಡದ ಅಗ್ರಗಣ್ಯ ಮಹಾಕವಿ. ಅದು ನಿರ್ವಿವಾದವಾಗಿ ಸ್ಥಾಪಿತವಾಗಿದೆ. ಅದರ ಜತೆಗೆ ಶ್ರೀವಿಜಯನು ಕನ್ನಡ ಸಾಹಿತ್ಯದ ಆದಿಕವಿ ಎಂಬುದೂ ಮಾನ್ಯವಾಗಬೇಕು"

– ನಾಡೋಜ ಪ್ರೊ. ಹಂಪನಾ

ಕನ್ನಡದ ಆದಿಕವಿ ಯಾರು? ಎಂಬ ಪ್ರಶ್ನೆಗೆ ಸಿಗುವ ಉತ್ತರ 'ಪಂಪ' ಎಂಬುದಾಗಿ. 'ಆದಿಪುರಾಣ' ಮತ್ತು 'ವಿಕ್ರಮಾರ್ಜುನ ವಿಜಯ' ಎಂಬ ಎರಡು ಮಹಾಕಾವ್ಯಗಳನ್ನು ಬರೆದ ಪಂಪನೇ ಕನ್ನಡ ಸಾಹಿತ್ಯದ 'ಆದಿಕವಿ' ಎಂಬ ನಂಬಿಕೆ ಚಾಲ್ತಿಯಲ್ಲಿದೆ. ಈ ತಿಳಿವಳಿಕೆ ನೂರಾರು ವರ್ಷಗಳಿಂದ ಬೆಳೆದು ಬಲವಾಗಿ ಬೇರುಬಿಟ್ಟಿರುವುದು ಎಲ್ಲರಿಗೂ ಗೊತ್ತಿರುವ ಸಂಗತಿ. ಆದರೆ ಕನ್ನಡದ ಆದಿಕವಿ ಯಾರು? ಆದಿಕವಿ 'ಪಂಪ' ಎಂಬ ಮಾತು ದಿಟವೆ, ಸರಿಯೆ? ಎಂಬುದನ್ನು ಇತ್ತೀಚೆಗೆ ನಾಡಿನ ಖ್ಯಾತ ಸಂಶೋಧಕರೂ ವಿದ್ವಾಂಸರೂ ಆದ ನಾಡೋಜ ಪ್ರೊ. ಹಂಪನಾ ಅವರು ಸಮಗ್ರವಾಗಿ ಸಾಕಲ್ಯವಾಗಿ ಪರಿಶೀಲಿಸಿ ಶ್ರೀವಿಜಯನೇ ಕನ್ನಡದ ಆದಿಕವಿ ಎಂಬುದನ್ನು ಖಚಿತಪಡಿಸಿದ್ದಾರೆ.

'ಸಮಸ್ತ ಕನ್ನಡ ಸಾಹಿತ್ಯ ಜಗತ್ತು ಪ್ರಾಚೀನ ಸೂರಿ ಶ್ರೇಷ್ಠನಾದ ಶ್ರೀವಿಜಯನ ಪ್ರಭಾವದ ಫಲ'. ಆತನೇ ಕನ್ನಡದ ಆದಿಕವಿ ಎಂಬುದರಲ್ಲಿ ಯಾವುದೇ ಅನುಮಾನಗಳಿಲ್ಲ. ಆತನ ಕವಿರಾಜಮಾರ್ಗ ಕೃತಿಯ ನೆಲೆ-ಬೆಲೆಗಳನ್ನು ಹೊಸ ತಿಳಿವಳಿಕೆಯ ಬೆಳಕಿನಲ್ಲಿ ಮರುಚಿಂತನೆಗೊಳಪಡಿಸಿದ ಶ್ರೇಯಸ್ಸು ಪ್ರೊ. ಹಂಪನಾ ಅವರಿಗೆ ಸಲ್ಲುತ್ತದೆ. ಶ್ರೀವಿಜಯ ವಿರಚಿತ ಕವಿರಾಜಮಾರ್ಗದ ಹೊಸ ಆವೃತ್ತಿಯನ್ನು ಸಂಪಾದಿಸಿರುವ ಅವರು ಹೊಸ ಶೋಧದ ಬೆಳಕಿನಲ್ಲಿ ಅನೇಕ ಮಹತ್ವದ ಸಂಗತಿಗಳನ್ನು ಮುನ್ನೆಲೆಗೆ ತಂದು ಚರ್ಚಿಸಿದ್ದಾರೆ. (ಹೆಚ್ಚಿನ ಮಾಹಿತಿಗೆ ನೋಡಿ ಶ್ರೀವಿಜಯ ವಿರಚಿತ ಕವಿರಾಜ ಮಾರ್ಗಂ, ಸಪ್ನ ಬುಕ್‌ಹೌಸ್, ಬೆಂಗಳೂರು)

ಕವಿರಾಜಮಾರ್ಗ ಕವಿಗಳ ಕೈಗನ್ನಡಿ, ಕೈದೀವಿಗೆ. ಶ್ರೀವಿಜಯನು ಕನ್ನಡದ ದಂಡಿ, ಭಾಮಹ ಆಗಿರುವುದಲ್ಲದೆ, ಆದಿಕವಿಯೂ ಆಗಿದ್ದಾನೆ ಎಂಬುದನ್ನು ಸೂಕ್ತ ಆಧಾರಗಳೊಂದಿಗೆ ನಿರೂಪಿಸಿದ್ದಾರೆ. ಪಂಪ, ಪೊನ್ನ, ರನ್ನರೆಲ್ಲರೂ ಶ್ರೀವಿಜಯನಿಂದ ಪ್ರಭಾವಿತರೆಂಬುದನ್ನು ವಿವರಿಸಿದ್ದಾರೆ. ಆತನ ಅನುಪಲಬ್ಧ ಚಂಪೂ ಕಾವ್ಯಗಳಾದ ರಘುವಂಶ ಪುರಾಣ ಮತ್ತು ಚಂದ್ರಪ್ರಭ ಪುರಾಣದ ಕೆಲವು ಪದ್ಯಗಳು ಈ ಕವಿರಾಜಮಾರ್ಗದಲ್ಲಿ ಸೇರಿವೆಯೆಂಬುದನ್ನು ತೋರಿಸಿಕೊಟ್ಟಿದ್ದಾರೆ. ಶ್ರೀವಿಜಯನು ಎರಡೂ ಕಾವ್ಯಗಳನ್ನು ಮೊದಲು ರಚಿಸಿ ಅನಂತರ ಕವಿರಾಜಮಾರ್ಗವನ್ನು ಬರೆದಿರುವ ಸಾಧ್ಯತೆಗಳಿವೆ. ಸಂಸ್ಕೃತ ಲಕ್ಷಣ ಶಾಸ್ತ್ರವರೇಣ್ಯ ಆನಂದವರ್ಧನ, ಉಭಯ ಭಾಷಾಕವಿ ಅಸಗ ಮತ್ತು ಕನ್ನಡ ಸಾಹಿತ್ಯ ಲಲಾಮ ಶ್ರೀವಿಜಯ- ಈ ಮೂವರೂ ಸಮಕಾಲೀನ ಪ್ರತಿಭಾಶಾಲಿಗಳು. ಅಸಗನು ಸಂಸ್ಕೃತದಲ್ಲಿ ಆಗಮಿಕ ಕಾವ್ಯಗಳನ್ನೂ ಕನ್ನಡದಲ್ಲಿ ಕರ್ಣಾಟ ಕುಮಾರಸಂಭವ ಎಂಬ ಲೌಕಿಕ ಕಾವ್ಯವನ್ನೂ ರಚಿಸಿದ್ದಾನೆ. ಲೌಕಿಕ-ಆಗಮಿಕ ಎಂಬ ಗಂಡಭೇರುಂಡ ಕಾವ್ಯ ಪದ್ಧತಿಯನ್ನು ಒಂಬತ್ತನೆಯ ಶತಮಾನದಲ್ಲಿ ಶ್ರೀವಿಜಯ ಮತ್ತು ಅಸಗ ಪ್ರಾರಂಭಿಸಿದರು. ಗುಣವರ್ಮ, ಪಂಪ, ಪೊನ್ನ, ರನ್ನ ಮುಂದುವರಿಸಿದರು. (ಅದೇ ಅರಿಕೆಯಲ್ಲಿ).

ನಮ್ಮ ನಾಡಿನ ವಿದ್ವಾಂಸರು ಕವಿರಾಜಮಾರ್ಗವನ್ನು ಶತಮಾನಗಳಿಂದಲೂ ಕನ್ನಡದ ಆದ್ಯಕೃತಿಯೆಂದು ಗುರುತಿಸಿ ಗೌರವಿಸುತ್ತಾ

ಬಂದಿದ್ದಾರೆ. ಈ ಶಾಸ್ತ್ರ ಗ್ರಂಥವನ್ನು ಮೊಟ್ಟ ಮೊದಲು ಕೆ. ಬಿ. ಪಾಠಕ ಅವರು ಸಂಪಾದಿಸಿ ಹೊರತಂದರು. ಅ ಬಳಿಕ ನಾಡಿನ ಗಣ್ಯ ಸಂಶೋಧಕರಾದ ವೆಂಕಟರಾವ್, ಶೇಷಯ್ಯಂಗಾರ್, ಎಂ.ವಿ. ಸೀತಾರಾಮಯ್ಯ, ಕೆ. ಕೃಷ್ಣಮೂರ್ತಿ, ವೆಂಕಟಾಚಲ ಶಾಸ್ತ್ರಿ ಮೊದಲಾದವರ ಸಂಪಾದಕತ್ವದಲ್ಲಿ ಪ್ರಕಟವಾಗಿದೆ. ಈಗ ಅದರ ಆಧುನಿಕ ಅಧ್ಯಯನಕ್ಕೆ 125 ವರ್ಷ. ಈ ಸುಸಂದರ್ಭದಲ್ಲಿ ಪ್ರೊ. ಹಂಪನಾ ಅವರ ಸಂಪಾದನ ಕೃತಿ ಕನ್ನಡದ ಆದಿಕವಿ 'ಶ್ರೀವಿಜಯ' ಎಂಬ ಮಹತ್ವದ ಸಂಗತಿ ಹೊಸ ಸಂವಾದಕ್ಕೆ ಇಂಬು ಕೊಟ್ಟಿದೆ. ಕವಿರಾಜಮಾರ್ಗವನ್ನು ಬರೆದವನು ಅಮೋಘ ವರ್ಷ ನೃಪತುಂಗನೋ ಅಥವಾ ಅವನ ಆಸ್ಥಾನ ಕವಿ ಶ್ರೀವಿಜಯನೋ (810–880) ಎಂಬ ಚರ್ಚೆಗಳೆಲ್ಲ ಈಗ ನಿಂತು ಹೋಗಿ ಅದನ್ನು ಬರೆದವನು 'ಶ್ರೀವಿಜಯ' ಎಂಬ ಮಾತು ಈಗ ಜನಜನಿತವಾಗಿದೆ. ಆದರೆ ಪ್ರೊ. ಹಂಪನಾ ಅವರು ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಶ್ರೀವಿಜಯನ ಪ್ರತಿಭೆ, ಸಾಹಿತ್ಯ ಸಾಧನೆಗಳನ್ನೆಲ್ಲ ಸಾಧಾರವಾಗಿ ಇಲ್ಲಿ ಬೆಳಕಿಗೆ ಹಿಡಿದಿದ್ದಾರೆ. ತಮ್ಮ ಹೊಸ ಶೋಧ ಹಾಗೂ ವಿಶ್ವಾಸಾರ್ಹ ಆಕರಗಳ ಬೆಳಕಿನಲ್ಲಿ ಆದಿಕವಿಯೆಂಬ ಪಟ್ಟ ದಿಟವಾಗಿ ಸಲ್ಲಬೇಕಾದುದು ಶ್ರೀವಿಜಯನಿಗೆ ಎಂಬುದನ್ನು ರುಜುವಾತು ಪಡಿಸಿದ್ದಾರೆ. 14ನೆಯ ಶತಮಾನದಲ್ಲಿದ್ದ 'ಧರ್ಮನಾಥ ಪುರಾಣಂ' ಕೃತಿಯನ್ನು ರಚಿಸಿದ ಮಧುರಕವಿ ಪಂಪನನ್ನು ಮೊದಲ ಬಾರಿಗೆ ಆದಿಕವಿ ಎಂದು ಕರೆದು ಗೌರವಿಸಿದ. ಮಧುರ ಕವಿಯ ಮಾತಿನಿಂದ ತರುವಾಯದ ತಲೆಮಾರಿನ ಸೂರಿಗಳು ಪ್ರಭಾವಿತರಾದರು. ಆ ಘೋಷವಾಕ್ಯ ಹೇಗೆ ದಾರಿತಪ್ಪಿಸಿತು ಎಂಬುದನ್ನು ಈ ಕೃತಿಯಲ್ಲಿ ಪ್ರೊ. ಹಂಪನಾ ಅವರ ಸವಿವರವಾಗಿ ದಾಖಲಿಸಿ ನಮ್ಮ ದೃಷ್ಟಿ ತಿದ್ದುವ ಕೆಲಸವನ್ನು ಮಾಡಿದ್ದಾರೆ. ಅದು ಹೀಗಿದೆ–

ಕವಿರಾಜಮಾರ್ಗ ಪ್ರಾಚೀನವಾದರೂ ಶಾಸ್ತ್ರಕೃತಿಯಾದ ಕಾರಣ ಶ್ರೀವಿಜಯನನ್ನು ಆದಿಕವಿಯೆಂದು ಪರಿಗಣಿಸಲಾಗದೆಂದು ಪಕ್ಕಕ್ಕೆ ಸರಿಸಲಾಯಿತು. ಈಗ ಪ್ರಾಪ್ತವಾಗಿರುವ ಅನ್ಯಾನ್ಯ ಪೂರಕ ಆಧಾರಗಳ ಪರಿಪ್ರೇಕ್ಷ್ಯದಲ್ಲಿ ನಿಲ್ಲಿಸಿ ಮರುಪರಿಶೀಲಿಸಬೇಕಾದ ಜರೂರು ಇದೆ. ಶ್ರೀವಿಜಯನು ಶುಷ್ಕ ವೈಯಾಕರಣನಲ್ಲ. ಆತನಲ್ಲಿ ಶಾಸ್ತ್ರ ಜಡತೆಯಿಲ್ಲ.

ಸೃಜನ ಸಾಮರ್ಥ್ಯ ಬತ್ತಿಲ್ಲ. ಇದಕ್ಕೆ ತಕ್ಕ ಸಾಕ್ಷಿ ಕವಿರಾಜಮಾರ್ಗದಲ್ಲಿದೆ. ನೂರು ವರ್ಷದ ವೇಳೆಗಾಗಲೇ ಆತ ಕವಿಗಳ ಆರಾಧ್ಯ ದೈವವಾಗಿ ಬೆಳೆದಿದ್ದ. ರನ್ನನು ಶ್ರೀಯುತರು ಉದಾರಿಗಳಾಗಬೇಕೆಂದೂ ವಾಕ್ ಶ್ರೀಯುತರು ಅವುತ್ಸರರಾಗಬೇಕೆಂದೂ ಹೇಳಿದ್ದ. ಅದಕ್ಕೆ ನಿದರ್ಶನವೆಂಬಂತಿರುವ ದುರ್ಗಸಿಂಹನು ಹೊಟ್ಟೆಕಿಚ್ಚು ಹತ್ತಿರ ಸುಳಿಯಗೊಡದ ಹಿರಿಯ ಕವಿ. ಪಂಚತಂತ್ರ ಕಾವ್ಯದಲ್ಲಿ ಶ್ರೀವಿಜಯನ ಪ್ರತಿಮೆಯನ್ನು ನಿಲ್ಲಿಸಿದ್ದಾನೆ. ಶ್ರೀವಿಜಯನು ಅನೇಕ ಪ್ರಥಮಗಳ ಸರದಾರ. ಆತನ ಕೃತಿಯ ಆಯಾಮ, ಅನನ್ಯತೆಗಳನ್ನು ವಿದ್ವತ್ ವಲಯ ಗುರುತಿಸುತ್ತ ಬಂದಿದೆ. ಆಶ್ರಿತ ಕವಿಯಾದರೂ ಪರಮಾಗಮ ಕೋವಿದನೂ ವಾಗ್ ವಿದಗ್ಧತಾ ನಿಪುಣನೂ ಆದ ಶ್ರೀವಿಜಯ; ಆಶ್ರಯದಾತನಾದರೋ ನರಲೋಕ ಚಂದ್ರನೂ (1–23) ವಿವೇಕ ಬೃಹಸ್ಪತಿಯೂ (1–6) ಆದ ನೃಪತುಂಗದೇವ.

ಶ್ರೀವಿಜಯ ಶೂನ್ಯಸ್ಥಿತಿಯಲ್ಲಿ ಕಾವ್ಯ ಸೃಷ್ಟಿಸಲಿಲ್ಲ. ಆತ ಸಾಹಿತ್ಯವೇದಿಕೆ ಹತ್ತುವ ವೇಳೆಗೆ ಕನ್ನಡ ಕಾವ್ಯಕ್ಷೇತ್ರ ಹದವಾಗಿತ್ತು. ಗದ್ಯ-ಪದ್ಯ ಕೃತಿಗಳು ಹೊರಬಂದಿದ್ದುವು. ಕೆಲವು ಪ್ರಮುಖ ಲೇಖಕರನ್ನು ಸಹ ಕವಿರಾಜಮಾರ್ಗದಲ್ಲಿ ಹೆಸರಿಸಿದ್ದಾನೆ. ಆತನ ವಿದ್ಯಾಗುರುಗಳು ಜಿನಸೇನಾಚಾರ್ಯರು. ಅಸಗ ಮತ್ತು ಶ್ರೀವಿಜಯ ಸಮಕಾಲೀನರು ಹಾಗೂ ಉತ್ತರಪುರಾಣದ ಗುಣಭದ್ರಾಚಾರ್ಯರು ಕಿರಿಯ ಸಮಕಾಲೀನರು. ಅಸಗನು ಸಂಸ್ಕೃತದಲ್ಲಿ ಸನ್ಮತಿ ಚರಿತೆ (ವರ್ತಮಾನ) ಪುರಾಣ, ಶಾಂತಿಪುರಾಣ ಮೊದಲಾದ ಪುರಾಣಗಳನ್ನು ಮತ್ತು ಕನ್ನಡದಲ್ಲಿ ಕರ್ನಾಟ ಕುಮಾರಸಂಭವ (ಸಿಕ್ಕಿಲ್ಲ) ರಚಿಸಿದನು. ಶ್ರೀವಿಜಯನು ಚಂದ್ರಪ್ರಭಾ ಪುರಾಣ ಮತ್ತು ರಘುವಂಶ ಪುರಾಣ ರಚಿಸಿದನು.

ಸಮಕಾಲೀನ ರಾಜನನ್ನೂ ರಾಜಕೀಯ ಸಂಗತಿಗಳನ್ನೂ ಹಾಸುಹೊಕ್ಕಾಗಿ ಕಾವ್ಯದಲ್ಲಿ ಹೆಣೆಯುವ ಪರಿಪಾಟಿಗೆ ಮಾರ್ಗ ತೋರಿದ್ದು, ಸಂಸ್ಕೃತ ಕವಿಗಳನ್ನು ನೆನೆಯುವ ಮೇಲ್ಪಂಕ್ತಿ ಹಾಕಿದ್ದು ಶ್ರೀವಿಜಯನೇ. ಆತ ರಘುವಂಶ ಪುರಾಣ ಬರೆದನೆಂಬುದಕ್ಕೆ ಕವಿರಾಜಮಾರ್ಗದಲ್ಲಿ ಸುಳಿವು ಉಂಟೋ ಎಂದು ನೋಡಿದರೆ ಸಮೃದ್ಧ ಸಾಮಗ್ರಿ ಸಿಗುತ್ತದೆ.

ಚಂದ್ರಪ್ರಭ ಪುರಾಣಕ್ಕೆ ಸಂಬಂಧಪಟ್ಟ ಸೂಚನೆ ಇದೆಯೊ ಎಂದರೆ ಅದಕ್ಕೂ ತೆಳುವಾದ ಮಾಹಿತಿಸಿಗುತ್ತದೆ. ಹೀಗಾಗಿ ಶ್ರೀವಿಜಯನ ಅನುಪಲಬ್ಧ ಎರಡೂ ಕಾವ್ಯಗಳಿಗೆ ಉಪಲಬ್ಧ ಕವಿರಾಜಮಾರ್ಗವೇ 'ಕೈದೀವಿಗೆಯುಂ ಕನ್ನಡಿಯುಂ' ಆಗಿದೆ. ಪಂಪಪೂರ್ವ ಯುಗದ, ಅದರಲ್ಲಿಯೂ ಒಂಬತ್ತನೆಯ ಶತಮಾನದ ಕನ್ನಡ ಸಾಹಿತ್ಯ ಪರಿಸರವನ್ನು ಪುನಾರಚಿಸಲು ಬೇಕಾಗುವ ಪೂರಕ ಆಕರಗಳನ್ನು ಈ ಹೊತ್ತಗೆಯು ಪೂರೈಸುವುದರೊಂದಿಗೆ ಹೊಸ ಬೆಳಕನ್ನು ಹಾಯಿಸುತ್ತದೆ. ಕವಿರಾಜಮಾರ್ಗದಲ್ಲಿ ಏಕೆ ತನ್ನೀ ಕಾವ್ಯಗಳನ್ನು ಹೆಸರಿಸಿಲ್ಲ ಎಂಬ ಕೇಳ್ವಿಗೆ ಮಾರ್ನುಡಿ ಕೊಡಬೇಕು. ವಾಸ್ತವವೆಂದರೆ ಕವಿರಾಜಮಾರ್ಗ ಶ್ರೀವಿಜಯನ ಮೊದಲ ಕೃತಿ. ಆತನ ಸಾಹಿತ್ಯ ಯಾನದಲ್ಲಿ ಇದು ಪೂರ್ವರಂಗ. ಇದರ ರಚನೆಯಲ್ಲಿ ನಡೆಸಿದ ತಾಲೀಮಿನ ಫಲವಾಗಿ ಇನ್ನೆರಡು ಕಾವ್ಯಗಳನ್ನು ಬರೆಯಲು ಸ್ಫೂರ್ತಿ ಬಂದಿತು. ಅದರಿಂದ ಕವಿರಾಜಮಾರ್ಗ ಶ್ರೀವಿಜಯನಿಗೊಂದು ಚಿಮ್ಮುಹಲಗೆಯಾಯಿತು.

ಹೀಗೆ ವಿಪುಲ ಆಕರ ಸಾಮಗ್ರಿಗಳ ನೆರವಿನೊಂದಿಗೆ ಪ್ರೊ. ಹಂಪನಾ ಅವರು ಶ್ರೀವಿಜಯನ ಕವಿ ಪ್ರತಿಭೆಯ ಮೇಲೆ ಹೊಸಬೆಳಕು ಹಾಯಿಸಿದ್ದಾರೆ. "ಆದಿಕವಿ ಪಟ್ಟವನ್ನು ಶ್ರೀವಿಜಯನಿಗೆ ಕಟ್ಟಬೇಕು. ಅದರಲ್ಲಿ ಅರ್ಥವಿದೆ, ಔಚಿತ್ಯವಿದೆ. ಶ್ರೀವಿಜಯ ಎಂಬುದು ಕವಿಯ ಹೆಸರು. ಆತನು ತನ್ನ ಸಮಕಾಲೀನರ ಮನ್ನಣೆ ಗಳಿಸಿದ್ದು ಪರಮಶ್ರೀವಿಜಯನೆಂಬ ಗೌರವ ಸಂಬೋಧನೆಗೆ ಪಾತ್ರನಾಗಿದ್ದನು. ಅಂದಿನ ಕವಿಗಳಲ್ಲಿ ಹಿರಿಯನಾಗಿದ್ದು ಕವೀಶ್ವರನೆನಿಸಿದ್ದನು" ಎಂಬುದನ್ನು ಪ್ರೊ. ಹಂಪನಾ ಅವರು ಇಲ್ಲಿ ಎತ್ತಿ ಹಿಡಿದಿದ್ದಾರೆ. ಹೊಸ ಶೋಧ ಹೊಸ ವಿಚಾರಗಳಿಂದ ಕೂಡಿರುವ ಅವರ ಈ ಕೃತಿ ಚಿಂತನೆ ಕನ್ನಡ ನಾಡಿನ ಸಾಂಸ್ಕೃತಿಕ ಲೋಕದ ಮುಚ್ಚಿದ ಬಾಗಿಲುಗಳನ್ನು ತೆರೆದು ಹೊಸ ಬೆಳಕು ಹಾಯಿಸಿದೆ.

****

ಕವಿರಾಜಮಾರ್ಗ

ಪಿ.ವಿ. ನಾರಾಯಣ್ ಪ್ರಧಾನ್,
ಬೆಂಗಳೂರು

ಸದ್ಯಕ್ಕೆ ಕನ್ನಡದಲ್ಲಿ ಉಪಲಬ್ಧವಾಗಿರುವ ಮೊಟ್ಟ ಮೊದಲ ಗ್ರಂಥ 'ಕವಿರಾಜಮಾರ್ಗ'. ಕನ್ನಡ ಸಾಹಿತ್ಯದಲ್ಲಿಯೂ ಕನ್ನಡ ಕಾವ್ಯಮೀಮಾಂಸೆಯ ಬೆಳವಣಿಗೆಯಲ್ಲಿಯೂ ಈ ಕೃತಿಗೆ ಅತ್ಯಂತ ಮಹತ್ವದ ಸ್ಥಾನವಿದೆ. ಇದು ಕಾವ್ಯಶಾಸ್ತ್ರವನ್ನು ನಿರೂಪಿಸುವ ಸ್ವತಂತ್ರ ದೃಷ್ಟಿಯ ಲಕ್ಷಣಗ್ರಂಥ. ಲಕ್ಷ್ಯಗಳಿಲ್ಲದ ಲಕ್ಷಣಗ್ರಂಥ ಇರಲು ಸಾಧ್ಯವಿಲ್ಲ. ಅಂದರೆ ಈ ಹೊತ್ತಿಗೆ ಕನ್ನಡ ಸಾಹಿತ್ಯವು ಒಂದು ಗಣನೀಯ ಹಂತದ ಬೆಳವಣಿಗೆಯನ್ನು ಕಂಡಿತ್ತೆಂದು ಹೇಳಬಹುದು. ಅಂದರೆ ಈ ಕೃತಿಯು ತನ್ನ ಹಿಂದಿನ ಗಣ್ಯ ಕನ್ನಡ ಕೃತಿಗಳನ್ನು ಲಕ್ಷಿಸಿಯೇ ರಚಿತವಾಗಿದೆ ಎನ್ನಬಹುದು. ಇದರಿಂದಾಗಿ ಆ ಹಿಂದಿನ ಕನ್ನಡ ಸಾಹಿತ್ಯ ಚರಿತ್ರೆಯನ್ನು ಕಟ್ಟಿಕೊಡಲೂ ಈ ಕೃತಿಯು ಗಣನೀಯ ನೆರವನ್ನು ನೀಡುತ್ತದೆ. ಅಲ್ಲದೆ ಭಾಷೆಯ ಬಗೆಗಿನ ಅನೇಕ ಒಳನೋಟಗಳು, ಅಲಂಕಾರಾದಿ ಕಾವ್ಯಪರಿಕರಗಳ ಬಗೆಗಿನ ವಿಶ್ಲೇಷಣೆಗಳು ಇವುಗಳಿಂದಾಗಿ 'ಕವಿರಾಜಮಾರ್ಗ'ವು ಮುಂದಿನ ಕೃತಿಗಳಿಗೆ ಮಾರ್ಗದರ್ಶಕವಾಗಿರಲೂ ಸಾಕು; ಮತ್ತು ಹಾಗೆ ಆಗಿಯೂ ಇದೆ. ಅಂದರೆ 'ಕವಿರಾಜಮಾರ್ಗ'ವು ತನ್ನ ಹಿಂದಿನ ಮತ್ತು ಮುಂದಿನ ಕನ್ನಡ ಸಾಹಿತ್ಯದ ಬೆಳವಣಿಗೆಗೆ ಹಿಡಿದ ಕನ್ನಡಿ ಹಾಗೂ ತೋರಿದ ದಾರಿದೀಪ. ಇದರಿಂದಾಗಿಯೇ ಈ

ಕೃತಿಗೆ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಅತ್ಯಂತ ಗಣನೀಯ ಸ್ಥಾನವಿದೆ.

'ಕವಿರಾಜಮಾರ್ಗ'ವು ರಾಷ್ಟ್ರಕೂಟ ಚಕ್ರವರ್ತಿ ನೃಪತುಂಗನ ಕಾಲದಲ್ಲಿ ರಚಿತವಾದುದು ಎಂಬುದು ನಿರ್ವಿವಾದವಾದ ಅಂಶ. ಅವನ ಆಳ್ವಿಕೆಯ ಕಾಲವು ಕ್ರಿಸ್ತ ಶಕ 814 ರಿಂದ 877; ಅಂದರೆ ಅವನು 65 ವರ್ಷಗಳಷ್ಟು ದೀರ್ಘಕಾಲ ಆಳ್ವಿಕೆಯನ್ನು ನಡೆಸಿದ. ಈ ಕೃತಿಯಲ್ಲಿಯೂ ಅನೇಕ ಶಾಸನಗಳಲ್ಲಿಯೂ ಅಮೋಘವರ್ಷ ನೃಪತುಂಗನನ್ನು ಅತಿಶಯಧವಳ, ಲಕ್ಷ್ಮೀವಲ್ಲಭ, ಪೃಥ್ವೀವಲ್ಲಭ, ಕೃತಕೃತ್ಯಮಲ್ಲ, ವೀರನಾರಾಯಣ ಎಂದು ಬಣ್ಣಿಸಲಾಗಿದೆ. ಅವನು ಹೀಗಾಗಲು ಕಾರಣ ಒಂದೇ ಸಮಯಕ್ಕೆ ಅವನು ಒಳಗಿನ ಹಾಗೂ ಹೊರಗಿನ ಶತ್ರುಗಳ ಜೊತೆ ಹೋರಾಡಿ ಅವರನ್ನು ಸದೆಬಡಿದದ್ದು. ಅವನ ರಾಜಕೀಯದ ಮುಖ್ಯಾಂಶಗಳನ್ನು 'ಕವಿರಾಜಮಾರ್ಗ'ದಲ್ಲಿ ಉಲ್ಲೇಖಿತವಾಗಿರುವ ಲಕ್ಷ್ಯಪದ್ಯಗಳಲ್ಲಿ ಕಾಣಬರುವ 'ರಾಜಕೀಯ ಧ್ವನಿ'. ಇಂತಹ ಕೀರ್ತಿಗೆ ಭಾಜನನಾಗಲು ಅವನಿಗೆ ಪಟ್ಟಕ್ಕೆ ಬಂದು ಇಪ್ಪತ್ತೈದು ಮೂವತ್ತು ವರ್ಷಗಳಾದರೂ ಹಿಡಿಸಿರಬೇಕು. ಅಂದರೆ ಈ ಕೃತಿಯು ಕ್ರಿಸ್ತಶಕ 860ರ ಸುಮಾರಿನಲ್ಲಿ ರಚಿತವಾಗಿರಬೇಕು ಎಂದು ವಿದ್ವಾಂಸರು ತೀರ್ಮಾನಿಸುತ್ತಾರೆ.

ಇಂತಹ ಮಹತ್ವದ ಕೃತಿಯ ಕರ್ತೃ ಯಾರು ಎಂಬ ಬಗ್ಗೆ ದೊಡ್ಡ ಜಿಜ್ಞಾಸೆ ಬಹಳ ಕಾಲ ಮುಂದುವರೆಯಿತು. ಮೊದಲ ಬಾರಿಗೆ ಕೃತಿಯನ್ನು ಸಂಪಾದಿಸಿ 1898ರಲ್ಲಿ ಪ್ರಕಟಿಸಿದ ಕೆ.ಬಿ. ಪಾಠಕರಿಂದ ಹಿಡಿದು ಇತ್ತೀಚಿನವರೆಗೆ ಕರ್ತೃತ್ವದ ಬಗ್ಗೆ ವಾದವಿವಾದಗಳು ನಡೆಯುತ್ತಲೇ ಬಂದು ಈಗ ಒಂದು ಒಂದು ನಿಲುಗಡೆಯನ್ನು ತಲುಪಿದಂತಾಗಿದೆ. ಡಾ। ಜೆ. ಎಫ್. ಫ್ಲೀಟ್ 1904 ರಲ್ಲಿ 'ಇಂಡಿಯನ್ ಆಂಟಿಕ್ವರಿ'ಯಲ್ಲಿ 'ಕವೀಶ್ವರನ ಕವಿರಾಜಮಾರ್ಗ' ಎಂಬ ಲೇಖನದಲ್ಲಿ ಈ ಕೃತಿಯ ಕರ್ತೃ ನೃಪತುಂಗನ ಸಭಾಸದ 'ಕವೀಶ್ವರ' ಎಂಬ ವಾದವನ್ನು ಮುಂದಿರಿಸಿದರು. ಕವಿಚರಿತೆಕಾರರು "ಗ್ರಂಥವು ನೃಪತುಂಗ ಕೃತವೆಂದು ಪ್ರತೀತಿಯಿದ್ದರೂ ಶ್ರೀವಿಜಯಕೃತವೋ ಎಂದು ಸಂದೇಹಪಡುವುದಕ್ಕೆ ಅವಕಾಶವಿದೆ" ಎಂಬ ಸಕಾರಣವಾದ ಅನುಮಾನವನ್ನು ಮುಂದಿಟ್ಟರು; ಜೊತೆಗೆ ನೃಪತುಂಗನಿಗೇ ಶ್ರೀವಿಜಯ ಎಂಬ ಬಿರುದಿದ್ದಿರಬಹುದು ಎಂದೂ ಸಂದೇಹಿಸಿದರು.

ಈ ಬಗೆಯಲ್ಲಿ ಕವಿರಾಜಮಾರ್ಗದ ಕರ್ತೃವು ನೃಪತುಂಗ, ಕವೀಶ್ವರ, ಶ್ರೀವಿಜಯ ಎಂಬ ಮೂರು ವಾದಗಳು ಎದ್ದುವು. ಹಲವಾರು ಮಂದಿ ವಿದ್ವಾಂಸರು ಈ ಮೂರು ಪಕ್ಷಗಳನ್ನು ಹಿಡಿದು ವಾದಿಸಿದರು. ಕವೀಶ್ವರನ ಕರ್ತೃತ್ವವನ್ನು ಎತ್ತಿಹಿಡಿದವರು ಫ್ಲೀಟ್ ಅವರಲ್ಲದೆ, ಆ ಮುಂದೆ ಕೃತಿಯನ್ನು ಪರಿಷ್ಕರಿಸಿ ಪ್ರಕಟಿಸಿದ ಎ. ವೆಂಕಟರಾವ್ ಮತ್ತು ಎಚ್. ಶೇಷಯ್ಯಂಗಾರ್ ಅವರುಗಳು. ನೃಪತುಂಗನ ಕರ್ತೃತ್ವವನ್ನು ಪುರಸ್ಕರಿಸಿದವರು ನಾ. ಶ್ರೀ. ರಾಜಪುರೋಹಿತ, ಡಿ.ಕೆ. ಭೀಮಸೇನರಾವ್, ಎಸ್.ಸಿ. ನಂದೀಮಠ, ಕೆ. ಕೃಷ್ಣಮೂರ್ತಿ, ಭೀಮರಾವ್ ಚಿಟಗುಪ್ಪಿ ಅವರುಗಳು. ಆದರೆ ಟಿ.ಎಸ್. ವೆಂಕಣ್ಣಯ್ಯ, ಎ. ಆರ್. ಕೃಷ್ಣಶಾಸ್ತ್ರಿ, ಮುಳಿಯ ತಿಮ್ಮಪ್ಪಯ್ಯ, ತೀ. ನಂ. ಶ್ರೀಕಂಠಯ್ಯ, ಎಂ. ವೀ. ಸೀತಾರಾಮಯ್ಯ ಮತ್ತು ಎಂ. ಎಂ. ಕಲಬುರ್ಗಿ ಇವರು ಶ್ರೀವಿಜಯಕರ್ತೃತ್ವವನ್ನು ಬೆಂಬಲಿಸಿದವರು.

ಆವರೆಗೆ ದೊರಕಿದ ಈ ಕೃತಿಗೆ ಸಂಬಂಧಿಸಿದ ಎಲ್ಲ ಮಾಹಿತಿಯನ್ನೂ ಕಲೆಹಾಕಿ ತುಂಬ ಪರಿಶ್ರಮದಿಂದ 'ಕವಿರಾಜಮಾರ್ಗ'ವನ್ನು ಪರಿಷ್ಕರಿಸಿ ಪ್ರತಿ ಪದ್ಯಕ್ಕೂ ಸಂಬಂಧಿಸಿದಂತೆ ತುಂಬ ಉಪಯುಕ್ತವಾದ ವ್ಯಾಪಕ ಟಿಪ್ಪಣಿಗಳೊಡನೆ ಪ್ರೊ। ಎಂ.ವಿ. ಸೀತಾರಾಮಯ್ಯನವರು 1968 ರಲ್ಲಿ ಹೊಸ ಆವೃತ್ತಿಯೊಂದನ್ನು ಪ್ರಕಟಿಸಿ, ಅದರ 'ಪೀಠಿಕೆ'ಯಲ್ಲಿ ಕರ್ತೃತ್ವದ ಬಗ್ಗೆ ವ್ಯಾಪಕ ಚರ್ಚೆಯನ್ನು ಮಂಡಿಸಿ ಕೃತಿಯ ಕರ್ತೃ ಶ್ರೀವಿಜಯನೇ ಎಂದು ಖಚಿತವೆನ್ನುವಂತೆ ತೀರ್ಮಾನಿಸಿದರು. ಅವರ ವಾದದ ಸಾರಾಂಶ ಇಂತಿದೆ : ಅನೇಕ ಮಂದಿ ಕವಿಗಳು ಶ್ರೀವಿಜಯನ ಹೆಸರು ಹೇಳುತ್ತಾರೆ; ಅವೆಲ್ಲ ಶ್ರೀವಿಜಯನು 'ಕವಿರಾಜಮಾರ್ಗ'ದ ಕರ್ತೃ ಎನ್ನಲು ಆಧಾರಗಳಾಗಲಾರವಾದರೂ, ದುರ್ಗಸಿಂಹನು ಹೇಳುವ 'ಶ್ರೀವಿಜಯರ ಕವಿಮಾರ್ಗಂ' ಎಂಬ ಮಾತು ಈ ಕೃತಿ ಹಾಗೂ ಕರ್ತೃಗಳನ್ನು ಸೂಚಿಸಬಹುದು ಎಂದು ಅನುಮಾನಿಸಬಹುದು. ಹಾಗೆಯೇ ಕೇಶಿರಾಜನು ತನ್ನ 'ಶಬ್ದಮಣಿದರ್ಪಣ'ದ ಲಕ್ಷ್ಯಪದ್ಯಗಳಲ್ಲಿ ಇತರ ಕವಿಲಕ್ಷ್ಯಗಳ ಜೊತೆಗೆ ಶ್ರೀವಿಜಯನವೂ ಇವೆ ಎನ್ನುತ್ತಾನೆ; ಅಲ್ಲದೆ ಅವುಗಳಲ್ಲಿ 'ಕವಿರಾಜಮಾರ್ಗ'ದ ಪದ್ಯಗಳು ಸೇರಿವೆ. ಹೀಗಾಗಿ ಶ್ರೀವಿಜಯನೇ ಕೃತಿಯ

ಕರ್ತೃ ಎನ್ನಲು ಪ್ರಬಲ ಆಧಾರವಾಗುತ್ತದೆ. ಈ ಶ್ರೀವಿಜಯನು ನೃಪತುಂಗನ ಸಭಾಸದನಾಗುವ ಮೊದಲೇ ತನ್ನ ಪಾಂಡಿತ್ಯ ಪ್ರತಿಭೆಗಳಿಗೆ ಹೆಸರಾಗಿದ್ದು ಮಾನ್ಯಖೇಟವನ್ನು ಹೊಕ್ಕು ಅತಿಶಯಧವಳನ ಸಭಾಸದರ ಮನ್ನಣೆಗೆ ಪಾತ್ರನಾದಂತೆ ಕಾಣುತ್ತದೆ. ಮೊದಲ ಪರಿಚ್ಛೇದದ ಮೊದಲ ಮೂರು ಮಂಗಳಶ್ಲೋಕಗಳು; ಅವುಗಳಲ್ಲಿ ಮೊದಲೆರಡರಲ್ಲಿ ವಿಷ್ಣುವಿಗೂ ನೃಪತುಂಗನಿಗೂ ಅಭೇದವನ್ನು ಕಲ್ಪಿಸಲಾಗಿದೆ; ಗ್ರಂಥದ್ದುದ್ದಕ್ಕೂ ನೃಪತುಂಗಪರವಾದ ಬಹುಸಂಖ್ಯೆಯ ಉಕ್ತಿಗಳು ದೊರಕುತ್ತವೆ. ಪ್ರತಿ ಪರಿಚ್ಛೇದದ ಕೊನೆಯ ಗದ್ಯದಲ್ಲಿ "ನೃಪತುಂಗ ದೇವಾನುಮತಮಪ್ಪ ಕವಿರಾಜಮಾರ್ಗದೊಳ್" ಎಂಬ ಮಾತಿದ್ದು, ಅದಕ್ಕೆ ನೃಪತುಂಗನ ಒಪ್ಪಿಗೆ ಎಂಬರ್ಥವನ್ನು ಹೇಳಬೇಕು; ಹಾಗಾಗಿ ವಿದ್ವತ್ಸಭೆಯಲ್ಲಿ ಚರ್ಚಿತವಾಗಿ ತೀರ್ಮಾನಗೊಂಡ ಅಂಶಗಳಿಗೆ ನೃಪತುಂಗನು ಒಪ್ಪಿಗೆಯನ್ನು ನೀಡುತ್ತಿದ್ದ. ಮೂರೂ ಪರಿಚ್ಛೇದಗಳ ಕೊನೆಯ ಪದ್ಯಗಳಲ್ಲಿ "ಕವಿಪ್ರಕರಂ ಶ್ರೀವಿಜಯಪ್ರಭೂತಮಮಂ", "ಶ್ರೀವಿಜಯ ಪ್ರಭೂತಮುದಮಂ", ಮತ್ತು "ಪರಮ ಶ್ರೀವಿಜಯ ಪ್ರಭೂತಿಜಯಶಂ" ಎಂಬ ಮಾತುಗಳಿಗೆ ಶ್ರೀವಿಜಯನಿಂದ ಉಂಟಾದದ್ದು-ಉತ್ಪನ್ನವಾದದ್ದು-ಜನಿಸಿದ್ದು-ನಿರ್ಮಾಣವಾದದ್ದು ಎಂಬ ಅರ್ಥಗಳು ಪ್ರಸಿದ್ಧವಾದವು. ಜೊತೆಗೆ ಅವರು ಅನೇಕ ಬಾಹ್ಯ ಪ್ರಮಾಣಗಳನ್ನೂ ಉಲ್ಲೇಖಿಸಿ "ಕವಿರಾಜಮಾರ್ಗವಂತೂ ಶ್ರೀವಿಜಯಕೃತ; ಅದರ ಮೇಲೆ ಅಚ್ಚೊತ್ತಿ ಬಿದ್ದಿರುವುದು ನೃಪತುಂಗದೇವಮತ" ಎಂದು ತೀರ್ಮಾನಿಸುತ್ತಾರೆ. ಈ ವಾದ ಈಗ ಒಪ್ಪಿತವಾಗಿದೆ. ('ಕವಿರಾಜಮಾರ್ಗ', ಕಿರಿಯ ಆವೃತ್ತಿಯ ಪೀಠಿಕೆ, 1974).

ವಿದ್ವಾಂಸರ ಅಭಿಪ್ರಾಯದ ಪ್ರಕಾರ, ಈ ಕೃತಿಯು ಮುಖ್ಯವಾಗಿ ನೃಪತುಂಗನ ಅಕಾಂಕ್ಷೆ - ಅಭಿಮತ ಮತ್ತು ಮಾರ್ಗದರ್ಶನಗಳನ್ನವಲಂಬಿಸಿ, ಆತನ ಅಂತಿಮ ಮುದ್ರೆಯನ್ನು ಪಡೆದು ಹೊರಬಂದಿದೆ. ಪಠ್ಯರಚನೆಯು ಶ್ರೀವಿಜಯನದೇ ಅಗಿದ್ದರೂ ಅಂತಿಮ ಅಧಿಕೃತ ಮುದ್ರೆಯು ರಾಜ ನೃಪತುಂಗನದ್ದು. ಆದ್ದರಿಂದಲೇ ಪ್ರತಿ ಪರಿಚ್ಛೇದದ ಕೊನೆಯಲ್ಲಿ "ನೃಪತುಂಗದೇವಾನುಮತಮಪ್ಪ ಕವಿರಾಜಮಾರ್ಗದೊಳ್" ಎಂದಿದೆ. ಇದಕ್ಕೆ ಪುಷ್ಟಿಯೆಂಬಂತೆ ಗ್ರಂಥದ ಉದ್ದಕ್ಕೂ ಮೇಲಿಂದ ಮೇಲೆ "ನೃಪತುಂಗದೇವ ಮಾರ್ಗ" "ಅತಿಯಶಯಧವಳೋಕ್ತಿ ಕ್ರಮ" ಮತ್ತು

“ನರಲೋಕಚಂದ್ರ ಮತ” ಎಂಬ ಪದಗಳು ಪ್ರಯೋಗವಾಗಿವೆ. ಎಂದರೆ ಕವಿಯ ರಚನೆಗೆ ನೃಪತುಂಗನ ಒಪ್ಪಿತ ಮುದ್ರೆಯೂ ಬಿದ್ದಿದೆ ಎಂಬುದು ಗೋಚರವಾಗುತ್ತದೆ.

ಕೃತಿಯ ಹೆಸರಿನ ಬಗ್ಗೆಯೂ ಹಲವು ಚರ್ಚೆಗಳಾಗಿವೆ. ಈ ಗ್ರಂಥ ಎಷ್ಟು ಚರ್ಚೆಗಳಿಗೆ ಎಡೆಮಾಡಿ ಕೊಡುತ್ತದೋ ಅಂತೆಯೇ ಇದರ ಶೀರ್ಷಿಕೆಯೂ ಸಹ ವಿಶೇಷವಾಗಿಯೇ ಇದೆ. ಕವಿರಾಜಮಾರ್ಗ ಎನ್ನುವುದಕ್ಕೆ ವಿದ್ವಾಂಸರು ವಿವಿಧ ಅರ್ಥಗಳನ್ನು ಆರೋಪಿಸಿದ್ದಾರೆ. ಇದು ‘ಕವಿಗಳ ರಾಜಮಾರ್ಗ’, ಎಂದರೆ ಮುಂದಿನ ಕವಿಗಳಿಗೆ ಕೃತಿಕಾರ ಹಾಕಿಕೊಟ್ಟ ರಾಜಮಾರ್ಗ ಎಂದೋ; ‘ಕವಿರಾಜರ ಮಾರ್ಗ’ ಎಂದರೆ ಹಿಂದಿನ ಕವಿಗಳು ಅನುಸರಿಸಿದ ರಾಜಮಾರ್ಗ ಎಂದೋ ಅಥವಾ ಕವಿಗಳಿಗೆ ಹಾಕಿಕೊಟ್ಟ ರಾಜಮಾರ್ಗ ಎಂದೋ ಅರ್ಥವಾಗಬಹುದು. ಕೆ. ವಿ. ಸುಬ್ಬಣ್ಣ ಇನ್ನೂ ಒಂದು ಹೆಜ್ಜೆ ಮುಂದುವರಿದು ಇದು ಕವಿಯೂ ರಾಜನೂ ಕೂಡಿ ನಿರ್ಮಿಸಿರುವ ಮಾರ್ಗ, ಎಂದರೆ ಕವಿ ಪ್ರಯತ್ನ ಮತ್ತು ರಾಜಪ್ರಯತ್ನಗಳು ಒಟ್ಟಾಗಿ ಅರ್ಥಾತ್ ಭಾಷಾ ಪ್ರಯತ್ನ ಮತ್ತು ಪ್ರಭುತ್ವ ಪ್ರಯತ್ನಗಳು ಕೂಡಿ ಒಂದು ಮಾರ್ಗ ನಿರ್ಮಾಣವಾಗಿದೆ ಎಂದು ಅಭಿಪ್ರಾಯ ಪಡುತ್ತಾರೆ. ಆದರೆ ಕವಿರಾಜಮಾರ್ಗದ ಹುಡುಕಾಟ ಕನ್ನಡಕ್ಕೊಂದು ಕಾವ್ಯಭಾಷೆಯನ್ನು ರೂಪಿಸಿಕೊಡುವುದಾಗಿತ್ತು, ಆಡಳಿತ ಭಾಷೆಯನ್ನು ರೂಪಿಸುವುದಾಗಿರಲಿಲ್ಲ. ‘ನೃಪತುಂಗದೇವಾನುಮತಮಪ್ಪ’ ಎಂಬಂತಹ ಮಾತುಗಳಿಂದ ಇದಕ್ಕೆ ರಾಜನ ಒಪ್ಪಿಗೆ ದೊರೆತಿತ್ತು ಎಂದು ಅರ್ಥೈಸಬೇಕೇ ಎಂಬುದು ಪ್ರಶ್ನೆ. ಏಕೆಂದರೆ ರಾಜನಿಂದ ಉಪಕೃತನಾದ ಅಥವಾ ಪೋಷಿತನಾದ ಕವಿಗೆ ರಾಜನ ಒಪ್ಪಿಗೆ ಸಾಂಪ್ರದಾಯಿಕವೇ ಹೊರತು ಕಾವ್ಯಭಾಷೆಯ ಬಗ್ಗೆ ರಾಜಾಜ್ಞೆ ಕೆಲಸ ಮಾಡುತ್ತಿತ್ತೇ ಅಥವಾ ಮಾಡಬಹುದೇ ಎಂದು ಆಲೋಚಿಸಬೇಕು.

ಕನ್ನಡದ ಆದ್ಯ ಲಕ್ಷಣ ಗ್ರಂಥವಾದ ಈ ಕೃತಿಯು ಸಂಪೂರ್ಣವಾದ ಸ್ವತಂತ್ರ ರಚನೆಯಲ್ಲ. ಕವಿರಾಜಮಾರ್ಗವು ದಂಡಿಯ ‘ಕಾವ್ಯಾದರ್ಶ’ ಮತ್ತು ತಕ್ಕಮಟ್ಟಿಗೆ ಭಾಮಹನ ‘ಕಾವ್ಯಾಲಂಕಾರ’ ಇವುಗಳನ್ನು ಅವಲಂಬಿಸಿದ್ದರೂ ಮೂಲ ಅವಲಂಬನೆಯ ಯಥಾನುಕರಣವಾಗದೆ,

ವಸ್ತುವಿನ್ಯಾಸ, ಸ್ವತಂತ್ರ ದೃಷ್ಟಿಕೋನ - ಇತ್ಯಾದಿಗಳಿಂದ ಅದೊಂದು ಸ್ವತಂತ್ರ ಕೃತಿ ಎಂಬ ವಿಶಿಷ್ಟತೆಯನ್ನು ಪ್ರಕಟಿಸುತ್ತದೆ. 'ಕವಿರಾಜಮಾರ್ಗ'ದಲ್ಲಿರುವ ಒಟ್ಟು ಪದ್ಯಗಳ ಸಂಖ್ಯೆ 536: ಇದರಲ್ಲಿ ಮೂರು ಪರಿಚ್ಛೇದಗಳಿವೆ: (1) ದೋಷಾ ದೋಷಾನುವರ್ಣನ (2) ಶಬ್ದಾಲಂಕಾರ ವರ್ಣನಿರ್ಣಯ ಮತ್ತು (3) ಅರ್ಥಾಲಂಕಾರ ಪ್ರಕರಣ. ಇವುಗಳಲ್ಲಿ ಕ್ರಮವಾಗಿ 150, 155, ಹಾಗೂ 231 ಪದ್ಯಗಳಿವೆ. ಇವುಗಳಲ್ಲಿ ಸುಮಾರು 45 ಪದ್ಯಗಳಿಗೆ ಭಾಮಹನ 'ಕಾವ್ಯಾಲಂಕಾರ'ವೂ, 230 ಪದ್ಯಗಳಿಗೆ ದಂಡಿಯ 'ಕಾವ್ಯಾದರ್ಶ'ವೂ ಆಕರಗಳಾಗಿವೆ. ಹೀಗಾಗಿ ಕೃತಿಯಲ್ಲಿನ ಅರ್ಧದಷ್ಟು ಭಾಗ ಸ್ವಂತ ರಚನೆ, ಅವನು ದಂಡಿ ಭಾಮಹರನ್ನು ಅನುಸರಿಸಿರುವಷ್ಟು ಭಾಗದಲ್ಲಿ ಕೂಡಾ ಮೂಲ ಶ್ಲೋಕಗಳನ್ನು ಪದಶಃ ಅನುವಾದ ಮಾಡದೆ ಅವುಗಳ ಭಾವವನ್ನು ಗ್ರಹಿಸಿ ತನ್ನದೇ ರೀತಿಯಲ್ಲಿ ನಿರೂಪಿಸಿದ್ದಾನೆ. ಲಕ್ಷ್ಯ ಪದ್ಯಗಳ ವಿಚಾರದಲ್ಲೂ ಅವನ ಸ್ವಯಂಪ್ರತಿಭೆಯ ಪ್ರಕಾಶ ಸ್ಪಷ್ಟವಾಗಿದೆ. ಕನ್ನಡದ ಅಲಂಕಾರ ಶಾಸ್ತ್ರ ಕೃತಿಯೊಂದಕ್ಕೆ ಹೆಸರು ಕೊಡುವಾಗ ಕೂಡ ಸಂಸ್ಕೃತ ಲಾಕ್ಷಣಿಕರ ಕೃತಿಗಳನ್ನು ಅನುಕರಿಸದೆ ಬೇರೆಯೇ ಆದ ಶೀರ್ಷಿಕೆಯೊಂದನ್ನು ಕೊಟ್ಟಿದ್ದು ಸಹ ಮಾರ್ಗಕಾರನ ವಿಶೇಷತೆಯಾಗಿದೆ..

ಕೃತಿಯ ಮಾದರಿ ಮತ್ತು ಸ್ವೋಪಜ್ಞತೆ: ಕವಿರಾಜಮಾರ್ಗಕ್ಕೆ ದಂಡಿಯ 'ಕಾವ್ಯಾದರ್ಶ' ಮತ್ತು ಭಾಮಹನ 'ಕಾವ್ಯಾಲಂಕಾರ' ಇವೇ ಆಧಾರಗಳು; ಆದರೆ ಅವರನ್ನು ಇವನು ಮಕ್ಕಿಕಾಮಕ್ಕಿ ಅನುಕರಿಸುವುದಿಲ್ಲ. ಒಂದು ಭಾಷೆಯಲ್ಲಿ ಲಕ್ಷಣಗ್ರಂಥವೊಂದು ಹೊರಬರಬೇಕಾದರೆ ಅದಕ್ಕೆ ಹಿಂದೆ ಸಾಕಷ್ಟು ದೀರ್ಘವಾದ ಕಾವ್ಯಪರಂಪರೆಯಿರಬೇಕು. ಸಂಸ್ಕೃತದ ಈ ಎರಡು ಲಕ್ಷಣ ಗ್ರಂಥಗಳು ಬರಲು ಕಾರಣ ಆ ಹಿಂದಿದ್ದ ಸಂಸ್ಕೃತ ಕಾವ್ಯಪರಂಪರೆ; ಅದನ್ನು ಅಭ್ಯಾಸ ಮಾಡಿಯೇ ಈ ಗ್ರಂಥಗಳಲ್ಲಿ ಕಾವ್ಯವನ್ನು ಕುರಿತ ಲಕ್ಷಣಗಳು ರೂಪಿತವಾಗಿವೆ. ಕನ್ನಡ ಕಾವ್ಯ ಪರಂಪರೆಯು ಸಂಸ್ಕೃತದ ಕಾವ್ಯ ಲಕ್ಷಣಗಳನ್ನು ಅನುಸರಿಸಿರಬಹುದು; ಆದರೆ ತನ್ನದೇ ವಿಶಿಷ್ಟತೆಯನ್ನೂ ಮೈಗೂಡಿಸಿಕೊಂಡು ಪುಷ್ಟವಾಗಿ ಬೆಳೆದಿದೆ ಎಂಬುದು 'ಕವಿರಾಜಮಾರ್ಗ'ಕಾರನ ಅಭಿಪ್ರಾಯವಿದ್ದಂತಿದೆ; ಆದ್ದರಿಂದಲೇ

ಕಾವ್ಯಸ್ವರೂಪವನ್ನು ಚಿಂತಿಸುವಾಗ ಕನ್ನಡ ಕಾವ್ಯ ಪರಂಪರೆಯನ್ನು ಗಮನಿಸಬೇಕು ಎಂಬ ಜವಾಬ್ದಾರಿ ಅವನಿಗಿತ್ತು. ಹಾಗಾಗಿಯೇ ಆತ ಹೀಗೆನ್ನುತ್ತಾನೆ: "ಸಕ್ಕದಮುಂ ಪಾಗದಮುಮದಕ್ಕುಂ ಬಗೆದಂತೆ ಸಮಜಿ ಪೇೞಲ್ ಮುನ್ನಂ। ನಿಕ್ಕುವಮೊಳವಪ್ಪುದಱಿಂ ತಕ್ಕಂತವಱ ಲಕ್ಷ್ಯಮುಂ ಲಕ್ಷಣಮುಂ॥" (ಸಂಸ್ಕೃತ ಪ್ರಾಕೃತ ಸಾಹಿತ್ಯಗಳಲ್ಲಾದರೆ ಆ ಬಗೆಯೇ ಬೇರೆ. ಅವುಗಳಲ್ಲಿ ಲಕ್ಷ್ಯಗ್ರಂಥಗಳಂತೆ ಲಕ್ಷಣ ಗ್ರಂಥಗಳೂ ಬೇಕಾದಷ್ಟಿವೆ. ಪರಮಾಚಾರ್ಯರಿಂದ ರಚಿತವಾದ ಆ ಲಕ್ಷ್ಯಲಕ್ಷಣ ಪ್ರಬಂಧಗಳಿಂದಾಗಿ ಸಂಸ್ಕೃತ ಪ್ರಾಕೃತ ಸಾಹಿತ್ಯ ಸ್ವರೂಪವು ಸುಗಮವಾಗಿದ್ದುದು"– ಮುಳಿಯ ತಿಮ್ಮಪ್ಪಯ್ಯ) "ಅರಿದಾದಂ ಕನ್ನಡದೊಳ್ತಿರಿ ಕೊಱೆಗೊಂಡಱೆಯೆ ಪೇೞ್ವೆನೆಂಬುದಿದಾರ್ಗಂ। ಪರಮಾಚಾರ್ಯರವೋಲ್ ಸ್ಥಿತಿರಲಱೆಯಲ್ ಕನ್ನಡಕ್ಕೆ ನಾಡವರೋಜರ್॥" ("ಅವರಿವರನ್ನು ಕೇಳಿಯಾದರೂ ತಿಳಿದು ಕಾವ್ಯಲಕ್ಷಣಗಳನ್ನು ಹೇಳೋಣವೆಂದರೆ, ಸಂಸ್ಕೃತ ಪ್ರಾಕೃತಗಳಲ್ಲಿಯಂತೆ ಲಕ್ಷಣವನ್ನು ಚೆನ್ನಾಗಿ ಬಲ್ಲವರು ಕನ್ನಡದಲ್ಲಿ ಇರಲಿಲ್ಲ, ಕನ್ನಡದ ಓಜರೂ ಅವರಷ್ಟು ಬಲ್ಲಿದರಾಗಿರಲಿಲ್ಲ"– ಎಂ.ವಿ.ಸೀ : (ಕವಿರಾಮಾ 1. 41–42). ಅಂದರೆ ಮಾರ್ಗಕಾರನ ಪ್ರಕಾರ ಕನ್ನಡದಲ್ಲಿ ಕಾವ್ಯ ಸಂಪ್ರದಾಯ ಬೆಳೆದಿದ್ದರೂ ಅದಕ್ಕನುಗುಣವಾದ ಶಾಸ್ತ್ರವನ್ನು ಬರೆಯುವ ಸಾಮರ್ಥ್ಯವುಳ್ಳವರು ಇರಲಿಲ್ಲ; ಅಥವಾ ಆ ಪ್ರಯತ್ನವನ್ನು ಮಾಡಿದವರು ಇರಲಿಲ್ಲ. ಹೀಗಾಗಿ ಆ ಕೆಲಸವನ್ನು ತಾನು ಮಾಡಲು ಹೊರಟಿದ್ದೇನೆ ಎಂಬ ಧ್ವನಿ ಈ ಪದ್ಯಗಳಿಂದ ಹೊರಡುತ್ತದೆ. ಅಂದರೆ ಕನ್ನಡಕ್ಕೆ ಅನ್ವಯಿಸುವ ಸಂಸ್ಕೃತ ಕಾವ್ಯ ಲಕ್ಷಣಗಳನ್ನು ಎಂತೋ ಅಂತೆಯೇ ಕನ್ನಡಕ್ಕೆ ವಿಶಿಷ್ಟವಾದ ಲಕ್ಷಣಗಳನ್ನು ಹೇಳುವುದು ತನ್ನ ಕೆಲಸ ಎಂದು ಭಾವಿಸಿದ್ದಾನೆ. ಹಾಗಾಗಿ ಅನ್ವಯಿಸಬಹುದಾದ ಕಡೆಗಳಲ್ಲಿ ದಂಡಿ–ಭಾಮಹರ ಅನುಸರಣೆ, ಉಳಿದೆಡೆ ತನ್ನದೇ ವಿವೇಚನೆ. ಹಾಗಾಗಿಯೇ ಕೃತಿಯಲ್ಲಿನ ಒಟ್ಟು 536 ಪದ್ಯಗಳಲ್ಲಿ 275 ಪದ್ಯಗಳಲ್ಲಿ ಅವರಿಬ್ಬರ ಅನುಸರಣೆ, ಉಳಿದೆಡೆ ಸ್ವಂತ ರಚನೆ. ಹೀಗಾಗಿ ಮಾರ್ಗಕಾರನದು ದೊಡ್ಡ ಜವಾಬ್ದಾರಿ, ಮೊದಲ ಬಾರಿಗೆ ಕನ್ನಡಕ್ಕೆ ಅನ್ವಯಿಸುವಂತಹ ಲಕ್ಷಣಗ್ರಂಥ ನಿರ್ಮಾಣದ ಹೊಣೆ.

ಪ್ರಥಮ ಪರಿಚ್ಛೇದ – ದೋಷಾದೋಷಾನುವರ್ಣನ ನಿರ್ಣಯ

ಗ್ರಂಥವು ಮೂರು ಪರಿಚ್ಛೇದಗಳನ್ನೊಳಗೊಂಡಿದ್ದರೂ ಅದನ್ನು ನಾಲ್ಕು ಭಾಗಗಳಾಗಿ ನೋಡಬಹುದು: ಮೊದಲ ಪರಿಚ್ಛೇದದ 150 ಪದ್ಯಗಳಲ್ಲಿ ಮೊದಲ ಭಾಗದ ಹಲವಾರು ಪದ್ಯಗಳಲ್ಲಿ ಕನ್ನಡ ನುಡಿ–ನಾಡು–ನಾಡವರ ಬಗ್ಗೆ ಕೃತಿಕಾರನ ವಿವೇಚನೆಯಿದ್ದರೆ ಮುಂದಿನ ಭಾಗ ಮೊದಲ ಪರಿಚ್ಛೇದದ ವಿಷಯವಾದ ದೋಷಾದೋಷಾನುವರ್ಣನಕ್ಕೆ ಸಂಬಂಧಿಸಿದವು.

ಪ್ರಾರ್ಥನಾ ಪದ್ಯಗಳ ವಿಶೇಷ: ಗ್ರಂಥದ ಆದಿಯಲ್ಲಿ ಎರಡು ಮಂಗಳಪದ್ಯಗಳಿವೆ, ಆನಂತರ ಸರಸ್ವತೀ ಪ್ರಾರ್ಥನೆಯಿದೆ (ಇದು, ಅಂದರೆ ಮೂರನೆಯ ಪದ್ಯವು ದಂಡಿಯ ಶ್ಲೋಕದ ಭಾವಾನುವಾದ). ಆದರೆ ಮೊದಲೆರಡು ಪದ್ಯಗಳಲ್ಲಿ (1, 1–2) ಕೃತಿಕಾರನ ಸ್ವೋಪಜ್ಞತೆಯನ್ನು ಕಾಣಬಹುದು. "ನೀತಿನಿರಂತರನೂ, ಉದಾರನೂ, ಕೃತಕೃತ್ಯಮಲ್ಲನೂ, ಅಪ್ರತಿಹತವಿಕ್ರಮನೂ ವೀರನಾರಾಯಣನೂ ಆದ ಅತಿಶಯಧವಳನು ನಮಗೆ ಅತರ್ಕಿತೋಪಸ್ಥಿತ ಪ್ರತಾಪೋದಯವನ್ನುಂಟು ಮಾಡಲಿ" ಎಂಬ ತಾತ್ಪರ್ಯದ ಈ ಪದ್ಯಗಳಲ್ಲಿ ನಾರಾಯಣನನ್ನು ಸ್ತುತಿಸಿದ ಹಾಗೆ ಕಂಡರೂ ಸೂಕ್ಷ್ಮದಲ್ಲಿ ತನಗೆ ಪ್ರತಾಪೋದಯವನ್ನು ಮಾಡುವವನು 'ವೀರ' ನಾರಾಯಣನಾದ ಅತಿಶಯಧವಳ ಎಂಬ ನಂಬಿಕೆ ಕಾಣಿಸುತ್ತದೆ. ಪಂಪ ತನ್ನ 'ವಿಕ್ರಮಾರ್ಜುನ ವಿಜಯ'ದ ಮೊದಲ ನಾಲ್ಕು ಪ್ರಾರ್ಥನಾಪದ್ಯಗಳಲ್ಲಿ (ಪಂಪಭಾ:1, 1–4) ಇದೇ ಮಾದರಿಯನ್ನು ಅನುಸರಿಸುತ್ತಾನೆ. ಮೊದಲ ಪದ್ಯದಲ್ಲಿ ನಾರಾಯಣನಿಗಿಂತ ಮಿಗಿಲಾದ "ಉದಾತ್ತ ನಾರಾಯಣನಾದ ದೇವನೆಮಗೀಗರಿಕೇಸರಿ ಸೌಖ್ಯಕೋಟಿಯಂ" ಎಂದೂ; ಎರಡನೆಯದರಲ್ಲಿ "ಉದಾರ ಮಹೇಶ್ವರನೀಗೆ ಭೋಗಮಂ" ಎಂದೂ; ಮೂರನೆಯ ಪದ್ಯದಲ್ಲಿ "ಪ್ರಚಂಡ ಮಾರ್ತಾಂಡನಲರ್ಚುಗೆನ್ನ ಹೃದಯಾಂಬುಜಮಂ ನಿಜ ವಾಙ್ಮರೀಚಿಯಿಂ" ಎಂದೂ; ಹಾಗೂ ನಾಲ್ಕನೆಯುದರಲ್ಲಿ "ಸಹಜಮನೋಜನೋಜನೆಮಗೀಗೆ ವಿಚಿತ್ರ ರತೋತ್ಸವಂಗಳಂ" ಎಂದೂ ಕವಿ ಪ್ರಾರ್ಥಿಸುತ್ತಾನೆ. ವೈದಿಕ ದೇವರು ನಾರಾಯಣನಾದರೆ ತನ್ನ ಆಶ್ರಯದಾತ 'ಉದಾತ್ತ ನಾರಾಯಣ'; ಅವನು ಮಹೇಶ್ವರನಾದರೆ, ತನ್ನ ಪ್ರಭು 'ಉದಾರ ಮಹೇಶ್ವರ'; ಆತ ಚಂಡವಿರೋಧಿಯಾದರೆ ತನ್ನ ಯಜಮಾನ 'ಪ್ರಚಂಡ ಮಾರ್ತಾಂಡ'; ಹಾಗೆಯೇ ಮೂಲದವನು

ಮನೋಜನಾದರೆ, ತನ್ನೊಡೆಯ 'ಸಹಜಮನೋಜನೋಜ'.

ಮೊದಲ ಪರಿಚ್ಛೇದದ 5 ಮತ್ತು 6 ನೆಯ ಪದ್ಯಗಳಲ್ಲಿ ಕೃತಿಕಾರ ಸ್ವವಿಷಯವನ್ನು ಹೇಳಿಕೊಂಡಿರುವಂತಿದೆ: ತಾನು ವ್ಯಾಕರಣ, ಕಾವ್ಯ, ನಾಟಕ ಮೊದಲಾದ ವಿಷಯಗಳಲ್ಲಿ ಪರಿಣತನಾಗದಿದ್ದರೆ ನೃಪತುಂಗನ ನಗರವನ್ನೇಕೆ ಪ್ರವೇಶಿಸುತ್ತಿದ್ದೆ ಎನ್ನುವುದರ ಮೂಲಕ ತಾನು ಹೊರಗಿನಿಂದ ಮಾನ್ಯಖೇಟಕ್ಕೆ ಬಂದವನೆಂದೂ, ಅನೇಕ ಶಾಸ್ತ್ರಗಳಲ್ಲಿ ಪಂಡಿತನೆಂದೂ ಹೇಳಿಕೊಂಡಿದ್ದಾನೆ.

ಕನ್ನಡ ನಾಡು ನುಡಿ ನಾಡವರುಗಳ ಬಗೆಗಿನ ಅಭಿಮಾನ:

ಕವಿರಾಜಮಾರ್ಗವು ನಾಡುನುಡಿಗಳ ಅಭಿಮಾನದ ಗಣಿಯಾಗಿರುವುದು ಎಲ್ಲರಿಗೂ ಗೊತ್ತಿರುವ ವಿಚಾರ. ಹಲವು ಪದ್ಯಗಳಲ್ಲಿ ಕನ್ನಡ ನಾಡು ನುಡಿ ಜನಪದರ ಬಗ್ಗೆ ಅತೀವ ಅಭಿಮಾನದ ಮಾತುಗಳಿವೆ. ಅತ್ಯಂತ ಪ್ರಸಿದ್ಧವಾದ "ಕಾವೇರಿಯಿಂದಮಾ ಗೋದಾವರಿವರಮಿರ್ಪ ನಾಡದಾ ಕನ್ನಡದೊಳ್ ಭಾವಿಸಿದ ಜನಪದಂ ವಸುಧಾವಳಯವಿಲೀನ ವಿಶದ ವಿಷಯ ವಿಶೇಷಂ" ಪದ್ಯವು ನಾಡಿನ ವಿಶಾಲತೆ ಮತ್ತದರಲ್ಲಿ ವಾಸಿಸುವ ಜನರ ವಿಶಿಷ್ಟತೆಯ ಬಗ್ಗೆ ಅಭಿಮಾನಪಡುತ್ತದೆ. ಕನ್ನಡ ನಾಡು ವಸುಧಾವಳಯ ಭಾಗ ಎನ್ನುತ್ತದೆಯೇ ಹೊರತು ಮತ್ತಾವುದೋ ಪ್ರದೇಶದ ಭಾಗ ಎನ್ನುವುದಿಲ್ಲ; ಅಂದರೆ ಮಾರ್ಗಕಾರನ ದೃಷ್ಟಿಯಲ್ಲಿ ಕನ್ನಡ ಜನಪದವು ಜಗತ್ತಿನಲ್ಲಿಯೇ ವಿಶಿಷ್ಟವಾದದ್ದು ಎಂಬ ಭಾವನೆ ಇದೆ. ಇಂತಹ ನಾಡಿನ ತಿರುಳ ಭಾಗವನ್ನವನು ಕಿಸುವೊಳಲು (ಪಟ್ಟದಕಲ್ಲು), ಕೊಪಣ ನಗರ (ಕೊಪ್ಪಳ), ಪುಲಿಗೆಱೆ (ಲಕ್ಷ್ಮೇಶ್ವರ) ಹಾಗೂ ಒಂಕುಂದ(ಒಕ್ಕುಂದ)ಗಳ ನಡುವಣ ಭಾಗ ಎಂದು ಗುರುತಿಸುತ್ತಾನೆ. ಇದನ್ನೋದಿದಾಗ ಸಹಜವಾಗಿಯೇ ಪಂಪನು ಹೇಳುವ "ರಾಜದ್ರಾಜಕಮೆನಿಸಿದ ಸಾಜದ ಪುಲಿಗೆಱೆಯ ತಿರುಳ ಕನ್ನಡದೊಳ್ ನಿರ್ವ್ಯಾಜದೆಸಕದೊಳೆ ಪುದಿದೊಂದೋಜೆಯ ಬಲದಿನಿಯ ಕವಿತೆ ಪಂಪನ ಕವಿತೆ" (ಪಂಪಭಾರತ, 14. 58) ಎಂಬ ಮಾತು ನೆನಪಿಗೆ ಬರುತ್ತದೆ. ಶ್ರೀವಿಜಯ 'ಕನ್ನಡದ ತಿರುಳ್' ಎಂದರೆ ಪಂಪ 'ತಿರುಳ ಕನ್ನಡ' ಎನ್ನುತ್ತಾನೆ, ಅಷ್ಟೆ. ಈ ಅಭಿಪ್ರಾಯ ಆಗಿನ ಜನಾಭಿಪ್ರಾಯವೋ ಅಥವಾ

'ಕವಿರಾಜಮಾರ್ಗ'ದ ಪ್ರಭಾವದಿಂದಾಗಿ ಪಂಪನೂ ಆ ಮಾತನ್ನು ಬಳಸಲು ಕಾರಣವಾಯಿತೋ! (1. 36–37)

ಕನ್ನಡ ಜನರ ಬಗ್ಗೆ ಶ್ರೀವಿಜಯನದು ತುಂಬು ಅಭಿಮಾನ. ಅವರು ಹದವರಿತು ನುಡಿಯುವವರು, ಬೇರೆಯವರು ಮಾತಾಡಿದುದನ್ನು ಕುರಿತು ಆಲೋಚಿಸ ಬಲ್ಲವರು, ಚದುರರು, "ಕುಜಿತೋದದೆಯುಂ ಕಾವ್ಯಪ್ರಯೋಗ ಪರಿಣತಮತಿಗಳ್" ಎನ್ನುತ್ತಾನೆ. 'ಕುಜಿತು ಓದು' ಎಂಬ ಮಾತು ಉದ್ದೇಶ ಪೂರ್ವಕವಾಗಿ ಅಭ್ಯಾಸಮಾಡು ಎಂಬ ಅರ್ಥವನ್ನು ಹೊಂದಿರಬಹುದು. ಯಾಕೆಂದರೆ ಹಾಗೆ 'ಕುಜಿತವರಲ್ಲದೆ' ಇತರರೂ ತಮ್ಮ ಮಾತಿನಲ್ಲಿ ಜಾಣರು, ಇತರರ ಹಾಗಿರಲಿ ಮೂಕರೂ ತಮ್ಮ ಮಾತುಗಳಲ್ಲಿ ವಿವೇಕವನ್ನು ತೋರ್ಪಡಿಸುವವರು ಎನ್ನುತ್ತಾನೆ (1. 38–4)). 'ಕಾವ್ಯಪ್ರಯೋಗ ಪರಿಣತಮತಿ' ಎಂದರೇನು? ಕನ್ನಡಿಗರು ಕಾವ್ಯ ರಚಿಸಬಲ್ಲವರೆಂದು ಈ ಮಾತು ಸೂಚಿಸುತ್ತಿದೆಯೇ? ಜನಪದ ಕವಿಗಳನ್ನು ಕುರಿತು ಹೇಳುತ್ತಿರಬಹುದೇ? ಅಥವಾ ಪ್ರಯೋಗ ಎಂಬುದು ಕಾವ್ಯರಚನೆ ಎಂಬುದರ ಬದಲು ಪದ್ಯಗಳನ್ನು ಉದ್ಧೃತಗೊಳಿಸು ಎಂಬ ಅರ್ಥವನ್ನು ಹೊಂದಿದೆಯೇ? ಸ್ಪಷ್ಟವಾಗುವುದಿಲ್ಲ.

ಮಾತಿನ ಬಳಕೆಯ ಬಗೆಗಳು ಮತ್ತು ಕಾವ್ಯಕಾರಣಗಳು:

ಕೆಲವು ಪದ್ಯಗಳಲ್ಲಿ ಕಲಿಯದವರು, ಕಲಿತವರು, ಅವರಲ್ಲಿಯೂ ವಿವಿಧ ಮಟ್ಟಗಳ ಅಭಿವ್ಯಕ್ತಿ ಸಾಮರ್ಥ್ಯದವರುಗಳ ನಡುವಣ ವ್ಯತ್ಯಾಸವನ್ನು ವಿವರಿಸುತ್ತಾನೆ. ಮೃಗಪಶುಪಕ್ಷಿಗಳಂತೆಯೇ ಮನುಷ್ಯರಲ್ಲಿಯೂ 'ಅಪ್ರಗಲ್ಭವಚನ ಪ್ರವೃತ್ತಿ' ಇರುತ್ತದೆ; ಅಂತಹ ಅಶ್ರುತಜನರು ಗುಣದೋಷಗಳ ವಿವೇಚನೆಯನ್ನು ಹೊಂದಿರುವುದಿಲ್ಲ; ಅಂತಹವರು ಕಾಳುಕಡ್ಡಿ ಹುಲ್ಲುಗಳನ್ನು ('ತೃಣಸಸ್ಸಘಾಸ') ಒಂದೇ ಎಂದು ಭಾವಿಸುವ ಮೃಗಗಳಂತೆ. ಯಾರು ಕಲಿತು ವಿವಿಧ ವಿಷಯಗಳಲ್ಲಿ ಪಾಂಡಿತ್ಯ ಗಳಿಸಿರುತ್ತಾನೋ ಅಂತಹವನಿಗಲ್ಲದೆ ಕೃತಿಯಲ್ಲಿ ಬೆಡಗನ್ನು ಸಾಧಿಸಲು ಸಾಧ್ಯವಿಲ್ಲ (1. 7–8). ಮುಂದೆ ಕೆಲವು ಪದ್ಯಗಳಲ್ಲಿ ಮಾತಿನ ಬಳಕೆಯ ವಿವಿಧ ಹಂತಗಳ ಬಗೆಗಿನ ವಿವೇಚನೆಯಿದೆ: ಇತರರ ಮಾತುಗಳನ್ನು ಪ್ರತಿಧ್ವನಿಸಬಲ್ಲವನು ಕೇವಲ ಅನುಕರಣಶೀಲ; ತಾನು ಹೇಳಬೇಕಾದ್ದನ್ನು

ಇತರರಿಗೆ ತಿಳಿಸಬಲ್ಲವನು 'ಮಾತಜಿ'ವವನು; ಸ್ವಲ್ಪ ಮಾತಿನಲ್ಲಿಯೇ ಹಿರಿದರ್ಥವನ್ನು ಉಕ್ಕಿಸಬಲ್ಲವನು 'ನಿಪುಣ'; ಆಡುವ ಮಾತನ್ನು ಛಂದೋಬದ್ಧವಾಗಿ ಕಟ್ಟಬಲ್ಲವನು 'ಜಾಣ'; ಹಿಂದಿನ ಶ್ರೇಷ್ಠ ಕೃತಿಗಳನ್ನನುಸರಿಸಿ ತಾನೂ ಕೃತಿರಚನೆ ಮಾಡಬಲ್ಲವನು 'ಬಲ್ಲ'. ಈ ವಿವರಣೆಯ ಮಾತುಗಳ ಮಾರ್ಗಕಾರನ ಸ್ವಂತ ರಚನೆಯಿದ್ದಂತೆ ತೋರುತ್ತದೆ (1. 15–16).

ಕಾವ್ಯಸ್ವರೂಪ: 11 ನೆಯ ಪದ್ಯವು ದಂಡಿಯ "ನೈಸರ್ಗಿಕಚ ಪ್ರತಿಭಾ ಶ್ರುತಂ ಚ ಬಹು ನಿರ್ಮಲಂ। ಅಮಂದಶ್ಚಾಭಿಯೋಗೋಸ್ಯಾಃ ಕಾರಣಂ ಕಾವ್ಯ ಸಂಪದಃ॥" ಎಂಬ ಶ್ಲೋಕದಲ್ಲಿನ ಭಾವದೊಡನೆ ಹೊಸ ಅಂಶವನ್ನೂ ಸೇರಿಸುತ್ತಾನೆ. 'ವಾಗ್ವಿದಗ್ಧತೆ'ಗೆ ಮೂಲದಲ್ಲಿ ಪ್ರತಿಭೆ, ವ್ಯುತ್ಪತ್ತಿ ಮತ್ತು ಅಭ್ಯಾಸಗಳ ಆವಶ್ಯಕತೆಯ ಬಗ್ಗೆ ಹೇಳಿದ್ದರೆ ಈತ 'ಪರಮಬುಧಜನ ಉಪಾಸನೆ'ಯ ಬಗೆಗೂ ಹೇಳುತ್ತಾನೆ (1. 22)

ಮೊದಲ ಪರಿಚ್ಛೇದದ 21 ನೆಯ ಪದ್ಯವು ಭಾಮಹನ 'ಶಬ್ದಾರ್ಥೌ ಸಹಿತೌ ಕಾವ್ಯಂ' ಎಂಬ ಮತ್ತು ದಂಡಿಯ 'ತಾವದಿಷ್ಟಾರ್ಥವ್ಯವಚ್ಛಿನ್ನಾ ಪದಾವಲೀ ಕಾವ್ಯಂ' ಎಂಬ ವಾಕ್ಯಗಳೆಡರನ್ನೂ ಒಗ್ಗೂಡಿಸಿದಂತೆ "ಕವಿಭಾವಕೃತಾನೇಕ ಪ್ರವಿಭಾಗ ವಿವಿಕ್ತ ಸೂಕ್ತಮಾರ್ಗಂ ಕಾವ್ಯಂ ಸವಿಶೇಷ ಶಬ್ದರಚನಂ ವಿವಿಧಾರ್ಥವ್ಯಕ್ತಿ ವರ್ತಿತಾಲಂಕಾರಂ" (ಬಗೆಬಗೆಯ ಅರ್ಥ ಪ್ರಕಟಿಸುವಂತೆ ವಿಶೇಷ ಹಾಗೂ ಅಲಂಕಾರಗಳಿಂದ ಕೂಡಿ ಸೂಕ್ತಮಾರ್ಗದಲ್ಲಿ ನಿರ್ಮಾಣಗೊಂಡ ಕವಿಭಾವವೇ ಕಾವ್ಯ) ಎಂದು ಕಾವ್ಯದ ವಿಸ್ತೃತ ಸೂತ್ರವೊಂದನ್ನು ನೀಡುತ್ತದೆ. ಮುಂದೆ ಕಾವ್ಯವನ್ನು ಪುರುಷನೆಂದು ಪರಿಭಾವಿಸಲಾಗಿದೆ (1. 23). ಕಾವ್ಯಪುರುಷನ ಎರಡು ಭಾಗಗಳೆಂದರೆ ಅಲಂಕಾರ ಮತ್ತು ಶರೀರ ಎಂಬ ಎರಡು ಪರಿಕರಗಳು ಎನ್ನಲಾಗಿದೆ (1. 24). (ಆದರೆ ಮುಂದೆ ಈ ಕೃತಿಯಲ್ಲಿಯೇ 'ಕೃತಿವಧು''ಕೃತಿನಾರಿ' ಎನ್ನುವ ಮಾತುಗಳು ಬರುತ್ತವೆ). ಕಾವ್ಯದ ಶರೀರವು ಗದ್ಯ ಮತ್ತು ಪದ್ಯ ಎಂದು ಎರಡು ಬಗೆಯವು ಎಂದು ಹೇಳಿ, ಪದಪಾದ ನಿಯಮವಿಲ್ಲದಿದ್ದರೂ ಅಲಂಕಾರಗಳಿಂದ ಕೂಡಿದ್ದು ಅರ್ಥವ್ಯಕ್ತಿಯನ್ನು ನೀಡುವುದು ಗದ್ಯ ಎನ್ನಲಾಗಿದೆ (ಮುಂದೆ "ಪದ್ಯಂ ಸಮಸ್ತ ಜನತಾಹೃದ್ಯಂ

ಪದವಿದಿತ ಪಾದನಿಯಮ ನಿವೇದ್ಯಂ" ಎನ್ನುತ್ತದೆ – 1. 30). ಮುಂದೆ 'ಸದಮಳ ಸಮಸಂಸ್ಕೃತ ಕಾವ್ಯ'ವನ್ನು ಹೆಸರಿಸಿ ಹರ್ಷಚರಿತ ಮತ್ತು ಕಾದಂಬರಿಗಳು ಇವಕ್ಕೆ ಉದಾಹರಣೆ ಎನ್ನಲಾಗಿದೆ (1. 26). ಸಮಸಂಸ್ಕೃತ ಎನ್ನುವುದು ಶಬ್ದಗಳಿಗೆ ಅನ್ವಯಿಸುವ ಪದ; ಹೀಗಾಗಿ ಸಮಸಂಸ್ಕೃತ ಕಾವ್ಯ ಎಂದರೇನೆಂಬುದು ತೊಡಕಿನ ಪ್ರಶ್ನೆಯಾಗಿದೆ.

ಕಾವ್ಯಪ್ರಯೋಜನ: ಇದರಲ್ಲಿ ಶ್ರೇಷ್ಠ ಕಾವ್ಯದಿಂದಾಗುವ ಪ್ರಯೋಜನವನ್ನು ಕುರಿತ ವಿವೇಚನೆಯಿದೆ. ಅಂದರೆ ಕಾವ್ಯಗಳನ್ನು ಓದಬೇಕಾದ ಆವಶ್ಯಕತೆಯನ್ನು ಮನದಟ್ಟು ಮಾಡಿಕೊಡುವ ಪ್ರಯತ್ನವಿದೆ. ಪರಮಕವಿಗಳ ಕೃತಿಗಳು ಓದುಗನಲ್ಲಿ ಪಾಪ–ಪುಣ್ಯ, ಹಿತಕರ–ಅಹಿತಕರ, ಸುಖಕರ–ದುಃಖೋಪಾತ್ತ ಎಂಬ ವಿವೇಚನೆಯನ್ನುಂಟು ಮಾಡುತ್ತದೆ; ಕವೀಶರ ರಚನೆಗಳು ಸಹೃದಯನಿಗೆ ಲೌಕಿಕ–ಪಾರಲೌಕಿಕಗಳ ಬಗೆಗಿನ ವಿವೇಚನೆ, ಪುರುಷಾರ್ಥಗಳ ಪ್ರಾಮುಖ್ಯ ಇವುಗಳನ್ನು ತಿಳಿಸಿಕೊಟ್ಟರೆ, ಕವಿಗೆ ಚಿರಸ್ಥಾಯಿಯಾದ ಕೀರ್ತಿ ದೊರೆಯುವುದೆಂಬ ಬಗ್ಗೆ ಮನದಟ್ಟುಮಾಡಿ ಕೊಡುತ್ತವೆ (1.20). ಆದರೆ ಸಾಮಾನ್ಯವಾಗಿ ಕಾವ್ಯದ ಆತ್ಯಂತಿಕ ಪ್ರಯೋಜನವೆಂದು ಭಾವಿಸಲಾದ 'ಆನಂದ'ದ ಬಗ್ಗೆ ಇಲ್ಲಿ ಉಲ್ಲೇಖವಿಲ್ಲ. ಇದಕ್ಕೆ ಮೂಲವಾದ ಭಾಮಹನ ಶ್ಲೋಕದಲ್ಲಿ 'ಪ್ರೀತಿ' ಎಂಬ ಶಬ್ದವಿದೆ; ಅದನ್ನು ಡಾ। ಕೆ. ಕೃಷ್ಣಮೂರ್ತಿಗಳು 'ಆನಂದ' ಎಂದೇ ಅನುವಾದಿಸುತ್ತಾರೆ.

ಕನ್ನಡ ಕಾವ್ಯ ಪ್ರಕಾರಗಳು : ಕನ್ನಡ ಕಾವ್ಯಗಳಲ್ಲಿ ಗದ್ಯಪದ್ಯ ಸಮ್ಮಿಶ್ರಿತವಾದ ರಚನೆಯನ್ನು ಗದ್ಯಕಥಾ ಎಂದು ಚಿರಂತನಾಚಾರ್ಯರುಗಳು ಕರೆಯುವರೆನ್ನುತ್ತದೆ ಮಾರ್ಗ (1. 27). ಅಂದರೆ ಗದ್ಯಕಥಾ ಎಂಬುದು ಕನ್ನಡ ಕಾವ್ಯ ಪ್ರಕಾರಗಳಲ್ಲಿ ಒಂದು, ಹಾಗಾಗಿ ಕನ್ನಡದ ವೈಶಿಷ್ಟ್ಯ ಎಂದು ಹೇಳಿದಂತಾಯಿತು. ಇದೇ 'ಚಂಪೂ' ಇರಬಹುದೇ ಎಂಬ ಅನುಮಾನ ಮೂಡುತ್ತದೆ. ವಿಚಿತ್ರವೆಂದರೆ ಕವಿರಾಜಮಾರ್ಗಕಾರ ತನ್ನ ಕೃತಿಗೆ ಆಕರ ಮತ್ತು ಮಾದರಿಯಾಗಿ ಬಳಸಿಕೊಂಡದ್ದು ಮುಖ್ಯವಾಗಿ ದಂಡಿಯ 'ಕಾವ್ಯಾದರ್ಶ'ವನ್ನು. ದಂಡಿಯು ಮೊದಲಿಗೆ ಚಂಪೂವಿನ ಲಕ್ಷಣವನ್ನು ಕುರಿತು "ಗದ್ಯಪದ್ಯಮಯೀ ಕಾಚಿತ್

ಚಂಪೂರಿತ್ಯಭಿಧೀಯತೇ” ಎಂಬ ಸೂತ್ರವನ್ನಿತ್ತಂತೆ ವಿದ್ವಾಂಸರು ಭಾವಿಸುತ್ತಾರೆ. ಮಿಕ್ಕೆಡೆಗಳಲ್ಲಿ ದಂಡಿಯನ್ನು ಅನುಸರಿಸುವ ಮಾರ್ಗಕಾರನು ಚಂಪೂ ಎಂಬ ಮಾತನ್ನೇ ಬಳಸುವುದಿಲ್ಲ, ಅದರ ಬದಲು ಅಂತಹ ಲಕ್ಷಣವನ್ನುಳ್ಳ 'ಗದ್ಯಕಥಾ' ಬಗ್ಗೆ ಮಾತ್ರ – ಅದೂ ಕನ್ನಡಗಬ್ಬ ಎಂದು – ಯಾಕೆ ಹೇಳುತ್ತಾನೆ ಎಂಬಪ್ರಶ್ನೆ ಏಳುತ್ತದೆ. ಈ ಮಾತು 'ಕವಿರಾಜಮಾರ್ಗ'ದ ನಂತರ ಚಾಲತಿಗೆ ಬಂದಿರಬಹುದೇ ಎಂಬ ಅನುಮಾನವೂ ಮೂಡುತ್ತದೆ. ಅಥವಾ ಚಂಪೂ ಕುರಿತ ದಂಡಿಯದೆನ್ನಲಾದ ಸೂತ್ರ ಪ್ರಕ್ಷೇಪವಿರಬಹುದೇ? ಅಂದರೆ “ಸಂಸ್ಕೃತದಲ್ಲಿ ಕೂಡ ಚಂಪೂ ಎಂಬ ಮಾತು ದಂಡಿಗಿಂತ ಈಚೆಗೆ ಬಳಕೆಗೆ ಬಂದಿರಬೇಕು” (ಎಂವಿಸೀ, ಕವಿರಾಜಮಾರ್ಗಂ, ಪು. 183).

ಕನ್ನಡದ ಎರಡು ವಿಶಿಷ್ಟ ಕಾವ್ಯಪ್ರಕಾರಗಳೆಂದು ಬೆದಂಡೆ ಮತ್ತು ಚತ್ತಾಣಗಳನ್ನು ಹೆಸರಿಸಿ ಅವುಗಳ ಸ್ವರೂಪವನ್ನು ಮಾರ್ಗವು ವಿವರಿಸಿದೆ. ಕಂದಗಳು ಮತ್ತು ವೃತ್ತಗಳು ಸೇರಿಕೊಂಡು “ಜಾತಿಜಾಣೆಸೆಯೆ ಬೆಡಂಗೊಂದಿವಱಿೊಳಮರೆ ಪೇಟಿಲ್ ಸುಂದರ ರೂಪಿಂ ಬೆದಂಡೆಗಬ್ಬಮದಕ್ಕುಂ” ಎನ್ನುತ್ತಾನೆ ಶ್ರೀವಿಜಯ. 'ಜಾತಿಜಾಣ್' ಎಂಬ ಮಾತು ಏನನ್ನು ಸೂಚಿಸಬಹುದು? ಇದನ್ನು ಎಂ.ವಿ.ಸೀ. 'ದೇಶಿಗೆ ವಿಶಿಷ್ಟವಾದ ಕೌಶಲ' ಎನ್ನುತ್ತಾರೆ. ಇದರಿಂದಾಗಿ ಬೆದಂಡೆಗೆ 'ಸುಂದರ ರೂಪ'ವೊದಗುತ್ತದೆ ಎಂಬುದು ಅವನ ಅಭಿಮತವೇ? ಅಂತೆಯೇ ಹೆಚ್ಚು ಕಂದಗಳಿದ್ದು, ಜೊತೆಗೆ ಸುಂದರ ವೃತ್ತಗಳೂ ಚೌಪದಿ ತ್ರಿಪದಿಗಳಿಂದ ಕೂಡಿ 'ಅಂದಂಬೆತ್ತೆಸೆಯೆ' ರಚಿಸಿದರೆ ಚತ್ತಾಣವಾಗುತ್ತದೆ ಎನ್ನುತ್ತಾನೆ (1. 34–35). ಇಲ್ಲಿಯೂ ಕನ್ನಡದ ಅಂಶಛಂದಸ್ಸುಗಳ ರಚನೆಯಿಂದ ಅಂದವೊದಗುತ್ತದೆ ಎಂಬುದು ಅವನ ಅಭಿಪ್ರಾಯವೇ? ಈ ಮಾತುಗಳು ಪಂಪನ 'ಬಗೆ ಪೊಸತಪ್ಪುದಾಗಿ ದೇಸಿಯೊಳ್ ಪುಗುವುದು' ಎಂಬಂತಹ ಮಾತಿಗೆ ಪ್ರೇರಕವೇ? ಹೇಗೂ ಇರಲಿ, ಶ್ರೀವಿಜಯನ ಒಲವು ಕನ್ನಡದ ಸ್ವಂತದ್ದರ ಬಗ್ಗೆ ಇರುವುದಂತೂ ಸ್ಪಷ್ಟ.

ಸಮೃದ್ಧ ಕನ್ನಡ ಕಾವ್ಯ ಪರಂಪರೆ: ಮಾರ್ಗವು ಕನ್ನಡ ಕಾವ್ಯಪರಂಪರೆಯ ಸಮೃದ್ಧಿಯ ಬಗ್ಗೆ ಹೆಮ್ಮೆಯಿರಿಸಿಕೊಂಡಿದೆ. ಇದರಲ್ಲಿ

ಹಲವಾರು ಮಂದಿ ಗದ್ಯ ಮತ್ತು ಪದ್ಯಕವಿಗಳನ್ನು ಹೆಸರಿಸಲಾಗಿದೆ. ಮಾರ್ಗವು "ವಿಮಲೋದಯ ನಾಗಾರ್ಜುನ ಸಮೇತ ಜಯಬಂಧು ದುರ್ವಿನೀತಾದಿಗಳೀ ಕ್ರಮದಿಂ ನೆಗಟ್ಟಿ ಗದ್ಯಾಶ್ರಮಪದ ಗುರುತಾಪ್ರತೀತಿಯಂ ಕೆಯ್ಕೊಂಡರ್" (1. 29) ಎಂದು ಕನ್ನಡ ಗದ್ಯಕವಿಗಳನ್ನು ಹೆಸರಿಸುತ್ತದೆ. ಇಲ್ಲಿನ ಹೆಸರುಗಳಲ್ಲಿ ವಿಮಲೋದಯ ಎಂಬುದು ವಿಮಲ ಮತ್ತು ಉದಯ ಎಂಬ ಇಬ್ಬರನ್ನೂ ಸೂಚಿಸುವುದೇ ಮುಂತಾದ ಪ್ರಶ್ನೆಗಳನ್ನೂ ವಿದ್ವಾಂಸರು ಎತ್ತಿದ್ದಾರೆ. ಜೊತೆಗೆ "ಈ ಕ್ರಮದೊಳ್" ಎಂಬ ಮಾತು ಇವರ ಕಾಲಾನುಕ್ರಮವನ್ನು ಅಥವಾ ಅವರ ಕೃತಿಯೋಗ್ಯತೆಯ ಮಟ್ಟವನ್ನು ಸೂಚಿಸುತ್ತದೆಯೇ ಎಂದೂ ಅನುಮಾನ ಮೂಡುತ್ತದೆ. ಗುಣಸೂರಿ ನಾರಾಯಣ ಭಾರವಿ ಕಾಳಿದಾಸ ಮಾಘಾದಿಗಳನ್ನು (ಸಂಸ್ಕೃತದ) "ಮಹಾಕಾವ್ಯ ಪ್ರಣಯಮನಾಗಿಸಿದರಮಳ ಕವಿವೃಷಭರ್ಕಳ್" ಎನ್ನಲಾಗಿದೆ (1.31). ಮುಂದಿನ ಪದ್ಯದಲ್ಲಿ ಕನ್ನಡ ಕವಿಗಳೆಂದು "ಪರಮಶ್ರೀ ವಿಜಯಕವೀಶ್ವರ ಪಂಡಿತ ಚಂದ್ರ ಲೋಕಪಾಲಾದಿಗಳ'ನ್ನು ಹೆಸರಿಸಲಾಗಿದೆ (1. 32). ಇಲ್ಲಿನ ಹೆಸರುಗಳಲ್ಲಿಯೂ 'ಪಂಡಿತ' 'ಚಂದ್ರ' ಬೇರೆ ಬೇರೆಯೋ 'ಪಂಡಿತಚಂದ್ರ' ಎಂಬುದು ಒಂದೇ ಹೆಸರೋ, ಪರಮ ಎಂಬುದು ಕವಿಯೊಬ್ಬನ ಹೆಸರೋ ಅಥವಾ ವಿಶೇಷಣವೋ ಎಂಬ ಅನುಮಾನಗಳು ಮೂಡುವುದು ಸಹಜ. ಆದರೆ ಒಂದಂಶವನ್ನು ವಿಶೇಷವಾಗಿ ಗಮನಿಸಬಹುದು; ಅದೆಂದರೆ ಗದ್ಯ ಸ್ವರೂಪದ ಬಗ್ಗೆ ಹೇಳಿ, ಮೊದಲು ಸಂಸ್ಕೃತ ಗದ್ಯಕಾವ್ಯಗಳೆಂದು 'ಹರ್ಷಚರಿತ' ಮತ್ತು 'ಕಾದಂಬರಿ' 'ಮೊದಲಾಗಿ ನೆಗಟ್ದಿ'ವು ಎಂದು ಹೇಳಿ (1. 26), ಆನಂತರ ಕನಿಷ್ಠ ನಾಲ್ಕು ಮಂದಿ ಕನ್ನಡ ಗದ್ಯಕವಿಗಳನ್ನು ಹೆಸರಿಸಲಾಗಿದೆ; ಹಾಗೆಯೇ, ಪದ್ಯ ಸ್ವರೂಪವನ್ನು ನಿರ್ವಚಿಸಿದ ಬಳಿಕ ಗುಣಸೂರಿ ನಾರಾಯಣ ಭಾರವಿ ಕಾಳಿದಾಸ ಮಾಘ – ಇವರನ್ನು ಹೇಳಿ 'ಆದಿ' ಎಂದು ಸೇರಿಸಿ (1. 31), ಆ ಮುಂದೆ ಕನಿಷ್ಠಪಕ್ಷ ಐದು ಮಂದಿ ಕನ್ನಡದ ಪದ್ಯಕವಿಗಳನ್ನು ಹೆಸರಿಸಲಾಗಿದೆ. (1. 32). ಸಂಸ್ಕೃತದ ಸಂಖ್ಯೆಗಳಿಗಿಂತ ಕನ್ನಡ ರಚನಕಾರರ ಸಂಖ್ಯೆಯೇ ಹೆಚ್ಚಾಗಿರುವಂತೆ ಹೇಳಿರುವುದು ಉದ್ದೇಶಪೂರ್ವಕವೇ? ಕನ್ನಡ ಕಾವ್ಯಪರಂಪರೆ ಸಂಸ್ಕೃತದಕ್ಕಿಂತ ಹೆಚ್ಚು ಸಮೃದ್ಧ ಎಂದು ಹೇಳುವ ಉದ್ದೇಶವಿದೆಯೇ? ಅಲ್ಲದೆ ಸಂಸ್ಕೃತ ಕವಿಗಳನ್ನು ಹೆಸರಿಸುವಾಗ ವಾಲ್ಮೀಕಿ

ವ್ಯಾಸರನ್ನು ಹೆಸರಿಸದಿರಲು ಕಾರಣವೇನು? ಎಂಬ ಪ್ರಶ್ನೆಯೂ ಏಳುತ್ತದೆ. ರಾಮಾಯಣ, ಮಹಾಭಾರತಗಳನ್ನು ಇತಿಹಾಸವೆನ್ನುವ ಸಂಪ್ರದಾಯವೂ ಇದೆಯಲ್ಲ; ಹಾಗಾಗಿ ಅವುಗಳ ಕರ್ತೃಗಳನ್ನು ಕವಿಗಳೆಂದು ಮಾರ್ಗಕಾರನು ಹೆಸರಿಸದೆ ಬಿಟ್ಟಿರಬಹುದೇ?

ಕೃತಿರಚನೆಯ ಉದ್ದೇಶ ಮತ್ತು ರೀತಿ: ಕನ್ನಡದಲ್ಲಿ ಕಾವ್ಯಲಕ್ಷಣಗಳನ್ನು ವಿವರಿಸಬಲ್ಲ 'ಪರಮಾಚಾರ್ಯರು' ಇಲ್ಲವಾದ್ದರಿಂದ, ತನಗೆ ಕೃತಿ ರಚಿಸಲು 'ಕನ್ನಡಕ್ಕೆ ನಾಡವರೋಜರ್' ಎನ್ನುತ್ತಾನೆ ಕೃತಿಕಾರ (1. 42). ನಾಡವರೆಲ್ಲ ಓಜರು ಎಂಬುದು ಇದರರ್ಥವೋ, ಓಜರು ಜನಸಾಮಾನ್ಯರೇ ವಿನಾ ಬಲ್ಲವರಲ್ಲ ಎಂದೋ, ಅಥವಾ ಜನರಿಂದಲೇ ತಾನು ಭಾಷೆಯ ಗುಣದೋಷಗಳನ್ನು ಕಲಿತು ಕೃತಿ ರಚಿಸುವೆನೆಂಬ ಭಾವನೆಯೋ – ಹೇಗಾದರಾಗಬಹುದು! ಕನ್ನಡವು ಜನಭಾಷೆಯಾದುದರಿಂದಲೂ, ಕನ್ನಡನಾಡು ವಿಶಾಲವಾದುದರಿಂದಲೂ ಬೇರೆ ಬೇರೆ ಪ್ರದೇಶಗಳ ಕನ್ನಡಿಗರ ಮಾತಿನಲ್ಲಿ ಭೇದಗಳಿವೆ; ಈ ಪ್ರಾದೇಶಿಕ ಭೇದಗಳನ್ನೇ ಇಲ್ಲಿ 'ದೇಶೀ' ಎನ್ನಲಾಗಿದೆ. ಅವು ಎಷ್ಟಿವೆಯೆಂದರೆ ಸಾವಿರ ನಾಲಗೆಯ ವಾಸುಕಿಗೇ ಗೊಂದಲಗೊಳಿಸುವಷ್ಟು! (1.46) ಹೀಗಾಗಿ ಹಿಂದಿನ ಮಾರ್ಗಕಾವ್ಯಗಳಲ್ಲಿನ ದೋಷಗಳನ್ನು ಹೇಗೆಯೋ ಹಾಗೆಯೇ ಸಂಭಾವ್ಯ ದೋಷಗಳನ್ನು ಅನುಲಕ್ಷಿಸಿ ನುಡಿಬಳಕೆಯ ಬಗ್ಗೆ ವಿವರಿಸುವ ಇರಾದೆ ಇಲ್ಲಿದೆ (1. 47).

ಹಳಗನ್ನಡ: ಮೊದಲ ಪರಿಚ್ಛೇದದ ನಲವತ್ತೆಂಟನೆಯ ಪದ್ಯವು ಹಳಗನ್ನಡವನ್ನು ಉಲ್ಲೇಖಿಸುತ್ತದೆ (1. 48). ಇದರ ಬಗ್ಗೆ ಹೇಳುತ್ತ ಎಂವಿಸೀ "ಮಾರ್ಗಕಾರನ ಕಾಲದಲ್ಲಿ ಬಳಕೆಯಲ್ಲಿದ್ದ ಕನ್ನಡ ಅವನ ಕಾಲದ 'ಹೊಸಗನ್ನಡ'; ತದ್ಭಿನ್ನವಾದ 'ಹಳಗನ್ನಡ'ವೊಂದು ಇದ್ದಿತು; ಆ ಹಳಗನ್ನಡದಲ್ಲಿ ಹಿಂದೆ ರಚಿತವಾದ ಕಾವ್ಯವನ್ನೇ ಮಾದರಿಯಾಗಿ ಇಟ್ಟುಕೊಂಡು ಕಾವ್ಯಲಕ್ಷಣವನ್ನು ಅರಿಯದವರು ಕಾವ್ಯರಚನೆ ಮಾಡಿ, ಹಳಗನ್ನಡದ ಸ್ವರೂಪವನ್ನೆ ಹಾಳುಮಾಡುತ್ತಿದ್ದರೆಂದು ಕಾಣುತ್ತದೆ. ಅಂಥವರು, ತತ್ಕಾಲಕ್ಕೆ 'ದೇಸಿ'ಯಾಗಿದ್ದ ಹೊಸಗನ್ನಡದಲ್ಲಿಯಾದರೂ ಕಾವ್ಯರಚನೆ ಮಾಡಿದ್ದರೆ ಎಷ್ಟೋ ಲೇಸಾಗಿರುತ್ತಿದ್ದಿತು – ಇದಿಷ್ಟು

ಮಾರ್ಗಕಾರನ ಆಶಯುವೆಂಬುದು ನಮ್ಮ ಗ್ರಹಿಕೆ" ಎನ್ನುತ್ತಾರೆ ('ಕವಿರಾಜಮಾರ್ಗಂ', ಪು. 190). ಮಾರ್ಗಕಾರ 'ದೇಶೀ' 'ದೇಸಿ' ಎಂಬೆರಡು ರೂಪಗಳನ್ನು ಭಿನ್ನಾರ್ಥದಲ್ಲಿ ಬಳಸುತ್ತಿದ್ದಾನೆಯೇ? 'ದೇಶೀ' ಎಂದರೆ ಪ್ರಾದೇಶಿಕ ಉಪಭಾಷೆ ಎಂಬರ್ಥದಲ್ಲಿಯೂ, 'ದೇಸಿ' ಎಂಬುದನ್ನು ಸುಂದರವಾದುದು ಎಂಬರ್ಥದಲ್ಲಿಯೂ ಬಳಸುತ್ತಿರಬಹುದೇ?

ದೋಷ–ಅದೋಷ ವಿವೇಚನೆ: 1. ಕನ್ನಡ–ಸಂಸ್ಕೃತಗಳ ಸಂಬಂಧ: ಮಾರ್ಗಕಾರನು ಮೊದಲಿಗೇ ದೋಷ–ಅದೋಷಗಳ ಸ್ವರೂಪವನ್ನು ಹೇಳಿದ್ದಾನೆ. ಅವುಗಳು ಮೂರು ಬಗೆ: ಸಮಸಂಸ್ಕೃತ–ಕನ್ನಡ ಪದಗಳ ಬೆರಸುವಿಕೆ, ನಾಲ್ಕು ಕೃತಿದೋಷಗಳು, ಯತಿಭಂಗಾದಿ ಹದಿನಾರು ಮತ್ತು ಕಾರಕಾದಿ ದೋಷಗಳು. ಅವನ ದೃಷ್ಟಿಯಲ್ಲಿ ದೂಷ್ಯವಲ್ಲದ್ದೇ 'ಅದೋಷ' ಅಂದರೆ ಗುಣ. ದೋಷ–ಅದೋಷಗಳನ್ನು ಲಕ್ಷ್ಯಗಳ ಸಮೇತ ವಿವರಿಸಿರುವುದು ಇಲ್ಲಿನ ವೈಶಿಷ್ಟ್ಯ. ಆ ಕಾಲಕ್ಕೇ ಕನ್ನಡ ಬರವಣಿಗೆಯಲ್ಲಿ ಸಂಸ್ಕೃತದ ಶಬ್ದಗಳ ಬಳಕೆ ಎಷ್ಟಿರಬೇಕು ಎಂಬ ಜಿಜ್ಞಾಸೆ ಆರಂಭವಾಗಿದ್ದಿರ ಬೇಕು (ಈಗ ಇಂಗ್ಲಿಷ್‌ನ ಬಗ್ಗೆ ಚರ್ಚೆ ನಡೆದಿರುವಂತೆ). ಹೀಗಾಗಿ ಅಲ್ಲಿ ಕನ್ನಡ–ಸಂಸ್ಕೃತ ಶಬ್ದಗಳ ಬಳಕೆಯನ್ನು ಕುರಿತು ಹೇಳಲಾಗಿದೆ. ಸಮಸಂಸ್ಕೃತ ಪದಗಳನ್ನು ಕನ್ನಡದೊಂದಿಗೆ ಬೆರಸುವ ಬಗ್ಗೆ ಅವನ ಆಕ್ಷೇಪವಿದೆ (1. 51). ಸಂಸ್ಕೃತ ಅವ್ಯಯಗಳಿಗೆ ಕನ್ನಡ ಪ್ರತ್ಯಯಗಳನ್ನು ಹತ್ತಿಸುವುದು, ಸಂಸ್ಕೃತಾವ್ಯಯಗಳನ್ನು ಕನ್ನಡದಲ್ಲಿ ಹಾಗೆಯೇ ಬಳಸುವುದು, ಸಂಸ್ಕೃತಾವ್ಯಯಗಳನ್ನು ಪೂರ್ವಪದಗಳಾಗಿ ಬಳಸಿ ಕನ್ನಡ ಸಮಾಸಪದಗಳನ್ನು ಸೃಷ್ಟಿಸುವುದು – ಇವುಗಳ ಬಗ್ಗೆ ಮಾರ್ಗಕಾರನ ಆಕ್ಷೇಪವಿದೆ (1. 52–54). ಸಮಸಂಸ್ಕೃತವನ್ನು ಈಗ 'ತತ್ಸಮ' ಎನ್ನುತ್ತೇವೆ; ಆದರೆ ಕೇಶಿರಾಜನ ಪ್ರಕಾರ ತತ್ಸಮಗಳು ಬೇರೆ ('ಶಬ್ದಮಣಿದರ್ಪಣಂ': ಸೂತ್ರ, 297–98). ಮಾರ್ಗಕಾರನ ಪ್ರಕಾರ ಸಂಸ್ಕೃತ–ಕನ್ನಡ ಶಬ್ದಗಳನ್ನು ಕೂಡಿಸಿ ಸಮಾಸಗಳನ್ನು ಮಾಡುವುದು 'ಮಱುಗುವ ಪಾಲ್ಗಳೆಯ ಪನಿಗಳಂ ಬೆರಸಿದವೋಲ್' ಸರಿಹೊಂದವು (1. 58), ಇದನ್ನೇ ಅರಿಸಮಾಸ ಎಂದು ಹಿಂದಿನ ವೈಯಾಕರಣಿಗಳು ಕರೆದರು. ಆದರೆ ಜನಬಳಕೆಯು

ಇಂಥ ಕಟ್ಟುಪಾಡುಗಳನ್ನು ಗಮನಿಸದೆ ಅನುಕೂಲ ರೀತಿಯಲ್ಲಿ ನಡೆಯುವುದೇ ರೂಢಿ. ಅದರ ಬದಲು ಸಂಸ್ಕೃತ-ಸಂಸ್ಕೃತ, ಕನ್ನಡ-ಕನ್ನಡ ಪದಗಳ ನಡುವಣ ಸಮಾಸಗಳು 'ಕನಕರಚನೆಯೊಳ್ ಮಣಿನಿಕರ'ದ ಹಾಗೆ ಸೊಗಸುತ್ತವೆ (1. 61).

2. ಕೃತಿದೋಷಗಳು: ಶ್ರುತಿದುಷ್ಟ, ಅರ್ಥದುಷ್ಟ, ಶ್ರುತಿಕಷ್ಟ ಮತ್ತು ಕಲ್ಪನೋಕ್ತಿಕಷ್ಟಗಳು 'ಕೃತಿದೋಷಗಳು' (ಕೇಳಲು ಅಹಿತವಾಗಿರುವುದು, ಅಹಿತಕರ ಅರ್ಥ ನೀಡುವುದು, ಕೇಳಲು ಕರ್ಕಶವಾಗಿರುವುದು ಹಾಗೂ ಕವಿಯ ಆಶಯಕ್ಕೆ ಭಂಗವುಂಟುಮಾಡುವುದು). ಇವುಗಳನ್ನು ನಾಲ್ಕು ಪದ್ಯಗಳಲ್ಲಿ ವಿವರಿಸಲಾಗಿದೆ (1. 63-66). ಆದರೆ ಚಿತ್ರಕಾವ್ಯದಲ್ಲಿ ಶ್ರುತಿಕಷ್ಟವೂ, ನಗಿಸುವ ಉದ್ದೇಶ ಹೊಂದಿರುವ 'ಪಗರಣ'ದಲ್ಲಿ ಉಳಿದವೂ ದೋಷವಾಗಲಾರವು ಎಂದೂ ಹೇಳಲಾಗಿದೆ (1. 68).

3. ಇತರ ದೋಷಗಳು: ಯತಿಭಂಗ, ಅರ್ಥಶೂನ್ಯ, ವಿರುದ್ಧಾರ್ಥ, ಉಕ್ತಪುನರುಕ್ತ, ಚ್ಯುತ, ಯಥಾಸಂಖ್ಯ, ವ್ಯವಹಿತ, ಅಚ್ಛಂದ, ವಿಸಂಧಿ, ನೇಯಾರ್ಥ, ಆಗಮವಿರುದ್ಧ, ಸಮಯವಿರುದ್ಧ, ನ್ಯಾಯವಿರುದ್ಧ, ಕಳಾವಿರುದ್ಧ, ಕಾಲವಿರುದ್ಧ, ಲೋಕವಿರುದ್ಧ, ದೇಶವಿರುದ್ಧ ಎಂಬ ಇತರ ದೋಷಗಳನ್ನು ಹೇಳಿ (1. 69-70), ಇವುಗಳಲ್ಲಿ ಯತಿಭಂಗವು ಸಂಸ್ಕೃತದಲ್ಲಿ ದೋಷವೆನಿಸಬಹುದು, ಆದರೆ ಕನ್ನಡದಲ್ಲಿ ಅಲ್ಲ; ಹಾಗೆಯೇ ಖಂಡಪ್ರಾಸವನ್ನು ಕನ್ನಡಕ್ಕೆ 'ಅತಿಶಯ' ಎಂದು ಸಮರ್ಥಿಸಲಾಗಿದೆ (1. 75); ವಿಸಂಧಿ ದೋಷವನ್ನು ನಿಷೇಧಿಸುವಾಗ ಹೇಗೆ ಸಂಧಿಗಳೂ ಕವಿತೆಯಲ್ಲಿ ಕುಂದನ್ನು ತರುತ್ತದೆ ಎನ್ನಲಾಗಿದೆ (1. 98-99); ಕನ್ನಡದಲ್ಲಿ ಕಾರಕದೋಷ ಹೇಗೆ ಸಂಭವಿಸಬಹುದೆಂಬುದನ್ನು ಉದಾಹರಣೆಗಳೊಂದಿಗೆ ವಿವರಿಸಿರುವುದು (1. 116-117); ಕನ್ನಡದಲ್ಲಿ ಜಾತ್ಯೇಕವಚನದ ವೈಶಿಷ್ಟ್ಯವನ್ನು ಗುರುತಿಸಿರುವುದು (1. 120); ಸಮುಚ್ಚಯವಾಚಕದಲ್ಲಿ ಸಂಭವಿಸುವ ದೋಷದ ವಿವರಣೆ (1. 121); ಛಂದೋ ದೋಷ, ಅವಧಾರಣೆ, ವಿಶಂಕೆ - ಇವುಗಳಲ್ಲಿ ಕೇವಲ ಅಲ್ಪಪ್ರಮಾದದಿಂದ ತೋರುವ ಅರ್ಥವೈಪರೀತ್ಯ (1. 122) - ಇವುಗಳನ್ನು ವಿವರಿಸಿರುವ ರೀತಿಯು ಕೃತಿಕಾರನ ಸೂಕ್ಷ್ಮಮತಿಗೆ ಹಿಡಿದ ಕನ್ನಡಿಯಾಗಿದೆ.

ಈ ದೋಷಗಳ ವಿವರಣೆಯಾದ ಬಳಿಕ "ಇಂತು ಕಾರಕಂಗಳೊಳ್ ಸಂತವುಱಿಯೆ ಪೇೞ್ದ ಗುಣಮುಂ ದೋಷಮುಮಂ ಚಿಂತಿಸಿ ಪೆಱವುಮಿನ್ನಪ್ಪುದಂ ಭ್ರಾಂತಿಲ್ಲದಱಿದುಕೊಳ್ಗೆ ಕವಿಗಳ್ ಕೃತಿಗಳೊಳ್" (ಈತನಕ ಹೇಳಿದ ಕಾರಕದೋಷಗಳನ್ನು ಕೂಲಂಕಷವಾಗಿ ಪರಿಶೀಲಿಸುವುದರ ಜೊತೆಗೆ ಕವಿಗಳ ಕೃತಿಪರಿಶೀಲನೆಯಿಂದ ಇತರ ದೋಷಗಳನ್ನೂ ತಿಳಿದುಕೊಳ್ಳಲಿ) ಎಂದು ಆಶಿಸುತ್ತಾನೆ. ಜೊತೆಗೆ ವ್ಯಾಕರಣ ಮತ್ತು ಕಾವ್ಯಮೀಮಾಂಸೆಗಳ ನಡುವಣ ಸಂಬಂಧವನ್ನು ಗುರುತಿಸಿರುವ ರೀತಿ ಅನನ್ಯವಾಗಿದೆ.

ಕಾವ್ಯದಲ್ಲಿ ದೋಷವುಂಟಾದರೆ ಆಗುವ ಪರಿಣಾಮಗಳ ಬಗ್ಗೆಯೂ ಇಲ್ಲಿ ಒತ್ತಿ ಹೇಳಲಾಗಿದೆ. ಆಯಾ ದೋಷವನ್ನು ವಿವರಿಸುವಾಗ ದೃಷ್ಟಾಂತಗಳನ್ನು ನೀಡಿ ದೋಷಗಳ ಪರಿಣಾಮವನ್ನು ಕೃತಿಕಾರ ಮನವರಿಕೆ ಮಾಡಿಕೊಡುತ್ತಾನೆ. ಕಣ್ಣಿಗೆ ಕಸ ಬಿದ್ದರೆ ಹೇಗೆ ತೊಂದರೆಯಾಗುವುದೋ ಅವಗುಣ ಕೊಂಚವಾದರೂ ಪರಿಣಾಮ ವ್ಯಾಪಕ (1. 43); ಅಂತೆಯೇ ದುರ್ಜನ ಸಂಗ ಮಾಡಿದ ಕುಲವಧುವಿಗೆ ಕಳಂಕ ತಟ್ಟುವಂತೆ ಕೃತಿವಧುವಿಗೆ ದೋಷವು ಗುಣವನ್ನು ಮಾಸಿಸುತ್ತದೆ (1. 112) ಎಂಬ ಹೋಲಿಕೆಗಳ ಮೂಲಕ ಕಾವ್ಯವು ದೋಷರಹಿತವಾಗುವ ಹಾಗೆ ನೋಡಿಕೊಳ್ಳಬೇಕಾದ ಆವಶ್ಯಕತೆಯನ್ನು ಬಣ್ಣಿಸುತ್ತದೆ. ಅಲ್ಲದೆ, ಕಣ್ಣಿಗೆ ಕಾಡಿಗೆ ಕಾಣದಂತೆ ಕವಿಗೆ ತನ್ನ ಕಾವ್ಯದೋಷ ಕಾಣಿಸದಿರಬಹುದಾದ್ದರಿಂದ ಇತರರಿಂದ ಓದಿಸಬೇಕೆಂದು ಸಲಹೆಯನ್ನೂ ನೀಡುತ್ತಾನೆ ಮಾರ್ಗಕಾರ (1. 45). ಕಾವ್ಯದಲ್ಲಿ 'ನೀತಿನಿರಂತರ ಕ್ರಮ'ವೊಂದಿರುತ್ತದೆ, ಹಾಗೆಂದರೆ, ನುಡಿಗಳು ಭಾವಾನುಗುಣವಾಗಿರಬೇಕು; ಅವುಗಳನ್ನು ಹೇಳಬೇಕೆಂದಿರುವ ಭಾವವನ್ನು ಮೀರದಂತೆ ಅಂದರೆ ಶಬ್ದಗಳನ್ನು ಪೋಲು ಮಾಡದಂತೆ ಬಳಸಬೇಕು; ಆ ನುಡಿಗಳಲ್ಲಿ ನಾಣ್ನುಡಿಯ ಬೆಡಗಿರಬೇಕು; ಕನ್ನಡ ನುಡಿಗಳೊಂದಿಗೆ ಬಳಸುವ ಸಂಸ್ಕೃತ ಪದಗಳು ಕರ್ಕಶವಾಗಿರಬಾರದು – ಹೀಗೆ **"ಮೆಲ್ಪುವೆತ್ತು ದಾಂಗುಡಿವಿಡುವಂತೆ ನೀಳ್ದುನಿಲೆ ಪೇೞ್ವುದುನೀತಿನಿರಂತರ ಕ್ರಮಂ"** (1. 149).

ದ್ವಿತೀಯ ಪರಿಚ್ಛೇದ – ಶಬ್ದಾಲಂಕಾರವರ್ಣನಾನಿರ್ಣಯಂ

ಈ ಪರಿಚ್ಛೇದದಲ್ಲಿನ ಮುಖ್ಯ ವಿಷಯವು ಶಬ್ದಾಲಂಕಾರಗಳ ವಿವರಣೆಯಾದರೂ, ಇಲ್ಲಿಯೂ ಶಬ್ದಾರ್ಥ ದೋಷಗಳ ವಿವರಣೆ, ಕನ್ನಡಕ್ಕೆ ಅತಿಶಯವಾದ ಪ್ರಾಸ ವಿಚಾರ ಮತ್ತು ಪ್ರಾಸಭೇದಗಳು ಹಾಗೂ ಉತ್ತರಮಾರ್ಗ – ದಕ್ಷಿಣಮಾರ್ಗ ಮತ್ತು ಗುಣಗಳು ಜೊತೆಗೆ ಕನ್ನಡದಲ್ಲಿಯೂ ಮಾರ್ಗಭೇದಗಳ ಸ್ಥಾಪನೆ, ದುಷ್ಕರ ಅಥವಾ ಚಿತ್ರಕಾವ್ಯಗಳ ನಿರೂಪಣೆ – ಇವುಗಳನ್ನು ಹೇಳಲಾಗಿದೆ.

ಶಬ್ದಾರ್ಥ ಸಾಂಗತ್ಯ: ಶಬ್ದಾಲಂಕಾರಗಳ ವಿವರಣೆಗೆ ತೊಡಗುವ ಮುನ್ನವೇ ಮಾರ್ಗಕಾರನು ಪದಪ್ರಯೋಗದ ಔಚಿತ್ಯದ ವಿಷಯವಾಗಿ ಕೆಲವು ಸೂಚನೆ–ಸಲಹೆಗಳನ್ನು ನೀಡುತ್ತಾನೆ. ಇಲ್ಲಿಗೆ ಇದು ಸೂಕ್ತವಾದದ್ದು, ಇಲ್ಲಿಗೆ ತಕ್ಕುದಲ್ಲ ಎಂಬ ತಿಳಿವಳಿಕೆಯಿಂದ ಮೃದುಪದಗಳನ್ನು ಬಳಸಬೇಕು; ನೆಲ್ಲು ಮೊಸರುಗಳನ್ನು ಬೆರಸಿದಂತೆ ಆಗಬಾರದು ಎಂದು ಎಚ್ಚರಿಸುತ್ತಾನೆ (3. 4). ಅರ್ಥವು ಸ್ಫುರಿಸುವಂತಿದ್ದರೂ ಶಬ್ದಾರ್ಥ ಸಾಂಗತ್ಯವಿಲ್ಲದ ರಚನೆಯು ಮುತ್ತು–ಮೆಣಸುಗಳನ್ನು ಪೋಣಿಸಿದಂತೆ ಅನುಚಿತವಾಗುತ್ತದೆ; ಹೀಗಾಗಿ ಹೊಂದಿಕೆಯಾಗದ ಪದವನ್ನು ತೆಗೆದುಹಾಕಬೇಕು (2. 5). ಹಗುರವಾಗಿ ಉಚ್ಚರಿಸಬಹುದಾದ 'ಲಘುಪದ'ಗಳ ಮುಂದೆ ಒತ್ತಕ್ಷರಗಳಿರುವ 'ಒತ್ತಿ ಬರ್ಪ' ಶಬ್ದಗಳನ್ನು ಬಳಸಿದರೆ "ಕೂಸಿನ ತಲೆಯೊಳ್ ಬಿಣ್ಪೊಜೆಯನಿಟ್ಟವೊಲಸುಖಕರಂ" ಎಂದು ಎಚ್ಚರಿಸುತ್ತಾನೆ (2. 6). ಇದನ್ನು ಲಕ್ಷ್ಯಪದ್ಯಗಳ ಮೂಲಕ ಸ್ಪಷ್ಟಪಡಿಸಲಾಗಿದೆ. ಒಂದು ಕ್ರಿಯಾಪದದೊಂದಿಗೆ ಎರಡು ಕ್ರಿಯಾ ವಿಶೇಷಣಗಳನ್ನು ಬಳಸಬಾರದು, ಅದು ಒಂದೇ ಕರುವನ್ನು ಎರಡು ಹಸುಗಳಿಗೆ ಬಿಟ್ಟಂತೆ, ಆಗ ಅದು ಒಂದರ ಹಾಲು ಕುಡಿಯುತ್ತಿದ್ದರೆ ಮತ್ತೊಂದು ಸುಮ್ಮನಿರಬೇಕು – ಈ ಸೂಚನೆಯನ್ನೂ ನಿದರ್ಶನದೊಂದಿಗೆ ಸ್ಪಷ್ಟಪಡಿಸಲಾಗಿದೆ (2. 9–12).

ಅನವಶ್ಯಕ ಪದಗಳ ಬಳಕೆ ಸಲ್ಲದು: ಇನ್, ಅಂತೆ, ಮತ್ತೆ, ಬಱಿ, ಮಿಗೆ, ಮುನ್, ನಿಲೆ, ತಾನ್, ಮೇಣ್, ಪೆಱಂ, ಗಡಂ, ಗಳಂ, ಕೆನ್ನಂ, ನಿಲ್ – ಎಂಬಂತಹ ಅನವಶ್ಯಕಶಬ್ದಗಳನ್ನು ಕೇವಲಪಾದಪೂರಣಕ್ಕಾಗಿ ಬಳಸಬಾರದೆಂಬುದು ಮಾರ್ಗಕಾರನ ಎಚ್ಚರಿಕೆ. ನಮ್ಮ ಕಾವ್ಯಗಳಲ್ಲಿ ಇಂತಹ ಭಾರವಾದ ಅರ್ಥವಿಲ್ಲದ ಶಬ್ದಗಳ ಬಳಕೆ

ಎಷ್ಟೊಂದಿದೆಯೆಂಬುದನ್ನು ಗಮನಿಸಿದರೆ ಮಾರ್ಗಕಾರನ ಸೂಚನೆಯ ಔಚಿತ್ಯದ ಅರಿವಾಗುತ್ತದೆ (2. 13–14).

ವಿಭಕ್ತಿಪ್ರತ್ಯಯಗಳ ದೀರ್ಘರೂಪ: ದ್ವಿತೀಯೆ, ಷಷ್ಠೀ ಮತ್ತು ಸಂಬೋಧನಾ ವಿಭಕ್ತಿ ಪ್ರತ್ಯಯಗಳನ್ನು ವಿಕಲ್ಪದಿಂದ ದೀರ್ಘರೂಪದಲ್ಲಿ ಬಳಸುವ ಬಗ್ಗೆ ಇಲ್ಲಿ ಸೂಚನೆಯಿದೆ (2. 15–24). ಹಾಗೆಯೇ ಪುನರುಕ್ತಿಯನ್ನು ಯುಕ್ತ ರೀತಿಯಲ್ಲಿ ಬಳಸಬೇಕು (2. 25–26) ಎಂಬ ಬಗ್ಗೆಯೂ ಹೇಳಲಾಗಿದೆ.

ಒಮ್ಮೆಗೇ ಅನೇಕ ವಿಶೇಷಣಗಳ ಬಳಕೆ: ರೂಪಕಾಲಂಕಾರಗಳಲ್ಲಿ ಮತ್ತು ವಿಶೇಷೋಕ್ತಿಗಳಲ್ಲಿ ಅನೇಕ ವಿಶೇಷಣಗಳನ್ನು ಬಳಸಬಹುದು (2. 27–29) ಎನ್ನಲಾಗಿದೆ.

ಪರಿಚ್ಛೇದದ ಮೊದಲಿಗೇ ಮಾರ್ಗಕಾರನು ಅಲಂಕಾರವೆಂದರೇನೆಂದು ಹೇಳುತ್ತಾನೆ. ಕೃತಿವಧುವಿನ ಶರೀರಕ್ಕೆ ಶೋಭೆಯೊದಗಿಸುವಂತಹ 'ಗುಣ'ಗಳೇ ಅಲಂಕಾರಗಳು (2. 1). ಇದು ದಂಡಿಯ "ಕಾವ್ಯಶೋಭಾಕರಾನ್ ಧರ್ಮಾನಲಂಕಾರಾನ್ ಪ್ರಚಕ್ಷತೇ" (ಕಾವ್ಯಕ್ಕೆ ಶೋಭೆಯನ್ನುಂಟು ಮಾಡುವ ಧರ್ಮಗಳನ್ನು ಅಲಂಕಾರಗಳೆಂದು ಕರೆಯಲಾಗುತ್ತದೆ) ಎಂಬ ವಾಕ್ಯದ ಭಾವಾನುವಾಗಿದೆ. ಅಂಥ ಅಲಂಕಾರಗಳು ಶಬ್ದ ಮತ್ತು ಅರ್ಥ ಎಂದು ಎರಡು ಬಗೆ (2. 2). ಅವುಗಳಲ್ಲಿ ಮುಖ್ಯವಾದುದು ಅರ್ಥಾಲಂಕಾರವಾದರೂ ಮೊದಲು ಶಬ್ದಾಲಂಕಾರವನ್ನು ವಿವರಿಸಲಾಗಿದೆ (2. 3) ಎನ್ನುತ್ತಾನೆ.

ಪ್ರಾಸವಿಚಾರ: ಕನ್ನಡಕ್ಕೆ ಪ್ರಾಸವು ಅತಿಶಯವಾದುದೆಂಬುದು ಮಾರ್ಗಕಾರನ ಅಭಿಮತ (2. 30). ಹಿಂದಿನ ಪರಿಚ್ಛೇದದಲ್ಲಿಯೇ ಮಾರ್ಗಕಾರನು "ದೇಸಿಯನೆ ನಿಜೆಸಿ ಖಂಡಪ್ರಾಸಮನತಿಶಯಮಿದೆಂದು ಒಯತಿಯುಂ ಮಿಕ್ಕರ್" (1. 75) ಎಂದು ಹೇಳಿದುದನ್ನು ನೆನಪಿಸಿಕೊಳ್ಳಬಹುದು. ಮಾರ್ಗಕಾರನು ಆರು ಬಗೆಯ ಪ್ರಾಸಗಳನ್ನು ಹೆಸರಿಸುತ್ತಾನೆ: 'ವಿನುತಪ್ರಾಸ', 'ಶಾಂತಪ್ರಾಸ', 'ವರ್ಗಪ್ರಾಸ', 'ಸಮೀಪಪ್ರಾಸ', 'ಅನುಗತಪ್ರಾಸ' ಮತ್ತು 'ಅಂತಗತಪ್ರಾಸ'. ಪದ್ಯದ

ಪ್ರತಿಪದದ ಎರಡನೆಯ ಅಕ್ಷರ ಒಂದೇ ಆಗಿರುವುದು 'ವಿನುತಪ್ರಾಸ'; ಸಂಯುಕ್ತಾಕ್ಷರಗಳು ಒಂದೊಂದೇ ಸ್ವರದಿಂದ ಕೂಡಿ ಪ್ರಾಸ ಶ್ರೇಣಿಯಲ್ಲಿ ವ್ಯತ್ಯಯವಿದ್ದರೆ (ತ್ತಿ, ತ್ಯು, ತ್ತೀ, ತ್ರಿ – ಹೀಗೆ) ಅದು 'ಶಾಂತಪ್ರಾಸ'; ಒಂದು ವರ್ಗದ ನಾಲ್ಕು ವ್ಯಂಜನಗಳೂ ಕ್ರಮವಾಗಿ (ಕ, ಖ, ಗ, ಘ) ಪ್ರಾಸಸ್ಥಾನದಲ್ಲಿ ಬಂದಿದ್ದರೆ 'ವರ್ಗಪ್ರಾಸ'; ಶ, ಷ, ಸವರ್ಣಗಳು ಕ್ರಮವಾಗಿ ಪ್ರಾಸಸ್ಥಾನದಲ್ಲಿ ಬಂದಿದ್ದರೆ ಅದು 'ಸಮೀಪಪ್ರಾಸ'; 'ಎಣೆಯಕ್ಕರ'ಗಳು (ಸಮಾನಾಕ್ಷರಗಳು) ಸಾಲುವಿಡಿದು (ನನ, ನನು, ನನುನ, ನಿನಿ, ನೆನೆ, ಹೀಗೆ) ಬಂದಿದ್ದರೆ 'ಅನುಗತಪ್ರಾಸ'; ಮತ್ತುಪಾದದ ಕಡೆಯಲ್ಲಿನ ಅಕ್ಷರವನ್ನೇ ಮುಂದಿನಪಾದಗಳ ಕಡೆಯಲ್ಲಿಯೂ ಬಳಸಿದರೆ ಅದು 'ಅಂತಗತಪ್ರಾಸ' (ಈಗ ಹೇಳುವ 'ಅಂತ್ಯಪ್ರಾಸ') (2. 32–44). ಆದರೆ ಪ್ರಾಸ, ಅನುಪ್ರಾಸ, ಅಂತಪ್ರಾಸಗಳು ಅತಿಶಯವಾದರೆ ಇನ್ನುಳಿದವು 'ಪ್ರಾಸಾಭಾಸಗಳು' ಎಂಬುದು ಮಾರ್ಗಕಾರನ ಅಭಿಮತ (2. 45).

ಕಾವ್ಯಮಾರ್ಗ: ಕಾವ್ಯಮಾರ್ಗದ ನಾನಾ ಭೇದಗಳನ್ನು ತಿಳಿದು ನಿಶ್ಚಯಿಸಲು ಯಾರಿಗೂ ಸಾಧ್ಯವಿಲ್ಲ; ಆದರೆ 'ಪೂರ್ವಶಾಸ್ತ್ರ'ದಲ್ಲಿ ಹೇಳಿರುವುದನ್ನು ಅನುಸರಿಸಿ ತಾನು ಅವುಗಳ ಬಗ್ಗೆ ವಿವರಿಸುವುದಾಗಿ ಮಾರ್ಗಕಾರ ಹೇಳುತ್ತಾನೆ. ಹೇಗೆ ಎಲ್ಲ ವ್ಯಕ್ತಿಗಳ ಅಂಗೋಪಾಂಗಗಳು ನಿಯತ ಸ್ಥಾನಗಳಲ್ಲಿದ್ದರೂ ಅವರಲ್ಲಿ ಒಬ್ಬರಂತೆ ಇನ್ನೊಬ್ಬರಿಲ್ಲದಿರುವಂತೆಯೇ ಶ್ರೇಷ್ಠಕವಿಗಳ ಶಬ್ದಾಲಂಕಾರರಚನೆಗಳು ಒಂದೇ ಬಗೆಯಾಗಿ ಕಂಡರೂ ಅವುಗಳು ಸಮಾನವಲ್ಲ; ಕಾವ್ಯಮಾರ್ಗದ ಉಕ್ತಿಪ್ರಭೇದಗಳು ವಿಶೇಷಗುಣಗಳಿಂದ ಕೂಡಿದ್ದರೂ ಅವುಗಳ ಕ್ರಮ ಅನಿಶ್ಚಿತ. ಹೀಗಾಗಿ ಅವುಗಳನ್ನೆಲ್ಲ ತಿಳಿಸಲು ಯಾರು ತಾನೇ ಸಮರ್ಥರು ಎಂಬುದು ಮಾರ್ಗಕಾರನ ಪ್ರಶ್ನೆ (2. 46– 50).

'ಉತ್ತರ' ಮತ್ತು 'ದಕ್ಷಿಣ' ಮಾರ್ಗಗಳು: ಕಾವ್ಯದ ಉಕ್ತಿಪ್ರಕಾರಗಳಲ್ಲಿ ಎರಡು 'ಮಾರ್ಗ'ಗಳು ಪ್ರಸಿದ್ಧ; 'ವಕ್ರ' ಮತ್ತು 'ಸ್ವಭಾವ' ಎಂಬ ನಿಯತಿಕ್ರಮಾನುಗುಣವಾಗಿ ಹುಟ್ಟಿಕೊಂಡವು. 'ದಕ್ಷಿಣ' ಮಾರ್ಗವನ್ನು ಪ್ರತ್ಯೇಕಿಸುವ ವಿಶಿಷ್ಟಗುಣ 'ಸ್ವಭಾವಾಖ್ಯಾನ' ಅಥವಾ 'ಸ್ವಭಾವೋಕ್ತಿ'; ಅನೇಕ ಭೇದಗಳನ್ನುಳ್ಳ 'ವಕ್ರೋಕ್ತಿ'ಯು 'ಉತ್ತರ' ಮಾರ್ಗದಲ್ಲಿ

ಪ್ರಚುರವಾದುದು (2. 52-53). ಮುಂದೆ 'ದಕ್ಷಿಣ' ಮಾರ್ಗದ ಹತ್ತು ಗುಣಗಳು ಎಂದು ಸಮ ಮಧುರ ನಿಬಿಡ ಕಾಂತ ಸುಕುಮಾರ ಸುಸಮಾಹಿತ ಪ್ರಸನ್ನ ಉದಾರ ಪ್ರಮಿತಗ್ರಾಮ್ಯ ಓಜಸ್ವಿ ಎಂದು ಉಕ್ತವಾಗಿವೆ; ಅವುಗಳ 'ವಿಪರ್ಯಯ' ಅಥವಾ ವ್ಯತಿರಿಕ್ತಪ್ರಯೋಗವೇ 'ಉತ್ತರಮಾರ್ಗ' ಎನ್ನುತ್ತಾನೆ (2. 54-55). ಈ ಮಾತುಗಳು ದಂಡಿಯಿಂದ ನೇರವಾಗಿ ತಂದುಕೊಂಡಂತಹವು. ದಕ್ಷಿಣ ಮಾರ್ಗದ ಹತ್ತು ಗುಣಗಳು ದಂಡಿಯು ವೈದರ್ಭಮಾರ್ಗದವುಗಳೆಂದು ಹೇಳುವ ('ವೈದರ್ಭಮಾರ್ಗಸ್ಯ ಪ್ರಾಣಾಃ ದಶಗುಣಾಃ') ಹೇಳುವ ಸಮತಾ ಮಾಧುರ್ಯಂ ಶ್ಲೇಷಃ ಕಾಂತಿಃ ಸುಕುಮಾರತಾ ಸಮಾಧಿಃ ಪ್ರಸಾದಃ ಉದಾರತ್ವಂ ಅರ್ಥವ್ಯಕ್ತಿ ಓಜಃ ಎಂಬಿವುಗಳಿಗೆ ಸಮಾನಾಂತರವಾದವು; ಅಂದರೆ ದಂಡಿಯು ವೈದರ್ಭಮಾರ್ಗವೇ ಮಾರ್ಗಕಾರ ಹೇಳುವ 'ದಕ್ಷಿಣ' ಮಾರ್ಗ; ಅಂತೆಯೇ ಅವನು ಹೇಳುವ 'ಉತ್ತರ'ಮಾರ್ಗ 'ಏಷಾಂ ವಿಪರ್ಯಯಃ ಪ್ರಾಯೋ ದೃಶ್ಯತೇ ಗೌಡವರ್ತ್ಮನೀ' ಎಂಬ ಮಾತಿನ ಅನುವರ್ತಿಯಾಗಿದೆ; ಅಂದರೆ ದಂಡಿಯ ಗೌಡವೇ ಮಾರ್ಗಕಾರ ಹೇಳುವ ಉತ್ತರ ಮಾರ್ಗ.

ಈ ಬಗ್ಗೆ ಎಂ.ವಿ.ಸೀ. ಹೀಗೆನ್ನುತ್ತಾರೆ : "ಕವಿರಾಜಮಾರ್ಗಕಾರನು ತನ್ನ ದಕ್ಷಿಣೋತ್ತರ ಮಾರ್ಗವಿವರಣೆಯಲ್ಲಿ ಪ್ರಧಾನವಾಗಿ ದಂಡಿಯ ಕಾವ್ಯಾದರ್ಶವನ್ನೇ ಅನುಸರಿಸಿದ್ದಾನೆ. ಆದರೆ, ಭಾಮಹನು ಹೇಳುವ ವಕ್ರೋಕ್ತಿ ಸ್ವಭಾವೋಕ್ತಿಗಳನ್ನು ಈ ಎರಡು ಮಾರ್ಗಗಳ 'ಭೇದಕಗುಣ'ಗಳೆಂದು ಹೇಳುವಲ್ಲಿ ಮಾರ್ಗಕಾರನ ಸಮನ್ವಯದೃಷ್ಟಿ ಕಂಡುಬರುತ್ತದೆ, ಭಾಮಹನು ಲೋಕೋತ್ತರವಾದ ಚಮತ್ಕಾರವು ಕಂಡುಬರುವ ಕಾವ್ಯಪ್ರಯೋಗಗಳು ಮಾತ್ರ 'ವಕ್ರೋಕ್ತಿ'ಯೆನ್ನುತ್ತಾನೆ. ಆದ್ದರಿಂದ ವಕ್ರೋಕ್ತಿ ಅಥವಾ ಅತಿಶಯೋಕ್ತಿ ಭಾಮಹನ ಪ್ರಕಾರ ಅಲಂಕಾರಗಳೆಲ್ಲಕ್ಕೂ ಅನ್ವಯಿಸುವ ಸಾಮಾನ್ಯ ಲಕ್ಷಣ" ('ಕವಿರಾಜಮಾರ್ಗಂ', ಪು. 239). ಅಲ್ಲಿಯೇ ಅವರು "ಹೀಗೆ ಗೌಡೀಯ-ವೈದರ್ಭವೆಂಬ ಕಾವ್ಯಭೇದ ಕಲ್ಪನೆಯೇ ಭಾಮಹನ ಪ್ರಕಾರ ಗತಾನುಗತಿಕ; ಹೆಡ್ಡರು ಮಾಡಿಕೊಂಡುದು" ಎಂಬ ಡಾ। ಕೆ. ಕೃಷ್ಣಮೂರ್ತಿಗಳ ಮಾತನ್ನು ಉಲ್ಲೇಖಿಸುತ್ತಾರೆ. ಅಲ್ಲದೆ ಶಬ್ದಾಲಂಕಾರ ವಿವೇಚನೆಯ ಸಂದರ್ಭದಲ್ಲಿ ಮಾರ್ಗಗಳ ವಿವರಣೆ ಸಾಧುವೆನಿಸುವುದಿಲ್ಲ.

ದಶಗುಣಗಳು : ಮುಂದೆ ಮಾರ್ಗಕಾರನು ಹತ್ತು ಗುಣಗಳನ್ನು ವಿವರಿಸುತ್ತಾನೆ: ಈ ವಿವರಣೆಯು ಬಹುಮಟ್ಟಿಗೆ ದಂಡಿಯ ಅನುಸರಣೆ; ಆದರೆ ಕೆಲವೆಡೆ ಸ್ವಂತಿಕೆಯನ್ನು ಮೆರೆದಿರುವುದು ನಿಜ (2. 56–86). ಈ ಪರಿಚ್ಛೇದದ 102 ರಿಂದ 107 ರವರೆಗಿನ ಆರು ಪದ್ಯಗಳಲ್ಲಿ ಕೆಲವು ಕನ್ನಡ ಕ್ರಿಯಾರೂಪಗಳು ಎರಡೂ ಮಾರ್ಗಗಳಲ್ಲಿ ಹೇಗೆ ಪ್ರಯೋಗವಾದರೆ ಸಾಧು ಎಂಬ ಬಗ್ಗೆ ವಿವರಿಸಲಾಗಿದೆ: ನೋಡುವೆನ್, ಬೇಡುವೆನ್ – ಇವು ಉತ್ತರಮಾರ್ಗ ವಾಚಕಗಳಾದರೆ, ನೋಟ್ಟೆನ್ ಬೇಟ್ಟೆನ್ ಎಂಬಿವು ದಕ್ಷಿಣಮಾರ್ಗದ ರಚನೆ; ಆದರೆ ಇವುಗಳನ್ನು ಅನುಸರಿಸಿ ಸೂಡುವೆನ್ > ಸೂಟ್ಟೆನ್, ಕೂಡುವೆನ್ > ಕೂಟ್ಟೆನ್ ತೋಡುವೆನ್ > ತೋಟ್ಟೆನ್ ಎಂದು ಪ್ರಯೋಗಿಸಕೂಡದು; ದಕ್ಷಿಣಮಾರ್ಗದಲ್ಲಿ ಇಸು ಪ್ರತ್ಯಯ ಸೇರಿಸಿ ರೂಪಿಸಿಕೊಂಡ ಬರಿಸುವೆನ್, ಇರಿಸುವೆನ್, ತರಿಸುವೆನ್ ಎಂಬ ರೂಪಗಳು ವಿಶಿಷ್ಟವಾದವು; ಉತ್ತರ ಮಾರ್ಗಕ್ಕೆ ವಿಶಿಷ್ಟವಾದ ಬರಿಪೆನ್, ಇರಿಪೆನ್, ತರಿಪೆನ್ ಎಂಬ ಕ್ರಿಯಾರೂಪಗಳಲ್ಲಿನ 'ಪ'ಕಾರವು ('ಇಸು' ಪ್ರತ್ಯಯಕ್ಕೆ ಆದೇಶವಾಗಿ ಬಂದ 'ಪು) ಉತ್ತರೋತ್ತರ ಮಾರ್ಗದಲ್ಲಿ ದ್ವಿತ್ವವಾಗಿ ಬರಿಪ್ಪೆನ್ ಇರಿಪ್ಪೆನ್, ತರಿಪ್ಪೆನ್ ಎಂದಾಗುತ್ತದೆ ಎಂದು ವಿವರಿಸಲಾಗಿದೆ. ಆದರೆ ಇಲ್ಲಿ ಹೊರತು 'ಉತ್ತರೋತ್ತರ' ಮಾರ್ಗದ ಉಲ್ಲೇಖ ಬೇರೆಲ್ಲಿಯೂ ಬರುವುದಿಲ್ಲ; ಎಲ್ಲೆಡೆಯೂ 'ಮಾರ್ಗದ್ವಿತಯ' 'ಉಭಯಮಾರ್ಗ' ಎಂದೇ ಹೇಳಲಾಗಿದೆ; ಪ್ರಾಯಶಃ 'ಉತ್ತರೋತ್ತರ' ಮಾರ್ಗವು ಉತ್ತರಮಾರ್ಗದ ಒಂದು ಪ್ರಭೇದ ಎಂಬ ಭಾವನೆ ಅವನಿಗಿದ್ದಿರಬಹುದೇ? ಅಲ್ಲದೆ, ದಕ್ಷಿಣಮಾರ್ಗದ ಬರಿಸುವೆನ್ ಇರಿಸುವೆನ್ ತರಿಸುವೆನ್ ಇವು ಬರಿಪೆ(ಪ್ಪೆ)ನ್ ಇರಿಪೆ(ಪ್ಪೆ)ನ್ ತರಿಪೆ(ಪ್ಪೆ)ನ್ ಆಗುತ್ತವೆಂದು ಹೇಳಿದ ಮೇಲೂ ಎರಡೂ ಮಾರ್ಗಗಳಲ್ಲಿ 'ಪರಸುವೆನ್' 'ಬೆರಸುವೆನ್' ಎನ್ನಬಹುದೇ ಹೊರತು ಪರಪೆನ್ ಬೆರಪೆನ್ ಎನ್ನಲಾಗದು ಎನ್ನುತ್ತಾನೆ. ಬಳಸುವ ಮಾತುಗಳು ಯಾವುದಾದರೂ ಅವು ಹೇಳಿರುವ ಮಾರ್ಗಗಳಿಗೆ ಅನುಗುಣವಾಗಿರುವ ಪ್ರಯೋಗಗಳಿಂದ ಕೂಡಿದ್ದರೆ ಅವು ಗುಣವನ್ನುಂಟುಮಾಡುತ್ತವೆ, ಅಂದರೆ ಅವು ಮಾರ್ಗಪದ್ಧತಿಗೆ ಅನುಗುಣವಾಗಿರಬೇಕು ಎಂಬುದು ಅವನ ಅಭಿಪ್ರಾಯ.

ಆದರೆ ದಂಡಿಯು ನಿರ್ದೇಶಿಸಿದ ಗೌಡೀ ವೈದರ್ಭೀಗಳ ಪ್ರಾದೇಶಿಕ ಬಗೆಗಳನ್ನು ಮಾರ್ಗಕಾರ ಅನ್ವಯಿಸುವುದರ ಔಚಿತ್ಯವನ್ನೂ ಪ್ರಶ್ನಿಸಬೇಕಾಗಿದೆ. ಏಕೆಂದರೆ ಅವು ಸಂಸ್ಕೃತಭಾಷೆಯ ರಚನೆಗೆ ಅನ್ವಯಿಸಿ ಹೇಳಿರುವ ಮಾತು; ದಂಡಿಯು ವಿವೇಚಿಸುವ 'ನಿಬಿಡ' 'ಶಿಥಿಲ', ಸಮಾಸಪದಪ್ರಯೋಗ ಮುಂತಾದ ಪರಿಕಲ್ಪನೆಗಳನ್ನೇ ಕನ್ನಡಕ್ಕೂ ಅನ್ವಯಿಸುವುದು ಹೇಗೆ? ಅಲ್ಲದೆ ಇಲ್ಲಿ ಉತ್ತರ ಮತ್ತು ದಕ್ಷಿಣಗಳು ಅವನೇ ಹೇಳುವ ಕಾವೇರಿಯಿಂದ ಗೋದಾವರಿವರೆಗೆ ಹಬ್ಬಿರುವ ಕನ್ನಡ ನಾಡಿನ ಯಾವ ಭಾಗಕ್ಕೆ ಅನ್ವಯಿಸುತ್ತದೆ? ಎಂಬ ಪ್ರಶ್ನೆಗಳು ಹುಟ್ಟುವುದು ಸಹಜ.

ದುಷ್ಕರ ಕಾವ್ಯಗಳು: ಮುಂದೆ ಮಾರ್ಗಕಾರನು ದಂಡಿಯು ಹೇಳಿರುವ ಪದಗತಪ್ರತ್ಯಾಗತ ಪಾದಗತಪ್ರತ್ಯಾಗತ ಸಮಸ್ತಗತಪ್ರತ್ಯಾಗತ ಅರ್ಧಗತಪ್ರತ್ಯಾಗತ ಎಂಬಿವುಗಳು 'ಗತಪ್ರತ್ಯಾಗತ' (ಮೊದಲೊಮ್ಮೆ ಪ್ರಯೋಗವಾದದ್ದು ಮತ್ತೆ ಪ್ರಯೋಗವಾಗುವುದು) ಎಂಬ ಅಲಂಕಾರದ ನಾಲ್ಕು ಪ್ರಭೇದಗಳು; ಗೂಢಚತುರ್ಥ (ನಾಲ್ಕು ಬಗೆಯ ಗೂಢಾರ್ಥಗಳನ್ನು ಹೊಂದಿರುವುದು); ಏಕಾಕ್ಷರಿ ಒಂದೇ ಅಕ್ಷರವನ್ನು ಮಾತ್ರ ಬಳಸುವುದು ಇಲ್ಲಿ'ನ'ಕಾರ); ದ್ವಕ್ಷರಿ (ಪದ್ಯದಲ್ಲಿ ಎರಡು ಅಕ್ಷರಗಳನ್ನು ಮಾತ್ರ ಬಳಸುವುವು– ಇಲ್ಲಿ'ನ'ಕಾರ ಮತ್ತು 'ಮ'ಕಾರ); ಅತಾಲವ್ಯ (ತಾಲವ್ಯಾಕ್ಷರಗಳನ್ನು– ಅಂದರೆ ಇ, ಈ, ಎ, ಏ, ಚವರ್ಗ ಮತ್ತು ಯ, ಶ – ಇವುಗಳನ್ನು ಉಪಯೋಗಿಸದೆ ರಚಿಸಿದ ಪದ್ಯ); ನಿರೋಷ್ಠ್ಯ (ಓಷ್ಠ್ಯಗಳನ್ನು–ಅಂದರೆ ಉ, ಊ, ಒ, ಓ ಮತ್ತು ಪ ವರ್ಗದ ಅಕ್ಷರಗಳು– ಇವುಗಳನ್ನು ಬಳಸದೆ ಬರೆದ ಪದ್ಯ); ಸರ್ವತೋಭದ್ರ (ಈ ಕುರಿತು ಎಂ.ವಿ.ಸೀ. ಹೀಗೆ ಬರೆಯುತ್ತಾರೆ: "ಇದರ ಬಂಧ ಸ್ವರೂಪವನ್ನು, ಮದ್ರಾಸುಮುದ್ರಣ (ಪು. 177) ದಲ್ಲಿ ಬಿಡಿಸಿ ತೋರಿಸಿದೆ. (ಪದ್ಯದ ಅಭಿಪ್ರಾಯ ಗೃಹೀತವಾಗುವುದಿಲ್ಲ); ನಿರುತ್ತರ (ಪದ್ಯದಲ್ಲಿ ಪ್ರಶ್ನೆಗಳನ್ನು ಅಳವಡಿಸಿ, ಅದಕ್ಕೆ ಉತ್ತರವು ಹೊರಪಡದಿರುವುದು); ಗೋಮೂತ್ರಿಕ (ಮೊದಲ ಸಾಲಿನಂತೆಯೇ ಇದ್ದು ಕೊನೆಯಲ್ಲಷ್ಟೇ ವ್ಯತ್ಯಾಸವಿರುವುದು); ಯಮಕ (ಮೂರು ಅಥವಾ ಅದಕ್ಕಿಂತ ಹೆಚ್ಚಿನ ಅಕ್ಷರಗಳುಳ್ಳ ಪದವೋ

ಪದಭಾಗವೋ ಪದ್ಯದ ಆದಿ ಮಧ್ಯ ಮತ್ತು ಅಂತಗಳಲ್ಲಿ ನಿಯತಸ್ಥಾನದಲ್ಲಿ ಬರುವುದು); ಅರ್ಧಭ್ರಮಣ, ಮುರಜಬಂಧ (ಈ ಎರಡರ ರಚನಾಸ್ವರೂಪವನ್ನು ಮದ್ರಾಸು ಮುದ್ರಣದಲ್ಲಿ ಪು. 178–79 ತೋರಿಸಿದೆಯಂತೆ); ಕ್ರಿಯಾಗೋಪಕ (ಕ್ರಿಯೆಯನ್ನು ಅಥವಾ ಕ್ರಿಯಾಪದವನ್ನು ಅಧ್ಯಾಹಾರ ಮಾಡಿಕೊಳ್ಳುವಂತೆ ಗೋಪನಮಾಡುವುದು (ಮರೆಮಾಚುವುದು); ಚಕ್ರಬಂಧ (ಒಂದು ರೀತಿಯ ಒಗಟಿನಂತಹ ರಚನೆ. ಅಲ್ಲಿಯ ಪದ್ಯದಲ್ಲಿ ಒಂದು ರಹಸ್ಯ ಅಡಗಿರುತ್ತದೆ. ನಿಯಮಗಳನ್ನು ಪಾಲಿಸಿ ಅದನ್ನು ಬಿಡಿಸಿದರೆ ಫಲಿತಾಂಶ ಸಿಗುತ್ತದೆ.) – ಎಂಬ ಪ್ರಭೇದಗಳ ಲಕ್ಷಣಗಳನ್ನು ಹೇಳದೆಯೇ ಲಕ್ಷ್ಯಗಳನ್ನು ನೀಡಿದ್ದಾನೆ. (2. 112–141). ವಿಸ್ಮಯಕಾರಿಯೂ ರಚಿಸಲು ಕಷ್ಟಕರವೂ ಆದ ಕವಿತಾಬಂಧಕ್ಕೆ "ಚಿತ್ರಕಾವ್ಯ" ಮತ್ತು "ದುಷ್ಕರಕಾವ್ಯ" ಎಂದು ಹೆಸರು. ಇವುಗಳಲ್ಲಿ ಗೋಮೂತ್ರಿಕ, ಮುರಜ ಮುಂತಾದವನ್ನು ಆಯಾ ಚಿತ್ರಾಕೃತಿಗಳಲ್ಲಿ ಅಳವಡುವಂತೆ ಚಿತ್ರಬರೆದು ನಿರ್ದೇಶಿಸಬಹುದಂತೆ. ಇವುಗಳನ್ನೇ ದುಷ್ಕರ ಕಾವ್ಯಗಳು ಎನ್ನಲಾಗಿದೆ. (115 ರಿಂದ 136 ರವರೆಗಿನ ಲಕ್ಷ್ಯಪದ್ಯಗಳೆಲ್ಲ ಶ್ಲೋಕ ಛಂದಸ್ಸಿನಲ್ಲಿರುವುದು ವಿಶೇಷ).

ಹೇಳಿಕೆಗಳು: ಮಾರ್ಗಕಾರನು ಭಾವೆ, ನುಸುಳ್, ಅಸ್ಪಷ್ಟಾಕ್ಷರ, ವರ್ಣವ್ಯತ್ಯಯ, ಬಿಂದುಚ್ಯುತಕ, ಒನ್ರ್ಡಿ, ವರ್ಣಚ್ಯುತಕ ಎಂಬ ಏಳು ಹೇಳಿಕೆಗಳ ಪ್ರಭೇದಗಳನ್ನು ಹೆಸರಿಸುತ್ತಾನೆಯೇ ಹೊರತು ಅವುಗಳ ಲಕ್ಷಣಗಳನ್ನು ಹೇಳುವುದಿಲ್ಲ (2. 144). ಆದರೆ ಅವುಗಳಿಗೆ ಮುಂದೆ ದೃಷ್ಟಾಂತಗಳನ್ನು ನೀಡುತ್ತಾನೆ (2. 145–151). ಹೇಳಿಕೆಗಳ ಹೆಸರುಗಳನ್ನು ಉಲ್ಲೇಖಿಸುವ ಪದ್ಯದಲ್ಲಿ ಹೇಳದಿರುವ 'ಸಮಂತಿ' ಎಂಬ ಪ್ರಭೇದಕ್ಕೆ ಮುಂದಿನ ಪದ್ಯದಲ್ಲಿ ದೃಷ್ಟಾಂತವಿದೆ. "ಅಲ್ಲಿ ಕಡೆಯಲ್ಲಿ ಹೇಳಿರುವ 'ಸುಸಮಸ್ತಕ'ವೇ 'ಸಮಂತಿ'ಯಿರಬಹುದು" ಎಂಬುದು ಎಂವಿಸೀ ಅವರ ಊಹೆ ('ಕವಿರಾಜಮಾರ್ಗಂ': ಪು. 276) ದಂಡಿಯ 'ಕಾವ್ಯಾದರ್ಶ'ದಲ್ಲಿ ಕವಿಗಳೂ ವಿದ್ವಾಂಸರೂ ನೆರೆದಿರುವ ವಿನೋದಗೋಷ್ಠಿಗಳಲ್ಲಿ ವಿನೋದಕ್ಕಾಗಿ ಮಾಡುವ ಸಮಸ್ಯಾಪೂರಣ, ಒಗಟನ್ನು ಬಿಡಿಸುವುದು, ಮುಂತಾದ ವಾಕ್‌ಚಮತ್ಕೃತಿಗಳನ್ನು (ಪ್ರ) ಹೇಳಿಕೆ ಎನ್ನಲಾಗಿದೆ.

ಪರಿಚ್ಛೇದ 3 – ಅರ್ಥಾಲಂಕಾರ ಪ್ರಕರಣಂ

ಪರಿಚ್ಛೇದದ ಪ್ರಾರಂಭದಲ್ಲಿ ಜಾತಿ, ರೂಪಕ, ಅರ್ಥಾಂತರ(ವಿ)ನ್ಯಾಸ, ಅತಿರೇಕ, ಯಥಾಸಂಖ್ಯ, ದೀಪಕ, ಉಪಮಾ, ಅತಿಶಯ, ಸದೃಶಯೋಗಿತಾ, ಆಕ್ಷೇಪ, ಶ್ಲೇಷ, ಉತ್ಪ್ರೇಕ್ಷಾ, ಸೂಕ್ಷ್ಮ, ವಿಶೇಷ, ಸಮಾಹಿತ, ಸಮಾಸೋಕ್ತಿ, ಪರ್ಯಾಯೋಕ್ತ, ವಿರೋಧ, ಅಪ್ರಸ್ತುತ (ಪ್ರಶಂಸೆ), ನಿದರ್ಶನ, ಸಹೋಕ್ತಿ, ಸಂಕೀರ್ಣ, ಪರಿವೃತ್ತಿ, ವ್ಯಾಜಸ್ತುತಿ, ಹೇತು, ವಿಭಾವನಾ, ಲವ, ಉದಾತ್ತ, ಅಪಹ್ನುತಿ, ರಸವತ್, ಊರ್ಜಿತ, ವ್ಯಾವೃತ್ತಿ, ಪ್ರಿಯತರ, ಆಶಿ ಎಂಬ ಮೂವತ್ತನಾಲ್ಕು ಅಲಂಕಾರಗಳನ್ನು ಹೆಸರಿಸುತ್ತಾನೆ (3. 2–5). ಹೀಗೆ 'ಪುರಾಣಶಾಸ್ತ್ರೋಕ್ತಂ'ಗಳಾದ 34 ಅಲಂಕಾರಗಳನ್ನು ಉಲ್ಲೇಖಿಸಿದ್ದರೂ, ಪರಿಚ್ಛೇದದ ಕೊನೆಯಲ್ಲಿ ಭಾವಿಕ ಮತ್ತು ಧ್ವನಿ ಎಂಬ ಎರಡು ಹೆಚ್ಚಿನ ಅಲಂಕಾರಗಳನ್ನು ಸೇರಿಸುತ್ತಾನೆ. ಭಾಮಹನು 32 ಅಲಂಕಾರಗಳನ್ನು ಹೆಸರಿಸಿದ್ದರೆ, ದಂಡಿಯು 35 ಅಲಂಕಾರಗಳನ್ನು ಹೇಳುತ್ತಾನೆ; ಮಾರ್ಗಕಾರ 36 ಅಲಂಕಾರಗಳನ್ನು ಹೇಳಿದ್ದಾನೆ. ಅಲಂಕಾರಗಳ ಹೆಸರಿನಲ್ಲಿ ದಂಡಿ ಭಾಮಹರು ಪರಸ್ಪರ ಭಿನ್ನರಾಗಿದ್ದಾರೆ. ಮಾರ್ಗಕಾರನು ದಂಡಿಯನ್ನೇ ಅನುಸರಿಸಿ ಅವನು ಹೇಳುವ ಮೂವತ್ತೈದನ್ನೂ ಉಲ್ಲೇಖಿಸಿದರೂ ಕೊನೆಗೆ ಧ್ವನಿಯನ್ನು ವಿಶೇಷವಾಗಿ ಸೇರಿಸಿದ್ದಾನೆ.

ಜಾತಿ: ಸಮಾನ ಸ್ವಾಭಾವಿಕ ಲಕ್ಷಣಗಳನ್ನುಳ್ಳ ಒಂದು ವರ್ಗವೇ ಜಾತಿ; ಆ ವರ್ಗದ ಒಂದನ್ನು ವರ್ಣಿಸಿದರೂ ಎಲ್ಲವನ್ನೂ ವರ್ಣಿಸಿದಂತೆಯೇ ಸರಿ; ಹೀಗೆ ಒಂದು ಜಾತಿಸ್ವಭಾವ, ಕ್ರಿಯಾಸ್ವಭಾವ, ಗುಣಸ್ವಭಾವ ಮತ್ತು ದ್ರವ್ಯಸ್ವಭಾವ ಎಂದು ಇಂತಹ ವರ್ಣನೆಯ ನಾಲ್ಕು ಪ್ರಭೇದಗಳ ದೃಷ್ಟಾಂತಗಳನ್ನು ನೀಡಲಾಗಿದೆ (3. 6–10).

ರೂಪಕ: ರೂಪಕ ಎಂಬ ಅಲಂಕಾರದ ಲಕ್ಷಣವೆಂದರೆ 'ಪೆಱವಱ' (ಅಂದರೆ ಪ್ರಕೃತವಲ್ಲದ) ರೂಪಾದಿ ಗುಣಗಳನ್ನು ಪ್ರಕೃತವಸ್ತುವಿನೊಡನೆ 'ಅಭೇದೋಕ್ತಿ'ಗಳಿಂದ ರೂಪಿಸುವುದು. ಇದರಲ್ಲಿನ ಸಮಸ್ತರೂಪಕ (ಸಮಾಸದ ಮೂಲಕ ರೂಪಣಗೊಂಡಿರುವುದು), ವ್ಯಸ್ತರೂಪಕ (ಸಮಾಸಪದ ಘಟಿತವಲ್ಲದ್ದು), ಸಾವಯವ ರೂಪಕ (ಇಡಿಯಾಗಿ ಅಲ್ಲದೆ

ಅವಯವಗಳನ್ನು ಮಾತ್ರ ರೂಪಕವಾಗಿಸುವುದು), ಅವಯವ ರೂಪಕ (ಅವಯವಗಳನ್ನುಳ್ಳ ಇಡಿಯನ್ನು ರೂಪಕವಾಗಿಸುವುದು), ವಿಷಮ ರೂಪಕ (ಅಂಗಿ-ಅಂಗಗಳ ರೂಪಣದಲ್ಲಿ ಅವೆರಡರಲ್ಲಿ ವಿಷಮತೆ ಇರುವುದು) ವಿಶೇಷಣ ರೂಪಕ (ವಿಶೇಷಣವನ್ನು ರೂಪಣಗೊಳಿಸುವುದು), ವಿರುದ್ಧ ರೂಪಕ (ಪ್ರಕೃತ-ಅಪ್ರಕೃತಗಳಲ್ಲಿ ಪ್ರತ್ಯೇಕ ಕಾರ್ಯಗಳು ಸೂಚಿತವಾಗುವುದು), ಹೇತುರೂಪಕ (ಪ್ರಕೃತದ ಗುಣಗಳು ಅಪ್ರಕೃತದ ಗುಣಗಳಿರುವ ಕಾರಣದಿಂದಾಗುವುದು), ಶ್ಲೇಷರೂಪಕ (ಶ್ಲೇಷಾರ್ಥದಿಂದ ಕೂಡಿರುವುದು), ವಿಭಿನ್ನರೂಪಕ (ಭಿನ್ನ ಗುಣಗಳು ಭಿನ್ನರೂಪಕಗಳ ಮೂಲಕ ಒಂದೆಡೆಯೇ ಇರುವಂತೆ ರೂಪಣಮಾಡುವುದು), ರೂಪಕ ರೂಪಕ (ಒಂದು ರೂಪಕದಲ್ಲಿ ಮತ್ತೊಂದನ್ನು ಸೇರಿಸುವುದು), ರೂಪಕಾಪಹ್ನುತಿ (ಇರುವುದನ್ನು ಅಲ್ಲಗಳೆದು ಇನ್ನೊಂದಾಗಿ ರೂಪಣಮಾಡುವುದು), ಯುಕ್ತರೂಪಕ (ರೂಪಕಗಳಲ್ಲಿ ಹೊಂದಿಕೆ ಇರುವುದು), ವ್ಯಾಜರೂಪಕ (ಅಪ್ರಕೃತ ವಸ್ತುವಿನ ಗುಣಧರ್ಮಗಳನ್ನು ಪ್ರಕೃತವಸ್ತುವಿನಲ್ಲಿ ಆರೋಪಿಸುವುದು) ಎಂಬ ಹದಿನಾಲ್ಕು ಪ್ರಭೇದಗಳ ಲಕ್ಷಣಗಳನ್ನು ಲಕ್ಷ್ಯಗಳೊಂದಿಗೆ ವಿವರಿಸಲಾಗಿದೆ (3. 12–26)

ಅರ್ಥಾಂತರನ್ಯಾಸ: ಪ್ರಸ್ತುತಾರ್ಥವನ್ನು ಅಪ್ರಸ್ತುತಾರ್ಥದಿಂದ ಸಮರ್ಥಿಸುವುದು ಅರ್ಥಾಂತರನ್ಯಾಸ ಎಂಬ ಅಲಂಕಾರ (3. 28). ಇದರಲ್ಲಿ ಎಂಟು ಪ್ರಭೇದಗಳಿವೆ: ಸಕಲವ್ಯಾಪಿ, ವಿಶೇಷ ಪ್ರಕಾಶ, ಯುಕ್ತಕಾರಿ, ಯುಕ್ತಾಯುಕ್ತ, ಪ್ರಕಟಶ್ಲೇಷ, ವಿರುದ್ಧಾತ್ಮಕ, ವಿಪರ್ಯ ಮತ್ತು ಯುಕ್ತಾರ್ಥ. ಇವುಗಳನ್ನು ಲಕ್ಷ್ಯಗಳೊಂದಿಗೆ ಹೇಳಲಾಗಿದೆ 3. 29–36)

ವ್ಯತಿರೇಕ: ಸಮಾನಗುಣಧರ್ಮವುಳ್ಳ ಎರಡು ವಸ್ತುಗಳಲ್ಲಿ ಒಂದರಲ್ಲಿ ಮಾತ್ರ ಒಂದೋ ಎರಡೋ ಹೆಚ್ಚಿನ ಗುಣವಿದೆ ಎಂದು ವರ್ಣಿಸುವುದು ವ್ಯತಿರೇಕ ಎಂಬ ಅಲಂಕಾರ (3. 39). ಇದರಲ್ಲಿ ಏಕವ್ಯತಿರೇಕ, ಉಭಯವ್ಯತಿರೇಕ, ಸಶ್ಲೇಷ ವ್ಯತಿರೇಕ, ಸಹೇತುಕ ವ್ಯತಿರೇಕ, ಸಾಕ್ಷೇಪ ವ್ಯತಿರೇಕ ಮುಂತಾದ ಭೇದಗಳಿವೆ. ಇವುಗಳ ಲಕ್ಷಣ-ಲಕ್ಷ್ಯಗಳನ್ನು ಹಲವಾರು ಪದ್ಯಗಳಲ್ಲಿ ವರ್ಣಿಸಲಾಗಿದೆ (3. 40–48).

ಯಥಾಸಂಖ್ಯಾಲಂಕಾರ: ಉದ್ದಿಷ್ಟ ಕ್ರಮದಲ್ಲಿ ಅರ್ಥಗಳನ್ನುಳ್ಳ

ಪದವರ್ಗ ಉದ್ದೇಶಿ; ಅರ್ಥಾನುಗುಣವಾಗಿ ಅದೇ ಕ್ರಮಸಂಖ್ಯೆಯನ್ನು ಅನುಸರಿಸಿ ಬರುವ ಪದವರ್ಗ ಅನುದೇಶಿ; ಇವೆರಡರ ಕ್ರಮಾನುಸರಣೆಯೇ ಯಥಾಸಂಖ್ಯ ಎಂದು ಹಿಂದೆಯೇ (1. 86) ರಲ್ಲಿ ವಿವರಿಸಿದೆ. ಇದರಲ್ಲಿ ಅನುಗತ ಯಥಾಸಂಖ್ಯ ಮತ್ತು ಅನನ್ವಿತ ಯಥಾಸಂಖ್ಯ ಎಂದು ಎರಡು ವಿಧ (3. 50–51).

ದೀಪಕ: ಜಾತಿ ಗುಣ ಕ್ರಿಯೆ ಗುಣ ದ್ರವ್ಯಗಳಲ್ಲಿ ಯಾವೊಂದರ ಗುಣವಿಶೇಷವನ್ನು ಸೂಚಿಸುವ ಪದವು ಒಂದು ನಿರ್ದಿಷ್ಟ ಎಡೆಯಲ್ಲಿದ್ದು ಇಡಿಯ ವಾಕ್ಯವೆಲ್ಲವನ್ನೂ ಬೆಳಗುವಂತಿದ್ದರೆ ಅದು ದೀಪಕ ಎಂಬ ಅಲಂಕಾರವಾಗುವುದು (3. 53); ಇದರಲ್ಲಿನ ಜಾತ್ಯನುಗತ, ಕ್ರಿಯಾನುಗತ, ಗುಣಾನುಗತ ಮತ್ತು ದ್ರವ್ಯಾನುಗತ ಎಂಬ ನಾಲ್ಕು ಪ್ರಭೇದಗಳನ್ನು ಮಾರ್ಗಕಾರ ಲಕ್ಷ್ಯಗಳೊಡನೆ ವಿವರಿಸುತ್ತಾನೆ (3. 54–57).

ಉಪಮಾ: ಬೇರೆಯಾದ ವಸ್ತುಗಳನ್ನು 'ಪೋಲ್ಕೆ ಮಾಡಿ' ಹೇಳುವುದು ಉಪಮೆ ಎಂಬ ಅಲಂಕಾರವಾಗುತ್ತದೆಂಬುದು ಮಾರ್ಗಕಾರನ ವ್ಯಾಖ್ಯೆ (3. 59). ಇದರಲ್ಲಿ ವಸ್ತೂಪಮೆ (ಉಪಮಾನ, ಉಪಮೇಯ, ಉಪಮಾವಾಚಕ ಮತ್ತು ಸಾಧಾರಣಧರ್ಮಗಳೆಂಬ ಉಪಮೆಯ ನಾಲ್ಕು ಅಂಶಗಳಲ್ಲಿ ಸಾಧಾರಣ ಧರ್ಮವು ಲುಪ್ತವಾಗಿರುವುದು), ಧರ್ಮೋಪಮೆ (ಎರಡೂ ವಸ್ತುಗಳಲ್ಲಿನ ಸಮಾನ ಧರ್ಮವು ಪ್ರಕಟವಾಗಿರುವುದು), ವಿಪರ್ಯಯೋಪಮೆ (ಉಪಮಾನವನ್ನು ಉಪಮೇಯದ ಸ್ಥಾನದಲ್ಲಿರಿಸಿ ಹಿಂದುಮುಂದು ಮಾಡಿ ಹೋಲಿಸುವುದು), ಅನ್ಯೋನ್ಯೋಪಮೆ (ಎರಡರಲ್ಲಿ ಒಂದರಿಂದ ಇನ್ನೊಂದಕ್ಕೆ ಹೆಚ್ಚುಗಾರಿಕೆಯುಂಟಾಗುವುದು), ನಿಯಮೋಪಮೆ (ಒಂದು ಉಪಮೇಯಕ್ಕೆ ಒಂದೇ ಉಪಮಾನ ಹೊರತು ಬೇರೆಯದಿಲ್ಲ ಎಂದು ಹೇಳುವುದು), ಅನಿಯಮೋಪಮೆ (ನಿಯಮೋಪಮೆಗೆ ವಿರುದ್ಧವಾದುದು), ಅತಿಶಯೋಪಮೆ (ಉಪಮಾನ–ಉಪಮೇಯಗಳಲ್ಲಿ ಭೇದವೆಣಿಸುವ ರೀತಿ), ಉಪಮೋತ್ಪ್ರೇಕ್ಷೆ (ಹೋಲಿಕೆಗಾಗಿ ಹೋಲಿಸಿ, ವರ್ಣಿತ ವಸ್ತುವೇ ಶ್ರೇಷ್ಠ ಎನ್ನುವುದು), ಅದ್ಭುತೋಪಮೆ (ಉಪಮಾನ ಉಪಮೇಯಗಳಲ್ಲಿ ಹೋಲಿಕೆಯಿದ್ದರೂ ಉಪಮೇಯದ ಆಶ್ಚರ್ಯಕರ ಗುಣಗಳನ್ನು ಎತ್ತಿ

ಹೇಳುವುದು), ಮೋಹೋಪಮೆ (ಹೋಲಿಸಲಾದ ಎರಡು ವಸ್ತುಗಳಲ್ಲಿಯೂ ಮೋಹವೇ ಸಮಾನಧರ್ಮವೆಂಬಂತೆ ಚಿತ್ರಿಸುವುದು), ಸಂಶಯೋಪಮೆ (ಎರಡರ ನಡುವಣ ಸಾದೃಶ್ಯವಿರುವುದರಿಂದಾಗಿ ಯಾವುದು ಯಾವುದು ಎಂಬ ಸಂಶಯವುಂಟಾಗುವುದು), ಊರ್ಜಿತೋಪಮೆ (ಎರಡು ವಸ್ತುಗಳ ಸಮಾನಧರ್ಮದಲ್ಲಿ ಉಪಮೇಯದ ಧರ್ಮವು ಉಪಮಾನದ್ದನ್ನು ಮೀರಿದೆ ಎನ್ನುವುದು), ಶ್ಲೇಷೋಪಮೆ (ಶ್ಲೇಷಾರ್ಥದ ಮೂಲಕ ಸಾದೃಶ್ಯವನ್ನು ಕಲ್ಪಿಸುವುದು), ನಿಂದೋಪಮೆ (ಸಮಾನಧರ್ಮದಲ್ಲಿ ಉಪಮಾನದ ಗುಣವನ್ನು ದೋಷಪೂರ್ಣವೆಂದು ವರ್ಣಿಸುವುದು), ಪ್ರಶಂಸೋಪಮೆ (ನಿಂದೋಪಮೆಗೆ ವ್ಯತಿರಿಕ್ತವಾದುದು), ವಿರೋಧೋಪಮೆ (ಹೋಲಿಕೆ ಸ್ವಲ್ಪ ಮಾತ್ರ ಎಂದು ಹೇಳುವುದರ ಮೂಲಕ ವಿರೋಧವನ್ನು ಸೂಚಿಸುವುದು), ತತ್ತ್ವಾಖ್ಯಾನೋಪಮೆ (ಸ್ಪಷ್ಟವಾಗಿ ತತ್ತ್ವವನ್ನು, ಅಂದರೆ ನಿಜಾಂಶವನ್ನು, ಹೋಲಿಕೆಯಿಂದ ತಿಳಿಸುವುದು), ಅಸಾಧಾರಣೋಪಮೆ (ಎರಡು ವಸ್ತುಗಳ ಹೋಲಿಕೆಯಲ್ಲಿ ಉಪಮೇಯದ್ದು ಉಪಮಾನದ್ದನ್ನು ಅತಿಕ್ರಮಿಸುವುದು), ಅಭೂತೋಪಮೆ (ಹೋಲಿಕೆಯ ವಸ್ತುಗಳಲ್ಲಿ ಸಾಧಾರಣವಾಗಿ ಇಲ್ಲದ್ದನ್ನು ಹೇಳುವುದು), ಅಸಂಭವೋಪಮೆ (ಸದೃಶ ವಸ್ತುಗಳಲ್ಲಿ ಅಸಂಭವವಾದ ಗುಣವನ್ನು ಹೇಳುವುದು), ಬಹೂಪಮೆ (ಒಂದಕ್ಕಿಂತ ಹೆಚ್ಚು ಉಪಮಾನಗಳನ್ನು ನೀಡುವುದು), ಮಾಲೋಪಮೆ (ಹೋಲಿಕೆಯ ವಸ್ತುಗಳಲ್ಲಿ ಒಂದಕ್ಕಿಂತ ಹೆಚ್ಚು ಗುಣಗಳಲ್ಲಿ ಸಾಮ್ಯವನ್ನು ಹೇಳುವುದು), ವಾಕ್ಯೋಪಮೆ (ಒಂದು ವಾಕ್ಯದ ಅರ್ಥವನ್ನು ಮತ್ತೊಂದು ವಾಕ್ಯದೊಂದಿಗೆ ಹೋಲಿಸುವುದು). ಸಂಧಾನೋಪಮೆ (ಉಪಮಾನ-ಉಪಮೇಯಗಳ ನಡುವೆ ಸಂಧಾನ ಮಾಡುವುದು), ಪ್ರತಿವಸ್ತೂಪಮೆ (ಎರಡು ವಸ್ತುಗಳಲ್ಲಿ ಒಂದನ್ನು ವರ್ಣಿಸಿ ಇನ್ನೊಂದು ವಸ್ತುವನ್ನು ಹೇಳಿ ಎರಡರ ನಡುವಣ ಹೋಲಿಕೆಯನ್ನು ಸೂಚಿಸುವುದು). ಹೇತೂಪಮೆ (ಎರಡು ವಸ್ತುಗಳ ಸಾಧಾರಣ ಧರ್ಮವನ್ನು ಎತ್ತಿ ತೋರಿಸುವುದು)– ಹೀಗೆ ಉಪಮೆಯ ಇಪ್ಪತ್ತಾರು ಪ್ರಭೇದಗಳನ್ನು ಲಕ್ಷಣ-ಲಕ್ಷ್ಯಸಮೇತವಾಗಿ ಮಾರ್ಗಕಾರ ವಿವರಿಸುತ್ತಾನೆ (3. 60–85).

ಅತಿಶಯೋಕ್ತಿ ಮುಂತಾದ ಅಲಂಕಾರಗಳು: 'ಮೇರೆಗಳೆದಿರೆ ವಿಶೇಷ

ವಿಚಾರಮನಧಿಕೋಕ್ತಿಯೊಳ್ ತಗುಳ್ಚುವುದು" (ವಾಸ್ತವವಾಗಿ ಇರುವುದನ್ನು ಹೆಚ್ಚುಮಾಡಿ ಹೇಳುವುದು) ಅತಿಶಯೋಕ್ತಿಯೆಂಬುದು ಮಾರ್ಗಕಾರನ ವಿವರಣೆ (3. 91). ಪ್ರಕೃತ ವಸ್ತುವಿನ ಗುಣವನ್ನು ಮತ್ತೊಂದರಲ್ಲಿ ಸದೃಶವಾಗಿರುವಂತೆ ಹೇಳುವುದು ಸದೃಶಯೋಗಿತಾ ಎಂಬ ಅಲಂಕಾರ (ಇದನ್ನು ದಂಡಿ ತುಲ್ಯಯೋಗಿತಾ ಎನ್ನುತ್ತಾನೆ); ಇದು ಧರ್ಮೋಪಮೆಯನ್ನೇ ಹೋಲುತ್ತದೆ (3. 95); ಪ್ರಸಿದ್ಧ ಅರ್ಥವನ್ನು ವಿರೋಧಿಸುವುದು ಅಥವಾ ಅಲ್ಲಗಳೆಯುವುದೇ ಆಕ್ಷೇಪಾಲಂಕಾರ (3. 99); ಇದರ ಪ್ರಭೇದಗಳೆಂದರೆ ವೃತ್ತಾಕ್ಷೇಪ, ಅನುಶಯಾಕ್ಷೇಪ, ಶ್ಲೇಷಾಕ್ಷೇಪ, ಉಪಮಾಕ್ಷೇಪ, ಸಂಶಯಾಕ್ಷೇಪ, ಹೇತ್ವಾಕ್ಷೇಪ (3. 100–106); ಒಂದೇ ರೂಪದ ಪದದಲ್ಲಿ ಒಂದಕ್ಕಿಂತ ಹೆಚ್ಚು ಅರ್ಥಗಳು ಅಡಕವಾಗಿದ್ದರೆ ಅದು ಶ್ಲೇಷೆ ಎಂಬ ಅಲಂಕಾರ; ಒಂದು ವಸ್ತುವಿನ ಯಥಾಸ್ಥಿತಿಯನ್ನು ಮರೆಸಿ 'ಪೆಱತೊಂದು ಮಾಟ್ಕೆಯಿಂ' (ಬೇರೊಂದು ರೀತಿಯಿಂದ) ತಿಳಿಸುವುದೇ ಉತ್ಪ್ರೇಕ್ಷೆ ಎಂಬ ಅಲಂಕಾರ (3. 114); ರಹಸ್ಯವಾದ ಆಲೋಚನೆ ಮುಂತಾದುವನ್ನು ಸೂಕ್ಷ್ಮಸಂಜ್ಞೆಗಳ ಮೂಲಕ ವ್ಯಕ್ತಪಡಿಸುವುದು ಸೂಕ್ಷ್ಮಾಲಂಕಾರ (3. 117). ಒಂದು ವಸ್ತುವಿನ ಗುಣ, ಜಾತಿ, ಕ್ರಿಯೆ ಮೊದಲಾದುವುಗಳಲ್ಲಿನ ಕೊರತೆಯನ್ನು ಹೇಳದೆ ಅದರ ವಿಶೇಷವನ್ನಷ್ಟೇ ಹೇಳುವುದು ವಿಶೇಷಾಲಂಕಾರ (93. 120); ಒಂದು ಕಾರ್ಯವನ್ನು ಆರಂಭಿಸಿರುವಾಗ ಅದಕ್ಕೆ ದೈವವಶಾತ್ ನೆರವು ಒದಗುವುದು ಸಮಾಹಿತ (3. 123); ಒಂದು ವಸ್ತುವನ್ನು ಮನಸ್ಸಿನಲ್ಲಿಟ್ಟುಕೊಂಡು ಅದರಂತಹ ಮತ್ತೊಂದನ್ನು ಕುರಿತು ಕುರುಹುಗಳ ಮೂಲಕ ಹೇಳುವುದು ಸಮಾಸೋಕ್ತಿ (3. 126); ಉದ್ದಿಷ್ಟ ಅರ್ಥವನ್ನು ನೇರವಾಗಿ ತಿಳಿಸದೆ ಉಪಾಯವಾಗಿ ಹೇಳುವುದು 'ಪರ್ಯಾಯೋಕ್ತ' (3. 131); ವಿರುದ್ಧ ವಸ್ತುಗಳನ್ನು ಒಗ್ಗೂಡಿಸಿ ಅವುಗಳ ವಿಶೇಷ ಭಿನ್ನತೆಗಳನ್ನು ತಿಳಿಸುವುದು ವಿರೋಧ ಎಂಬ ಅಲಂಕಾರ (3. 134); ಪ್ರಸ್ತುತವಲ್ಲದ್ದನ್ನೇ ವಿಸ್ತಾರವಾಗಿ ವರ್ಣಿಸಿದರೆ ಅದು 'ಅಪ್ರಸ್ತುತ ಪ್ರಶಂಸೆ' ಎನಿಸುತ್ತದೆ (3. 138); ಪ್ರಕೃತ ವಸ್ತುವಿನ ಗುಣದೋಷಾದಿಗಳಿಗೆ ಅನುಗುಣವಾಗಿ ಅದರ ವಿಷಯವನ್ನು ಅದನ್ನು ಹೋಲುವ ಮತ್ತೊಂದನ್ನು ನಿದರ್ಶನಕ್ರಮದಲ್ಲಿ ಹೇಳುವುದು 'ನಿದರ್ಶನಾಲಂಕಾರ' (3. 141); ಗುಣ ಜಾತಿ

ಮುಂತಾದವುಗಳಲ್ಲಿ ಸಂಬಂಧವಿದ್ದು ಅವು ಒಂದನ್ನೊಂದು ಹೋಲುತ್ತ ಜೊತೆಯಾಗಿರುವುದು 'ಸಹೋಕ್ತಿ' ಎಂಬ ಅಲಂಕಾರ (3. 154); ಇಲ್ಲಿ ಉಕ್ತವಾದ ಅಲಂಕಾರಗಳನ್ನು ಬೆರೆಸಿ ಹೇಳುವ ಕ್ರಮವೇ 'ಸಂಕೀರ್ಣ ಅಲಂಕಾರ' (3. 156); ಅರ್ಥಗಳು ವಿನಿಮಯವಾಗುವಂತೆ ವರ್ಣಿಸುವುದು 'ಪರಿವೃತ್ತಿ' (3. 158); ಗುಣಗಳನ್ನು ದೋಷಗಳೆಂಬ ಹಾಗೆ ಹೇಳುವುದು 'ವ್ಯಾಜಸ್ತುತಿ' (3. 160); ಯಾವುದಾದರೂ ಕಾರ್ಯಕ್ಕೋ ಪರಿಣಾಮಕ್ಕೋ ಕಾವ್ಯೋಚಿತವಾಗಿ ಕಾರಣವನ್ನು ಕಲ್ಪಿಸಿ ಹೇಳುವುದು 'ಹೇತೂಕ್ತಿ'; ಅದರಲ್ಲಿ 'ಕಾರಕ' ಮತ್ತು 'ಜ್ಞಾಪಕ'ಗಳೆಂಬ ವಿಧಗಳೆಂದೂ, ಅವೆರಡರಲ್ಲಿಯೂ ಅನೇಕ ಭೇದಗಳುಂಟೆಂದೂ ಹೇಳಲಾಗಿದೆ (3. 163–167); ಪ್ರಸಿದ್ಧ ಕಾರಣದ ಬದಲು ಹೊಸ ಕಲ್ಪಿತ ಕಾರಣವನ್ನು ಸ್ವಾಭಾವಿಕವೆಂಬಂತೆ ಹೇಳುವುದು 'ವಿಭಾವನೆ' (3. 168); ಗುಣದಲ್ಲಿ ಕೊಂಚ ದೋಷವನ್ನೂ ದೋಷದಲ್ಲಿ ಕೊಂಚ ಗುಣವನ್ನೂ ಪರಿಗಣಿಸುವುದು 'ಲೇಶ' ಎಂಬ ಅಲಂಕಾರ (3. 170); ಪ್ರಕೃತ ವಸ್ತುವಿನ ವಿಶೇಷಗಳನ್ನೂ ಹಿರಿಮೆಯನ್ನೂ ವಿಶೇಷಿಸಿ ಹೇಳುವುದು 'ಉದಾತ್ತ' ಎಂಬ ಅಲಂಕಾರ (3. 173); ವಸ್ತುವಿನ ಢಾಳಾಗಿ ಕಾಣುವ ಯಥಾರ್ಥತೆಯನ್ನು ಮರೆಸಿ ಇನ್ನೊಂದು ಅರ್ಥವನ್ನು ಹೇಳುವುದು 'ಅಪಹ್ನುತಿ', ಇದರಲ್ಲಿ 'ಮೋಹಾಪೋಹ', 'ಧರ್ಮಾಪೋಹ' ಮತ್ತು 'ಗುಣಾಪೋಹ' ಎಂಬ ಭೇದಗಳನ್ನು ಹೇಳಲಾಗಿದೆ (3. 182–186).

ರಸವದಲಂಕಾರ: ಒಂಬತ್ತು ಬಗೆಯ ರಸಗಳನ್ನು ಮನಮುಟ್ಟುವಂತೆ ನಿರೂಪಿಸುವ ವಚನವಿರಚನೆಯೇ ರಸವದಲಂಕಾರವೆಂಬುದು ಮಾರ್ಗಕಾರನ ವಿವರಣೆ. ಅವನು ಹೆಸರಿಸುವ ರಸಗಳೆಂದರೆ ವೀರ ಅದ್ಭುತ ಕರುಣಾ ಶೃಂಗಾರ ಭಯಾನಕ ರೌದ್ರ ಬೀಭತ್ಸ ಹಾಸ್ಯ ಮತ್ತು ಶಾಂತ. ಸಂಸ್ಕೃತದ ಅತ್ಯಂತ ಪ್ರಾಚೀನ ಲಕ್ಷಣಗ್ರಂಥವಾದ ಭರತನ ನಾಟ್ಯಶಾಸ್ತ್ರದಲ್ಲಿ ಎಂಟು ರಸಗಳ ಉಲ್ಲೇಖ ಮಾತ್ರವಿದೆ; ಶಾಂತವನ್ನಲ್ಲಿ ಹೆಸರಿಸಿಲ್ಲ. ಶಾಂತರಸದ ಮೊದಲ ಉಲ್ಲೇಖ ಸಂಸ್ಕೃತದಲ್ಲಿ ದೊರೆಯುವುದು ಉದ್ಭಟನ 'ಕಾವ್ಯಾಲಂಕಾರ ಸಂಗ್ರಹ'ದಲ್ಲಿ (ಕಾಲ ಕ್ರಿಸ್ತಶಕ 776–807). ಉದ್ಭಟನನ್ನು ಅನುಸರಿಸಿ ಜೈನನಾದ ಶ್ರೀವಿಜಯನು ಶಾಂತವನ್ನು ಉಲ್ಲೇಖಿಸಿರಬೇಕು; ಮೊದಲ ಪರಿಚ್ಛೇದದ 98 ನೆಯ ಪದ್ಯದಲ್ಲಿ ಇದನ್ನು

'ಪ್ರಶಾಂತ' ಎಂದು ಕರೆದಿದ್ದಾನೆ. ಅಲ್ಲಿಯೇ "ಪ್ರಸನ್ನಗಂಭೀರೋಕ್ತಿಯಿಂ ಪ್ರಕಟಮಕ್ಕೆ ಸತತಂ ಪ್ರಶಾಂತದಾಂ" ಎಂಬ ಮಾತಿದೆ. ಈ ಎಲ್ಲ ರಸಗಳಿಗೂ ಲಕ್ಷ್ಯಗಳನ್ನು ಕೊಟ್ಟಿರುವುದು ಇಲ್ಲಿನ ವಿಶೇಷ (3. 189–197)

ಇತರ ಕೆಲವು ಅಲಂಕಾರಗಳು: ವ್ಯಕ್ತಿಯ ಆತ್ಮಾಭಿಮಾನವನ್ನು ಪ್ರಕಾಶಗೊಳಿಸುವುದೇ 'ಊರ್ಜಿತಾಲಂಕಾರ' (ದಂಡಿ ಇದನ್ನು ಊರ್ಜಸ್ವಿ ಎಂದಿದ್ದಾನೆ) (3.198); ಒಮ್ಮೆ ಹೇಳಿದ ಮಾತನ್ನೇ ಮತ್ತೆ ಮತ್ತೆ ಎತ್ತಿ ಹೇಳಿದರೆ ಅದು 'ವ್ಯಾವೃತ್ತಿ' ಎನಿಸಿಕೊಳ್ಳುತ್ತದೆ (3. 200); ಪ್ರಿಯವಾದುದನ್ನು ನಯ ವಿನಯ ಉದಾರ ಗುಣಗಳಿಂದ ಮನೋಹರವಾಗಿ ಹೇಳುವುದು 'ಪ್ರಿಯತರ' ಎಂಬ ಅಲಂಕಾರ (3. 203); ಹಿರಿಯರು ಕಿರಿಯರ ಮನಸ್ಸಿನ ಅಭೀಷ್ಟವನ್ನು ಗ್ರಹಿಸಿಕೊಂಡು ಹರಸುವುದೇ 'ಆಶೀಃ' ಎಂಬ ಅಲಂಕಾರ (3. 205); ಕಾವ್ಯದ ಆಶಯವೇ 'ಭಾವ', ಕಾವ್ಯವಸ್ತುವಿನ ಎಲ್ಲ ಭಾಗಗಳು ಇದಕ್ಕೆ ಹೊಂದಿಕೊಂಡಿರುವುದು, ಇಂಥ ಭಾವವನ್ನು ಅವಲಂಬಿಸಿರುವುದೇ 'ಭಾವಿಕ' ಎಂಬ ಅಲಂಕಾರ (3. 207). ಈ ಎಲ್ಲ ಅಲಂಕಾರಗಳನ್ನೂ ಲಕ್ಷ್ಯಗಳಿಂದ ವಿವರಿಸಲಾಗಿದೆ. ಕೆಲವೆಡೆ ದಂಡಿಯನ್ನು ಅನುಸರಿಸಿದ್ದರೂ ಸಾಕಷ್ಟು ಸಂಖ್ಯೆಯ ಲಕ್ಷ್ಯಪದ್ಯಗಳು ಬೇರೆಯವು; ಇವುಗಳಲ್ಲಿ ಕೆಲವು ಪೂರ್ವಕವಿಗಳ ರಚನೆಗಳಾಗಿರಬಹುದು, ಮತ್ತೆ ಕೆಲವು ಮಾರ್ಗಕಾರನ ಸ್ವಂತ ರಚನೆಗಳಾಗಿರಬಹುದು.

'ಧ್ವನಿಯೆಂಬುದಳಂಕಾರಂ': "ಧ್ವನಿಯೆಂಬುದಳಂಕಾರಂ ಧ್ವನಿಯಿಸುಗುಂ ಶಬ್ದದಿಂದಮರ್ಥದೆ ದೂಷ್ಯಂ" (3. 208) ಎಂಬ ಮಾರ್ಗಕಾರನ ಮಾತು ಬಹು ಚರ್ಚಿತವಾಗಿದೆ. ಶ್ರೀವಿಜಯ ಮತ್ತವನ ಸಮಕಾಲೀನನಾಗಿದ್ದಿರಬಹುದಾದ 'ಧ್ವನ್ಯಾಲೋಕ'ದ ಕರ್ತೃ ಆನಂದವರ್ಧನ ಇವರಿಬ್ಬರಿಗೂ ಹಿಂದೆಯೇ ಧ್ವನಿಯ ಬಗ್ಗೆ ಚರ್ಚೆ ನಡೆದಿದ್ದಿರಬೇಕೆಂದು 'ಧ್ವನ್ಯಾಲೋಕ'ದ ಮೊದಲ ಕಾರಿಕೆಯ 'ಕಾವ್ಯಸ್ಯಾತ್ಮಾ ಧ್ವನಿರಿತಿ ಬುಧೈಃ ಸಮಾಮ್ನಾತಪೂರ್ವಃ' ಎಂಬ ಮಾತಿನಲ್ಲಿ ಸೂಚಿತವಾಗಿದೆಯೆಂದು ವಿದ್ವಾಂಸರು ಊಹಿಸುತ್ತಾರೆ. ಆದರೆ ಆನಂದವರ್ಧನನು 'ಧ್ವನಿ'ಯನ್ನೊಂದು ಸಿದ್ಧಾಂತವಾಗಿ ರೂಪಿಸಿದವನು. ಆದರೆ ದಂಡಿ–ಭಾಮಹರು ಆ ವಿಷಯವಾಗಿ ಮೌನ ತಾಳಿದ್ದಾರೆ.

ಶ್ರೀವಿಜಯನು ಆನಂದವರ್ಧನನ ಕೃತಿಯನ್ನು ಗಮನಿಸಿದ್ದನೋ ಇಲ್ಲವೋ ತಿಳಿಯದು, ಪ್ರಾಯಶಃ ಇಲ್ಲವೆನಿಸುತ್ತದೆ. ಆದರೆ "'ಧ್ವನಿ'ಯನ್ನು 'ಅಲಂಕಾರ' ಎಂದು ಖಚಿತವಾಗಿ ಹೇಳಿ, ಶಬ್ದ-ಅರ್ಥಗಳ ಸಂಬಂಧವನ್ನು ಕುರಿತು ಹೇಳುತ್ತಾನೆ. ಧ್ವನಿಯು ಶಬ್ದದಿಂದ ಹುಟ್ಟುವುದೆಂದೂ ಅರ್ಥಮೂಲದಿಂದಾದರೆ ದೂಷ್ಯವೆಂದೂ ವಿವರಿಸಿದ್ದಾನೆ" ಎಂದು ಎಂವಿಸೀ ಹೇಳುತ್ತಾರೆ (ಸಮಗ್ರ ಸಾಹಿತ್ಯ ಚರಿತ್ರೆ, ಸಂ. 1, ಪು. 94). ಈ ವಾಕ್ಯದ ಅರ್ಥದ ಬಗ್ಗೆ ವಿದ್ವಾಂಸರಲ್ಲಿ ಚರ್ಚೆ ನಡೆದಿದೆ: ಇವರ ಪೈಕಿ ಮುಳಿಯ ತಿಮ್ಮಪ್ಪಯ್ಯ, ಭೀಮರಾವ್ ಚಿಟಗುಪ್ಪಿ, ತೀನಂಶ್ರೀ, ಕೆ. ಕೃಷ್ಣಮೂರ್ತಿ, ಎಂವಿಸೀ ಮುಖ್ಯರು. ಎಲ್ಲರ ವ್ಯಾಖ್ಯಾನಗಳಲ್ಲಿ ತೀನಂಶ್ರೀ ಹೇಳುವ "ಶಬ್ದಶಕ್ತಿ ಮೂಲ ಧ್ವನಿ ವಿಚಾರವು ಲಕ್ಷಣದಲ್ಲಿ ಸೂಚಿತವಾದಂತಿದೆ" ಎಂಬ ಮಾತು ಮಾರ್ಗಕಾರನ ಇಂಗಿತಕ್ಕೆ ಹೆಚ್ಚು ಹತ್ತಿರವಾಗಿರುವಂತಿದೆ. ಈ ಅಭಿಪ್ರಾಯವನ್ನೇ ಬೆಂಬಲಿಸಿದಂತೆ ತಮ್ಮ ಕವಿರಾಜಮಾರ್ಗದ ಆವೃತ್ತಿಯ ಟಿಪ್ಪಣಿಯಲ್ಲಿ ಲಕ್ಷ್ಯವನ್ನು ಕುರಿತು ಎಂವಿಸೀ ಹೇಳುವ "ಕಮಲದಂಥ ಮುಖ, ಮೀನಿನಂಥ ಕಣ್ಣು ಎಂಬ ಉಪಮೆ (ಅರ್ಥಾಲಂಕಾರ) ಇಲ್ಲಿ ವ್ಯಂಗ್ಯವಾಗಿದೆ. ಇದೇ ಇಲ್ಲಿನ ಧ್ವನಿ ಎಂಬಲ್ಲಿ ಸಂದೇಹಕ್ಕೆ ಎಡೆಯಿಲ್ಲ ಎಂದು ನಮ್ಮ ಅಭಿಪ್ರಾಯ" ಎಂಬ ಮಾತು ಸಮಂಜಸವಾಗಿದೆ. ಅಥವಾ ಧ್ವನಿಯು ಶಬ್ದದಿಂದಲೇ ಹೊರಡುವುದು, ಆದರೆ ವಾಚ್ಯಾರ್ಥಕ್ಕಿಂತ ಅದು ಭಿನ್ನ. ಹೀಗಾಗಿ ಶಬ್ದದ ಅರ್ಥವನ್ನು ಮಾತ್ರ (ಅಂದರೆ ವಾಚ್ಯಾರ್ಥವನ್ನು) ಗ್ರಹಿಸಿದರೆ ಅದು ದೂಷ್ಯವಾಗುತ್ತದೆ ಎಂಬುದು ಮಾರ್ಗಕಾರನ ಇಂಗಿತವಿರಬಹುದು. ಎಲ್ಲ ಅಲಂಕಾರಗಳೂ ವಾಚ್ಯಾರ್ಥದಿಂದ ಹೊರಟರೂ ಬೇರೊಂದು ಅರ್ಥದಲ್ಲಿ ಪರ್ಯವಸಾನವಾಗುವುದಷ್ಟೆ; ಅಂದರೆ ಎಲ್ಲ ಅಲಂಕಾರಗಳೂ ಧ್ವನ್ಯಾತ್ಮಕವೇ ಎಂಬ ಆಶಯ ಮಾರ್ಗಕಾರನದಿರಬಹುದು. ಎಲ್ಲ ಅಲಂಕಾರಗಳ ಬಗ್ಗೆ ಹೇಳಿಯಾದ ಮೇಲೆ ಕೊನೆಯಲ್ಲಿ ಈ ಮಾತು ಬಂದಿರುವುದರಿಂದ, ಎಲ್ಲ ಅಲಂಕಾರಗಳ ಹಿಂದೆ ಕಾರ್ಯಶೀಲವಾದ ಸಮಾನ ತತ್ವವನ್ನೇ ಮಾರ್ಗಕಾರ ಧ್ವನಿಯೆಂದು ಕರೆದಿರುವಂತೆ ತೋರುತ್ತದೆ.

ಮಹಾಕಾವ್ಯ ಲಕ್ಷಣಗಳು: ಮಹಾಕಾವ್ಯವು ಇತಿಹಾಸಾಧಾರಿತವಾಗಿರಬೇಕು; ಪ್ರಸಿದ್ಧ ಕತೆ ಹಾಗೂ ಚತುರ ಅಭಿವ್ಯಕ್ತಿಯು

ಅರ್ಥವಂತಿಕೆಯಿಂದ ಕೂಡಿರಬೇಕು; ಕುಶಲತೆ ಮತ್ತು ಸೌಂದರ್ಯಗಳಿಂದ ಕೂಡಿದ ಲೋಕಾನುಭವವನ್ನು ಹೊಂದಿರಬೇಕು; ಪರಮಸುಖಪ್ರದವಾದ ಪುರುಷಾರ್ಥಗಳ ಮಹತಿಯನ್ನು ನಿರೂಪಿಸಬೇಕು; ಪುರ, ಜನಪದ, ಶೈಲ, ಸೂರ್ಯ ಚಂದ್ರ ಉದಯ, ಮೃಗಗಣಗಳು, ಜಲಕ್ರೀಡೆ, ಪ್ರಮದೆಯರ ಯೌವನ, ರಮಣಗೋಷ್ಠಿ, ವಿವಾಹಸಂಭ್ರಮ, ರಾಜಕುಮಾರ ಜನನ, ಮಂತ್ರಾಲೋಚನೆಗಳು, ದೂತಕಾರ್ಯ, ಪ್ರಯಾಣ, ಯುದ್ಧವರ್ಣನೆ, ನಾಯಕನ ಅಭ್ಯುದಯಗಳ ವರ್ಣನೆ; ಒಳ್ಳೆಯ ಅಲಂಕಾರಗಳಿಂದಲೂ ಲಲಿತಪದಗಳಿಂದಲೂ ರಾಜನೀತಿವಿದರ ಯುಕ್ತಿ ಮತ್ತು ತಿಳಿವಳಿಕೆಗಳನ್ನೊಳಗೊಂಡ ಅಪೂರ್ವ ಮಾತುಗಾರಿಕೆ; ವಿವಿಧ ಸಮಯಗಳ ಸಿದ್ಧಾಂತಸಾರವನ್ನೊಳಗೊಂಡಿರಬೇಕು; ನಿರ್ಮಲವಾದುದಾಗಿರಬೇಕು; ವೀರದಿಂದ ಕೂಡಿರಬೇಕು; ಸಾಗರದಂತಹ ಶಬ್ದವೀಚಿಯಿಂದ ಸೊಗಸಬೇಕು; ನಿರೂಪಣೆಗೊಂಡ ಗುಣಗಳ ಗಣಿಯಾಗಿರಬೇಕು – ಇಂತಹ ಮಹಾಕಾವ್ಯದ ಕೀರ್ತಿಯು ಇಡೀ ಭೂಮಂಡಲವನ್ನೇ ಆಕ್ರಮಿಸುತ್ತದೆ; ಇಂತಹ ಕಾವ್ಯವು ಅಮೋಘವರ್ಷನ ಯಶಸ್ಸಿನ ಹಾಗೆ ಕಲ್ಪಾಂತಸ್ಥಾಯಿಯಾಗಿರುತ್ತದೆ (3. 209–17).

ಒಟ್ಟಾರೆ ಕವಿರಾಜಮಾರ್ಗವು ಸಂಸ್ಕೃತ ಆಲಂಕಾರಿಕರಲ್ಲಿ ಬಹುಮಟ್ಟಿಗೆ ದಂಡಿಯ ಕಾವ್ಯಾದರ್ಶವನ್ನೂ ಕೆಲವು ವಿಚಾರಗಳಲ್ಲಿ ಭಾಮಹನನ್ನೂ ಅನುಸರಿಸಿರುವುದು ಕಂಡುಬರುತ್ತದೆ. ಕಾವ್ಯಕ್ಕೆ ಸೊಗಸನ್ನುಂಟುಮಾಡುವುದೆಲ್ಲವೂ ಅಲಂಕಾರವೆಂದು ದಂಡಿಯಂತೆಯೇ ಕವಿರಾಜಮಾರ್ಗಕಾರನೂ ಭಾವಿಸುತ್ತಾನೆ. ಅಲ್ಲದೆ, ದಂಡಿಗೆ ಪರಮಪ್ರಿಯವಾದ ದಶಗುಣಗಳನ್ನು ಹೇಳಿ, ಅವನು ಹೇಳಿರುವ ವೈದರ್ಭ, ಗೌಡಮಾರ್ಗಗಳಿಗೆ ಸಂವಾದಿಯಾಗಿ ದಕ್ಷಿಣೋತ್ತರ ಮಾರ್ಗಗಳನ್ನು ನಿರೂಪಿಸುತ್ತಾನೆ. ಅಲಂಕಾರಗಳ ನಿರೂಪಣೆಯಲ್ಲಿ ಬಹುಮಟ್ಟಿಗೆ ಕಾವ್ಯಾದರ್ಶದ ಅನುಸರಣೆ ಕಂಡು ಬರುತ್ತದೆ. ಇಷ್ಟರಮಟ್ಟಿಗೆ ಕವಿರಾಜಮಾರ್ಗ ಸಂಸ್ಕೃತಕ್ಕೆ ಋಣಿಯಾಗಿದ್ದರೂ ಹಲವು ವಿಚಾರಗಳಲ್ಲಿ ತನ್ನ ಸ್ವಂತಿಕೆಯನ್ನು ಮೆರೆದಿದೆ. ಸಂಸ್ಕೃತಕಾವ್ಯಲಕ್ಷಣಗಳನ್ನು ಕನ್ನಡಕ್ಕೆ ಹೊಂದಿಕೊಳ್ಳುವಂತೆ ಹೇಳುವಲ್ಲಿ ಸ್ವತಂತ್ರ ದೃಷ್ಟಿ ಕಂಡುಬರುತ್ತದೆ. ಕನ್ನಡಕ್ಕೆ ಸಂಬಂಧಪಟ್ಟಂತೆ ಸಮಸಂಸ್ಕೃತ ಪದಗಳನ್ನು ಕನ್ನಡದೊಂದಿಗೆ ಬೆರೆಸುವ

ವಿಚಾರ; ಯತಿಭಂಗವನ್ನು ಸಮರ್ಥಿಸಿ ಕನ್ನಡಕ್ಕೆ ಅತಿಶಯವಾದ ಖಂಡಪ್ರಾಸವನ್ನು ಎತ್ತಿ ಹಿಡಿದಿರುವುದು; ಕನ್ನಡದಲ್ಲಿ ಜಾತ್ಯೇಕವಚನದ ವೈಶಿಷ್ಟ್ಯವನ್ನು ಗುರುತಿಸುವುದು; ಶ್ರುತಿ ದುಷ್ಟ, ಅರ್ಥದುಷ್ಟ, ಶ್ರುತಿಕಷ್ಟ, ಕಲ್ಪನೋಕ್ತಿಕಷ್ಟ – ಈ ದೋಷಗಳನ್ನು ತಕ್ಕ ಕನ್ನಡ ಉದಾಹರಣೆಗಳಿಂದ ವಿಶದಪಡಿಸಿರುವುದು ಮತ್ತು ಈ ದೋಷಗಳಿಗೆ ಪಗರಣದಲ್ಲಿ ಅವಕಾಶವಿತ್ತಿರುವುದು; ಕನ್ನಡದಲ್ಲಿ ಕಾರಕದೋಷ ಹೇಗೆ ಸಂಭವಿಸುತ್ತದೆಂಬುದನ್ನು ತಕ್ಕ ನಿದರ್ಶನಗಳಿಂದ ಸ್ಪಷ್ಟಪಡಿಸಿರುವುದು – ಇವೇ ಮುಂತಾದುವು ಮಾರ್ಗಕಾರನ ಸ್ವತಂತ್ರ ಪ್ರಜ್ಞೆಗೆ ನಿದರ್ಶನಗಳಾಗಿವೆ. ಅಂತೆಯೇ ಕನ್ನಡ ಕಾವ್ಯಮೀಮಾಂಸೆಯ ಬೆಳೆವಣಿಗೆಯಲ್ಲಿ ಕವಿರಾಜಮಾರ್ಗಕ್ಕೊಂದು ವಿಶಿಷ್ಟವಾದ ಸ್ಥಾನವಿದೆ. ಕವಿಕಾವ್ಯಗಳ ಬಗ್ಗೆ ಇಲ್ಲಿ ಹೇಳಿರುವ ಮಾತುಗಳು ತುಂಬ ಸುಂದರವೂ ಉಚಿತವೂ ಆಗಿವೆ. ಕವಿಗಳಲ್ಲಿರುವ ತಾರತಮ್ಯಗಳನ್ನು ನಿರೂಪಿಸುವಲ್ಲಿ ಕೃತಿಕಾರನ ಸ್ವತಂತ್ರ ವಿಚಾರಶಕ್ತಿ ವ್ಯಕ್ತವಾಗಿದೆ.

ಸಾಹಿತ್ಯಚರಿತ್ರೆಯ ಅಜ್ಞಾತಯುಗದ ಮೇಲೆ ಕವಿರಾಜಮಾರ್ಗ ವಿಶೇಷವಾಗಿ ಬೆಳಕು ಬೀರುತ್ತದೆ. ಕನ್ನಡ ಕಾವ್ಯಗಳಲ್ಲಿ ಗದ್ಯಪದ್ಯಸಂಮಿಶ್ರಿತವಾದ, ಗದ್ಯ ಪ್ರಾಚುರ್ಯ ಹೆಚ್ಚಾದ, ಗದ್ಯಕಥಾಪ್ರಕಾರವೊಂದಿದ್ದಿತು (1–27), ಚತ್ತಾಣ–ಬೆದಂಡೆ ಎಂಬ ದೇಸಿಗಬ್ಬಪ್ರಕಾರಗಳು ಪ್ರಚುರವಾಗಿದ್ದುವು (1–33), ವಿಮಳೋದಯ ನಾಗಾರ್ಜುನಾದಿಗಳು ಗದ್ಯಾಶ್ರಮಗುರುತಾಪ್ರತೀತಿಯನ್ನು ಕೈಗೊಂಡಿದ್ದರು (1–29), ಶ್ರೀವಿಜಯ, ಕವೀಶ್ವರ, ಪಂಡಿತ, ಚಂದ್ರ, ಲೋಕಪಾಲಾದಿಗಳ ವಸ್ತು ವಿಸ್ತರರಚನೆ 'ಲಕ್ಷ್ಯಂ ತದಾದ್ಯಕಾವ್ಯಕ್ಕೆಂದುಂ' ಎನ್ನಿಸಿಕೊಂಡಿದ್ದುವು (1–32), "ನೆಲೆಸಿದ ಕಾವ್ಯಂ ಕಾವ್ಯಕ್ಕೆ ಲಕ್ಷಣಂ ಸತತಂ" (1–48), ಆಗಿನ ಕಾಲಕ್ಕೇ ಕನ್ನಡ ಕಾವ್ಯಪರಂಪರೆಯೊಂದು ರೂಢಮೂಲವಾಗಿದ್ದಿತು, ತನ್ನ ಕಾಲಕ್ಕೇ ಹಳಗನ್ನಡವೊಂದಿದ್ದಿತು – ಇವೇ ಮುಂತಾದ ಅಂಶಗಳಲ್ಲದೆ ಅಲ್ಲಲ್ಲಿ ಬರುವ ಪುರಾಣಕವಿಗಳ್, ಪರಮಕವಿಪ್ರಧಾನರಾಕಾವ್ಯಂಗಳ್, ಪೂರ್ವಕಾವ್ಯ ರಚನೆಗಳು – ಇತ್ಯಾದಿ ಪ್ರಯೋಗಗಳು ಕವಿರಾಜಮಾರ್ಗಕ್ಕಿಂತ ಹಿಂದಿನ ಕಾವ್ಯನಿರ್ಮಾಣೋದ್ಯೋಗದ ಜಾಡಿನ ಹೆಜ್ಜೆಗುರುತುಗಳಾಗಿವೆ.

ಕವಿರಾಜಮಾರ್ಗ ಶಾಸ್ತ್ರಗ್ರಂಥವಾದರೂ ಅಲ್ಲಲ್ಲಿ ಕವಿತ್ವದ ಸೊಗಸು ಮಿನುಗಿದೆ; ಅಲ್ಲಲ್ಲಿ ಕಂಡುಬರುವ ಉಪಮೆ, ನಾಣ್ನುಡಿಗಳು ಮನಸೆಳೆಯುವಂತಿವೆ. 'ಕಲ್ತೊಡನೋದುವುವಲ್ತೆ ಗಿಳಿಗಳುಂ ಪುರುಳಿಗಳುಂ', 'ಕಾಣದಂತೆಂದುಂ ಕಣ್ಗಳ್ ತಮ್ಮ ಕಾಡಿಗೆಯಂ', 'ಒತ್ತುಂಗರಡೆಯ ಮದ್ದಳೆಯ ಜರ್ಝರ ಧ್ವನಿಗಳವೊಲ್', 'ಮಱುಗುವ ಪಾಲ್ಗಳೆಯ ಪನಿಗಳಂ ಬೆರೆಸಿದವೊಲ್', 'ಕೇಡಡಸಿದಂದು ಬಗೆಯುಂ ಕೂಡದು', 'ಕೂಸಿನ ತಲೆಯೊಳ್ ಬಿಣ್ಪೊಱೆಯನಿಟ್ಟವೋಲ್'- ಈ ಮೊದಲಾದ ಮನೋಹರವಾದ ವರ್ಣನೆಗಳಿವೆ. ಕೃತಿಯ ಶೈಲಿ ಲಲಿತವಾಗಿದೆ, ಉಚಿತವಾಗಿದೆ. ಇದರಲ್ಲಿ ನಾಣ್ನುಡಿಯ ಬೆಡಗಿದೆ. ಉದ್ದಕ್ಕೂ ಸ್ವತಂತ್ರ ವಿಚಾರವಾರ್ಗವಿದೆ. "ಕಸವರಮೆಂಬುದು ನೆರೆಸೈರಿಸಲಾರ್ಪೊಡೆ ಪರವಿಚಾರಮಂ ಧರ್ಮಮುಮಂ। ಕಸವೇಂ ಕಸವರಮೇನುಬ್ಬಸಮಂ ಬಸಮಲ್ಲದಿರ್ದು ಮಾಡುವರೆಲ್ಲಂ" (3. 176) (ಪರರ ವಿಚಾರ ಹಾಗೂ ಧರ್ಮಗಳನ್ನು ಸಹಿಸುವ ಸಾಮರ್ಥ್ಯ ಹೊಂದಿದ್ದರೆ ಅದೇ ಚಿನ್ನ ಅಥವಾ ಸಂಪತ್ತು; ಆದರೆ ಎಲ್ಲರೂ ತಮ್ಮ ಅಸಹನೆಯಿಂದ ಇತರರಿಗೆ ಸಂಕಟವನ್ನುಂಟುಮಾಡುತ್ತಾರೆ, ಅಂಥವರ ದೃಷ್ಟಿಯಲ್ಲಿ ಕಸ-ಕಸವರ-ಕಸ ಚಿನ್ನ-ಎರಡೂ ಒಂದೇ); "ಪಾಟಿನಿಲೆನೆಗಱ್ ಬಾೞ್ವುದು ಬಾೞೆಂಬುದು ನಿಕ್ಕುವಂ ಗುಣಗ್ರಾಮಣಿಗಳ್। ಪಾೞಾಗೆ ತೆಗೞ್ಬಾೞ್ವಾಬಾೞೇನಾ ಚಂದ್ರತಾರಮೋಮಾನಸರಾ" (3. 177) (ಗುಣದಲ್ಲಿ ಶ್ರೇಷ್ಠರಾದವರು ಸರಿಯಾದ ಕ್ರಮದಲ್ಲಿ ಕೀರ್ತಿವಂತರಾಗಿ ಬಾಳುವುದೇ ನಿಜವಾದ ಬಾಳು; ತಾನೂ ಇತರರೂ ಹಾಳಾಗುವಂತೆ ಬಾಳುವ ಬಾಳು ಚಂದ್ರಸೂರ್ಯರಿರುವ ತನಕ ಇರುತ್ತದೆಯೇ) ಎಂಬಂತಹ ಅಪೂರ್ವ ವಿವೇಕದ ಮಾತುಗಳು ಇಲ್ಲಿ ಅಲ್ಲಿ ಮಿಂಚಿವೆ.

****

ಕವಿರಾಜಮಾರ್ಗ

ಕನ್ನಡ ಸಂಸ್ಕೃತಿ ಮತ್ತು ಕಾವ್ಯ ಮೀಮಾಂಸೆಯ ಗ್ರಹಿಕೆಗಳು

ಡಾ. ಕಾ. ವೆಂ. ಶ್ರೀನಿವಾಸಮೂರ್ತಿ
ಬೆಂಗಳೂರು ವಿಶ್ವ ವಿದ್ಯಾನಿಲಯ

ಕನ್ನಡದ ಮೊಟ್ಟ ಮೊದಲ ಕೃತಿ 'ಕವಿರಾಜಮಾರ್ಗ' ಎಂಬುದು ಲಭ್ಯ ಕೃತಿಗಳ ಆಧಾರದ ಮೇಲೆ ಹೇಳಿರುವ ಹಳೆಯ ಮಾತು. ಆದ್ಯ ಕೃತಿ ಎಂಬ ಕಾರಣದ ಜೊತೆಗೆ ಇನ್ನೂ ಹಲವು ದೃಷ್ಟಿಗಳಿಂದ ಇದು ತನ್ನ ಮಹತ್ವವನ್ನು ಸ್ಥಾಪಿಸಿಕೊಂಡಿದೆ. ಪಂಪ ಪೂರ್ವ ಯುಗದ ಕನ್ನಡ ಸಾಹಿತ್ಯದ ಸ್ವರೂಪ, ಕನ್ನಡ ಕಾವ್ಯ ಮೀಮಾಂಸೆ, ಕನ್ನಡ ಸಂಸ್ಕೃತಿಯ ನಿರ್ವಚನ – ಹೀಗೆ ಹಲವು ಆಯಾಮಗಳನ್ನು ಪಡೆದುಕೊಂಡಿದೆ. ಆದ್ದರಿಂದ ಇಲ್ಲಿನ ಚರ್ಚೆ ಪ್ರಸ್ತುತ ಕೃತಿಯನ್ನು ಕೇವಲ ಸಾಹಿತ್ಯಕ ಕೃತಿಯನ್ನಾಗಿ ಮಾತ್ರ ಗ್ರಹಿಸದೆ ಕನ್ನಡ ಕಾವ್ಯ ಮೀಮಾಂಸೆ ಮತ್ತು ಸಾಂಸ್ಕೃತಿಕ ಪಠ್ಯವನ್ನಾಗಿ ಗ್ರಹಿಸುವುದಾಗಿದೆ.

'ಕವಿರಾಜಮಾರ್ಗ'ದ ಹುಟ್ಟಿಗೆ ಸಾಹಿತ್ಯದಷ್ಟೇ ಸಾಹಿತ್ಯೇತರ ನೆಲೆಗಳೂ ಮುಖ್ಯ ಪ್ರೇರಣೆಗಳಾಗಿವೆ. ಇದು ರಚನೆಯಾದ ಕಾಲದಲ್ಲಿ ದೇಶೀ (ಸ್ಥಳೀಯ) ಪ್ರಭುತ್ವಗಳು ದಕ್ಷಿಣ ಭಾರತದ ರಾಜಕೀಯ ಇತಿಹಾಸದಲ್ಲಿ ಮುಖ್ಯ ಪಾತ್ರವನ್ನು ನಿರ್ವಹಿಸತೊಡಗಿದವು. ಅದರಲ್ಲಿ

ಕನ್ನಡದ ಪ್ರಭುತ್ವಗಳು ಕನ್ನಡ ಭಾಷೆ-ಸಂಸ್ಕೃತಿಯೊಂದಿಗೆ ತಮ್ಮ ಅನನ್ಯತೆಯನ್ನು ಗುರುತಿಸಿಕೊಳ್ಳತೊಡಗಿದ್ದವು. ಆದ್ದರಿಂದಲೇ ಈ ಕಾಲದಲ್ಲಿ ಕರ್ನಾಟಕದ ಬಹುಭಾಗವನ್ನು ಆಳಿದ ರಾಷ್ಟ್ರಕೂಟರು ಕನ್ನಡದಲ್ಲಿ ಶಾಸನಗಳನ್ನು ಕೊರೆಯಿಸಿದ್ದೇ ಅಲ್ಲದೆ ಕನ್ನಡ ಸಾಹಿತ್ಯಕ್ಕೆ ಉದಾರವಾದ ಪ್ರೋತ್ಸಾಹವನ್ನು ಸಹ ನೀಡಿದರು. ಈ ನಿಟ್ಟಿನಲ್ಲಿ ಇವರು ತಮ್ಮ ಉತ್ತರಕಾಲೀನ ಶಾಸನಗಳಲ್ಲಿ, ಅದರಲ್ಲೂ ಸಂಸ್ಕೃತದ ಶಾಸನಗಳಲ್ಲಿ ಸಹ ಕನ್ನಡದಲ್ಲಿಯೇ ಸಹಿಯನ್ನು ಮಾಡಿದ್ದಾರೆ.

ಇಂತಹ ನೆಲೆಯಲ್ಲಿ ಕನ್ನಡ ಭಾಷೆ-ಸಂಸ್ಕೃತಿ-ಸಾಹಿತ್ಯಗಳು ಅಖಂಡವಾಗಿ ಬೆರೆಯುತ್ತಾ, ಪ್ರಭುತ್ವ ತನ್ನೊಂದಿಗೆ ನಿಯತವಾದ ಸಂಬಂಧವನ್ನಿರಿಸಿಕೊಳ್ಳುವುದು ಅನಿವಾರ್ಯ ಎಂಬ ಸ್ಥಿತಿಯನ್ನು ನಿರ್ಮಾಣ ಮಾಡಲಾಯಿತು. ಆದ್ದರಿಂದ ಇಲ್ಲಿಯವರೆಗೂ ಸಂಸ್ಕೃತ ಪ್ರಾಕೃತಗಳನ್ನೇ ನೆಚ್ಚಿಕೊಂಡಿದ್ದ ಈ ನೆಲದ ವೈದಿಕರು ಮತ್ತು ಜೈನರು ಕನ್ನಡ ಸಾಹಿತ್ಯ ರಚನೆಗೆ ತಮ್ಮ ನಿಷ್ಠೆಯನ್ನು ವರ್ಗಾಯಿಸಿಕೊಂಡರು. ಅಲ್ಲದೆ ಇದು ಸಂಸ್ಕೃತ ಸಾಹಿತ್ಯದ ಇಳಿಗಾಲ ಎಂಬುದೂ ಗಮನಾರ್ಹ ವಿಚಾರ. ದೊಡ್ಡ ಪ್ರಭುತ್ವಗಳು ವಿಘಟನೆಗೆ ಒಳಗಾದದ್ದು, ಸ್ಥಳೀಯ ಪ್ರಭುತ್ವಗಳು ಭಾರತದ ರಾಜಕೀಯ ಇತಿಹಾಸದ ಪ್ರಧಾನ ಧಾರೆಗೆ ಏರತೊಡಗಿದ್ದು ಸಂಸ್ಕೃತದ ಇಳಿಗಾಲದೊಂದಿಗೆ ಸೂಕ್ಷ್ಮ ಸಂಬಂಧವನ್ನು ಇರಿಸಿಕೊಂಡಿದೆ. ಈ ಹಿನ್ನೆಲೆಯಲ್ಲಿ ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿಯನ್ನು ಅಪೇಕ್ಷಿತ ನೆಲೆಯಲ್ಲಿ ಪರಿಣಾಮಕಾರಿಯಾಗಿ ಕಟ್ಟುವ ನಿಟ್ಟಿನಲ್ಲಿ 'ಕವಿರಾಜಮಾರ್ಗ'ವು ಮೂಡಿಬರುತ್ತದೆ. ಆದ್ದರಿಂದಲೇ ಇದು ಕೇವಲ ಸಾಹಿತ್ಯ ಕೃತಿಯಾಗದೆ, ಕನ್ನಡ ಸಂಸ್ಕೃತಿಯನ್ನು ನಿರ್ವಚಿಸುವ ಸಾಂಸ್ಕೃತಿಕ ಪಠ್ಯವಾಗಿ ಮತ್ತು ಕನ್ನಡ ಕಾವ್ಯವನ್ನು ವಿವರಿಸಲು ಕನ್ನಡ ಕಾವ್ಯ ಮೀಮಾಂಸೆಯ ಕೃತಿಯಾಗಿ ನಮ್ಮ ಗಮನವನ್ನು ಸೆಳೆಯುವುದು. ಈ ಹಿನ್ನೆಲೆಯಲ್ಲಿ ಕೃತಿಯ ಮೊದಲ ಪರಿಚ್ಛೇದದ ಪೂರ್ವಾರ್ಧದಲ್ಲಿ ಬರುವ ಕನ್ನಡಪರ ವಿಚಾರಗಳನ್ನು ಗ್ರಹಿಸಬೇಕು.

'ಕವಿರಾಜಮಾರ್ಗ'ವು ಲಭ್ಯ ಕನ್ನಡ ಕೃತಿಗಳನ್ನು ಆಧರಿಸಿದ ಮೊದಲ ಕೃತಿ ಆಗುವಂತೆಯೇ ಅಲಭ್ಯ ಕೃತಿಗಳನ್ನು ಆಧರಿಸಿದ ಮೊದಲ ಶಾಸ್ತ್ರ

ಕೃತಿ ಆಗುತ್ತದೆ. ಇದಕ್ಕೆ ಕೆಲವು ಪ್ರಮಾಣಗಳು ಕೃತಿಯ ಒಳಗಡೆಯೇ ಸಿಗುತ್ತವೆ. ಉದಾಹರಣೆಗೆ, ಇದರಲ್ಲಿ ಕನ್ನಡದ ಗದ್ಯ ಮತ್ತು ಪದ್ಯ ಕಾವ್ಯ ಕರ್ತೃಗಳ ಪ್ರಸ್ತಾಪ ಇದೆಯೇ ವಿನಃ ಇತರೆ ಪದ್ಯಗಳನ್ನು ಒಳಗೊಂಡು ಎಲ್ಲಿಯೂ ಕನ್ನಡ ಅಲಂಕಾರಿಗಳ ಪ್ರಸ್ತಾಪ ಇಲ್ಲ. ಆದ್ದರಿಂದ ಕನ್ನಡ ಕಾವ್ಯ ಮೀಮಾಂಸೆಗೆ ಅಧಿಕೃತ ಆದ್ಯ ಕೃತಿಯಾಗುವ ಇದು ಏಕಕಾಲಕ್ಕೆ ಕನ್ನಡದ ವ್ಯಾಕರಣ ಮತ್ತು ಛಂದಸ್ಸಿನ ಕ್ಷಿತಿಜವನ್ನು ವಿಸ್ತರಿಸುವ ಕೃತಿಯೂ ಆಗುತ್ತದೆ. ಈ ಮೂಲಕವಾಗಿ ತಾನು ಕನ್ನಡದ ಮೊದಲ ಶಾಸ್ತ್ರ ಕೃತಿ ಎಂಬುದು ಇದಕ್ಕಿರುವ ಚಾರಿತ್ರಿಕ ಮಹತ್ವವನ್ನು ಸಾಬೀತು ಮಾಡುತ್ತದೆ.

ಪಂಪ ಪೂರ್ವ ಕನ್ನಡ ಸಾಹಿತ್ಯ ಕತ್ತಲಿನಲ್ಲಿಯೇ ಉಳಿದಿದೆ. ಅದಕ್ಕೆ ಸ್ವಲ್ಪ ಮಟ್ಟಿಗೆ ಬೆಳಕನ್ನು ಚೆಲ್ಲುವುದು 'ಕವಿರಾಜಮಾರ್ಗ'ದ ಹಿರಿಮೆ. ಈ ನಿಟ್ಟಿನಲ್ಲಿ (1–29, 31) ಅಂದಿನ ಕನ್ನಡದ ಗದ್ಯ, ಪದ್ಯ ಕವಿಗಳನ್ನು ಕೆಲವು ಅಜ್ಞಾತ ಕಾವ್ಯದ ಪದ್ಯಭಾಗಗಳನ್ನು, ಚತ್ತಾಣ, ಬೆದಂಡೆಯಂತಹ ಕನ್ನಡದ ದೇಶೀ ಮಟ್ಟುಗಳನ್ನು ಹಾಗೂ ಇವುಗಳ ಲಕ್ಷಣ ಮತ್ತು ಲಕ್ಷ್ಯಗಳನ್ನು ನೀಡುತ್ತದೆ.

ಹೀಗೆ ಪ್ರಾಚೀನ ಸಾಹಿತ್ಯ ಚರಿತ್ರೆಯ ದೃಷ್ಟಿಯಿಂದ ಪ್ರಸ್ತುತ ಕೃತಿಗಿರುವ ವಿಶೇಷ ಮಹತ್ವ ಸಹಜವಾಗಿಯೇ ವೇದ್ಯಗೊಳ್ಳುತ್ತದೆ.

'ಕವಿರಾಜಮಾರ್ಗ'ವು ಒಟ್ಟು ಸ್ವರೂಪದಲ್ಲಿ ಶಾಸ್ತ್ರವೂ ಕಾವ್ಯವೂ ಆಗಿದೆ. ಆದರೆ ಇದರ ಆಶಯ ಅಲಂಕಾರಗಳ ನಿರ್ವಚನ. ಇದು ಕೃತಿಯಾಗುವಾಗ ಅಲಂಕಾರ ಶಾಸ್ತ್ರದ ವಿವಿಧ ಘಟಕಗಳನ್ನು ಕುರಿತ ಲಕ್ಷಣವನ್ನು ಹೇಳುತ್ತಲೇ ಸ್ವಂತ ಪ್ರತಿಭಾ ಬಲದಿಂದ ಅವುಗಳಿಗೆ ಲಕ್ಷ್ಯಗಳನ್ನು ಸೋದಾಹರಣವಾಗಿ ಕೊಡುತ್ತದೆ. ಇಂತಹ ಎಡೆಗಳಲ್ಲಿ ಕಾವ್ಯಾತ್ಮಕತೆ ಮಿಂಚುತ್ತದೆ. ಆದ್ದರಿಂದ ಇದು ಕನ್ನಡದ ಮೊದಲ ಕಾವ್ಯ ಎಂದರೆ, ಇದರ ಅರ್ಧಸತ್ಯವನ್ನು ಒಪ್ಪಿದಂತೆಯೇ ಆಗುತ್ತದೆ.

ಕವಿರಾಜಮಾರ್ಗಕಾರ 1–38, 39, 40ರಲ್ಲಿ ಕನ್ನಡಿಗರ ಗುಣಸ್ವಭಾವ, ಕಾವ್ಯ ಸಹೃದಯತೆಗಳ ಬಗ್ಗೆ ಮಾತಾಡುತ್ತಾನೆ. ಇಲ್ಲಿ ವಾಸ್ತವವು ಉತ್ಪ್ರೇಕ್ಷೆಯ ನೆಲೆಯಲ್ಲಿ ಸಾಧಿತಗೊಳ್ಳುತ್ತದೆ. ಈ ಪ್ರಕ್ರಿಯೆಯಲ್ಲಿ ತನ್ನ ನಾಡಭಿಮಾನವು

ವ್ಯಕ್ತಗೊಳ್ಳುತ್ತದೆ. ಇಷ್ಟಾದರೂ ಈ ಕೃತಿ ಮುಖ್ಯವಾಗುವುದು ಇನ್ನೂ ಕೆಲವು ಗಂಭೀರ ಕಾರಣಗಳಿಗಾಗಿ ಎಂಬುದನ್ನು ಚರ್ಚೆಯ ಈ ಮುಂದಿನ ಭಾಗದಲ್ಲಿ ನೋಡಬೇಕಾಗಿದೆ.

'ಕವಿರಾಜಮಾರ್ಗ'ದಲ್ಲಿ ಅಧಿಕೃತ ಕನ್ನಡ ಭಾಷೆಯನ್ನು ಸಾಹಿತ್ಯಕ್ಕಾಗಿ ಸಜ್ಜುಗೊಳಿಸುವ ಕ್ರಿಯೆ ಇದೆ. ಈ ನೆಲೆಯಲ್ಲಿ ಪ್ರಮಾಣೀಕರಣದ ಕನ್ನಡ ಭಾಷೆಯನ್ನು ರೂಪಿಸುವ ಕ್ರಿಯೆ ನಿರತ ಮತ್ತು ನಿಯತವಾಗಿದೆ. ಇಂತಹ ಪ್ರಕ್ರಿಯೆಯಲ್ಲಿ ಪ್ರಮಾಣಬದ್ಧ ಭಾಷೆಯನ್ನು ರೂಪಿಸಿದ್ದು ಸತ್ಯದ ಒಂದು ಮುಖವಾದರೆ, ಈ ಪ್ರಮಾಣೀಕರಣದ ಭಾಷಾ ನಿರ್ಮಿತಿಯು ಸ್ಥಳೀಯ ಭಾಷಾ ರೂಪಗಳನ್ನು ಅವಜ್ಞೆಗೆ ಈಡು ಮಾಡಿದ್ದು ಅಥವಾ ಅವುಗಳನ್ನು ಕೊಂದಂತೆ ಆಗಿದ್ದು ಸತ್ಯದ ಇನ್ನೊಂದು ಮುಖವಾಗುತ್ತದೆ. ಕವಿರಾಜಮಾರ್ಗಕಾರ ಹೀಗೆ ಮಾಡಿದ್ದು ತಪ್ಪು ಎನ್ನುವುದಾದರೆ, ನಾವು ಒಂದು ಕರ್ನಾಟಕಕ್ಕೆ ಒಂದೇ ಕನ್ನಡವನ್ನು ಇಚ್ಛಿಸುವುದು ಸಹ ತಪ್ಪಾಗುತ್ತದೆ. ಅಂತಹ ಪ್ರಮಾಣಬದ್ಧ ಭಾಷೆಯು ಬಹು ಸಂಸ್ಕೃತಿಗಳ ಕನ್ನಡ ಭಾಷಿಕ ಸಂಸ್ಕೃತಿಯ ಪ್ರಜಾಸತ್ತಾತ್ಮಕ ನೆಲೆಗಳಿಗೆ ತನ್ನ ಅಗೌರವವನ್ನು ಸೂಚಿಸಿದಂತಾಗುತ್ತದೆ.

ಆದರೂ ಪ್ರಮಾಣೀಕರಣದ ಭಾಷೆಯಿಂದ ಸಂಕೀರ್ಣ ಕಾವ್ಯ ರಚನೆ ಸಾಧ್ಯಗೊಳ್ಳುವುದರಿಂದ ಒಂದು ಹಂತದಲ್ಲಿ ಅದು ಸ್ವೀಕಾರಾರ್ಹವೇ ಆಗುತ್ತದೆ. ಇದನ್ನು ಒಪುತ್ತಾ, ಕವಿರಾಜಮಾರ್ಗಕಾರನು ಕವಿಗಳಿಗೆ, ಅದರಲ್ಲೂ ಕವಿರಾಜರಿಗೆ ಪ್ರಮಾಣೀಕರಣದ ಭಾಷೆಯನ್ನು ರೂಪಿಸಿದ ಮಾರ್ಗವೇ ಒಟ್ಟಾರೆ 'ಕವಿರಾಜಮಾರ್ಗ' ಎನಿಸಿಬಿಡುತ್ತದೆ. ಅಲ್ಲದೆ ಈತನ ದೃಷ್ಟಿಯಲ್ಲಿ 'ದೂಷ್ಯವಲ್ಲದ್ದೆ ಮಾರ್ಗ'. ಆದ್ದರಿಂದ ಮೊದಲಿಗೆ ಕಾವ್ಯ-ಭಾಷೆಯ ದೋಷಗಳನ್ನು ಸೋದಾಹರಣವಾಗಿ ಪ್ರಸ್ತಾಪಿಸುತ್ತಾ ಅವುಗಳಿಗೆ ಅದೋಷದ ಮಾದರಿಗಳನ್ನು ಸಹ ಸ್ವತಃ ನೀಡುತ್ತಾನೆ.

ಹೀಗೆ ಕವಿಗಳಿಗೆ ರಾಜಮಾರ್ಗವೊಂದನ್ನು ಈತ ನಿರ್ಮಿಸುತ್ತಾನೆ. ಈ ಹಿನ್ನೆಲೆಯಲ್ಲಿ 'ಕವಿರಾಜಮಾರ್ಗ' ಎಂಬ ಶೀರ್ಷಿಕೆ ಇದಕ್ಕೆ ಸೂಕ್ತವಾಗಿ ಒಪುತ್ತದೆ.

ಪ್ರಭುತ್ವ–ಸಾಹಿತ್ಯಗಳ ಸಂಬಂಧ ನಿಯತವಾದುದು. ಇದು ಜಾಗತಿಕ ನೆಲೆಯಲ್ಲಿಯೂ ಸತ್ಯ. ಆದ್ದರಿಂಲೇ ಬ್ರಿಟಿಷ್ ಪ್ರಭುತ್ವದೊಂದಿಗೆ ಗುರುತಿಸಿಕೊಡ ಇಂಗ್ಲಿಷ್, ಆ ಪ್ರಭುತ್ವದ ವಿಸ್ತಾರದಷ್ಟೇ ತಾನೂ ಹಿಗ್ಗಿತು. ಈ ಹಿನ್ನೆಲೆಯಲ್ಲಿ 'ಕವಿರಾಜಮಾರ್ಗ'ದ ನಿರ್ಮಿತಿಯಲ್ಲಿ ಶ್ರೀ ವಿಜಯ ಮತ್ತು ನೃಪತುಂಗರ ಸಂಬಂಧವೂ ಅಂಥಹುದೇ ಆಗಿದೆ. ಇದು ವೈಯಕ್ತಿಕ ಸಂಬಂಧಕ್ಕಷ್ಟೇ ಸೀಮಿತವಲ್ಲ; ಅದರಾಚೆಗೆ ಸಾಹಿತ್ಯ ಮತ್ತು ಪ್ರಭುತ್ವ; ಇವುಗಳನ್ನು ಪ್ರತಿನಿಧಿಸಿರುವ ಎರಡು ಭಿನ್ನ ಪಾತಳಿಗಳ ಸಂಬಂಧವಾಗಿ ಬೆಳೆಯುತ್ತದೆ. ಆದ್ದರಿಂದಲೇ ಕೃತಿಕಾರ ತನ್ನ ಪ್ರಭುವಿನ ಪ್ರೋತ್ಸಾಹವನ್ನು ಈ ರೀತಿ ನೆನೆಂಯುವುದು; "ಇದು ಪರವು ಶ್ರೀ ನೃಪತುಂಗದೇವಾನುಮತಮಪ್ಪ ಕವಿರಾಜಮಾರ್ಗದೊಳ್."

'ಕವಿರಾಜಮಾರ್ಗ'ದ ಮೇಲೆ ಸೀಮಿತ ದೃಷ್ಟಿಯ ಆರೋಪ ಅಥವಾ ಹೇಳಿಕೆಯೊಂದು ಇದೆ. ಅದೇಂದರೆ, ಇದು ದಂಡಿಯ ಕಾವ್ಯಾದರ್ಶದ ನೆರಳು ಎಂಬುದು. ಆದರೆ ಈ ಕೃತಿಂಯನ್ನು ಸೂಕ್ಷ್ಮವಾಗಿ ಪರ್ಯಾಲೋಚಿಸಿದ ವಿದ್ವಾಂಸರು ಭಿನ್ನ ತೀರ್ಮಾನಕ್ಕೆ ಬರುತ್ತಾರೆ. ಅದರ ಪ್ರಕಾರ ಈ ಕೃತಿ ದಂಡಿ, ಭಾಮಹರನ್ನು ಅನುಸರಿಸಿಯೂ ಅರ್ಥಕ್ಕೆ ಮಿಗಿಲಾಗಿ ಕನ್ನಡ ಸಂಬಂಧಿಯಾದ ಸ್ವತಂತ್ರ ವಿಚಾರಗಳಿಂದ ಕೂಡಿದ ಕೃತಿ ಇದಾಗಿದೆ. ಈ ಹಿನ್ನೆಲೆಯುಲ್ಲಿ ಸಂಸ್ಕೃತ ಕಾವ್ಯ ಮೀಮಾಂಸೆಗಿಂತ ಭಿನ್ನವಾದ ಕನ್ನಡ ಕಾವ್ಯ ಮೀಮಾಂಸೆಯ ಆಕರ ಕೃತಿಯಾಗಿ ಇದು ನಿಲ್ಲುತ್ತದೆ. ಉದಾಹರಣೆಗೆ, ಸಂಸ್ಕೃತದಲ್ಲಿ 'ಯತಿ'ನಿಯತಸ್ಥಾನವನ್ನು ಮೀರಿದರೆ ದೋಷವಾಗುತ್ತದೆ. ಆದರೆ ಅರ್ಥಕ್ಕನುಗುಣವಾದ ನಿಲುಗಡೆಯ ತಾಣವಾಗಿ ಇದು ಕನ್ನಡದಲ್ಲಿ ಬರುತ್ತದೆ. ಇಂತಹ ಮಾತುಗಳು ಕನ್ನಡ ಕಾವ್ಯದ ಜಾಯಮಾನವನ್ನು ಅನುಲಕ್ಷಿಸಿ ಆಡಿದ್ದಾಗಿದೆ. ಈ ಕೃತಿಯ ಒಟ್ಟು ಪದ್ಯಗಳ ಸಂಖ್ಯೆ 536. ಅದರಲ್ಲಿ 230 ಪದ್ಯಗಳು ದಂಡಿಗೆ ಋಣಿಯಾಗಿದ್ದರೆ, 45 ಪದ್ಯಗಳು ಬಾಮಹನಿಗೆ ಋಣಿಯಾಗಿವೆ. ಉಳಿದ ಸುಮಾರು 261 ಪದ್ಯಗಳು ಕನ್ನಡಕ್ಕೆ ಸಂಬಂಧಿಸಿದ ವಿಚಾರಗಳನ್ನು ಒಳಗೊಂಡವುಗಳಾಗಿವೆ ಮತ್ತು ಇತರೆ ಋಣಿಪದ್ಯಗಳು ಸಹ ನೇರ ಅನುವಾದಗಳಲ್ಲ; ರೂಪಾಂತರಗಳು.

ಆದ್ದರಿಂದ 'ಕವಿರಾಜಮಾರ್ಗ' ಎಂಬುದು ದಂಡಿ, ಭಾಮಹರಿಗೆ ಭಾಗಶಃ ಋಣಿಯಾಗಿದ್ದರೂ ಸ್ವತಂತ್ರ ವಿಚಾರಗಳ ದೃಷ್ಟಿಯಿಂದ ಕನ್ನಡ ಕಾವ್ಯ ಮೀಮಾಂಸೆಯ ಹಾಗೂ ಕನ್ನಡದ ಸಂಸ್ಕೃತಿ ಪಥ್ಯವಾಗಿ ಗಮನವನ್ನು ಸೆಳೆಯುತ್ತದೆ ಎಂಬುದನ್ನು ಇಲ್ಲಿ ಗಮನಿಸಬೇಕಾಗಿದೆ.

ಪ್ರಾಚೀನ ಕನ್ನಡ ಸಾಹಿತ್ಯದ ವೈಶಿಷ್ಟ್ಯವೇ ಚಂಪೂವಿನಲ್ಲಿದೆ. ಸಂಸ್ಕೃತದ್ದು ಗದ್ಯ ಪ್ರಕಾರದಲ್ಲಿದೆ ಎಂಬುದಾಗಿ ಕನ್ನಡ ಮತ್ತು ಸಂಸ್ಕೃತ ಸಾಹಿತ್ಯಗಳ ಪ್ರತ್ಯೇಕ ಅನನ್ಯತೆಗಳನ್ನು (1–16, 26) ಕವಿರಾಜಮಾರ್ಗಕಾರ ಗುರುತಿಸುತ್ತಾನೆ. ಇದರಿಂದ ಚಂಪೂ ಸಂಸ್ಕೃತದಲ್ಲಿ ಇದ್ದಿತಾದರೂ ಅದು ಕನ್ನಡದ ಅನ್ಯನ್ಯ ಅಭಿವ್ಯಕ್ತಿ ಪ್ರಕಾರ ಎಂಬುದನ್ನು ಈತ ಶ್ರುತಪಡಿಸುತ್ತಾನೆ. ಆದ್ದರಿಂದ ಇದು ಕನ್ನಡಕ್ಕೆ ವಿಶಿಷ್ಟವಾದ ಭಾಷಾ ಆಕೃತಿ ಎಂಬುದು ಗಮನಾರ್ಹವಾಗುತ್ತದೆ. ಇಲ್ಲಿಯೇ ಪಂಪ ಪೂರ್ವ ಪ್ರಕಾರಗಳಾದ ಬೆದಂಡೆ, ಚತ್ತಾಣಗಳೂ ನೆನಪಾಗುತ್ತವೆ.

'ಕವಿರಾಜಮಾರ್ಗ'ವು ತನ್ನ ಮೂಲ ನೆಲೆಯಲ್ಲಿ ಒಂದು ಶಾಸ್ತ್ರ ಕೃತಿ. ಹಾಗಿದ್ದಾಗಲೂ ತನ್ನ ಮೊದಲ ಪರಿಚ್ಛೇದದ ಪೂರ್ವಾರ್ಧದಲ್ಲಿ ಕನ್ನಡ ಪ್ರದೇಶ, ಸಂಸ್ಕೃತಿ, ಕನ್ನಡಿಗರ ಗುಣಸ್ವಭಾವ ಇತ್ಯಾದಿ ವಿಚಾರಗಳನ್ನು ದಾಖಲಿಸುತ್ತದೆ. ಇಲ್ಲಿ ಅಭಿಮಾನವಿದೆ, ಉತ್ಪ್ರೇಕ್ಷೆಯಿದೆ. ಎಲ್ಲಕ್ಕೂ ಮೂಲದಲ್ಲಿ ಕನ್ನಡಪರವಾದ ಕಾಳಜಿ ಇದೆ. ಇದೇ ಈ ಕೃತಿ ರಚನೆಯ ಪ್ರೇರಣೆಯೂ ಆಗಿದೆ. ಈ ಚರ್ಚೆಯನ್ನು ಸ್ವಲ್ಪ ಮಟ್ಟಿಗೆ ದೀರ್ಘವಾಗಿಯೇ (1–36, 37, 40) ಕವಿರಾಜಮಾರ್ಗಕಾರ ತರುತ್ತಾನೆ. ಈ ನಿಟ್ಟಿನಲ್ಲಿ ಇದನ್ನು ೇವಲ ಸಾಹಿತ್ಯ ಕೃತಿಯನ್ನಾಗಿ ಪರಿಭಾವಿಸಿಲ್ಲ; ಸಂಸ್ಕೃತಿ ಪಥ್ಯವನ್ನಾಗಿಯೂ ಪರಿಭಾವಿಸಿದಂತಿದೆ. ಆದ್ದರಿಂದಲೇ ಈ ಮಾತುಗಳ ಮೂಲಕ ಅಂದಿನ ಕನ್ನಡ ಸಂಸ್ಕೃತಿ–ಸಾಹಿತ್ಯವನ್ನು ಪುನರೂಪಿಸುವ ಕೃತಿಕಾರರಿಗೆ ಸೂಕ್ತ ನಿರ್ದೇಶನವನ್ನು ನೀಡುವ ಸಾಂಸ್ಕೃತಿಕ–ಸಾಹಿತ್ಯಕ ಜವಾಬ್ದಾರಿಯನ್ನು ತಾನು ಹೊತ್ತಂತೆ ಕಾಣುತ್ತದೆ. ಈ ಕಾಳಜಿ 1–41ರಲ್ಲಿಯೂ ವೇದ್ಯಗೊಳ್ಳುತ್ತದೆ.

ಸಂಸ್ಕೃತ, ಪ್ರಾಕೃತದಲ್ಲಿ ಈ ಕಾಲಕ್ಕಾಗಲೇ ಶ್ರೀಮಂತವಾದ ಲಕ್ಷ್ಯ, ಲಕ್ಷಣ ಕೃತಿಗಳಿವೆ. ಆದರೆ ಕನ್ನಡದಲ್ಲಿ ಲಕ್ಷ್ಯ ಕೃತಿಗಳು ಮಾತ್ರವಿದ್ದು, ಲಕ್ಷಣ ಕೃತಿಗಳಿಗಾಗಿ ಸಂಸ್ಕೃತದ ಮೊರೆ ಹೋಗುವ ಪರಿಪಾಠವಿದೆ. ಈ ಕೊರತೆಯನ್ನು ನೀಗಿಸಬೇಕೆನ್ನುವ ಪ್ರೇರಣೆಯೇ ಈ ಕೃತಿಗೆ ಮತ್ತೊಂದು ಮೂಲವಾಗುತ್ತದೆ (1–41).

'ಕವಿರಾಜಮಾರ್ಗ'ವು ಸಾಹಿತ್ಯಕವಾಗಿ ಮಾತ್ರವಲ್ಲದೆ ಸಾಂಸ್ಕೃತಿಕವಾಗಿಯೂ ಮುಖ್ಯ ಎನ್ನುವುದಕ್ಕೆ ಅವರ ಆಂತರಿಕ ಪ್ರಮಾಣಗಳು ಸಾಕ್ಷ್ಯ ನುಡಿಯುತ್ತವೆ. ಕೃತಿಕಾರ ಇದನ್ನು ದಂಡಿಯಂತೆ 'ಕಾವ್ಯಾದರ್ಶ' ಎನ್ನದೆ, ಭಾಮಹನಂತೆ 'ಕಾವ್ಯಾಲಂಕಾರ' ಎನ್ನದೆ ಅಥವಾ ನಾಗವರ್ಮನಂತೆ 'ಕಾವ್ಯಾವಲೋಕನ' ಎಂಬ ಸಾಹಿತ್ಯಕ ಉಪಾಧಿಯನ್ನು ಬಳಸದೆ, 'ಕವಿರಾಜಮಾರ್ಗ' ಎಂಬ ಸಾಹಿತ್ಯಕತೆಯನ್ನೂ ಒಳಗೊಂಡ ಸಾಂಸ್ಕೃತಿಕ ಶಿರೋನಾಮೆಯನ್ನು ಬಳಸಿರುವುದು ಮೇಲಿನ ತತ್ವಕ್ಕೆ ಪೋಷಕವಾಗುತ್ತದೆ.

ಒಟ್ಟಾರೆ ವಿಘಟನೆಗೆ ಒಳಗಾಗುತ್ತಿದ್ದ ದೊಡ್ಡ ಪ್ರಭುತ್ವಗಳು, ಹೊಸದಾಗಿ ತಲೆ ಎತ್ತುತ್ತಾ ಸಾಂಸ್ಕೃತಿಕ ಸಂದರ್ಭದಲ್ಲಿ ಮುಖ್ಯ ಪಾತ್ರವನ್ನು ನಿರ್ವಹಿಸತೊಡಗಿದ ದೇಶೀ ಮತ್ತು ಸ್ಥಳೀಯ ಪ್ರಭುತ್ವಗಳು ಅನಿವಾರ್ಯವಾಗಿ ಸ್ಥಳೀಯ ಸಂಸ್ಕೃತಿ–ಭಾಷೆಗಳೊಂದಿಗೆ ತಮ್ಮ ಅನನ್ಯತೆಗಳನ್ನು ಗುರುತಿಸಿಕೊಳ್ಳಬೇಕಾದ ಜರೂರು ಬಹಳವಾಗಿತ್ತು. ಆದ್ದರಿಂದ ಪ್ರಭುತ್ವದ ಪ್ರತೀಕವಾದ ನೃಪತುಂಗ ಸಾಹಿತ್ಯಕ ನೆಲೆಯ ಪ್ರತೀಕವಾದ ಶ್ರೀ ವಿಜಯನೊಂದಿಗೆ ಈ ಥರದ ಸಂಬಂಧವನ್ನು ಸ್ಥಾಪಿಸಿಕೊಳ್ಳಬೇಕಾಗಿತ್ತು. ಇದು ಸಿಂಹಾಸನದ ಭದ್ರತೆಗೂ ಅವಶ್ಯಕವಾಗಿದ್ದಿತು. ಇಂತಹ ಸಾಂಸ್ಕೃತಿಕ ಸಂದರ್ಭದಲ್ಲಿ ಋಣಾತ್ಮಕವಾದ ಸಾಹಿತ್ಯವನ್ನು ಕಟ್ಟುವುದಕ್ಕಾಗಿ ಪ್ರಮಾಣ ಬದ್ಧವಾದ ಭಾಷೆಯನ್ನು ರೂಪಿಸುವುದು ಕೃತಿಕಾರನಿಗೆ ಸಹ ಅನಿವಾರ್ಯವಾಯಿತು. ಆದ್ದರಿಂದ ಇಂತಹ ಸಾಂಸ್ಕೃತಿಕ ಸಂದರ್ಭದ ಒತ್ತಡವೇ 'ಕವಿರಾಜಮಾರ್ಗ'ದ ಹುಟ್ಟಿನ ಮೂಲವಾಗಿ ಪರಿಣಮಿಸುತ್ತದೆ.

ದಂಡಿಯ 'ಕಾವ್ಯಾದರ್ಶ'ದ 3ನೆಯ ಪರಿಚ್ಛೇದ, ಬಾಮಹನ 'ಕಾವ್ಯಾಲಂಕಾರ'ದ 4ನೆಯ ಅಧ್ಯಾಯದಲ್ಲಿ ಕಾವ್ಯದೋಷದ ಚರ್ಚೆ ಬಂದಿದೆ. ಅಂತಹ ಚರ್ಚೆ ಕವಿರಾಜಮಾರ್ಗಕಾರನಲ್ಲಿ ಮೊದಲಿಗೇ ಬಂದಿರುವುದು ಗಮನಾರ್ಹ. ಸಂಸ್ಕೃತದಲ್ಲಿ ಈಗಾಗಲೇ ಯಥೇಚ್ಛವಾಗಿ ಲಕ್ಷ್ಯ, ಲಕ್ಷಣ ಕೃತಿಗಳಿದ್ದು, ಈ ಎರಡೂ ಪರಂಪರೆಗಳೂ ಶ್ರೀಮಂತವಾಗಿಯೂ ಬೆಳೆದಿವೆ. ಆದರೆ ಕನ್ನಡದಲ್ಲಿ ಲಕ್ಷ್ಯ ಕೃತಿಗಳಿದ್ದು, ಲಕ್ಷಣ ಕೃತಿಗಳಿಲ್ಲ. ಆದ್ದರಿಂದ ಕಾವ್ಯ ದೋಷಗಳು ಸಹ ಅಗಣಿತವಾಗಿ ಕಾಣಿಸುತ್ತಿವೆ. ಆದ್ದರಿಂದ ದೋಷ ಮತ್ತು ಅದೋಷಗಳ ಚರ್ಚೆ ಅತ್ಯಂತ ಜರೂರಾಗಿ ಕೃತಿಯ ಪ್ರಾಥಮಿಕ ಹಂತದಲ್ಲಿಯೆ ಬರಬೇಕಾಗಿದೆ. ಇದು ಇದರ ಈ ಬಗೆಯ ಹಿಂದಿನ ಒತ್ತಡವನ್ನು ಧ್ವನಿಸುತ್ತದೆ. ಆದ್ದರಿಂದ ಮೊದಲ ಪರಿಚ್ಛೇದವನ್ನು 'ದೋಷಾದೋಷಾನುವರ್ಣನ ನಿರ್ಣಯ'ವನ್ನಾಗಿ ಮಾರ್ಪಡಿಸುತ್ತಾನೆ.

ಹೀಗೆ ಕನ್ನಡ ಭಾಷೆಯನ್ನು ಮೊದಲು ದೋಷಗಳಿಂದ ಮುಕ್ತಗೊಳಿಸಿ, ಆನಂತರದಲ್ಲಿ ಅದನ್ನು ಅಲಂಕಾರಗಳಿಂದ ಪುಷ್ಪಗೊಳಿಸುವುದು ಈ ಕ್ರಮದ ಆಶಯವಾಗಿ ನಿಲ್ಲುತ್ತದೆ.

ಹೀಗೆ ದೋಷ ವರ್ಜನಕ್ಕೆ ಮೊದಲ ಮಣೆಯನ್ನು ಹಾಕಿದ ಈ ಕೃತಿ ಕನ್ನಡ ಕಾವ್ಯ ಮೀಮಾಂಸೆಯಾಗಿ ನಿಲ್ಲುತ್ತಾ ಕನ್ನಡ ವ್ಯಾಕರಣ ಮತ್ತು ಛಂದಸ್ಸುಗಳ ವಿಸ್ತರಣೆಗೂ ಗಮನಾರ್ಹ ಕೊಡುಗೆ ನೀಡುತ್ತದೆ. ಇದಕ್ಕೆ ಪೋಷಕವಾಗಿ ಈ ಪರಿಚ್ಛೇದದ ಉತ್ತರಾರ್ಧದ ಪದ್ಯಗಳನ್ನು ಲಕ್ಷಿಸಬಹುದು. ಈ ಚರ್ಚೆ ಲಕ್ಷಣ ಮತ್ತು ಲಕ್ಷ್ಯಗಳ ನೆಲೆಯಲ್ಲಿ ನಡೆಯುತ್ತಾ, ಅದೇ ಸಂದರ್ಭದಲ್ಲಿ ಶಾಸ್ತ್ರ ಮತ್ತು ಕಾವ್ಯವಾಗಿಯೂ ಗಮನವನ್ನು ಸೆಳೆಯುತ್ತದೆ. ಇಲ್ಲಿನ ಬಹುತೇಕ ಎಡೆಗಳಲ್ಲಿ ಸಂಸ್ಕೃತದ ಅನುಸರಣೆ ಇದ್ದರೂ ಲಕ್ಷಣಗಳ ನೆಲೆಯಲ್ಲಿ ಮಾತ್ರ ಕನ್ನಡದ ಸೋಪಜ್ಞತೆಯನ್ನು ಉಳಿಸಿಕೊಳ್ಳಲಾಗಿದೆ. ಈ ನಿಟ್ಟಿನಲ್ಲಿ ಕನ್ನಡದ ಪದಗಳೊಂದಿಗೆ ಸಂಸ್ಕೃತದ ಅವ್ಯಯಗಳನ್ನು ಬೆರೆಸಬಾರದ ವಿಚಾರ (1–51 ರಿಂದ 57), ಅರಿಸಮಾಸದ ದೋಷ.

(1–59, 60, 61) ಕನ್ನಡದಲ್ಲಿ ಯತಿ ವಿಲಂಘನವು ಗುಣವೇ ವಿನಃ ದೋಷವಲ್ಲ; ಅದು ಸಂಸ್ಕೃತದಂತೆ ಪದ್ಯದ ಪಾದಗಳಲ್ಲಿ ನಿಯತವಾದ ಸ್ಥಾನದಲ್ಲಿ ಬರಬೇಕಿಲ್ಲ; ಅದು ಅರ್ಥಕ್ಕನುಗುಣವಾದ ನಿಲುಗಡೆಯಾಗಿ ಬರಬೇಕು ಎಂಬ ವಿಚಾರ (1–75) ಇವೇ ಮೊದಲಾದವು ಚರ್ಚೆಯನ್ನು ಬೆಳೆಸುತ್ತಾ ಸಾಗುತ್ತವೆ.

ಇದರೊಟ್ಟಿಗೆ ಕೇಳಲು ಅಹಿತವಾಗಿರುವ ಶ್ರುತಿದುಷ್ಟ, ಅಹಿತವಾದ ಅರ್ಥಕೊಡುವ ಅರ್ಥದುಷ್ಟ, ಕಿವಿಗೆ ಕರ್ಕಶವಾಗಿ ಕೇಳುವ ಶ್ರುತಿ ಕಷ್ಟ ಮತ್ತು ಕಲ್ಪಿತ ವಚನದಲ್ಲಿ ಅಸಹ್ಯತೆ ಹುಟ್ಟಿಸುವ ಕಲ್ಪನೋಕ್ತಿ ಕಷ್ಟ ಎಂಬ ನಾಲ್ಕು ಪ್ರಮುಖ ಶಬ್ದದೋಷಗಳನ್ನು ಪ್ರಸ್ತಾಪಿಸುತ್ತಾನೆ. ಇಲ್ಲಿ ಸಂಸ್ಕೃತದ ನೆರಳಿದೆ, ನಿಜ. ಆದರೆ ಇವುಗಳು ಕನ್ನಡದ 'ಪಗರಣ'ಗಳಲ್ಲಿ ಹಾಸ್ಯವನ್ನು ಉಕ್ಕಿಸುವುದರಿಂದ ಇಲ್ಲಿ ಗುಣಗಳಾಗಿ ಪರಿವರ್ತನೆಗೊಳ್ಳುತ್ತವೆ ಎಂಬ ಮಾತನ್ನು ಆಡುವ ಮೂಲಕ ಕನ್ನಡ ಸಂಸ್ಕೃತಿಯ ಜಾಯಮಾನ ಮತ್ತು ಅದರಲ್ಲೊಂದಾದ ಬಯಲಾಟವನ್ನು ನೆನಪಿಗೆ ತರುತ್ತಾನೆ. ಈ ಮೂಲಕ ಪ್ರಸ್ತುತ ಭಾಗವನ್ನು ಕನ್ನಡ ಕಾವ್ಯ ಮೀಮಾಂಸೆಯನ್ನಾಗಿ ಮಾರ್ಪಡಿಸುತ್ತಾನೆ (1–61 ರಿಂದ 68).

ಹೀಗೆ ಇನ್ನು ಹದಿನೈದು ದೋಷಗಳ ಚರ್ಚೆಯನ್ನು ತಂದು, ಅಂತಿಮವಾಗಿ ಇಂತಹ ದೋಷಗಳ ಸಂಖ್ಯೆಗೆ ಕೊನೆಯಿಲ್ಲ ಎಂಬ ಮಾತನ್ನು ಆಡುತ್ತಾ ಈ ಭಾಗಕ್ಕೆ ಮುಕ್ತಾಯವನ್ನು ಹಾಡುತ್ತಾನೆ (1–143).

ಕವಿರಾಜಮಾರ್ಗಕಾರ ತನ್ನ ಕೃತಿಯ ಎರಡನೆಯ ಪರಿಚ್ಛೇದದಲ್ಲಿ ಶಬ್ದಾಲಂಕಾರಗಳ ಚರ್ಚೆಯನ್ನು ತರುತ್ತಾನೆ. ಇದರಲ್ಲಿ ಸಂಸ್ಕೃತದ ನೆರಳು ಗಾಢವಾಗಿಯೆ ಇದೆ. ಆದರೆ ಕೆಲವು ವಿಶಿಷ್ಟ ಸಂಗತಿಗಳ ಮೂಲಕ ಇದು ಭಾರತೀಯ ಕಾವ್ಯ ಮೀಮಾಂಸೆಯ ಸಂದರ್ಭದಲ್ಲಿ ಸೋಪಜ್ಞ ಕೃತಿಯಾಗಿ ನಿಲ್ಲುತ್ತದೆ.

ಈತ ಶಬ್ದಾಲಂಕಾರ ಮತ್ತು ಅರ್ಥಾಲಂಕಾರಗಳನ್ನು ಎರಡು ಪ್ರತ್ಯೇಕ ಪರಿಚ್ಛೇದಗಳಲ್ಲಿ ಚರ್ಚಿಸುವ ಕ್ರಮ ದಂಡಿ ಮತ್ತು ಭಾಮಹರಲ್ಲಿ ಇಲ್ಲ ಎಂದು ಬೀಮರಾವ್ ಚಿಟಗುಪ್ಪಿ ಅವರು ಅಭಿಪ್ರಾಯ ಪಡುತ್ತಾರೆ. ಇಂತಹ ಚರ್ಚೆಯನ್ನು ಸಹಜವಾಗಿಯೇ ಕನ್ನಡ ಸಂಸ್ಕೃತಿಯನ್ನು ವಿವಕ್ಷಿಸಿ ಮಾಡಲಾಗಿದೆ. ಈ ನಿಟ್ಟಿನಲ್ಲಿ 'ಲಕ್ಷಣ'ಗಳ ರೂಪುರೇಷೆಗಳು ಸಂಸ್ಕೃತದ ದ್ರವ್ಯದಿಂದ ಸಿದ್ಧಗೊಂಡಿದ್ದರೆ, ಅದರ ಸ್ಪಷ್ಟತೆಗಾಗಿ ಮೂಡುವ ಲಕ್ಷ್ಯಗಳಲ್ಲಿ ಕನ್ನಡ ಸಂಸ್ಕೃತಿಯ ಭಾಷಿಕ ಚಿತ್ರಗಳು ಮೂಡಿನಿಲ್ಲುತ್ತವೆ. ಉದಾಹರಣೆಗೆ ಕನ್ನಡ ಕಾವ್ಯದ ಜಾಯಮಾನದಲ್ಲಿ 'ಪ್ರಾಸಾನು ಪ್ರಾಸಾಂತ ಪ್ರಾಸಂಗಳ್ ಮೂಱುಮತಿಶಯಂಗಳ್' ಎಂಬ ಮಾತನ್ನು ಆಡುತ್ತಾನೆ. ಅದೇ ಸಂದರ್ಭದಲ್ಲಿ ಕನ್ನಡದ ದೇಸೀಯತೆಯನ್ನು ನಿರಾಕರಿಸುತ್ತ, ಒಟ್ಟು ತನ್ನ ಕೃತಿಯ ಆಶಯಕ್ಕನುಗುಣವಾದ 'ಮಾರ್ಗ'ದಲ್ಲಿ ಅದನ್ನು ಪುನರ್ರಚಿಸಬೇಕು ಎಂದು ತಿಳಿಯುತ್ತಾನೆ (2–83, 84).

ಹೀಗೆ ಮಾರ್ಗಮುಖಿಯಾಗಿ ಚಲಿಸುವ ಕನ್ನಡದ ಶಬ್ದಾಲಂಕಾರಗಳ ಚರ್ಚೆ ಸಂಸ್ಕೃತದ ಆವಾಹನೆಯ ಮೂಲಕ ಶ್ರೀಮಂತವಾಗಿಯೇ ಬೆಳೆದು ನಿಲ್ಲುತ್ತದೆ. ಇದು ಒಂದು ಭಾಷೆ ಶ್ರೀಮಂತವಾಗಿ ಬೆಳೆಯುವ ಕ್ರಮವೂ ಹೌದು ಎಂಬುದನ್ನು ಸಹ ಧ್ವನಿಸುತ್ತದೆ.

ಅರ್ಥಾಲಂಕಾರ ಪ್ರಕರಣ ಎಂಬುದು ಕೃತಿಯ ಕಡೆಯ ಪರಿಚ್ಛೇತವಾಗಿದೆ. ಇದು ವಿಶೇಷವಾಗಿ ದಂಡಿಯನ್ನು ಅನುಸರಿಸಿದೆ. ಭಾಮಹನ ಪ್ರಭಾವವೂ ಗುರುತರವಾಗಿದೆ. ಆದರೂ ತನ್ನ ಸೋಪಜ್ಞ ವಿಚಾರಗಳಿಂದ ಎದ್ದುಕಾಣುವಂತಾಗಿದೆ. ಈ ನಿಟ್ಟಿನಲ್ಲಿ ಲಕ್ಷಣ ಮತ್ತು ಲಕ್ಷ್ಯಗಳ ಎರಡು ನೆಲೆಗಳಲ್ಲಿ ಬೆಳೆಯುವ ಕೃತಿ ಏಕಕಾಲಕ್ಕೆ ಇಲ್ಲಿಯೂ ಶಾಸ್ತ್ರ ಸಮನ್ವಿತ ಕಾವ್ಯವಾಗಿ ನಿಲ್ಲುತ್ತದೆ.

ಈ ಭಾಗದಲ್ಲಿ ಕೃತಿಕಾರ ಮೊದಲಿಗೆ ಸ್ವಭಾವೋಕ್ತಿ, ರೂಪಕ, ಶ್ಲೇಷೆ ಮೊದಲಾದ 35 ಅರ್ಥಾಲಂಕಾರಗಳ ಚರ್ಚೆಯನ್ನು ತರುತ್ತಾನೆ. ಇದರ ಭಾಗವಾಗಿ ನಿದರ್ಶನ (ದೃಷ್ಟಾಂತ) ಅಲಂಕಾರವೂ ಬರುತ್ತದೆ (3–142, 144). ಒಂದು ವಿಷಯವನ್ನು ಹೇಳುವಾಗ ಅದೇ ಗುಣ

ಇಲ್ಲವೆ ದೋಷಗಳಿಂದ ಅನುಗತವಾಗಿ ಆದಂತಿರುವ ಇನ್ನೊಂದನ್ನು ನಿದರ್ಶನವನ್ನಾಗಿ ಕೊಡುವುದು ಈ ಅಲಂಕಾರದ ಸಾರ. ಇದರ ಸ್ಪಷ್ಟತೆಗಾಗಿ ಈತ 11 ಲಕ್ಷ್ಯಗಳನ್ನು ಕೊಡುತ್ತಾನೆ. ಇವುಗಳು ಕನ್ನಡದ ಜಾಯಮಾನದ ಹಿನ್ನೆಲೆಯಲ್ಲಿ ಮೂಡುವ ಚಿತ್ರಗಳಾಗಿವೆ. ಹಾಗಾಗಿ ಒಂದೊಂದು ಲಕ್ಷಣಕ್ಕೂ ಒಂದೊಂದೇ ಲಕ್ಷ್ಯ ಕೊಡುವ ದಂಡಿಯ ಸಂಪ್ರದಾಯವನ್ನು ಮುರಿದು, ಅದಕ್ಕೆ ತನ್ನದೇ ಆದ ಮತ್ತು ದೇಸೀ ಸಂಸ್ಕೃತಿಯ ವಿವರಣಾತ್ಮಕ ನೆಲೆಯ ಪುಂಖಾನುಪುಂಖ ನಿದರ್ಶನಗಳನ್ನು ನೀಡುವ ಉಪಕ್ರಮವನ್ನು ಉಳಿಸಿಕೊಳ್ಳುತ್ತಾನೆ.

ದಂಡಿಯ 'ಕಾವ್ಯಾದರ್ಶ'ಕ್ಕೆ ಹೆಚ್ಚು ಋಣಿಯಾಗಿರುವ ಈ ಕೃತಿಯಲ್ಲಿ 9 ರಸಗಳ ಪ್ರಸ್ತಾಪ ಇದೆ. ಆದರೆ ದಂಡಿಯಲ್ಲಿ ಮಾತ್ರ 8 ರಸಗಳೇ ಇರುವುದು. ಮತ್ತು ಭರತನ 'ನಾಟ್ಯ ಶಾಸ್ತ್ರ'ದಲ್ಲಿ ಸೇರಿರುವ 9ನೆಯ (ಶಾಂತ) ರಸವು ಪ್ರಕ್ಷಿಪ್ತ ಎಂಬುದು ಅನೇಕ ವಿದ್ವಾಂಸರ ಮತ. ಆದ್ದರಿಂದ ಕವಿರಾಜಮಾರ್ಗಕಾರನ 9ನೆಯ ರಸವಾದ ಶಾಂತರಸವು ಭಾರತೀಯ ಕಾವ್ಯ ಮೀಮಾಂಸೆಗೆ ತನ್ನ ಮತ್ತು ಕನ್ನಡದ ಕೊಡುಗೆಯಾಗಿದೆ ಎಂಬುದು ಒಂದು ಮಾತು (3–187, 188).

ಅಂತೂ 'ಕವಿರಾಜಮಾರ್ಗ' ಎಂಬ ಈ ವಿಶಿಷ್ಟ ಕೃತಿ ಭಾರತೀಯ ಸಂದರ್ಭದಲ್ಲಿ ಕನ್ನಡದ ಸ್ವಾಯತ್ತತೆಯನ್ನು ಎತ್ತಿಹಿಡಿಯುತ್ತಲೇ ಭಾರತದ ಸಾಂಸ್ಕೃತಿಕ ರಾಷ್ಟ್ರೀಯತೆಗೂ ಪೋಷಕವಾಗಿ ನಿಲ್ಲುವ ಆರೋಗ್ಯಕಾರಿ ನೆಲೆಗಳನ್ನು ನಿರ್ಮಾಣ ಮಾಡುತ್ತದೆ. ಈ ಮೂಲಕವಾಗಿ 'ಭೂತ'ವನ್ನೂ ಮೀರಿ ನಿಲ್ಲುವ ಕೃತಿ ಒಕ್ಕೂಟ ವ್ಯವಸ್ಥೆಯೊಳಗೆ ಬದುಕುತ್ತಿರುವ ನಮ್ಮೊಳಗಿನ ಮಾತುಗಳಿಗೂ ಧ್ವನಿಯಾಗುತ್ತದೆ.

****

ಉಪಸರ್ಗಗಳಾಚೆಗಿನ ನಿಜದ ಸ್ವರ್ಗ–
ವಡ್ಡಾರಾಧನೆ ಕಥಾಕೋಶ

– ಶ್ರೀ ವಾಸುದೇವ ನಾಡಿಗ್, ರಾಮನಗರ

ಹಿಂದಣ ಹೆಜ್ಜೆಯ ನೋಡಿ ಕಂಡಲ್ಲದೆ
ನಿಂದ ಹೆಜ್ಜೆಯರಿಯಬಾರದು

–ಅಲ್ಲಮಪ್ರಭು

ಜಗತ್ತಿನ ಯಾವುದೇ ಭಾಷೆಯ ಸಾಹಿತ್ಯದ ಚರಿತ್ರೆಗೆ ಈ ಮಾತು ಅಕ್ಷರಶಃ ಅನ್ವಯವಾಗಬಲ್ಲದು.

ಪರಂಪರೆ ಮತ್ತು ವರ್ತಮಾನದ ನಡುವಿನ ಮಾತು ಬಂದಾಗಲೆಲ್ಲ ಈ ಮಾತು ಬಹುದೊಡ್ಡ ಪ್ರತೀಕವಾಗಿ ಕಾಡಬಲ್ಲದು. ಕನ್ನಡ ಸಾಹಿತ್ಯದ ಜೊತೆಗೆ ಸಾತತ್ಯ ಹೊಂದಿದ ಮನಸುಗಳು ಯಾವತ್ತೂ ತಮ್ಮ ಅಧ್ಯಯನದ ದೃಷ್ಟಿ ಪರಿಕರಗಳನ್ನಾಗಿ ಹಿಂದಿನ ಮತ್ತು ಇಂದಿನ ಆಗುವಿಕೆಗಳನ್ನು ನೆಚ್ಚಿಕೊಂಡಿರುತ್ತವೆ. ಪ್ರಾಚೀನತೆಯು ಅತ್ಯಾಧುನಿಕತೆಯನ್ನು ತನ್ನೊಳಗೇ ಸೂಚಿಸಿದರೆ, ಆಧುನಿಕತೆಯು ಪ್ರಾಚೀನತೆಯನ್ನು ಬೆನ್ನಿಗೆ ಇಟ್ಟುಕೊಂಡೇ ಜೀವಂತವಾಗಿರುತ್ತದೆ. ಪ್ರಾಚೀನತೆ ಮತ್ತು ಆಧುನಿಕತೆ ಎಂಬುದು ಕಾಲಘಟ್ಟವಾಗದೇ ಅದು ಅನುಸಂಧಾನದ ಮಾರ್ಗಗಳಾಗೀಯೇ

ನಿರ್ವಚನೆಗೊಳ್ಳುತ್ತದೆ. ಸವಿಸ್ತಾರ ಇತಿಹಾಸ ಹೊಂದಿದ ಕನ್ನಡ ಸಾಹಿತ್ಯ ಚರಿತ್ರೆಯಂತೂ ಇವೆರಡನ್ನೂ ಹೊರತು ಪಡಿಸಿ ಮೈದುಂಬಿಕೊಳ್ಳಲು ಸಾಧ್ಯವೇ ಇಲ್ಲ.

ಚರಿತ್ರೆ ಎಂಬುದೇ ಅಂದಿನ ವರ್ತಮಾನದ ಜೀವಂತಿಕೆಯನ್ನು ಸೆರೆಹಿಡಿವ ಮಾರ್ಗವಾಗಿದೆ.

ಇಲ್ಲಿ ಜೀವಂತಿಕೆ ಎಂದರೆ ಆಯಾ ಕಾಲಘಟ್ಟದಲ್ಲಿ ಬದುಕಿ ಬಾಳಿದ ಮೌಲ್ಯ ಮತ್ತು ನಂಬಿಕೆಗಳು. ಮನುಷ್ಯರಿಂದಲೇ ರೂಪಗೊಳ್ಳುವ ಈ ಸಂಗತಿಗಳು ಆಯಾ ಕಾಲಘಟ್ಟದ ಸ್ಥಾಪಿತ ನಿಲುವುಗಳನ್ನು ಸ್ಪಷ್ಟಪಡಿಸುತ್ತವೆ. ಈ ನಿಲುವುಗಳು ಬರಹದ ಮೂಲಕವೇ ಚಾಚಿಕೊಳ್ಳುತ್ತದೆ. ಆದ್ದರಿಂದ ಸಾಹಿತ್ಯ ವಿವರಿಸುವ ಚರಿತ್ರೆ ಮತ್ತು ಚರಿತ್ರೆ ಬಿಂಬಿಸುವ ಸಾಹಿತ್ಯ ಎರಡು ಕೂಡಾ ಅಧ್ಯಯನದ ಸಮಗ್ರತೆಯನ್ನೇ ಎತ್ತಿಹಿಡಿಯುತ್ತದೆ. ಕನ್ನಡ ಸಾಹಿತ್ಯ ಚರಿತ್ರೆ ತನ್ನ ಹರಹನ್ನು ಪಂಪನಿಗಿಂತಲೂ ಹಿಂದೆ ಚಾಚಿಕೊಳ್ಳುತ್ತದೆ. ಅಂತಹ ಪಂಪ ಪೂರ್ವಯುಗದ ಸಮರ್ಥವಾದ ಕೈಗನ್ನಡಿ 'ವಡ್ಡಾರಾಧನೆ'. ವೊಡ್ಡ, ವೃದ್ಧ, ಹಿರಿಯ, ಶ್ರೇಷ್ಠ ಎಂಬೆಲ್ಲ ಅರ್ಥಕೊಡುವ 'ವಡ್ಡ' ಎಂಬ ಪದವು ತನ್ನ ಒಳಗೆ ಧಾರ್ಮಿಕವಾದ ಆಧ್ಯಾತ್ಮತನವನ್ನು ಅರಗಿಸಿಕೊಂಡು ಶಕ್ತವಾಗಿದೆ. ಆರಾಧನೆ ಎಂಬುದೇ ಪವಿತ್ರವಾದ ಒಂದು ನಡೆವಳಿಕೆ. ತಮ್ಮ ಬಾಳಿನ ಪ್ರತಿಕ್ಷಣವನ್ನು ಮುಕ್ತಿ ಮಾರ್ಗದ ದಕ್ಕುವಿಕೆಗಾಗಿ ತೇದ ಬಾಳ್ವೆಗಳ ಕಥನ ಇದಾಗಿದೆ.

ಜೈನ ಧರ್ಮದ 19 ತೀರ್ಥಂಕರರ ಭವಾವಳಿ ಅಥವಾ ಜನ್ಮಾಂತರದ ಕತೆಗಳನ್ನು ಹೇಳುವ ಶ್ರವ್ಯ ಮಾದರಿಯ ಕಥನ ಕ್ರಮ ಇದಾಗಿದೆ. ಮುಕ್ತಿಯನ್ನು ಬಯಸುವ ಜೀವವೊಂದು ಮರಣ ಶಯ್ಯೆಯಲ್ಲಿ ಇದ್ದಾಗ ಶ್ರವಣದ ಮೂಲಕ ಕೇಳಿಸಿಕೊಳ್ಳಬಹುದಾದ ಭವ ಬಂಧನ ಬಿಡುಗಡೆಯ ಅಚ್ಚರಿಯ ಕಥನದ ಮಾದರಿ ಇದು. ಭವಾವಳಿ, ಉಪಸರ್ಗ ಮತ್ತು ಪರೀಷಹ ಎಂಬ ಪರಿಕಲ್ಪನೆಗಳನ್ನು ಜಿನ ಧರ್ಮದ ಚೌಕಟ್ಟಿನಲ್ಲಿ ಅರ್ಥೈಸಲು ಹೊರಟ ಸೋದಾಹರಣವಾದ ಬಾಳಕ್ರಮದ ಕತೆಗಳಿವು. ಶಿವಕೋಟ್ಯಾಚಾರ್ಯ ವಿರಚಿತ ಈ ಕೃತಿಯು ಗದ್ಯಕೃತಿಯಾಗಿದ್ದು ಜೈನ ಧಾರ್ಮಿಕ ತತ್ವಗಳನ್ನು ಬೋಧಿಸುವ ಸುಲಲಿತ ಕತೆಗಳ ಸಂಕಲನವಾಗಿದೆ.

ಗದ್ಯಶೈಲಿಯ ದೃಷ್ಟಿಯಿಂದ, ಅದರಲ್ಲೂ ವಿಶೇಷವಾಗಿ ಕತೆ ಹೇಳುವ ತಂತ್ರಗಾರಿಕೆಯಿಂದ ಇದೊಂದು ಕನ್ನಡದ ಅಪೂರ್ವ ಕೃತಿ. ದಟ್ಟವಾದ ಜೀವನಾನುಭವ, ವೈವಿಧ್ಯಮಯ ಭೌಗೋಲಿಕ ನೆಲೆ, ಮಾತು ಕತೆ, ಸಂಪ್ರದಾಯ, ವೃತ್ತಿ ಕುಶಲತೆ, ಇವುಗಳಿಂದ ದಟ್ಟೈಸುವ ಇಲ್ಲಿನ ಕಥನ ಕ್ರಮವನ್ನು ಓದುತ್ತ ಹೋದ ಹಾಗೆ ಅಸಂಖ್ಯಾತ ಜೀವನ ದೃಷ್ಟಿಕೋನ ಎದುರಿಗೆ ನಿಲ್ಲುತ್ತವೆ. ಪ್ರಶ್ನೆಗಳು ಕಾಡುತ್ತವೆ.

ಸುಕುಮಾರ ಸ್ವಾಮಿ ಕಥೆಯಿಂದ ಹಿಡಿದು ವೃಷಭಸೇನರೆಂಬ ರಿಸಿಯ ಕಥೆಯವರೆಗೂ ಹಬ್ಬಿದ ಈ ಜೀವನಕ್ರಮಗಳು ಜಂಬೂ ದ್ವೀಪದ ಭರತಕ್ಷೇತ್ರದ ವಿವಿಧ ಗ್ರಾಮ ಪಟ್ಟಣ ನಗರ ಖೇಡ ಖರ್ವಡ ಮಡಂಬ ಪತ್ತನಗಳಲ್ಲಿ ಹಬ್ಬಿ ನಿಂತಿವೆ. ಅದರ ಚಾಚುವಿಕೆಯ ವಿಸ್ತಾರವೇ ಹಾಗೆ. ಅದರಷ್ಟೇ ಕುತೂಹಲಕಾರಿ ಭವಾವಳಿಗಳ ಚಾಚುವಿಕೆ. ಅಂದರೆ ಬಗೆ ಬಗೆಯ ಜನ್ಮಾಂತರಗಳಲ್ಲಿ ಜೀವ ಹಾದು ಕೊನೆಗೆ ಮನುಷ್ಯನಾಗಿ ಮುಕ್ತಿ ಮಾರ್ಗಕೆ ಹಾತೊರೆಯುವಿಕೆ.

ಶ್ರೀಯುತ ಡಿ.ಎಲ್. ನರಸಿಂಹಾಚಾರ್ ಅವರು ಸಂಪಾದಿತ ವಡ್ಡಾರಾಧನೆಯ ಕಾಲದ ಬಗ್ಗೆ ಅವರೇ ಅನೇಕ ಆಧಾರಗಳ ಮೂಲಕ ಗುರುತಿಸುವಂತೆ ಈ ಕೃತಿಯ ಕಾಲ ಸುಮಾರು ಕ್ರಿ.ಶ. 920 ಅಂದರೆ ಪಂಪ ಪೂರ್ವಯುಗದ ಕೃತಿ. ಈ ಕೃತಿಯ ಶಬ್ದದ ಮೂಲ ವೃದ್ಧಾರಾಧನೆ, ಬೃಹದಾರಾಧನೆ ಎಂದೂ ನಿಷ್ಪತ್ತಿಯಿಂದ ತಿಳಿಯಬಹುದು. ಈ ಮೊದಲೇ ಹೇಳಿದ ಹಾಗೆ ಇದು 19ಜಿನ ಮಹಾಪುರುಷರ ಕಥಾನಕಗಳು. ಜೈನ ಸಿದ್ಧಾಂತದ ದೃಷ್ಟಿಯಿಂದ ಸಮ್ಯಗ್ ದರ್ಶನ, ಸಮ್ಯಗ್ ಜ್ಞಾನ, ಸಮ್ಯಕ್ ಚಾರಿತ್ರ್ಯ, ಸಮ್ಯಕ್ ತಪಸ್ಸು ಈ ನಾಲ್ಕನ್ನೂ ಸಾಧಿಸುವುದೇ ಆರಾಧನೆ. ವೃದ್ಧರು, ಜಿನಯತಿಗಳು ಮಾಡಿದ ಸಫಲವಾದ ಆರಾಧನೆಗಳೇ ಈ ಕೃತಿಯ ಮೂಲ ಸಾರ. ಈ ಕಥಾ ನಾಯಕರು ಮಹಾಪುರುಷರು. ನಾಲ್ಕು ಬಗೆಯ ಅಡೆತಡೆ (ಉಪಸರ್ಗ) ಗಳನ್ನು ಸಹಿಸಿದವರು. ಹಸಿವು, ಬಾಯಾರಿಕೆ, ಮುಂತಾದ ಲೌಕಿಕದ ಸಂಕಟಗಳನ್ನು (ಪರೀಷಹ) ದಾಟಿ ತಮ್ಮ ತಮ್ಮ ಇಂದ್ರಿಯಗಳನ್ನು ಹತೋಟಿಯಲ್ಲಿಟ್ಟುಕೊಂಡು ಎಲ್ಲ ಸುಖ ಭೋಗಗಳನ್ನು ತ್ಯಜಿಸಿದವರು. ಈ ಬಗೆಯ ಪರೀಷಹಗಳನ್ನು ಗೆದ್ದವರೇ

ಮುಕ್ತಿಗೆ ಒಳಗಾಗಬಲ್ಲರು. ಅನುದಿನದ ಕಷ್ಟಕೋಟಲೆಗಳಿಗೆ ಎದೆಗೊಟ್ಟು ನಿಂತ ಉಪಸರ್ಗ ಕೇವಲಿಗಳ ಭವಾವಳಿಯ ಈ ಕತೆಗಳ ಸೊಗಸೇ ಬೇರೆ.

ಅವರ ಭೋಗದ ಜೀವನವನ್ನು ಕಂಡಾಗ ರೋಮಾಂಚನ ಮತ್ತು ಕಟ್ಟ ಕಡೆಯ ಉಸಿರು ತ್ಯಜಿಸುವಾಗಿನ ಸಂಕಟ ಏಕಕಾಲಕ್ಕೆ ಕಾಡುತ್ತದೆ. ಸುಖ ಲೋಲುಪತೆಯಲ್ಲಿ ಮಿಂದ ಜೀವವೊಂದು ತನ್ನ ಕಡೆಯ ಗಳಿಗೆಗಳಲ್ಲಿ ರೋಗಕ್ಕೆ ಒಳಗಾಗಿಯೋ, ವ್ರಣಕ್ಕೆ ಬಲಿಗಾಗೀಯೋ, ನಾಯಿ ನರಿಗಳಿಗೆ ಆಹಾರವಾಗಿಯೋ, ಅನ್ನ ನೀರು ಬಿಟ್ಟು ಪ್ರಾಣತ್ಯಾಗ ಮಾಡುವ ಅವರ ಪರಿ ಎದೆ ನಡುಗಿಸುತ್ತದೆ ಮತ್ತು ದಟ್ಟವಾದ ವಿಷಾದ ಉಳಿಸುತ್ತದೆ. ವಿವಿಧ ಬಗೆಯ ತಪಸ್ಸನ್ನು ಆಚರಿಸಿ ಮುಕ್ತಿಯಗಳಿಗೆಗೆ ಕಾಯುವ ಆ ಜೀವಗಳು ಬಾಳ ಸುಖದ ನಶ್ವರತೆಯನ್ನು ಬಿಂಬಿಸುತ್ತದೆ. ಸುಖದ ಲೋಲುಪತೆ ಮತ್ತು ತ್ಯಾಗದ ಪರಮಾವಧಿಯ ಮಧ್ಯೆ ಹೊಳೆಯುವ ಧರ್ಮದ ತಾತ್ವಿಕತೆಯನ್ನು ಹೊಳೆಯಿಸುತ್ತದೆ. ಈ ಕೃತಿಯು 19 ಜೈನ ವ್ಯಕ್ತಿಗಳ ಚರಿತ್ರೆಯನ್ನು ಒಳಗೊಂಡಿದೆ.

1 ಸುಕುಮಾರ ಸ್ವಾಮಿಯ ಕತೆ

2 ಸುಕೌಶಳ ಸ್ವಾಮಿಯ ಕತೆ

3 ಗಜಕುಮಾರ ಕಥೆ

4 ಸನತ್ಕುಮಾರ ಚಕ್ರವರ್ತಿಯ ಕಥೆ

5 ಅಣ್ಣಿಕಾಪುತ್ರನ ಕಥೆ

6 ಭದ್ರಬಾಹು ಭಟ್ಟಾರರ ಕಥೆ

7 ಲಲಿತಘಟೆಯ ಕಥೆ

8 ಧರ್ಮಘೋಷ ಭಟಾರರ ಕಥೆ

9 ಸಿರಿದಿಣ್ಣನೆಂಬ ಭಟ್ಟಾರರ ಕಥೆ

10 ವೃಷಭಸೇನ ಭಟ್ಟಾರರ ಕಥೆ

11 ಕಾರ್ತಿಕ ಋಷಿಯ ಕಥೆ

12 ಅಭಯ ಘೋಷನೆಂಬ ಮುನಿಯ ಕಥೆ

13 ವಿದ್ಯುಚ್ಚೋರನೆಂಬ ರಿಸಿಯ ಕಥೆ
14 ಗುರುದತ್ತ ಭಟ್ಟಾರರ ಕಥೆ
15 ಚಿಲಾತ ಪುತ್ರನ ಕಥೆ
16 ದಂಡಕನೆಂಬ ರಿಸಿಯ ಕಥೆ
17 ಮಹೇಂದ್ರದತ್ತಾಚಾರ್ಯರ್ ಮೊದಲಾದ ಅಯ್ನೂರ್ವರ್ ರಿಸಿಯರ್ಕಳ್ ಕಥೆ
18 ಚಾಣಕ್ಯ ರಿಸಿಯರ ಕಥೆ
19 ವೃಷಭಸೇನರೆಂಬ ರಿಸಿಯ ಕಥೆ

ಕಥಾ ಹಂದರ –

'ಈ ಪೇಟ್ದಿ ಹತ್ತೊಂಬತ್ತು ಕತೆಗಳು ಶಿವಕೋಟ್ಯಾಚಾರ್ಯರ್ ಪೇಟ್ದಿ ವೊಡ್ಡಾರಾಧನೆಯ ಕವಚವು ಮಂಗಳ ಮಹಾಶ್ರೀ!' ಎಂಬ ಸಮಾಪ್ತಿ ವಾಕ್ಯ ಮತ್ತು ಆರಂಭದ ಗಾಹೆಗಳು ಅತ್ಯಂತ ಧ್ವನಿಪೂರ್ಣವಾದವುಗಳು. ಈ ಕಥೆಗಳು ವಡ್ಡಾರಾಧನೆಯ ಕವಚದ ಹಾಗೆ ಇದೆ ಮತ್ತು ಅದು ಧರ್ಮಬೋಧನೆಯನ್ನು ಮಾಡುತ್ತ ಕವಚದ ಹಾಗೆ ಧಾರ್ಮಿಕ ನಂಬಿಕೆ ನಿಷ್ಠೆಯನ್ನು ರಕ್ಷಣೆ ಮಾಡುತ್ತದೆ. ಕಥೆಗಳ ಮೂಲಕ ಧರ್ಮದ ಆಚಾರ ವಿಚಾರಗಳನ್ನು ಬಿತ್ತಲಾಗುತ್ತದೆ ಒಂದು ರೀತಿಯಲ್ಲಿ ಕಾಂತಾಸಂಮಿತದ ಹಾಗೆ ಈ ಕಥೆಗಳು ಮೃದುವಾಗಿ ಸೋದಾಹರಣವಾಗಿ ಇದು ತಪ್ಪು, ಇದು ಸರಿ ಎಂದು ಬುದ್ಧಿ ಹೇಳುತ್ತವೆ. ಸುಕುಮಾರ ಸ್ವಾಮಿ ಕಥೆ ಮತ್ತು ವಿದುಚ್ಚೋರ ಕಥೆಗಳು ಇದಕ್ಕೆ ಒಳ್ಳೆಯ ಮಾದರಿಯಾಗಿವೆ. ಕತೆಯೊಳಗೆ ಕಥೆ, ಉಪಕಥೆ ದೃಷ್ಟಾಂತಗಳ ಮೂಲಕ ಕಥನಕಾರ ತಾತ್ವಿಕತೆಯೊಂದನ್ನು ಅಚ್ಚಳಿಯದ ಹಾಗೆ ಕೆತ್ತಿ ನಿಲ್ಲಿಸುತ್ತಾನೆ. ಎಲ್ಲೂ ಅಸ್ಪಷ್ಟತೆ ಇಲ್ಲ. ಎಲ್ಲೂ ಗೊಂದಲವಿಲ್ಲ. ಎಲ್ಲದಕ್ಕೂ ಉತ್ತರ ವಿದೆ. ಉದಾಹರಣೆ ಇದೆ. ಸಾಕ್ಷಿ ಇದೆ. ಹೀಗೆ ಮಾಡಬಾರದು, ಹೀಗೆ ಇರಬೇಕು, ಹೀಗೆ ಮಾಡಿದರೆ ಈ ಫಲ, ಹೀಗೆ ಮಾಡಿದರೆ ಈ ದುರ್ಗತಿ, ಈ ಸದ್ಗತಿ – ಹೀಗೆ ಉಪದೇಶಾತ್ಮಕವಾದ ಪಾಠಗಳು.

ಇನ್ನು ಪ್ರತಿ ಕಥೆಗಳ ಆರಂಭದಲ್ಲೂ ಒಂದೊಂದು ಗಾಹೆ ಇವೆ. ಗಾಹೆ ಎಂದರೆ ಕಥೆಯ ಸಾರವನ್ನು ಮೊದಲೇ ಅಡಕವಾಗಿ ಹೇಳುವ ಸಾಲುಗಳು.

ಉದಾಹರಣೆಗೆ ಸುಕೌಶಳ ಸ್ವಾಮಿಯ ಕಥೆಯ ಗಾಹೆ– 'ಮೊಗ್ಗಳಗಿರಿಮ್ಹಿಯ ಸುಕೌಸಳೋ ವಿ ಸಿದ್ದತ್ಥ ದಯಿದಗೋ ಭಗವಂ' 'ವಘ್ಘೀಯೆ ಖಯಿದಂ ಪದಿದೋ ಪಡಿವಣ್ಣೋ ಉತ್ತಮಂ ಅಟ್ಟಂ' ಎಂಬ ಪ್ರಾಕೃತ ನಿಬದ್ಧ ಗಾಹೆ ಇಡಿ ಕಥೆಯ ಸಾರವನ್ನು ಹೇಳುವ ಪ್ರಯತ್ನ ಮಾಡುತ್ತದೆ.

ಸಿದ್ಧಾರ್ಥ ಎಂಬ ವರ್ತಕನ ಪ್ರೀತಿಯ ಮಗ ಸುಕೌಶಳ ಸ್ವಾಮಿ ಹಿರಿಮೆ ಉಳ್ಳವನು. ಆತನು ಮೊಗ್ಗಳಮೆಂಬ ಬೆಟ್ಟದಲ್ಲಿ ಇದ್ದಾಗ ಅವನನ್ನು ಹಿಂದಿನ ಜನ್ಮದ ತಾಯಿಯಾಗಿದ್ದ ಒಂದು ಹೆಣ್ಣು ಹಣ್ಣು ತಿನ್ನಲು ಸತ್ತವನಾಗಿ ಶ್ರೇಷ್ಠವಾದ ಜ್ಞಾನ–ಚಾರಿತ್ರ–ಆರಾಧನೆಯನ್ನು ಪಡೆದನು.

ಇಷ್ಟೇ ಸಾಕು ಇಡೀ ಕಥೆಯ ಸಾರವನ್ನು ಸಾರಲು ಮತ್ತು ಓದುಗ (ಕೇಳುಗ) ನಲ್ಲಿ ಕಥೆಯನ್ನು ಓದುವ ಕುತೂಹಲ ಹುಟ್ಟಿಸಲು. ಇದು ಒಂದು ರೀತಿಯಲ್ಲಿ ಕಥೆಗಾರ ಮತ್ತು ಶ್ರೋತೃವಿನ ಮಧ್ಯದ ಆಪ್ತವಾದ ಸಂವಾದದ ಧಾಟಿಯ ಕಥನ ಕ್ರಮದ ತಂತ್ರವನ್ನು ಅನುಸರಿಸುವುದರಿಂದ ಸಂವಹನ ಸುಲಭವಾಗುತ್ತದೆ.

ಇನ್ನು ಶ್ರೀ ವರ್ಧಮಾನ ಭಟ್ಟಾರಕರ್ಗೆ ನಮಸ್ಕಾರಂ ಗೈಯ್ದು ದೇವೋಪಸರ್ಗ ಮನುಷ್ಯೋಪಸರ್ಗ ತಿರ್ಯಕೋಪಸರ್ಗ ಅಚೇತನೋಪಸರ್ಗಮೆಂದಿಂತು ಚತುರ್ವಿಧದ ಉಪಸರ್ಗಮುಮಂ ಪಸಿವುಂ ನೀರಳ್ಕೆ ಮೊದಲಾಗೊಡೆಯ ಇಪ್ಪತ್ತೆರಡು ಪರೀಷಹಂಗಳನುಂ ಸೈರಿಸಿ ಅಯ್ದುಮಿಂದ್ರಿಯಂ ಗೆಲ್ದು ಬಾಹ್ಯಾಭ್ಯಂತರ ಪರಿಗ್ರಗಹಳಂ ತೊರೆದು ದ್ವಾದಶವಿಧಮಪ್ಪ ತಪದೊಳ್ ನೆಗಳ್ದು ಪ್ರಾಯೋಪಗಮನದಿಂ ಸಂನ್ಯಸನಂ ಗೆಯ್ದು ಕರ್ಮ ಕ್ಷಯಂಗೆಯ್ದು ಮೋಕ್ಷಕ್ಕೆವೋದ ಮತ್ತಂ ಸರ್ವಾರ್ಥ ಸಿದ್ಧಿಯೊಳ್ ಪುಟ್ಟಿದ ಮಹಾಪುರುಷರ್ಕಳ ಕಥೆಗಳಂ ಪೇಳ್ವಲ್ಲಿ..

ಎಂಬ ಪೀಠಿಕಾ ಸಾಲುಗಳು ಕೂಡಾ ಜೀವವೊಂದು ದಾಟಿ

ಬರಬೇಕಾದ ಅಗ್ನಿದಿವ್ಯಗಳನ್ನು ಸೂಚಿಸುತ್ತವೆ.

ಇಲ್ಲಿನ ಹತ್ತೊಂಬತ್ತು ರಿಸಿಗಳ ಜೀವನಕ್ರಮ ಮೆತ್ತನೆಯ ಶಯ್ಯೆಯಲ್ಲಿ ಪವಡಿಸಿದ ದೇಹದ್ದಲ್ಲ. ಬದಲಿಗೆ ಸಂಕಟಗಳ ಕುಲುಮೆಯನ್ನು ಹಾದು ಬಂದ ಆತ್ಮದ ಮೊರೆಯದ್ದು. ಪಶ್ಚಾತ್ತಾಪ ಮತ್ತು ಪ್ರಾಯಶ್ಚಿತ್ತಗಳ ನಡುವೆ ಉಬ್ಬೆಗಪಡುವ ಜೀವಗಳ ತುಯ್ದಾಟದ ಕಥನ ಇದು. ಅನ್ನ ನೀರು ಬಿಟ್ಟು ಪ್ರಾಣವನ್ನು ತ್ಯಜಿಸುವುದು ಸುಲಭವಲ್ಲ. ಈ ಹಿಂದಿನ ಸುಖಭೋಗವು ಈ ಮೋಕ್ಷ ದಾರಿಯ ಮುನ್ನುಡಿಯೇ ಆಗುತ್ತದೆ. ಇಲ್ಲಿನ ಜೀವಗಳ ಸಾಮಾಜಿಕ ಬದುಕಿನ ಪ್ರತಿ ನಡಾವಳಿಗಳು ಅಲೌಕಿಕ ಬಾಳಿನ ಕೈಸನ್ನೆಯಾಗುತ್ತದೆ. ಈ ಕಾರಣದಿಂದ ಜನ್ಮಜನ್ಮಾಂತರದ ಈ ಪಯಣ ಅದು ಉಪಸರ್ಗದ ಮೆಟ್ಟಿಲಾಗುತ್ತದೆ, ಆತ್ಮವೊಂದರ ದಿವ್ಯ ಗಂತವ್ಯದ ಪಲ್ಲವಿಯಾಗುತ್ತದೆ.

ವ್ಯಾಪಕ ಹರಹಿನ ಈ ಸಂಕಲನದ ಕಥಾ ಹಂದರ ಹೇಗೆ ವಿಭಿನ್ನವೋ ಹಾಗೆಯೇ ಇಲ್ಲಿನ ಭೌಗೋಳಿಕ ವಿವರಗಳು, ಪ್ರಾದೇಶಿಕ ವಿವರಗಳು ಭರತಖಂಡ ಜಂಬೂದ್ವೀಪದ ಬಹುತ್ವವನ್ನು ಬಿಂಬಿಸುತ್ತವೆ. ಅನೇಕ ರಾಜಮನೆತನ, ಸಂಸ್ಥಾನ, ಸಾಮಂತ, ಸನ್ನಿಧಿಗಳನ್ನು ಉಲ್ಲೇಖ ಮಾಡಲಾಗಿದೆ. ಅಪ್ಪಟ ಕನ್ನಡದ ದೇಸಿ ಮತ್ತು ಅದರ ಚೆನ್ನುಡಿಯ ಮಾತು, ನೀತಿ, ಗಾದೆಗಳು ಕಿಕ್ಕಿರಿದಿವೆ. ವ್ಯಾಪಾರಿ, ಜ್ಯೋತಿಷಿ, ಮಾಂತ್ರಿಕ, ಕೃಷಿಕ, ಬೋಧಕ, ಬೇಟೆಗಾರ ಇತ್ಯಾದಿ ಅನೇಕ ವೈವಿಧ್ಯಮಯ ವೃತ್ತಿಗಳನ್ನು ಕೂಡಾ ಕಥನಕಾರ ಅಲ್ಲಲ್ಲಿ ಸೂಚಿಸಿದ್ದಾನೆ. ಇದು ಸಮಾಜದ ಭಿನ್ನ ಸ್ತರಗಳಾದ ಆರ್ಥಿಕತೆ ಮತ್ತು ಉತ್ಪಾದನೆಯನ್ನು ಕುರಿತಾದ ಸಣ್ಣ ಸೂಚನೆಯಂತೆ ಕಾಣುತ್ತದೆ. ಇದು ಮೂಲತಃ ಧಾರ್ಮಿಕ ತತ್ವ ಬೋಧನೆಯ ಕಥಾನಕಗಳಾದ್ದರಿಂದ ಇಲ್ಲಿ ಸದಾ ನೀತಿ ಮತ್ತು ಅನೀತಿಗಳ ಸಂಘರ್ಷ ಮತ್ತು ಆ ಮೂಲಕದ ಜಿಜ್ಞಾಸೆಯ ಫಲಶ್ರುತಿಯಾದ ನಿಜವಾದ ಅರ್ಥ ಮೌಲ್ಯಗಳ ಬಿಂಬ ಗಾಢವಾಗಿ ಕಾಣುತ್ತದೆ. ದುರ್ಗಸಿಂಹನ ಪಂಚತಂತ್ರ ಕತೆಗಳಲ್ಲಿ ಬರುವ ನೈತಿಕತೆಯ ಅನಾವರಣದ ಹಾಗೆ ಇಲ್ಲಿ ಧಾರ್ಮಿಕ ಪಾವಿತ್ರ್ಯತೆಯ ಅನಾವರಣ ಇದೆ. ಬೆಂಕಿಗೆ ಒಡ್ಡಿಕೊಂಡ ಚಿನ್ನ ಸ್ಫುಟವಾಗುವ ಹಾಗೆ ಇಲ್ಲಿ ಜೀವಾವಳಿಗಳು ನರಳುತ್ತವೆ, ನಲುಗುತ್ತವೆ ಮತ್ತು ಅದರಾಚೆಗೆ

ಮೋಕ್ಷಕ್ಕೆ ಸಂದು ಕಂಗೊಳಿಸುತ್ತವೆ. ಧೀರರ ನಡೆ ಎಂಬಂತಿರುವ ಇಲ್ಲಿನ ನಾಯಕರುಗಳ ಬಾಳು ಮೊನಚು ಕತ್ತಿಯ ಮೇಲಿನ ನಡಿಗೆಯಾದರೂ ಹೆದರುವವರಲ್ಲ.

ಸಣ್ಣಕತೆಗಳೆಂಬ ಸಾಹಿತ್ಯ ಪ್ರಕಾರದ ಗಟ್ಟಿ ಮಾದರಿಯಾಗಬಲ್ಲ ಈ ಕಥೆಗಳನ್ನು ಹಲವು ಆಯಾಮಗಳಲ್ಲಿ ಅಧ್ಯಯನಕ್ಕೆ ಒಳಪಡಿಸಲು ಸಾಧ್ಯವಾಗಿದೆ. ಮನಶಾಸ್ತ್ರ, ನೀತಿ ಶಾಸ್ತ್ರ, ಶಿಕ್ಷಣ ಶಾಸ್ತ್ರ, ಸಮಾಜಶಾಸ್ತ್ರ ಚರಿತ್ರೆ, ಅಪರಾಧ ಶಾಸ್ತ್ರ, ಧರ್ಮಶಾಸ್ತ್ರ, ಕಾನೂನು ಶಾಸ್ತ್ರ, ಅರ್ಥ ಶಾಸ್ತ್ರ, ಪರಿಸರ ಶಾಸ್ತ್ರ, ಸಾಮಾಜಿಕೀಕರಣ, ಶ್ರೇಣೀಕೃತ ವ್ಯವಸ್ಥೆಯ ಪರಿಕಲ್ಪನೆ, ಪ್ರಭುತ್ವದ ಮಾದರಿ, ಹೀಗೆ ಹತ್ತು ಹಲವು ಬಗೆಯ ಬಹುತ್ವದ ಅಧ್ಯಯನಗಳಿಗೆ ಆಕರವಾಗಬಲ್ಲ ಈ ಕೃತಿಯು 'ಸಾಹಿತ್ಯ ಮತ್ತು ಅನ್ಯ ಶಿಸ್ತೀಯ ಅಧ್ಯಯನ' ಎಂಬ ಪರಿಕಲ್ಪನಾತ್ಮಕ ಶೋಧನೆಗೆ ವಿಸ್ತಾರವಾದ ವಿಪುಲವಾದ ಮಾದರಿಯಾಗಬಲ್ಲದು. ಸಾವಿರಾರು ವರ್ಷಗಳ ಹಿಂದೆ ಧಾರ್ಮಿಕ ಉದ್ದೇಶವೊಂದನ್ನು ಇಟ್ಟುಕೊಂಡು ರಚಿಸಲಾದ ಈ ಕೃತಿ ಇಂದಿಗೂ ಪುನರ್ ಓದಿಗೆ ಕಾರಣವಾಗುತ್ತಲೇ ಇದೆ ಎಂದರೆ ಅದರ ಅಂತಃಶಕ್ತಿ ಮತ್ತು ಬಹುಮುಖದ ಆಯಾಮವು ನಿಲ್ಲದ ಓಘದ ಹಾಗೆಯೇ ಕಾಣುತ್ತದೆ. ಸುದಾಮೆ, ಗಂಭೀರೆಯಂತಹ ಸ್ತ್ರೀ ಪಾತ್ರಗಳಿರಬಹುದು, ಚಿಲಾತ ಪುತ್ರ, ಕಾರ್ತಿಕ ರಿಸಿಯಂತಹ ಪ್ರಧಾನ ಪಾತ್ರಗಳ ನಿರೂಪಣೆ ಇರಬಹುದು. ಅವು ಕೇಂದ್ರವೊಂದಕ್ಕೆ ದುಡಿಯುವ ಬಗೆ ಯಾವತ್ತೂ ಚಿಂತನಾರ್ಹ. ಓದಿಯೇ ಅನುಭವಿಸಬೇಕಾದ ಕನ್ನಡದ ಅನನ್ಯವಾದ ಕಥಾಲೋಕ ಶಿವಕೋಟ್ಯಾಚಾರ್ಯನ ವಡ್ಡಾರಾಧನೆ. ಆದಿಕವಿ ಪಂಪನಿಗಿಂತಲೂ ಪೂರ್ವಕಾಲದ ಈ ಕೃತಿ ಭಾಷೆಯ ಚರಿತ್ರೆ ಮತ್ತು ನಾಡಿನ ಚರಿತ್ರೆ ಎರಡನ್ನೂ ಒಟ್ಟಿಗೆ ಸಂಧಿಸುವ ಚರಿತ್ರೆಯನ್ನೇ ಸೃಷ್ಟಿಸಿದ ಕೃತಿಯಾಗಿದೆ.

ಧರ್ಮದ ತಾತ್ವಿಕತೆಯನ್ನು ಪ್ರಚುರಪಡಿಸುವ ಉದ್ದೇಶವನ್ನು ಮೂಲವನ್ನಾಗಿಟ್ಟುಕೊಂಡು ಹೇಳಲಾದ ಈ ಕಥೆಗಳು ಒಂದು ಸಾಹಿತ್ಯ ಪರಂಪರೆಯನ್ನು ಶ್ರೀಮಂತ ಗೊಳಿಸಬಲ್ಲುದಾದರೆ ಅಂತಹ ಧರ್ಮಕ್ಕೆ ಶರಣು.

ಗ್ರಂಥ ಋಣ

1 ಕನ್ನಡ ಸಾಹಿತ್ಯದ ಚಾರಿತ್ರಿಕ ಅಧ್ಯಯನ ಸಂಪುಟ Ⅱ – ಡಾ. ಸಿ. ವೀರಣ್ಣ

2 ಕನ್ನಡ ಸಾಹಿತ್ಯ ಚರಿತ್ರೆ – ರಂ.ಶ್ರೀ. ಮುಗಳಿ

3 ಪಂಪ ಪೂರ್ವದ ಕನ್ನಡ ಕವಿಗಳು – ಡಾ. ಮಾಧವ ಪೆರಾಜೆ – ಹಂಪಿ ವಿ.ವಿ.

4 ವಡ್ಡಾರಾಧನೆ – ಡಿ.ಎಲ್. ನರಸಿಂಹಾಚಾರ್

5 ಶಿವಕೋಟ್ಯಾಚಾರ್ಯರ ವಡ್ಡಾರಾಧನೆ – ಗದ್ಯಾನುವಾದ – ಟಿ. ಕೇಶವ ಭಟ್ಟ – ಕ. ಸಾ. ಪ.

6 ಕನ್ನಡ ಸಾಹಿತ್ಯ ಚರಿತ್ರೆ – ತ.ಸು. ಶಾಮರಾಯ

****

ಪಸರಿಪ ಕನ್ನಡಕೆ ಒಡೆಯನೋರ್ವನೆ ಪಂಪನಾವಗಂ

– ಡಾ. ಪುರುಷೋತ್ತಮ ಬಿಳಿಮಲೆ, ದೆಹಲಿ

ಪಂಪನು ವಿಕ್ರಮಾರ್ಜುನ ವಿಜಯ ಮತ್ತು ಆದಿ ಪುರಾಣ ಎಂಬೆರಡು ಮಹಾಕಾವ್ಯಗಳನ್ನು ಬರೆದು ಒಂದು ಸಾವಿರದ ಎಪ್ಪತ್ತು ವರ್ಷಗಳಾದುವು. ಈ ಸುದೀರ್ಘ ಕಾಲಾವಧಿಯಲ್ಲಿ ಆತ ಕನ್ನಡದ ಆದಿ ಕವಿಯಾಗಿಯೂ ಮಹಾಕವಿಯಾಗಿಯೂ ಉಳಿದುಕೊಂಡೇ ಬಂದಿದ್ದಾನೆ. ಪಂಪನ ಆನಂತರ ಬರೆದ ಹೆಚ್ಚಿನ ಕವಿಗಳೆಲ್ಲರೂ ಅವನನ್ನು ಸ್ಮರಿಸಿಯೇ ತಮ್ಮ ಕಾವ್ಯ ರಚನೆಯನ್ನು ಶುರು ಮಾಡಿದ್ದಾರೆ. 1331ರಲ್ಲಿದ್ದ ನಾಗರಾಜನೆಂಬ ಕವಿಯಂತೂ 'ಪಸರಿಪ ಕನ್ನಡಕ್ಕೊಡೆಯನೊರ್ವನೆ ಸತ್ಕವಿ ಪಂಪನಾವಗಂ' ಎಂದು ಘೋಷಿಸಿದ. ಅವನ ಮಾತು ಕಡಲಿನ ಅಲೆಯ ಹಾಗೆ ಮತ್ತೆ ಮತ್ತೆ ಮಾರ್ದನಿಕೊಡುತ್ತಾ ಇವತ್ತಿನವರೆಗೆ ಉಳಿದುಬಂದದ್ದು ಸಣ್ಣ ಸಂಗತಿಯೇನಲ್ಲ. ವೇಮುಲವಾಡದ ಚಾಲುಕ್ಯರ ಸಾಮಂತನಾಗಿದ್ದ ಇಮ್ಮಡಿ ಅರಿಕೇಸರಿಯ ಆಸ್ಥಾನದಲ್ಲಿದ್ದ ಪಂಪ ಅಲ್ಲಿ ಬರೇ ಕವಿತೆ ಬರೆದುಕೊಂಡು ಕುಳಿತವನಲ್ಲ, ಬದಲು ಅಗತ್ಯ ಬಿದ್ದಾಗ ಯುದ್ಧಕ್ಕೂ ಹೋಗುತ್ತಿದ್ದ. ಈ ಕುರಿತು ಅವನೇ 'ಏಂ ಕಲಿಯೋ ಸತ್ಕವಿಯೋ ಕವಿತಾ ಗುಣಾರ್ಣವಂ' ಎಂದು ಸ್ವಾಭಿಮಾನದಿಂದ ಉದ್ಗರಿಸಿಕೊಂಡಿದ್ದಾನೆ. ಪಂಪನ ಕಾಲದವನೇ ಆದ ಕವಿ ಪೊನ್ನನು 'ಕವಿರತ್ನತ್ರಯರಲ್ಲಿ ಪಂಪನೂ ಒಬ್ಬ' ಎಂದು ಹೇಳಿದ್ದಲ್ಲದೆ,

ಪಂಪನನ್ನು 'ಜಿನಸಮಯದೀಪಕ' ಎಂದು ಕರೆದು ಗೌರವಿಸಿದ. 12ನೇ ಶತಮಾನದ ಇನ್ನೊಬ್ಬ ಮಹತ್ವದ ಕವಿ ನಾಗಚಂದ್ರನು ತನ್ನನ್ನು ತಾನೇ 'ಅಭಿನವ ಪಂಪ' ಎಂದು ಕರೆದುಕೊಂಡದ್ದಲ್ಲದೆ ತಾನು ಬರೆದ 'ರಾಮಚಂದ್ರ ಚರಿತ ಪುರಾಣವನ್ನು' 'ಪಂಪ ರಾಮಾಯಣ'ವೆಂದೇ ಜನರು ಗುರುತಿಸುವಂತೆ ಮಾಡಿಕೊಂಡು ಆದಿಕವಿಗೆ ತನ್ನ ಗೌರವ ಸಲ್ಲಿಸಿದ.

ಆಧುನಿಕ ವಿಮರ್ಶಕರು ಪಂಪನನ್ನು 'ನಾಡೋಜ' ಎಂದು ಕರೆಯುತ್ತಾರೆ. ಮುಳಿಯ ತಿಮ್ಮಪ್ಪಯ್ಯನವರು 'ನಾಡೋಜ ಪಂಪ' ಎಂಬ ಗ್ರಂಥವನ್ನೇ ಬರೆದರು. 'ನಾಡಿನ ಗುರು' ಎಂಬ ಅರ್ಥ ಈ ಪದಕ್ಕಿದೆ. ಪಂಪಪೂರ್ವ ಯುಗದ ಕವಿರಾಜಮಾರ್ಗ, ಮತ್ತು ವಡ್ಡಾರಾಧನೆಯಲ್ಲಿ ಕಂಡುಬರುವ 'ಓವಜ' ಅಥವಾ 'ಓಜ' ಪದವನ್ನು ಪಂಪನು ತನ್ನ ವಿಕ್ರಮಾರ್ಜುನ ವಿಜಯದಲ್ಲಿ ದ್ರೋಣನಿಗೆ ಬಳಸುತ್ತಾನೆ. 13ನೇ ಆಶ್ವಾಸದ ಕೊನೆಯಲ್ಲಿ ಅರ್ಜುನನಿಗೂ ಅನ್ವಯಿಸುತ್ತಾನೆ. ಇಷ್ಟೆಲ್ಲಾ ಮಾಡಿ ಕೊನೆಗೆ, 'ನಾಡೊವಜನಾದನೊ ಪೇೞ್ ಕವಿತಾಗುಣಾರ್ಣವಂ' ಎಂದು ನಾಡೋಜ ಬಿರುದನ್ನು ತನಗೇ ತಾನೇ ಅನ್ವಯಿಸಿಕೊಳ್ಳುತ್ತಾನೆ! ಏನೇ ಇರಲಿ, ಪಂಪನು ಅಲ್ಲಿಯವರೆಗೆ ಉಪಯೋಗದಲ್ಲಿದ್ದ 'ಉಪಾಧ್ಯಾಯ' ಎಂಬ ಸಂಸ್ಕೃತ ಶಬ್ದಕ್ಕೆ ಪ್ರತಿಯಾಗಿ 'ನಾಡೋಜ' ಎಂದರೆ, ನಾಡಿನ ಗುರು ಎಂಬರ್ಥದಲ್ಲಿ ಹೊಸ ಪದವನ್ನು ಸೃಷ್ಟಿಸಿ ಸಮರ್ಥವಾಗಿ ಬಳಸಿದ. ಇಷ್ಟಿದ್ದರೂ ತನ್ನನ್ನು 'ಕವಿತಾ ಗುಣಾರ್ಣವ' ಎಂದು ಕರೆದುಕೊಳ್ಳುವುದರಲ್ಲಿ ಪಂಪನಿಗೆ ವಿಶೇಷ ಒಲವು.

ಕುಮಾರವ್ಯಾಸನಂತ ಮಹಾಕವಿಯೂ ಸೇರಿದಂತೆ ಹಳಗನ್ನಡ ಮತ್ತು ನಡುಗನ್ನಡ ಕವಿಗಳಿಗೆ ತಮ್ಮ ಬಗ್ಗೆ ಏನಾದರೂ ಹೇಳಿಕೊಳ್ಳುವುದಕ್ಕೆ ಸಂಕೋಚ ಮತ್ತು ಅಳುಕು. ತಾವು ಬರೆದ್ದನ್ನು ಓದುಗರಿಗೆ ಅರ್ಪಿಸಿ ನಿಶ್ಚಿಂತವಾಗಿರುವುದು ಅವರ ಸಾಮಾನ್ಯ ಗುಣ. ಜನರೂ ಅಷ್ಟೇ. ಕವಿ ಬರೆದದ್ದನ್ನು ತಮಗೆ ಬೇಕಾದಂತೆ ಮರು ರಚಿಸಿಕೊಂಡು ಗಮಕ, ಹರಿಕತೆ, ಯಕ್ಷಗಾನ ಇತ್ಯಾದಿಗಳ ಮೂಲಕ ಇತರರಿಗೆ ತಿಳಿಸಿಹೇಳುತ್ತಿದ್ದರು. ಆದರೆ ಪಂಪ ಮಾತ್ರ ಇದಕ್ಕೊಂದು ಅಪವಾದ. ಆತ ತನ್ನ ಬಗ್ಗೆ ಸಾಕಷ್ಟು ಹೇಳಿಕೊಂಡಿದ್ದಾನೆ. ಅವನ ತಂದೆ ಭೀಮಪ್ಪಯ್ಯ, ತಾಯಿ ಅಬ್ಬಲಬ್ಬೆ.

ಹುಟ್ಟಿದ್ದು ಕ್ರಿಸ್ತಶಕ 902ರಲ್ಲಿ. ಅವನ ಅಜ್ಜ ವೇದವೇದಾಂಗ ಪಾರಂಗತನಾದ ಕೊಮರಯ್ಯ. ಇವರೆಲ್ಲರೂ ವಾಸಿಸುತ್ತಿದ್ದುದು ಕೃಷ್ಣಾ ಮತ್ತು ಗೋದಾವರಿ ನದಿಗಳ ನಡುವಣ ಪ್ರದೇಶವಾದ ವೆಂಗಿಮಂಡಲದಲ್ಲಿ. ಇಂದು ಈ ಪ್ರದೇಶವು ಪಕ್ಕದ ತೆಲಂಗಾಣ ರಾಜ್ಯಕ್ಕೆ ಸೇರಿದೆಯಾದರೂ ಪಂಪನ ಕಾಲಕ್ಕೆ ಅದು ಕನ್ನಡ ನಾಡೇ ಆಗಿತ್ತು, ಏಕೆಂದರೆ ಆಗಣ ಕನ್ನಡನಾಡು 'ಕಾವೇರಿಯಿಂದಂ ಗೋದಾವರಿವರೆಗೆ' ಹರಡಿತ್ತಲ್ಲ! ಕಾರಣಾಂತರದಿಂದ ಪಂಪನ ತಂದೆ ಕೊಮರಯ್ಯ ಬನವಾಸಿ ಕಡೆಗೆ ವಲಸೆ ಬಂದರು. ಕೊಮರಯ್ಯನ ಮಗ ಅಂದರೆ ಪಂಪನ ತಂದೆ ಭೀಮಪ್ಪಯ್ಯ ಯಜ್ಞಯಾಗಾದಿಗಳಲ್ಲಿನ ಹಿಂಸೆಯನ್ನು ವಿರೋಧಿಸಿ ಜೈನ ಮತವನ್ನು ಸ್ವೀಕರಿಸಿದ್ದ. ಪಂಪ ಓದಿದ್ದು ಪ್ರಸಿದ್ಧ ಜೈನ ಕೇಂದ್ರವಾದ ಶ್ರವಣಬೆಳಗೊಳದಲ್ಲಿ. ಸಕಲ ಶಾಸ್ತ್ರ ಪರಿಣಿತರಾದ ದೇವೇಂದ್ರಮುನಿಗಳು ಪಂಪನ ಗುರುಗಳು. ಸಂಸ್ಕೃತ, ಗಣಿತ, ವ್ಯಾಕರಣ, ಅಲಂಕಾರ, ಸಂಗೀತ, ನಾಟ್ಯ, ಶಿಲ್ಪ, ವೈದ್ಯ, ವೇದಶಾಸ್ತ್ರಗಳನ್ನೆಲ್ಲಾ ಕಲಿತ ಪಂಪನು ಮುಂದೆ ಈ ಜ್ಞಾನವನ್ನು ತನ್ನೆರಡೂ ಕಾವ್ಯಗಳಲ್ಲಿ ಯಥೇಚ್ಛವಾಗಿ ಬಳಸಿಕೊಂಡಿದ್ದಾನೆ.

'ತನ್ನ ಹಿರಿಯರು ವೈದಿಕರಾದರೂ ತಾನೇಕೆ ಜೈನನಾದೆ ?' ಎಂದು ಪಂಪ ಯೋಚಿಸದೇ ಉಳಿದವನಲ್ಲ. ಅವನ ಪ್ರಕಾರ 'ಹಿರಿಯರು ಯಜ್ಞಕ್ಕೆ ಮಾಡಿದ ಪಶುಗಳ ಆಹುತಿಯಿಂದ ಅವರ ಧವಳಕೀರ್ತಿ ಕರಿದಾಯಿತಂತೆ'! ಈ ಮತ ಪರಿವರ್ತನೆಯಿಂದ ಪಂಪನಿಗೆ ವೈದಿಕ ಪರಂಪರೆಯ ಬಗೆಗೂ ಜೈನಮತದ ಬಗ್ಗೆಯೂ ಆಳವಾಗಿ ತಿಳಿದುಕೊಳ್ಳಲು ಸಾಧ್ಯವಾಯಿತು. ಇದರಿಂದ ಕನ್ನಡಕ್ಕಾದ ಲಾಭ ಅಷ್ಟಿಷ್ಟಲ್ಲ.

ಪಂಪನು ತನ್ನ ಬಗ್ಗೆ ಮತ್ತು ತನ್ನ ಎರಡು ಕಾವ್ಯಗಳ ಬಗ್ಗೆ ಹೇಳಿಕೊಂಡ ರೀತಿಯೂ ಬಹಳ ಮೋಹಕವಾಗಿದೆ. ಕೆಳಗಿನ ಪದ್ಯದಲ್ಲಿ ಆತ ನಾನು ಹೇಗಿದ್ದೆ ಎಂಬುದನ್ನು ಸೊಗಸಾಗಿ ಹೇಳಿಕೊಂಡಿದ್ದಾನೆ–

'ಕದಳೀ ಗರ್ಭಶ್ಯಾಮಂ

ಮೃದು ಕುಟಿಲ ಶಿರೋರುಹಂ ಸರೋರುಹವದನಂ

ಮೃದು ಮಧ್ಯಮ ತನು ಹಿತಮಿತ

ಮೃದುವಚನಂಲಲಿತಮಧುರಸುಂದರವೇಷಂ'

ಇದರ ಮೊದಲ ಸಾಲಿನಲ್ಲಿರುವ 'ಕದಳೀ ಗರ್ಭಶ್ಯಾಮಂ' ಎಂಬ ಬಗ್ಗೆಯೇ ಕನ್ನಡದಲ್ಲಿ ಭಾರೀ ಚರ್ಚೆ ನಡೆದಿದೆ. ಕೆಲವರ ಪ್ರಕಾರ ಅವನದು ಬಾಳೆದಿಂಡಿನ ಒಳಗೆ ಕಾಣುವ ನಸುಗಪ್ಪು ಅಥವಾ ಎಣ್ಣೆಗಪ್ಪು ಬಣ್ಣ. ಮತ್ತೆ ಕೆಲವರ ಪ್ರಕಾರ ಬಾಳೆಯ ಹೂವಿನ (ಪೂಂಬೆ) ಕೆಂಪು ಮಿಶ್ರಿತ ಕಪ್ಪು ಬಣ್ಣ. ಚರ್ಚೆಗಳು ಏನೇ ಇರಲಿ, ಓ ಕುರಿತು ತೀ.ನಂ. ಶ್ರೀಕಂಠಯ್ಯನವರು ಹೇಳಿದ್ದನ್ನು ಒಪ್ಪಿಕೊಳ್ಳಲು ಸದ್ಯಕ್ಕೆ ಏನೂ ಅಡ್ಡಿಯಿಲ್ಲ. ಅವರ ಪ್ರಕಾರ 'ಪಂಪನದು ಕನ್ನಡಿಗರಿಗೆ ಸಹಜವಾದ ನಸುಗಪ್ಪುಬಣ್ಣ'.

ಮುಂದೆ ಪಂಪ ತನ್ನದು ಗುಂಗುರು ಕೂದಲು, ಉರುಟು ಮುಖ, ಮಧ್ಯಮ ಗಾತ್ರದ ದೇಹ, ಹಿತಮಿತವಾಗಿ ಮಾತಾಡುವವನು ಎಂದೆಲ್ಲಾ ಬರೆದುಕೊಂಡು, ಕೊನೆಗೆ 'ತಾನು ಸುಂದರನೇ ಹೌದು' ಎಂದೂ ಹೇಳಿಕೊಳ್ಳಲು ಸಂಕೋಚ ಪಡುವುದಿಲ್ಲ. ಇಷ್ಟಾದಮೇಲೆ ಆತ ರಸಿಕನೇ ಇರಬೇಕು. ಕೇರಳ, ಮಲಯ ಮತ್ತು ಆಂಧ್ರದ ಯುವತಿಯರು ಅವನಿಗೆ ಮರುಳಾಗಿದ್ದರಂತೆ. ಇದಕ್ಕೆಲ್ಲ ಕಿರೀಟ ಪ್ರಾಯವಾಗುವಂತೆ ಪಂಪ 'ಅನಂಗಜಂಗಮ ಲತಾಲಲಿತಾಂಗಿಯರಿಂದಮಲ್ತೇ ಸಂಸಾರ ಸಾರೋದಯಂ' ಎಂದು ಘೋಷಿಸಿಬಿಡುತ್ತಾನೆ. ಇನ್ನೊಂದೆಡೆ ಅವನು 'ಧರ್ಮವು ಎಲ್ಲಕ್ಕೂ ಪ್ರಧಾನ, ಅದರ ಫಲವೇ ಸಂಪತ್ತು, ಆ ಫಲದ ರಸ ಅಥವಾ ಸಾರವೇ ಕಾಮ' ಎಂದೂ ಹೇಳುತ್ತಾನೆ.

ಪಂಪನನ್ನು ಸುಮ್ಮನೆ ನಾಡೋಜ ಎಂದು ಕನ್ನಡಿಗರು ಕರೆಯುವುದಿಲ್ಲ. ಆತ ಕನ್ನಡ ಕಾವ್ಯ ಮಾರ್ಗಕ್ಕೆ ಗುರುವಿನಂತೆ ನಿಂತು ಹಲವು ಹಾದಿಗಳನ್ನು ತೋರಿಸಿದ. ಅದರಲ್ಲಿ ಮುಖ್ಯವಾದದ್ದೆಂದರೆ ದೇಸೀ (ಕನ್ನಡ ಪರಂಪರೆ) ಮತ್ತು ಮಾರ್ಗ (ಸಂಸ್ಕೃತ ಪರಂಪರೆ) ಎಂಬೆರಡು ಹಾದಿಗಳನ್ನು ಹದವಾಗಿ ಜೋಡಿಸಿದ್ದು, ಆಶ್ರಯದಾತನನ್ನು ಕತಾನಾಯಕನೊಂದಿಗೆ ಸಮೀಕರಿಸಿದ್ದು, ಕಾವ್ಯದಲ್ಲಿ ಲೌಕಿಕ ಮತ್ತು ಆಗಮಿಕ ಎಂಬೆರಡು ಪ್ರಬೇಧಗಳನ್ನು ನಿರ್ಮಿಸಿಕೊಂಡು ಎರಡರಲ್ಲೂ ಸೃಜನಶೀಲತೆಯನ್ನು ಮೆರೆದದ್ದು, ಮತ್ತು ಗದ್ಯ ಪದ್ಯ ಮಿಶ್ರಿತವಾದ ಚಂಪೂ ಪ್ರಕಾರವನ್ನು ಕನ್ನಡಕ್ಕೆ ಕೊಟ್ಟದ್ದು. ಪಂಪನ ಚಂಪೂ ಶೈಲಿಗೆ ಸಂಸ್ಕೃತ ಕವಿಗಳೂ ಮನಸೋತಿದ್ದರಂತೆ!

ಭಾಷೆ ಮತ್ತು ನಾಡಿನಮೇಲೆ ಪಂಪನಿಗೆ ಇರುವ ಪ್ರೀತಿ ಅಸಾಧಾರಣವಾದುದು. ತನ್ನದು 'ಪುಲಿಗೆರೆಯ ತಿರುಳ್ಗನ್ನಡ' ಎಂದು ಹೇಳಿದ ಅವನು ವಿಕ್ರಮಾರ್ಜುನ ವಿಜಯದಲ್ಲಿ ಬನವಾಸಿಯ ವರ್ಣನೆ ಮಾಡಿ ಎಲ್ಲ ಕನ್ನಡಿಗರ ಮನಸೂರೆಗೊಂಡ. ಬನವಾಸಿಯಲ್ಲಿ ಓಡಾಡಿದರೆ ನಿಮಗೆ ಕಾಣುವುದು 'ಫಲ ಬಿಟ್ಟ ಮಾವಿನ ಮರ, ದಟ್ಟವಾದ ವೀಳ್ಯದೆಲೆ ಬಳ್ಳಿಗಳು, ಹೂಬಿಟ್ಟ ಸಂಪಿಗೆಯ ಮರ, ಕೂಗುವ ಕೋಗಿಲೆ, ಹಾಡುವ ದುಂಬಿ, ಪ್ರೇಮಿಗಳ ನಗುಮುಖ ಇತ್ಯಾದಿಗಳಾದುದರಿಂದ ಅದು ನಂದನವನವೇ ಸರಿ'. 'ಇಂತದ್ದೊಂದು ಸ್ಥಳದಲ್ಲಿ ಮನುಷ್ಯರಾಗಿ ಹುಟ್ಟಲೇಬೇಕು, ಒಂದು ವೇಳೆ ಅದಾಗದಿದ್ದರೆ ಮರಿದುಂಬಿಯಾಗಿಯೋ ಕೋಗಿಲೆಯಾಗಿಯೋ ಹುಟ್ಟಬೇಕು' ಎಂಬುದು ಅವನ ಆಸೆ. ಜೊತೆಗೆ ತೆಂಕಣ ಗಾಳಿ ಮೈಸೋಕಿದರೆ, ಒಳ್ಳೆಯ ಮಾತು ಕಿವಿಗೆ ಬಿದ್ದರೆ, ಇಂಪಾದ ಹಾಡು ತೇಲಿಬಂದರೆ, ತುಂಬಿಗಳು ಝೇಂಕರಿಸಿದರೆ, ಅರಳಿದ ಮಲ್ಲಿಗೆ ಕಂಡರೆ, ಅವನಿಗೆ ಬನವಾಸಿಯ ನೆನಪಾಗುತ್ತಿತ್ತಂತೆ.

ಆದಿ ಪುರಾಣ :

ಪಂಪನ ಎರಡು ಕೃತಿಗಳಲ್ಲಿ ಸಹಜವಾಗಿ ವಿಕ್ರಮಾರ್ಜುನ ವಿಜಯವೇ ಹೆಚ್ಚಿನ ಓದುಗರ ಮೆಚ್ಚುಗೆಗೆ ಪಾತ್ರವಾಗಿದೆ. ಅದು ಮಹಾಭಾರತದ ಬಗೆಗಣ ಜನರ ಒಲವಿನ ಸಂಕೇತ. ಆದರೆ ಸಾಹಿತ್ಯ ವಿಮರ್ಶೆಯ ದೃಷ್ಟಿಯಿಂದ ನೋಡಿದರೆ, 16 ಆಶ್ವಾಸಗಳು ಮತ್ತು 1555 ಪದ್ಯಗಳಿರುವ ಆದಿ ಪುರಾಣದ ಮಹತ್ವ ಕಡಿಮೆಯೇನೂ ಅಲ್ಲ. ಈ ಕಾವ್ಯವು ಮೊದಲನೆಯ ತೀರ್ಥಂಕರನಾದ ಪುರುದೇವ ಅಥವಾ ವೃಷಭದೇವನ ಸುತ್ತ ಹೆಣೆದುಕೊಂಡಿದೆ. ಜಿನಸೇನಾಚಾರ್ಯರ ಸಂಸ್ಕೃತ ಕಾವ್ಯ 'ಪೂರ್ವಪುರಾಣ' ಇದರ ಆಕರ ಗ್ರಂಥ. 'ಭೋಗದ ಕೊನೆ ತ್ಯಾಗ, ವೈಭವದ ಕೊನೆ ವೈರಾಗ್ಯ' ಎಂಬ ಜೈನ ತತ್ವವನ್ನು ಈ ಕೃತಿಯು ಅನೇಕ ಘಟನೆಗಳ ಮೂಲಕ ಪ್ರತೀತಗೊಳಿಸುತ್ತದೆ. ಈ ಅರ್ಥದಲ್ಲಿ ಇದೊಂದು ಧಾರ್ಮಿಕ ಕಾವ್ಯವೇ ಹೌದಾದರೂ, ಪಂಪನು ಅಲ್ಲಲ್ಲಿ ಧರ್ಮದ ಚೌಕಟ್ಟನ್ನು ಒಡೆದು ಕಾವ್ಯ ಧರ್ಮಕ್ಕೆ ನ್ಯಾಯ ಒದಗಿಸುತ್ತಾನೆ. ಇದು ಅವನಿಗೂ ಗೊತ್ತಿದ್ದುದರಿಂದಲೇ 'ನೆಗಟ್ದಿ ಆದಿಪುರಾಣದೊಳ್ ಅಱಿವುದು ಕಾವ್ಯಧರ್ಮಮಂ ಧರ್ಮಮುಮಂ' ಎಂದು ಆತ್ಮವಿಶ್ವಾಸದಿಂದ

ಹೇಳಿಕೊಂಡಿದ್ದಾನೆ. ಆದಿಪುರಾಣದ ಕತೆಂಯು ಪ್ರಕಾರ, ಜಯವರ್ಮನೆಂಬುವನು ಮಹಾಬಳ, ಲಲಿತಾಂಗ, ವಜ್ರಜಂಘ, ಆರ್ಯ, ಶ್ರೀಧರದೇವ, ಸುವಿಧಿ, ಅಚ್ಯುತೇಂದ್ರ, ವಜ್ರನಾಭಿ, ಅಹಮಿಂದ್ರನಾಗಿ ಹುಟ್ಟಿ ಹತ್ತನೆಯ ಜನ್ಮದಲ್ಲಿ ಆದಿನಾಥನಾಗಿ ಜನಿಸುತ್ತಾನೆ. ಇವರೆಲ್ಲರೂ ಚಕ್ರವರ್ತಿಗಳು ಮತ್ತು ಎಲ್ಲ ಬಗೆಯ ಭೋಗಸುಖಗಳನ್ನು ಸವಿಯುವವರು. ಆದರೆ ಒಂದು ಜನ್ಮದಿಂದ ಇನ್ನೊಂದು ಜನ್ಮಕ್ಕೆ ಬಂದಾಗ ಅವರ ಕರ್ಮಗಳು ಸವೆದು, ಭೊಗಲಾಲಸೆ ಕಡೆಮೆಯಾಗುತ್ತಾ ಹೋಗುತ್ತದೆ. ಈ ಭೋಗ ನಿರಸನ ಪ್ರಕ್ರಿಯೆಯನ್ನು ಪಂಪ ಬಹಳ ಅದ್ಭುತವಾಗಿ ವಿವರಿಸುತ್ತಾನೆ. ಮಹಾಬಳನ ಭೋಗ ತೀವ್ರತೆ, ಲಲಿತಾಂಗ-ಸ್ವಯಂಪ್ರಭೆಯರ ಸುರತ ಸುಖ, ವಜ್ರಜಂಘ-ಶ್ರೀಮತಿಯರ ಮಾಗಿದ ಪ್ರೇಮಗಳನ್ನು ಪಂಪ ವರ್ಣಿಸಿ ದಣಿಯನು. 'ಪ್ರಾಣವಲ್ಲಭರು ಜೊತೆಗೆ ಅಪ್ಪುಗೆಯಲ್ಲಿಯೇ ಸತ್ತರೆ ಅದಕ್ಕಿಂತ ಪುಣ್ಯವಿನ್ನೇನಿದೆ !' ಎಂದಾತ ಒಂದು ಹಂತದಲ್ಲಿ ಉದ್ಗರಿಸುತ್ತಾನೆ. ಈ ಭವಾವಳಿಯ ಕೊನೆಯಲ್ಲಿ ಆದಿನಾಥ ಜನಿಸುತ್ತಾನೆ. ಆದರೆ ಇಷ್ಟರಲ್ಲಿ ಅವನ ಮನಸು ಮಾಗಿರುತ್ತದೆ, ಭೋಗಲಾಲಸೆ ಇಲ್ಲವಾಗಿರುತ್ತದೆ. ಇಂದ್ರನ ಆಸ್ಥಾನದಲ್ಲಿ ನಡೆಯುವ ನೀಲಾಂಜನೆಯ ನೃತ್ಯ ಸಂದರ್ಭದಲ್ಲಿ ಅಕಾಲ ಮರಣಕ್ಕೊಳಪಡುವ ಆಕೆಯನ್ನು ಕಂಡು ಆದಿನಾಥನು ಲೌಕಿಕದ ತೊಟ್ಟು ಕಳಚಿಕೊಳ್ಳುತ್ತಾನೆ. ಆ ಸಂದರ್ಭದಲ್ಲಿ ಆದಿನಾಥ ಹೇಳಿಕೊಳ್ಳುವ - 'ಅನೇಕ ಜನ್ಮಗಳಲ್ಲಿ ಕಡಲ ನೀರು ಕುಡಿದು ಬಾಯಾರಿಕೆ ನೀಗಲಿಲ್ಲ, ಈಗ ಈ ಜನ್ಮದಲ್ಲಿ ಹುಲ್ಲಿನ ತುದಿಯ ನೀರಿನ ಪಸೆಯನ್ನು ಹೀರಿ ನನ್ನ ಬಾಯಾರಿಕೆ ನೀಗುವುದುಂಟೇ' ಎಂಬ ಮಾತು ಅನ್ಯಾದೃಶವಾದುದು. ಆದಿನಾಥನ ಎರಡು ಮಕ್ಕಳಾದ ಭರತ ಮತ್ತು ಬಾಹುಬಲಿಯರ ಪ್ರಕರಣದ ಮೂಲಕ ಪಂಪನು ಅಹಂಕಾರದ ಎರಡು ಮಗ್ಗುಲುಗಳನ್ನು ನಮ್ಮ ಮುಂದಿಡುತ್ತಾನೆ. ಯುದ್ಧದಲ್ಲಿ ಗೆದ್ದ ರಾಜ್ಯವನ್ನು ಭರತನಿಗೆ ಬಿಟ್ಟುಕೊಟ್ಟಾಗ ಬಾಹುಬಲಿ ಹೇಳುವ ಮಾತುಗಳು ಬಹಳ ಪ್ರಸಿದ್ಧವಾದುದು - 'ನೆಲಸುಗೆ ನಿನ್ನ ವಕ್ಷದೊಳೆ ನಿಶ್ಚಳಂ ಈ ಭಟಖಡ್ಗಮಂಡಲೋತ್ಪಲವನ ವಿಭ್ರಮಭ್ರಮರಿಯಪ್ಪ ಮನೋಹರಿ ರಾಜ್ಯಲಕ್ಷ್ಮಿ ಭೂ ವಲಯಮಂ ಅಯ್ಯನಿತ್ತುದುಮಂ ಆಂ ನಿನಗಿತ್ತೆಂ ಇದೇವುದಣ್ಣ ನೀನ್ ಒಲಿದ ಲತಾಂಗಿಗಂ ಧರೆಗಂ ಆಟಿಸಿದಂದು

ನೆಗಟ್ತೆ ಮಾಸದೇ' (ಸೈನಿಕರ ಖಡ್ಗ ಸಮೂಹವೆಂಬ ಸರೋವರದಲ್ಲಿ ಸುಳಿದಾಡುವ ದುಂಬಿಯಂತಹ ರಾಜ್ಯಲಕ್ಷ್ಮಿಯು ನಿನ್ನ ಎದೆಯಲ್ಲಿಯೇ ಶಾಶ್ವತವಾಗಿ ನೆಲಸಲಿ. ಇದರಿಂದ ಏನಾದೀತು! ಅಲ್ಲದೆ, ಅಣ್ಣನಾದ ನೀನು ಒಲಿದ ಹೆಣ್ಣಿಗಾಗಲೀ ಮಣ್ಣಿಗಾಗಲೀ ಆಸೆಪಟ್ಟರೆ ನನಗೆ ಕೆಟ್ಟ ಹೆಸರು ಬಾರದೇ). ಆ ಬಳಿಕ ಬಾಹುಬಲಿ ತಪಸ್ಸಿಗೆ ತೆರಳುತ್ತಾನೆ. ಭರತ ಚಕ್ರವರ್ತಿಯಾಗಿ ಮುಂದುವರಿದರೂ ಕ್ರಮೇಣ ಅವನೂ ಪಕ್ವಗೊಳ್ಳುತ್ತಾನೆ.

ಅಧ್ಯಯನದ ಕಾಲಘಟ್ಟದಲ್ಲಿ ಶ್ರವಣಬೆಳಗೊಳದಲ್ಲಿ ಓಡಾಡಿದ್ದ ಪಂಪನ ಮೇಲೆ ಆಗಷ್ಟೇ ನಿರ್ಮಿತವಾಗಿದ್ದ ಗೊಮ್ಮಟೇಶ್ವರನು ಬಹಳ ಪ್ರಭಾವ ಬೀರಿರಬೇಕು. ಕನ್ನಡಿಗರಿಗೆ ಗೊಮ್ಮಟ ಒಂದು ಎತ್ತರವಾದರೆ, ಆದಿಪುರಾಣ ಇನ್ನೊಂದು ಎತ್ತರ. ಇವೆರಡನ್ನೂ ದರ್ಶಿಸಬಲ್ಲ ಕನ್ನಡಿಗರೇ ಭಾಗ್ಯಶಾಲಿಗಳು.

ವಿಕ್ರಮಾರ್ಜುನ ವಿಜಯ ಅಥವಾ ಪಂಪ ಭಾರತ

14 ಆಶ್ವಾಸಗಳಿರುವ ಮತ್ತು 1609 ಪದ್ಯಗಳಿರುವ ಬೃಹತ್ ಕಾವ್ಯ 'ವಿಕ್ರಮಾರ್ಜುನ ವಿಜಯ'ವು ಪಂಪಭಾರತವೆಂದೇ ಕನ್ನಡಿಗರ ನಡುವೆ ಪ್ರಸಿದ್ಧ. ಇದನ್ನು ಪಂಪ ಆರುತಿಂಗಳಲ್ಲಿ ಬರೆದನಂತೆ. ಅವನ ಜೊತೆಗಿದ್ದ ಇತರ ವಿದ್ವಾಂಸರುಗಳು, ಕತೆ ಪಿರಿದಾದೊಡಂ, ಕತೆಯ ಮೆಯ್ಗಿಡಲೀಯದೆ ಮುಂ ಸಮಸ್ತ ಭಾರತ ಮನಪೂರ್ವಮಾಗೆ ಪೇಳ್ದ ಕವೀಶ್ವರರಿಲ್ಲ, ಪೇಳ್ವೊಡೆ ಪಂಪನೆ ಪೇಳ್ಗುಂ (ಬೃಹತ್ತಾದ ಮಹಾಭಾರತದ ಕತೆಯನ್ನು ಯಾವುದೇ ಲೋಪವಿಲ್ಲದೆ ಹೇಳಿದ ಕವಿಗಳೇ ಇಲ್ಲ, ಹೇಳುವುದಾದರೆ ಅದು ಪಂಪನಿಗೆ ಮಾತ್ರ ಸಾಧ್ಯ) ಎಂದು ಹೇಳಿದ್ದರಿಂದ ತಾನು ಈ ಕಾವ್ಯವನ್ನು ಬರೆದೆ ಎಂದು ಪಂಪ ಹೆಮ್ಮೆಯಿಂದ ಹೇಳಿಕೊಂಡಿದ್ದಾನೆ. 'ಹಿತಮಿತಮೃದುವಚನಿ' ಯಾದ ಅವನಿಗೆ ಅದು ಸಾಧ್ಯವೂ ಆಯಿತು. ಮೂಲದಲ್ಲಿ ಲಕ್ಷಕ್ಕೂ ಹೆಚ್ಚು ಶ್ಲೋಕಗಳಿರುವ ಮಹಾಭಾರತವನ್ನು ಸ್ವಾರಸ್ಯಗೆಡದಂತೆ ಕನ್ನಡದಲ್ಲಿ ನಿರೂಪಿಸಲು ಪಂಪನಿಗೆ ಸಾಧ್ಯವಾದದ್ದು ಕನ್ನಡ ಭಾಷೆಯ ಶಕ್ತಿಯನ್ನೂ ಮಹಾಕವಿಯ ಪ್ರತಿಭೆಯನ್ನೂ ಒಟ್ಟಾಗಿಯೇ ನಮ್ಮ ಮುಂದಿಡುತ್ತದೆ. ಇಷ್ಟಿದ್ದರೂ ಈ ಕೃತಿಗೆ ಅಖಿಲಭಾರತ ಮಟ್ಟದಲ್ಲಿ ಸಿಗಬೇಕಾದಷ್ಟು ಮನ್ನಣೆ ಇನ್ನೂ ದೊರಕಿಲ್ಲ. ವ್ಯಾಸರು ಸಂಸ್ಕೃತದಲ್ಲಿ ಬರೆದ 'ಮಹಾಭಾರತ' ವನ್ನು ಕನ್ನಡದಂಥ ದೇಸೀ ಭಾಷೆಯಲ್ಲಿ ಮೊದಲ ಬಾರಿಗೆ ಬರೆದವನು

ಪಂಪ. ಆಮೇಲೆ ತಮಿಳು, ಮಲೆಯಾಳಂ, ತೆಲುಗು, ಒಡಿಯಾ ಮೊದಲಾದ ಭಾಷೆಗಳಲ್ಲಿ ಮಹಾಭಾರತವನ್ನು ಬರೆಯಲಾಯಿತು. ಹೀಗೆ ಬರೆಯುವಾಗ ಪಂಪನು ತಾನು ವ್ಯಾಸರು ಬರೆದ ಮಹಾಭಾರತವೆಂಬ ಸಾಗರವನ್ನು ಈಜುತ್ತೇನೆ, ಆದರೆ ಕವಿವ್ಯಾಸ ಎಂಬ ಅಹಂಕಾರ ನನಗಿಲ್ಲ. 'ವ್ಯಾಸ ಮುನೀಂದ್ರರುಂದ್ರ ವಚನಾಮೃತವಾರ್ದಿಯನೀಸುವೆಂ ಕವಿ ವ್ಯಾಸನೆಂಬ ಗರ್ವಮೆನಗಿಲ್ಲ' ಎಂಬ ಅತ್ಯಂತ ವಿನಯದ ಮಾತನ್ನು ಹೇಳಿಕೊಂಡಿದ್ದಾನೆ.

ಕನ್ನಡದಲ್ಲಿ ಭಾರತವನ್ನು ಬರೆಯುವಾಗ ಪಂಪನು ತನಗೆ ಜೈನ ಮತ ಅಧ್ಯಯನದಿಂದ ದೊರೆತ ವಿಚಾರಶೀಲತೆಯನ್ನೂ ವೈದಿಕ ಪರಂಪರೆಯ ಅಧ್ಯಯನದಿಂದ ದತ್ತವಾದ ಪುರಾಣ ಕಲ್ಪನೆಯನ್ನೂ ಹದವಾಗಿ ಬಳಸಿಕೊಳ್ಳುತ್ತಾನೆ. ಆಶ್ರಯದಾತನಾದ ಅರಿಕೇಸರಿಯನ್ನು ಅರ್ಜುನನಿಗೆ ಹೋಲಿಸಿ ಇತಿಹಾಸ ಮತ್ತು ಪುರಾಣಗಳ ನಡುವಣ ಅಂತರವನ್ನು ಕಡಿಮೆ ಮಾಡಿಕೊಳ್ಳುತ್ತಾನೆ.

ಅಸಾಮಾನ್ಯ ಪ್ರತಿಭೆಯ ಪಂಪನು ಸಂಸ್ಕೃತ ಭಾರತವನ್ನು ಕನ್ನಡವಾಗಿಸುವಾಗ ಕೆಲವಾದರೂ ಮಹತ್ವದ ಬದಲಾವಣೆಗಳನ್ನು ಮಾಡಿಕೊಂಡಿದ್ದಾನೆ. ಅದರಲ್ಲಿ ಬಹಳ ಮುಖ್ಯವಾದದ್ದು ಕೃಷ್ಣನ ಪಾತ್ರವನ್ನು ಗೌಣಗೊಳಿಸಿದ್ದು. ಮಹಾಭಾರತವು ಹೇಗೆ, ಯಾರಿಂದ ಲೋಕಪೂಜ್ಯವಾಯಿತು ಎಂದು ಹೇಳುವಾಗ ಪಂಪನು ಕೃಷ್ಣನಿಗೆ ಅಲ್ಲೊಂದು ಜಾಗವನ್ನೇ ಕೊಡುವುದಿಲ್ಲ. ಅದರ ಬದಲು ಛಲದಲ್ಲಿ ದುರ್ಯೋಧನ, ಸತ್ಯ ಅಥವಾ ಕೃತಜ್ಞತೆಯಲ್ಲಿ ಕರ್ಣ, ಪೌರುಷದಲ್ಲಿ ಭೀಮಸೇನ, ಬಲದಲ್ಲಿ ಶಲ್ಯ, ಔನ್ನತ್ಯದಲ್ಲಿ ಭೀಷ್ಮ, ಬಿಲ್ಗಾರಿಕೆಯಲ್ಲಿ ದ್ರೋಣ, ಸಾಹಸ ಕಾರ್ಯಗಳಲ್ಲಿ ಅರ್ಜುನ ಮತ್ತು ಧಾರ್ಮಿಕ ವಿಷಯಗಳಲ್ಲಿ ಧರ್ಮರಾಯ ಎಂದು ಹೇಳುತ್ತಾನೆ. ತನ್ನ ದೈವಿಕ ಶಕ್ತಿಯಿಂದ ಎಲ್ಲ ಪಾತ್ರಗಳನ್ನೂ ಗೊಂಬೆಗಳ ಹಾಗೆ ಕುಣಿಸಬಲ್ಲ ಕೃಷ್ಣನಿಗೆ ಸ್ವತ: ಇಲ್ಲಿ ಅವಕಾಶವೇ ಇಲ್ಲದ್ದರಿಂದ ಉಳಿದ ಪಾತ್ರಗಳೆಲ್ಲ ತಮ್ಮ ಜವಾಬ್ದಾರಿಯನ್ನು ತಾವೇ ಹೊತ್ತುಕೊಳ್ಳಬೇಕಾಗುತ್ತದೆ. ಹೀಗಾಗಿ ಪಂಪ ಭಾರತವು ಅನೇಕ ಮಾನವೀಯ ಮೌಲ್ಯಗಳ ನಡುವಣ ಸಂಘರ್ಷವೆಂಬಂತೆ ರೂಪುಗೊಂಡಿತು.

ಇವತ್ತು ಬಹಳ ಚರ್ಚೆಯಲ್ಲಿರುವ ಭಗವದ್ಗೀತೆಗೆ ಕನ್ನಡದ ಆದಿ ಕಾವ್ಯದಲ್ಲಿ ಅಂತಾ ಮಹತ್ವವೇನೂ ಇಲ್ಲ. ಕುರುಕ್ಷೇತ್ರ ಯುದ್ಧ ಆರಂಭವಾಗುವ ಹೊತ್ತು ವಿರೋಧೀ ಬಣದಲ್ಲಿ ತನ್ನವರ ಮುಖಗಳನ್ನೇ ಕಂಡ ಅರ್ಜುನನ್ನು ಸಹಜವಾಗಿ ವಿಷಾದ ಆವರಿಸುತ್ತದೆ. ಅವನ ವಿಷಾದ ಕಳೆಯಲು ಕೃಷ್ಣ ಸುದೀರ್ಘವಾಗಿ ಪ್ರವಚನ ಮಾಡುತ್ತಾನೆ. ಅದುವೇ ಭಗವದ್ಗೀತೆ. ಈಗ ಲಭ್ಯವಿರುವ ಭಗವದ್ಗೀತೆಯಲ್ಲಿ ಒಟ್ಟು 18 ಅಧ್ಯಾಯಗಳಿವೆ. ಗೀತೆಯು ನಿರ್ವಿವಾದವಾಗಿ ಶ್ರೀಕೃಷ್ಣನ ಅಪಾರ ಮಹಿಮೆಯನ್ನು ಕೊಂಡಾಡುವ ಗ್ರಂಥ. ಆದರೆ ಪಂಪನು ಇಡೀ ಭಗವದ್ಗೀತಾ ಸನ್ನಿವೇಶವನ್ನು ಕೃಷ್ಣನಿಗೆ ಅಪಚಾರವಾಗದ ರೀತಿಯಲ್ಲಿ ಕೇವಲ ಒಂದೇ ಒಂದು ವೃತ್ತದಲ್ಲಿ ಹೇಳಿ ಮುಗಿಸಿದ್ದಾನೆ.

'ಚಾತುರ್ವರ್ಣ್ಯಮ್ ಮಯಾ ಸೃಷ್ಟಂ ಗುಣಕರ್ಮ ವಿಭಾಗಶಃ' (ಗುಣಕರ್ಮಗಳನ್ನು ಅನುಸರಿಸಿ ನಾಲ್ಕು ವರ್ಣಗಳನ್ನು ಸೃಷ್ಟಿಮಾಡಿದೆ) ಎಂದ ಕೃಷ್ಣನನ್ನು ಜಾಗರೂಕತೆಯಿಂದ ಬದಿಗೆ ಸರಿಸಿದ ಪಂಪನಿಗೆ ಅದೇ ಕಾರಣಕ್ಕೆ ವರ್ಣಾಶ್ರಮ ಧರ್ಮ ಉಂಟುಮಾಡಿದ ಕೆಲವಾದರೂ ಅನಾಹುತಗಳನ್ನು ಪರಿಶೀಲಿಸಲು ಸಾಧ್ಯವಾಗಿದೆ. ಈ ಹಂತದಲ್ಲಿ ಅವನ ಕಣ್ಣಿಗೆ ಬಿದ್ದದ್ದು ಕರ್ಣ. ಆತ ಹುಟ್ಟಿನಿಂದ ಸೂರ್ಯಪುತ್ರ, ಆದರೆ ಲೋಕದ ಕಣ್ಣಿಗೆ ಸೂತ ಪುತ್ರ. ಮೊದಲನೆಯದು ಸೂರ್ಯನ ಮೂಲಕ ದೈವಿಕವೂ, ಕುಂತಿಯ ಮೂಲಕ ಜೈವಿಕವೂ ಆದರೆ ಎರಡನೆಯದು ಸೂತನಾದ ಅಧಿರಥ ಮತ್ತು ಅವನ ಹೆಂಡತಿ ರಾಧೆಯ ಮೂಲಕ ಒಂದು ಸಾಮಾಜಿಕ ರಚನೆಯಾಗುತ್ತದೆ. ಕೌಂತೇಯನಾಗಬೇಕಾಗಿದ್ದ ಕರ್ಣನು ರಾಧೇಯನಾಗುತ್ತಾನೆ. ಇದನ್ನು ಬಹಳ ಎಚ್ಚರದಿಂದ ಪರಿಶೀಲಿಸುವ ಪಂಪನು ಕರ್ಣನ ಪರವಾಗಿ ನಿಂತು ಉಳಿದ ಪಾತ್ರಗಳನ್ನು ಪರಿಶೀಲಿಸುತ್ತಾನೆ. ಕುರುಕ್ಷೇತ್ರ ಯುದ್ಧಾರಂಭದಲ್ಲಿ ಕೌರವನು ಭೀಷ್ಮನಿಗೆ ಪಟ್ಟ ಕಟ್ಟುವಾಗ ಕೋಪಗೊಂಡ ಕರ್ಣನು 'ಕಣ್ಣು ಕಾಣದ ಈ ಮುದುಕನಿಗೆ ಪಟ್ಟಗಟ್ಟುವ ಬದಲು ವೈರಿಗಳ ನಿಟ್ಟೆಲ್ವಂ ಮುರಿವಡೆ ಎನಗೆ ಪಟ್ಟಂಗಟ್ಟಾ' ಎಂದುಬಿಡುತ್ತಾನೆ. ಅದಕ್ಕೆ ಬಹಳ ತಾಳ್ಮೆಯಿಂದ ಪ್ರತಿಕ್ರಿಯಿಸುವ ಭೀಷ್ಮನು 'ಕರ್ಣಾ, ನಿನ್ನಲ್ಲಿರುವಷ್ಟು ಕಲಿತನ, ಯೌವನ, ದೈವಕೃಪೆ, ಶೌರ್ಯ ಇತ್ಯಾದಿಗಳು ನನ್ನಲ್ಲಿ ಇಲ್ಲಪ್ಪಾ, ಆದರೆ ಇದು ಕುರುಕ್ಷೇತ್ರ ಯುದ್ಧ, ನಾವು ಇದಿರಿಸಬೇಕಾದ್ದು ಕೃಷ್ಣನನ್ನು, ಆದುದರಿಂದ ಅವಸರ ಬೇಡ,

ನಿನಗೂ ಒಂದು ಅವಕಾಶ ಬರುತ್ತದೆ' ಎಂದು ಹೇಳಿ ತನ್ನ ಔನ್ನತ್ಯವನ್ನು ಮೆರೆಯುತ್ತಾನೆ. ಇದನ್ನು ಸ್ವಲ್ಪ ತಡವಾಗಿ ಅರ್ಥಮಾಡಿಕೊಂಡ ಕರ್ಣನು ಮುಂದೆ ಭೀಷ್ಮರು ಶರಶಯ್ಯೆಯಲ್ಲಿದ್ದಾಗ ಅವರಿಗೆ ಭಕ್ತಿಯಿಂದ ಮೂರು ಸುತ್ತು ಬಂದು ಅವರ ಕಾಲುಗಳನ್ನು ತನ್ನ ತಲೆಯ ಮೇಲಿರಿಸಿಕೊಂಡು 'ನಿಮ್ಮನ್ನು ತಿಳಿಯದೆ ನೋಯಿಸಿದೆ, ಕ್ಷಮಿಸಿ' ಎಂದು ಬೇಡಿಕೊಂಡು ತನ್ನ ಉನ್ನತಿಕೆಯನ್ನೂ ಮೆರೆಯುತ್ತಾನೆ.

ಭೀಷ್ಮ ಮತ್ತು ಕರ್ಣರನ್ನು ಹೀಗೆ ಮುಖಾಮುಖಿಯಾಗಿಸಿ ಎತ್ತರಿಸುವ ಪಂಪನು, ದ್ರೋಣ, ಕೃಪ ಮತ್ತು ಅಶ್ವತ್ಥಾಮರು ಕರ್ಣನನ್ನು ಕಂಡಾಗ ಬೇರೆಯದೇ ಹಾದಿ ಹಿಡಿಯುತ್ತಾನೆ. 'ಮಾನವ ಜಾತಿ ಒಂದೆ ವಲಂ' ಎಂದು ಆದಿಪುರಾಣದಲ್ಲಿ ಘೋಷಿಸಿದ ಪಂಪನು ಇದನ್ನು ಬ್ರಾಹ್ಮಣ ಮತ್ತು ಶೂದ್ರರ ಸಂಘರ್ಷವಾಗಿ ಗ್ರಹಿಸುತ್ತಾನೆ. ಹಾಗಾಗಿ ಇಲ್ಲಿ ಕುಲ, ಜಾತಿ ಇತ್ಯಾದಿಗಳೆಲ್ಲವೂ ಮುನ್ನೆಲೆಗೆ ಬರುತ್ತವೆ. ಜಾತಿ-ಕುಲಗಳ ಪ್ರಶ್ನೆ ಬಂದಾಗ ಕರ್ಣ ಬಹಳ ಬೇಗ ತಾಳ್ಮೆ ಕಳೆದುಕೊಳ್ಳುತ್ತಾನೆ, ಮತ್ತು ಇದಿರಿಗೆ ಯಾರಿದ್ದರೂ ಸರಿ, ಅವರ ಮೇಲೆ ಹರಿ ಹಾಯುತ್ತಾನೆ. ಇದಕ್ಕೆ ಒಳ್ಳೆಯ ಉದಾಹರಣೆ ಪಂಪ ಭಾರತದ 10ನೇ ಆಶ್ವಾಸದಲ್ಲಿ ಬರುವ ಕೆಲವು ಘಟನೆಗಳು. ಭೀಷ್ಮನ ಪಟ್ಟಾಭಿಷೇಕಕ್ಕೆ ಕರ್ಣ ತಕರಾರು ಎತ್ತಿದಾಗ, ಅಲ್ಲಿ ಉಪಸ್ಥಿತರಿದ್ದ ದ್ರೋಣಾಚಾರ್ಯರು ಅಲ್ಲಿ ನಡೆಯುತ್ತಿದ್ದ ವೀರತ್ವದ ಪ್ರಶ್ನೆಯನ್ನು ಕುಲದ ಪ್ರಶ್ನೆಯಾಗಿ ಪರಿವರ್ತಿಸಿ - 'ಭುಜಬಲಯುತರಂ ಹಿತರನ್ ಈ ಸಭಾಮಧ್ಯದೊಳ್ ಕೊಬ್ಬಿನಿಂದ ಹೀಗೆ ತಿರಸ್ಕರಿಸಿ ಮಾತಾಡುವುದೇ? ನಾಲಗೆಯು ಕುಲವನ್ನು ಆಡಿ ತೋರಿಸುತ್ತದೇ ಅಲ್ಲವೇ' (ನಾಲಗೆ ಕುಲಮಂ ತುಬ್ಬುವವೋಲ್) ಎಂದುಬಿಡುತ್ತಾನೆ. ಇದರಿಂದ ತೀವ್ರವಾಗಿ ಘಾಸಿಗೊಂಡ ಕರ್ಣನು, ಕೋಪದಿಂದ ಕುಲದ ಪ್ರಶ್ನೆಯನ್ನೇ ತಿರಸ್ಕರಿಸುವ ಮಾತುಗಳನ್ನಾಡುತ್ತಾನೆ-

ಕುಲಮನೆಮುನ್ನ ಮುಗ್ಗಡಿಪರೇಂಗಳ ನಿಮ್ಮ ಕುಲಂಗಳಾಂತು ಮಾ
ರ್ಮಲೆವನಟ್ಟಿತಿಂಬುವೆ ಕುಲಂ ಕುಲಮಲ್ತು ಚಲಂಕುಲಂಗುಣಂ
ಕುಲಮಭಿಮಾನಮೊಂದೆಕುಲಮಣ್ಮುಕುಲಂಬಗೆವಾಗಳೀಗಳೀ
ಕಲಹದೊಳಣ್ಣನಿಮ್ಮಕುಲವಾಕುಲಮಂನಿಮಗುಂಟು ಮಾಡುಗುಂ

(ಮಾತಿಗೂ ಮುನ್ನ ಕುಲದ ಪ್ರಶ್ನೆಯನ್ನು ಯಾಕೆ ಎತ್ತುತ್ತಿದ್ದೀರಿ?

ಪ್ರತಿಭಟಿಸುವವರನ್ನು ನಿಮ್ಮ ಕುಲ ತಿಂದು ಹಾಕುತ್ತದೆಯೇ? ಕುಲ ಹುಟ್ಟಿನಿಂದ ಬರುವುದಿಲ್ಲ, ಅದು ಛಲ, ಗುಣ, ಅಭಿಮಾನ, ಆತ್ಮ ಗೌರವ, ಪರಾಕ್ರಮ ಇತ್ಯಾದಿಗಳಿಂದ ಬರುತ್ತದೆ. ಈ ಯುದ್ಧದಲ್ಲಿ ನಿಮ್ಮ ಕುಲವೇ ನಿಮಗೆ ವ್ಯಥೆಯನ್ನುಂಟು ಮಾಡಲಿದೆ).

ಕುರುಕ್ಷೇತ್ರ ಯುದ್ಧದ 15ನೇ ದಿವಸ ಭೀಕರವಾಗಿ ಯುದ್ಧ ಮಾಡುತ್ತಿದ್ದ ದ್ರೋಣನು ಮಗನಾದ ಅಶ್ವತ್ಥಾಮನ ಮರಣವಾರ್ತೆಯನ್ನು ತಪ್ಪಾಗಿ ತಿಳಿದು ಯುದ್ಧವನ್ನು ನಿಲ್ಲಿಸಿದಾಗ ಕರ್ಣನ ಮಾತು ನಿಜವೂ ಆಗಿಬಿಡುತ್ತದೆ.

ಪಂಪನು ಕುಲದ ಪ್ರಶ್ನೆಯನ್ನು ಕುರುಕ್ಷೇತ್ರ ಯುದ್ಧದ ಅಂತ್ಯದವರೆಗೂ ಕೊಂಡೊಯ್ಯುತ್ತಾನೆ. ದ್ರೋಣ ಸತ್ತಾಗ ಅಶ್ವತ್ಥಾಮನಿಗೆ ಪಟ್ಟಕಟ್ಟಲು ಕೃಪನು ದುರ್ಯೋಧನನ್ನು ಒತ್ತಾಯಿಸುವಾಗ ದುರ್ಯೋಧನನು 'ಕಲಶಜನಿಂ ಬಳಿಕ್ಕೆ ಕರ್ಣಂಗೆ' ಎನ್ನುತ್ತಾನೆ. ಕರ್ಣನ ಹೆಸರು ಕೇಳುತ್ತಲೇ ಉರಿದು ಬಿದ್ದ ಅಶ್ವತ್ಥಾಮನು 'ನಿಜದಿಂ ಭೂಪರೆಂಬುವರ್ ಅವಿವೇಕಿಗಳ್, ಸೂತಜನು ಅರ್ಜುನನ್ನು ಇರಿಯುವುದುಂಟೇ' 'ಅಂಬಿಗನೊಳಾದುದಿದು ಋಣ ಸಂಬಂಧಂ' ಎಂದು ವ್ಯಂಗ್ಯವಾಡುತ್ತಾನೆ. ಸೂತಪುತ್ರ ಪದ ಕಿವಿಗೆ ಬೀಳುತ್ತಲೇ ಹೆಡೆ ಎತ್ತಿದ ಸರ್ಪದಂತೆ ಫೂತ್ಕರಿಸಿದ ಕರ್ಣನು, ಎಷ್ಟು ಶಕ್ತಿಯಿದ್ದರೂ ಬ್ರಾಹ್ಮಣನ ಪೌರುಷಕ್ಕೆ ಹೆದರುವವರು ಇದ್ದಾರೆಯೇ? ನೀರೊಳ್ಳೆಗೆ ವಿಷ ಉಂಟು ಎಂದರೂ ಅದು ನೀರೊಳ್ಳೆಯೇ, ಅದು ಬಿಟ್ಟು ನೀರೊಳ್ಳೆ ನಾಗರ ಹಾವಾಗುವುದುಂಟೇ? ಯಾವುದೋ ನೆಪದಿಂದ ಆಯುಧವನ್ನು ಎಸೆದು ಸತ್ತವರ ಉದಾಹರಣೆ ನಮ್ಮ ಮುಂದಿಲ್ಲವೇ? ಎಂದು ಅಶ್ವತ್ಥಾಮನನ್ನು ಅಣಕಿಸುತ್ತಾನೆ. ಕೌರವ ಇಬ್ಬರನ್ನೂ ಹೇಗೋ ಸಮಾಧಾನಿಸುತ್ತಾನೆ. ಶಲ್ಯ ಸಾರಥ್ಯ ಸಂದರ್ಭದಲ್ಲಿಯೂ ಮತ್ತೆ ಕುಲದ ವಿಷಯ ಮುನ್ನೆಲೆಗೆ ಬರುತ್ತದೆ. 'ಮಾವಾ, ಕರ್ಣಂಗೆ ಸಾರಥಿಯಾಗಿ' ಎಂದು ಕೌರವ ಬೇಡಿಕೊಂಡಾಗ ಸಿಟ್ಟಿನಿಂದ ಬೆವತು ಹೋದ ಶಲ್ಯನು 'ನೀವು ಅರಸರು ಕಲಿಯನ್ನು ಹೇಡಿಯನ್ನಾಗಿ ಮಾಡಬಲ್ಲಿರಿ, ಹೇಡಿಯನ್ನು ಕಲಿಯನ್ನಾಗಿ ಮಾಡಬಲ್ಲಿರಿ' ಎಂದು ಛೇಡಿಸುತ್ತಾನೆ.

ಹೀಗೆ ಪ್ರತಿಹಂತದಲ್ಲೂ ಕುಲದ ಪ್ರಶ್ನೆಯೇ ಇದಿರಾದಾಗ ಅದನ್ನು ನಿವಾರಿಸಿಕೊಳ್ಳಲೇಬೇಕಾದ ಒತ್ತಡಕ್ಕೆ ಕರ್ಣ ಗುರಿಯಾಗುತ್ತಾನೆ. ಇಂಥ ಪರಿಸ್ಥಿತಿಗಳ ಬಗ್ಗೆ ಪಂಪನಿಗೆ ಆಳವಾದ ತಿಳಿವಳಿಕೆಯಿತ್ತು. ಹಾಗಾಗಿಯೇ ಆತ ತನ್ನ ಕಾವ್ಯದ ನಾಯಕ ಅರ್ಜುನನೇ ಹೌದಾದರೂ, ಅದನ್ನು ಮರೆತು 'ನೆನೆಯದಿರಣ್ಣ ಭಾರತದೊಳಿಂ ಪೆರರಾರುಮನೊಂದೆ ಚಿತ್ತದಿಂ ನೆನೆವೊಡೆ ಕರ್ಣನಂ ನೆನೆಯೇ' ಎಂದು ಕರ್ಣನ ಗುಣಗಾನ ಮಾಡುತ್ತಾನೆ. ದೊಡ್ಡ ಕವಿಗಳಿಗೆ ಮಾತ್ರ ಸಾಧ್ಯವಾಗುವ ಸಂಗತಿಯಿದು. ಅವರು ಬರೆಯುವ ಹೊತ್ತಲ್ಲಿ ಎಲ್ಲ ಹಂಗುಗಳಿಂದ ಪಾರಾಗುತ್ತಾರೆ.

ಪಂಪನ ಕೌರವನು ಕರ್ಣನನ್ನು ಯಾವುದೇ ಸಂದರ್ಭದಲ್ಲಿ ಬಿಟ್ಟುಕೊಡುವುದಿಲ್ಲ. ಪಂಪ ಭಾರತದ ಸುಪ್ರಸಿದ್ಧ ಪದ್ಯಗಳಲ್ಲೊಂದಾದ 'ನೆತ್ತಮನಾಡಿ ಭಾನುಮತಿ ಸೋಲ್ತೊಡೆ' ಯು ಇವರಿಬ್ಬರ ಸ್ನೇಹದ ಜೊತೆಗೆ ಭಾನುಮತಿಯನ್ನೂ ಒಳಗೊಳ್ಳುತ್ತದೆ. ಕೃಷ್ಣನು ಕರ್ಣನನ್ನು ಪಾಂಡವರ ಕಡೆಗೆ ಕರೆಯುವ ಹೊತ್ತಲ್ಲಿ ಕರ್ಣ ಈ ಘಟನೆಯನ್ನು ನೆನಪಿಸಿಕೊಳ್ಳುತ್ತಾನೆ. ಅದರ ಪ್ರಕಾರ, ಒಂದು ದಿವಸ ಕರ್ಣ ಮತ್ತು ಭಾನುಮತಿ ಇಬ್ಬರೇ ಪಗಡೆಯಾಡುತ್ತಾರೆ. ಆಟದಲ್ಲಿ ಭಾನುಮತಿ ಸೋಲುತ್ತಾಳೆ. ಆಗ ಪಂಥಕ್ಕಿಟ್ಟ ವಸ್ತುವನ್ನು ಕೊಡು ಎಂದು ಕರ್ಣನು ಅವಳನ್ನು ಕಾಡುತ್ತಾನೆ. ಆದರೆ ಯಾಕೋ ಭಾನುಮತಿ ಹಿಂಜರಿಯುತ್ತಾಳೆ. ಹಠಬಿಡದ ಕರ್ಣನು ಬಹುಶಃ ಆಕೆಯ ಸೊಂಟದ ಲಂಬಣಕ್ಕೆ (ಡಾಬುವಿಗೆ) ಕೈ ಹಾಕಿ ಎಳೆಯುತ್ತಾನೆ. ಲಂಬಣ ಹರಿದು ಮುತ್ತೆಲ್ಲಾ ನೆಲದಲ್ಲಿ ಹರಡುತ್ತದೆ. ಯಾವುದೋ ಉತ್ಸಾಹದಲ್ಲಿ ನಡೆದು ಹೋದ ಘಟನೆಯಿಂದ ಇಬ್ಬರೂ ಸಂಕೋಚಕ್ಕೊಳಗಾಗಿ ಕಸಿವಿಸಿಗೊಳಗಾಗುತ್ತಿರುವಾಗ ಅಲ್ಲಿಗೆ ಬಂದ ದುರ್ಯೋಧನನು 'ಸಂಕೋಚವಿಲ್ಲದೆ ಮುತ್ತುಗಳನ್ನು ಆಯ್ದುಕೊಳ್ಳಿ' ಎಂದು ಹೇಳಿ ಇಬ್ಬರನ್ನೂ ನಿರಾಳಗೊಳಿಸುತ್ತಾನೆ. ಕರ್ಣ ಭಾನುಮತಿಯರ ನಡುವಣ ಈ ಬಗೆಯ ಆಪ್ತ ಸಂಬಂಧವು ವ್ಯಾಸ ಭಾರತದಲ್ಲಿ ಇಲ್ಲ. ತಮಿಳು ಭಾರತದಲ್ಲಿ ಇದೆಯಾದರೂ ಅದು ಪಂಪೋತ್ತರ ಯುಗಕ್ಕೆ ಸೇರಿದ್ದು. ಪಂಪ ಈ ಘಟನೆಯನ್ನು ಜನಪದ ಭಾರತಗಳಲ್ಲಿ ಕೇಳಿಸಿಕೊಂಡನೋ ಅಥವಾ

ಇದು ಅವನದೇ ಸೃಷ್ಟಿಯೋ ಎಂಬುದೂ ತಿಳಿದಿಲ್ಲ. ಕನ್ನಡ ವಿಮರ್ಶಕರು ಮಾತ್ರ ಈ ಘಟನೆಯ ಬಗ್ಗೆ ಬಹಳ ಚರ್ಚೆ ನಡೆಸಿದ್ದಾರೆ.

10ನೇ ಶತಮಾನದ ವೀರಯುಗದ ಮೌಲ್ಯಗಳಿಗೆ ಅನುಗುಣವಾಗಿ ಬದುಕಿದ, ಹೋರಾಡಿದ ದುರ್ಯೋಧನನ್ನು 'ಏನಭಿಮಾನಧನಂ ಸುಯೋಧನಂ' ಎಂದು ಪಂಪ ಕೊಂಡಾಡುತ್ತಾನೆ.

ಹೀಗೆ ವ್ಯಾಸನ ಮಹಾಭಾರತವು ಕನ್ನಡ ಭಾರತವಾಗಿ, ವಿಕ್ರಮಾರ್ಜುನ ವಿಜಯವಾಗಿ ಹೊಸ ರೂಪ ಧರಿಸಿ ಬದುಕುಳಿಯಿತು. ಹೊಸ ಕಥನಗಳು ಸಿದ್ಧಗೊಳ್ಳುವುದೇ ಹೀಗೆ. ಗಮನಿಸಬೇಕಾದ ಮುಖ್ಯ ವಿಷಯವೆಂದರೆ, ಪಂಪನ ವಿಕ್ರಮಾರ್ಜುನ ವಿಜಯವು 10ನೇ ಶತಮಾನದಲ್ಲಿಯೇ ಸ್ಥಗಿತಗೊಂಡಿಲ್ಲ. ವಿಕ್ರಮಾರ್ಜುನ ವಿಜಯದ 13ನೇ ಆಶ್ವಾಸದಿಂದ ಪ್ರೇರಣೆ ಪಡೆದ ಕವಿಚಕ್ರವರ್ತಿ ರನ್ನನು ಅದನ್ನೇ ಒಂದು ಸ್ವತಂತ್ರ ಕಾವ್ಯವನ್ನಾಗಿ ಪರಿವರ್ತಿಸಿ 'ಸಾಹಸ ಭೀಮ ವಿಜಯಂ' ಬರೆದ. ಮುಂದೆ ಕುಮಾರವ್ಯಾಸನೂ 'ಕರ್ಣಾಟ ಭಾರತ ಕಥಾಮಂಜರಿ'ಯನ್ನು ಬರೆದ. ಅದು ಗಮಕಿಗಳ ಮೂಲಕ ಹಾಡುವ ಕಾವ್ಯವಾಗಿ, ಹರಿಕತೆಗಳ ಮೂಲಕ ಪ್ರದರ್ಶನ ಪಠ್ಯಗಳಾಗಿ, ಯಕ್ಷಗಾನದ ಮೂಲಕ ಕುಣಿಯುವ ಪಠ್ಯಗಳಾಗಿ ಜನರ ಕಡೆಗೆ ನಡೆಯುತ್ತಲೇ ಇದ್ದುವು. ಹೀಗೆ ನೋಡುವಾಗ ಪಂಪನು ನಮ್ಮ ಸುತ್ತ ಈಗಲೂ ಇದ್ದಾನೆ ಎಂಬ ಭಾವ ಮೂಡುತ್ತದೆ. ಪಂಪನ 'ನೆಲಕ್ಕಿರಿವೆನೆಂದು ಬಗೆದರೆ ಛಲಕ್ಕಿರಿವೆಂ' ಎಂಬ ಮಾತನ್ನು ಗಮಕಿಗಳು, ಹರಿದಾಸರು, ಯಕ್ಷಗಾನ ಕಲಾವಿದರು, ಅಧ್ಯಾಪಕರು ಈಗಲೂ ಹೇಳುತ್ತಿದ್ದಾರೆಂದರೆ ಪಂಪ ನಮ್ಮ ಸುತ್ತ ಮುತ್ತ ಇದ್ದಾನೆಂದೇ ಅರ್ಥ ತಾನೇ?

ಒಟ್ಟಿನಿಂದ ಯಾವ ದೃಷ್ಟಿಕೋನದಿಂದ ನೋಡಿದರೂ ಪಂಪನು ದೊಡ್ಡಕವಿಯೇ. ಅದರಿಂದಲೇ ಅತ ನಾಡೋಜ.

****

ಸಮನ್ವಯ ಕವಿ ಪಂಪ

– ಶ್ರೀ ಪಿ. ಕೃಷ್ಣ ಭಟ್, ಕಾಸರಗೋಡು

ಕನ್ನಡದ ಆದಿಕವಿ ಎಂಬ ಗೌರವಕ್ಕೆ ಭಾಜನನಾದ ಹಳಗನ್ನಡದ ಮಹಾಕವಿ ಪಂಪನ ಎರಡು ಮಹೋನ್ನತ ಕೃತಿಗಳು ಆದಿಪುರಾಣ ಮತ್ತು ವಿಕ್ರಮಾರ್ಜುನ ವಿಜಯ. ಇವೆರಡೂ ಚಂಪು ಕೃತಿಗಳು. "ಮುನ್ನಿನ ಕಬ್ಬಮೆಲ್ಲಮೆ ಇಕ್ಕಿ ಮೆಟ್ಟಿದ' ಅಮೋಘ ಕೃತಿಗಳು. ಮೊದಲನೆಯದರಲ್ಲಿ ಜಿನಾಗಮವನ್ನು, ಎರಡನೆಯದರಲ್ಲಿ ಲೌಕಿಕವನ್ನು ಬೆಳಗಿರುವುದಾಗಿ ಕವಿಯೇ ಉದ್ಘೋಷಿಸಿಕೊಂಡಿದ್ದಾನೆ. ತನ್ನ ಕೆಲವು ವ್ಯಕ್ತಿಗತ ವಿವರಗಳನ್ನು ಕೃತಿಗಳಲ್ಲಿ ಕೊಟ್ಟಿರುವುದರಿಂದ ಆತನ ವ್ಯಕ್ತಿತ್ವ ಹಾಗೂ ಜೀವನದೃಷ್ಟಿಯನ್ನು ತಿಳಿಯಬಹುದಾಗಿದೆ. ತನ್ನ ಬಗ್ಗೆ ಬುಧ ಸಮೂಹ ಏನು ಹೇಳುತ್ತಿದೆ ಎನ್ನುವುದನ್ನು ತಿಳಿಸುವ ನೆಪದಲ್ಲಿ ತನ್ನ ದೈಹಿಕ ಸೌಂದರ್ಯ ಭೋಗ ಜೀವನ ಭಕ್ತಿ ಇತ್ಯಾದಿಗಳನ್ನು ಬಿಚ್ಚಿಡುತ್ತಾನೆ. (ಆದಿಪುರಾಣ 26 ರಿಂದ 28ನೇ ಪುಟದ ವರೆಗೆ) ಅವನ ಮೈಬಣ್ಣ ಬಾಳೆಯ ಮೋತೆಯ ಹಾಗೆ ನಸುಗಪ್ಪಾದುದು. ಮೃದುವಾದ ಗುಂಗುರು ಕೂದಲು ಮುಖವಾದರೂ ಕಮಲದಂತೆ ಮನೋಹರ. ಎತ್ತರವು ಅಲ್ಲ ಗಿಡ್ಡವೂ ಅಲ್ಲ ಎನ್ನುವಂತಿರುವ ನಿಲುವು. ಗಂಡು ದನಿ 'ದುಂಧುಭಿ ಗಂಭೀರ ನಿನದಂ'. ಆದರೆ ಮಾತು ಮೃದು ಹಿತ ಮತ್ತು ಮಿತ. ಅಚ್ಚುಕಟ್ಟಾದ ಉಡುಗೆ ತೊಡುಗೆ, ಒಟ್ಟಿನಲ್ಲಿ ಅಭಿನವ ಕಾಮ. ಅವನ ಮಾತಿನಲ್ಲೇ ಹೇಳುವುದಾದರೆ 'ವನಿತಾ

ಕಟಾಕ್ಷ ಕುವಲಯವನ ಚಂದ್ರಂ, ಯುವತೀ ಜಘನ ಕಾಂಚೀ ರತ್ನಂ' 'ಕೇರಳ ವಿಟೀ ಕಟೀ ಸೂತ್ರಾರುಣಮಣಿ, ಮಲಯ ಯುವತಿ ದರ್ಪಣನ್, ಆಂಧ್ರೀ ನೀರಂಧ್ರ ಬಂಧುರಸ್ತನಹಾರನ್' ಎನಿಸಿದವನು (ಆದಿಪುರಾಣ 1-20,21). "ಸಂಸಾರ ಸಾರೋದಯಂ ಸರಸ್ವತೀ ಮಣಿಹಾರಂ ಸುಕವಿ ಜನಮಾನಸೋತಂಸ ಹಂಸಂ" ಕವಿತಾಗುಣಾರ್ಣವಂ ಮುಂತಾದ ತನ್ನ ಬಿರುದುಗಳನ್ನು ಘೋಷಿಸುವ ಮೂಲಕ ಸಮಾಜದಲ್ಲಿ ತನಗಿದ್ದ ಪ್ರತಿಷ್ಠೆಯನ್ನು ತೋರ್ಪಡಿಸಿಕೊಂಡಿದ್ದಾನೆ. ಒಟ್ಟಿನಲ್ಲಿ ಆತನು ಜೀವನದ ಸುಖ ಸಂತೋಷಗಳನ್ನು ಮನಸಾರೆ ಅನುಭವಿಸಿದವನು ಎಂಬುದು ತಾತ್ಪರ್ಯ. ಆದರೆ ಅಷ್ಟಕ್ಕೆ ಸೀಮಿತನಲ್ಲ "ಸುರದುಂದುಭಿ ಪತಿಚರಣ ಕಮಳ ಭೃಂಗಂ" ಎನ್ನುವಷ್ಟರ ಮಟ್ಟಿಗೆ ಜಿನಭಕ್ತನೂ ಹೌದು. ಹಾಗೆಂದು ಅಹಿಂಸಾವಾದಿಯಾಗಿ ಸುಮ್ಮನೆ ಕುಳಿತವನಲ್ಲ, ತಾನು ಬದುಕಿದ್ದ ಶಾಸ್ತ್ರಯುಗಕ್ಕೆ ಒಪ್ಪುವಂತೆ ಚತುರಂಗ ಸೈನ್ಯದ ಎದೆಯನ್ನು ತಲ್ಲಣಗೊಳಿಸುತ್ತಿದ್ದವನು, ತನ್ನೊಡೆಯನಿಗಾಗಿ (ದೊರೆ ಅರಿಕೇಸರಿ) ರಣಾಂಗಣದಲ್ಲಿ ವಿರೋಧಿ ನಾಯಕರ ಸಮೂಹಗಳನ್ನೇ ಹೊಡೆದೋಡಿಸಿದ ಕೀರ್ತಿ ಅವನದು. "ಏಂ ಕಲಿಯೋ ಸತ್ಕವಿಯೋ ಕವಿತಾ ಗುಣಾರ್ಣವಂ" ಎಂಬುದು ಅವನ ಕೀರ್ತಿಯನ್ನು ಸಾರುವಂತಹ ಮನೆ ಮನೆ ಮಾತಾಗಿತ್ತು. ಕೃತಿ ರಚನೆಗೆ ಹಿನ್ನೆಲೆಯಾಗಿದ್ದ ಅವನ ಮನೋಧರ್ಮ, ರಸಿಕತೆ, ಜೀವನ ಪ್ರೀತಿ ಸಮಾಜಮುಖೀ ಚಿಂತನೆ, ನಾಡು ನುಡಿಯ ಅಭಿಮಾನ, ಬಹುಶ್ರುತತೆ ಎಲ್ಲವೂ ಗಮನಿಸತಕ್ಕವುಗಳಾಗಿವೆ.

ಪಂಪನ ಧಾರ್ಮಿಕ ಕೃತಿಯಾದ ಆದಿಪುರಾಣವು ತ್ರಿಷಷ್ಠಿಶಲಾಕಪುರುಷದಲ್ಲಿ ಒಬ್ಬನೂ, ಪ್ರಥಮ ತೀರ್ಥಂಕರನೂ ಆದ ಪುರುದೇವ ಅಥವಾ ಆದಿನಾಥನ ಆಧ್ಯಾತ್ಮಿಕ ಚರಿತ್ರೆಯಾಗಿದೆ. ಜನ್ಮ ಜನ್ಮಾಂತರಗಳವರೆಗೆ ಸಾಗಿ ಬರುವ ಆಧ್ಯಾತ್ಮಿಕ ಸಾಧನೆ ಲೌಕಿಕ ಭೋಗ ವಿಭಾವಗಳ ನಿಷ್ಫಲತೆಯನ್ನು ಸಾರುವ ಸಂದೇಶಗಳನ್ನು ಒಳಗೊಂಡ ಈ ಕಾವ್ಯಕ್ಕೆ ಕನ್ನಡದ ಜೈನ ಧಾರ್ಮಿಕ ಪುರಾಣಗಳ ಸಾಲಿನಲ್ಲಿ ವಿಶಿಷ್ಟವಾದ ಸ್ಥಾನ ಸಂದಿದೆ. ಈ ಕೃತಿಯ ನಿರ್ವಹಣೆಯಲ್ಲಿ ತಾನು ತೋರಿದ ಪ್ರಧಾನ ತಂತ್ರದ ಬಗ್ಗೆ ಕವಿಯ ಹೇಳಿಕೆ

ಇದುವೇ ಸುಕವಿಪ್ರಮೋದಪ್ರದ
ಮಿದುವೆ ಸಮಸ್ತಭವ್ಯಲೋಕಪ್ರಮುದ
ಪ್ರದಮೆನೆ ನೆಗಟ್ಟಿದಾದಿಪುರಾ
ಣದೊಳಟಿವುದು ಕಾವ್ಯಧರ್ಮಮಂ ಧರ್ಮಮುಮಂ (ಆ.ಪು.1–38)

ಇದು ಸಹೃದಯರ ಹೃದಯಕ್ಕೆ ಅಹ್ಲಾದವನ್ನುಂಟುಮಾಡುತ್ತದೆ. ಜಿನಭಕ್ತರಿಗೆ ಅತಿಯಾದ ಆನಂದವನ್ನು ಕೊಡುತ್ತದೆ. ಆ ರೀತಿಯಲ್ಲಿ ಆದಿಪುರಾಣದಲ್ಲಿ ಜಿನಧರ್ಮವನ್ನೂ ಕಾವ್ಯಧರ್ಮವನ್ನೂ ತಿಳಿದುಕೊಳ್ಳುವುದು' ಎಂಬುದು ಇದರ ಅಂತರಾರ್ಥ. ಇದುವೇ ಧರ್ಮ ಮತ್ತು ಕಾವ್ಯ ಧರ್ಮದ ಸಮನ್ವಯದ ಬಗೆ. ಪದ್ಯದಲ್ಲಿ ಜಿನ ಧರ್ಮ ಎಂದು ಪ್ರತ್ಯೇಕಿಸಿ ಹೇಳದಿರುವುದು ಅರ್ಥವತ್ತಾಗಿದೆ. 'ಧರ್ಮ' ಎಂಬುದರ ವ್ಯಾಪ್ತಿಯಲ್ಲಿ ಜಿನ ಧರ್ಮ, ಲೋಕಧರ್ಮ, ಮಾನವ ಧರ್ಮ ಎಲ್ಲವೂ ಒಳಗೊಂಡು ಕವಿಯ ದೃಷ್ಟಿ ವೈಶಾಲ್ಯವನ್ನು ಸಾರಿ ಹೇಳುತ್ತವೆ.

ಮಹಾಕವಿ ಪಂಪನು ನಿಜವಾದ ಅರ್ಥದಲ್ಲಿ ಒಬ್ಬ ಸಮನ್ವಯ ಕವಿ. ವ್ಯಕ್ತಿಗತ ಬದುಕಲ್ಲಿಯೂ ಕಾವ್ಯ ಕರ್ಮದಲ್ಲಿಯೂ ಸಮನ್ವಯವನ್ನು ಸಾಧಿಸಿದ ಪ್ರತಿಭಾವಂತ. ಲೌಕಿಕ ಭೋಗದಲ್ಲಿಯೂ ಜಿನಭಕ್ತಿಯಲ್ಲಿಯೂ ಅಹಿಂಸೆ ಮತ್ತು ವೀರ ಜೀವನದಲ್ಲಿಯೂ ಸಮನ್ವಯ ಮಾರ್ಗ, ವಿಕ್ರಮಾರ್ಜುನ ವಿಜಯದಲ್ಲಿ ವ್ಯಾಸಭಾರತ ಮತ್ತು ಸಮಕಾಲೀನ ಚರಿತ್ರೆಯ ಸಮನ್ವಯತೆಯನ್ನು ತೋರಿದ್ದಾನೆ. ಕಾವ್ಯ ಭಾಷೆಯ ಮಟ್ಟಿಗೆ ಸಂಸ್ಕೃತ ಕನ್ನಡಗಳ ಸುಂದರವಾದ ಸಮನ್ವಯ. ಪುರಾಣ ಗ್ರಂಥ ರಚನೆಯಲ್ಲಿಯೂ ಪೌರಾಣಿಕ ಮನೋಧರ್ಮ ಮತ್ತು ಲೋಕ ಸ್ವಭಾವದ ಸಮನ್ವಯ. ಹೀಗೆ ಪಂಪನೊಬ್ಬ ಸಮನ್ವಯವಾದಿಯಾದ ಕವಿಯಾಗಿ ಕಂಗೊಳಿಸುತ್ತಿದ್ದಾನೆ. ಆದಿಪುರಾಣದಲ್ಲಿ ಸಾಧಿಸಿರುವ ಧರ್ಮ, ಕಾವ್ಯಧರ್ಮ ಸಮನ್ವಯದ ಕುರಿತು ಹಕ್ಕಿನೋಟ ಬೀರುವ ಪ್ರಯತ್ನವನ್ನಿಲ್ಲಿ ಮಾಡಲಾಗಿದೆ.

ಧರ್ಮ ಮತ್ತು ಕಾವ್ಯಧರ್ಮ ಸಮನ್ವಯ ವೆಂದರೇನು? ಇದು ವಿಚಾರಣೀಯ ವಿಷಯ. ಇಲ್ಲಿ ಜಿನಾಗಮದ ಮೂಲ ತತ್ವಗಳ ಪ್ರತಿಪಾದನೆ ಅಥವಾ ಜಿನಧರ್ಮ ಬೋಧೆಯೇ ಜೈನ ಪುರಾಣದ ಮೂಲೋದ್ದೇಶ. ಧರ್ಮಾವಲಂಬಿಗಳಲ್ಲಿ ಧರ್ಮದ ಬಗೆಗಿನ ಎಚ್ಚರವನ್ನು ಸದಾ

ಜಾಗೃತವಾಗಿರುವಂತೆ ಮಾಡುವುದು, ಧಾರ್ಮಿಕ ಮಹಾಪುರುಷನ ಕಥೆಯಿಂದ ಓದುಗರಿಗೆ ಸಂತೋಷವನ್ನು ನೀಡುವುದು ಪುರಾಣದ ಕಾರ್ಯ. ಆದಿಪುರಾಣವನ್ನು ಲೋಕಕಲ್ಯಾಣಕ್ಕಾಗಿ ತಾನು ರಚಿಸುತ್ತಿರುವುದಾಗಿ ಪಂಪ ಹೇಳಿಕೊಂಡಿದ್ದಾನೆ.

"ಪ್ರಾಣಿಹಿತಮಂ ವಿನೇಯ
ಪ್ರೀಣನಕರ್ಮಮಂ ಜಗತ್ತ್ರಯಪ್ರಕಟಿತಕ
ಲ್ಯಾಣಮನೀ ಈ ನೆಗೞ್ದಾದಿಪು
ರಾಣಮನಪರಿಮಿತಭಕ್ತಿಯಿಂ ವಿರಚಿಸುವೆಂ (ಆ.ಪು ಪುಟ–42)

ಎಂಬಲ್ಲಿ ಕವಿಯ ಉದ್ದೇಶ ಸ್ಪಷ್ಟವಿದೆ. "ಆದಿದೇವ ಚರಿತಂ ಕರ್ಣಾಮೃತಸ್ಯಂದಿ ಅಕ್ಕೆ ಇದು ಭವ್ಯಾವಳಿಗೆ' (ಆ.ಪು.16–79) ಎಂಬುದು ಕವಿಯ ಹಾರೈಕೆ. ಜಿನಧರ್ಮ ಪರವಾದ ಚಿಂತನೆಗಳು ಧಾರ್ಮಿಕ ಪುರುಷರ ಜನ್ಮಾಂತರದ ಕಥೆಗಳು ಕಾವ್ಯದುದ್ದಕ್ಕೂ ಕಾಣಿಸಿಕೊಳ್ಳುತ್ತವೆ. ಆದುದರಿಂದ "ಇದರೊಳ್ ಅಱಿವುದು ಧರ್ಮಮುಮಂ" ಎಂಬ ಮಾತು ಸಾರ್ಥಕಗೊಳ್ಳುತ್ತದೆ.

ಹೇಳುವುದನ್ನು ಮನೋಹರವಾಗಿ ಹೇಳಿ ರಸಾಸ್ವಾದನೆಯನ್ನು ಉಂಟು ಮಾಡುವುದು ಕಾವ್ಯಮಾರ್ಗ. ರಸಭಾವೋಪೇತವಾದ ವರ್ಣನೆಗಳು, ಪಾತ್ರ ಪೋಷಣೆ, ರಸನಿರೂಪಣೆ, ಔಚಿತ್ಯಪೂರ್ಣವಾದ ಭಾಷೆಯ ಬಳಕೆ ಇವೇ ಮೊದಲಾದವು ಕಾವ್ಯದ ರೀತಿ. ವಸ್ತು ಜಿನಕಥೆಯಾದರೂ ಅದನ್ನು ಸಹೃದಯರಿಗೆ ಅಹ್ಲಾದವುಂಟಾಗುವಂತೆ ನಿರೂಪಿಸಿದರೆ ಮಾತ್ರ ಅದು ಕಾವ್ಯ.

ಯಾವುದು ಕಾವ್ಯ? ಎಂಬುದನ್ನು ಪಂಪನ ಮಾತಿನಲ್ಲಿ ಕೇಳಬಹುದು.

ಮೃದುಪದಗತಿಯಿಂ ರಸಭಾ
ವದ ಪೆರ್ಚಿಂ, ಪುಣ್ಯವನಿತೆಯವೋಲ್ ಕೃತಿ ಸೌಂದ
ರ್ಯದ ಚಾತುರ್ಯದ ಕಣಿಯೆನೆ,
ವಿದಗ್ಧ ಬುಧಜನದ ಮನಮನಲೆಯಲೆ ವೇಡಾ (ಆ.ಪು:1–17)

ಕಾವ್ಯದಲ್ಲಿ ಸರಳವಾದ ಪದಗಳು, ರಸಭಾವಗಳು, ಅಲಂಕಾರಗಳು, ಚಮತ್ಕಾರಗಳು ಇವೆಲ್ಲ ಇದ್ದರೆ ಅದು ಓದುಗರ ಮನಸ್ಸನ್ನು

ವಶಪಡಿಸಿಕೊಳ್ಳುತ್ತದೆ ಎಂಬುದು ಕವಿ ನಿರೂಪಣೆಯ ಸಾರ. ಇಲ್ಲಿ ಕಾವ್ಯವನ್ನು ವಾರಾಂಗನೆಯಂತೆ ಕಾವ್ಯಾತ್ಮಕವಾಗಿಯೇ ನಿರೂಪಿಸುವುದು ಅರ್ಥವತ್ತಾಗಿದೆ. ಪಂಪನ ಕಾವ್ಯ ರಚನೆ ಇದೇ ಹಾದಿಯಲ್ಲಿ ಗಮಿಸಿ ಆದಿಪುರಾಣ ಒಂದು ಅದ್ಭುತ ಕಾವ್ಯ, ಕನ್ನಡದ ಶ್ರೇಷ್ಠ ಕಾವ್ಯಗಳಲ್ಲಿ ಒಂದು ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ.

ಆದಿಪುರಾಣಕ್ಕೆ ಮುಖ್ಯವಾದ ಮೂಲ ಆಕರ ಜಿನಸೇನಾಚಾರ್ಯರ ಪೂರ್ವಪುರಾಣ. ವಸ್ತು ಒಂದೇ ಆದರೂ ಜಿನಸೇನಾಚಾರ್ಯರು ಮತ್ತು ಪಂಪನ ನಿರೂಪಣೆಗಳಲ್ಲಿ ಅಂತರವಿದೆ. ಕಾರಣ, ಅವರು ಆಯ್ದುಕೊಂಡಿರುವ ಮಾರ್ಗಗಳಲ್ಲಿರುವ ಭಿನ್ನತೆ. ಜಿನಸೇನನದು ಪುರಾಣ ಮಾರ್ಗ. ಅವರ ಗುರಿ ಧರ್ಮ ಬೋಧನೆ. ಶುದ್ಧ ಕಾವ್ಯದ ದೃಷ್ಟಿಯಿಂದ ಭಾರವೆನ್ನಬಹುದಾದ ಮತಿಯು ಪ್ರಕ್ರಿಯೆಗಳ ಚರ್ಚೆ ಹಾಗೂ ಬೋಧನೆಗಳು ಪೂರ್ವಪುರಾಣದಲ್ಲಿ ತುಂಬಿಕೊಂಡಿವೆ. ಅಲ್ಲಿ ರಮಣೀಯವಾದ ಕಲ್ಪನೆಗಳು ಉಪಮಾ ರೂಪಕಾದಿ ಅಲಂಕಾರಗಳೂ ಕಾಣಿಸಿಕೊಳ್ಳುತ್ತಿವೆಯಾದರೂ ಧರ್ಮಕ್ಕೆ ಅಲ್ಲಿ ಮೊದಲ ಮಣೆ ಸಂದಿದೆ.

ಪಂಪನದು ಕಾವ್ಯ ಮಾರ್ಗ. ಅವನು ಧರ್ಮ ಬೋಧಕನಲ್ಲ. ರಸಿಕಾಗ್ರಣಿ ಎನಿಸಿದ ಕವಿಶ್ರೇಷ್ಠ. ಅವನ ಕೃತಿಯಲ್ಲಿ ಕಾವ್ಯಧರ್ಮಕ್ಕೆ ಅಗ್ರಪೂಜೆ ಸಲ್ಲುತ್ತದೆ. ಪಂಪನ ಕಾವ್ಯಪ್ರಜ್ಞೆಯ ಧಾರ್ಮಿಕ ಅಂಶಗಳನ್ನು ಸಾಧ್ಯವಾದಷ್ಟು ಮಿತಗೊಳಿಸಿ, ರಸಸ್ಥಾನಗಳನ್ನು ಗುರುತಿಸಿ, ರಮಣೀಯ ಸೌಂದರ್ಯವನ್ನು ಮೊಗೆ ಮೊಗೆದು ಉಣಬಡಿಸುತ್ತದೆ. ಪುರಾಣ ವಸ್ತುವಿನ ನಿರ್ವಹಣೆಯಲ್ಲಿರುವ ನಿರ್ಬಂಧಗಳಿಗೆ ಒಳಗಾಗಿಯೇ ಅವನ ಕಾವ್ಯಸೃಷ್ಟಿ ಮುಂದುವರಿಯುತ್ತದೆ. ತನ್ನ ಕಾವ್ಯದಲ್ಲಿ ಧರ್ಮ ಮತ್ತು ಕಾವ್ಯಧರ್ಮದ ಸಮನ್ವಯದ ಸಲುವಾಗಿ ಕೆಲವೊಂದು ದಿಟ್ಟ ಹೆಜ್ಜೆಗಳನಿಟ್ಟಿದ್ದಾನೆ.

ಜೈನ ಪುರಾಣಗಳು ಹೇಳುವ 24 ಜನ ತೀರ್ಥಂಕರರಲ್ಲಿ ಮೊದಲನೆಯವನಾದ ಪುರುದೇವನ ಚರಿತೆ ಆದಿಪುರಾಣದ ವಸ್ತು. ಇದಕ್ಕೆ ಪೂರಕವಾಗಿ ಗುರುದೇವನ ಪೂರ್ವ ಭವಾವಳಿ ಮತ್ತು ಆತನ ಪ್ರಥಮ ಪುತ್ರನೂ ಮೊದಲನೆಯ ಚಕ್ರವರ್ತಿಯೂ ಆದ ಭರತ ಚಕ್ರೇಶ್ವರನ ಚರಿತೆಯು ಮುಖ್ಯವಾಗಿ ಬೆರೆತುಕೊಂಡೇ ಬರುತ್ತದೆ. ಆದಿಪುರಾಣದ 16 ಆಶ್ವಾಸಗಳಲ್ಲಿ ಬರುವ ಕಥೆಯಲ್ಲಿ ಮೂರು

ವಿಭಾಗಗಳನ್ನು ಗುರುತಿಸಲಾಗುತ್ತದೆ. ಆದಿನಾಥನ ಪೂರ್ವ ಭವಗಳ ವರ್ಣನೆ ಬರುವ ಆರಂಭದ ಆರು ಆಶ್ವಾಸಗಳ ಕಥಾಂಶ ಮೊದಲನೆಯದು. ವೃಷಭನಾಥನ ಜನ್ಮ ಮೊದಲಾಗಿ ಆತನಿಗೆ ಕೇವಲ ಜ್ಞಾನೋತ್ಪತ್ತಿ ಪ್ರಾಪ್ತವಾಗುವವರೆಗಿನ ಕಥಾಂಶವಿರುವ, ಮುಂದಿನ ನಾಲ್ಕು ಆಶ್ವಾಸಗಳ ಎರಡನೇ ಭಾಗ. ಭರತ ಚಕ್ರವರ್ತಿಯ ದಿಗ್ವಿಜಯ, ಭರತ ಬಾಹುಬಲಿ ವ್ಯಾಯೋಗ ಹಾಗೂ ಪುರು ದೇವನ ಪರಿನಿರ್ವಾಣದ ಕಥಾಭಾಗವಿರುವ ಮುಂದಿನ ಆರು ಆಶ್ವಾಸಗಳ ಮೂರನೇ ಭಾಗ. ಹಾಗೆ ನೋಡಿದರೆ ತೀರ್ಥಂಕರನಾಗುವ ಆತನ ಪೂರ್ವಭವಾವಳಿ ಆತನ ಚರಮ ಜನ್ಮದ ಜೀವನ, ಅಲ್ಲಿ ನಡೆಯುವ ಪಂಚಕಲ್ಯಾಣಗಳ ವರ್ಣನೆ ಎಂಬಿವು, ಜೈನ ಪುರಾಣ ಒಂದರ ಬಹುಮುಖ್ಯವಾದ ಅಂಗಗಳು. ಕೆಲವು ತೀರ್ಥಂಕರರ ಪುರಾಣಗಳಲ್ಲಿ ಚಕ್ರವರ್ತಿಗಳ ಕಥೆಗಳು ಸೇರ್ಪಡೆಗೊಳ್ಳದಿರುವುದು ಉಂಟು. ಆದರೆ ಆದಿಪುರಾಣದಲ್ಲಿ ಈ ಮೂರು ಭಾಗಗಳು ಒಂದೇ ವಸ್ತುವಿನ ಅವಿಭಾಜ್ಯ ಅಂಗಗಳಾಗಿ ಚಿತ್ರಗೊಳ್ಳುತ್ತಿವೆ. ಇದು ಆದಿಪುರಾಣದ ವೈಶಿಷ್ಟ್ಯವೂ ಹೌದು.

ಪೂರ್ವಪುರಾಣದೊಂದಿಗೆ ಹೋಲಿಸಿ ನೋಡಿದಾಗ ಪಂಪನು ಆದಿಪುರಾಣದ ಮೂಲ ಕತೆಯ ಹಂದರದಲ್ಲಿ ಯಾವುದೇ ವ್ಯತ್ಯಾಸವನ್ನು ಮಾಡಿಕೊಂಡಂತೆ ತೋರುವುದಿಲ್ಲ. ನಿರೂಪಣಾ ಕ್ರಮದಲ್ಲಿಯೂ ವ್ಯತ್ಯಾಸವಿಲ್ಲ. ಆದರೆ ಅಲಂಕರಣದಲ್ಲಿ ಪಂಪ ತನ್ನತನವನ್ನು ಮೆರೆದಿದ್ದಾನೆ. ಪೂರ್ವಪುರಾಣದಲ್ಲಿ ನೀರಸವಾಗಿರುವ ಸನ್ನಿವೇಶಗಳನ್ನು ಕಾವ್ಯಾತ್ಮಕವಾದ ನಿರೂಪಣೆಯಿಂದ ಸರಸವಾಗಿಸಿದ್ದಾನೆ. ಸರಸವಾಗಿರುವವುಗಳನ್ನು ಮತ್ತಷ್ಟು ಸ್ವಾರಸ್ಯಕರವಾಗಿ ನಿರೂಪಿಸಿದ್ದಾನೆ. ಪ್ರಸಂಗೋಚಿತವಾಗಿ ಸಂಗ್ರಹ, ವಿಸ್ತಾರ ಎಂಬುವುಗಳನ್ನು ಅಳವಡಿಸಿದ್ದಾನೆ. ಕೆಲವೆಡೆಗಳಲ್ಲಿ ನೂತನ ಸನ್ನಿವೇಶಗಳನ್ನು ಸೃಷ್ಟಿಸಿಕೊಂಡಿದ್ದಾನೆ. ಈ ಬಗ್ಗೆ ಒಂದೆರಡು ಸನ್ನಿವೇಶಗಳನ್ನು ಅವಲೋಕಿಸಬಹುದು.

ಮೂಲದಲ್ಲಿ ಸ್ವಯಂಬುದ್ಧ ಎಂಬವನ ಉಪದೇಶದಲ್ಲಿ ಧರ್ಮ, ದಯೆ, ಸತ್ಯ, ಅಹಿಂಸೆ ಮೊದಲಾದ ಸಾತ್ವಿಕಾಂಶಗಳ ವರ್ಣನೆ ಮಾತ್ರ ಬರುತ್ತದೆ. ಅದನ್ನೇ ಪಂಪ ಹೀಗೆ ನಿರೂಪಿಸುತ್ತಾನೆ.

"ಭವವಾರಾಶಿನಿಮಗ್ನರಂ ದಯೆ, ದಮಂ ದಾನಂ, ತಪಂ ಶೀಲಮೆಂ

ಬಿವೆ. ಮೆಯ್ಯಾಗಿರೆ ಸಂದ ಧರ್ಮವೆ ವಲಂ ಪೊತ್ತೆತ್ತುಗುಂ. ಮುಕ್ತಿಪ ರ್ಯವಸಾನಂಬರಂಮಾನುಷಂಗಿಕಫಲಂ ಭೂಪೇಂದ್ರದೇವೇಂದ್ರರಾ ಜ್ಯವಿಳಾಸಂ, ಪೆಱತಲ್ತು ನಂಬು ಖಚರಕ್ಷ್ಮಾಪಾಲಚೂಡಾಮಣಿ

(ಆ.ಆ.ಪು:2–7)

ಲಲಿತಾಂಗನು ಅನುಭವಿಸಿದ ಸುಖದ ವರ್ಣನೆ ಪೂರ್ವ ಪುರಾಣದಲ್ಲಿ ಬರುವುದೇ ಇಲ್ಲ. ಆದರೆ ಪಂಪನು ಆ ಸುಖವನ್ನು ಪರಿ ಪರಿಯಾಗಿ ಬಣ್ಣಿಸಿದ್ದಾನೆ. (ಆ.ಪು: 2–20,22)

ಶ್ರೀಮತಿಯನ್ನು ಪೂರ್ವ ಪುರಾಣದಲ್ಲಿ ಅತಿಯಾಗಿ ವರ್ಣಿಸಲಾಗಿದೆ. ಔಚಿತ್ಯದ ಎಲ್ಲೆಯನ್ನು ಮೀರಿತೋ ಎಂಬಂತೆಯೂ ಕೆಲವೆಡೆಗಳಲ್ಲಿ ಭಾಸವಾಗುತ್ತದೆ. ಆದರೆ ಪಂಪನು ಶೀಲ ಸೌಂದರ್ಯಗಳನ್ನು ಮೆರೆದು ಹಿತಕರ ಹಾಗೂ ಉದಾತ್ತವಾದ ವರ್ಣನೆಯ ಮೂಲಕ ಧಾರ್ಮಿಕ ಕಾವ್ಯದ ಮಹತ್ತು ಗಾಂಭೀರ್ಯಗಳನ್ನು ಕಾಪಾಡಿಕೊಂಡಿದ್ದಾನೆ. ಒಟ್ಟಿನಲ್ಲಿ ಹೇಳುವುದಾದರೆ ಪೂರ್ವಪುರಾಣದಲ್ಲಿ ಕಾಣದೊರೆಯದ ಅನೇಕ ರಮ್ಯತೆಗಳನ್ನು ವರ್ಣಿಸಿದ್ದಾನೆ.

ಆದಿಪುರಾಣದಲ್ಲಿ ಧರ್ಮ

ಜಿನಾಗಮದ ಮೂಲ ತತ್ವಗಳ ಪ್ರತಿಪಾದನೆಯೇ ಪುರಾಣ ಕಾವ್ಯದ ಮೂಲ ಉದ್ದೇಶವಾದುದರಿಂದ ಜಿನಧರ್ಮ ಪರವಾದ ಚಿಂತನೆಗಳು ಆದಿಪುರಾಣದುದ್ದಕ್ಕೂ ಕಾಣಿಸಿಕೊಳ್ಳುತ್ತವೆ. ಸ್ವಯಂಬುದ್ಧನು ನೀಡುವ ಧರ್ಮೋಪದೇಶಗಳಲ್ಲಿ ಮುನಿಗಳು ತಮ್ಮ ಅವಧಿ ಜ್ಞಾನದಿಂದ, ಭಕ್ತರ ಭವಾಂತರಗಳ ಕುರಿತು ವಿವರಣೆ ನೀಡುವಲ್ಲಿ ತೀರ್ಥಂಕರನು ದಿವ್ಯಧ್ವನಿಯಲ್ಲಿ ಧರ್ಮೋಪದೇಶ ನೀಡುತ್ತಾನೆ. ಹೀಗೆ ಹತ್ತು ಹಲವೆಡೆಗಳಲ್ಲಿ ಧಾರ್ಮಿಕ ಪ್ರಕ್ರಿಯೆಗಳ ಜಿಜ್ಞಾಸೆ ನಡೆಯುತ್ತದೆ. ಇಲ್ಲಿ ನಿರೂಪಿತವಾದ ಧರ್ಮ ವಿಚಾರಗಳು ಪೂರ್ತಿಯಾಗಿ ಜಿನಧರ್ಮಕ್ಕಷ್ಟೇ ಸಂಬಂಧಿಸಿದವುಗಳಲ್ಲ. ಮಾನವ ಧರ್ಮ ಎಂಬ ವಿಶಾಲ ದೃಷ್ಟಿಯ ನಿರೂಪಣೆಗಳನ್ನು ಇಲ್ಲಿ ಗಮನಿಸಬಹುದಾಗಿದೆ. ಯಾವುದು ಧರ್ಮ ಮತ್ತು ಯಾವುದು ಅಧರ್ಮ ಎಂಬುದನ್ನು ಕವಿ ಸರಳವಾಗಿ ನಿರೂಪಿಸುತ್ತಾನೆ

ಪುಸಿಯದುದು ಪರಾಂಗನೆಗಾ
ಟಿಸುದುದು, ಕೊಲ್ಲದುದು ಮೋಹಮಿಲ್ಲದಿದುಱಿವಂ
ಪೊಸಯಿಸುವುದು, ವೈರಾಗ್ಯದ
ದೆಸೆಗೆಸಪುದು ಧರ್ಮಮದಱಿ ತಡೆವುದುಧರ್ಮಂ. (ಆದಿಪುರಾಣ 5–29). ಈ ವಿವರಣೆ "ಸರ್ವಧರ್ಮ ಸಮಾನವಾದುದು"

"ಕಳಬೇಡ ಕೊಲಬೇಡ ....' ಎಂಬ ವಚನದಂತೆಯೇ ಇದೂ ಸರಳವಾಗಿದೆ ಹಾಗೂ ಅರ್ಥಪೂರ್ಣವಾಗಿದೆ. (ಧರ್ಮ ಸಂಪಾದನೆ ಬಗ್ಗೆ ಕವಿ ಹೇಳುತ್ತಾನೆ)

ಧರ್ಮಾರ್ಥಕಾಮಮೆಂಬಿವು
ಧರ್ಮಾರ್ಥಜನಕೆ ನೆಱೆದ ನೆರ್ಮಂತವಱಿಕೊಳ್
ಧರ್ಮಂ ಪ್ರಧಾನಮರ್ಥಂ
ಧರ್ಮಾಂಘ್ರಿಪಫಳಮದರ್ಕೆ ರಸಮದು ಕಾಮಂ (ಆ.ಪು: 10–50)

ಧರ್ಮವನ್ನು ಸಂಪಾದಿಸಬೇಕು ಎನ್ನುವ ಜನಕ್ಕೆ ಧರ್ಮ, ಅರ್ಥ, ಕಾಮಗಳೇ ಉತ್ತಮವಾದ ಆಶ್ರಯಗಳು. 'ಧರ್ಮ'ವೆಂಬ ಮರಕ್ಕೆ 'ಕಾಮ' ಹೊಯ್ನೀರನ್ನು ಎರೆದು, 'ಅರ್ಥ' ಎಂಬ ಫಲವನ್ನು ಪಡೆಯಬೇಕು ಎಂಬುದು ಈ ಪದ್ಯದ ತಾತ್ಪರ್ಯ

'ಧರ್ಮ ಮಾರ್ಗದಲ್ಲಿ ನಡೆದವರು ಶ್ರೇಯಸ್ಸನ್ನು ಹೊಂದುತ್ತಾರೆ' ಎಂಬುದು ಸರಿ. ಆದರೆ ಧರ್ಮಮಾರ್ಗ ತ್ಯಜಿಸಿದವರ ಗತಿ ಏನು? ಆ ಬಗೆಗೆ ಕವಿಯ ನಿರೂಪಣೆ ಇದು:

ಕಳಿಪಂ ಕಳ್ವನ್, ಗುರ್ವು ಪರ್ವೆ ಕೊಲಿಪಂ ಕೊಲ್ವಂ, ಪರಸ್ತ್ರೀಯರಂ
ಕೊಳಿಪಂ ಕೊಳ್ವನೆನಿಪ್ಪ ಪಾಪಿಯುಮತಿಕ್ರೂರಾತ್ಮನುಂ, ಸಾಧುಂ
ಕುಳಮಂ ಕಂಡೊಡೆ ಕಾಯ್ವನುಂ ಪಟಿವನುಂ, ಧರ್ಮಕೃತಿದ್ರೋಹನುಂ
ಖಳನುಂ. ಕಳ್ಗುಣಿಯುಂ ಘಳುಮ್ಮನಿಟೆಗುಂ ಶ್ವಭ್ರಾಂತಮಂ ತಾಪಿನಂ
(ಆ.ಪು:5/81)

"ಕದಿಯಲು ಕಳುಹುವವನೂ, ತಾನೇ ಕದಿಯುವವನೂ, ಭಯ ಒದಗಿದಾಗ ಕೊಲ್ಲಿಸುವವನೂ, ತಾನೇ ಕೊಲ್ಲುವವನೂ, ಪರ ಸ್ತ್ರೀಯನ್ನು ಭೋಗಿಸಲು ಕಳುಹಿಸುವವನೂ, ತಾನೇ ಭೋಗಿಸುವವನೂ, ಪಾಪಿಯು ಸಾಧು ಸಂತರನ್ನು ಕಂಡೊಡನೆ ಕೋಪ ಗೊಳ್ಳುವವನೂ ನಿಂದಿಸುವವನೂ

ಧರ್ಮಕ್ಕೆ ದ್ರೋಹ ಬಗೆಯುವವನೂ ಇವರೆಲ್ಲರೂ ಕಡು ಘೋರವಾದ ನರಕಕ್ಕೆ ಗುಳುಮ್ಮನೆ ಬೀಳುತ್ತಾರೆ. ಆ ನರಕವಾದರೂ ಕುದಿಯುತ್ತಿರುವಂಥದ್ದು'. ಎಂತಹ ಪರಿಣಾಮಕಾರಿಯಾದ ನಿರೂಪಣೆ.

ಪಾಪ ಪುಣ್ಯಗಳು ಜೀವಿಯ ಉನ್ನತ ಅವನತಿಗಳಿಗೆ ಹೇಗೆ ಕಾರಣವಾಗುತ್ತದೆ? ಶ್ರಾವಕ ಧರ್ಮ, ಮುನಿಧರ್ಮ ಮುಂತಾದ ಧರ್ಮಮಾನಗಳಲ್ಲಿ ಸುಮುಚ್ಚಿತವಾಗಿ ಸಂಚರಿಸಿದಾಗ ಜೀವಿಗೆ ಅತ್ಯಂತ 'ಅರ್ಹಂತ' ಎಂಬ ಗಣ್ಯ ಸ್ಥಾನವನ್ನು ತಲುಪಲು ಹೇಗೆ ಸಾಧ್ಯವಾಗುತ್ತದೆ? ಎಂಬಂಥಹ ತತ್ವಗಳು ಮನಸ್ಸನ್ನು ತಟ್ಟುವಂತೆ ಸುಂದರವಾಗಿ ನಿರೂಪಿತವಾದದ್ದನ್ನು ಆದಿಪುರಾಣದಲ್ಲಿ ಕಾಣಬಹುದಾಗಿದೆ. ಧರ್ಮಾಚರಣೆ ಎಂಬುದು ಲೋಕ ರೀತಿಗೆ ವಿರುದ್ಧವಾದದ್ದಲ್ಲ. ಲೋಕ ಮತ್ತು ಧರ್ಮ ಪರಸ್ಪರ ಪೂರಕ ಎಂಬುದನ್ನು ಕಾವ್ಯದುದ್ದಕ್ಕೂ ಸಮರ್ಥಿಸಲಾಗಿದೆ.

ಆದಿನಾಥನ ಪೂರ್ವ ಭವಗಳು ಒಟ್ಟು ಹತ್ತು. ಅವುಗಳಲ್ಲಿ ಮೊದಲಿನ ಐದು ಭವಗಳಲ್ಲಿ ಭೋಗದ ಆಕಾಂಕ್ಷೆ ಪ್ರಬಲವೂ, ತೀವ್ರವೂ ಆಗಿದೆ. ಮುಖ್ಯವಾಗಿ ಲಲಿತಾಂಗ, ಸ್ವಯಂ ಪ್ರಭೇ, ವಜ್ರಜಂಘ, ಶ್ರೀಮತಿ ಎಂಬ ಮನುಷ್ಯ ದಂಪತಿಗಳು ಎಣೆ ಇಲ್ಲದ ಸುಖಭೋಗಗಳನ್ನು ದೀರ್ಘಕಾಲದವರೆಗೆ ಅನುಭವಿಸಿದರು. ಇವರ ಬದುಕಿನ ಚಿತ್ರಗಳ ಮೂಲಕ ಭೋಗದ ತೀವ್ರತೆಯನ್ನು ಉತ್ತುಂಗಕ್ಕೇರಿದ ಭೋಗ ಹೇಗೆ ವೈರಾಗ್ಯದಲ್ಲಿ, ಪರ್ಯಾವಸಾನವಾಗುತ್ತದೆ ಎಂಬುದನ್ನೂ ಉರ್ದ್ವಗಾಮಿಯಾದ ಚೇತನ ಹೇಗೆ ಆತ್ಮಕಲ್ಯಾಣದತ್ತ ಸಾಗುತ್ತದೆ ಎಂಬುದನ್ನೂ ಮಾರ್ಮಿಕವಾಗಿ ಕಣ್ಣಿಗೆ ಕಟ್ಟುವಂತೆ ಕವಿ ಚಿತ್ರಿಸುತ್ತಾನೆ. ಇಲ್ಲೆಲ್ಲ ಧರ್ಮ, ಕಾವ್ಯ ಧರ್ಮಗಳ ಸಮನ್ವಯ ಸುಮನೋಹರವಾಗಿ ಸಾಧಿತವಾಗಿದೆ.

ಆದಿಪುರಾಣದಲ್ಲಿ ಕಾವ್ಯಧರ್ಮ

ಪಂಪನದು ಅದ್ಭುತ ಪ್ರತಿಭಾ ಸಂಪತ್ತು. ಆದಿಪುರಾಣದಲ್ಲಿ ಬರುವ ತೀರ್ಥಂಕರರನ ಭವಾವಳಿಯ ನಿರೂಪಣೆಯಲ್ಲಿ, ಪಂಚಕಲ್ಯಾಣಗಳ ವರ್ಣನೆಯಲ್ಲಿ, ಭರತ ಬಾಹುಬಲಿ ವ್ಯಾಯೋಗದ ಚಿತ್ರಣದಲ್ಲಿ ಆತ

ಕಾವ್ಯಾತ್ಮಕ ಶೈಲಿಯನ್ನು ಅತ್ಯಂತ ಸಮರ್ಥವಾಗಿ ಬಳಸಿಕೊಂಡಿದ್ದಾನೆ. ಅವನ ಕವಿ ಮನೋಧರ್ಮ ಹತ್ತು ಹಲವಡೆಗಳಲ್ಲಿ ಅವ್ಯಕ್ತಗೊಳ್ಳುವುದನ್ನು ಕಾಣಬಹುದಾಗಿದೆ.

ಮಹಾಬಲನು ಉಗ್ರ ತಪಸ್ಸಿನಿಂದ ತನ್ನ ಶರೀರವನ್ನು ಹೇಗೆ ಕ್ಷಯಿಸಿದನು ಎಂಬುದನ್ನು ಕವಿ ಹೇಳುವ ಬಗೆ ಇದು:

"ದಾವ ಪಾವಕಂ, ಬಳಸೆ ಸುರುಳ್ದ ಬಾಳ ಸಹಕಾರ ಮಹೀರುಹಂ ಎಂಬ ಶಂಕೆಯಿಂ" (ಆ.ಪು:2–59)

'ಕಾಳ್ಗಿಚ್ಚಿನ ಆಘಾತದಿಂದ ಕೆಡೆದ ಎಳೆಯ ಮಾವಿನ ಮರ ಎಂಬ ಸಂದೇಹಕ್ಕೆ ಎಡೆಯಾಯಿತು' ಎಂಬಲ್ಲಿರುವ ಹೋಲಿಕೆ ರಮಣೀಯವಾದದು.

ಸ್ವಯಂ ಪ್ರಭೆ 'ಎಂಥ ಅನುಪಮ ಸುಂದರಿ' ಎಂಬುದನ್ನು ಕವಿಯ ಮಾತಿನಲ್ಲೇ ಕೇಳಬೇಕು.

ನೆಗಳ್ದಮರಾಂಗನಾಜನದ ರೂಪುಗಳೆಲ್ಲಮದೀಕೆಯೊಂದು ದೇ
ಸೆಗೆ ನಿಮಿರ್ವೊಂದು ಪುರ್ವಿನ ನಯಕ್ಕಮದೊಂದುದಗುಂತಿಗೊಂದು ಭಂ
ಗಿಗೆ ನೆಗಟಿಳ್ವೊಂದು ಮೆಲ್ಪಿನ ತೊದಳ್ನುಡಿಗಪ್ಪೊಡಮೆಯ್ದೆವಾರವೇ
ನೊಗಸುವಮೆಂದುಽ ತಳ್ತಗಲನಾಕೆಯನಾ ಲಲಿತಾಂಗವಲ್ಲಭಂ

(ಆ.ಪು:2–75)

ವಜ್ರಜಂಘನು ತನ್ನ ಹಿಂದಿನ ಜನ್ಮದ ಸ್ವಯಂಪ್ರಭೆಯನ್ನು ಸ್ಮರಿಸುವ ಬಗೆ ಅಸಾಧಾರಣವಾದದ್ದು. ಎಷ್ಟೋ ಜನ ಅನುಪಮ ಸುಂದರಿಯರು ಈತನನ್ನು ಬಯಸಿ ಹುಚ್ಚಾಗಿ ಬಂದರು. ರಾಜಕುಮಾರ ಅವರನ್ನು ಕಣ್ಣೆತ್ತಿಯೂ ನೋಡಲಿಲ್ಲವಂತೆ. ಅದನ್ನು ಕವಿ ಸಮರ್ಥಿಸುವ ಬಗೆ ಇದು.

ಪೂರ್ವಭವಸ್ಮರಣೆಯಿಂದ ಲಲಿತಾಂಗದೇವನನ್ನು ನೆನೆದು ಸ್ವಯಂಪ್ರಭೆ 'ಹಾ ಲಲಿತಾಂಗದೇವ, ವನಿದಾನಾಂಬುಜಭೃಂಗ, ನಿನ್ನ ಲೀಲಾಲಸ ದೃಷ್ಟಿ ಪಾತಂ ಎರ್ದೆಯೊಳ್ ನೆಲೆಸಿರ್ದವು. ನಿನ್ನ ಮಾತುಗಳ್ ಕೀಲಿಸಿದಂತೆವೊಲ್ ಮನದೊಳಿರ್ದವು ನಿನ್ನನೇ ಕಾಣಲಾಗದು (2–23) ಎಂದು ಮೂರ್ಛೆ ಹೋಗುತ್ತಾಳೆ' ಅಂತಹ ಗಾಢವಾದ ಜನ್ಮಾಂತರದ

ಪ್ರೇಮವದು.

ಶ್ರೀಮತಿ ವಜ್ರಜಂಘರು ಸಜ್ಜೆವನೆಯಲ್ಲಿ ಸುಖನಿದ್ರೆಯಲ್ಲಿರುತ್ತಾರೆ. ಸಜ್ಜೆಯನ್ನು ಕೇಶ ಸಂಸ್ಕಾರಕೆಂದು ಧೂಪದ ಗಿಂಡಿಯಲ್ಲಿ ಹಾಕಿದ್ದ, ಧೂಪದ ಹೊಗೆಯಿಂದ ಕಿಟಕಿಗಳೆಲ್ಲ ಮುಚ್ಚುದ್ದುದುರ ಪರಿಣಾಮವಾಗಿ ಅವರಿಬ್ಬರೂ ಉಸಿರುಗಟ್ಟಿ ಸತ್ತು ಹೋಗುತ್ತಾರೆ. ಇಲ್ಲಿ ಕವಿಯು ಹೊಗೆಯನ್ನು ಕೃಷ್ಣಸರ್ಪಕ್ಕೆ ಹೋಲಿಸಿ ಅಲ್ಲಿ ಹಂತ ಹಂತವಾಗಿ ನಡೆಯುವ ಕ್ರಿಯೆಯನ್ನು ಹೇಳುವ ಬಗೆ ಹೃದ್ಯವಾದದ್ದು.

ಮೊದಲೊಳ್ ನೀಳ್ದು, ಪೊದಟ್ಟಿದ್ದು ಪರ್ಬಿ, ಪದಪಂ ಕೈಕೊಂಡು ಮಂದ್ಯೆಸಿ, ಮಾಣದೆ, ತನ್ನಂದದೊಳ್ ಎದೆಗುಂದದೆ, ನಿರುದ್ಧೋಚ್ಛ್ವಾಸ ವುಪ್ಪನ್ನೆಗಂ ಪುದಿದು ಆ ದಂಪತಿಯುಂ ಪುದುಂಗೊಳಿಸಿ ಲೋಕಾಶ್ಚರ್ಯವುಂ ಮಾಡಿ ಕೊಂದುದು ಕೃಷ್ಣಾಗರು ದೂಪ ಧೂಮನಿವಹಂ ಕೃಷ್ಣೋರಗಂ ಕೋಲ್ವವೊಲ್ (ಆದಿಪುರಾಣ 5–23)

ಇಲ್ಲಿನ ಅಲಂಕಾರ ಯೋಜನೆ ರಮಣೀಯವಾದುದು. ಮುಂದಿನ ವರ್ಣನೆ "ಬಿಡದೆ ಪೊಗೆಸುತ್ತೆ ತೋಳಂ ಸಡಿಲಿಸದೆ, ಆ ಪ್ರಾಣವಲ್ಲಭರ್ ಪ್ರಾಣಮಂ ಅಂದೊಡಗಳೆದರ್. ಓಪರ ಓಪರೊಳ್ ಒಡಸಾಯಲ್ ಪಡೆದರ್, ಇನ್ನವೇಂ ಸೈಪು ಒಳವೇ 'ಇಲ್ಲಿನ ಭಾವವಿಸ್ತಾರ ಪಂಪನ ಸ್ವತಂತ್ರ ಸೃಷ್ಟಿ' 'ದೇಹ ಭೋಗದ ನಶ್ವರತೆಯನ್ನು ವಾದಿಸಬೇಕಾದ ಪುರಾಣಕಾರ ಇಲ್ಲಿ ಪ್ರೇಮದ ಅಮರತ್ವವನ್ನು ಘೋಷಿಸಿದ್ದಾನೆ ಎಂದರೆ ಧರ್ಮಕ್ಕಿಂತ ಕಾವ್ಯಧರ್ಮವೇ ಮೇಲಾಗಿದೆ' ಎಂಬ (ಎಲ್. ಆರ್. ಹೆಗಡೆ) ಅಭಿಮತ ಸಮರ್ಥನೀಯ.

ಜೈನ ಪುರಾಣಗಳಲ್ಲಿ ಬರುವ ಪಂಚಕಲ್ಯಾಣಗಳ ವರ್ಣನೆಗಳಲ್ಲಿ ಕವಿಗೆ ತನ್ನ ಕವಿತಾ ಶಕ್ತಿಯನ್ನು ಮೆರೆಯುವುದಕ್ಕೆ ಉತ್ತಮ ಸಂದರ್ಭ ಒದಗಿ ಬರುತ್ತದೆ. ತೀರ್ಥಂಕರನಾಗುವವನು ಹುಟ್ಟು ಮೊದಲಾಗಿ ತನ್ನ ಭೌತಿಕ ದೇಹವನ್ನು ತೊರೆಯುವವರೆಗೆ ಆತನ ಜೀವನದ ಮಹತ್ವದ ಘಟ್ಟಗಳಲ್ಲಿ ಸ್ವರ್ಗಲೋಕದ ಸೌಧರ್ಮೇಂದ್ರನು, ಇತರ ದೇವತೆಯರು ನಡೆಸುವ "ಗರ್ಭಾವತರಣ, ಜನ್ಮಾಭಿಷೇಕ, ಪರಿನಿಷ್ಕ್ರಮಣ, ಕೇವಲ ಜ್ಞಾನೋತ್ಪತ್ತಿ ಹಾಗೂ ಪರಿನಿರ್ವಾಣ" ಎಂಬ ಐದು ಮಹೋತ್ಸವಗಳೇ

ಪಂಚ ಕಲ್ಯಾಣಗಳು ಇವು ಮುಖ್ಯವಾಗಿ ಧಾರ್ಮಿಕ ವಿಧಿಗಳ ಪೂರೈಕೆಗಾಗಿ ನಡೆಯುವವುಗಳು. ಪಂಪನು ಚಿತ್ರಿಸಿದ ಆದಿ ತೀರ್ಥಂಕರನ ಜನ್ಮಾಭಿಷೇಕ ಕಲ್ಯಾಣ ವರ್ಣನೆಯಂತೂ ಅದ್ಭುತವಾದದ್ದು.

ಜಿನ ಶಿಶುವನ್ನು ಮಡಿಲಲ್ಲಿ ತುಂಬಿಕೊಂಡ ಸಚಿದೇವಿಯದು "ಪಡೆಯಲಾಗದ ನಿಧಿಯಂ ಬಡವಂ ಪಡದಂತಾಗಿದೆ" ಆಕೆಯ ಆನಂದಾತೀರೇಕದ ಚಿತ್ರಣವಿಲ್ಲಿದೆ.

ಅಲರ್ದ ಅಲರ್ಗಣ್ಗಳ ನೋಟದೆ
ಸುಲಲಿತತನು ಶಿಶುವ ಮೆಯ್ಯ ತೀಟದೆ ತನಗೆ
ಅಗ್ಗಲಿಸಿದ ಅಲಂಪಂ ಕುಡೆ ಪೊಸತು
ಅಲರ್ದು ಅಂಕುರಿಸಿರ್ದ ಕಲ್ಪಲತೆಯನೆ ಪೋಲ್ತಳ್ (ಆ.ಪು:7–47)

ಅರಳಿದ ಹೂವುಗಣ್ಣುಗಳ ನೋಟದಿಂದ ಮನೋಹರವಾದ ಶಿಶುವಿನ ದೇಹ ಸ್ಪರ್ಶದಿಂದ ಅವಳಿಗಾದ ಆನಂದ ಅದ್ವಿತೀಯವಾದದ್ದು "ಪೊಸತು ಅಲರ್ದು ಅಂಕುರಿಸಿರ್ದ ಕಲ್ಪಲತೆಯನೆ ಪೋಲ್ತಳ್" ಎಂದು ಮನೋಹರವಾದ ರೂಪಕದೊಂದಿಗೆ ಕವಿ ವರ್ಣಿಸುತ್ತಾನೆ. ಮುಂದೆ ನಡೆಯುವ ಕ್ರಿಯೆಗಳದು ಅತ್ಯಂತ ಭವ್ಯವಾದ ಚಿತ್ರಗಳು. ಕವಿ ಕುವೆಂಪು ಅವರು ಹೇಳುವಂತೆ ಆ ಪ್ರತಿಮಾ ಚಿತ್ರಕ್ಕೆ ಸಮಾನವಾದ ಭೂಮಾನುಭೂತಿಯ ಚಿತ್ರಗಳು ಸಾಹಿತ್ಯ ಲೋಕದಲ್ಲಿ ಅಪೂರ್ವ ಮತ್ತು ಅಲ್ಪಸಂಖ್ಯಾತ. [ತಪೋನಂದನ, ಪು:52]

ಪುರುದೇವನ ಪರಿನಿಷ್ಕ್ರಮಣಕ್ಕೆ ಹೇತುವಾದ ಸಂಗತಿಯೆ 'ನೀಲಾಂಜನೇಯ ನೃತ್ಯ' ಇದು ಸಾವಿನ ಅನಿವಾರ್ಯತೆಯನ್ನು ಮತ್ತು ಬದುಕಿನ ಕ್ಷಣ ಭಂಗುರತೆಯನ್ನು ಎತ್ತಿ ತೋರಿಸುವ ಉದ್ದೇಶವನ್ನು ಇಟ್ಟುಕೊಂಡಿದ್ದೇನೋ ನಿಜ. ಆದರೆ ಕಾವ್ಯ ಧರ್ಮದ ವೈಭವದ ದೃಷ್ಟಿಯಿಂದ ಆದಿಪುರಾಣದ ಮಹೋನ್ನತ ರಸಸ್ಥಾನಗಳಲ್ಲಿ ಇದು ಒಂದು. ಮೂಲದಲ್ಲಿ ಕೇವಲ ನಾಲ್ಕು ಶ್ಲೋಕಗಳಲ್ಲಿ ಮುಗಿದುಬಿಡುವ ಈ ಸಂದರ್ಭ ಪಂಪನಲ್ಲಿ 28 ಪದ್ಯಗಳ ವ್ಯಾಪ್ತಿಯನ್ನು ಹೊಂದಿದೆ. ಅವುಗಳಲ್ಲಿ 22 ಕಂದ ಪದ್ಯಗಳು ನೀಲಾಂಜನೆಯ ನೃತ್ಯ ನಿರೂಪಣೆಗಾಗಿಯೇ ಮೀಸಲಾಗಿದೆ. ನೀಲಾಂಜನೆಯ ರಂಗ ಪ್ರವೇಶ ತುಂಬಾ ಆಕರ್ಷಕವಾಗಿ ನಡೆಯುತ್ತದೆ.

ಎನಿಸಿದ ನೀಳಾಂಜನೆ ಕ
ರ್ಬಿನ ಬಿಲ್ಲಿಂ ಮಸೆದ ಮದನನಲರ್ಗಣೆ ಬರ್ದುಕಿ
ತ್ತೆನಿಸುತ್ತೊಳಪೊಂಕ್ಕಳ್ ಭೋಂ
ಕೆನೆ ನಿಖಿಳ ಜನಾಂತರಂಗಮಂ ರಂಗಮುಮಂ (ಆ.ಪು: 9–19)

ಅವಳ ಮುಗುಳ್ನಗೆಯ ನಗೆಮೊಗ 'ಪೊಸತಮರ್ದಂ ಮೇಗೆ ಉಗುಟ್ದಿ ಪಳ್' ಎಂಬಂತೆ ಭಾಸವಾಯಿತಂತೆ

ಆಡುವ ವಿಳಾಸಮಂ ನಡೆ
ನೋಡುವ ನೋಟಕರನ್ ಅತನು ಮತ್ತ ದ್ವಿರದಂ
ಕೋಡಂ ಕಾಣಿಸಿ ಪಿಡಿದು
ಈಡಾಡುವುದು ಎಂಬಿನೆಗಂ ಆಡಿ
ರಂಜಿಸಿದಳ್ ಅವಳ್ (ಆ.ಪು– 9–37)

ಇಂಥ ನಿರೂಪಣೆಗಳಲ್ಲಿ ಕವಿಯ ಪ್ರತಿಭಾ ಸಂಪತ್ತು ಚೆನ್ನಾಗಿ ವಿಜೃಂಭಿಸಿದೆ ಎಂಬುದು ಗಮನೀಯ. ತನ್ನ ಆಯುರವ ಸಾನಗೊಂಡುದರಿಂದ, ಅವಳು ಕಣ್ಮರೆಯಾಗುವುದು ಮತ್ತು ಇಂದ್ರನು ಆ ದೊರೆಯ ಪಾತ್ರಂ ತಂದು ಅನುಸಂಧಿಸುವ ಕ್ರಿಯೆ ಕ್ಷಣ ಮಾತ್ರದಲ್ಲಿ ನಡೆದು ಹೋಗುತ್ತದೆ. ಈ ಪ್ರತಿ ನಿಧಾನದ ನಾಟಕೀಯ ಸನ್ನಿವೇಶ ನೃತ್ಯವೀಕ್ಷಣೆಯಲ್ಲಿ ತಲ್ಲೀನರಾದವರ ಗಮನಕ್ಕೆ ಬರುವುದಿಲ್ಲ. ಆದರೆ ಪುರುದೇವನ ಗಮನಕ್ಕೆ ಬಂದು, ಆತನ ವೈರಾಗ್ಯಕ್ಕೆ ಕಾರಣವಾಗುತ್ತದೆ. ಒಟ್ಟಿನಲ್ಲಿ ಈ ಪ್ರಸಂಗದ ವೈಭವ ಆದಿಪುರಾಣದ ಅತಿ ಸ್ಮರಣೀಯ. ಉದ್ದಾಮ ಪ್ರಸಂಗವೆಂಬುದೊಂದೇ ಅಲ್ಲ, ಸಮಸ್ತ ಕನ್ನಡ ಸಾಹಿತ್ಯದಲ್ಲಿನ ಒಂದು ಸುಂದರ ಸನ್ನಿವೇಶ ಎಂಬ ಹೇಳಿಕೆ ಸಮರ್ಥನೀಯವಾಗಿದೆ (ವಿ.ಸೀ. ಮಹಾಕವಿ ಪಂಪ)

'ಭಾರತ ಚಕ್ರವರ್ತಿಯ ಚರಿತೆ' ಆದಿಪುರಾಣದ ಮತ್ತೊಂದು ರಸಸ್ಥಾನ. ಅದರಲ್ಲೂ ಭರತ ಬಾಹುಬಲಿ ವ್ಯಾಯೋಗ, ಸಂದರ್ಭ ಪಂಪನ ಕಾವ್ಯ ಪ್ರತಿಭೆಯ ಮೇರು ಶಿಖರ. ಲೋಕ ಧರ್ಮ ಮತ್ತು ಕಾವ್ಯ ಧರ್ಮದ ಸಮನ್ವಯಕ್ಕೆ ಉಜ್ವಲ ದೃಷ್ಟಾಂತ ಸೋದರ ಸಂಬಂಧ. ಅಹಂ ಮತ್ತು ತ್ಯಾಗದ ಮುಖಾಮುಖಿ, ನೈತಿಕತೆ ಮೊದಲಾದ ಹಲವು ಅಂಶಗಳು ಇಲ್ಲಿ ಅನಾವರಣಗೊಳ್ಳುತ್ತವೆ.

ತಂದೆಯಾದ ಪುರುದೇವನಿಗೆ ಕೇವಲ ಜ್ಞಾನೋತ್ಪತ್ತಿ, ಆಯುಧಗಾರದಲ್ಲಿ ಚಕ್ರರತ್ನದ ಉದ್ಭವ ಮತ್ತು ಪಟ್ಟಮಹಿಷಿಯಲ್ಲಿ ಪುತ್ರಜನನ. ಈ ಮೂರು ಶುಭ ಸಂದರ್ಭಗಳು ಭರತ ಚಕ್ರವರ್ತಿಗೆ ಏಕಕಾಲದಲ್ಲಿ ಒದಗಿ ಬರುತ್ತವೆ. ಚಕ್ರ ರತ್ನವನ್ನು ಮುಂದಿಟ್ಟುಕೊಂಡು ದಿಗ್ವಿಜಯಕ್ಕೆ ಹೊರಟ ಚಕ್ರವರ್ತಿಯು ನಾಲ್ಕು ದಿಕ್ಕುಗಳಲ್ಲೂ ಇದಿರಾದ ಮಕುಟವರ್ಧನರನ್ನೆಲ್ಲಾ ಮಣಿಸಿ, ಹಿಮವತ್ಪರ್ವತದ ತಪ್ಪಲಿನ ಶಿಲೆಯ ಮೇಲೆ ತನ್ನ ಪ್ರಶಸ್ತಿಯನ್ನು ಬರೆಸುವ ಸಲುವಾಗಿ ವೃಷಭಾದ್ರಿಗೆ ಬರುತ್ತಾನೆ. ಅಲ್ಲಿರುವ ಶಿಲೆಗಳೆಲ್ಲ ಹಿಂದಿನ ಚಕ್ರವರ್ತಿಗಳ ಪ್ರಶಸ್ತಿಗಳಿಂದ ತುಂಬಿ ಹೋಗುವುದನ್ನು ಕಂಡಾಗ ಆತನ ಗರ್ವ ಕುಸಿಯುತ್ತದೆ.

ಸಲೆ ಸಂದ ಚಕ್ರಿವೃಂದದ ಚಲದ ಆಯದ ಆಯತಿಯ ಬೀರದ, ಚಾಗದ,
ಮಾತುಗಳ್ ಪೊದಲ್ದು ಒದವಿರೆ, ತತ್ಪ್ರಶಸ್ತಿಗಳೊಳ್; ಅಂತವನ್ ಒಯ್ಯನ್
ನೋಡಿ ನೋಡಿ ಸೋರ್ದುದು ಕೊಳಗೊಂಡ ಗರ್ವ ರಸಂ' (ಆ.ಪು:13–71)

ಇದು ಚಕ್ರವರ್ತಿಯ ಅಹಂಕಾರಕ್ಕೆ ಒದಗಿ ಬಂದ ಮೊದಲ ಆಘಾತ. ಆದರೂ ಹಳೆಯ ಪ್ರಶಸ್ತಿ ಒಂದನ್ನು ಅಳಿಸಿಹಾಕಿ ತನ್ನದ್ದನ್ನು ಕೆತ್ತಿಸುತ್ತಾನೆ. ಮತ್ತೆ ಅಯೋಧ್ಯೆಗೆ ಮರಳಿದಾಗ ಚಕ್ರ ರತ್ನವು ಪುರದ್ವಾರದ ಮುಂದೆ ನಿಂತು ಬಿಡುತ್ತದೆ. ಬಾಹುಬಲಿ ಮೊದಲಾದ ಸೋದರರು ಆತನ ಪ್ರಭುತ್ವವನ್ನು ಒಪ್ಪದಿರುವುದೇ ಚಕ್ರ ರತ್ನ ಪುರ ಪ್ರವೇಶ ಮಾಡದೆ ನಿಂತುದ್ದಕ್ಕೆ ಕಾರಣವೆಂದು ನೈಮಿತ್ತಿಕರಿಂದ ತಿಳಿದ ಭರತ ಕೆರಳಿ, ಅವರನ್ನೆಲ್ಲ ತನ್ನ ಅಧೀನರನ್ನಾಗಿಸುವುದಕ್ಕೆ ಮನಮಾಡುತ್ತಾನೆ. ತಮ್ಮಂದಿರೆಲ್ಲ ಬಂದು ತನಗೆರಗುವಂತೆ ದೂತರ ಮೂಲಕ ಅವರಿಗೆ ಸಂದೇಶ ಕಳುಹಿಸುತ್ತಾನೆ.

ಬಾಹುಬಲಿಯನ್ನುಳಿದ ಅನುಜರೆಲ್ಲ ಭರತ ಚಕ್ರಿಯ ಧೋರಣೆಗೆ ಹೇಸಿ ವೈರಾಗ್ಯ ತಾಳುತ್ತಾರೆ. ದೀಕ್ಷಿತರಾಗಿ ತಪಸ್ಸಿಗೆ ತೆರಳುತ್ತಾರೆ. ಸೆಡೆದು ನಿಂತ ಬಾಹುಬಲಿ, ಕೋಪ ಗರ್ಭಸ್ಮಿತನಾಗಿ 'ಆಜಿಗೆ ಬಂದು ಒಡ್ಡಲ್ಕೆ ಪೇಟಿ, ಸಂಗರ ನಿಕಷದೊಳ್ ಎಮ್ಮಂದಮಂ ನೀನೆ ಕಾಣ್ಬೈ' ಎಂದು ಖಂಡತುಂಡವಾಗಿ ಹೇಳುತ್ತಾ ಇದಿರಿಸಲು ಸಿದ್ಧನಾಗುತ್ತಾನೆ. ಬಾಹುಬಲಿಯ ಕೋಪದ ವರ್ಣನೆಯಲ್ಲಿ ಕವಿಯ ಕವಿತಾ ಶಕ್ತಿ ಅದ್ಭುತವಾಗಿ ಮೆರೆದಿದೆ.

ಭರತ ಬಾಹುಬಲಿಗಳೊಳಗೆ ನಡೆದ ದೃಷ್ಟಿ ಯುದ್ಧ, ಜಲಯುದ್ಧ, ಮಲ್ಲಯುದ್ಧಗಳಲ್ಲಿ ಭರತ ಪರಾಜಿತನಾಗುತ್ತಾನೆ. ಮಲ್ಲಯುದ್ಧದ ಕೊನೆಯಲ್ಲಿ

ಕನಕಾಚಳಮಂ ಪೊತ್ತುದು
ಘನಮರಕತಶೈಲಮೆನಿಸಿ ಭುಜಬಲಿ ಸಕಳಾ
ವನಿತಳವಲ್ಲಭನಂ ಭೋಂ
ಕನೆತ್ತಿ ಪೊತ್ತಿರ್ದನಿಕ್ಕಲೊಲ್ಲದೆ ನೆಲದೊಳ್ (ಆ.ದಿ:ಪುರಾಣ 14– 111)

ತನ್ನ ಅಭಿಮಾನಕ್ಕೆ ಕಿಚ್ಚು ಹಚ್ಚು ಅಂತ ಮಾತುಗಳಿಂದ ಕೆರಳಿ ಬಾಹುಬಲಿ ಅಣ್ಣನನ್ನು ಇದಿರಿಸಿದರೂ, ಭರತನಲ್ಲಿ ತನಗಿರುವ ಸೋದರಭಾವ ಮತ್ತು ಆತನ ಚಕ್ರವರ್ತಿ ಪದದ ಬಗೆಗಿರುವ ಗೌರವ ಭಾವ ಜಾಗೃತವಾಗುತ್ತದೆ. ಅಣ್ಣನು ಶಕ್ತಿ ಹೊಂದಿದನೆಂದು ವಸುಂಧರೆಯೊಳ್ ತಂದಿಕ್ಕಿ ಭಂಗಮಂ ಮಾಡುವನೇ? ಎಂದು ಯೋಚಿಸುತ್ತಾ ಆತನನ್ನು ಮೆಲ್ಲಗೆ ಕೆಳಗಿಳಿಸುತ್ತಾನೆ. ಆದರೆ ಭರತನು ಸುತ್ತಮುತ್ತಲು ಮೊಳಗಿದ ಬಾಹುಬಲಿಯ ವಿಜಯ ಘೋಷಣೆಯಿಂದ ಕೋಪಾಂಧನಾಗಿ ತಮ್ಮನ ಮೇಲೆ ಚಕ್ರರತ್ನವನ್ನು ಪ್ರಯೋಗಿಸುವಂಥ ಅಕಾರ್ಯಕ್ಕೆ ಕೈ ಹಾಕುತ್ತಾನೆ. ಚಕ್ರ ರತ್ನವು ಬಾಹುಬಲಿಯನ್ನು ಏನೂ ಮಾಡಲಾರದೆ, ಆತನಿಗೆ ಪ್ರದಕ್ಷಿಣೆ ಹಾಕಿ ಸುಮ್ಮನೆ ನಿಂತುಬಿಡುತ್ತದೆ. ಅಣ್ಣನ ಸಲ್ಲದ ನಡತೆಯಿಂದ ಜಿಗುಪ್ಸಿತನಾಗಿ ಬಾಹುಬಲಿ ವೈರಾಗ್ಯ ತಾಳಿ ಆತನೊಡನೆ ಹೇಳುವ ಮಾತು ಅಸಾಧಾರಣವಾದದ್ದು:

ನೆಲಸುಗೆ ನಿನ್ನ ವಕ್ಷದೊಳ್ ನಿಚ್ಚಳಮಿೞಭಟಖಡ್ಗಮಂಡಲೋ
ತ್ಫಲವನವಿಭ್ರಮಭ್ರಮರಿಯಪ್ಪ ಮನೋಹರಿ ರಾಜ್ಯಲಕ್ಷ್ಮಿ ಭೂ
ವಲಯಮನಯ್ಯನಿತ್ತುದುಮನಾಂ ನಿನಗಿತ್ತೆನಿದೇವುದುಣ್ಣ, ನೀ
ನೊಲಿದ ಲತಾಂಗಿಗಂ ಧರೆಗಮಾಟಿಸಿದಂದು ನೆಗಟ್ತೆ ಮಾಸದೇ
(ಆ.ಪು:14–130)

ಯುದ್ಧದಲ್ಲಿ ಗೆದ್ದ ತಮ್ಮನು ತನ್ನೊಡನೆ ಸೋತು ಹೋದ ಅಣ್ಣನಿಗೆ ತನ್ನ ಸಮಸ್ತವನ್ನೂ ಒಪ್ಪಿಸಿಕೊಡುವ ಅಭೂತಪೂರ್ವ ಸನ್ನಿವೇಶ. "ಅಣ್ಣ, ವೀರರ ಖಡ್ಗಗಳ ಸಮೂಹವೆಂಬ ತಾವರೆಗೊಳದಲ್ಲಿ ಸಂಚರಿಸುವ ಹೆಣ್ಣು ದುಂಬಿಯಾಗಿರುವ ರಾಜ್ಯಲಕ್ಷ್ಮಿ ನಿನ್ನಲ್ಲೇ ನೆಲಸಲಿ.

ನಿನ್ನನ್ನು ಗೆದ್ದು ಪಡೆದ ಸಮಸ್ತ ಭೂಮಂಡಲವನ್ನು ಮತ್ತು ನಮ್ಮ ತಂದೆ ನನಗೆ ಕೊಟ್ಟಿರುವ ಭೂಭಾಗವನ್ನು ಎಲ್ಲವನ್ನು ನಿನಗೆ ಕೊಟ್ಟೆನು. ಈ ಸಾಮ್ರಾಜ್ಯ ಸಂಪತ್ತಿನಿಂದ ಏನು ತಾನೆ ಪ್ರಯೋಜನ? ಅಣ್ಣನು ಬಹಳವಾಗಿ ಬಯಸಿದ ಹೆಣ್ಣನ್ನೂ, ಅಂತೆಯೇ ಹೆಣ್ಣಿನಂತಿರುವ ಸಾಮ್ರಾಜ್ಯವನ್ನು ತಮ್ಮನಾದ ನಾನು ಬಯಸಿದೆನೆಂದಾದರೆ ಅಥವಾ ಸ್ವೀಕರಿಸಿದೆನೆಂದಾದರೆ, ನನ್ನ ಕೀರ್ತಿಗೆ ಕಳಂಕವಲ್ಲವೇ? ಎಂಬುದು ಈ ಪದ್ಯದ ಸಾರ. ಬಾಹುಬಲಿಯ ಅಭಿಮಾನ ವಿವೇಕ, ತ್ಯಾಗ, ಲೋಕಜ್ಞಾನ, ಎಲ್ಲವನ್ನು ಕವಿ ಅತ್ಯಂತ ಸಮರ್ಥವಾಗಿ ಸುಂದರವಾಗಿ ನಿರೂಪಿಸಿದ್ದಾನೆ. ಆತನ ಕಥನ ಶೈಲಿಗೆ ಇದೊಂದು ಸಮರ್ಪಕ ದೃಷ್ಟಾಂತವೂ ಹೌದು.

ಭರತ – ಬಾಹುಬಲಿ

ಭರತ ಚಕ್ರಿಯ ಮನಸ್ಸೂ ಈಗ ಪರಿವರ್ತನೆಗೊಳ್ಳುತ್ತಿದೆ. ಅವನ ಕೋಪವೆಲ್ಲ ಭರ್ರನೆ ಇಳಿಯುತ್ತದೆ. ತಾನು ತಮ್ಮನೊಡನೆ ಸೆಣಸಿ, ಅಪರಾಧ ಮಾಡಿದೆ ಎಂದು ಪಶ್ಚಾತಾಪ ಪಡುತ್ತಾನೆ. ಇಬ್ಬರೂ ಕಣ್ಣೀರು ಸುರಿಸುತ್ತಾರೆ. ಆ ಸನ್ನಿವೇಶವನ್ನು ಅತ್ಯಂತ ಭವ್ಯವಾಗಿ ಕವಿ ಹೀಗೆ ಚಿತ್ರಿಸುತ್ತಾನೆ.

ನಿಜಪಾದಾಂಬುರುಹಕ್ಕೆ ಪಾದ್ಯವಿಧಿಯಂ ನೇತ್ರಾಂಬುವಿಂ ಮಾಡುವ
ಗ್ರಜನತ್ಯುನ್ನತಮಪ್ಪ ಮಸ್ತಕದ ಮೇಗೋರಂತೆ ಪಾಯ್ವಾತ್ಮಬಾ
ಷ್ಪಜಲೌಘಂಗಳಿನಂದು ಬಾಹುಬಲಿ ತನ್ನಿಂದಂ ನಿಧೀಶಂಗೆ ವಂ
ಶಜರಾಜ್ಯಾಭಿಷವೋತ್ಸವಂ ನೆಗಟ್ದುದೆಂಬಾಶಂಕೆಯಂ ಮಾಡಿದಂ

(ಆ.ಪು:14–133)

ಭರತ ಬಾಹುಬಲಿ ಇಬ್ಬರೂ ಇದಿರು ಬದಿರಾಗಿ ನಿಂತುಕೊಂಡಿದ್ದಾರೆ. ಇಬ್ಬರೂ ಕಣ್ಣೀರು ಸುರಿಸುತ್ತಿದ್ದಾರೆ. ಅಣ್ಣನ ಕಣ್ಣೀರು ತಮ್ಮನ ಪಾದಗಳ ಮೇಲೆ ಬೀಳುತ್ತದೆ. ಅದನ್ನು ವೈರಾಗ್ಯತಾಳಿ ದೀಕ್ಷಿತನಾಗಿ ತಪಸ್ಸಿಗೆ ತೆರಳುವ ತಮ್ಮನ ಪಾದಗಳನ್ನು ಭರತನು ತೊಳೆಯುತ್ತಿದ್ದಾನೆ ಎಂದು ಕವಿ ಕಲ್ಪಿಸುತ್ತಾನೆ. ದೀರ್ಘ ದೇಹಿಯಾದ ತಮ್ಮನ ಕಣ್ಣೀರು ಅಣ್ಣನ ಮಸ್ತಕದ ಮೇಲೆ ಸುರಿಯುತ್ತದೆ. ಅದನ್ನು ಕವಿಯು ತಮ್ಮನು ರಾಜನಿಗೆ ರಾಜ್ಯಾಭಿಷೇಕೋತ್ಸವವನ್ನು ಮಾಡುವಂತೆ

ಸಂಭಾವಿಸುತ್ತಾನೆ. ಅದ್ಭುತವಾದ ಕವಿಕಲ್ಪನೆ. ಈ ಪ್ರಸಂಗ ಕನ್ನಡ ಕಾವ್ಯ ಪ್ರಪಂಚದಲ್ಲಿ ಅಪೂರ್ವಗಳಲ್ಲಿ ಅಪೂರ್ವ ಎನಿಸಿದುದಾಗಿದೆ.

ವರ್ಣನೆಗಳು ಕಾವ್ಯ ಧರ್ಮದ ಅವಿಭಾಜ್ಯ ಅಂಗಗಳು. ಪಾತ್ರಗಳ ಗುಣ ಸ್ವಭಾವಗಳ ವರ್ಣನೆ, ಪ್ರಕೃತಿ ವರ್ಣನೆ, ಸಮಯೋಚಿತವಾಗಿ ಬಂದರೆ ಕಾವ್ಯಗಳು ಸಹೃದಯ ಹೃದಯಾಹ್ಲಾದಕಗಳಾಗುತ್ತವೆ. ಆದಿಪುರಾಣದಲ್ಲಿ ಮನೋಜ್ಞವಾದ ವರ್ಣನೆಗಳು ದೊಡ್ಡ ಪ್ರಮಾಣದಲ್ಲಿ ಕಂಡು ಬರುತ್ತವೆ. ಪಂಚ ಕಲ್ಯಾಣಗಳ ವರ್ಣನೆ ಭರತನ ದಿಗ್ವಿಜಯವನ್ನು ನೋಡಲು ಬಂದ, ರಿಪುರನಾರಿಯರ ಶೃಂಗಾರ ವರ್ಣನೆ, ಅಂತಹ ಪುರಸ್ತ್ರೀಯರ ಮನಕ್ರೀಡೆ, ಜಲ ಕ್ರೀಡೆ, ವಿಹಾರಗಳ ವರ್ಣನೆ ಎಲ್ಲವೂ ಅಸ್ವಾದ್ಯ ಹಾಗೂ ವೈವಿಧ್ಯಮಯವಾಗಿದೆ. ಬೇರೆ ಯಾವ ಕಾವ್ಯಗಳಲ್ಲೂ ಕಾಣಸಿಗದ 'ಕುಸುಮಾಪಚಯ ಪ್ರಸಂಗ' ಪಂಪನ ವರ್ಣನಾ ದರ್ಶಚಮತ್ಕಾರಕ್ಕೆ ನಿರ್ದೇಶನವಾಗಿದೆ. 'ಕನ್ನಡ ಸಾಹಿತ್ಯದಲ್ಲಿ ಕಾಣುವ ಚೆಲುವಿನ ತಂಗುದಾಣಗಳಿವು' ಎಂಬ ಅಭಿಪ್ರಾಯವೂ ಇದೆ.

ಶರತ್ಕಾಲದ ಆಗಮನವನ್ನು ಕವಿ ಹೀಗೆ ವರ್ಣಿಸುತ್ತಾನೆ:

"ಪೊಸ ಜಾದಿಯ ಬೆಳೆದೊರಗಿದ ಪೊಸಕರಿಮೆಯ ಪೊಸತರಲ್ದ ತಾವರೆಗಳ ಕಂಪು ಅಸದಳಂ ಎಸೆದಿರೆ ದೆಸೆದೆಸೆಗೆ ಒಸಗೆಯೆ ಬರ್ಪಂತೆ ಕಣ್ಗೆ ವಂದುದು ಶರದಂ" (ಆ.ಪು)

ಕವಿಸಮಯ ಕೃತಕತೆಯ ಸ್ಪರ್ಶವಿಲ್ಲದ ಸಹಜವಾದ ಪ್ರಕೃತಿ ವರ್ಣನೆ ಇದು. ಪಂಪನ ಸ್ತ್ರೀ ವರ್ಣನೆಯ ಒಂದು ರೀತಿಯನ್ನು ಇಲ್ಲಿ ಉದ್ಧರಿಸಬಹುದು. ತೀರ್ಥಂಕರನ ತಾಯಿಯಾದ ಮರುದೇವಿಯ ಅಸಾಧಾರಣ ಸೌಂದರ್ಯವನ್ನು ಕವಿ ಕಂಡರಿಸಿದ ಬಗೆ ಇದು.

ಮೊಗಮಂ ತಾವರೆ ಕಣ್ಣನುತ್ಪಳದಳಂ ಧಮ್ಮಿಲ್ಲಮಂ ಸೋಗೆ ಸೆ
ಳ್ಳಗುರಂ ಕೇದಗೆ, ಪುರ್ಬನಂಗಜನ ಬಿಲ್ ದಂತಾಳಿಯಂ ಮುತ್ತು ಕೈ
ಮುಗಿದಾರಾಧಿಸಿ ಪೋಲ್ತುವೆನ್ನದೆ ಸರೋಜಾತಾದಿ ನಿಸ್ಸಾರವ
ಸ್ತುಗಳೊಳ್ ಪೋಲಿಸುವಂತುಟೇಮ್ಮರುಳನೇ ರೂಪಂ ವಿಚಿತ್ರಾಂಗಿಯಾ
(ಆ.ಪು:6–85)

'ತಾವರೆಯಂತೆ ಮೊಗ, ಉತ್ಪಲದಳದಂತೆ ಕಣ್'
ಎಂಬಿತ್ಯಾದಿಯಾಗಿ ಹೋಲಿಸಿ ಹೇಳುವುದು ಸಾಮಾನ್ಯವಾಗಿ ಕಂಡು ಬರುವ ರೀತಿ. ಆದರೆ ಇಲ್ಲಿ ಇದಕ್ಕೆ ವ್ಯತಿರಿಕ್ತವಾಗಿ, ಮೊಗವನ್ನು ತಾವರೆ, ಕಣ್ಣುಗಳನ್ನು ಉತ್ಪಲ ದಳಗಳು ಕೈ ಮುಗಿದಾರಾಧಿಸಿ ಪೋಲ್ತುವು' ಎನ್ನುವ ಮೂಲಕ ತೀರ್ಥಂಕರನ ಮಾತೆಯ ಅದ್ಭುತ ಸೌಂದರ್ಯವನ್ನು ಸೊಗಸಾಗಿ ಚಿತ್ರಿಸಲಾಗಿದೆ. ಪ್ರತಿಮಾಲಂಕಾರದ ಮೂಲಕ ಇಲ್ಲಿ ಚಮತ್ಕಾರವನ್ನು ತರಲಾಗಿದ್ದು ವಿಶಿಷ್ಟವೆನಿಸಿದೆ. ಪಂಪನ ವರ್ಣನಾಚಮತ್ಕಾರಕ್ಕೆ ಸಂಬಂಧಿಸಿದಂತೆ, ವಿಮರ್ಶಕರೊಬ್ಬರ ಮಾತು "ಪಂಪನ ವರ್ಣನೆಗೆ ಸಿಕ್ಕುವ ಮರ ಹೂ, ಹಕ್ಕಿ, ಪ್ರಾಣಿ, ಜಲ ಕ್ರೀಡೆ, ವಸ್ತ್ರಾಭರಣ, ಊಟ ಉಪಚಾರಗಳಲ್ಲಿ ಬಡಿಸುವ ಆಹಾರ ದ್ರವ್ಯ ಪಕ್ವಾನ್ನಗಳ ವಿವರ ಅವನ ಸುತ್ತ ಇರುವ ಜನರ ವೈವಿಧ್ಯ ಎಲ್ಲವೂ ಚಿತ್ರಕಲ್ಪದಲ್ಲಿನಂತೆ ಕಣ್ಣ ಮುಂದೆ ನಿಲ್ಲುತ್ತವೆ'. (ವಿ.ಸೀ. ಯವರ ಮಹಾಕವಿ ಪಂಪ 289) ಎಂಬುದರಲ್ಲಿ ಅತಿಶಯೋಕ್ತಿಯಿಲ್ಲ.

ಬಾಹ್ಯವನ್ನು ಚಿತ್ರಿಸುವಂತೆ ಅಂತರಂಗವನ್ನೂ ಅತ್ಯಂತ ಸಹಜವಾಗಿ ಚಿತ್ರಿಸುವ ಬಗೆ ಪರಿಣಾಮಕಾರಿಯಾಗಿದೆ.

ಲಲಿತಾಂಗನು ಮರಣ ಭೀತಿಯಿಂದ ರೋಧಿಸುವ ಚಿತ್ರ ಆತನ ಮನಸ್ಥಿತಿಯನ್ನು ಸಹಜವೆನ್ನುವಂತೆ ನಿರೂಪಿಸುತ್ತದೆ.

ಸುರತರುನಂದನಂಗಳಿರ ರತ್ನಪಿನದ್ಧವಿಮಾನಕುಟ್ಟಿಮಾಂ
ತರ ಸುರತಾಲಯಂಗಳಿರ, ಚಾರುವಿಲೋಲಕಟಾಕ್ಷಪಾತಸೌಂ
ದರಪರಿವಾರದೇವಿಯರಿರಾ, ಕಡುಕೆಯ್ದು ಕೃತಾಂತನಿಂತು ನಿ
ರ್ನೆರಮೆಟಿರ್ದುಯ್ಯೆ ಬಾರಿಸದೆ ಕೆಮ್ಮನುಪೇಕ್ಷಿಸಿ ನೋಡುತಿರ್ಪರೇ

(ಆ.ಪು3-4),

ಇಲ್ಲಿ ಲಲಿತಾಂಗನ ಅಸಹಾಯಕ ಸ್ಥಿತಿಯ ಚಿತ್ರಣ ತೀರ ಸಹಜವೆನ್ನುವಂತೆ ಬಂದಿದೆ.

ಸನ್ನಿವೇಶಕ್ಕೆ ಸರಿಹೊಂದುವ ಭಾಷೆ ಮತ್ತು ಛಂದಸ್ಸು, ಒಂದು ಕಾವ್ಯದ ಯಶಸ್ಸಿಗೆ ಕಾರಣೀಭೂತವಾದ ಅಂಶಗಳಲ್ಲಿ ಗಮನೀಯವಾದುವು. ಆದಿಪುರಾಣದಲ್ಲಿ ಬಳಸಿರುವ ಭಾಷೆ ಪಂಪನಿಗೆ ಸಂಸ್ಕೃತ ಮತ್ತು ಕನ್ನಡ

ಭಾಷೆಯ ಮೇಲಿರುವ ಪ್ರಭುತ್ವಕ್ಕೆ ಪ್ರಮಾಣವನ್ನೊದಗಿಸುತ್ತದೆ. ಕಾವ್ಯದಲ್ಲಿ ಬಳಸುವ ಭಾಷೆ ಹೇಗಿರಬೇಕು ಎಂಬುದನ್ನು ಪಂಪನು ಹೀಗೆ ಸೂಚಿಸುತ್ತಾನೆ.

ಮೃದುಮಧುರವಚನರಚನೆಯೊ
ಳು ದಾತ್ತಮರ್ಥಪ್ರತೀತಿಯಂ ಕೇಳ್ವ ಜನ
ಕ್ಕಿದಿರೊಳ್ಕು ಡದಂದದು ಕ
ಬ್ಬದೊಳಿರ್ದುಂ, ಕವಿಯ ಮನದೊಳಿರ್ದಂತೆ ವಲಂ (ಆ.ಪು:1–19)

ಕಾವ್ಯದಲ್ಲಿ 'ಮೃದು ಪದ ಗತಿ' ಇರಬೇಕೆಂದು ಹಿಂದೆಯೇ ಪ್ರಸ್ತಾಪಿಸಿದ ಕವಿ ಇಲ್ಲಿ ಉದಾತ್ತವಾದ ಅರ್ಥ ಪ್ರತೀತಿಯನ್ನು ಆ ರಚನೆ ಉಂಟುಮಾಡಲೇಬೇಕೆಂಬುದನ್ನು ಒತ್ತಿ ಹೇಳುತ್ತಾನೆ.

ಪಂಪ ಕನ್ನಡ ಪದ್ಯಗಳನ್ನೇ ಬಳಸಿಕೊಂಡು ಪದ್ಯಗಳನ್ನು ಹೆಣೆಯ ಬಲ್ಲ, ಸಂಸ್ಕೃತದ ದೀರ್ಘ ಸಮಾಸಗಳನ್ನು ಬಳಸಿಕೊಂಡು ಕಾವ್ಯಗಳನ್ನು ರಚಿಸಬಲ್ಲ, ಸಂಸ್ಕೃತ ಕನ್ನಡಗಳ ಹದವಾದ ಬೆಸುಗೆಯಿಂದ ಸೊಗಸನ್ನು ಆವಿಷ್ಕರಿಸಬಲ್ಲ.

ಕಿವಿಯಿಂ ಬಗೆವುಗುವೊಡೆ, ಕೊಂ
ಕುವೆತ್ತ ಪೊಸನುಡಿಯೆ ಪುಗುಗುಮುಟಿದುದು ಸಱುಸ್ಸೈ
ತವಚಱನೆ ಮಾಡಿ ಸಱುಸ್ಸೈ
ತುವೋಕುಮೇಂ.ಬಗೆಯ ಬಟ್ಟೆಯಂ ಮುಟ್ಟುಗುಮೇ (ಆ.ಪು:1–18)

ಈ ಕಂದ ಪದ್ಯದಲ್ಲಿ ಒಂದೇ ಒಂದು ಸಂಸ್ಕೃತ ಪದ ಬಳಕೆಗೊಂಡಿಲ್ಲ ಎಂಬುದನ್ನು ಗಮನಿಸಬಹುದು. ಈ ಕವಿಯೇ

ಹತವೈರಿಕ್ಷತ್ರಚಕ್ರಂ ಭಯಚಕಿತಜಗದ್ವೀರಚಕ್ರಂ ವಿನಮ್ರ
ಕ್ಷಿತಿಚಕ್ರಂ ದೀಪದೀಪ್ತಿಪ್ರತಿಹತದಿನಕೃಚ್ಚಕ್ರತೀವ್ರಾಂಶುಚಕ್ರಂ
ಜಿತದಿಕ್ಚಕ್ರಂ ಪ್ರಜಾಪ್ರಜ್ವಳಿತ ದಶದಿಶಾಚಕ್ರಮುಗ್ರಪ್ರತಾಪೋ
ರ್ಜಿತತೇಜಶ್ಚಕ್ರಮಿರ್ದತ್ತೊಳಪುಗದೆ ಪುರೋಪಾಂತದೊಳ್ ಚಕ್ರಿಚಕ್ರಂ

(ಆ.ಪು14–3)

ಎಂದೂ ಬರೆಯಬಲ್ಲ. ಆದರೆ ಅವನ ರಚನೆಗಳಲ್ಲಿ ಸಂಸ್ಕೃತ ಕನ್ನಡಗಳ ಹದವಾದ ಬೆರಕೆ, ಸಮನ್ವಯವೇ ಹೆಚ್ಚು. ಪಂಪನ ಶೈಲಿಯಲ್ಲಿ ಕಂಡುಬರುವ ಪದವಿನ್ಯಾಸ ರೀತಿ, ಉಕ್ತಿ ಚಮತ್ಕಾರ ಉತ್ಕೃಷ್ಟವಾದುದೆಂಬುದರಲ್ಲಿ ಎರಡು ಮಾತಿಲ್ಲ.

ಛಂದೋರೂಪಗಳ ಮೇಲಿನ ಪ್ರಭುತ್ವದಲ್ಲೂ, ಛಂದಸ್ಸಿನ ಔಚಿತ್ಯಪೂರ್ಣವಾದ ಬಳಕೆಯಲ್ಲೂ ಕನ್ನಡ ಕವಿಗಳಲ್ಲಿ ಪಂಪನಿಗೇ ಅಗ್ರ ಪಟ್ಟ. ಭಾವಪ್ರಕಾಶನಕ್ಕೆ ಸೂಕ್ತವಾದ ಛಂದಸ್ಸುಗಳನ್ನು ಆಯ್ಕೆ ಮಾಡಿಕೊಳ್ಳುವಲ್ಲಿ ಒಂದೇ ಛಂದೋರೂಪದಲ್ಲಿ ವಿವಿಧ ಲಯಗಳನ್ನು ಸಾಧಿಸುವುದರಲ್ಲಿ ಆತ ಸಿದ್ಧ ಹಸ್ತ. ವೃತ್ತಗಳನ್ನು ಧಾರಾಳವಾಗಿ ಬಳಸಿಕೊಂಡಿದ್ದರೂ ಕಂದ ಪದ್ಯದಲ್ಲಿಯೇ ಆತನಿಗೆ ಅಪರಿಮಿತ ಪ್ರೀತಿ. ನೀಲಾಂಜನೆಯ ನೃತ್ಯ ಹಾಗೂ ಅದರ ಪರಿಣಾಮದ ನಿರೂಪಣೆಗಾಗಿ ಕವಿ ಬಳಸಿರುವ ನಲವತ್ತೈದು ಕಂದಗಳೇ ಇದಕ್ಕೆ ಪ್ರಮಾಣ. ಭಾವ ವ್ಯಂಜನೆ, ಕಥನ ರೀತಿಗೆ, ವರ್ಣನಾ ಚಮತ್ಕಾರಕ್ಕೆ ಕಂದ ಪದ್ಯಗಳನ್ನು ಒಂದರ ಹಿಂದೆ ಮತ್ತೊಂದರಂತೆ ಪುಂಖಾನುಪುಂಖವಾಗಿ ಕೊಡುವ ಬಗೆ ಅನ್ಯಾದೃಶವಾದುದು. ಪುಷ್ಪಗಳ ವರ್ಣನೆಗಳಲ್ಲಿ ಹೆಚ್ಚೇಕೆ, ತನ್ನ ಬಗ್ಗೆಯೇ ಹೇಳಿಕೊಳ್ಳುವಲ್ಲಿ ಕವಿ ಕಂದ ಪದ್ಯಗಳನ್ನೇ ಫಲಪ್ರದವಾಗಿ ಬಳಸಿಕೊಂಡಿದ್ದಾನೆ. ಆ ಮೂಲಕ ಕಾವ್ಯಾತ್ಮಕತೆಯನ್ನು ಪರಿಪುಷ್ಟಗೊಳಿಸಿದ್ದಾನೆ.

ಆದಿಪುರಾಣವು ವಸ್ತು ಮತ್ತು ದರ್ಶನ, ಭಾಷೆ ಮತ್ತು ಛಂದಸ್ಸು ಎಲ್ಲವುಗಳ ದೃಷ್ಟಿಯಿಂದಲೂ ಒಂದು ಮಹಾಕಾವ್ಯ ಎನಿಸಿದೆ. ಧರ್ಮ ಅದು ಜಿನ ಧರ್ಮವೂ ಹೌದು. ಮಾನವ ಧರ್ಮವು ಹೌದು. ಅದನ್ನು ಕಾವ್ಯಾತ್ಮಕವಾಗಿ ಅಭಿವ್ಯಕ್ತಿಸುವಲ್ಲಿ ಕವಿ ಸಾಧಿಸಿದ ಸಮನ್ವಯ ಅದ್ವಿತೀಯವಾದದು. ಈ ಸಮನ್ವಯ ಸಾಧನೆಯಲ್ಲಿ ಆದಿಪುರಾಣವನ್ನು ಮೀರಿಸುವ ಬೇರೊಂದು ಕೃತಿ ಈವರೆಗೆ ಹುಟ್ಟಿಲ್ಲ.

****

ಪಂಪನ ಆದಿಪುರಾಣದ ಕಾವ್ಯಶಿಲ್ಪವನ್ನು ಕುರಿತು

ಡಾ. ಜಿ. ರವಿ,

ಕ್ರಿ.ಶ. ಹತ್ತನೆಯ ಶತಮಾನದಲ್ಲಿ ಬದುಕಿ ಬಾಳಿದ ಪಂಪ ಕವಿ ಲೋಕೋತ್ತರವಾದ, ಅತ್ಯಂತ ಪ್ರಭಾವಶಾಲಿಯಾದ ಕವಿ. ಇವನ ಎರಡು ಕಾವ್ಯಗಳು ಕಾಲ, ದೇಶಗಳನ್ನು ದಾಟಿ ಪ್ರಸಿದ್ಧವಾಗಿವೆ. ಪಂಪನ ಆದಿಪುರಾಣದ ಕಥಾನಕಕ್ಕೆ ಒಂದು ನಿರ್ದಿಷ್ಟವಾದ ಕ್ರಮವಿದೆ. ಬೆಳವಣಿಗೆಯಿದೆ. ಈ ಕ್ರಮದ ಮೂಲಕ ನೋಡುವುದಾದರೆ. ಕಾವ್ಯದಲ್ಲಿ ಮೂರು ಭಾಗಗಳಿವೆ. ಮೊದಲ ಭಾಗ ಆದಿನಾಥನ ಹಿಂದಿನ ಜನ್ಮಗಳ ಕತೆ. ಎರಡನೆಯ ಭಾಗ ಆದಿನಾಥನ ಹುಟ್ಟು ಮತ್ತು ವೈರಾಗ್ಯ. ಮೂರನೆಯ ಭಾಗ ಭರತನ ಸಾಹಸಗಳು ಮತ್ತು ವೈರಾಗ್ಯ. ಕಾವ್ಯದ ಆರಂಭದಲ್ಲಿ ಪಂಪ ತನ್ನ ಬಗೆಗೆ ಮತ್ತು ತನ್ನ ಕಾವ್ಯದ ಬಗೆಗೆ ಹೇಳಿಕೊಂಡಿದ್ದಾನೆ. ಇದನ್ನು ಮುಂದಿನ ಕವಿಗಳೂ ಅನುಸರಿಸಿರುವುದನ್ನು ಕಾಣಬಹುದು. ಆದಿಪುರಾಣದ ಮುಖ್ಯಕತೆ ಮೊದಲ ಅಧ್ಯಾಯದಲ್ಲೇ ಆರಂಭವಾಗುತ್ತದೆ. ಜೈನರ ಮೊದಲ ತೀರ್ಥಂಕರನಾದ ವೃಷಭದೇವ (ಆದಿನಾಥ) ಹಲವಾರು ಭವಾವಳಿಗಳನ್ನು ಅನುಭವಿಸಿ, ಮುಕ್ತಿಯನ್ನು ಪಡೆದ ವಿಚಾರವೇ ಆದಿಪುರಾಣದ ಕೇಂದ್ರವಸ್ತು. ಮಹಾಬಲ, ಲಲಿತಾಂಗ, ವಜ್ರಜಂಘ, ಶ್ರೀಧರದೇವ, ಸುವಿಧಿ ಇದೆಲ್ಲ ಆದಿನಾಥನ ಹಿಂದಿನ ಜನ್ಮಗಳ ಪಾತ್ರಗಳು. ಹಂತಹಂತವಾಗಿ ಅವನ ಮನಸ್ಸು ಪರಿಪಕ್ವಗೊಂಡದ್ದನ್ನು ಎಲ್ಲಿಯೂ ನೀರಸವಾಗದ ಹಾಗೆ ಕಾವ್ಯಕೃತಿಯಲ್ಲಿ ಸೃಷ್ಟಿಸಿರುವುದೇ ಪಂಪನ

ಹೆಚ್ಚುಗಾರಿಕೆ. ಮೂಲಕೃತಿಯಾದ 'ಪೂರ್ವಪುರಾಣ'ಕ್ಕಿಂತ ಆದಿಪುರಾಣವನ್ನು ತನ್ನ ದರ್ಶನ ಮತ್ತು ಸೃಜನಶೀಲ ಸಾಮರ್ಥ್ಯದಿಂದ ಸತ್ವಪೂರ್ಣಗೊಳಿಸಿದ್ದು ಪಂಪನ ಹಿರಿಮೆ. ಹೀಗಾಗಿ ಆದಿಪುರಾಣ ಕನ್ನಡದ ಪ್ರಾಚೀನ ಸಾಹಿತ್ಯದ ಅತ್ಯುತ್ತಮ ಕೃತಿಯಾಗಿ ಓದುಗರನ್ನು, ವಿಮರ್ಶಕರನ್ನು ಸೆಳೆದಿದೆ.

ಆದಿಪುರಾಣ – ಶೃಂಗಾರ ಮತ್ತು ವೈರಾಗ್ಯಗಳ ಮುಖಾಮುಖಿಯನ್ನು ಒಳಗೊಂಡ ರಾಜಕೀಯ ಮಹತ್ವಾಕಾಂಕ್ಷೆ ಮತ್ತು ಧರ್ಮದ ಸತ್ಯಗಳನ್ನು ಶೋಧಿಸುವ ಕಾವ್ಯ ಆದಿಪುರಾಣ. ವಿವರಿಸುವುದಾದರೆ ಶೃಂಗಾರ ಮತ್ತು ವೈರಾಗ್ಯಗಳು ಈ ಕಾವ್ಯದ ತುಂಬ ಹರಡಿಕೊಂಡಿದೆ. ಅದರಲ್ಲೂ ಮೊದಲ ಮತ್ತು ಎರಡನೆಯ ಭಾಗದಲ್ಲಿ ಈ ಗಂಡು- ಹೆಣ್ಣಿನ ಸಂಬಂಧದ ಸೂಕ್ಷ್ಮಗಳು ಅದರ ಎಲ್ಲ ವೈವಿಧ್ಯಗಳೊಂದಿಗೆ ಚಿತ್ರಿತವಾಗಿವೆ. ಆದಿನಾಥನ ಪೂರ್ವ ಭವಾವಳಿಗಳು ಇಂಥ ಸುಖಭೋಗಗಳ ಅವಧಿ, ಸ್ವಯಂಪ್ರಭೆ ಲಲಿತಾಂಗ, ಶ್ರೀಮತಿ ವಜ್ರಜಂಘರ ಸಂಬಂಧದಲ್ಲಿ ಇದನ್ನು ಗುರುತಿಸಬಹುದು. ಇಲ್ಲೆಲ್ಲ ಮಿತಿಮೀರಿದ ಸುಖಭೋಗಗಳನ್ನು, ಶೃಂಗಾರದ ಪರಮಾವಧಿಯನ್ನು ಗಂಡು–ಹೆಣ್ಣು ಅನುಭವಿಸಿದರೂ ಅದರ ನೆರಳಲ್ಲಿ ಇರುವ ದಟ್ಟವಾದ ಸಾವು, ವಿಷಾದ ಅವರನ್ನು ಕಾಡದೆ ಬಿಡುವುದಿಲ್ಲ.

ಲಲಿತಾಂಗನ ಭೋಗಜೀವನ ಇನ್ನು ಕೆಲವು ದಿನಗಳಲ್ಲಿ ಮುಗಿಯುವುದೆನಿಸಿದಾಗ ಅವನು ಧರಿಸಿದ್ದ ಪುಷ್ಪಹಾರವು ಬಾಡಿತು. ದೇಹಕಾಂತಿ ಕುಗ್ಗಿತು. ಆಭರಣಗಳು ಕಾಂತಿಹೀನವಾದವು. ಸಾವು ಹತ್ತಿರವಾದ ಸೂಚನೆ ಸಿಕ್ಕಿತು. ಇದರಿಂದ ಭಯಗೊಂಡ ಅವನ ಚಿತ್ರವನ್ನು ಪಂಪ ಅತ್ಯಂತ ಸ್ವಾಭಾವಿಕವಾಗಿ ಚಿತ್ರಿಸುತ್ತಾನೆ. ಲಲಿತಾಂಗ ತನ್ನ ಭೋಗವಸ್ತುಗಳ ಮುಂದೆ ಪ್ರಲಾಪ ಮಾಡಿ, ನಂತರ ತನ್ನ ಕಾಮ ಸಾಮ್ರಾಜ್ಯದ ರಾಣಿಯಾದ ಸ್ವಯಂಪ್ರಭೆಯನ್ನು ಬೇಡುತ್ತಾನೆ.

> **ಸಂತಸದಂತನೆಯ್ದಿ ಸುರತಾಮೃತದೊಳ್ ತಣಿದಲುರಿಂ ಜಗಿ**
> **ಲ್ತಂತಿರೆ ಪತ್ತಿ ಮೈಯ್ಗಳೆರಡಾದೊಡಮೇನಸುವೊಂದೆ ನೋಟಿಪ್ಪೊಡೆಂ**
> **ಬಂತಿರೆ ಕೂಡಿ ನಿನ್ನೊಡನೆ ಭೋಗಿಸಲೀಯದೆ ಕೆಮ್ಮನೆನ್ನನು**
> **ಯ್ವಂತಕನೆಂಬ ಭೂತನೆಲೆ ಮಾಣಿಸಲಾಗದೆ ಪೇಳ್ಪ್ ಸ್ವಯಂಪ್ರಭೆ**

'ವಸ್ತು ಭೀತ ಚೇತನವೊಂದರ ತಳಮಳ, ಯಾತನೆ, ಯಾಚನೆಗಳನ್ನು ಪಂಪ ಇಲ್ಲಿ ಅನ್ಯಾದೃಶವಾಗಿ, ಅರ್ಥಪೂರ್ಣವಾಗಿ ಚಿತ್ರಿಸಿದ್ದಾನೆ. ಇಂಥ ಸ್ವೋಪಜ್ಞತೆಯಿಂದಲೇ ಅವನ ಕಾವ್ಯ ಮೂಲದಲ್ಲಿಲ್ಲದ ಶ್ರೀಮಂತಿಕೆಯನ್ನು ಪಡೆದುಕೊಂಡಿರುವುದು' ಎಂದು ಡಾ॥ ಸಿ.ಪಿ. ಕೃಷ್ಣಕುಮಾರ್ 'ಪಂಪ ಜಿನಸೇನ ಕೆಲವು ಟಿಪ್ಪಣಿಗಳು' ಲೇಖನದಲ್ಲಿ ಹೇಳಿದ್ದಾರೆ. ಶ್ರೀಮತಿ. ವಜ್ರಜಂಘರ ಘಟನೆ ಕೂಡ ಅಪಾರವಾದ ಕಾಮಲಾಲಸೆ, ಭೋಗ ಮತ್ತು ಅದರ ಹಿಂದೆಯೇ ಬರುವ ದಿಢೀರ್ ಸಾವಿನ ಅನುಭವವನ್ನು ಅದ್ಭುತವಾಗಿ ಹೇಳುತ್ತದೆ. ಭೋಗದ ವಸ್ತುವಾದ ಸುಗಂಧದ ಹೊಗೆಯು ಕೊಠಡಿಯಲ್ಲಿ ಭೋಗದಲ್ಲಿ ತೊಡಗಿದ್ದ ವ್ಯಕ್ತಿಗಳನ್ನು ಕೃಷ್ಣಸರ್ಪದಂತೆ ಕೊಲ್ಲುತ್ತದೆ.

ಬಿಡದೆ ಪೊಗೆ ಸುತ್ತೆ ತೋಳಂ
ಸಡಿಲಿಸದಾ ಪ್ರಾಣವಲ್ಲಭರ್ ಪ್ರಾಣಮನ್ ಅಂ
ದು ಒಡಗಳೆದರ್ – ಓಪರ್ ಓಪರೊಳೆ
ಒಡಸಾಯಲ್ ಪಡೆದರ್– ಇನ್ನವೇಂ ಸೈಪೊಳವೇ !

ಒಟ್ಟಿಗೆ ಬಾಳಿದ ಪ್ರೇಮಿಗಳು ಒಟ್ಟಿಗೆ ಸಾಯುವುದಕ್ಕಿಂತ ಬೇರೆ ಪುಣ್ಯವುಂಟೇ? ಎನ್ನುತ್ತಾನೆ ಪಂಪ. ಗಮನಿಸಬೇಕಾದ ಅಂಶ ಈ ಎರಡೂ ಘಟನೆಗಳಲ್ಲಿ ತೀವ್ರವಾದ ಸುಖದ ನಂತರ ಬರುವ ವಿಷಾದ. ನೋವು – ಬದುಕಿನ ಅಕರ್ಷಣೆಗಳನ್ನು ಮೀರಿ ನಿಲ್ಲುವ ಅನಿರೀಕ್ಷಿತ ತಿರುವುಗಳು.

ಆದಿನಾಥನ ಬೆಳವಣಿಗೆಗೆ ಕಾರಣವಾಗುವ ಇನ್ನೊಂದು ಸಂದರ್ಭ– ನೀಲಾಂಜನೆ ಎಂಬ ಅಮರ ನರ್ತಕಿಯ ನೃತ್ಯಕ್ಕೆ ಸಂಬಂಧಿಸಿದ್ದು. ಇದು ಅವನ ಮನಸ್ಸನ್ನು ಪೂರ್ಣವಾಗಿ ತಿರುಗಿಸಿ, ವೈರಾಗ್ಯದ ಕಡೆ ವಾಲುವಂತೆ ಮಾಡುತ್ತದೆ. ಪಂಪನ ಈ ಕಾವ್ಯದಲ್ಲಿ ನೃತ್ಯದ ಮಹತ್ವವನ್ನು ಗಮನಿಸಬೇಕು. ನೃತ್ಯ ಒಂದು ಕಲಾ ಪ್ರಕಾರ. ಜೊತೆಗೆ ಬದುಕಿನ ಆರೋಗ್ಯದ, ಉಲ್ಲಾಸದ ಸಂಕೇತ. ಇಲ್ಲಿ ಎರಡು ನೃತ್ಯಗಳ ಮಧ್ಯೆ ಆದಿನಾಥನ ಜೀವನವಿದೆ. ಅಂದರೆ ಇವೆರಡೂ ಅವನ ಬದುಕಿನಲ್ಲಿ ನಿರ್ಣಾಯಕ ಪಾತ್ರವನ್ನು ವಹಿಸುತ್ತವೆ. ಒಂದು ಅವನ ಹುಟ್ಟಿನ ಸಂದರ್ಭದಲ್ಲಿ ಏರ್ಪಡಿಸಲಾಗುವ ಮಹೇಂದ್ರನ ಆನಂದನೃತ್ಯ. ಇನ್ನೊಂದು ಅವನ ಮುಕ್ತಿಗೆ ನೆರವಾಗುವ

ನೀಲಾಂಜನೆಯ ನೃತ್ಯ. ಎರಡೂ ಪಂಪಕವಿಯ ಗ್ರಹಿಕೆ ಮತ್ತು ಸಂಯೋಜನೆಗಳಿಂದಾಗಿ ಸೊಗಸಾಗಿದ್ದು, ಆದಿಪುರಾಣ ಕಾವ್ಯದ ಉಜ್ವಲ ಭಾಗಗಳಾಗಿವೆ. ಮಹೇಂದ್ರನ ಆನಂದ ನೃತ್ಯದಲ್ಲಿ 'ಭವ್ಯತೆ'ಯ ಅನುಭವವನ್ನು ಕಾಣಬಹುದಾದರೆ. ನೀಲಾಂಜನೆಯ ನೃತ್ಯದಲ್ಲಿ ನೃತ್ಯ ನೀಡಬಹುದಾದ ದೃಶ್ಯ, ಶ್ರವ್ಯ, ಮತ್ತು ಒಳಗೊಳ್ಳುವಿಕೆಯ (Involvement) ಅನುಭವವನ್ನು ಪಡೆಯುವಂತೆ ಪಂಪ ಚಿತ್ರಿಸಿದ್ದಾನೆ. ಈ ಕೆಳಗಿನ ಪದ್ಯಗಳು ನೃತ್ಯದ ವಿವಿಧ ಚಮತ್ಕಾರಗಳನ್ನು ಮತ್ತು ಅದರಿಂದ ಪ್ರೇಕ್ಷಕರ ಮೇಲಾದ ಪರಿಣಾಮವನ್ನೂ ಸೂಚಿಸುತ್ತದೆ. ಪಂಪಕವಿಯ ಅಸಾಧಾರಣವಾದ ಕಾವ್ಯಸೃಷ್ಟಿಯ ಪ್ರತಿಭೆ, ಇಲ್ಲಿ ಕ್ರಿಯಾಶೀಲವಾಗಿದೆ.

1. **ಎನಿಸಿದ ನೀಳಾಂಜನೆ ಕ**
   ರ್ಬಿನ ಬಿಲ್ಲಿಂ ಮಸೆದ ಮದನನಲರ್ಗಣೆ ಬರ್ದುಂಕಿ
   ತ್ತೆನಿಸುತ್ತೊಳಪೊಕ್ಕಳ್ ಭೋಂ
   ಕನೆ ನಿಖಿಳ ಜನಾಂತರಂಗಮುಮಂ ರಂಗಮುಮಂ (9–19)
2. ನೀಲಾಂಜನೆ ನಾಟ್ಯವೇದಗಳನ್ನು ಹೊಸದುಗೊಳಿಸಿದಳು (ರಸಭಾವಾಭಿನಯಂಗಳ್...)
3. ಭಾರತೀ, ಸಾತ್ವತಿ, ಕೈಶಿಕ, ಆರಭಟಿವೃತ್ತಿಗಳನ್ನು
   ಆ ಬೆಡಗಿ ಅನ್ಯಾದೃಶವಾಗಿ ಪ್ರದರ್ಶಿಸಿದಳು.
4. ನೀಲಾಂಜನೆಯು ವೇದಿಕೆಗೆ ಬಂದೊಡನೆ ಮನ್ಮಥನು ಸಭೆಗೆ
   ಮನ್ಮಥಬಾಣಗಳನ್ನು ಬಿಡಲು ಆರಂಭಿಸಿದನು.
5. ವಾದ್ಯಗಳು ವಾದನವನ್ನು ಆರಂಭಿಸಿದವು.
6. ನರ್ತಕಿಯೇ ಸಭೆಗೆ ವಾದಕಿಯಾದಳು. ವಾದಕನ ಕೈ ಸೋತಾಗ
   ನೀಲಾಂಜನೆಯೇ ಆ ಕೆಲಸವನ್ನು ಸುಲಲಿತವಾಗಿ ಮಾಡಿದಳು.
7. ಪೊನ್ನವೆಳ್ದಿಂಗಳ್ ದೆಸೆದೆಸೆಗಸೆದು– ನರ್ತಕಿಯ ಹುಬ್ಬುಗಳ
   ಕುಣಿತದಿಂದ ಹೊಸ ಬೆಳದಿಂಗಳು ದಿಕ್ಕುದಿಕ್ಕುಗಳಲ್ಲಿ ಅರಳಿತು.

8. ಅವಯುವದಿಂದಮೆ ದೇವಾಂ
ಗವಸ್ತ್ರದುಳ್ಳುಡೆಯನಾಕೆಯೋಸರಿಸುವ ಸೂ
ಸುವ ಹಾರಲತೆಯಳವಡಿ
ಸುವ ಭಂಗಿಯೆ ಮದನರಾಜವಿಳಾಸಂ. (9–36)

9. ಈ ನೃತ್ಯ ಅಮಲೇರುವಂತೆ ಮಾಡಬಲ್ಲುದು ಎನ್ನುವಂತೆ ಅವಳು ವೀಕ್ಷಕರ ಮುಂದೆ ಮನೋಹರವಾಗಿ ನೃತ್ಯ ಮಾಡಿದಳು.

10. ಅವಳ ಕರಣಗಳನ್ನು, ಪಾದಗತಿಯ ವೈಚಿತ್ರ್ಯಗಳನ್ನು ಜನ ಮೆಚ್ಚಿಕೊಂಡು,

'ಹೋ' ಎಂದು ಉದ್ಗರಿಸಿದರು. ಅಷ್ಟರಲ್ಲಿ ಅವಳ ಸಾವು ಬಂದಿತು. ಇಂದ್ರನು ಇನ್ನೊಬ್ಬಳನ್ನು ನೃತ್ಯಕ್ಕೆ ನಿಯಮಿಸಿದನು. ಈ ಬದಲಿ ನರ್ತಕಿಯನ್ನು ಕಂಡುಹಿಡಿದ ಆದಿದೇವನು ಸುಖಭೋಗಗಳ ಕ್ಷಣಿಕತೆಗಾಗಿ ಚಿಂತಿಸಿ ವೈರಾಗ್ಯದ ದಾರಿ ಹಿಡಿದನು. ಆಮೇಲೆ ಅವನು ಬದುಕಿನ ನಿಸ್ಸಾರತೆಯ ಬಗೆಗೆ ಯೋಚಿಸುತ್ತಾನೆ.

ನಾರೀರೂಪದ ಯಂತ್ರಂ
ಚಾರುತರಂ ನೋಡಿ ನೋಡಿ ಕರಗಿದುದೀ ಸಂ
ಸಾರದನಿತ್ಯತೆ ಮನದೊಳ್.
ಬೇರೂಟಿದುದೀಗಳೆಂತಿದಂ ಕಡೆಗಣಿಪೆಂ (9–44)

ತನುರೂಪ ವಿಭವಯೌವನ
ಧನ ಸೌಭಾಗ್ಯಾಯುರಾದಿಗಳ್ಗಿಣೆ ಕುಡುಮಿಂ
ಚಿನ ಪೊಳಪು ಮುಗಿಲ ನೆಟಿಲಿಂ
ದ್ರನ ಬಿಲ್ ಬೊಬ್ಬುಳಿಕೆಯುರ್ಬು ಪರ್ಬಿದ ಭೋಗಂ (9–46)

ಈ ಮೂರು ಪ್ರಸಂಗಗಳು ಅಂತಿಮವಾಗಿ, ಸಾವು ಅಥವಾ ವೈರಾಗ್ಯದಲ್ಲಿ ಕೊನೆಗೊಳ್ಳುವುದು ಗಮನಿಸಬೇಕಾದ ಅಂಶ. ಹಾಗಾದರೆ ಈ ಕಾವ್ಯದ ಉದ್ದೇಶ ವೈರಾಗ್ಯದ, ಜೀವನವಿಮರ್ಶೆಯ ಪ್ರತಿಪಾದನೆಯೇ? ಎಂಬ ಪ್ರಶ್ನೆ ಬರುತ್ತದೆ. ಪಂಪ ವೈರಾಗ್ಯಕ್ಕೆ ಕಾರಣವಾಗುವ ಸಾವಿನ

ಮುಂಚಿನ ಸನ್ನಿವೇಶಗಳನ್ನು ಸಾರವತ್ತಾಗಿ, ದೀರ್ಘವಾಗಿ, ಕಲಾತ್ಮಕವಾಗಿ ವರ್ಣಿಸಿರುವುದನ್ನು ನೋಡಿದರೆ ಮೇಲಿನ ಪ್ರಶ್ನೆಗೆ ಉತ್ತರ ಸಿಗುತ್ತದೆ. ಪಂಪನೇ ಇದು ಧಾರ್ಮಿಕ ಕಾವ್ಯ, ಇಲ್ಲಿ ಜಿನಾಗಮವನ್ನು ಬೆಳಗುತ್ತೇನೆ ಎಂದು ಧರ್ಮದ ಒತ್ತಾಯಕ್ಕೆ ಮಣಿದು ಅಂದಿದ್ದರೂ ಧಾರ್ಮಿಕ ಮನೋಭಾವಕ್ಕೆ ಉಚಿತವಲ್ಲದ ಶೃಂಗಾರದ ಸನ್ನಿವೇಶಗಳನ್ನು ಧರ್ಮಕ್ಕಿಂತ ಹೆಚ್ಚಾಗಿ ಲೌಕಿಕಸೆಳೆತಗಳ ವಿಚಾರಗಳನ್ನು ಹದವರಿತು ಬಳಸುವುದರಿಂದ ಅವನ ಒಲವು ಧರ್ಮದ ಒಳಗನ್ನು ಪ್ರಶ್ನಿಸುವುದಾಗಿತ್ತೇ ಹೊರತು ಕಣ್ಣು ಮುಚ್ಚಿ ಒಪ್ಪಿಕೊಳ್ಳುವುದಾಗಿರಲಿಲ್ಲ ಎಂದು ತಿಳಿಯುತ್ತದೆ. ಜೊತೆಗೆ ಬದುಕಿನ ಅಂತಿಮ ಗುರಿಯಾದ ಮುಕ್ತಿ, ವೈರಾಗ್ಯಗಳಿಗಿಂತ ಜೀವನದ ಉಲ್ಲಾಸದ, ಸಂಭ್ರಮದ ಕಡೆಗೆ ಪಂಪನ ಗಮನ ಹೆಚ್ಚಾಗಿ ಹರಿದಿದೆ. ಮೂಲಕಾವ್ಯದಲ್ಲಿದ್ದ ಧಾರ್ಮಿಕ ವಿವರಗಳು ಇಲ್ಲಿಲ್ಲದಿರುವುದೇ ಇದಕ್ಕೆ ನಿದರ್ಶನ. ಒಟ್ಟಿನಲ್ಲಿ ಈ ಪ್ರಸಂಗಗಳ ಮೂಲಕ ಪಂಪಕವಿಯು ಬದುಕಿನಲ್ಲಿ ಒಂದರ ಬೆನ್ನ ಹಿಂದೆ ಇನ್ನೊಂದರಂತೆ ಬರುವ ಸಂಭ್ರಮ ಮತ್ತು ತಲ್ಲಣಗಳನ್ನು ಉಲ್ಲಾಸ ಮತ್ತು ಸಂಕಟಗಳನ್ನು, ಗಂಡು–ಹೆಣ್ಣಿನ ಸಂದರ್ಭದಲ್ಲಿ ಪರಿಶೀಲಿಸುವ, ಆ ಪರಿಶೀಲನೆಯನ್ನು ಕಾವ್ಯವಾಗಿಸುವ ಕ್ರಮವನ್ನು ಕಾಣುತ್ತೇವೆ.

ರಾಜಕೀಯ ಮಹತ್ವಾಕಾಂಕ್ಷೆ ಎಂಬುದು ಹೇಗೆ ಮನುಷ್ಯ ಜನಾಂಗವನ್ನು ಹಾಳು ಮಾಡುತ್ತದೆ, ಭಾವಪ್ರಧಾನವಾದ ಮನುಷ್ಯ ಸಂಬಂಧಗಳನ್ನು ಹೀಗೆ ಅಳಿಸಿಹಾಕುತ್ತದೆ. ಎಂಬುದನ್ನು ಭರತ–ಬಾಹುಬಲಿ ಸಂಘರ್ಷದ ಘಟನೆಯ ಮೂಲಕ ನೋಡಬಹುದು.

ಭರತ–ಬಾಹುಬಲಿಗಳ ಸಂಘರ್ಷದ ಪ್ರಸಂಗ ಅಧಿಕಾರದ ಆಸೆ ಮತ್ತು ಮಾನವೀಯ ಹೋರಾಟದ ಮುಖಾಮುಖಿಯಾಗಿವೆ. ಒಂದು ಕಾಲದ ರಾಜಕೀಯ ಪಲ್ಲಟಗಳನ್ನು ಇದು ಪ್ರತಿನಿಧಿಸುತ್ತದೆ. ನಿರಂಕುಶ ಆಡಳಿತ, ರಾಜ್ಯಾಧಿಕಾರದ ಮೋಹ, ಕೊನೆಯಲ್ಲಿ ಗೆಲ್ಲುವ ಪ್ರೀತಿ, ಕ್ಷಮೆ, ಮತ್ತು ಅನುಕಂಪಗಳು ಭರತನನ್ನು ಉದಾತ್ತನನ್ನಾಗಿ ಮಾಡುತ್ತವೆ. ಈ ಕಾವ್ಯಭಾಗದಲ್ಲಿ ಪಂಪನು ರಾಜಕೀಯ ಚತುರತೆಯ ಸೂಕ್ಷ್ಮಗಳನ್ನು ವರ್ಣನೆಯಲ್ಲಿ, ಸಂಭಾಷಣೆಯಲ್ಲಿ ಪುನರ್ ಸೃಷ್ಟಿ ಮಾಡಿದ್ದಾನೆ. ಈ

ಕಾರಣಕ್ಕಾಗಿಯೇ ಭರತ-ಬಾಹುಬಲಿ ಯಾವುದೋ ಕಾಲದ ಜೈನ ರಾಜರುಗಳಾಗಿ ಉಳಿಯದೆ, ಎಲ್ಲ ಕಾಲದ ಕಾದಾಡುವ ಅಣ್ಣ-ತಮ್ಮಂದಿರಾಗಿ ಕಾಣುತ್ತಾರೆ. ರಾಜ್ಯಕ್ಕಾಗಿ ನಡೆವ ಅವರ ಹೋರಾಟ ಎಲ್ಲ ಕಾಲದ ಸೋದರರ ನಡುವಿನ ಆಸ್ತಿಗಾಗಿ, ಅಧಿಕಾರಕ್ಕಾಗಿ, ಸಂಪತ್ತಿಗಾಗಿ ನಡೆಯುವ ಹೋರಾಟವಾಗುತ್ತದೆ. ಒಬ್ಬ ಮಹಾಕವಿ ಸಾರ್ವಕಾಲಿಕವಾಗುವುದು ಹೀಗೆಯೇ ಅನಿಸುತ್ತದೆ. ಪಂಪ ಈ ಭಾಗದಲ್ಲಿ ಯಾವ ಪಾತ್ರದ ಪರವಾಗಿಯೂ ಇಲ್ಲದಿರುವುದರಿಂದ ಅವನಿಗೆ ಪಾತ್ರಗಳ ವಿಭಿನ್ನ ಮನಸ್ಥಿತಿಗಳನ್ನು ಆಳವಾಗಿ ಗ್ರಹಿಸಿ, ದಾಖಲಿಸುವುದು ಸಾಧ್ಯವಾಗಿದೆ. ಈ ಭಾಗದ ಮುಖ್ಯ ಪದ್ಯಗಳನ್ನು ಕುರಿತು ಈಗ ವಿವೇಚಿಸಬಹುದು.

ಭರತನ ದಿಗ್ವಿಜಯದ ನಂತರ, ಅವನು ಬಾಹುಬಲಿಯನ್ನು ಮಾತ್ರ ಗೆದ್ದಿಲ್ಲವೆಂಬ ಸೂಚನೆ ಚಕ್ರರತ್ನದ ಸೂಚನೆಯಿಂದ ತಿಳಿಯುತ್ತದೆ. ಎಲ್ಲ ತಮ್ಮಂದಿರನ್ನೂ ಗೆಲ್ಲುವ, ಒಲಿಸಿಕೊಳ್ಳುವ ಉದ್ದೇಶದಿಂದ ತುಂಬ ಬುದ್ಧಿವಂತಿಕೆಯಿಂದ ಶಾಸನವೊಂದನ್ನು ಬರೆಸಿ ಅವರಿಗೆ ಕಳಿಸುತ್ತಾನೆ.

ಎನಗೊರ್ವಂಗುಪಭೋಗ್ಯಮಲ್ತು ವಸುಧಾಸಾಮ್ರಾಜ್ಯಮೋರಂತೆ ನಿ
ಮ್ಮನಿಬರ್ಗಂ ಪಿರಿಯಣ್ಣನೇಂ ಜನಕನೇನೆಂಬೊಂದು ಕೊಂಡಾಟದಿಂ
ವಿನಯಂ ಸಲ್ವುದು ತಾಮುಮಾಮುಮೊಡನಿರ್ಪಂ ಬಪುದೆಂ ಶಾ
ಸನಮಂ ನೆತ್ತಿಯೊಳಾಂತು ಬನ್ನಿಮೆಱಗಿಂ ಚಕ್ರೇಶ ಪಾದಾಬ್ಜದೊಳ್ !

(14–31)

ನೂರು ಜನ ತಮ್ಮಂದಿರು ಮೊದಲಿಗೆ ಅಸಮಾಧಾನವನ್ನು ತೋರಿಸಿದರೂ, ಆನಂತರ ಭರತನ ಅಹಂಕಾರಕ್ಕೆ ಮಣಿದರು. ಅವರ ಪ್ರತಿಕ್ರಿಯೆ ಇದು.:

ಪಿರಿಯಣ್ಣಂ ಗುರು ತಂದೆಯೆಂದೆಱಗುವಂ ಮುನ್ನೆಲ್ಲಮಿಂತೀಗಳಾ
ಳರಸೆಂಬೊಂದು ವಿಭೇದವಾದೊಡೆಱಕಂ ಚಿಃ ಕಷ್ಟಮಲ್ತೇ ವಸುಂ
ಧರೆಗಯ್ಯಂ ದಯೆಗೆಯ್ಯೆ ಮುಂ ಪಡೆದುದರ್ಕಿಂತೀತನೊಳ್ ತೊಟ್ಟ ಕಿಂ
ಕರಭಾವಂ ನಮಗಕ್ಕಿಗೊಟ್ಟು ಮಡಗೂಳುಟುಣ್ಬಂದಮಂ ಪೋಲದೇ !

(14–32)

ಭರತನ ಉಳಿದ ತಮ್ಮಂದಿರೆಲ್ಲ ಸಮವಸರಣ (ತಪೋಭೂಮಿ)ಕ್ಕೆ ಹೊರಡುತ್ತಾರೆ. ಭರತನು ಬಾಹುಬಲಿಯನ್ನು ಸಾಮದಿಂದಾಗದಿದ್ದರೆ. ದಂಡದಿಂದಾದರೂ ಒಲಿಸುವೆನೆನ್ನುತ್ತಾನೆ. ಸಂಧಿವಿಗ್ರಹಿ ಬಾಹುಬಲಿಯನ್ನು ನಯವಾಗಿ ರಾಜ್ಯವನ್ನು ಕೊಟ್ಟುಬಿಡಲು ಕೇಳುತ್ತಾನೆ. ಬಾಹುಬಲಿ ಭರತನ ತಂತ್ರಗಳನ್ನೆಲ್ಲ ಹೀಯಾಳಿಸುತ್ತಾನೆ. ಚಕ್ರರತ್ನವನ್ನು ಮುಂದಿಟ್ಟುಕೊಂಡು ರಾಜ್ಯಗಳನ್ನು ಭಿಕ್ಷೆ ಬೇಡಿ ತಂದದ್ದು ಎನ್ನುತ್ತಾನೆ. 'ಹಿಂದಿನ ರಾಜರ ಶಾಸನಗಳನ್ನು ಅಳಿಸಿ, ಅದರ ಮೇಲೆ ತನ್ನ ಶಾಸನವನ್ನು ಬರೆಸಿದ ಅಹಂಕಾರ ಭರತನದು' ಎನ್ನುತ್ತಾನೆ. ಭರತನ ಸಂದೇಶಕ್ಕೆ ಬಾಹುಬಲಿಯ ಉತ್ತರವಿದು.

ದೊರೆಯಲ್ಲದಂಗೆ ನುಡಿವುದು
ಪುರುಳಿಲ್ಲದ ಮಾತನೆಮ್ಮೊಳಂ ನುಡಿವುದೆ ಪೇಟ್
ಎರಲೆಗೆ ಪಾಡುವ ಗೋರಿಯ
ನರಣ್ಯದೊಳ್ ಮೃಗ ವಿರೋಧಿಗಂ ಪಾಡುವುದೇ (14–80)

ನಮ್ಮಿಬ್ಬರ ಪರಾಕ್ರಮವನ್ನು ಜಗತ್ತಿಗೆ ತೋರಬೇಕೆಂದಿದ್ದರೆ 'ತೂಗಲ್ ಧರೆಗೆ ತುಲಾದಂಡಮಲ್ತೆ ಮದ್ಭುಜದಂಡಂ' ಆದ್ದರಿಂದ "ಸಂಗರ ನಿಕಷ (ಕನ್ನಡಿ) ದೊಳೆಮ್ಮಂದವಂ ನೀನೆ ಕಾಣ್ಬೈ" ಎಂದು ದೂತನನ್ನು ಹಿಂದೆ ಕಳಿಸುತ್ತಾನೆ. ಅವನ ಮಾತಿನಲ್ಲಿ ಮೊನಚು, ವ್ಯಂಗ್ಯ, ಕ್ರೌರ್ಯಗಳಿವೆ. ಭರತನು ಬಾಹುಬಲಿಯ ಮೇಲೆ ಯುದ್ಧಕ್ಕೆ ಹೋದಾಗ ಮಂತ್ರಿಗಳು ಅದರಿಂದ ಪ್ರಜೆಗಳ ವಿನಾಶವೆಂದರಿತು, ಧರ್ಮಯುದ್ಧವನ್ನು ಸೂಚಿಸಿದರು; – ಇಬ್ಬರೂ ಅದಕ್ಕೆ ಒಪ್ಪಿದರು.

ದೃಷ್ಟಿಯುದ್ಧದಲ್ಲಿ ಇಬ್ಬರೂ ಎರಡು ಪರ್ವತಗಳು ನಿಂತಂತೆ ಅಚಲವಾಗಿ ನಿಂತರು. ಭರತನು ಸೋತನು. ಜಲಯುದ್ಧದಲ್ಲೂ ಎರಡು ಆನೆಗಳು ಸರೋವರವನ್ನು ಪ್ರವೇಶಿಸಿದಂತೆ ಆಯಿತು. ಭರತನು ಸೋಲಿನ ಅವಮಾನದಿಂದ ಕೆರಳಿ, ಐನೂರು ಬಿಲ್ಲುಗಳಷ್ಟು ಎತ್ತರವಾದರೆ, ಬಾಹುಬಲಿ ಐನೂರಿಪ್ಪತ್ತೈದು ಬಿಲ್ಲುಗಳಷ್ಟು ಎತ್ತರವಾದನು. ಜಲಯುದ್ಧ ಮತ್ತು ಮಲ್ಲಯುದ್ಧಗಳನ್ನು ಹಲವು ಪದ್ಯಗಳಲ್ಲಿ ಪಂಪನು ಹೀಗೆ ವರ್ಣಿಸುತ್ತಾನೆ.

ಭರದಿಂದಂ ತುಳುಕಿದ ನೀ
ರುರದೊಳ್ ಹಾರಾಂಶುರುಚಿಯನಿರ್ಕುಟಿಸ್‌ಗೊಳ್ ದು
ರ್ಧರ ಜಳಯುದ್ಧ ಮುಮಾದಮೆ
ಪರಿಭವಮಂ ಚಕ್ರವರ್ತಿಗಿತ್ತತ್ತಾಗಳ್ (14–108)

ಕನಕಾಚಳಮಂ ಪೊತ್ತುದು
ಘನಮರಕತಶೈಲಮೆನಿಸಿ ಭುಜಬಲಿ ಸಕಳಾ
ವನಿತಳವಲ್ಲಭನಂ ಭೋಂ
ಕೆನೆತ್ತಿ ಪೊತ್ತಿರ್ದನಿಕ್ಕಲೊಲ್ಲದೆ ನೆಲದೊಳ್ (14–111)

ಭರತನನ್ನು ನೆಲದ ಮೇಲೆ ಬೀಳಿಸಲೊಲ್ಲದೆ ಹಿರಿಯಣ್ಣ, ಗುರು, ರಾಜನೆಂಬ ಭಾವನೆಯಿಂದ ಮೆಲ್ಲಗೆ ನೆಲದ ಮೇಲೆ ಇಳಿಸುತ್ತಾನೆ ಬಾಹುಬಲಿ. ಭರತನು ಕೋಪದಿಂದ ಚಕ್ರವನ್ನು ಬಿಟ್ಟಾಗ ಅದು ಬಾಹುಬಲಿಯ ಬಳಿ ನಿಂತಿತು. ಬಾಹುಬಲಿಯು, ರಾಜ್ಯದಾಹ ಎಲ್ಲರನ್ನು ಹಾಳು ಮಾಡುತ್ತದೆ. ಸೋದರ–ಸೋದರರಲ್ಲಿ ಕಲಹ ಹೆಚ್ಚುತ್ತದೆ. ತಂದೆ–ಮಕ್ಕಳಲ್ಲಿ ವಿರಸ ಹುಟ್ಟಿಸುತ್ತದೆ ಎನ್ನುವ ಸತ್ಯವನ್ನು ತಿಳಿದು, ಭರತನನ್ನು ಕ್ಷಮಿಸುತ್ತಾನೆ. ಭರತನ ನಾಚಿಕೆಯನ್ನು ಹೋಗಲಾಡಿಸಲು ಬಾಹುಬಲಿಯು ಪ್ರಯತ್ನಿಸುತ್ತಾನೆ.

ನೆಲೆಸುಗೆ ನಿನ್ನ ವಕ್ಷದೊಳೆ ನಿಚ್ಚಳಮಾಭಟಖಡ್ಗಮಂಡಲೋ
ತ್ಪಲವನವಿಭ್ರಮಭ್ರಮರಿಯಪ್ಪ ಮನೋಹರಿ ರಾಜ್ಯಲಕ್ಷ್ಮಿ ಭೂ
ವಲಯಮನಯ್ಯನಿತ್ತುದುಮನಾಂ ನಿನಗಿತ್ತೆನಿದೇವುದಣ್ಣ ನೀ
ನೊಲಿದ ಲತಾಂಗಿಗಂ ಧರೆಗಮಾಟಿಸಿದಂದು ನೆಗಟ್ತ್ ಮಾಸದೇ (14–130)

'ಮಱವುದೆನ್ನ ದುರ್ವಿಳಸನಮಂ' ಎನ್ನುತ್ತಾನೆ. ಕ್ರೌರ್ಯದ ಮಾತುಗಳನ್ನಾಡುತ್ತಾ ರಣರಂಗವನ್ನು ಪ್ರವೇಶಿಸಿದ್ದ ವೀರಾಗ್ರಣಿಯ ಬಾಯಲ್ಲಿ ತ್ಯಾಗದ ನುಡಿಗಳು ಬರುತ್ತವೆ. ವ್ಯಕ್ತಿತ್ವದ ಔನ್ನತ್ಯ ಎದ್ದು ಕಾಣುತ್ತವೆ. ಉನ್ನತ ಸಂಸ್ಕೃತಿಯೊಂದರ ಲಕ್ಷಣಗಳು ಅವನಲ್ಲಿವೆ– ಎಂದು ಡಾ॥ ಕೆ.ಎಲ್. ಗೋಪಾಲ ಕೃಷ್ಣಯ್ಯನವರು ಹೇಳುತ್ತಾರೆ. ಬಾಹುಬಲಿಯು ಗೆದ್ದರೂ, ಗೆಲುವು ನನ್ನದಲ್ಲ ಎಂದು ತಪಸ್ಸಿಗೆ ಹೋಗಿ ಶ್ರವಣಬೆಳ್ಗೊಳದಲ್ಲಿ

ನೆಲೆಯಾಗಿ ನಿಲ್ಲುತ್ತಾನೆ. ಅಧಿಕಾರದ ಆಸೆ, ಅಹಂಕಾರ, ಮತ್ತು ಪ್ರತಿಷ್ಠೆಗಳು ಸಜ್ಜನಿಕೆ ಮತ್ತು ಮಾನವೀಯತೆಯನ್ನು ಕೊಲ್ಲಲು ಪ್ರಯತ್ನಿಸುವ, ಆದರೆ ಈ ಪ್ರಯತ್ನವನ್ನು ಮೀರಿ ಮಾನವೀಯವಾದ ಮೌಲ್ಯಗಳಷ್ಟೇ ಅಂತಿಮವಾಗಿ ಗೆಲ್ಲುವ ವಿಚಾರವನ್ನು ನಾಟಕೀಯವಾಗಿ ಪಂಪನು ತನ್ನ ಕಾವ್ಯದಲ್ಲಿ ಚಿತ್ರಿಸಿದ್ದಾನೆ.

ಧರ್ಮದ ಜಿಜ್ಞಾಸೆಯನ್ನು ಕುರಿತ ಕವಿಯ ಪದ್ಯಗಳು ಮೊದಲ ಭಾಗದಲ್ಲಿ ಬರುತ್ತವೆ. ಮಹಾಬಲನಿಗೆ ನಾಲ್ಕು ಜನ ಮಂತ್ರಿಗಳು ಉಪದೇಶ ಮಾಡುವ ಭಾಗ ಇದು. ಸಂಭಿನ್ನಮತಿಯ ವಿಜ್ಞಾನವಾದ, ಶತಮತಿಯ ಶೂನ್ಯವಾದ, ಮಹಾಮತಿಯ ಲೋಕಾಯತವಾದ, ಸ್ವಯಂಬುದ್ಧನ ಧರ್ಮೋಪದೇಶ. ಇವು ರಾಜನನ್ನು ಲೌಕಿಕ - ಪಾರಮಾರ್ಥಿಕ ಸೆಳೆತಗಳ ದ್ವಂದ್ವಕ್ಕೆ ಒಳಪಡಿಸುತ್ತವೆ. ಸ್ವಯಂಬುದ್ಧನು ರಾಜನನ್ನು ವೈರಾಗ್ಯದ ಕಡೆಗೆ ತಿರುಗಿಸಲು ಪ್ರಯತ್ನಿಸಿದಷ್ಟೂ ಉಳಿದ ಮೂವರು-ಮಂತ್ರಿಗಳು ಅವನನ್ನು ಲೌಕಿಕ ವಿಚಾರಗಳು, ಮತ್ತು ಜೀವನಪರವಾದ ಕಾಳಜಿಗಳ ಕಡೆಗೆ ಬರುವಂತೆ ಪ್ರೇರೇಪಿಸುತ್ತಾರೆ. ಈ ಸಂದರ್ಭದಲ್ಲಿ ಧರ್ಮ (ಜೈನ)ದ ಪರವಾಗಿ ಸ್ವಯಂಬುದ್ಧನು ಮಾತನಾಡಿದರೆ, ಅದರ ಹುಳುಕುಗಳನ್ನು ಇತರರು ತೋರಿಸುತ್ತಾರೆ. ಒಟ್ಟಿನಲ್ಲಿ ಧರ್ಮದ ಸೋಗಿನ ಅಂಶಗಳನ್ನು ಬಿಚ್ಚಿಡಲು ಪಂಪ ಈ ಸಂದರ್ಭವನ್ನು ಸೊಗಸಾಗಿ ಬಳಸಿಕೊಳ್ಳುವುದನ್ನು ಕಾಣಬಹುದು. ತನ್ನ ಧರ್ಮವನ್ನೇ ತಾನು ನಿಂದಿಸಿಕೊಳ್ಳುವುದರ ಮೂಲಕ ಧರ್ಮದ Validity ಯನ್ನು ಪಂಪ ಪ್ರಶ್ನಿಸುತ್ತಿರಬಹುದೇ ಎನ್ನಿಸುತ್ತದೆ. ಅವನು ಧರ್ಮದ ಪರವಾಗಿ ಹೇಳಿಸುವ ಪದ್ಯಗಳು ನೇರವಾಗಿ, ಸಂಸ್ಕೃತಮಯವಾಗಿವೆ. ಇತರ ಮೂರು ವಾದಗಳು ಸಂಸ್ಕೃತದಿಂದ ಕೂಡಿದ್ದರೂ ಖಚಿತವಾದ ಲಯವನ್ನು ಹೊಂದಿದ್ದು ವ್ಯಂಗ್ಯ, ವಿಡಂಬನೆಯಿಂದ ಕೂಡಿವೆ. ಮುಖ್ಯವಾಗಿ ಜಾನಪದೀಯವಾದ ದೇಸೀಯ ಪದಗಳಿಗೂ ಇಲ್ಲಿ ಪ್ರಾಶಸ್ತ್ಯವಿದೆ. ಎರಡು ಪದ್ಯಗಳನ್ನು ಉದಾಹರಣೆಗಾಗಿ ನೋಡಬಹುದು.

ಒಡಲೊಳೆ ಜೀವಮಿರ್ದು ಗಡ ಸಂಚಿಸುತಿರ್ಪುದು ಪುಣ್ಯಪಾಪಮಂ
ಗಡ ಬಱಿಕತ್ತ ಬೇಱ್ ಪೆಱತೊಂದೊಡಲೊಳ್ಗಡ ತಾನೆ ನಿಂದೊಡಂ
ಬಡಿಪುದು ಧರ್ಮ ಕರ್ಮ ಫಲಮಂ ಗಡ ಸತ್ತನೆ ಮತ್ತೆ ಪುಟ್ಟುವಂ
ಗಡ ಪುಸಿ ಕಾಣ ಡಂಬಮಿದು ಖೇಚರ ನೀನಿದನೆಂತು ನಂಬಿದೋ (2-8)

ತಲೆವಱಿದುಟ್ಟುದಿಕ್ಕಿ ಸುರಲೋಕ ಸುಖಂಗಳನುಣ್ಬೆವೆಂಬ ಬ
ತ್ತಲೆಗರ ಮಾತುಗೇಳದಿರು ಬಾಱಿನಮಿಂದ್ರಿಯವರ್ಗದಿಚ್ಚೆಯಂ
ಸಲಿಸಿ ಬಸಂತದೊಳ್ ಕಳಿಕೆಗರ್ಚಿದ ಕೋಗಿಲೆಯಂತೆ ಬಿಚ್ಚತಂ
ನಲಿವುದು ಕಂಡರಾರ್ ಮಱಿಭವಂಗಳನಿಲ್ಲಿ ವಿಯಚ್ಚರೇಶ್ವರಾ ! (2-9)

ಇಲ್ಲಿನ ಭವಾವಳಿಗಳ ಸರಣಿಯು ಮಾನವಶಾಸ್ತ್ರೀಯ ನೆಲೆಯದು. ಅಲ್ಲದೆ ಇದು ಒಂದು ಪೀಳಿಗೆಯ ಕತೆ. ಭವಾವಳಿಯನ್ನು ವ್ಯಕ್ತಿಯೊಂದರ ಮಾನಸಿಕ ಬೆಳವಣಿಗೆಯ ವಿವಿಧ ಹಂತಗಳು- ಎಂದೂ ಅರ್ಥೈಸಲು ಸಾಧ್ಯವಿದೆ. ಒಂದರಿಂದ ಇನ್ನೊಂದು ಭವಾವಳಿಗೆ ಕಾವ್ಯ ನಾಯಕನಾದ ಆದಿನಾಥ ಕಲಿಯುತ್ತ, ಬದಲಾಗುತ್ತ, ಬೆಳೆಯುತ್ತ ಹೋಗುವುದನ್ನು ಗಮನಿಸಬಹುದು.

ಆದಿಪುರಾಣದ ಮುಖ್ಯವಾದ ಘಟನೆಗಳೆಲ್ಲ ಕೌಟುಂಬಿಕವಾದ ನೆಲೆಯನ್ನು ಪಡೆದಿವೆ. ಶ್ರೀಮತಿ ವಜ್ರಜಂಘ, ಲಲಿತಾಂಗ-ಸ್ವಯಂಪ್ರಭ, ನಾಭಿರಾಜ-ಮಹಾದೇವಿ, ಭರತ-ಬಾಹುಬಲಿ ಇತ್ಯಾದಿ. ಇವರೆಲ್ಲರ ಪಾತ್ರಗಳು ಕುಟುಂಬ ಕೇಂದ್ರಿತ ನೆಲೆ, ಸಂಬಂಧಗಳನ್ನು ಹೊಂದಿವೆ.

ಆದಿಪುರಾಣವು ಧರ್ಮಕ್ಕಿಂತ ಹೆಚ್ಚಾಗಿ ಮನುಷ್ಯನ ನಡಾವಳಿಗಳನ್ನು (Human ethics) ಹೇಳುವ ಕಾವ್ಯವಾಗಿದೆ. ಈ ಕಾರಣಕ್ಕಾಗಿಯೇ ಪ್ರತಿಯೊಂದು ಸಂಬಂಧವೂ ತನ್ನೆಲ್ಲ ಒಳವಿವರಗಳೊಂದಿಗೆ ಚಿತ್ರಿತವಾಗಿದೆ. ಮರುದೇವಿ ನಾಭಿರಾಜರ ಸಂದರ್ಭ, ಶ್ರೀಮತಿ ತವರುಮನೆ ಬಿಡುವ ಸಂದರ್ಭ ಇತ್ಯಾದಿ.

'ಸಾಂಸ್ಕೃತಿಕ ಅವಸ್ಥಾಂತರಗಳ ಕತೆಯೇ' ಆದಿಪುರಾಣದ ವಸ್ತುವಾಗಿದೆ. ಕಾವ್ಯದ ಮಧ್ಯಭಾಗದಲ್ಲಿ, ಮನುಕುಲದಲ್ಲಿ ಸಂಸ್ಕೃತಿಯ

ಉಗಮ, ವಿಕಾಸದ ಬಗೆಗಿನ ದಟ್ಟವಾದ ವಿವರಗಳು ಬರುತ್ತವೆ. ಇವು ಸಮಕಾಲೀನ ಚಾರಿತ್ರಿಕ, ಸಾಂಸ್ಕೃತಿಕ ದಾಖಲೆಯಾಗಿಯೂ ಅತ್ಯಂತ ಮುಖ್ಯವಾದ ಆಕರಗಳಾಗಿವೆ ಎಂದು ವಿಮರ್ಶಕರಾದ ಪ್ರೊ. ಕಿ.ರಂ. ನಾಗರಾಜರವರು ಗುರುತಿಸಿದ್ದಾರೆ. ಆದಿಪುರಾಣದಲ್ಲಿ, ಮಾರ್ಗದೇಸಿಗಳ ಸುಂದರವಾದ ಸಮನ್ವಯ, ಪ್ರಕೃತಿ ಮತ್ತು ಮನುಷ್ಯರ ಸಂಬಂಧ, ಮೂಲ ಕಾವ್ಯದೊಂದಿಗೆ ಇರುವ ಹೋಲಿಕೆ, ವ್ಯತ್ಯಾಸಗಳು, ಮಹಾಕಾವ್ಯವಾಗಿ ಆದಿಪುರಾಣದ ಮಹತ್ವ. ಇಂಥ ಹಲವು ವಿಚಾರಗಳನ್ನು ಚರ್ಚಿಸಬಹುದಾಗಿದೆ.

ಗ್ರಂಥ ಋಣ :

1. ಕನ್ನಡ ಸಾಹಿತ್ಯ ಮತ್ತು ಪ್ರತಿಭಟನೆ – ಕರ್ನಾಟಕ ಸಾಹಿತ್ಯ ಅಕಾಡೆಮಿ – 1989.
2. ಪ್ರತಿಭಟನೆ ಕಾವ್ಯ – ಸಿ.ವೀರಣ್ಣ, ಕನ್ನಡ ಸಾಹಿತ್ಯ ಪರಿಷತ್ತು.
3. ಕನ್ನಡ ಸಾಹಿತ್ಯ ಚರಿತ್ರೆ – ಸಿ. ವೀರಣ್ಣ ಕನ್ನಡ ಸಾಹಿತ್ಯ ಪರಿಷತ್ತು.
4. ಕನ್ನಡ ಸಾಹಿತ್ಯ ಸಮೀಕ್ಷೆ – ಸಂ॥ ಡಾ॥ ಜಿ.ಎಸ್. ಶಿವರುದ್ರಪ್ಪ, ಕರ್ನಾಟಕ ಸಾಹಿತ್ಯ ಅಕಾಡೆಮಿ 1989.
5. ಸಾಹಿತ್ಯ ಮತ್ತು ಸಾಮಾಜಿಕ ನಿಲುವುಗಳು – ಸಂ॥ ಪ್ರೊ. ಕೆ.ಜಿ. ನಾಗರಾಜಪ್ಪ, ಕರ್ನಾಟಕ ಸಾಹಿತ್ಯ ಅಕಾಡೆಮಿ 1989.
6. "ಪಂಪಕವಿ ಮತ್ತು ಮೌಲ್ಯಪ್ರಸಾರ" – ಈ ಲೇಖನದ ಮೂಲ ಸಂಶೋಧನ ತರಂಗ (ಭಾಗ–2) – ಡಾ॥ ಎಂ. ಚಿದಾನಂದಮೂರ್ತಿ.
7. 'ಪಂಪನ ಕವಿತೆ': ಅನುಸಂಧಾನಕ್ಕೆ ಹೊಸಮಾರ್ಗ'. – ಕೆ.ವಿ. ಸುಬ್ಬಣ್ಣ,
   ಮೂಲ – ದಶವಾರ್ಷಿಕ ವಿಮರ್ಶೆ, ಕರ್ನಾಟಕ ಸಾಹಿತ್ಯ ಅಕಾಡೆಮಿ.

****

ಪಂಪಭಾರತ : ಕೆಲವು ನೋಟಗಳು

– ಡಾ. ಪಾದೇಕಲ್ಲು ವಿಷ್ಣು ಭಟ್ಟ್

ಆದಿಪುರಾಣದಲ್ಲಿ ಪಂಪನು ತನ್ನ ಹಿರಿಮೆಯ ಬಿರುದುಗಳನ್ನು ಸಕಾರಣವಾಗಿ ವಿವರಿಸುವ ಸಂದರ್ಭದಲ್ಲಿ 'ಇದು ನಿಚ್ಚಂ ಪೊಸತರ್ಣವಂಬೊಲತಿಗಂಭೀರಂ ಕವಿತ್ವಂ ಜಗಕ್ಕದಱಿಂದಂ ಕವಿತಾಗುಣಾರ್ಣವಂ' (ಆದಿಪುರಾಣಂ, 1–23) ಎಂದಿದ್ದಾನೆ. ಅರ್ಣವದಂತೆ (ಸಮುದ್ರದಂತೆ) ನಿತ್ಯವೂ ಕಾವ್ಯವೆಂಬುದು ಹೊಸತೇ ಆಗಿರುತ್ತದೆಂದು ಕಾವ್ಯಸಾಮಾನ್ಯಕ್ಕೆ ಇದನ್ನು ಹೆಚ್ಚಾಗಿ ಅನ್ವಯಿಸಿ ಹೇಳಲಾಗುವುದಾದರೂ ಪಂಪನು ಈ ಮಾತನ್ನು ಹೇಳಿಕೊಂಡುದು ತನ್ನ ಕಾವ್ಯವನ್ನು ಕುರಿತೇ ಆಗಿದೆ. ಆತನು ಹೆಮ್ಮೆಯಿಂದ ಈ ಮಾತನ್ನು ಹೇಳಿದ್ದರೂ ಆ ಹೆಮ್ಮೆಗೆ ಆತ ಅರ್ಹನೇ ಆಗಿದ್ದಾನೆಂದು ಕನ್ನಡದ ವಿದ್ವಲ್ಲೋಕ ಒಪ್ಪಿದೆ. ಆದುದರಿಂದ ಅವನ ಕಾವ್ಯವನ್ನು ಯಾವಾಗಲೂ ಹೊಸ ದೃಷ್ಟಿಯಿಂದ ನೋಡಲು ಸಾಧ್ಯವಿದೆ. ಅಥವಾ ಆತನ ಕಾವ್ಯವನ್ನು ಓದಿದಾಗಲೆಲ್ಲ ಅಲ್ಲಿ ಒಂದಲ್ಲ ಒಂದು ರೀತಿಯ ಹೊಸ ಚಿಂತನೆ, ಹೊಸ ಅಭಿಪ್ರಾಯ, ಹೊಸ ಸ್ವಾರಸ್ಯ ಎದ್ದುತೋರಲು ಸಾಧ್ಯವಿದೆ. ಆ ದೃಷ್ಟಿಯಿಂದ ಪಂಪನ ವಿಕ್ರಮಾರ್ಜುನವಿಜಯವನ್ನು ಓದಿದಾಗ ಹೊಳೆದ ಕೆಲವು ವಿಷಯಗಳನ್ನು 'ಪಂಪ ಭಾರತದ' 'ಕೆಲವು ನೋಟಗಳು' ಎಂಬ ಈ ಬರಹದಲ್ಲಿ ನಿರೂಪಿಸಲಾಗಿದೆ.

* * * * *

ಪಂಪನು ತನ್ನ ಕಾವ್ಯಮಾರ್ಗವನ್ನು 'ಲೌಕಿಕ' ಮತ್ತು 'ಆಗಮಿಕ'ವೆಂದು ಎರಡಾಗಿ ವಿಂಗಡಿಸಿಕೊಂಡನೆಂಬುದು ಅಥವಾ ಲೌಕಿಕಕಾವ್ಯವಾಗಿ 'ವಿಕ್ರಮಾರ್ಜುನ ವಿಜಯ'ವನ್ನೂ ಆಗಮಿಕ ಅಥವಾ ಧಾರ್ಮಿಕಕಾವ್ಯವಾಗಿ 'ಆದಿಪುರಾಣ'ವನ್ನೂ ಬರೆದನೆಂಬುದು ಎಲ್ಲರೂ ತಿಳಿದ ವಿಷಯವಾಗಿದೆ. ಇದಕ್ಕೆ ಆತನ 'ವಿಕ್ರಮಾರ್ಜುನ ವಿಜಯಂ' ಮತ್ತು 'ಆದಿಪುರಾಣಂ' ಎಂಬೆರಡು ಕಾವ್ಯಗಳು ದೊರೆತಿರುವುದು ಮಾತ್ರವಲ್ಲ, ಆತನೇ ಬರೆದ ಈ ಕೆಳಗಿನ ಪದ್ಯವೂ ಕಾರಣವಾಗಿದೆ:

ಬೆಳಗುವೆನಿಲ್ಲಿ ಲೌಕಿಕಮನಲ್ಲಿ ಜಿನಾಗಮಮಂ ಸಮಸ್ತ ಭೂ
ತಳಕೆ ಸಮಸ್ತಭಾರತಮುಮಾದಿಪುರಾಣಮುಮೆಂದು ಮೆಯ್ಯಸುಂ
ಗೊಳುತಿರೆ ಪೂಣ್ದು-ಪೂಣ್ದ ತೆಱದೊಂದಱುದಿಂಗಳೊಳೊಂದು ಮೂಱುತಿಂ
ಗಳೊಳೆ ಸಮಾಪ್ತಿಯಾದುದೆನೆ ಬಣ್ಣಿಸಿದಂ ಕವಿತಾಗುಣಾರ್ಣವಂ

(ವಿಕ್ರಮಾರ್ಜುನವಿಜಯಂ, 14-60)

ತನ್ನೆರಡು ಕೃತಿಗಳ ಬಗೆಗೆ 'ಮುನ್ನಿನ ಕಬ್ಬಮನೆಲ್ಲಮಿಕ್ಕಿ ಮೆಟ್ಟಿದುವು ಸಮಸ್ತ ಭಾರತಮುಮಾದಿ ಪುರಾಣಮುಹಾಪ್ರಬಂಧಮುಂ' (ವಿಕ್ರಮಾರ್ಜುನವಿಜಯಂ, 14-59) ಎಂದು ಆತನೇ ಹೇಳಿಕೊಂಡಿದ್ದು, ಇವೆರಡೂ ಕೃತಿಗಳು 'ಮಹಾಪ್ರಬಂಧ' ಅಥವಾ ಮಹಾಕಾವ್ಯಗಳೆಂದು ಆತನ ಅಭಿಪ್ರಾಯವಾಗಿತ್ತೆಂದು ಸ್ಪಷ್ಟವಾಗುತ್ತದೆ. ಕಾವ್ಯಗಳ ಕುರಿತು ಲೌಕಿಕ-ಆಗಮಿಕಗಳೆಂಬ ಭೇದವನ್ನು ಆತನೇ ಹೇಳಿದ್ದಾನೆನ್ನುವಾಗ, ಅದರ ಅರ್ಥವೇನೆಂಬುದನ್ನು ಆ ಹಿನ್ನೆಲೆಯಿಂದಲೇ ಗಮನಿಸಬೇಕಾಗುತ್ತದೆ. 'ಲೌಕಿಕವನ್ನು ಬೆಳಗುತ್ತೇನೆ' ಎಂಬ ಮಾತಿಗೆ 'ಕಾವ್ಯ'ದ ಹಿನ್ನೆಲೆಯಿಂದ ಅರ್ಥವೇನು? ಲೌಕಿಕಕಥಾವಸ್ತು, ಜಿನಪುರಾಣವಸ್ತು - ಇವುಗಳನ್ನು ಆಯ್ದು ಕಾವ್ಯರಚಿಸುವ ಮೂಲಕ ಅವುಗಳನ್ನು ಬೆಳಗುವುದೆಂಬಷ್ಟು ಮಾತ್ರವೇ ಅರ್ಥವೆ? ಬೇರೇನಾದರೂ ವಿಶೇಷಾರ್ಥಗಳಿವೆಯೆ? ಪ್ರತೀಶಬ್ದವನ್ನೂ ಯೋಚಿಸಿಯೇ ಕವಿತೆಯಲ್ಲಿರಿಸುವ 'ಹಿತಮಿತಮೃದು ವಚನ' (ಆದಿಪುರಾಣಂ, 1-29) ಎಂಬ ಹಿರಿಮೆಯುಳ್ಳ ಪಂಪನು ಯಾವುದೊಂದು ವಿಶಿಷ್ಟಾರ್ಥದಲ್ಲಿಯೇ ಆ ಪದಪ್ರಯೋಗವನ್ನು ಮಾಡಿರಬಹುದಲ್ಲವೆ? -ಈ ಕುರಿತು ಚಿಂತಿಸಬೇಕಿದೆ.

ಕಾವ್ಯದ ಕೇಂದ್ರವೂ ಪರಮಲಕ್ಷ್ಯವೂ 'ರಸ'ವೆಂಬುದು ಭಾರತೀಯ ಕಾವ್ಯ ಮೀಮಾಂಸಕರ ಮತ. ಕಾವ್ಯಮರ್ಮಜ್ಞನಾದ ಪಂಪನು 'ಲೌಕಿಕ-ಜಿನಾಗಮ'ವೆಂಬ ಮಾತುಗಳನ್ನು ರಸವನ್ನು ದೃಷ್ಟಿಯಲ್ಲಿರಿಸಿಕೊಂಡೇ ಹೇಳಿರಬೇಕೆಂದು ಸಹಜವಾಗಿಯೇ ಊಹಿಸುವಂತಿದೆ. ನವರಸಗಳಲ್ಲಿ ಶೃಂಗಾರವು ಲೌಕಿಕತೆಗೆ ಪ್ರತಿನಿಧಿಯಾದರೆ ಶಾಂತವು ಆಧ್ಯಾತ್ಮಿಕತೆಗೆ ಪ್ರತಿನಿಧಿ. ಶಾಂತರಸವನ್ನು ಜೈನಧರ್ಮವು ವಿಶೇಷವಾಗಿ ಪುರಸ್ಕರಿಸಿದೆ. ಜೈನಪುರಾಣಗಳಲ್ಲೇ ಈ ಮಾತು ಬಂದಿದೆ:

ನಿನಗೆ ರಸಮೊಂದೆ ಶಾಂತಮೆ
ಜಿನೇಂದ್ರ ಮನಮಾ ರಸಾಂಬುನಿಧಿಯೊಳಗವಗಾ
ಹನಮಿರ್ದು ಮಿಕ್ಕ ರಸಮಂ
ಕನಸಿನೊಳಂ ನೆನೆಯದಂತು ಮಾಡೆನಗರ್ಹಾ
(ನಾಗಚಂದ್ರನ ಮಲ್ಲಿನಾಥಪುರಾಣಂ, 10-82;
ರಾಮಚಂದ್ರಚರಿತಪುರಾಣಂ, 7-42)

ಜಿನನಿಗೆ ಶಾಂತವೊಂದೇ ರಸವೆಂಬ ಮಾತು ನಾಗಚಂದ್ರನ ಕೃತಿಗಳೆರಡರಲ್ಲೂ ಬಂದಿದ್ದು ಅದು ಕೇವಲ ಸಾಂದರ್ಭಿಕವಲ್ಲ. ಜೈನಕಾವ್ಯಗಳಲ್ಲಿ ಜಿನವರ್ಣನೆಯ ಸಂದರ್ಭಗಳನ್ನು ಗಮನಿಸಿದರೆ ಅವೆಲ್ಲ ಶಾಂತರಸ ಪ್ರತಿಪಾದನ ರೂಪದಲ್ಲಿರುವುದನ್ನು ಅವಶ್ಯವಾಗಿ ಗಮನಿಸಬೇಕಾಗಿದೆ. ಅಭಿನವಪಂಪನ ಕೃತಿಗಳಲ್ಲಿ ವ್ಯಕ್ತವಾಗಿ ಹೇಳಲ್ಪಟ್ಟ ಮಾತು ಪಂಪನಿಗೆ ಸಮ್ಮತವಾದುದೂ ಆಗಿದೆಯೆಂಬುದರಲ್ಲಿ ಸಂದೇಹವಿಲ್ಲ. ಆದಿಪುರಾಣವು ಆದಿತೀರ್ಥಂಕರನ ಚರಿತ್ರೆಯೇ ಆದುದರಿಂದ ಸಹಜವಾಗಿಯೇ ಅದು ಶಾಂತರಸ ಪ್ರತಿಪಾದಕವಾದ ಕಾವ್ಯವಾಗಿದೆ. ಕಾವ್ಯದೊಳಗೆ ವೀರಶೃಂಗಾರಾದಿ ಸಂದರ್ಭಗಳು ಹಲವಿದ್ದರೂ ಅವೆಲ್ಲವೂ ಶಾಂತರಸಕ್ಕೆ ಪೂರಕವಾಗಿಯೂ ಪೋಷಕವಾಗಿಯೂ ಬಂದಿವೆಯಷ್ಟೆ ಹೊರತು ಬೇರಲ್ಲ. ಆದುದರಿಂದ ತನ್ನ ಕಾವ್ಯದಲ್ಲಿ 'ಜಿನಾಗಮವನ್ನು ಬೆಳಗುತ್ತೇನೆ' ಎಂದು ಪಂಪ ಹೇಳಿರುವುದರ ಅರ್ಥವು 'ಶಾಂತರಸ ಪ್ರಧಾನವಾದ ಕಾವ್ಯವನ್ನು ಬರೆಯುತ್ತೇನೆ' ಎಂದೇ ಆಗಿದೆಯೆಂದು ತಿಳಿಯಬೇಕಾಗುತ್ತದೆ. ಆ ದೃಷ್ಟಿಯಿಂದ ನೋಡಿದಾಗ ಕನ್ನಡದಲ್ಲಿ ರಚಿತವಾದ ಎಲ್ಲ 'ಜೈನಪುರಾಣ ಕಾವ್ಯ'ಗಳೂ ಶಾಂತರಸಪ್ರಧಾನವೇ

ಆಗಿವೆಯೆಂದು ತಿಳಿಯಬೇಕಾಗುತ್ತದೆ. 'ಭರತೇಶ ವೈಭವ'ವೂ ಕೂಡ ಶೃಂಗಾರ ರಸಪರಿಪ್ಲುತವಾಗಿದ್ದು ಅದು ಶಾಂತರಸದಲ್ಲೇ ಪರ್ಯವಸಾನಹೊಂದುವಂತೆ ನಿರೂಪಣೆಯಿರುವುದರಿಂದ ಶಾಂತರಸಪ್ರಧಾನವಾದ ಕಾವ್ಯವೇ ಆಗಿದೆ.

ಇದೇ ವಿಚಾರಸರಣಿಯನ್ನು ಮುಂದುವರಿಸಿದಾಗ 'ಲೌಕಿಕವನ್ನು ಬೆಳಗುತ್ತೇನೆ' ಎಂದು ಹೇಳಿದುದು 'ಶೃಂಗಾರರಸ ಪ್ರಧಾನವಾದ ಕಾವ್ಯವನ್ನು ಬರೆಯುತ್ತೇನೆ' ಎಂಬ ಅರ್ಥವನ್ನು ಸ್ಪಷ್ಟವಾಗಿ ನೀಡುತ್ತದೆ. ಆದುದರಿಂದ ಎರಡು ಕಾವ್ಯಗಳಲ್ಲಿ ಎರಡು ರಸಗಳನ್ನು ಬೆಳಗುವ ಕಾರ್ಯವನ್ನು ಪಂಪನು ಮಾಡಿದ್ದಾನೆಂದೂ ಲೌಕಿಕವು ಯಾವಾಗಲೂ ಆಧ್ಯಾತ್ಮಿಕಕ್ಕೆ ಪೂರಕವಾಗಿ, ಆಧಾರವಾಗಿ ಇರುವುದರಿಂದ ಮತ್ತು ಆಧ್ಯಾತ್ಮಿಕತೆಗೆ ಉನ್ನತಸ್ಥಾನವು ಜೈನಸಿದ್ಧಾಂತವೂ ಸೇರಿದಂತೆ ಎಲ್ಲ ಭಾರತೀಯ ಚಿಂತನೆಗಳಲ್ಲಿ ಸಂದಿರುವುದರಿಂದ ಪಂಪನ ದೃಷ್ಟಿಯಲ್ಲಿ ಆದಿಪುರಾಣಕ್ಕೆ ಹೆಚ್ಚಿನ ಮಹತ್ತ್ವ ಸಂದಿದೆಯೆಂದೂ ತಿಳಿಯಬೇಕಾಗುತ್ತದೆ. ಅಲ್ಲದೆ ತಾನು ಪ್ರಧಾನವಿಷಯವೆಂದು ತಿಳಿದ ಆದಿಪುರಾಣರಚನೆಯನ್ನು ಮೊದಲೂ ವಿಕ್ರಮಾರ್ಜುನವಿಜಯ ರಚನೆಯನ್ನು ಅನಂತರವೂ ಅವನು ಮಾಡಿರುವುದನ್ನು ಗಮನಿಸಿದಲ್ಲಿ ಅವನು ಆಧ್ಯಾತ್ಮಿಕತೆಗೆ ಮತ್ತು ಶಾಂತರಸಕ್ಕೆ ಮಹತ್ತ್ವ ನೀಡಿರುವುದನ್ನು ಸ್ಪಷ್ಟವಾಗಿ ಮನಗಾಣಬಹುದು.

ಆದಿಪುರಾಣದಲ್ಲಿ ಶಾಂತರಸವೇ ಕೇಂದ್ರೀಯವಾದುದೆಂಬುದನ್ನು ಪಂಪನು ಕಾವ್ಯದ ಅಂತ್ಯದಲ್ಲಿ ಹೀಗೆ ಪ್ರಕಾರಾಂತರವಾಗಿ ತಿಳಿಸಿದ್ದಾನೆ:

> **ರಸಭಾವೋಪೇತ ಧರ್ಮಾಮೃತರಸಮಯದೊಳ್ ಘೋರಸಂಸಾರ ನಾನಾ**
> **ವ್ಯಸನವ್ಯುಚ್ಛಿತ್ತಿಯೊಳ್ ಧಾರ್ಮಿಕಜನಜನಿತಾನಂದಸಂದೋಹವಿದ್ಯಾ**
> **ರಸದೊಳ್ ಸಂಸಾರಸಾರೋದಯವಿರಚಿತದೊಳ್ ವಾಗ್ವಧೂಮುದ್ರೆಯೊಳ್ಮು**
> **ದ್ರಿಸಿ ನಿಂದತ್ತಾದಿತೀರ್ಥೇಶ್ವರನ ಚರಿತದೊಳ್ ವಾಕ್ಯಮಾಣಿಕ್ಯಕೋಶಂ**
>
> **(ಆದಿಪುರಾಣಂ, 16–80)**

ಈ ಪದ್ಯದಲ್ಲಿ ಬರುವ 'ಧರ್ಮಾಮೃತರಸ'ವು 'ರಸಭಾವೋಪೇತ' ವಾಗಿರುವು ದನ್ನು ಎತ್ತಿಹೇಳಬೇಕು. ಇಲ್ಲಿ 'ಧರ್ಮಾಮೃತರಸ'ವೆಂಬುದು ನಿಸ್ಸಂಶಯವಾಗಿ ಶಾಂತರಸವನ್ನೇ ಉದ್ದೇಶಿಸಿದ ಮಾತಾಗಿದೆ. ಹಾಗೆಯೇ

'ಧಾರ್ಮಿಕಜನಜನಿತಾನಂದ ಸಂದೋಹ ವಿದ್ಯಾರಸ'ವೆಂಬುದೂ ಶಾಂತರಸವನ್ನೇ ಉದ್ದೇಶಿಸಿ ಹೇಳಿರುವುದಾಗಿದೆ.

ಇದಕ್ಕೆ ಪ್ರತಿಯಾಗಿ ವಿಕ್ರಮಾರ್ಜುನವಿಜಯದ ಅಂತ್ಯದಲ್ಲಿರುವ ಪದ್ಯಗಳು ಶೃಂಗಾರಸಂಬಂಧಿಯಾದ ವಿವರಗಳನ್ನೇ ನೀಡುತ್ತಿರುವುದನ್ನು ಗಮನಿಸಬೇಕು:

ಪುದಿದಿರೆ ರಾಗಮುರ್ಕೆ ಪೊಸವೇಂಟದಲಂಪುಗಳೆಲ್ಲಮೋದಿದ
ರ್ಗಿದಱಿನುಯಾಯಿಗಳ್ಗೆಸೆವುದಾರಗುಣಂ ಸಕಳಾವನೀಶ್ವರ
ರ್ಗದಟಿನಳುರ್ಕೆ ಭೃತ್ಯನಿವಹಕ್ಕೆ ಚದುರ್ ಗಣಿಕಾಜನಕ್ಕೆ ಕುಂ
ದದೆ ನೆಲಸಿರ್ಕೆಯೀ ಮಹಿತಳಕ್ಕೆ ಮದೀಯ ಕೃತಿಪ್ರಬಂಧದಿಂಮ
ಕರಮಱಿಕೆರ್ತು ಸಮಸ್ತಭಾರತಕಥಾಸಂಬಂಧಮಂ ಬಾಜಿಸಲ್
ಬರೆಯಲ್ ಕೇಳಲೊಡರ್ಚುವಂಗಮಿದಱಿಕೊಳ್ ತನ್ನಿಷ್ಟವಪ್ಪನ್ನಮು
ತ್ತರಮಕ್ಕುಂ ಧೃತಿ ತುಷ್ಟಿ ವಿಭವಂ ಸೌಭಾಗ್ಯಮಿಷ್ಟಾಂಗನಾ
ಸುರತಂ ಕಾಂತಿಯಗುಂತಿ ಶಾಂತಿ ವಿಭವಂ ಭದ್ರಂ ಶುಭಂ ಮಂಗಳಂ

(ವಿಕ್ರಮಾರ್ಜುನವಿಜಯಂ, 14–63, 65)

ಪೊಸವೇಂಟದಲಂಪು, ಗಣಿಕಾಜನಕ್ಕೆ ಚದುರ್, ಇಷ್ಟಾಂಗನಾಸುರತ – ಎಂಬ ಲೌಕಿಕತಾಪ್ರತಿನಿಧಿಗಳಾಗುವ ವಿಷಯಗಳನ್ನು ಪಂಪನು ಇಲ್ಲಿ ಉದ್ದೇಶಪೂರ್ವಕವಾಗಿ, ಅದೂ ಕಾವ್ಯದ ಅಂತ್ಯದಲ್ಲಿ, ಇರಿಸಿರುವುದು ಈ ಕೃತಿ ಶೃಂಗಾರಕೇಂದ್ರಿತವೆಂಬುದನ್ನು ಖಚಿತವಾಗಿ ಸೂಚಿಸಲಿಕ್ಕಾಗಿಯೇ ಎಂಬುದು ಸ್ಪಷ್ಟವಾಗಿದೆ.

* * * * *

ವಿಕ್ರಮಾರ್ಜುನವಿಜಯದಲ್ಲಿ ಅರ್ಜುನನೇ ನಾಯಕ. ಅರ್ಜುನನ ಸಾಹಸ–ಪರಾಕ್ರಮಗಳ ವರ್ಣನೆ ಈ ಕಾವ್ಯದಲ್ಲಿ ಸಾಕಷ್ಟಿದೆ. ಆದರೆ ಆತ ಶೃಂಗಾರನಾಯಕನೆಂಬ ಸೂಚನೆಯನ್ನು ಪಂಪನು ಕಾವ್ಯದ ಮೊದಲಿಗೆ ನೀಡಿದ್ದಾನೆ. ಅರಿಕೇಸರಿ ಅರ್ಜುನರನ್ನು ಅಭಿನ್ನವಾಗಿ ನಿರೂಪಿಸಿದ ಪಂಪನು ಕಾವ್ಯದ ಆರಂಭದಲ್ಲಿ ಅರಿಕೇಸರಿಯ ಸ್ತುತಿರೂಪದಲ್ಲಿ ನಾಲ್ಕು ಪದ್ಯಗಳನ್ನು ಮೊದಲಿಗೆ ಬರೆದಿದ್ದು ಅದರಲ್ಲೊಂದು ಹೀಗಿದೆ:

ಸಹಜದ ಚೆಲ್ವಿನೊಳ್ ರತಿಯ ಸೋಲದ ಕೇಳಿಕೆಯೊಳ್ ಪೊದಳ್ದು ಸ
ನ್ನಿಹಿತವೆನಿಪ್ಪಪೂರ್ವಶುಭಲಕ್ಷಣದೇಹದೊಳ್ಪನಾಳ್ದು ಸಂ
ದಹಿಕಟಕಪ್ರಸಾದದೆ ಮನೋಜನುಮಂ ಗೆಲೆವಂದನಾಗಳುಂ
ಸಹಜಮನೋಜನೆಮಗೀಗೆ ವಿಚಿತ್ರರತೋತ್ಸವಂಗಳಂ

(ವಿಕ್ರಮಾರ್ಜುನವಿಜಯಂ, 1–4)

ಸಹಜವಾದ ಚೆಲುವು, ರತಿಯು ಸೋಲದ ಕೇಳಿಕೆ, ಅಪೂರ್ವಶುಭಲಕ್ಷಣ ದೇಹದ ಒಳ್ಪು, ಕಾಮನನ್ನೂ ಗೆದ್ದಂತಿರುವ 'ಸಹಜಮನೋಜ'ನು 'ವಿಚಿತ್ರರತೋತ್ಸವ'ಗಳನ್ನು ಈಯಲಿ – ಎಂಬ ಪೂರ್ತಿ ಶೃಂಗಾರಕೇಂದ್ರಿತವಾದ ಪ್ರಾರ್ಥನೆಯನ್ನು ಇಲ್ಲಿ ಪಂಪನು ಮಾಡಿರುವುದು ತನ್ನ ಕಾವ್ಯದೊಳಗಿರುವ ಶೃಂಗಾರಪ್ರಾಧಾನ್ಯದ ಸ್ಪಷ್ಟ ಸೂಚನೆಯೇ ಆಗಿದೆ. ತಾನು ಶೃಂಗಾರಪ್ರಧಾನವಾದ ಕಾವ್ಯವನ್ನೇ ಬರೆಯುತ್ತಿದ್ದೇನೆಂಬುದನ್ನು ವಾಚಕರಿಗೆ ಸ್ಪಷ್ಟವಾಗಿ ತಿಳಿಸುವ ಮಾತೂ ಇದಾಗಿದೆ.

* * * * *

ವಿಕ್ರಮಾರ್ಜುನವಿಜಯದ ಮೊದಲನೆಯ ಆಶ್ವಾಸದಲ್ಲಿ ಪಾಂಡವರ ಜನ್ಮದ ವಿವರಣೆಯಿದೆ. ಅರ್ಜುನನ ಜನ್ಮ ಮತ್ತು ಜನ್ಮೋತ್ಸವದ ವೈಭವವನ್ನು ಪಂಪ ವಿಶೇಷವಾಗಿ ವರ್ಣಿಸಿದ್ದಾನೆ. ಅಲ್ಲಿ ನೆರೆದ ಋಷಿಗಳು, ದೇವತೆಗಳು ವಿಶೇಷಾಶೀರ್ವಾದಗಳನ್ನು ನೀಡಿ ಹರಸುವಾಗ ಶಿಶುವಿಗೆ ಅಷ್ಟೋತ್ತರಶತನಾಮಗಳನ್ನಿರಿಸಿ ಶುಭವನ್ನು ಅನುಗ್ರಹಿಸಿದರಂತೆ. ಆ ಹೆಸರುಗಳ ಒಂದು ಪಟ್ಟಿಯನ್ನೇ ಪಂಪ ನೀಡಿದ್ದಾನೆ. ಈ ಪಟ್ಟಿಯಲ್ಲಿ ಐವತ್ತು ಹೆಸರುಗಳಿವೆ. ಇವೆಲ್ಲ ಅರ್ಜುನನಿಗೂ ಅರಿಕೇಸರಿಗೂ ಒಟ್ಟಾಗಿಯೇ ಅನ್ವಯಿಸುವಂತಹವಾಗಿವೆ. ಪ್ರಾಯಶಃ ಹೆಚ್ಚಿನ ಹೆಸರುಗಳು ಪಂಪನೇ ತನ್ನ ಆಶ್ರಯದಾತನಿಗೆ ಗೌರವಪೂರ್ವಕವಾಗಿ ಕಾವ್ಯದಲ್ಲಿ ಸಮರ್ಪಿಸಿದ ಬಿರುದುಗಳು. ಅವುಗಳನ್ನು ಬೇರೆ ಬೇರೆ ಸಂದರ್ಭಗಳಲ್ಲಿ ಅರ್ಜುನನಿಗೆ ಉಪಯೋಗಿಸಲಾಗಿದೆ. ಈ ಹೆಸರುಗಳ ಪೈಕಿ ಕೆಲವಕ್ಕೆ ವಿವರಣೆಯನ್ನು ಕಾವ್ಯದ ಕೊನೆಯ 14ನೆಯ ಆಶ್ವಾಸದಲ್ಲಿ ನೀಡಲಾಗಿದೆ. ಯಾವ ಯಾವ ಕಾರಣದಿಂದ ಅರ್ಜುನನಿಗೆ ಈ ವಿಶೇಷವಾದ ಹೆಸರುಗಳು

ಬಂದಿವೆಯೆಂಬುದನ್ನು ಪಂಪ ವಿವರಿಸಿದ್ದಾನೆ. ಮೊದಲನೆಯ ಆಶ್ವಾಸದಲ್ಲಿ ನೀಡಲಾದ ಎಲ್ಲ ಹೆಸರುಗಳ ಕುರಿತು ವಿವರಣೆಗಳಿಲ್ಲದಿದ್ದರೂ ಇಪ್ಪತ್ತೆಂಟಕ್ಕೂ ಹೆಚ್ಚು ಹೆಸರುಗಳಿಗೆ ಪಂಪನು ಕಾರಣಗಳನ್ನು ನಿರೂಪಿಸಿದ್ದಾನೆ. ಮೊದಲನೆಯ ಆಶ್ವಾಸದಲ್ಲಿ ನೀಡಲಾದ ಹೆಸರುಗಳಲ್ಲಿ ಹಲವು ಅರ್ಜುನನ (ಅರಿಕೇಸರಿಯ) ವಿದ್ಯೆ-ಪರಾಕ್ರಮಗಳನ್ನು ನಿರೂಪಿಸುವಂತಹವು. ಆದರೆ ಶೃಂಗಾರಸಂಬಂಧಿತವಾದ ಹೆಸರುಗಳು ಇಲ್ಲಿ ನೀಡಲ್ಪಟ್ಟಿರುವುದನ್ನು ಮುಖ್ಯವಾಗಿ ಗಮನಿಸಬೇಕಾಗುತ್ತದೆ. ಸುರತಮಕರಧ್ವಜಂ, ಸಹಜಮನೋಜಂ, ಆಂಧ್ರೀಕುಚ ಕಳಶಪಲ್ಲವಂ, ಕರ್ಣಾಟೀಕರ್ಣಪೂರಂ, ಲಾಟೀಲಲಾಮಂ, ಕೇರಳೀಕೇಳಿಕಂದರ್ಪಂ, ಪ್ರಿಯಗಳ್ಳಂ ಎಂಬ ತೀರಾ ಶೃಂಗಾರಪರವಾದ ಹೆಸರುಗಳು ಇಲ್ಲಿವೆ.

ಮೊದಲನೆಯ ಆಶ್ವಾಸದ ಮೊದಲ ನಾಲ್ಕು ಪದ್ಯಗಳಲ್ಲಿ ಅರಿಕೇಸರಿಯ ಸ್ತುತಿ ಮಾಡುವಲ್ಲಿ ಆತನ ಒಂದೊಂದು ಹೆಸರನ್ನು ಒಂದೊಂದು ಪದ್ಯದಲ್ಲಿ ಪಂಪನು ಸಂಯೋಜಿಸಿದ್ದಾನೆ. ನಾಲ್ಕು ಪದ್ಯಗಳಲ್ಲಿ ಕ್ರಮವಾಗಿ ಅರಿಕೇಸರಿ, ಉದಾರಮಹೇಶ್ವರ, ಪ್ರಚಂಡಮಾರ್ತಂಡ, ಸಹಜಮನೋಜ – ಈ ನಾಲ್ಕು ಹೆಸರುಗಳು ನಿರೂಪಿತವಾಗಿವೆ. ಇವುಗಳಲ್ಲಿ ಮೊದಲನೆಯದು ಪಂಪನ ಅರಸನ ಅಂಕಿತನಾಮವೆಂದೇ ತೋರುತ್ತದೆ. ಆದರೂ ಚತುರ್ದಶಾಶ್ವಾಸದಲ್ಲಿ 'ಅರಿಕರಿಗಳಂ ಪಡಲ್ವಡಿಸುವ ಬೀರದೊಳರಿಕೇಸರಿಯುಂ' ಎಂದು ವಿವರಣೆಯನ್ನು ನೀಡಿದ್ದಾನೆ. ಮೊದಲನೆಯದು ಅಂಕಿತನಾಮವಾದರೆ ಮುಂದಿನ ಮೂರು ಆತನ ಮೂರು ಮುಖ್ಯ ಗುಣಗಳನ್ನು ನಿರೂಪಿಸುವ ಬಿರುದುಗಳು. ಆ ಮೂಲಕ ಕಥಾನಾಯಕನ ವ್ಯಕ್ತಿತ್ವದ ಮೂರು ಮುಖ್ಯ ಲಕ್ಷಣಗಳನ್ನು ಪಂಪ ನಿರೂಪಿಸಿದ್ದಾನೆ. ಉದಾರಮಹೇಶ್ವರ (ಆವೆಡೆಯೊಳಮ ಸಮಾನಮೆನಿಸಿದ ಮಹಾಮಹಿಮೆ ಯೊಳುದಾರಮಹೇಶ್ವರನುಂ) ಎಂಬಲ್ಲಿ ಅರಿಕೇಸರಿಯ ಔದಾರ್ಯ ಹಾಗೂ ಹಿರಿಮೆ, ಪ್ರಚಂಡಮಾರ್ತಂಡ (ಭುವನಭವ ನೋದರದೊಳ್ ಪಸರಿಸಿದ ತೇಜದೊಳ್ ಪ್ರಚಂಡಮಾರ್ತಂಡನುಂ) ಎಂಬಲ್ಲಿ ಪರಾಕ್ರಮ ಮತ್ತು ಸಹಜಮನೋಜ (ಕೈಗೆಯ್ಯದೆ ಸೊಗಯಿಸುವನಪ್ಪುದಱಿಂ ಸಹಜಮನೋಜನುಂ) ಎಂಬಲ್ಲಿ ಸೌಂದರ್ಯ –ಈ ಮೂರು ಗುಣಗಳು ಪಂಪ ಎತ್ತಿ ಹೇಳಿದಂತಹವು. ಇವುಗಳು

ಒಂದರ ಅನಂತರ ಒಂದರಂತೆ ಉತ್ತರೋತ್ತರವಾಗಿ ಮೇಲ್ಮೆಯವುಗಳೆಂದು ಪರಿಗಣಿಸಿದರೆ ಸಹಜಮನೋಜನೆಂಬ ಬಿರುದು ಮುಖ್ಯವಾಗಿ ಪರಿಗಣಿತವಾಗುತ್ತದೆ. ಇದು ಪೂರ್ತಿಯಾಗಿ ಶೃಂಗಾರಪರವಾಗಿದ್ದು ಉಳಿದೆರಡು ಶೃಂಗಾರಪೂರಕವಾದವು ಗಳಾಗಿವೆಯೆಂದು ಸ್ಪಷ್ಟವಾಗುತ್ತದೆ. ಅರ್ಜುನನು (ಅರಿಕೇಸರಿಯು) ಯಾವ ಅಲಂಕರಣಗಳೂ ಸೌಂದರ್ಯಸಾಧನಗಳೂ ಶೃಂಗಾರ ವರ್ಧಕಗಳೂ ಇಲ್ಲದೆ (ಕೈಗೆಯ್ಯದೆ; ಕೈಗೆಯ್ = ಅಲಂಕರಿಸು) ಮನೋಜ(=ಕಾಮ)ನಾಗಿದ್ದಾನೆಂಬುದು ಪಂಪನ ನಿಲುಮೆ. ಅದಕ್ಕನುಗುಣವಾಗಿ ಕಾವ್ಯದ ಒಳಗೆ ಈ ಬಿರುದನ್ನು ಬಳಸಿದ ಸಂದರ್ಭವೂ ವಿಶಿಷ್ಟವಾದುದು. ಎರಡನೆಯ ಆಶ್ವಾಸದಲ್ಲಿ ಅರ್ಜುನನ ಬಿರುದುಗಳನ್ನು ಬಳಸಿ ಕೊಂಡು ಅವನ ಶರೀರಸೌಂದರ್ಯವನ್ನು ಕ್ರಮಾಗತವಾಗಿ ವರ್ಣಿಸುವ ಸಂದರ್ಭವಿದೆ. ಅಲ್ಲಿ ಸಹಜಮನೋಜ, ಸರತಮಕರಧ್ವಜ, ಕರ್ಣಾಟೀಕರ್ಣಪೂರ, ಲಾಟೀಲಲಾಮ, ಆಂಧ್ರೀಕುಚಕಲಶಪಲ್ಲವ, ಕೇರಳೀಕೇಳಿ ಕಂದರ್ಪ ಮೊದಲಾದ ಬಿರುದುಗಳನ್ನು ಶೃಂಗಾರಪೂರಕವಾಗಿ ಬಳಸಿಕೊಳ್ಳಲಾಗಿದೆ. ಅಲ್ಲದೆ, 'ರಿಪುಕುರಂಗ ಕಂಠೀರವ' ಎಂಬ ವೀರಪೋಷಕವಾದ ಬಿರುದನ್ನೂ "ಸಿಂಹಕಟಿತಟಮನಿಳಿಸುವ ರಿಪುಕುರಂಗಕಂಠೀರವನ ಕಟಿತಟಮೊಲ್ದು ನೋಡುವ ಗಾಡಿಕಾರ್ತಿಯರ ಕಣ್ಗೆ ಕಾಮನಡ್ಡಣದಂತೆ ದೊಡ್ಡಿತ್ತಾಗಿ ಮೀಱುವುದ್ವೃತ್ತವೃತ್ತತೆಯು ನೀೞ್ದುಕೊಂಡುದ್ವೃತ್ತಂಗಳಾದುವು" (ವಿಕ್ರಮಾರ್ಜುನವಿಜಯಂ, 2-39 ವ) -ಎಂಬಂತೆ ಶೃಂಗಾರಪೂರಕ ವಾಗಿಯೇ ಬಳಸಿಕೊಂಡಿರುವುದನ್ನು ಗಮನಿಸಬೇಕು.

ದ್ರೌಪದೀಸ್ವಯಂವರದ ಸಂದರ್ಭದಲ್ಲಿ ಅರಿಕೇಸರಿಯು ಯಂತ್ರದ ಮೀನನ್ನು ಹೊಡೆದಾಗ "ಆಗಳಾ ಪಿಡಿದ ಬಿಲ್ಲೆ ಕರ್ಬಿನ ಬಿಲ್ಲಾಗೆಯುಮಂಬುಗಳೆ ಪೂವಿನಂಬು ಗಳಾಗೆಯು ಮೆಚ್ಚ ಮೀನೆ ಮೀನಕೇತನಮಾಗೆಯುಂ ಸಹಜಮನೋಜನಂ ಮನೋಜನೆಂದೆ ಬಗೆದು.........ಸತಿ ಮಾಲೆಸೂಡಿದಳ್" (ವಿಕ್ರಮಾರ್ಜುನವಿಜಯಂ, 3-63, ವ 64) ಎಂದು ವರ್ಣಿಸಿದ ಪಂಪ 'ಸಹಜಮನೋಜ' ಎಂಬ ಬಿರುದನ್ನು ಬಳಸಿದ್ದಾನೆ. ಶೃಂಗಾರಸಂದರ್ಭೋಚಿತವಾಗಿ ಇಲ್ಲಿ ಈ ಬಿರುದನ್ನು ಬಳಸಿದವನು ಸುಭದ್ರಾಹರಣದ ಸಂದರ್ಭದಲ್ಲಿ

'ಸುರತಮಕರಧ್ವಜ'ನೆಂಬ ಬಿರುದನ್ನು ಪುನಃ ಪುನಃ ಬಳಸಿದ್ದಾನೆನ್ನುವುದನ್ನು ಗಮನಿಸಬೇಕು. ದ್ರೌಪದಿಯನ್ನು 'ಶೃಂಗಾರಸಾಗರಮೆ ಮೇರೆದಪ್ಪಿ ಬರ್ಪಂತೆ ಬರೆ' (ವಿಕ್ರಮಾರ್ಜುನವಿಜಯಂ, 3–48 ವ) ಎಂದು ವರ್ಣಿಸಿರುವುದು, ದ್ರೌಪದೀ–ಅರ್ಜುನರನ್ನು 'ರತಿಯುಂ ಕಾಮದೇವನುಂ' (ವಿಕ್ರಮಾರ್ಜುನವಿಜಯಂ, 3–75 ವ) ಎಂದು ವರ್ಣಿಸಿರುವುದು ಕೂಡ ಈ ಸಂದರ್ಭದಲ್ಲಿ ಗಮನಿಸಬೇಕಾದ ವಿಷಯಗಳಾಗಿವೆ.

ಮಹಾಭಾರತ–ರಾಮಾಯಣಗಳೆರಡರಲ್ಲೂ ವೀರ–ಶೃಂಗಾರ–ಕರುಣಗಳು ಎದ್ದು ತೋರುತ್ತವೆ. ಆದರೆ ನಮ್ಮ ಪ್ರಾಚೀನ ಲಾಕ್ಷಣಿಕರು ರಾಮಾಯಣದಲ್ಲಿ ಕರುಣವೂ ಮಹಾಭಾರತದಲ್ಲಿ ಶಾಂತವೂ ಮುಖ್ಯರಸಗಳಾಗಿದ್ದು ಉಳಿದೆಲ್ಲ ರಸಗಳೂ ಪೂರಕಪೋಷಕಗಳಾಗಿ ಬಂದಿವೆಯೆಂಬ ನಿರ್ಣಯಕ್ಕೆ ಬಂದಿದ್ದಾರೆ. ಒಂದೇ ರಸದಿಂದ ಕಾವ್ಯವಾಗದು (ನಹ್ಯೇಕರಸಜಂ ಕಾವ್ಯಂ). ಮುಖ್ಯ ಅಥವಾ ಕೇಂದ್ರೀಯವಾದೊಂದು ರಸಕ್ಕೆ ಉಳಿದ ರಸಗಳು ಪೋಷಕಗಳಾಗಲೇಬೇಕು. ಶಾಂತರಸ ಪ್ರಧಾನವಾಗಿದ್ದ ಮಹಾಭಾರತವನ್ನು ವಿಶೇಷಗೌರವದಿಂದ ಕಾಣುತ್ತಲೇ 'ವ್ಯಾಸಮುನೀಂದ್ರ ರುಂದ್ರವಚನಾಮೃತವಾರ್ಧಿಯನೀಸಿ'ದ (ವಿಕ್ರಮಾರ್ಜುನವಿಜಯಂ, 1–13) ಪಂಪನು ತನ್ನ ಭಾರತದಲ್ಲಿ ಬದಲಾಯಿಸಿ ಶೃಂಗಾರಪ್ರಧಾನವಾದುದನ್ನಾಗಿ ಮಾಡಿದ್ದಾನೆ. ಪಂಪನ ಕಾಲ 'ಕ್ಷಾತ್ರಯುಗ'ವೆಂಬ ಹೆಸರನ್ನು ಪಡೆದಿತ್ತೆಂದೂ ಅದರ ಪ್ರಭಾವ ಆತನ ಕೃತಿಯ ಮೇಲೆ ಆಗಿದೆಯೆಂದೂ ಪ್ರತಿಪಾದಿಸುತ್ತ ವಿಮರ್ಶಕರು ಪಂಪಭಾರತದಲ್ಲಿ ವೀರರಸವೇ ಕೇಂದ್ರೀಯವೆಂದು ಪ್ರತಿಪಾದಿಸಿದ್ದುಂಟು. ಆದರೆ ಕಾವ್ಯವನ್ನು ಆಮೂಲಾಗ್ರವಾಗಿ ಪರಿಶೀಲಿಸಿದರೆ ಶೃಂಗಾರಕ್ಕೇ ಮಹತ್ತ್ವವಿರುವುದು ಸ್ಫುಟವಾಗಿ ಗೋಚರಿಸುತ್ತದೆ. ಹದಿನಾಲ್ಕು ಆಶ್ವಾಸಗಳ ಪಂಪಭಾರತದಲ್ಲಿ ಹತ್ತರಿಂದ ಹದಿಮೂರರವರೆಗಿನ ಆಶ್ವಾಸಗಳಲ್ಲಿ ಯುದ್ಧವರ್ಣನೆಯಿದೆ. ಈ ಭಾಗಗಳನ್ನು ಮಾತ್ರವೇ ಗಮನಿಸಿದರೆ ವೀರರಸಪ್ರಧಾನವೆಂದು ಕಾಣಿಸುವುದಾದರೂ ಉಳಿದೆಲ್ಲ ಆಶ್ವಾಸಗಳನ್ನೂ ಸೇರಿಸಿಕೊಂಡು ಸಮಗ್ರವಾಗಿ ಪರಿಶೀಲಿಸಿದಾಗ ಪಂಪನು ವೀರರಸವನ್ನು ಶೃಂಗಾರಪೋಷಕವಾಗಿ ಪರಿಗಣಿಸಿರುವುದನ್ನು ಮನಗಾಣಬಹುದು. ಯುದ್ಧ ಸಿದ್ಧತೆಯ ಶೌರ್ಯಪರಾಕ್ರಮಗಳ ವರ್ಣನೆಯ ಸಂದರ್ಭದಲ್ಲೂ ಪಂಪನು

ಅದನ್ನು 'ವೀರಶೃಂಗಾರ'ವಾಗಿ ಪರಿವರ್ತಿಸಿರುವುದಕ್ಕೆ ಪಂಪಭಾರತದಲ್ಲಿ ಉದಾಹರಣೆಯಿದೆ:

"ಅತ್ತ ಮತ್ತಮೊರ್ವಂ ತನ್ನ ನಲ್ಲಳೊಳಿಂತೆಂದನೀ ಪೊಟ್ತಿ ಪೊಟ್ತು ನಾಳೆ ದೇವಲೋಕದ ಕನ್ಯಕೆಯರೋಲಗದೊಳಿರ್ಪೆನೆಂದು ನುಡಿಯೆ ನೀನೆಂದಂತು ಪೋಗಲ್ ತೀರದು ನಾಳೆ ಮಗುಟ್ದು ಬಂದೆನ್ನೊಳ್ ನೆರೆವೆಂಬೆಂದು ಪೇೞ್ ನಿನಗಱಿವುಂಟೆ ಎಂದು ಕೇಳೆಯೆನ್ನೋಲೆವಾಗ್ಯಮುಂಟೆಂದಳ್. ಮತ್ತಮೊಂದೆಡೆ ಯೊಳೊರ್ವಳ್ ದರ್ಭಶಯನಸ್ಥನಾದ ನಿಜಪ್ರಾಣೇಶ್ವರನ ಪರಿಚ್ಛೇದಮನಱಿದು ತನ್ನ ಸಾವಂ ಪರಿಚ್ಛೇದಿಸಿ

ತಾಂ ಗಡ ನಾಳೆ ಪೋಗಿ ದಿವಿಜಾಂಗನೆಯೊಳ್ ತೊಡರ್ದಿರ್ಪನಿಲ್ಲಿ ಮಾ
ಣ್ದಾಂ ಗಡಮಿರ್ಪೆನಂತನಿತು ಬೆಳ್ಳೆನೆ ಮುನ್ನಮೆ ಪೋಗಿ ನಲ್ಮೆ ಗೆ
ಲ್ಲಂಗೊಳೆ ದೇವಲೋಕದೊಳಧೀಶನನಾನಿದಿರ್ಗೊಳ್ವೆನೋವೊ ಸ
ಗ್ಗಂಗಳೊಳಿರ್ಪ ದೇವಡಿತಿ ತೊಟ್ತಿರೊಳಟ್ತಿಯನಾಗಲೀವೆನೇ
ಎಂದು ಕೈದವಮಿಲ್ಲದ ನಲ್ಮೆಯಿಂ ನಾಲಗೆಯ ತುದಿಗೆ ತಂದು ನುಡಿದಳ್.
ಮತ್ತೊರ್ವಳ್ ತನ್ನಾಣ್ಮನ ದೋರ್ವಲದಗುರ್ವಂ ನಚ್ಚಿ
ಜಳಧಿಯೊಳಾದ ಮುತ್ತುಗಳವೇಂ ಪೊಸತಾದುವೆ ನಿನ್ನ ತೋಳ ಬಾ
ಳೊಳೆ ಬಲಗರ್ವದಿಂ ತೆಗೆದುದಗ್ರ ವಿರೋಧಿಮದೇಭಮಸ್ತಕ
ಸ್ಥಳಜಳರಾಶಿಯೊಳ್ ಬಳೆದ ನಿರ್ಮಳ ನಿರ್ವ್ರಣ ವೃತ್ತಮೌಕ್ತಿಕಾ
ವಳಿಯನೆ ತರ್ಪುದೆಂದು ನುಡಿದಟ್ಟಿಱಿಕೊಳಾಱಿಸಿದಳ್ ನಿಜೇಶನಂ"

(ವಿಕ್ರಮಾರ್ಜುನವಿಜಯಂ 10–44ವ, 45, ವ, 46)

ಪಂಪನ ಜಾಣ್ಮೆ ಈ ಚಿತ್ರಣದಲ್ಲಿ ಸ್ಪಷ್ಟವಾಗಿ ಮೂಡಿದೆಯೆನ್ನಬಹುದು. ಪೂರ್ತಿ ಯುದ್ಧಪರಿಸರದ ಮಧ್ಯದಲ್ಲಿ ವೀರಪೋಷಕವಾದ ಶೃಂಗಾರವನ್ನು ಬಹಳ ಚಮತ್ಕಾರಪೂರ್ಣವಾಗಿ ಪಂಪ ನಿರೂಪಿಸಿದ್ದಾನೆ. ಈ ಸಂದರ್ಭದಲ್ಲಿ ಶೃಂಗಾರವು ವೀರಪೋಷಕವಾದರೂ ಇಡಿಯ ಕಾವ್ಯದಲ್ಲಿ ವೀರವು ಶೃಂಗಾರಪೋಷಕವೆಂಬುದನ್ನು ನಾವು ಅವಶ್ಯವಾಗಿ ಗಮನಿಸಬೇಕು.

* * * * *

ಶೃಂಗಾರನಿರೂಪಣೆಯು ತನ್ನ ನಾಜೂಕಾದ ಮಿತಿಯನ್ನು ಮೀರಿದಾಗ ಅದು ಅಶ್ಲೀಲವೆನ್ನಿಸಬಹುದು. ಅಶ್ಲೀಲತೆಯ ದೃಷ್ಟಿಯೂ ಕಾಲದಿಂದ ಕಾಲಕ್ಕೆ ಬದಲಾಗಬಹುದು. ಪಂಪನ ನಿರೂಪಣೆಗಳಲ್ಲಿ ಕೆಲವು ಇಂದಿನ ದೃಷ್ಟಿಯಿಂದ ಅಶ್ಲೀಲತೆಯ ಬದಿಗೆ ಇರುವಂತಾಗಿದೆಯೇನೋ ಎಂಬ ಸಂದೇಹವನ್ನು ಹುಟ್ಟಿಸುವಂತಹ ಸಂದರ್ಭಗಳೂ ಇವೆ. ಅರ್ಜುನನು ದ್ವಾರವತೀಪುರಕ್ಕೆ ಬಂದ ಸಂದರ್ಭದಲ್ಲಿ ಆತನನ್ನು ನೋಡಿದ ಕಾರಣದಿಂದಾಗಿ ಸುಂದರಿಯೊಬ್ಬಾಕೆಗೆ ಆದ ಸ್ಥಿತಿಯನ್ನು ಪಂಪನು ಈ ರೀತಿಯಲ್ಲಿ ವರ್ಣಿಸಿದ್ದಾನೆ:

ಸ್ಮರನಂ ರೂಪಿನೊಳಿಂದ್ರನಂ ವಿಭವದೊಳ್ ಪೋ ಮೆಚ್ಚೆ ನಾನಾವ ಗಂ
ಡರುಮಂ ಕಚ್ಚೆಯೊಳಿಟ್ಟು ಕಟ್ಟುವೆನೆನುತ್ತಿರ್ಪಾಕೆ ಗಂಧೇಭಕಂ
ಧರಬಂಧಪ್ರವಿಭಾಸಿಯಪ್ಪರಿಗನಂ ಕಾಣುತ್ತೆ ಕಣ್ಸೋಲ್ತು ಕಾ
ಮರಸಂ ಭೋಂಕನೆ ಸೂಸೆ ತಾಳ್ದಲರಿದೆಂದಿರ್ಕಚ್ಚೆಯಂ ಕಟ್ಟಿದಳ್

(ವಿಕ್ರಮಾರ್ಜುನವಿಜಯಂ, 4-38)

ಶೃಂಗಾರಕೇಂದ್ರಿತವಾದ ಕಾವ್ಯದಲ್ಲಿ ಶೃಂಗಾರದ ಎಲ್ಲ ಮುಖಗಳನ್ನೂ ತೋರಿಸುವುದಕ್ಕಾಗಿ ಈ ಪದ್ಯವನ್ನು ಪಂಪನು ಬರೆದಿದ್ದಾನೆಂದು ಸಮಾಧಾನಮಾಡಿಕೊಳ್ಳಬಹುದು. ಆದರೆ ಇಂತಹ ಅತಿಶೃಂಗಾರಸ್ವರೂಪದ ವಾಚ್ಯಸ್ವರೂಪದ ವರ್ಣನೆ ಯೊಂದಿರದಿರುತ್ತಿದ್ದರೂ ಅವನ ಕಾವ್ಯಕ್ಕೆ ಯಾವ ಕುಂದೂ ಆಗುತ್ತಿರಲಿಲ್ಲವೆಂಬುದನ್ನು ಗಮನಿಸಬೇಕು.

* * * * *

ಅರ್ಜುನನು ಶಿಶುವಾಗಿದ್ದಾಗ 'ದೇವಸಭೆಯುಂ ಬ್ರಹ್ಮಸಭೆಯುಮೊಡನಿರ್ದು' ನಾಮಕರಣೋತ್ಸವ ನಡೆಯಿತಂತೆ. ಆಗ ಇರಿಸಿದ ಹೆಸರುಗಳಲ್ಲಿ ಸುರತಮಕರಧ್ವಜ, ಸಹಜಮನೋಜ, ಆಂಧ್ರೀಕುಚಕಳಶಪಲ್ಲವ, ಕರ್ಣಾಟೀಕರ್ಣಪೂರ, ಲಾಟೀಲಲಾಮ, ಕೇರಳೀಕೇಳಿಕಂದರ್ಪ, ಪ್ರಿಯಗಳ್ಳ – ಎಂಬ ಹೆಸರುಗಳೂ ಇವೆ. ಇವೆಲ್ಲವೂ ಅವನ ಶೃಂಗಾರಲೀಲೆಗೆ ಸಂಬಂಧಿಸಿವೆಯಾದರೂ ಈ ಹೆಸರುಗಳು ಅರಿಕೇಸರಿಯು ಪ್ರೌಢನಾದ ಮೇಲೆ ಪಡೆದುವಲ್ಲವೆ? ಶಿಶುರೂಪದಲ್ಲಿದ್ದ ಆತನಿಗೆ ಶೃಂಗಾರಪರವಾದ ಈ ಹೆಸರುಗಳನ್ನು ಇರಿಸಿದರೆಂದರೆ ಅಷ್ಟು

ಉಚಿತವೆ? ಈ ನಿರೂಪಣೆಯು ಔಚಿತ್ಯವನ್ನು ಮೀರಿದಂತಾಗುವುದೆ? ಎಂಬುದು ವಿಚಾರಣೀಯ ವಿಷಯವಾಗಿದೆ. ಶೃಂಗಾರಪ್ರಧಾನವಾಗಿ ಕಾವ್ಯನಿರೂಪಣೆಯಿರಬೇಕೆಂಬ ಕವಿಯ ಮನೋಭಾವವು ಈ ರೀತಿ ಮಾಡಿದೆಯೆಂಬುದು ಸ್ಪಷ್ಟ. ಶೃಂಗಾರಸಂಬಂಧಿಯಾದ ಇಷ್ಟೊ ಹೆಸರುಗಳನ್ನು ನಿರೂಪಣೆ ಮಾಡಲೇಬೇಕೆಂಬ ತುಡಿತ ಕವಿಗಿತ್ತು. ಆ ತುಡಿತದಲ್ಲಿ ಒಂದಿಷ್ಟು ಔಚಿತ್ಯವನ್ನು ಮೀರಿದಂತಾಯಿತು. ಆದರೂ ಈ ಅನೌಚಿತ್ಯವು ಇಡಿಯ ಕಾವ್ಯದ ಸಂದರ್ಭದಲ್ಲಿ ಬಹಳ ದೊಡ್ಡ ಕೊರತೆಯೆಂದು ಹೇಳಬೇಕಾಗಿಲ್ಲ. ಕರ್ಣನನ್ನು 'ಕಾನೀನ'ನೆಂದು ಅರ್ಜುನನು ಕರೆಯುವ ಸಂದರ್ಭಗಳೂ ಕಾವ್ಯದೊಳಗಿವೆಯೆಂದು ಇಲ್ಲಿ ನೆನಪಿಸಿಕೊಳ್ಳಬಹುದು. ಈ ಸಂದರ್ಭದಲ್ಲಿ 'ಕಾನೀನ' ಎಂಬುದು ಕರ್ಣನ ನಾಮಾಂತರ ಎಂದು ಮಾತ್ರವೇ ಇರಿಸಿಕೊಂಡು ಮುಂದೆ ಓದಬೇಕು. ಹಾಗೆಯೇ ಇಲ್ಲಿಯೂ ಇವು ಅರ್ಜುನನ ನಾಮಾಂತರಗಳೆಂದು ಮಾತ್ರ ತಿಳಿದುಕೊಂಡು ಮುಂದುವರಿಯಬೇಕು. ರಾಘವಾಂಕನೆಂದಂತೆ 'ಒಂದೆರಡೆಡೆಯೊಳು ಎಡೆವಾಯ್ದು ಬಂದ ತಪ್ಪಂ ಹಿಡಿದು ಸಾಧಿಸದೆ ಕಡೆತನಕ ಬಂದ ಲೇಸಿಂಗೆ ತಲೆದೂಗು'ವುದು (ಹರಿಶ್ಚಂದ್ರಕಾವ್ಯಂ, 1–23) ರಸಿಕಧರ್ಮವೆಂದು ಸಮಾಧಾನಪಟ್ಟುಕೊಳ್ಳಬೇಕು.

* * * * *

ಪಂಪನು ಸಂಸ್ಕೃತದಲ್ಲಿ ಪ್ರಕಾಂಡಪಂಡಿತನಾಗಿದ್ದುದು ಮಾತ್ರವಲ್ಲ, ಪ್ರೌಢ ಸಂಸ್ಕೃತದಲ್ಲಿ ಕಾವ್ಯರಚನೆ ಮಾಡಬಲ್ಲ ಕವಿಯೂ ಆಗಿದ್ದನೆಂಬುದಕ್ಕೆ ಪಂಪಭಾರತದಲ್ಲಿ ಉದಾಹರಣೆಗಳು ದೊರಕುತ್ತವೆ. ಸಂಸ್ಕೃತಭೂಯಿಷ್ಠವಾದ ಪ್ರೌಢಕನ್ನಡವನ್ನು ಸಹಜ ವಾಗಿಯೇ ಬಳಸುವ ಪಂಪನು ಕೆಲವೆಡೆ ಪೂರ್ಣಸಂಸ್ಕೃತದಲ್ಲಿಯೇ ಪದ್ಯಗಳನ್ನು ಬರೆದಿದ್ದಾನೆ. ಅರ್ಜುನನು ಲೋಕಸಂಚಾರ ಮಾಡುತ್ತಾ ಗೋಕರ್ಣಕ್ಕೆ ಬಂದು ಗೋಕರ್ಣನಾಥನನ್ನು ಕಂಡು ಈ ರೀತಿ ಸ್ತುತಿಸುತ್ತಾನೆ:

ಪ್ರಚಂಡಲಯತಾಂಡವಕ್ಷುಭಿತಯಾಶು ಯಸ್ಯಾನಯಾ
ಸದಿಗ್ವಳಯಯಾ ಭುವಾ ಸಗಿರಿಸಾಗರದ್ವೀಪಯಾ
ಕುಲಾಲಕರನಿರ್ಭರಭ್ರಮಿತಚಕ್ರಲೀಲಾಯಿತಂ
ಸ ಸರ್ವಜಗತಾಂ ಗುರುರ್ಗಿರಿಸುತಾಪತಿಃ ಪಾತು ನಃ

(ವಿಕ್ರಮಾರ್ಜುನವಿಜಯಂ, 4–27)

[ಯಾರ ಅತಿವೇಗವಾದ ತಾಳಗತಿಯನ್ನುಳ್ಳ ತಾಂಡವನೃತ್ಯದಿಂದ ದಿಙ್ಮಂಡಲಗಳಿಂದಲೂ ಪರ್ವತಗಳಿಂದಲೂ ಸಮುದ್ರಗಳಿಂದಲೂ ದ್ವೀಪಗಳಿಂದಲೂ ಕೂಡಿದ ಭೂಮಿಯು ತಿರುಗಿಸಲ್ಪಟ್ಟು ಕುಂಬಾರನ ಕೈಚಕ್ರದಂತೆ ವೇಗವಾಗಿ ಸುತ್ತುವ ಲೀಲೆಗೆ ಒಳಗಾಯಿತೋ ಆ ಸರ್ವಜಗತ್ಪತಿಯೂ ಪಾರ್ವತೀರಮಣನೂ ಆದ ಶಿವನು ನಮ್ಮನ್ನು ಕಾಪಾಡಲಿ. – ಅನು: ಎನ್. ಅನಂತರಂಗಾಚಾರ್]

ಈ ಮೇಲಿನ ಸ್ತುತಿಪದ್ಯವು ಪೃಥ್ವೀವೃತ್ತದಲ್ಲಿದೆ. ಸಂಸ್ಕೃತದ ಪೃಥ್ವೀವೃತ್ತ ಕನ್ನಡಕ್ಕೆ ಸಹಜವಾಗಿ ಹೊಂದುವಂತಹದಲ್ಲ. ಆ ಛಂದೋಬಂಧದಲ್ಲಿ ಸಹಜವಾಗಿ ಸಂಸ್ಕೃತರಚನೆಯನ್ನೇ ಮಾಡಿದ್ದಾನೆ. (ಆದಿಪುರಾಣದಲ್ಲೂ ಜಿನಸ್ತುತಿಸಂದರ್ಭದಲ್ಲಿ ಸಂಸ್ಕೃತವನ್ನೇ ಬಳಸಿರುವುದನ್ನು ಗಮನಿಸಬೇಕು. ಆದಿಪುರಾಣ 16–11ರಿಂದ 34ರವರೆಗಿನ ಅನುಷ್ಟುಪ್‌ಶ್ಲೋಕಗಳು, 35, 36ನೆಯ ಪುಷ್ಪಿತಾಗ್ರ ಅರ್ಧಸಮವೃತ್ತಗಳು – ಇವನ್ನು ನೋಡಬಹುದು. ಈ ಅರ್ಧಸಮವೃತ್ತಗಳೂ ಕನ್ನಡಕ್ಕೆ ತುಂಬ ಸೊಗಸಿನಿಂದ ಹೊಂದಿಕೊಳ್ಳುವ ವೃತ್ತಗಳಲ್ಲವೆಂಬುದನ್ನು ಇಲ್ಲಿ ನೆನಪಿಸಿಕೊಳ್ಳಬೇಕು.)

ಚತುರ್ದಶಾಶ್ವಾಸದಲ್ಲಿ, ಪಟ್ಟಾಭಿಷಿಕ್ತನಾದ ವಿಕ್ರಾಂತತುಂಗನು (ಅರ್ಜುನನು) ಓಲಗಗೊಟ್ಟಿರಲು ವೈತಾಳಿಕನು ಮೃದು ಮಧುರ ಗಂಭೀರ ಧ್ವನಿಯಿಂದ ಹೊಗಳಿಕೆಯ ಪದ್ಯಗಳನ್ನು ಹೇಳಿದ ವಿವರಗಳಿವೆ. ಕ್ರಮವಾಗಿ ಸ್ರಗ್ಧರಾ, ಶಾರ್ದೂಲವಿಕ್ರೀಡಿತ (ಎರಡು ಪದ್ಯಗಳು), ಪೃಥ್ವೀ ಛಂದಸ್ಸಿನಲ್ಲಿ ಇವು ಇವೆ. ಈ ನಾಲ್ಕು ಪದ್ಯಗಳು ಪೂರ್ತಿ ಸಂಸ್ಕೃತದಲ್ಲಿವೆ. ಮೊದಲನೆಯ ಒಂದು ಪದ್ಯವನ್ನು ಗಮನಿಸೋಣ:

ಆಸೇತೋ ರಾಮಚಾ ಪಾಟನಿತಟ ಯುಗಟಂಕಾಂಕಿತಾ ಖಂಡಖಂಡಾ
ದಾಪೀಯೂಷಾಬ್ಧಿದುಗ್ಧಪ್ಲವಧವಳಕಸತ್ಕಂದರಾನ್ಮಂದರಾದ್ರೇಃ
ಆಚಂದ್ರಾರ್ಕ ಪ್ರತೀತೋಭ ಯಗಿರಿಶಿಖರಾತ್ ಸ್ವೋದಯಸ್ಯೈಕ ಹೇತೋಃ
ಶೈಲೇಳಾಕಲ್ಪಕಾಳಂ ಕ್ಷಿತಿವಲಯಮಿದಂ ಪಾತು ವಿಕ್ರಾಂತತುಂಗಃ
(ವಿಕ್ರಮಾರ್ಜುನವಿಜಯಂ, 14–27)

[ಶ್ರೀರಾಮನ ಬಿಲ್ಲಿನ ಕೊಪ್ಪಿನ ಎರಡು ಕಡೆಗಳೆಂಬ ಉಳಿಯಿಂದ ಗುರುತು ಮಾಡಲ್ಪಟ್ಟ ಸಮಗ್ರವಾದ ಭರತಖಂಡದಲ್ಲಿ ರಾಮಸೇತುವಿನ

ವರೆಗೂ ಹಾಲಿನ ಪ್ರವಾಹದಂತೆ ಬೆಳ್ಳಗೆ ಪ್ರಕಾಶಿಸುತ್ತಿರುವ ಕ್ಷೀರಸಾಗರದಂತೆ ಮಂದರಪರ್ವತ ಕಣಿವೆಯ ವರೆಗೂ ತನ್ನ ಅಭಿವೃದ್ಧಿಗೆ ಒಂದೇ ಕಾರಣವಾಗಿರುವ ಚಂದ್ರಸೂರ್ಯರ ಪರ್ಯಂತ ಪ್ರಸಿದ್ಧವಾಗಿರುವ ಪೂರ್ವಪಶ್ಚಿಮ ಪರ್ವತಗಳ ಪರ್ವತಭೂಮಿಗಳಿರುವ ಶಿಖರಗಳವರೆಗೂ ಕಾಲದವರೆಗೂ ವಿಕ್ರಾಂತತುಂಗನಾದ ಅರ್ಜುನನು ಈ ಭೂಮಂಡಲವನ್ನು ರಕ್ಷಿಸಲಿ. – ಅನು: ಎನ್. ಅನಂತರಂಗಾಚಾರ್]

ಸಮಾಸಭೂಯಿಷ್ಠವಾದ ಸಂಸ್ಕೃತದ ಪ್ರೌಢಭಾಷೆಯಲ್ಲಿ ಪಂಪನು ಈ ಸ್ರಗ್ಧರಾ ವೃತ್ತವನ್ನು ಬರೆದಿರುವುದನ್ನು ಒಂದು ಓದಿನಲ್ಲೇ ತಿಳಿಯಬಹುದಾಗಿದೆ. ಮುಂದೆ ಎರಡು ಶಾರ್ದೂಲವಿಕ್ರೀಡಿತಗಳೂ ಒಂದು ಪೃಥ್ವೀವೃತ್ತವೂ ಇದೆ. ಈ ಸಂಸ್ಕೃತ ಪದ್ಯಗಳನ್ನು ಗಮನಿಸಿದರೆ ಪಂಪನು ಸಂಸ್ಕೃತದಲ್ಲೂ ಕಾವ್ಯರಚನೆ ಮಾಡಿರಬಹುದೇ ಎಂದು ಅನುಮಾನಿಸುವಂತಿದೆ. ಪಂಪನು ಆದಿಪುರಾಣದ ಷೋಡಶಾಶ್ವಾಸದಲ್ಲಿ ಭವಿಷ್ಯತ್ತೀರ್ಥಕರ ಸ್ತುತಿಯ ಅನಂತರ ವೃಷಭನಾಥನಿಂದ ಮಹಾವೀರನವರೆಗಿನ ಚತುರ್ವಿಂಶತಿ ತೀರ್ಥಂಕರರನ್ನು ಸ್ತುತಿಸುವ ಒಂದು ಸಂಸ್ಕೃತ ಸ್ತೋತ್ರವನ್ನೇ ರಚಿಸಿದ್ದಾನೆ. ಇದು ಅನುಷ್ಟುಪ್ ಛಂದಸ್ಸಿನಲ್ಲಿದ್ದು ಪೂರ್ತಿ ಸಂಸ್ಕೃತದಲ್ಲಿದೆ (ಆದಿಪುರಾಣಂ 16–11ರಿಂದ 16–34ರ ವರೆಗೆ). ಅನಂತರ ಪುಷ್ಪಿತಾಗ್ರ ಎಂಬ ಎರಡು ಅರ್ಧಸಮವೃತ್ತಗಳನ್ನೂ ಬರೆದು ಸ್ತೋತ್ರವನ್ನು ಕೊನೆಗೊಳಿಸಿದ್ದಾನೆ. 16–35ನೆಯ ಪದ್ಯದಲ್ಲಿ ತನ್ನ 'ಕವಿತಾಗುಣಾರ್ಣವ'ನೆಂಬ ಹೆಸರನ್ನು ಕೂಡ ಕಾಣಿಸಿದ್ದಾನೆ. ಇದನ್ನು ನೋಡಿದರೆ ಪಂಪನಿಗೆ ವಿವಿಧ ಛಂದೋಬಂಧಗಳಲ್ಲಿ ಸಂಸ್ಕೃತ ಕಾವ್ಯನಿರ್ವಹಣೆ ಮಾಡುವ ಸಾಮರ್ಥ್ಯವಿದ್ದುದು ಸ್ಪಷ್ಟವಾಗುತ್ತದೆ. ಕನ್ನಡದ ಕವಿಗಳು ಉಭಯಭಾಷಾವಿದ್ವಾಂಸರೂ ಉಭಯಭಾಷಾಕವಿಗಳೂ ಆಗಿದ್ದುದಕ್ಕೆ ಬೇಕಾದಷ್ಟು ಉದಾಹರಣೆಗಳಿವೆ. ಪಂಪನಿಗಿಂತ ಪೂರ್ವಿಕನೆಂದು ತಿಳಿಯಲಾದ ಅಸಗನೆಂಬ ಕವಿಯು (ಕ್ರಿ.ಶ. 853 – ಕರ್ಣಾಟಕ ಕವಿಚರಿತೆ) ಸಂಸ್ಕೃತದಲ್ಲಿ ವರ್ಧಮಾನ ಪುರಾಣ – ಶಾಂತಿಪುರಾಣಗಳನ್ನು ಬರೆದಂತೆ ತಿಳಿಯುತ್ತದೆ. ಈತನು ಕನ್ನಡದಲ್ಲಿ ಬರೆದ ಕಾವ್ಯಗಳು ಇದುವರೆಗೆ ದೊರಕಿಲ್ಲ. ಪಂಪನೂ ಈ ಮಾದರಿಯಲ್ಲಿ ಸಂಸ್ಕೃತ ಕಾವ್ಯಗಳನ್ನು ಬರೆದಿರುವ ಸಾಧ್ಯತೆಯನ್ನು

ಅಲ್ಲಗಳೆಯುವಂತಿಲ್ಲ. ಆದರೆ ಸರಿಯಾದ ದಾಖಲೆ ದೊರೆಯುವ ವರೆಗೆ ಇದನ್ನು ಒಂದು ಊಹೆಯ ಹಂತದಲ್ಲಿ ಮಾತ್ರವೇ ಇರಿಸಬೇಕಷ್ಟೆ. ಏಕೆಂದರೆ, ವಿಕ್ರಮಾರ್ಜುನವಿಜಯದಲ್ಲಿ ತನ್ನ ಎರಡು ಕೃತಿಗಳ ಬಗೆಗೆ ಮಾತ್ರ ಆತನು ಉಲ್ಲೇಖಿಸಿದ್ದಾನೆ. ಒಂದನ್ನು ಆರು ತಿಂಗಳಿನಲ್ಲೂ ಇನ್ನೊಂದನ್ನು ಮೂರು ತಿಂಗಳಿನಲ್ಲೂ ಬರೆದ ಬಗೆಗೆ ಕೂಡ ಉಲ್ಲೇಖಿಸಿದ್ದಾನೆ. ಒಂದು ವೇಳೆ ಹಾಗೆ ಸಂಸ್ಕೃತದಲ್ಲಿ ಬರೆದಿದ್ದರೂ ಅದು ವಿಕ್ರಮಾರ್ಜುನವಿಜಯದ ರಚನೆಯ ಅನಂತರವೇ ಆಗಿರಬೇಕೆಂಬುದು ಸ್ಪಷ್ಟವಿದೆ. ವಿಕ್ರಮಾರ್ಜುನವಿಜಯದ ರಚನೆಯ ಸಂದರ್ಭದಲ್ಲಿ ಪಂಪ ಇನ್ನೂ ಮಧ್ಯವಯಸ್ಕನಷ್ಟೇ ಆಗಿದ್ದನೆಂಬುದನ್ನೂ ಇಲ್ಲಿ ನೆನಪಿಸಬಹುದಾಗಿದೆ.

* * * * *

ಕನ್ನಡ ಕಾವ್ಯಗಳೊಳಗೆ ಸಣ್ಣ ಪುಟ್ಟ ಕೆಲವು 'ಕಾವ್ಯರೂಪ'ಗಳನ್ನು ಅಂತರ್ಗತಗೊಳಿಸುವ ಒಂದು ರೀತಿಯಿದೆ. ಚತುಷ್ಕ, ಪಂಚಕ, ಅಷ್ಟಕ ಇತ್ಯಾದಿಗಳು ಸಾಮಾನ್ಯವಾಗಿ ಸ್ತೋತ್ರರೂಪಗಳಲ್ಲಿ ಕಾಣುವ ಸಾಹಿತ್ಯಪ್ರಕಾರಗಳು. ಕ್ರಮವಾಗಿ ಇವು ನಾಲ್ಕು, ಐದು ಮತ್ತು ಎಂಟು ಪದ್ಯಗಳ ಗುಚ್ಛಗಳಾಗಿದ್ದು ಈ ಗುಚ್ಛಗಳನ್ನು ಕೆಲವು ಕಾವ್ಯಗಳೊಳಗೆ ಅಂತರ್ಗತಿಸಿರುವುದು ಕಂಡುಬರುತ್ತದೆ. ಪ್ರಾಯಶಃ ಸಂಸ್ಕೃತ ಕಾವ್ಯಗಳಲ್ಲಿ ಈ ಮಾದರಿ ಇಲ್ಲ. (ಅಲ್ಲಿ ಕಂಡುಬರುವ ಕುಲಕ ಮೊದಲಾದುವುಗಳು ಪದ್ಯಗಳ ಗುಚ್ಛಗಳಾಗಿದ್ದು ಅವುಗಳಲ್ಲಿ ಒಂದು ಕ್ರಿಯಾಪದವಿದ್ದು ಆ ಪದ್ಯಗಳನ್ನು ಒಟ್ಟಾಗಿ ಅನ್ವಯಿಸಿಕೊಳ್ಳಬೇಕಾಗುತ್ತದೆ.) ಈ ಮಾದರಿಗೆ ಪಂಪನೇ ಮೊದಲಿಗನೇ ಎಂಬ ವಿಷಯ ತಿಳಿಯದು. ಪಂಪನಿಗಿಂತ ಹಿಂದಿನ ಕಾವ್ಯಗಳು ದೊರಕದೆ ಈ ಕುರಿತು ಏನೂ ಹೇಳಲು ಸಾಧ್ಯವಿಲ್ಲ. ಪಂಪಭಾರತದಲ್ಲಿ ಈ ತರದ ಅಂತರ್ಗತೀ ಕರಣದ ಉದಾಹರಣೆಗಳು ದೊರಕುತ್ತವೆ.

ಹಿಂದೆ ಹೇಳಿದ ವೈತಾಲಿಕನ ಸ್ತುತಿ ನಾಲ್ಕು ಪದ್ಯಗಳಲ್ಲಿದೆ. ಆದರೆ ಅದುಮೂರು ವಿವಿಧ ಛಂದಸ್ಸುಗಳಲ್ಲಿರುವ ಪದ್ಯಗಳ ಗುಚ್ಛ. ಅದನ್ನು ಒಂದು ಚತುಷ್ಕವೆಂದು ಹೇಳಲು ಸಾಧ್ಯವಿಲ್ಲ. ಆದರೆ ಅದರ ಅನಂತರವೇ ಇರುವ ಮಂಗಳ ಪಾಠಕರು ಒಂದೇ ಕೊರಳಿನಿಂದ ಓದಿದ

ಮಂಗಳವೃತ್ತಗಳು ಐದು ಪದ್ಯಗಳ ಒಂದೇ ಗುಚ್ಛವಾಗಿದ್ದು ಮತ್ತೇಭವಿಕ್ರೀಡಿತ ಮತ್ತು ಶಾರ್ದೂಲವಿಕ್ರೀಡಿತಗಳೆಂಬ ಒಂದೇ ಗತಿಯ ವೃತ್ತಗಳಲ್ಲಿದೆ. ಈ ಐದೂ ಪದ್ಯಗಳು 'ಈಗರಿಗಂಗೆ ಮಂಗಳಮಹಾಶ್ರೀಯಂ ಜಯಶ್ರೀಯುಮಂ' ಎಂದು ಕೊನೆಗೊಳ್ಳುತ್ತವೆ:

ಜಳಧಿದ್ವೀಪ ರಸಾತಳಾಂಬರ ಕುಲಾದ್ರೀಂದ್ರಂಗಳೋರಂತೆ ತ
ನ್ನೊಳಮುದ್ಯತ್ಕಟಕಂಗಳಾವಹ ಮಹಾದ್ರವ್ಯಂಗಳೋರಂತೆ ಮಂ
ಗಳಕಾರ್ಯಂಗಳನಿತ್ತು ಮತ್ತೆ ಮಣಿಭೂಷಾತುಂಗರತ್ನಾಂಶುಪಾ
ಟಳಿತಂಗೀಗರಿಗಂಗೆ ಮಂಗಳಮಹಾಶ್ರೀಯಂ ಜಯಶ್ರೀಯುಮಂ

(ವಿಕ್ರಮಾರ್ಜುನವಿಜಯಂ, 14–33)

ಆದಿಪುರಾಣದಲ್ಲಿಯೂ ಪಂಪನು ಇದೇ ರೀತಿಯ ರಚನೆಗಳನ್ನು ಮಾಡಿದ್ದಾನೆ. ಭರತ ಚಕ್ರೇಶ್ವರನು ಕಟ್ಟಿಸಿದ ಜಿನಾಲಯಗಳಲ್ಲಿ ಆದಿತೀರ್ಥಂಕರರ ಮೂರ್ತಿಯನ್ನು ಮಾಡಿಸಿ ಭವಿಷ್ಯತ್ತೀರ್ಥಕರರ ಪ್ರತಿಕೃತಿಗಳನ್ನೂ ಮಾಡಿಸಿ ಮಾಣಿಕ್ಯಜಿನರೆಂಬುದಾಗಿ ಹೆಸರನ್ನಿಟ್ಟು ಅವರನ್ನು ಸ್ತುತಿಸುವ ಸಂದರ್ಭವಿದೆ. ಈ ಸಂದರ್ಭದ 'ಮಾಣಿಕ್ಯ ಜಿನಸ್ತವಾವಳಿ' ಎಂಬ ರಚನೆಯನ್ನು ಪಂಪನು ಮಾಡಿದ್ದು ಇದರಲ್ಲಿ ಎಂಟು ಮಹಾಸ್ರಗ್ಧರಾವೃತ್ತಗಳಿವೆ. ಎಲ್ಲ ವೃತ್ತಗಳೂ 'ಜಯಂ ಭದ್ರಂ ಶುಭಂ ಮಂಗಳಂ' ಎಂದು ಕೊನೆಗೊಳ್ಳುತ್ತಿದ್ದು ಈ ಸ್ತವಾವಳಿಯು ಒಂದು ಅಷ್ಟಕವಾಗಿದೆ. (16–3ರಿಂದ 16–10ರವರೆಗೆ) ಉದಾ:

ಸಿತದೂರ್ವಾಂಕುರ ಮಾತುಲುಂಗನಳಿನೀಭೃಂಗಾರಗೋರೋಚನಾ
ಕ್ಷತದಧ್ಯಾದಿ ವಿಡಂಬಮಂಗಳದೊಳೇಂ ಸಂಸಾರಮಂ ದಾಂಟುವೂ
ರ್ಜಿತಪುಣ್ಯಂಗಪವರ್ಗಲಕ್ಷ್ಮಿವರೆಗಂ ಸಂಸಾರಸಾರೋದಯೋ
ದಿತಮಾಣಿಕ್ಯಜಿನಸ್ತವಾವಳಿ ಜಯಂ ಭದ್ರಂ ಶುಭಂ ಮಂಗಳಂ

(ಆದಿಪುರಾಣಂ, 16–10)

ಪಂಪನು ತೊಡಗಿದ ಈ ರೀತಿಯ ಅಂತರ್ಗತೀಕರಣವಿಧಾನವನ್ನು ಅನಂತರದ ಕವಿಗಳೂ ಅನುಸರಿಸಿದರೆಂಬುದಕ್ಕೆ ಉದಾಹರಣೆಗಳಿವೆ. ಪಂಪನ ಪ್ರಭಾವಕ್ಕೊಳಗಾದುದಲ್ಲದೆ 'ಅಭಿನವಪಂಪ' ಎಂಬ ಹೆಸರನ್ನೂ ತನಗೆ ಇರಿಸಿಕೊಂಡ ನಾಗಚಂದ್ರನು ಅರ್ಹಂತಸ್ತುತ್ಯಷ್ಟಕವೊಂದನ್ನು ಬರೆದಿದ್ದು 'ಅರ್ಹಾ' ಎಂದು ಅರ್ಹಂತನನ್ನು ಸಂಬೋಧಿಸುವ ರೀತಿಯಲ್ಲಿ

ಕೊನೆಗೊಳ್ಳುವ ಎಂಟು ಕಂದಪದ್ಯಗಳು ಇದರಲ್ಲಿವೆ. ಆ ಅಷ್ಟಕವು ಆತನ 'ಮಲ್ಲಿನಾಥಪುರಾಣ' ಮತ್ತು 'ರಾಮಚಂದ್ರಚರಿತ ಪುರಾಣ' ಎಂಬ ಎರಡೂ ಕಾವ್ಯಗಳಲ್ಲಿರುವುದೊಂದು ವಿಶೇಷ. (ಈ ಅಷ್ಟಕದ ಒಂದು ಪದ್ಯವನ್ನು ಈ ಲೇಖನದಲ್ಲಿ ಹಿಂದೆ ಉದ್ಧರಿಸಲಾಗಿದೆ.)

* * * * *

ಪಂಪಭಾರತದ ಚತುರ್ದಶಾಶ್ವಾಸದಲ್ಲಿ ಅರಿಕೇಸರಿಯ ಬಿರುದುಗಳ ವಿವರಣೆಯನ್ನು ಕೊಟ್ಟಿರುವ ವಿಚಾರವನ್ನು ಹಿಂದೆ ಹೇಳಲಾಗಿದೆ. ಆದಿಪುರಾಣದಲ್ಲಿ ತನ್ನ ಬಿರುದುಗಳನ್ನು ಕುರಿತ ವಿವರಣೆಯನ್ನೂ ಪಂಪನೇ ಕೊಟ್ಟಿರುತ್ತಾನೆ. ಸುಕವಿಜನ ಮನೋಮಾನಸೋತ್ತಂಸಹಂಸ, ಕವಿತಾಗುಣಾರ್ಣವ, ಸಂಸಾರಸಾರೋದಯ, ಸರಸ್ವತೀಮಣಿಹಾರ – ಎಂಬ ಬಿರುದುಗಳ ವಿವರಗಳನ್ನು ನೀಡಿದ್ದಾನೆ. ಪಂಪಭಾರತದಲ್ಲೂ ಆದಿಪುರಾಣದಲ್ಲೂ ತನ್ನ ಬಿರುದುಗಳನ್ನು ಹೇಳಿಕೊಂಡ ಪಂಪ 'ಕವಿತಾಗುಣಾರ್ಣವ' ಎಂಬ ಬಿರುದನ್ನು ತುಂಬ ಮೆಚ್ಚಿಕೊಂಡವನು. 'ಇದು ನಿಚ್ಚಂ ಪೊಸತರ್ಣವಂಬೊಲತಿಗಂಭೀರಂ ಕವಿತ್ವಂ ಜಗಕ್ಕದಱಿಂದಂ ಕವಿತಾಗುಣಾರ್ಣವಂ' ಎಂಬ ವಿವರಣೆಯನ್ನು ಆದಿಪುರಾಣದ ಸಂದರ್ಭದಲ್ಲಿ ಮಾತ್ರವಲ್ಲ, ಪಂಪಭಾರತದ ಸಂದರ್ಭದಲ್ಲಿಯೂ ನಾವು ನೆನೆಯಬೇಕು. ಅರಿಕೇಸರಿಯ 'ಗುಣಾರ್ಣವ'ನೆಂಬ ಬಿರುದೂ ಪಂಪನ 'ಕವಿತಾಗುಣಾರ್ಣವಂ' ಎಂಬ ಬಿರುದೂ ಪಂಪನಿಗೆ ಅತಿಪ್ರಿಯವಾದುವಾಗಿದ್ದು ಎರಡೂ ಹೆಸರುಗಳು ಒಟ್ಟೊಟ್ಟಿಗೆ ಒಂದೇ ಪದ್ಯದಲ್ಲಿ ಬರುವಂತೆ ಪಂಪ ಹಲವು ಪದ್ಯಗಳನ್ನು ನೆಯ್ದಿದ್ದಾನೆ. ಒಂದು ಉದಾಹರಣೆ:

ಎನೆ ಸಕಳಾವನೀತಳಜನಂ ಪಿರಿದುಂ ದಯೆಗೆಯ್ದು ಸಾರ್ಚಿ ಮೆ
ಲ್ಲನೆ ಪಿರಿದಪ್ಪ ಗೌರವದ ಮೈಮೆಯ ಮನ್ನಣೆಯೋಳಿಗಳೆ ಕರಂ
ಮನಮನಲರ್ಚೆ ಕೀರ್ತಿ ಜಗದೊಳ್ ನಿಲೆ ಪೇೞಿಸಿದಂ ಜಗಕ್ಕೆ ನ
ಚ್ಚಿನ ಕವಿತಾಗುಣಾರ್ಣವನಿನೀ ಕೃತಿಬಂಧನಮಂ ಗುಣಾರ್ಣವಂ

(ವಿಕ್ರಮಾರ್ಜುನವಿಜಯಂ, 14–54)

ಕಾವ್ಯಮರ್ಮಜ್ಞನೂ ವಿದ್ವಾಂಸನೂ ಆದ ಪಂಪನ ಕಾವ್ಯವನ್ನು ನೋಡುತ್ತಾ ಹೋದಂತೆ ಆತನ ರಚನೆಗಳಲ್ಲಿ ಹೊಸಹೊಸ ವಿನ್ಯಾಸಗಳೂ

ಅರ್ಥಗಳಲ್ಲಿ ಹೊಸ ಹೊಳಹುಗಳೂ ಗೋಚರಿಸುತ್ತ ಹೋಗುತ್ತವೆ. ಇದುವೇ 'ನಿಚ್ಚಂ ಪೊಸತು', 'ಅತಿಗಂಭೀರಂ' ಎಂಬ ಆತನ ಮಾತುಗಳ ಅರ್ಥವೆಂದು ಹೇಳಬಹುದಾಗಿದೆ. 'ನಿಚ್ಚಂ ಪೊಸತರ್ಣವಂಬೊಲತಿಗಂಭೀರಂ ಕವಿತ್ವಂ' ಎಂಬುದು ಪಂಪನ ಮಾತು. ಕವಿತ್ವದ ಎರಡು ಮುಖ್ಯ ವೈಶಿಷ್ಟ್ಯಗಳನ್ನು ನಿರೂಪಿಸಿದ ಆತ ಹೋಲಿಕೆ ಕೊಟ್ಟುದು ಸಮುದ್ರದ್ದು. ಸಮುದ್ರವೆಂಬರ್ಥದ ಬೇರಾವುದೇ ಪರ್ಯಾಯಪದವನ್ನಿರಿಸದೆ 'ಅರ್ಣವ' ಎಂಬ ಶಬ್ದವನ್ನು ಆತ ಇರಿಸಿಕೊಂಡುದರಲ್ಲೂ ವಿಶಿಷ್ಟತೆಯಿದೆ. 'ಗುಣಾರ್ಣವ' ಮತ್ತು 'ಕವಿತಾಗುಣಾರ್ಣವ'ಗಳಲ್ಲೂ ಅವನು ಬಳಸಿದ್ದು ಅರ್ಣವ ಶಬ್ದವನ್ನು. ತನ್ನ ಕವಿತ್ವಕ್ಕೆ ಅರ್ಣವದ ಎರಡು ಗುಣಗಳು ಅನ್ವಯಿಸಿದಂತೆ ತನ್ನ ಆಶ್ರಯದಾತನ ವ್ಯಕ್ತಿತ್ವಕ್ಕೂ ಆ ಎರಡು ಗುಣಗಳು ಅನ್ವಯಿಸುತ್ತವೆಂಬುದು ಪಂಪನ ಅಂತರಂಗದ ನಿಲುವೆಂದು ಹೇಳಲು ಯಾವ ಅಡ್ಡಿಯೂ ಇಲ್ಲ.

[ಕಾರ್ಕಳ ತಾಲೂಕಿನ ಕಾಂತಾವರ ಕನ್ನಡ ಸಂಘದಲ್ಲಿ ದಿನಾಂಕ 31–8–2008ರಂದು ಉಪನ್ಯಾಸರೂಪದಲ್ಲಿ ನಿರೂಪಿಸಿದ ಪ್ರಬಂಧ. ಅದೇ ಸಂಸ್ಥೆಯ ನುಡಿಹಾರ–1 ಪ್ರಬಂಧಸಂಕಲನದಲ್ಲಿ ಪ್ರಕಟಿತ. ಸಂ.: ಡಾ. ನಾ. ಮೊಗಸಾಲೆ, 2009]

[ಸಾಹಿತ್ಯಾಧ್ಯಯನ, ಪ್ರಸಾರಾಂಗ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ, 2016 – ಇದರಲ್ಲಿ ಪ್ರಕಟಿತ]

****

ಕವಿ ಚಕ್ರವರ್ತಿ ಪೊನ್ನನ ಶಾಂತಿಪುರಾಣ

– ಡಾ. ಎಚ್ ಡಿ ಜಯಪದ್ಮ ಕುಮಾರ್
ಬೆಂಗಳೂರು

ಪೊನ್ನಕವಿ ರತ್ನತ್ರಯರಲ್ಲಿ ಎರಡನೆಯವನು ಹಾಗೂ ಕವಿಚಕ್ರವರ್ತಿಗಳಲ್ಲಿ ಮೊದಲನೆಯವನು. ಈತನ ಕಾಲ ಸುಮಾರು ಕ್ರಿ.ಶ. 950 ಎಂದು ವಿಮರ್ಶಕರು ಪರಿಗಣಿಸಿದ್ದಾರೆ. ಸಾಹಿತ್ಯೋತ್ಕರ್ಷಕ್ಕೆ ಕಾರಣನಾದ ಕವಿಗಳಲ್ಲಿ ಒಬ್ಬನು. ಪುಂಗನೂರಿನವನಾದ ಈತನ ಗುರುಗಳು ಇಂದ್ರನಂದಿ ಮುನಿ ಹಾಗೂ ಜಿನಚಂದ್ರ ಮುನಿಗಳೆಂದು ತಾನೇ ಹೇಳಿಕೊಂಡಿದ್ದಾನೆ. ಈತನ ಆಶ್ರಯದಾತ ರಾಷ್ಟ್ರಕೂಟ ಮುಮ್ಮಡಿ ಕೃಷ್ಣ. ಈತನು ಪೊನ್ನ, ಪೊನ್ನಿಗಂ, ಪುನ್ನಮಾರ್ಯ, ಉಭಯಕವಿ, ಸರ್ವದೇವ ಕವೀಂದ್ರ, ಸೌಜನ್ಯಕಂದಾಕುರ ಇತ್ಯಾದಿ ಬಿರುದುಗಳಿಂದ ಶೋಭಿತನಾದವನು. ಈತನು ತನ್ನನ್ನು 'ಕುರುಳ್ಗಳ ಸವಣ' ಎಂದು ಕರೆದುಕೊಂಡಿದ್ದಾನೆ. ಈತ ಕವಿ, ಗಮಕಿ ಹಾಗೂ ವಾಗ್ಮಿಯೂ ಆಗಿದ್ದ.

ಈತನ ಉಪಲಬ್ಧಕೃತಿಗಳು ಶಾಂತಿಪುರಾಣ ಹಾಗೂ ಜಿನಾಕ್ಷರಮಾಲೆ. ಜಿನಾಕ್ಷರಮಾಲೆಯು 36 ಕಂದಪದ್ಯಗಳನ್ನೊಳಗೊಂಡ ಜಿನಸ್ತುತಿ. ಶಾಂತಿಪುರಾಣವು ಧಾರ್ಮಿಕ ಗ್ರಂಥ.

ಪೊನ್ನನಿಗೆ ಜೈನ ಪುರಾಣ ಬರೆಯಬೇಕೆಂಬ ಆಂತರಿಕ ಅಪೇಕ್ಷೆ, ಜಿನಚಂದ್ರ ಮುನಿಗಳ ಪ್ರೇರಣೆ. ಹಾಗೂ ಮಲ್ಲಪ–ಪುನ್ನಮಯ್ಯರ ಪ್ರಾರ್ಥನೆ, ಪೋಷಣೆ ಇತ್ಯಾದಿ ಮೂರು ಕಾರಣಗಳು ಶಾಂತಿನಾಥ ಪುರಾಣದ ರಚನೆಗೆ ಕಾರಣಗಳಾದವು.

ಇದಕ್ಕೆ 'ಪುರಾಣ ನಾಮ ಚೂಡಮಣಿ' ಎಂಬ ಪರ್ಯಾಯ ನಾಮವಿದೆ. 12 ಆಶ್ವಾಸಗಳಲ್ಲಿ ರಚಿತವಾಗಿರುವ ಈ ಕಾವ್ಯದಲ್ಲಿ ಪೊನ್ನನ ವಿದ್ವತ್ತು, ಪ್ರೌಢಿಮೆ, ಭಾಷೆ, ಛಂದಸ್ಸುಗಳ ಮೇಲೆ ಅವನಿಗಿರುವ ಹಿಡಿತ ಕಂಡುಬರುತ್ತದೆ. ಶಾಂತಿನಾಥ ಪುರಾಣದಲ್ಲಿ 16ನೇ ತೀರ್ಥಂಕರನೂ 5ನೇ ಚಕ್ರವರ್ತಿಯೂ ಆದ ಶಾಂತಿನಾಥನ ಕುರಿತು ಕನ್ನಡದಲ್ಲಿ ರೂಪಿತವಾದ ಮೊದಲ ಕೃತಿಯಿದು. ಈ ಕೃತಿಗೆ ಅಸಗ ಕವಿಯ ಸಂಸ್ಕೃತ ಶಾಂತಿಪುರಾಣವು ಆಕರವಾಗಿದೆ. ತೀರ್ಥಂಕರನಾಗಲಿರುವವನು 6ನೇ ಜನ್ಮದಲ್ಲಿ ಜನಿಸಿದಂದಿನಿಂದ ಆರಂಭವಾಗಿ ಕೊನೆಯ 3 (10– 12)ಆಶ್ವಾಸಗಳಲ್ಲಿ ಶಾಂತಿನಾಥನ ಸ್ವಂತ ಜೀವನವೂ, ಸಿದ್ಧಿಯೂ ವರ್ಣಿಸಲ್ಪಟ್ಟಿದೆ.

12 ಆಶ್ವಾಸಗಳುಳ್ಳ ಈ ಚಂಪೂ ಕೃತಿಯಲ್ಲಿ ಶ್ರೀಷೇಣ, ಭೋಗಭೂಮಿಜ, ಶ್ರೀದೇವ, ಅಮಿತತೇಜ, ಮಣಿಚೂಳ, ಅಪರಾಜಿತ, ಅಚ್ಯುತೇಂದ್ರ, ವಜ್ರಾಯುಧ, ಅಹಮಿಂದ್ರ, ಮೇಘರಥ, ಮಹೇಂದ್ರ ಹೀಗೆ ಈ ಹನ್ನೊಂದು ಭವಗಳಲ್ಲಿ ತೊಳಲಿ ಬಂದ ಜೀವ ಕೊನೆಗೆ ಶಾಂತಿನಾಥನಾಗಿ ಜಿನತ್ವವನ್ನು ಪಡೆಯುತ್ತದೆ. ಭವಾವಳಿ ಕಥನದಲ್ಲಿ ಕ್ರಮವಿಲ್ಲದೆ ಓದುಗನಿಗೆ ಗೊಂದಲವನ್ನುಂಟುಮಾಡುತ್ತದೆ. ಈ ಲೇಖನದಲ್ಲಿ ಭವಾವಳಿಗಳನ್ನು ಕ್ರಮವಾಗಿ ನೀಡಲಾಗಿದೆ.

ಪೊನ್ನನ ಶಾಂತಿಪುರಾಣದ ಸಂಕ್ಷಿಪ್ತ ಕಥಾ ಸಾರ

ಮಲಯ ವಿಷಯದ ರತ್ನಪುರದ ರಾಜ ಶ್ರಿಷೇಣ. ಅವನಿಗೆ ಸಿಂಹನಂದೆ ಮತ್ತು ಅನಿಂದಿತೆಯರೆಂಬ ಪತ್ನಿಯರು. ಇವರಿಗೆ ಇಂದ್ರ ಹಾಗೂ ಉಪೇಂದ್ರರೆಂಬ ಇಬ್ಬರು ಮಕ್ಕಳು. ಮುಂದೆ ಇಂದ್ರನಿಗೆ ಚಂದ್ರನೆಂಬ ಮಗನಾದನು. ಶ್ರಿಷೇಣನು ಸುಖದಿಂದ ರಾಜ್ಯಭಾರ

ಮಾಡುತ್ತಿರಲು, ಸುಂದರಿಯೊಬ್ಬಳು ತನ್ನನ್ನು ರಕ್ಷಿಸಬೇಕೆಂದು ಆಸ್ಥಾನಕ್ಕೆ ಧಾವಿಸಿ ಮೊರೆಯಿಡುತ್ತಾ, 'ನಾನು ಸತ್ಯಭಾಮೆ, ನಿಮ್ಮ ಪುರೋಹಿತನ ಮಗಳಾದ ನನಗೆ ಕಪಿಲನೆಂಬುವನೊಂದಿಗೆ ಮದುವೆಯಾಯಿತು. ಆದರೆ ಅವನ ಆಚರಣೆಯಿಂದ ನನಗೆ ಜಿಗುಪ್ಸೆಯಾಯಿತು. ನಂತರ ಆತನ ತಂದೆಯಿಂದಲೇ ಕಪಿಲನು ತನ್ನ ದಾಸಿಪುತ್ರನೆಂದೂ, ತನ್ನ ಇಬ್ಬರು ಮಕ್ಕಳಿಗೆ ಪಾಠ ಹೇಳುವಾಗ ಏಕಪಾಠಿಯಾದ ಕಪಿಲನು ಎಲ್ಲವನ್ನೂ ಕೇಳಿ ಕಲಿತುಕೊಂಡಿದ್ದರಿಂದ ಅವನನ್ನು ಮನೆಯಿಂದ ಹೊರದೂಡಲಾಯಿತ್ತೆಂದೂ, ನಂತರ ಅವನು ಇಲ್ಲಿಗೆ ಬಂದು ಬ್ರಾಹ್ಮಣನೆಂದು ಬದುಕುತ್ತಿದ್ದಾನೆಂದೂ ವಿಚಾರ ತಿಳಿಯಿತು'. ಆದ್ದರಿಂದ ಈ ಕಪಿಲ ಎಂಬ ಕಪಟ ಬ್ರಾಹ್ಮಣನಿಂದ ನನ್ನನ್ನು ರಕ್ಷಿಸಿ ಎಂದಳು. ರಾಜನು ಕಪಿಲನನ್ನು ಊರಿನಿಂದ ಹೊರಗೆ ತಳ್ಳಿದನು. ಸತ್ಯಭಾಮೆ ಅಲ್ಲಿಯೇ ಉಳಿದಳು. ಹೀಗಿರುವಾಗ ತ್ರಿಷೇಣನ ಹಿರಿಯ ಮಗನ ಹೆಂಡತಿ ತನ್ನೊಂದಿಗೆ ವಸಂತಸೇನೆ ಎಂಬ ದಾಸಿಯನ್ನು ಕರೆತಂದಿದ್ದಳು. ಸುಂದರಿಯಾದ ಇವಳ ಬಗೆಗೆ ಮೋಹಗೊಂಡ ಇಂದ್ರ, ಉಪೇಂದ್ರರು ಆಕೆಗಾಗಿ ಒಮ್ಮೆ ಕಚ್ಚಾಡುತ್ತಿದ್ದರು. ಇದನ್ನು ಕಂಡ ಮಣಿಕುಂಡಲನೆಂಬ ಖೇಚರನು ಆಕಾಶದಿಂದ ಬಂದು 'ವಸಂತಸೇನೆ ನಿಮ್ಮಿಬ್ಬರಿಗೂ ಒಡಹುಟ್ಟಿದವಳು' ಎಂದು ಅವರನ್ನು ತಡೆದು ಅವರ ಪೂರ್ವಭವದ ವಿಚಾರ ತಿಳಿಸಿ ನಿಮ್ಮ ಕಾದಾಟ ನಿಲ್ಲಿಸಿ ಎನ್ನಲು, ಸೋದರರಿಬ್ಬರು ಪಶ್ಚಾತ್ತಾಪದಿಂದ ಸಂನ್ಯಾಸ ದೀಕ್ಷೆ ಸ್ವೀಕರಿಸಿದರು. ಮಕ್ಕಳ ಅಗಲಿಕೆಯಿಂದ ದುಃಖಿತನಾದ ತ್ರಿಷೇಣನು ವಿಷಪುಷ್ಪವನ್ನು ಆಘ್ರಾಣಿಸಿ ಪ್ರಾಣ ಬಿಟ್ಟನು. ಆತನ ರಾಣಿಯರೂ ಹಾಗೂ ಸತ್ಯಭಾಮೆಯೂ ಅದೇ ಪುಷ್ಪವನ್ನು ಆಘ್ರಾಣಿಸಿ ಪ್ರಾಣಬಿಟ್ಟರು.

ಮುಂದೆ ತ್ರಿಷೇಣನು ಪಾತ್ರದಾನದ ಫಲವಾಗಿ ಉತ್ತರಕುರುವೆಂಬ ಭೋಗಭೂಮಿಯಲ್ಲಿ (ಭೋಗಭೂಮಿಜ) ಹುಟ್ಟಿದನು. ಅನುಮೋದನ ಫಲದಿಂದ ಆತನ ರಾಣಿಯರು ಮತ್ತು ಸತ್ಯಭಾಮೆಯೂ ಅಲ್ಲಿಯೇ ಹುಟ್ಟಿದರು. ತ್ರಿಷೇಣ-ಸಿಂಹನಂದೆಯರು ದಂಪತಿಗಳಾದರು. ತ್ರಿಷೇಣನು ಅಲ್ಲಿಯ ಆಯಸ್ಸು ಮುಗಿದಾಗ ಮೊದಲನೆಯ ಕಲ್ಪದಲ್ಲಿ ಶ್ರೀದೇವನಾಗಿ

ಜನಿಸಿದನು. ಸಿಂಹನಂದೆಯು ಶ್ರೀಪ್ರಭೆಯೆಂಬ ಆತನ ಹೆಂಡತಿಯಾದಳು. ಅನಿಂದಿತನೆಂಬ ಆರ್ಯನು ಅಮಿತಪ್ರಭನಾಗಿಯೂ, ಸತ್ಯಭಾಮೆ ಆತನ ಪತ್ನಿ ಸುಪ್ರಭೆಯಾಗಿಯೂ ಅದೇ ಕಲ್ಪದಲ್ಲಿ ಜನಿಸಿದರು. ಆಯುಷ್ಯಾಂತದಲ್ಲಿ ಶ್ರೀದೇವನು ಅಮಿತತೇಜನಾದನು. ಶ್ರೀಪ್ರಭೆಯು ಜ್ಯೋಃತಿಪ್ರಭೆಯಾಗಿ ಆತನ ಹೆಂಡತಿಯಾದಳು. ಅಮಿತಪ್ರಭನೂ ಶ್ರೀವಿಜಯನಾದನು. ಸುಪ್ರಭೆ ಸುತಾರೆಯಾದಳು. ಕಪಿಲನು ಸಂಸಾರ ಚಕ್ರದಲ್ಲಿ ಸುತ್ತಿ ಅಶನಿಘೋಷನಾಗಿ ಹುಟ್ಟಿದನು. ಅಶನಿಘೋಷನಿಗೆ ವಿಜಯ ಕೇವಲಿಗಳಿಂದ ತನ್ನ ಪೂರ್ವಭವ ತಿಳಿಯಲು,

ಆಗಳೆ ಮಳಿನಾತ್ಮಪದಾ
ಭಾಗಮನಿರದಲಸದಲೆದು ಶಿಲೆಯೊಳ್ ಪೊಯ್ದು
ದ್ಯೋಗದಿನರ್ಹದ್ದೀಕ್ಷೆಗೆ
ಪೋಗದೆ ಮೆಯ್ದಂದನೇಕೆ ತಡೆಗುಮೋ ಭವ್ಯಂ (ಶಾಂ.ಪು 7– 46)

ಕೊಳೆಯಾದ ಬಟ್ಟೆಯನ್ನು ನೀರಲ್ಲಿ ಅಲೆದು ಕಲ್ಲಿಗೆ ಬಡಿದು ಹಸನುಗೊಳಿಸುವಂತೆ ತನ್ನ ಆತ್ಮಕ್ಕೆ ಅಂಟಿದ ದೋಷವನ್ನು ಕಳೆದೊಗೆಯಲು ನಿರ್ಧರಿಸಿ ದೀಕ್ಷೆ ವಹಿಸಿದನು. ಭವ್ಯನಾದವನು ಏಕೆ ತಡ ಮಾಡುತ್ತಾನೆ? ಭವ್ಯನು ಸತ್ಕಾರ್ಯಕ್ಕೆ ಎಂದಿಗೂ ತಡಮಾಡುವುದಿಲ್ಲ. ಅದೇ ರೀತಿ ಸ್ವಯಂಪ್ರಭೆಯೂ ತನ್ನ ಪೂರ್ವಭವ ತಿಳಿದು ದೀಕ್ಷೆ ಸ್ವೀಕರಿಸಿದಳು.

ಅಮಿತತೇಜ, ಶ್ರೀವಿಜಯರು ಚಾರಣಮುನಿಗಳನ್ನು ಕಂಡಾಗ ಶ್ರೀವಿಜಯನು 'ನಮ್ಮ ತಂದೆಗೆ ಚಕ್ರವರ್ತಿತ್ವ ಲಭಿಸಿದುದರ ಕಾರಣ ಏನು? ಎಂದು ಕೇಳಿ ತಿಳಿಯುತ್ತಾನೆ. ನಂತರ ಒಂದು ದಿನ ಶ್ರೀವಿಜಯನು ಅಮಿತತೇಜನೊಡನೆ ವನಕ್ರೀಡೆಯಾಡುತ್ತಿರಲು ಮುನಿದ್ವಯರನ್ನು ಕಂಡು,

ಆಕೆ ಬಿಸುಡದೊಡ ಮಾಮಿಂ
ತೇಕಿರ್ಪೆಮೊ ಬಿಸುಡದಾಕೆಯಂ ಬೆಸಸುವುದುದ
ವ್ಯಾಕುಳಮೆಮ್ಮಾಯುಷ್ಯ
ಸ್ತೋಕ ಬಹುತ್ವಮನಗಾಧ ಬೋಧ ಪಯೋಧೀ (ಶಾಂ.ಪು. 7–68)

ಈ 'ತೃಷ್ಣೆ' ಎಂಬುದು ನಮ್ಮನ್ನು ಬಿಡದಿದ್ದರೂ ನಾವೇಕೆ ಅದನ್ನು ಬಿಡದೆ ಉಳಿದಿರುವೆವು? 'ನಮಗೆ ವೈರಾಗ್ಯ ಏಕೆ ಬಾರದು? ನಮಗೆ ಇನ್ನೂ ಎಷ್ಟು ಆಯಸ್ಸಿದೆ? ಜ್ಞಾನ ಸಂಪನ್ನರಾದ ತಾವು ತಿಳಿಸಿ' ಎಂದು ಕೇಳಲು ಅವರು 'ಇನ್ನೂ ಇಪ್ಪತ್ತಾರು ದಿನಗಳು ಮಾತ್ರ ಬದುಕಿರುವಿರಿ, ಧರ್ಮದಲ್ಲಿ ತೊಡಗಿ ಕಲ್ಯಾಣ ಮಾಡಿಕೊಳ್ಳಿ' ಎಂದು ಎಚ್ಚರಿಸಿದರು. ನಂತರ ಇಬ್ಬರೂ ಉಪವಾಸ ವ್ರತ ಕೈಗೊಂಡು ಕಾಡಿನ ಮಧ್ಯದ ಶಿಖರದಲ್ಲಿರುವಾಗ ಒಂದು ಸಿಂಹ ಅಮಿತತೇಜನನ್ನು ಕೊಂದಿತು. ನಂತರ ಶ್ರೀವಿಜಯನೂ ಪ್ರಾಯೋಪವೇಶದಿಂದ ದೇಹ ತೊರೆಯುತ್ತಾನೆ. ಅಮಿತತೇಜನು ನಂದ್ಯಾವರ್ತವೆಂಬ ವಿಮಾನದಲ್ಲಿ ಹುಟ್ಟಿ ಮಣಿಚೂಳನೆಂಬ ದೇವೇಂದ್ರನಾದರೆ, ಶ್ರೀವಿಜಯನು ಸ್ವಸ್ತಿಕಾವರ್ತ ವಿಮಾನದಲ್ಲಿ ಸಾಮಾನಿಕ ದೇವನಾಗುತ್ತಾನೆ. ಅಲ್ಲಿಯೂ ಆಯುಷ್ಯ ತೀರಿದ ನಂತರ ಅವರಿಬ್ಬರೂ ಭೂಮಿಗೆ ಬಂದು ಸ್ತಿಮಿತ ಸಾಗರ ರಾಜನಿಗೆ ಅಪರಾಜಿತ, ಅನಂತವೀರ್ಯರೆಂಬ ಮಕ್ಕಳಾಗಿ ಜನಿಸುತ್ತಾರೆ. ಸ್ತಿಮಿತ ಸಾಗರನೂ ಮರಣಹೊಂದಿ ಧರಣೇಂದ್ರನಾಗುತ್ತಾನೆ. ನಂತರ ಅಪರಾಜಿತ ಹಾಗೂ ಅನಂತವೀರ್ಯರು ಗಾಯಕಿಯರ ವೇಷದಿಂದ ದಮಿತಾರಿಯ ರಾಜ್ಯಕ್ಕೆ ತೆರಳಿ ಆತನ ಮಗಳಾದ ಕನಕಶ್ರೀಯನ್ನು ಅಪಹರಿಸುತ್ತಾರೆ. ದಮಿತಾರಿಯನ್ನು ಅನಂತವೀರ್ಯನು ಆತನ ಚಕ್ರದಿಂದಲೇ ಕತ್ತರಿಸುತ್ತಾನೆ. ನಂತರ ಅನಂತವೀರ್ಯ ಆಯುಷ್ಯಾಂತದಲ್ಲಿ ನರಕಕ್ಕೆ ಹೋಗಲು ಅವನ ಅಗಲಿಕೆಯಿಂದ ಅಪರಾಜಿತನು ಪ್ರಾಯೋಪಗಮನದಿಂದ ದೇಹ ತೊರೆದು ಅಚ್ಯುತೇಂದ್ರನಾಗುತ್ತಾನೆ. ಅನಂತವೀರ್ಯನು ನರಕವಾಸ ಮುಗಿಸಿ ಗಗನಪುರದ ಸಿಂಹರಾಜನಿಗೆ ಮೇಘನಾದನೆಂಬ ಮಗನಾಗಿ ಜನಿಸುತ್ತಾನೆ. ಮೇಘನಾದನು ನಂತರ ತಪಗೈದು, ಪ್ರಾಣತ್ಯಾಗಮಾಡಿ ಅಚ್ಯುತೇಂದ್ರನಿದ್ದ ಕಲ್ಪದಲ್ಲಿಯೇ ಪ್ರತೀಂದ್ರನಾಗುತ್ತಾನೆ. ಮತ್ತೆ ಸೋದರರಿಬ್ಬರೂ ಜೊತೆಯಾಗಿ ಅಲ್ಲಿ ಆಯುಷ್ಯ ತೀರಲು ಅಚ್ಯುತೇಂದ್ರನು ಕ್ಷೇಮಂಕರನೆಂಬ ತೀರ್ಥಂಕರ ರಾಜನಿಗೆ ವಜ್ರಾಯುಧನೆಂಬ ಮಗನಾಗಿ ಜನಿಸಿ ಲಕ್ಷ್ಮೀಮತಿ ಎಂಬವಳನ್ನು ವಿವಾಹವಾಗುತ್ತಾನೆ. ಅಚ್ಯುತ ಕಲ್ಪದಲ್ಲಿ ಪ್ರತೀಂದ್ರನಾಗಿದ್ದ ದೇವನು ಈ ದಂಪತಿಗಳಿಗೆ ಸಹಸ್ರಾಯುಧನೆಂಬ ಮಗನಾಗಿ ಜನಿಸುತ್ತಾನೆ.

ಒಮ್ಮೆ ವಜ್ರಾಯುಧ ಜಲಕ್ರೀಡೆಯಾಡುತ್ತಿರುವಾಗ ಪೂರ್ವಜನ್ಮದ ವೈರತ್ವದಿಂದ ವಿದ್ಯುದ್ವಂಷ್ಟ್ರನು ನಾಗಪಾಶದಿಂದ ವಜ್ರಾಯುಧನ ತೋಳುಗಳನ್ನು ಕಟ್ಟಿ ಅವನನ್ನು ಪೆಟ್ಟಿಗೆಯಲ್ಲಿ ಮುಚ್ಚಿಡುತ್ತಾನೆ. ವಜ್ರಾಯುಧನು ಬಂಧನದಿಂದ ಬಿಡಿಸಿಕೊಂಡು ಬರಲು ಅಸುರ ಹೆದರಿ ಓಡುತ್ತಾನೆ. ಕಾಲಾಂತರದಲ್ಲಿ ಕ್ಷೇಮಂಕರನು ವೈರಾಗ್ಯ ತಳೆದು ತಪಕ್ಕೆ ತೆರಳುತ್ತಾನೆ. ವಜ್ರಾಯುಧನು ಜೈನಧರ್ಮದ ವಿರುದ್ಧ ವಾದಿಸಲು ಬಂದ ವಟುವೇಷಧಾರಿಯೊಬ್ಬನನ್ನು ವಾದದಲ್ಲಿ ಸೋಲಿಸುತ್ತಾನೆ. ಆ ವೇಷಧಾರಿಯು ತನ್ನ ದಿವ್ಯರೂಪ ತೋರಿಸಿ ನಮಸ್ಕರಿಸಿ ಹೊರಟುಹೋಗುತ್ತಾನೆ. ಆತನು ವಜ್ರಾಯುಧನು ಅಪರಾಜಿತನಾಗಿದ್ದಾಗ ಆತನ ಕೈಯಿಂದ ಮಡಿದ ಮಹಾಬಲನೆಂಬ ವಿದ್ಯಾಧರನಾಗಿದ್ದನು. ಕೆಲಕಾಲದ ನಂತರ ಆಯುಧಾಗಾರದಲ್ಲಿ ಚಕ್ರರತ್ನ ಕಾಣಿಸಲು, ಅದೇ ಸಮಯಕ್ಕೆ ಕ್ಷೇಮಂಕರನಿಗೆ ಕೇವಲಜ್ಞಾನ ಪ್ರಾಪ್ತಿಯಾಯಿತು. ಕಾಲಾಂತರದಲ್ಲಿ ವಜ್ರಾಯುಧ ಚಕ್ರವರ್ತಿಯು ಕೇವಲಿ ಪೂಜೆಗೆ ಬಂದು ತನ್ನ ಸಂಸಾರ ವ್ಯಾಮೋಹಕ್ಕೆ ಜಿಗುಪ್ಸೆ ತಾಳಿ ಮಗನಿಗೆ ಪಟ್ಟ ಕಟ್ಟಿ ಕ್ಷೇಮಂಕರ ತೀರ್ಥಂಕರರ ಬಳಿ ದಿಗಂಬರ ದೀಕ್ಷೆ ಪಡೆದು ಒಂದು ವರ್ಷದವರೆಗೆ ಪ್ರತಿಮಾಯೋಗದಲ್ಲಿದ್ದಾಗ ಪೂರ್ವಜನ್ಮದ ಶತ್ರುಗಳು ಆತನ ತಪಕ್ಕೆ ಅಡ್ಡಿ ಮಾಡಿದರೂ ಅಚಲನಾಗಿರುತ್ತಾನೆ. ಆತನ ದರ್ಶನಕ್ಕೆ ಬಂದ ಸಹಸ್ರಾಯುಧನೂ ತಪೋವ್ರತಿಯಾಗುತಾನೆ. ಪ್ರಾಯೋಪಗಮನದಿಂದ ವಜ್ರಾಯುಧ ಮುನಿಯು ದೇಹತ್ಯಾಗ ಮಾಡಿ ವಿಮಾನದಲ್ಲಿ ಅಹಮಿಂದ್ರನಾದನು. ಸಹಸ್ರಾಯುಧನೂ ಸಲ್ಲೇಖನದಿಂದ ದೇಹತ್ಯಜಿಸಿ ವಜ್ರಾಯುಧನ ವಿಮಾನದಲ್ಲಿ ಅಹಮಿಂದ್ರನಾದನು.

ನಂತರ ಪುಷ್ಕಳಾವತಿ ದೇಶದಲ್ಲಿ ಘನರಥನೆಂಬ ಅರಸನಿಗೆ ಈ ಇಬ್ಬರೂ ಮೇಘರಥ ಮತ್ತು ದೃಢರಥರೆಂಬ ಮಕ್ಕಳಾಗಿ ಜನಿಸುತ್ತಾರೆ. ಮೇಘರಥನಿಗೆ ಪ್ರಿಯಮಿತ್ರೆಯೂ, ದೃಢರಥನಿಗೆ ಸುಮತಿಯೂ ಪತ್ನಿಯರಾಗುತ್ತಾರೆ. ಪ್ರಿಯಮಿತ್ರೆಗೆ ನಂದಿವರ್ಧನನೆಂಬ ಮಗನೂ, ಸುಮತಿಗೆ ವರಸೇನನೆಂಬ ಮಗನೂ ಜನಿಸುತ್ತಾರೆ. ಮೇಘರಥನು ಅವಧಿ

ಜ್ಞಾನಿಯೂ ಆಗಿದ್ದನು. ಕಾಲಾನಂತರದಲ್ಲಿ ಘನರಥನು ಮೋಕ್ಷಾಪೇಕ್ಷಿಯಾಗಿ ಮೇಘರಥನಿಗೆ ಪಟ್ಟ ಕಟ್ಟಿ ತಪಗೈಯಲು ಆತನಿಗೆ ಮೋಕ್ಷಪ್ರಾಪ್ತಿಯಾಗುತ್ತದೆ. ಇದನ್ನರಿತು ಮೇಘರಥನು ಸಮವಸರಣಕ್ಕೆ ಬಂದು ತ್ರಿಕರಣಶುದ್ಧಿಯಿಂದ ನಮಸ್ಕರಿಸಿ ಹಿಂದಿರುಗುತ್ತಾನೆ. ಮೇಘರಥನು ಮನುಷ್ಯ ಸೌಂದರ್ಯ ಅಶಾಶ್ವತ ಎಂಬ ಸತ್ಯವನ್ನೂ ಹಾಗೂ ಸಂಸಾರದ ಅಸ್ಥಿರತೆಯನ್ನರಿತು ದೀಕ್ಷೆ ಸ್ವೀಕರಿಸಿ ತಪೋನಿರತನಾಗುತ್ತಾನೆ. ಆತನ ತಪಸ್ಸಿನ ಸಂದರ್ಭದಲ್ಲಿ ನಾನಾ ಅಡೆತಡೆಗಳು ಉಂಟಾಗುತ್ತವೆ.

ಮರದ ಪೊಟರೆಯಿಂದ ಹಾವು ಬಂದು ಅಡರುತ್ತದೆ, ಸಿಡಿಲು ಬೀಳುತ್ತದೆ, ಮರ ಮುರಿದು ಬೀಳುತ್ತದೆ, ಗಾಳಿ ಬೀಸಿ ಮರ ಛಿದ್ರ ವಿಛಿದ್ರವಾಗುತ್ತದೆ. ಇಷ್ಟೆಲ್ಲಾ ಆದರೂ ಮರದ ಬುಡದಲ್ಲಿ ಮುನಿಯು ನಿಶ್ಚಲನಾಗಿ ನಿಂತಿದ್ದನು. ಅಷ್ಟೇ ಅಲ್ಲ,

ಅವಿರಳ ಶಿಶಿರಕಿರಕಣಂ ಮೆಯ್
(ನವಿರೊಳ್) ಪನಿಪುಲ್ಲ ತೆರನನುಕರಿಸಿರೆ ಯೋ
ಗ ವಶೀಕೃತಾಂ(ಗ)ಕಂ ಬೆ
ಳ್ಳವಾಸದೊಳ್ ಮೇಘರಥ ಮುನೀಂದ್ರಂ ನಿಂದಂ (ಶಾಂ.ಪು. 9–107)

ಹಿಮದ ಕಣಗಳು ದಟ್ಟವಾಗಿ ಹುಲ್ಲಿನ ಮೇಲಿನ ಹನಿಗಳಂತೆ ತಲೆಗೂದಲಲ್ಲಿ ತುಂಬಿದರೂ ಯೋಗನಿಷ್ಠನಾದ ಮೇಘರಥ ಮುನೀಶನು ಬೆಳ್ಳಿವಾಸದಲ್ಲಿ ಸ್ಥಿರವಾಗಿ ನಿಂತನು. ಶಾಂತಿಯಿಂದ ಹಸಿವು, ನೀರಡಿಕೆ ಮೊದಲಾದ ಇಪ್ಪತ್ತೆರಡು ಪರೀಷಹಗಳನ್ನು ಆ ಮುನೀಂದ್ರನು ಗೆದ್ದನು. ದೃಢರಥನೂ ಅಣ್ಣನೊಂದಿಗೆ ತಪೋನಿರತನಾಗುತ್ತಾನೆ. ಕ್ರಮವಾಗಿ ತಪಸ್ಸನ್ನಾಚರಿಸಿ ಪ್ರಾಂಯೋಪಗಮನದಿಂದ ಮುಡಿದು ಸರ್ವಾರ್ಥಸಿದ್ಧಿಯಲ್ಲಿ ಅಹಮಿಂದ್ರರಾಗುತ್ತಾರೆ.

ಇತ್ತ ಹಸ್ತಿನಾಪುರದ ವಿಶ್ವಸೇನ ಹಾಗೂ ಐರಾಮಹಾದೇವಿಯ ದೇವಿಯ ಗರ್ಭದಲ್ಲಿ ಈ ಅಹಮಿಂದ್ರನೇ (ಮಹೇಂದ್ರ) ಜಿನಶಿಶುವಾಗಿ ಅವತರಿಸುತ್ತಾನೆ. ಇದನ್ನು ತಿಳಿದು ಕುಬೇರನು ಪಟ್ಟಣದಲ್ಲಿ ರತ್ನವೃಷ್ಟಿ ಸುರಿಸುತ್ತಾನೆ. ಐರಾದೇವಿಯ ಸೇವೆ ಹಾಗೂ ಗರ್ಭಶೋಧನೆಗಾಗಿ

ಹಲವಾರು ದೇವಾಂಗನೆಯರನ್ನು ಕಳಿಸುತ್ತಾನೆ. ಐರಾದೇವಿಯು ಬೆಳಗಿನ ಜಾವದಲ್ಲಿ 16 ಸ್ವಪ್ನಗಳನ್ನು ಕಾಣುತ್ತಾಳೆ. ಯಥಾಕಾಲದಲ್ಲಿ ಗರ್ಭಧರಿಸಿ ಶಿಶುವಿಗೆ ಜನ್ಮ ನೀಡುತ್ತಾಳೆ. ಚತುರ್ವಿಧ ಅಮರರು ಬಂದು ಶಿಶುವಿಗೆ ವೈಭವದಿಂದ ಜನ್ಮಾಭಿಷೇಕ ನೆರವೇರಿಸಿ ಜಿನಶಿಶುವಿಗೆ ಶಾಂತಿ ಎಂಬ ಹೆಸರನ್ನಿಡುತ್ತಾರೆ.

ಇನ್ನೊಬ್ಬ ಅಹಮಿಂದ್ರನಾಗಿದ್ದ ದೃಢರಥನೂ ವಿಶ್ವಸೇನರಾಜನ ಕಿರಿಯ ರಾಣಿಯ ಗರ್ಭದಲ್ಲಿ ಉದಿಸಿ ಚಕ್ರಾಯುಧನೆಂಬ ಹೆಸರು ಪಡೆಯುತ್ತಾನೆ. ಶಾಂತೀಶನು ಯೌವನಾವಸ್ಥೆಗೆ ಬರಲು ಅವನಿಗೆ ರಾಜ್ಯಾಭಿಷೇಕವಾಗುತ್ತದೆ. ನಂತರ ಚಕ್ರರತ್ನ ಮೊದಲಾದ 14 ರತ್ನಗಳೂ, ನವನಿಧಿಗಳೂ ಪ್ರಾಪ್ತವಾಗುತ್ತವೆ. ಶಾಂತೀಶನು ದಿಗ್ವಿಜಯದಿಂದ ಪಟ್ಖಂಡಾಧಿಪತಿಯಾಗುತ್ತಾನೆ. 25000 ವರ್ಷಗಳವರೆಗೆ ರಾಜ್ಯಭಾರ ಮಾಡಿದ ಮೇಲೆ ಶಾಂತೀಶನಿಗೆ ಸಂಸಾರದ ಬಗ್ಗೆ ವೈರಾಗ್ಯ ಉಂಟಾಗುತ್ತದೆ. ಆತನು ತನ್ನ ಮನಸ್ಸಿನಲ್ಲಿ

ಕೈಕೊಳ್ವೊಡಾತ್ಮ ಸುಖವನೆ
ಕೈಗೊಳ್ವುದು ದೇಹೀ ನೆಗಳೆ ಪರಹಿತಮುಮನೀ
ಹೈಕನೆರಡ (ರೊ)ಳಮೊಂದು
ಕೈಕೊಳ್ವೊಡೆ ಹಿತಮುಮಾತ್ಮಹಿತವೊಂದೆ ವಲಂ (ಶಾಂ.ಪು.11– 87)

ಮನುಷ್ಯನು ಹೊಂದುವುದಾದರೆ ಆತ್ಮ ಸುಖವನ್ನೇ ಹೊಂದಬೇಕು. ಇಹಪರಗಳೆರಡರಲ್ಲಿ ಸುಖವಾಗಬೇಕಾದರೆ ಪರೋಪಕಾರವನ್ನೇ ಮಾಡಬೇಕು. ಹಿತವೆಂದರೆ ಆತ್ಮ ಹಿತವೊಂದೇ. ಅಲ್ಲದೆ,

ಧರೆ ಶಾಶ್ವತವಲ್ಲಷ್ಟಮ
ಧರೆ ಶಾಶ್ವತಮವನಿಚಕ್ರ ವಿಕ್ರಮಚಕ್ರ ೦
ದೊರೆಯಲ್ತು ಧರ್ಮಚಕ್ರಂ
ದೊರೆಯಕ್ಕುಂಭವ್ಯ ವಿನಮದ ಪ್ರತಿಬದ್ಧಂ.(ಶಾಂ.ಪು.11–88)

ಈ ಭೂಮಿ ಕೊನೆಗೆ ಬಾಳುವುದಲ್ಲ; ಅಷ್ಟಮ ಭೂಮಿ (ಮೋಕ್ಷ) ಯೊಂದೇ ಶಾಶ್ವತವಾದುದು ; ಭೂಲೋಕದಲ್ಲಿ ಪರಾಕ್ರಮ ಬೀರುವ

ಚಕ್ರ ಯೋಗ್ಯವಲ್ಲ; ಅದು ಅಶಾಶ್ವತವಾದುದು. ಧರ್ಮಚಕ್ರವೇ ಯೋಗ್ಯವಾದುದು ಏಕೆಂದರೆ ಅದು ಧರ್ಮ ಮಾರ್ಗಿಗಳಿಗೆ ಪೂಜನೀಯವಾದುದು ಹಾಗೂ ಪ್ರತಿಬಂಧಗಳನ್ನು ಮೀರಿದುದು. ಹೀಗೆಂದು ಮನಸ್ಸಿನಲ್ಲಿ ಸಂಸಾರ, ಬಂಧ, ಮೋಕ್ಷ, ಅದರ ಕಾರಣ ಇವೆಲ್ಲವನ್ನೂ ತನ್ನ ದಿವ್ಯ ಚಿತ್ತದಲ್ಲಿ ಯೋಚಿಸಿ, ನಿಶ್ಚಯ ಮಾಡಿ ಪರಿನಿಷ್ಕ್ರಮಣ ಕಲ್ಯಾಣಕ್ಕೆ ಉದ್ಯುಕ್ತನಾಗುತ್ತಾನೆ. ಆತನ ಈ ಯೋಚನೆಯನ್ನರಿತು, ಲೋಕಾಂತಿಕ ದೇವರು ಬಂದು ಅವನ ಪರಿನಿಷ್ಕ್ರಮಣವನ್ನು ಅನುಮೋದಿಸಲು ದೇವತೆಗಳು ಸರ್ವಾರ್ಥಸಿದ್ಧಿಯೆಂಬ ಸಿವಿಗೆಯಲ್ಲಿ ಶಾಂತೀಶನನ್ನು ಸಹಸ್ರಾಮ್ರವನಕ್ಕೆ ಕರೆದೊಯ್ಯುತ್ತಾರೆ. ಅಲ್ಲಿ ಶಾಂತೀಶ ವ್ರತಧಾರಿಯಾಗಿ ತಪಗೈದು ಕೇವಲಜ್ಞಾನ ಪಡೆಯುತ್ತಾನೆ. ಸಮವಸರಣದಲ್ಲಿ ಧರ್ಮಬೋಧೆ ಮಾಡುತ್ತಾನೆ. ನಂತರ ಲೋಕೋದ್ಧಾರಕ್ಕಾಗಿ ವಿಹರಿಸಿ ತನಗೆ ಒಂದು ತಿಂಗಳು ಆಯಸ್ಸು ಉಳಿದಾಗ ಸಮ್ಮೇದಶಿಖರಕ್ಕೆ ಬಂದು ಕಾಯೋತ್ಸರ್ಗದಲ್ಲಿ ನಿಂತು ಅಘಾತಿಕರ್ಮಗಳನ್ನು ನಾಶಪಡಿಸಿ ಔದಾರಿಕ ದೇಹ ತೊರೆದು ಲೋಕಾಗ್ರ ಸೇರುತ್ತಾನೆ. ಚತುರ್ವಿಧ ದೇವತೆಗಳು ಬಂದು ಗೌರವದಿಂದ ಅರ್ಚಿಸಿ ದಹಿಸಿ ನಿರ್ವಾಣಕಲ್ಯಾಣ ನೆರವೇರಿಸುತ್ತಾರೆ.

ಹೀಗೆ ಶಾಂತಿಪುರಾಣವು 16ನೇ ತೀರ್ಥಂಕರನಾದ ಶಾಂತಿನಾಥನ ಭವಾವಳಿಗಳನ್ನು ಅವುಗಳ ವಿವಿಧ ಆಯಾಮಗಳನ್ನು ವಿವರಿಸಿ ಜನ್ಮಜನ್ಮಾಂತರದ ಕಥೆಗಳನ್ನು ಅನಾವರಣಗೊಳಸುತ್ತಾ ಕೊನೆಗೆ ಜೈನ ಧರ್ಮ ಒಂದೇ ಎಲ್ಲಕ್ಕೂ ಮಿಗಿಲು ಎಂಬ ತತ್ವವನ್ನು ಸಾರುತ್ತದೆ.

ಕಾವ್ಯದಲ್ಲಿ ಅಲ್ಲಲ್ಲಿ ಉತ್ತಮವಾದ ಕಾವ್ಯಾಂಶಗಳು ಕಂಡುಬರುತ್ತವೆ. ಕಥನದಲ್ಲಿ ಅಸಗ ಕವಿಯನ್ನೇ ಅನುಸರಿಸಿದ್ದರೂ ಕವಿ ವರ್ಣನೆಯಲ್ಲಿ ತನ್ನ ಸ್ವಂತಿಕೆಯನ್ನು ಮೆರೆದಿದ್ದಾನೆ. ಪಾತ್ರಗಳಿಗೆ ಮಾನವೀಯತೆಯ ಮೆರುಗನ್ನು ತುಂಬಿದ್ದಾನೆ. ಪೊನ್ನ ಚಿತ್ರಿಸಿದ ಶಾಂತಿನಾಥನು ದೇವಮಾನವ. ಉಳಿದ ಮಾನವ ಭವಗಳಲ್ಲಿ ಉನ್ನತ ಗುಣಗಳನ್ನು ಮಾತ್ರ ಆರೋಪಿಸುತ್ತಾನೆ. ಹಾಗೂ ಮಾನವ ಸಹಜವಾದ ಅತೀ ಕ್ಷುಲ್ಲಕ ಗುಣಗಳನ್ನು ಮಾಡಿದ ಮಾನವಾತೀತರನ್ನಾಗಿ ಆ ಪಾತ್ರಗಳನ್ನು ಚಿತ್ರಿಸಿದ್ದಾನೆ.

ಜೈನ ಧರ್ಮದ ಪ್ರತಿಪಾದನೆಯಲ್ಲಂತೂ ಪೊನ್ನ ಯಶಸ್ವಿಯಾಗಿದ್ದಾನೆ ಎನ್ನಬಹುದು. ಈ ಶಾಂತಿನಾಥ ಪುರಾಣದಲ್ಲಿ ತೀರ್ಥಂಕರನ ಜೀವ ಮೊದಲಿನಿಂದಲೂ ಗಂಭೀರ ಸ್ವಭಾವವನ್ನು ಹೊಂದಿ ಮಾನವಾತೀತ ರೂಪದಲ್ಲಿಯೇ ಚಿತ್ರಿತವಾಗಿದೆ. ಭೋಗಲಾಲಸೆ, ಕಾಮ ಕೇಳಿ ಇತ್ಯಾದಿಗಳು ಶಾಂತಿನಾಥನ ಜೀವಕ್ಕಿಲ್ಲ. ಈ ಕಾಮನೆಯ ಸ್ಥಿತಿಯನ್ನು ಮೀರಿ ಸಿದ್ಧಸ್ಥಿತಿಯತ್ತ ಮುಂದುವರಿಯುತ್ತಿರುವ ಜೀವ ಶಾಂತಿನಾಥನದು.

ಶಾಂತಿಪುರಾಣ ಮನೋರಂಜಕವಾದ ಭೋಗ ಚಿತ್ರಣವಿಲ್ಲದೆ ನೀರಸವಾದರೂ ಪೊನ್ನ ಕಾವ್ಯವಾಗಿ ಪರಿವರ್ತಿಸಿ ತನ್ನ ಪ್ರತಿಭೆಯನ್ನು ಮೆರೆದಿದ್ದಾನೆ. ಇಲ್ಲಿ ಶಾಂತಿನಾಥನ ಕತೆಗಿಂತಲೂ ಅವನ ಭವಾವಳಿಗಳ ವಿಚಾರವೇ ಹೆಚ್ಚಾಗಿ ವರ್ಣಿತವಾಗಿರುವುದರಿಂದ ಕಾವ್ಯ ಧರ್ಮ ವಿಶೇಷವಾಗಿ ಕಂಡುಬರುವುದಿಲ್ಲ. ಹಾಗಾಗಿ ಇದನ್ನು 'ಜೈನಪುರಾಣ' ವೆನ್ನಬಹುದು. ಜೈನ ಪುರಾಣದ ಸಾಂಪ್ರದಾಯಿಕ ಲಕ್ಷಣಗಳನ್ನು ಅತಿ ನಿಷ್ಠೆಯಿಂದ ಅನುಸರಿಸಿರುವುದರಿಂದ, ಆದಿಪುರಾಣದಂತಹ ಕೃತಿಗಳನ್ನು ಹಿಂದೆ ಹಾಕಿರುವುದರಿಂದ ಶಾಂತಿ ಪುರಾಣವನ್ನು 'ಪುರಾಣ ಚೂಡಾಮಣಿ' ಎನ್ನಬಹುದು. ವಸ್ತು ರಚನೆ ಸಾಮಾನ್ಯವಾಗಿದ್ದರೂ ಕೆಲವು ಪದ್ಯಗಳಲ್ಲಿ, ವರ್ಣನೆಗಳಲ್ಲಿ ಉತ್ತಮವಾದ ಕಾವ್ಯಾಂಶಗಳು ಕಂಡುಬರುತ್ತವೆ.

ಉದಾಹರಣೆಗೆ ನರಕದ ವರ್ಣನೆಗಳನ್ನು ಮನೋಜ್ಞವಾಗಿ ಚಿತ್ರಿಸುತ್ತಾ ನರಕದಲ್ಲಿ ಪಾಪಿಗಳಿಗೆ, ಅಧರ್ಮಿಗಳಿಗೆ ಯಾವ ರೀತಿ ಶಿಕ್ಷೆನೀಡುತ್ತಾರೆಂಬುದನ್ನು ವಿವರಿಸುವುದರ ಮೂಲಕ ಧರ್ಮವನ್ನು ಜೀವನದಲ್ಲಿ ಅನುಸರಿಸಬೇಕೆಂದು ಜನರನ್ನು ಎಚ್ಚರಿಸುತ್ತಾನೆ.

ಪರವಧುವನಲ್ಲದೆ ಅಂತಃ
ಪುರವಧುವಂ ಮೆಚ್ಚೆಯೆಂದು ತಂದಪ್ಪಿಸುವರ್
ಪರಿತಪ್ತ ಲೋಹಮಯ ಸುಂ
ದರಿಯಂ ಸುಂದರಿಯಲ್ಲಿ ಮೋರೆಯಿಲ್ಲದರೊಳ್ (ಶಾಂ.ಪು. 7–98)

ಪರಸ್ತ್ರೀಯನ್ನು ಮೋಹಿಸುವವನಿಗೆ ನರಕದಲ್ಲಿ, ನೀನು ಪರಸ್ತ್ರೀಯನ್ನಲ್ಲದೆ ನಿನ್ನ ಹೆಂಡತಿಯನ್ನು ಮೆಚ್ಚುವುದಿಲ್ಲ ಅಲ್ಲವೇ! ಎಂದು ಹೇಳುತ್ತಾ ಕೆಂಪಾಗಿ ಕಾದ ಕಬ್ಬಿಣದ ಸ್ತ್ರೀ ಪ್ರತಿಮೆಯನ್ನು ತಬ್ಬಿಕೊಳ್ಳುವಂತೆ ಮಾಡಿದರು. ಹೀಗೆ ಇಂತಹ ಕೆಲವು ಸನ್ನಿವೇಶಗಳು ಅವನ ಕಾವ್ಯ ಸಾಮರ್ಥ್ಯವನ್ನು ತಿಳಿಸುತ್ತವೆ.

ಪೊನ್ನನು ಕಾವ್ಯದಲ್ಲಿ ಸಹಜವಾಗಿಯೇ ಜೈನಧರ್ಮ ಪರವಾಗಿ ಧ್ವನಿ ಎತ್ತಿದ್ದಾನೆ. ಜಿನದೇವನ ಸಂದೇಶ ಪ್ರಸಾರಕ್ಕಾಗಿ ಲೇಖನಿ ಹಿಡಿದ ಕವಿ ಅಹಿಂಸಾ ಧರ್ಮದ ತತ್ವಗಳನ್ನು ಹಾಗೂ ಮಹತ್ವವನ್ನು ಪುರಾಣಚುಡಾಮಣಿಯುದ್ದಕ್ಕೂ ಪ್ರತಿಪಾದಿಸಿದ್ದಾನೆ. ಉದಾ.

ಕೊಲೆಯೊಳ್ ಹೊರೆಯಿಲ್ಲದ ಪರ
ಲಲನೆಗೆ ಬಗೆಗುಡದ ಕಳ್ಳದುರೆ ಪುಸಿಯದ ಕಾ
ದಲಿಸಿ ವಿಷಯಗಳೊಲ್ ಪಂ
ಬಲಿಸದ ಗುಣಮೈದಣುವ್ರತಂ ಜಿನಮತದೊಳ್ (ಶಾಂ. ಪು.1–88)

ಅಹಿಂಸೆ, ಅಪರಿಗ್ರಹ, ಬ್ರಹ್ಮಚರ್ಯೆ, ಕಳ್ಳತನಮಾಡದಿರುವುದು ಹಾಗೂ ಸುಳ್ಳು ಹೇಳದೆ ಇರುವುದು. ಜೈನ ಧರ್ಮದ ಪಂಚಾಣುವ್ರತಗಳು. ಅವನ ಧಾರ್ಮಿಕ ವಿಷಯಗಳ ನಿರೂಪಣೆಯಲ್ಲಿ ಸರಳತೆಯಿದೆ. ಶಾಂತಿಪುರಾಣವು ಜೈನಧರ್ಮವು ಪ್ರತಿಪಾದಿಸಿದ್ದ ತತ್ವಗಳನ್ನು ಸಾರಿ ಸಾರಿ ಹೇಳಿ ಜೈನಧರ್ಮ ಒಂದೇ ಮಿಗಿಲು ಎಂಬ ತಾತ್ವಿಕತೆಯನ್ನು ಸಾರುತ್ತದೆ. ಪೊನ್ನನಿಗೆ ಜೀವನ ಶ್ರದ್ಧೆಗಿಂತ, ಕಾವ್ಯ ನಿಷ್ಠೆಗಿಂತ ಆತ್ಮನನ್ನು ಊರ್ಧ್ವಗಾಮಿತ್ವಕ್ಕಾಗಿ ಪ್ರಚೋದಿಸುವುದರಲ್ಲಿಯೇ ಆಸಕ್ತಿ ಎಂಬುದು ಗೋಚರಿಸುತ್ತದೆ ಎನ್ನಬಹುದು.

ಅಂತಿಮವಾಗಿ ಪೊನ್ನನು,
ತ್ರಿಜಗದಭಿಷ್ಟುತಂ ತ್ರಜಗದಾಶ್ರಯಣಂ ತ್ರಿಜಗಜ್ಜನಸ್ತುತಂ
ತ್ರಿಜಗದುಪಾಸಿತಂ ತ್ರಿಜಗದುಲ್ಲಸಿತಂ ತ್ರಿಜಗನ್ಮನೋಹರಂ
ತ್ರಿಜಗದಲಂಕೃತಂ ತ್ರಿಜಗದೇಕಮತಂ ತ್ರಿಜಗತ್ಸುಖಾಸ್ಪದಂ
ತ್ರಿಜಗದಘಚ್ಛಿದಂ ತ್ರಿಜಗದೀಶನುತಂ ಕಥೆ ಶಾಂತಿನಾಥನಾ'

(ಶಾಂ.ಪು.12–55)

ಎನ್ನುತ್ತಾ, ಶಾಂತಿನಾಥನ ಕಥೆಯು ಮೂರೂ ಲೋಕಗಳಲ್ಲಿ ಪ್ರಶಂಸೆಗೆ ಪಾತ್ರವಾದುದು; ಆಶ್ರಯವುಳ್ಳುದು; ಜನವಿಖ್ಯಾತವಾದುದು; ಉಪಾಸನೆಗೆ ಯೋಗ್ಯವಾದುದು; ಉಲ್ಲಾಸಕರವಾದುದು; ಮನೋಹರವಾದುದು; ಸರ್ವರಿಗೂ ಮೂರೂ ಲೋಕಗಳಿಗೂ ತಿಲಕಪ್ರಾಯವಾದುದು; ಸಕಲರೂ ಒಪ್ಪುವಂತಹುದು; ಸರ್ವರಿಗೂ ಸುಖದಾಯಕವಾದುದು; ಎಲ್ಲಾ ಪಾಪಗಳನ್ನು ನಿವಾರಿಸುವಂತಹುದು; ಜಗದೀಶರಿಗೆಲ್ಲಾ ಪೂಜ್ಯವಾದುದು ಎಂದಿದ್ದಾನೆ. ಇದೆಲ್ಲವನ್ನೂ ಕಂಡಾಗ ಪೊನ್ನ ಜಿನೋಪಾಸಕ ಎಂಬುದಂತೂ ಸತ್ಯ ಎಂಬುದು ಸಾಬೀತಾಗುತ್ತದೆ.

ದಾನಚಿಂತಾಮಣಿ ಅತ್ತಿಮಬ್ಬೆಯು ಮುದ್ರಣ ಸೌಲಭ್ಯವಿಲ್ಲದ ಆ ಕಾಲದಲ್ಲಿಯೇ, ಶಾಂತಿಪುರಾಣದ ಸಹಸ್ರ ಪ್ರತಿಗಳನ್ನು ಮಾಡಿಸಿ ದಾನ ಮಾಡಿದ್ದು ಶ್ಲಾಘನೀಯ ಕಾರ್ಯವೇ ಹೌದು.

ಗ್ರಂಥ ಋಣ:

1. ಪೊನ್ನ ಕವಿ ವಿರಚಿತ ಶಾಂತಿಪುರಾಣಂ: ಹಂಪ. ನಾಗರಾಜಯ್ಯ,
2. ಕನ್ನಡ ಸಾಹಿತ್ಯ ಚರಿತ್ರೆ: ರಂ. ಶ್ರೀ, ಮುಗಳಿ, ಪೊನ್ನ ಮತ್ತು ಅವನ ಕೃತಿಗಳು:

   ಡಾ. ಪಂಡಿತ ರಾಥರೋಡ.
3. ತೀರ್ಥಂಕರರ ಸಚಿತ್ರ ಪುರಾಣ ಕಥೆಗಳು: ಡಾ ಸರಸ್ವತಿ ವಿಜಯಕುಮಾರ್.

****

ಚಾವುಂಡರಾಯ ಪುರಾಣ

– ಡಾ. ಹೆಚ್.ಎ. ಸತ್ಯವತಿ
ವೃತ್ತ ಪ್ರಾಧ್ಯಾಪಕಿ, ಬೆಂಗಳೂರು

ಕನ್ನಡ ಸಾಹಿತ್ಯದ ಆರಂಭದ ದಶಕಗಳಲ್ಲಿ ಪ್ರೇರಕ ಮತ್ತು ಪೋಷಕ ಮತ್ತು ಗುರುವಿನ ಸ್ಥಾನದಲ್ಲಿದ್ದ ಸಂಸ್ಕೃತ ಸಾಹಿತ್ಯದೊಡನೆ ಕನ್ನಡ ಕವಿಗಳು ಪ್ರಮುಖವಾಗಿ ಎರಡು ರೀತಿಯ ಸಂಬಂಧವಿರಿಸಿಕೊಂಡಿದ್ದರು. ಸಂಸ್ಕೃತ ಕೃತಿಗಳಿಂದ 'ವಸ್ತು'ವನ್ನು ಮಾತ್ರ ಸ್ವೀಕರಿಸುವ ಕ್ರಿಯೆ ಮೊದಲನೆಯದು. 'ಕಾವ್ಯರೂಪ'ವನ್ನು ಮಾತ್ರ ಬದಲಿಸಿಕೊಂಡು ಸಂಸ್ಕೃತ ಕೃತಿಗಳನ್ನು ಬಹುಮಟ್ಟಿಗೆ ಯಥಾವತ್ತಾಗಿ ಕನ್ನಡಕ್ಕೆ ತರುವ ಕ್ರಿಯೆ ಎರಡನೆಯದು. ಅಂದರೆ ಮೊದಲನೆಯದು ಸಂಸ್ಕೃತ ಕಾವ್ಯದ ಪ್ರೇರಣೆಯಿಂದ ಮಾಡಿದ 'ಸ್ವತಂತ್ರ ಕಾವ್ಯಸೃಷ್ಟಿ'ಯಾದರೆ, ಎರಡನೆಯದು ಸಂಸ್ಕೃತ ಕಾವ್ಯಕ್ಕೇ ನಿಷ್ಠವಾಗುವ 'ಭಾಷಾಂತರ ಪ್ರಕ್ರಿಯೆ'

ಕನ್ನಡ ಸಾಹಿತ್ಯದಲ್ಲಿ 'ಸುವರ್ಣಯುಗ'ವೆಂದೇ ಖ್ಯಾತವಾಗಿರುವ ಯುಗವೆಂದರೆ 'ಹತ್ತನೇ ಶತಮಾನ'. ಕೃತಿಗಳ ಅಲಭ್ಯತೆಯಿಂದಾಗಿ ಇದಕ್ಕೂ ಪೂರ್ವದಲ್ಲಿದ್ದ ಸಾಹಿತ್ಯದ ರೂಪು-ರೇಷೆಗಳ ಸಮಗ್ರ, ವಿಸ್ತಾರ ಚಿತ್ರ ನೀಡಲು ಸಾಧ್ಯವಿಲ್ಲ. ಆದರೆ ಹತ್ತನೇ ಶತಮಾನದಲ್ಲಿದ್ದ ಕೆಲವು ಕವಿಗಳ ಹೆಸರುಗಳೊಂದಿಗೆ, ಸಮಗ್ರ ರೂಪದ ಕಾವ್ಯಗಳು ಲಭ್ಯವಾಗಿದ್ದು, ಈ

ಯುಗ 'ಚಂಪೂ ಯುಗ' 'ವೀರಯುಗ' ಮುಂತಾದ ಹೆಸರುಗಳೊಂದಿಗೆ ಗುರುತಿಸಲ್ಪಟ್ಟಿದೆ. 'ಆದಿಕವಿ' ಎಂದು ಗುರುತಿಸಲ್ಪಟ್ಟಿರುವ 'ಪಂಪ' ನೊಂದಿಗೆ 'ರನ್ನ', ಪೊನ್ನ' (ಒಂದು ಕಾವ್ಯ)ರ ಕಾವ್ಯಗಳೂ ಲಭ್ಯವಾಗಿವೆ.

ಆದರೆ ಚಂಪೂಕಾವ್ಯಗಳೇ ಅಲ್ಲದೆ, ಗದ್ಯಕಾವ್ಯಗಳೂ ಲಭ್ಯವಾಗಿರುವುದು ಹತ್ತನೇ ಶತಮಾನದ ಮತ್ತೊಂದು ವೈಶಿಷ್ಟ್ಯವೇ ಎನ್ನಬಹುದು. ಈ ಕೀರ್ತಿಗೆ ಕಾರಣಕರ್ತರಾದವರು 'ಶಿವಕೋಟ್ಯಾಚಾರ್ಯ' ಮತ್ತು 'ಚಾವುಂಡರಾಯ'. ಇವರು ಬರೆದಿರುವ 'ವಡ್ಡಾರಾಧನೆ' ಮತ್ತು 'ಚಾವುಂಡರಾಯಪುರಾಣ'ವೆಂಬ ಕೃತಿಗಳು ಕನ್ನಡ ಗದ್ಯಸಾಹಿತ್ಯದ ಚರಿತ್ರೆಯಲ್ಲಿ ಅತ್ಯುನ್ನತ ಸ್ಥಾನವನ್ನು ಅಲಂಕರಿಸುತ್ತವೆ.

ಕನ್ನಡ ಸಾಹಿತ್ಯಕ್ಕೆ ಜೈನ ಕವಿಗಳ ಕೊಡುಗೆ ಅತ್ಯಮೂಲ್ಯವಾದುದು. ಸಂಸ್ಕೃತ, ಪ್ರಾಕೃತ ಭಾಷೆಗಳಲ್ಲಿದ್ದ ಜೈನ ಧಾರ್ಮಿಕ ಗ್ರಂಥಗಳನ್ನು ಪರಿಚಯಿಸಿದ್ದೇ ಅಲ್ಲದೆ, ವೈದಿಕ ಧರ್ಮದ ಮಹಾಕಾವ್ಯಗಳೆಂದೂ, ಧಾರ್ಮಿಕ ಗ್ರಂಥಗಳೆಂದೂ ಪರಿಗಣಿತವಾಗಿರುವ 'ರಾಮಾಯಣ, ಮಹಾಭಾರತ, ಭಾಗವತಾ'ದಿ ಕೃತಿಗಳಲ್ಲಿರುವ 'ರಾಮಕೃಷ್ಣ' ರ ಕಥೆಗಳನ್ನು ಜೈನಧರ್ಮದ ಸ್ಪರ್ಶದೊಂದಿಗೆ ಕನ್ನಡಿಗರಿಗೆ ಪರಿಚಯಿಸಿದ್ದಾರೆ. ಈ ಪರಿಪಾಠ ಪಂಪಪೂರ್ವ ಯುಗದ 'ಆದಿಗುಣವರ್ಮ'ನ 'ಹರಿವಂಶ'ದಿಂದಲೇ ಆರಂಭ ವಾಗಿರಬಹುದು. ಆದರೆ ಹರಿವಂಶ ಅನುಪಲಬ್ಧ ಕೃತಿಯಾಗಿರುವುದರಿಂದ, ಕಥಾ ಸ್ವರೂಪವನ್ನು ಸ್ಪಷ್ಟವಾಗಿ ಹೇಳಲು ಸಾಧ್ಯವಿಲ್ಲದಿದ್ದರೂ, ಹತ್ತನೇ ಶತಮಾನದಿಂದ ಸ್ಪಷ್ಟಚಿತ್ರ ಮೂಡುತ್ತದೆ. ಆದಿಕವಿ 'ಪಂಪ', 'ಶಕ್ತಿಕವಿ' ರನ್ನರಿಂದ ರಚಿತವಾಗಿರುವ ಮಹಾಭಾರತದ ಕಥಾಕಾವ್ಯಗಳು ಉಪಲಬ್ಧವಾಗಿವೆ. ಹಾಗೆಯೇ 'ಪೊನ್ನ' ಎಂಬ ಜೈನ ಕವಿ ರಚಿಸಿರುವ 'ಭುವನೈಕರಾಮಾಭ್ಯುದಯ'ವೆಂಬ ಚಂಪೂಕಾವ್ಯ ರಾಮಾಯಣದ ಕಥೆಯನ್ನು ಹೇಳಿರಬಹುದೆಂದು ಊಹಿಸಬಹುದಾದರೂ, ಅನುಪಲಬ್ಧವಾಗಿರುವುದರಿಂದ ಖಚಿತ ಚಿತ್ರವಿಲ್ಲ.

ಹೀಗೆ 'ಕುಮಾರವ್ಯಾಸ, ಕುಮಾರವಾಲ್ಮೀಕಿ'ಯರು ಸಂಸ್ಕೃತದ ವ್ಯಾಸ, ವಾಲ್ಮೀಕಿಗಳ ಮಹಾಭಾರತ, ರಾಮಾಯಣಗಳ ಯಥಾವತ್ತಾದ ಕನ್ನಡ ಕಾವ್ಯಗಳನ್ನು ನೀಡುವ ಮುನ್ನವೇ, ಜೈನ ಕವಿಗಳಾದ 'ಪಂಪ, ರನ್ನ , ಪೊನ್ನ, ನಾಗಚಂದ್ರ'ರು ಜೈನಭಾರತ, ಜೈನ ರಾಮಾಯಣಗಳನ್ನು ನೀಡಿದ್ದಾರೆ. ಈ ಕವಿಗಳು ಭಾರತ, ರಾಮಾಯಣಗಳನ್ನು 'ಲೌಕಿಕ' ಕಾವ್ಯಗಳೆಂದು, ಜೈನಪುರಾಣ ಕಥೆಗಳನ್ನು 'ಆಗಮಿಕ' ಕಾವ್ಯಗಳೆಂದು ಹೆಸರಿಸಿ, ಪ್ರತ್ಯೇಕವಾಗಿ ರಚಿಸಿದ್ದಾರೆ. ಆದರೆ ಜೈನ ಮತ್ತು ವೈದಿಕ ಪಾತ್ರಗಳ ಕಥೆಗಳನ್ನು ಮಿಶ್ರಗೊಳಿಸಿ, ಒಂದೇ ಕೃತಿಯಾಗಿ ಗದ್ಯರೂಪದಲ್ಲಿ ಪ್ರಥಮ ಬಾರಿಗೆ ಕನ್ನಡದಲ್ಲಿ ನಿರೂಪಿಸಿದ ಕೀರ್ತಿ ಚಾವುಂಡರಾಯನಿಗೆ ಸಲ್ಲುತ್ತದೆ. ಆದ್ದರಿಂದ ಚಾವುಂಡರಾಯಪುರಾಣ 'ಆದಿಪುರಾಣ, ಅಜಿತಪುರಾಣ, ಶಾಂತಿಪುರಾಣ ಮತ್ತು ಅನಂತನಾಥಪುರಾಣ'ಗಳ ಹೆಸರುಗಳೊಂದಿಗೆ ಮಾತ್ರ ಸಾಮ್ಯತೆಯನ್ನು ಹೊಂದಿದ್ದು, 'ವಿಷಯ' ಮತ್ತು 'ಸ್ವರೂಪ'ವೆರಡೂ ದೃಷ್ಟಿಗಳಿಂದ ಭಿನ್ನವಾಗಿದ್ದು, ಅನನ್ಯತೆಯನ್ನು ಕಾಯ್ದುಕೊಂಡಿದೆ.

ಕನ್ನಡ ಸಾಹಿತ್ಯದ ಮೇರು ಕೃತಿಗಳಲ್ಲಿ ಒಂದಾದ 'ಚಾವುಂಡರಾಯ ಪುರಾಣ'ದ ಕರ್ತೃ ಚಾವುಂಡರಾಯನದು ಬಹುಮುಖಿ ವ್ಯಕ್ತಿತ್ವ. ಆತ ರಾಜಕೀಯ, ಸಾಂಸ್ಕೃತಿಕ ಮತ್ತು ಸಾಹಿತ್ಯಕಗಳೆಂಬ ಮೂರೂ ಕ್ಷೇತ್ರಗಳಲ್ಲಿ ಗಮನಾರ್ಹ ಕೊಡುಗೆ ನೀಡಿರುವ ವಿಶಿಷ್ಟ ವ್ಯಕ್ತಿ.

ಶ್ರವಣಬೆಳಗೊಳದಲ್ಲಿ ದೊರೆತಿರುವ ಕೆಲವು ಶಾಸನಗಳು ಮತ್ತು ಚಾವುಂಡರಾಯ ಪುರಾಣದಲ್ಲಿರುವ ಕೆಲವು ಉಲ್ಲೇಖಗಳಿಂದ ಚಾವುಂಡರಾಯನ ವೈಯಕ್ತಿಕ ವಿವರಗಳನ್ನು ತಿಳಿಯಬಹುದು. 'ಚಾಮುಣ್ಡಯ್ಯ, ಎಂಬ ಹೆಸರಿನಿಂದ ಕರೆಯಲ್ಪಡುತ್ತಿದ್ದ ಈತ 'ನಾಲ್ಮಡಿ ರಾಚಮಲ್ಲ' ನೀಡಿದ 'ರಾಯ' ಎಂಬ ಬಿರುದಿನಿಂದ ಚಾಮುಂಡರಾಯ, ಚಾವುಂಡರಾಯನಾದ. ಇವನ ಮತ್ತೊಂದು ಹೆಸರು 'ಗೊಮ್ಮಟ'. ಚಾವುಂಡರಾಯಪುರಾಣದ ಆಧಾರದಿಂದ ಇವನು 'ಬ್ರಹ್ಮ ಕ್ಷತ್ರಕುಲೋತ್ಪನ್ನ' ನೆಂದೂ, ಜೈನನೆಂದೂ ತಿಳಯುತ್ತದೆ. ತಂದೆ-ತಾಯಿಯರ ಹೆಸರು ತಿಳಿಯುವುದಿಲ್ಲ. ಆದರೆ 'ಜಿನದೇವಣ'ಎಂಬ ಮಗನಿದ್ದಿರಬೇಕೆಂದು

ಶಾಸನದಿಂದ ತಿಳಿಯುತ್ತದೆ.

ರಾಜಕೀಯ ಕ್ಷೇತ್ರ : ಚಾವುಂಡರಾಯ 10ನೇ ಶತಮಾನದ, ಬಹುಶಃ ಕ್ರಿ.ಶ. ಸುಮಾರು 934–990ರ ಅವಧಿಯಲ್ಲಿ ಜೀವಿಸಿದ್ದ ಕವಿ. ಕರ್ನಾಟಕವನ್ನಾಳಿದ ಪ್ರಸಿದ್ಧ ರಾಜವಂಶಗಳಲ್ಲಿ ಒಂದಾದ 'ರಾಷ್ಟ್ರಕೂಟ'ರಲ್ಲಿ ಸಾಮಂತರಾಗಿದ್ದು, ಮಹಾಮಂಡಲೇಶ್ವರರಾಗಿ ದಕ್ಷಿಣ ಕರ್ನಾಟಕದ 'ಗಂಗವಾಡಿ – 96000' ಸೀಮೆಯನ್ನು ಆಳುತ್ತಿದ್ದ 'ಪಶ್ಚಿಮ ಗಂಗ' ವಂಶದ ರಾಜರಲ್ಲಿ ವಿವಿಧ ಅಧಿಕಾರಗಳಲ್ಲಿ ಇದ್ದವನು. 'ಬೂತುಗ'ನ ಮಗನಾಗಿದ್ದ 'ಇಮ್ಮಡಿ ಮಾರಸಿಂಹ' (ಕ್ರಿ.ಶ. 961–974), ಈತನ ಮಕ್ಕಳಾದ 'ನಾಲ್ಮಡಿರಾಜ(ಚ) ಮಲ್ಲ (ಕ್ರಿ.ಶ 974–977) ಮತ್ತು ರಕ್ಕಸಗಂಗ (ಕ್ರಿ.ಶ.977–984)ರ ಅಧಿಕಾರಾವಧಿಯಲ್ಲಿ ಇದ್ದು, ದಂಡನಾಯಕನಾಗಿ, ಮಂತ್ರಿಯಾಗಿ, ಸಂಧಿವಿಗ್ರಹಿಯಾಗಿದ್ದು ರಾಜಕೀಯ ಸೇವೆ ಮಾಡಿದವನು.

"ಗಂಗಕುಳಾಚಲ ಶಿಖರ ಶೇಖರನುಂ ಗಂಗಚೂಡಾಮಣಿಯುಂ ಜಗದೇಕವೀರನುಂ ಧರ್ಮಾವತಾರನುಂ ಎನಿಸಿದ ನೊಣಂಬ ಕುಲಾಂತ ದೇವನೆ ತನಗೆ ಪರಮಸ್ವಾಮಿ" ಎಂದು ತನ್ನ ಸ್ವಾಮಿಯಾದ 'ಮಾರಸಿಂಹ'ನ ವ್ಯಕ್ತಿತ್ವವನ್ನು ಮನದುಂಬಿ ವರ್ಣಿಸಿರುವಲ್ಲಿ ಇವನಿಗೆ ಮಾರಸಿಂಹನ ಮೇಲಿರುವ ಅಪಾರ ಗೌರವ ಸ್ಪಷ್ಟವಾಗುತ್ತದೆ. ಅವರ ಸಹಪಾಠಿಯಾಗಿದ್ದುದು ಅಷ್ಟೇ ಅಲ್ಲದೆ, 'ದಂಡನಾಯಕ'ನಾಗಿ ಅನೇಕ ಯುದ್ಧಗಳಲ್ಲಿ ಒಟ್ಟಾಗಿ, ಏಕಾಂಗವೀರನಾಗಿ ಹೋರಾಟ ಮಾಡಿ, ದೇಶವನ್ನು ರಕ್ಷಿಸಿದ ಕೀರ್ತಿ ಇವನಿಗೆ ಸಲ್ಲುತ್ತದೆ. "ಸ್ಥಿರ ಜಿನಶಾಸನೋದ್ಧರಣ ರಾದಿಯೊಳಾರನೆ ರಾಚಮಲ್ಲ ಭೂವರವರ ಮಂತ್ರಿ ರಾಯನೆ" ಎಂಬ ಶ್ರವಣಬೆಳೊಗೊಳದ ಶಾಸನದ ಉಕ್ತಿಯಂತೆ, ನಾಲ್ಮಡಿ ರಾಚಮಲ್ಲನಲ್ಲಿ ಮಂತ್ರಿಯಾಗಿದ್ದನೆಂದು ತಿಳಿಯುತ್ತದೆ.

ಗಂಗರ ಪರವಾಗಿ ಹೋರಾಟ ಮಾಡುತ್ತಾ, ರಾಷ್ಟ್ರಕೂಟರ ಆಳ್ವಿಕೆಯನ್ನು ಸುಭದ್ರವಾಗಿರಲು ಪ್ರಾಮಾಣಿಕವಾಗಿ ಪ್ರಯತ್ನ ಮಾಡಿದ ಚಾವುಂಡರಾಯ ವೈರಿರಾಜರಿಗೆಲ್ಲ ಸಿಂಹಸ್ವಪ್ನವಾಗಿದ್ದ. ತನ್ನ ಕಾವ್ಯದ

ಕೊನೆಯಲ್ಲಿರುವ 'ಇಂತೆನಿಸಿ ನೆಗಟ್ದಿ ಚಾವುಂಡರಾಯಂ' ಎಂಬ ವಚನದಲ್ಲಿ ಯುದ್ಧದಲ್ಲಿ ತೋರಿದ ಪರಾಕ್ರಮ, ಮೆರೆದ ಶೌರ್ಯ, ವೀರ ಯೋಧನಾಗಿದ್ದರಿಂದ ಪ್ರಾಪ್ತವಾಗಿದ್ದ "ಸಮರಧುರಂಧರ, ವೀರಮಾರ್ತಾಂಡ, ರಣರಂಗಸಿಂಗ, ವೈರಿಕುಳಕಾಳದಂಡ, ಭುಜವಿಕ್ರಮ, ಚಲದಂಕಗಂಡ, ಸಮರ ಪರಶುರಾಮ, ಪ್ರತಿಪಕ್ಷರಾಕ್ಷಸ, ಭಟಮಾರಿ, ಸುಭಟಚೂಡಾಮಣಿ" ಎಂಬ ಬಿರುದುಗಳನ್ನೂ, ಅವುಗಳು ತನಗೆ ಪ್ರಾಪ್ತವಾಗಲು ಕಾರಣವಾದ ಯುದ್ಧಗಳನ್ನೂ, ತಾನು ಹೋರಾಡಿ ಗೆದ್ದ ವೈರಿಪಡೆಯ ಹೆಸರುಗಳನ್ನೂ ಉಲ್ಲೇಖಿಸಿದ್ದಾನೆ. ಈ ವಿವರಣೆಯಲ್ಲಿ ನೃಪಕಾಮನ ಕೋಟೆಯೊಳ್ ರಾಜನೆಂಬಧಟನುಮಂ ಮೊದಲಾದ "ಅನೇಕ ಪೆಜ಼ರುಂ ಕಲಿಗಳುಮಂ ಬಲ್ಲಾಳ್ಗಳುಮನೊಂದೆ ಮೈಯೊಳ್ ಪೆಣೆದಿಜಿದು". ಜಯಶಾಲಿಯಾದೆನೆಂದು ಹೇಳುವಲ್ಲಿ ಚಾವುಂಡರಾಯನ ಅಸಾಮಾನ್ಯ ಪರಾಕ್ರಮ ಸ್ಪಷ್ಟವಾಗುತ್ತದೆ. ಈ ವೈರಿಗಳಲ್ಲಿ ತನ್ನ ತಮ್ಮನನ್ನು ಕೊಂದವರನ್ನು, ಗಂಗರ ನೆಚ್ಚಿನ ಬಂಟನನ್ನು ಕೊಂದವರನ್ನು 'ಛಲ'ದಿಂದ ಕೊಂದೆನೆಂದು ಹೇಳುವಲ್ಲಿ ಅವನ ಕುಟುಂಬ ವಾತ್ಸಲ್ಯ, ಆಶ್ರಯದಾತರ ಬಗೆಗಿನ ನಿಷ್ಠೆ ವ್ಯಕ್ತವಾಗುತ್ತದೆ. ಹಾಗೆಯೇ ಸತ್ಯ, ತ್ಯಾಗ, ಪರಸ್ತ್ರೀ, ಪರಧನ ವಿಮುಖತೆ, ಪರರಿಗೆ ಸಹಾಯಮಾಡುವ ಗುಣ - ಮೊದಲಾದ ವಿಶಿಷ್ಟ ಸದ್ಗುಣಗಳಿಂದ ತಾನು ಪಡೆದಿದ್ದ 'ಸಮ್ಯಕ್ತ್ವರತ್ನಾಕರ, ಶೌಚಾಭರಣ, ಗುಣವಂಕ' ಎಂಬ ಬಿರುದುಗಳು ಎಲ್ಲ ದಿಕ್ಕುಗಳಲ್ಲೂ ಹರಡಿತ್ತೆಂದು ವರ್ಣಿಸಿಕೊಂಡಿದ್ದಾನೆ.

ಕ್ರಿ.ಶ. 8–10ನೇ ಶತಮಾನದಲ್ಲಿದ್ದ 'ರಾಷ್ಟ್ರಕೂಟ' ಚಕ್ರಾಧಿಪತ್ಯ ಮಾರಸಿಂಹನ ಕಾಲಕ್ಕೆ ಅಂತ್ಯವನ್ನು ಕಾಣುತ್ತಿತ್ತು. ಚಾಲುಕ್ಯವಂಶ, ಮಹಾಸಾಮಂತ ತೈಲಪ ಪ್ರಬಲರಾದರು. ಮಾರಸಿಂಹ ಕೊನೆಯವರೆಗೂ ಹೋರಾಟ ಮಾಡಿ, ವಂಶದ ಕೊನೆಯವನಾದ 'ನಾಲ್ಮಡಿ ಇಂದ್ರ'ನನ್ನು ಚಾವುಂಡರಾಯನಿದ್ದ ಶ್ರವಣಬೆಳಗೊಳಕ್ಕೆ ಕಳುಹಿ, ಮನನೊಂದು, ಬಂಕಾಪುರದಲ್ಲಿದ್ದ 'ಅಜಿತಸೇನಾಚಾರ್ಯ'ರ ಬಳಿಯಲ್ಲಿ ದೀಕ್ಷೆ ತೆಗೆದುಕೊಂಡು, ಸಲ್ಲೇಖನ ವ್ರತದಿಂದ ಸಮಾಧಿ ಮರಣವನ್ನು ಪಡೆದನು.

ಚಾವುಂಡರಾಯನ ಮೇಲೆ ರಾಷ್ಟ್ರಕೂಟರ ಅಂತ್ಯ, ಮಾರಸಿಂಹನ

ಮರಣ ತೀವ್ರ ಪರಿಣಾಮವನ್ನು ಬೀರಿತು. ರಾಜಕೀಯದಿಂದ ನಿವೃತ್ತನಾಗಿ, ಧರ್ಮದ ಕಡೆ ಮನಸ್ಸನ್ನು ಹೊರಳಿಸಿ, 'ನೇಮಿಚಂದ್ರ ಸಿದ್ಧಾಂತ ಚಕ್ರವರ್ತಿ' ಮತ್ತು 'ಅಜಿತಸೇನಾಚಾರ್ಯ'ರೆಂಬ ಆಚಾರ್ಯರ ಬಳಿಯಲ್ಲಿ ಶಿಷ್ಯತ್ವವನ್ನು ಸ್ವೀಕರಿಸಿ, ಜೈನಧರ್ಮದ ಧಾರ್ಮಿಕ ಗ್ರಂಥಗಳ ಜ್ಞಾನವನ್ನು ಪಡೆಯಲಾರಂಭಿಸಿದನು. ಚಾವುಂಡರಾಯನ ವ್ಯಕ್ತಿತ್ವದ ಈ ಬದಲಾವಣೆ ಜೈನಧರ್ಮ, ಕರ್ನಾಟಕ ಸಂಸ್ಕೃತಿ ಮತ್ತು ಕನ್ನಡ ಸಾಹಿತ್ಯಕ್ಕೆ ವರವಾಯಿತು.

ಸಾಂಸ್ಕೃತಿಕ : ರಾಜಕೀಯ ಸೇವೆಯೊಂದಿಗೆ ಜೈನಧರ್ಮಕ್ಕೆ ಮತ್ತು ಕನ್ನಡ ಸಂಸ್ಕೃತಿಗೆ ಅಮೂಲ್ಯ ಕೊಡುಗೆ ನೀಡಿದ ಕೀರ್ತಿಗೆ ಚಾವುಂಡರಾಯ ಪಾತ್ರನಾಗಿದ್ದಾನೆ. ಪ್ರಥಮ ತೀರ್ಥಂಕರ 'ವೃಷಭನಾಥ'ನ ಮಗ ಹಾಗೂ ರಾಜಕುಮಾರನಾಗಿದ್ದ 'ಬಾಹುಬಲಿ' ರಾಜಕೀಯದಿಂದ ನಿವೃತ್ತಿ ಹೊಂದಿ, ವೈರಾಗ್ಯಮೂರ್ತಿಯಾದ ಕಥೆ ರಾಯನ ಮೇಲೆ ತೀವ್ರ ಪ್ರಭಾವ ಬೀರಿತು. ಇದರ ಪರಿಣಾಮವೇ ಇಂದಿಗೂ ಜೈನ ಧರ್ಮೀಯರ ಪವಿತ್ರ ಯಾತ್ರಾಸ್ಥಳವಾಗಿಯೂ, ಪ್ರಸಿದ್ಧ ಪ್ರೇಕ್ಷಣೀಯ ಸ್ಥಳವಾಗಿಯೂ ಜನಪ್ರಿಯವಾಗಿರುವ ಕರ್ನಾಟಕದ 'ಶ್ರವಣಬೆಳಗೊಳ'ದಲ್ಲಿರುವ 'ಬಾಹುಬಲಿ'ಯ ಮೂರ್ತಿ.

ಶ್ರವಣಬೆಳಗೊಳದಲ್ಲಿರುವ 'ದೊಡ್ಡಬೆಟ್ಟ'ದ ಮೇಲೆ ಕ್ರಿ.ಶ. 983ರಲ್ಲಿ 58.8 ಅಡಿ ಉದ್ದದ, ಏಕಶಿಲೆಯ ಸುಂದರವಾದ 'ಬಾಹುಬಲಿ' ಮೂರ್ತಿಯನ್ನು ಪ್ರತಿಷ್ಠಾಪಿಸಿದ ಮಹಾಪುರುಷ ಈತ. ಶಿಲ್ಪಕಲಾ ಶಾಸ್ತ್ರದ ದೃಷ್ಟಿಯಿಂದ ಅದ್ವಿತೀಯ ಮೂರ್ತಿಯಾದ ಇದರ ಬಲಭಾಗದ ಪಾದಗಳ ಬಳಿಯ 'ಶ್ರೀಚಾಮುಣ್ಡರಾಜಂ ಮಾಡಿಸಿದಂ' ಎಂಬ ಶಾಸನ ಶಾಶ್ವತವಾಗಿ ಇವನ ಕೊಡುಗೆಯನ್ನು ಸಾರುತ್ತಿದೆ. ಬೊಪ್ಪಣಪಂಡಿತನ 'ಗೊಮ್ಮಟ ಜಿನೇಂದ್ರ ಗುಣಸ್ತವ' ಶಾಸನವೂ ಈ ಮೂರ್ತಿಯನ್ನು ಸ್ಥಾಪಿಸಲು ಕಾರಣವಾದ ವಿಷಯಗಳನ್ನು ದಾಖಲಿಸಿದೆ. ಅಂದಿನಿಂದ ಚಾವುಂಡರಾಯನ ಪ್ರೀತಿಯ ಹೆಸರಾದ 'ಗೊಮ್ಮಟ'ನಿಂದಲೇ ಮೂರ್ತಿಗೂ ಈ ಹೆಸರು ಬಂದು, 'ಗೊಮ್ಮಟೇಶ್ವರ'ನೆಂದೇ ಜನಪ್ರಿಯವಾಗಿ, ಇಂದಿಗೂ ಜೀವಂತವಾಗಿ, ಶಾಶ್ವತವಾಗಿದೆ. ಚಾವುಂಡರಾಯನ ಈ ಅಪೂರ್ವ ಕೆಲಸಕ್ಕೆ ರಾಚಮಲ್ಲ 'ರಾಯ' ಎಂಬ

ಬಿರುದನ್ನು ಕೊಟ್ಟಂತೆಯೇ, ಇತರರಿಂದ 'ಅಣ್ಣ' ಎಂಬ ಜನಪ್ರಿಯ ಬಿರುದೂ ಪ್ರಾಪ್ತವಾಯಿತು. ಈ ನಿರ್ಮಾಣ 'ಗೊಮ್ಮಟ ಶಿಲ್ಪ' ಪರಂಪರೆಗೆ ನಾಂದಿಯಾಗಿ, ಕರ್ನಾಟಕದ ವಿವಿಧೆಡೆ ಗೊಮ್ಮಟ ಮೂರ್ತಿಗಳು ಪ್ರತಿಷ್ಠಾಪಿತವಾಗಲು ಕಾರಣವಾಯಿತು.

ಅಲ್ಲದೆ ದೊಡ್ಡಬೆಟ್ಟದ ಮೇಲೆ 'ತ್ಯಾಗದ ಬ್ರಹ್ಮದೇವರ ಕಂಬ'ವೆಂಬ ಒಂದು 'ಸ್ತಂಭ'ವನ್ನೂ, 'ಚಿಕ್ಕಬೆಟ್ಟ'ದ ಮೇಲೆ 'ದ್ರಾವಿಡಶೈಲಿ'ಯ ಸುಂದರವಾದ 'ಈಷತ್ ಪ್ರಾಗ್ಭಾರ'ವೆಂಬ ಜಿನಭವನವನ್ನೂ ನಿರ್ಮಿಸಿ, ತನ್ನ ಧಾರ್ಮಿಕ ಶ್ರದ್ಧೆಯನ್ನು ಮೆರೆದಿದ್ದಾನೆ. ಇದು 'ಚಾವುಂಡರಾಯ ಬಸದಿ'ಯೆಂದು ಜನಪ್ರಿಯವಾಗಿದೆ. ಗುರುಗಳಾದ 'ನೇಮಿಚಂದ್ರಾಚಾರ್ಯ'ರು ಶಿಷ್ಯನ ಧಾರ್ಮಿಕ ಶ್ರದ್ಧೆಗೆ ಮೆಚ್ಚಿ, ತಮ್ಮ 'ಗೊಮ್ಮಟ ಸಾರಗಾಥಾ' ಎಂಬ ಕೃತಿಯಲ್ಲಿ ಇವುಗಳನ್ನು ಉಲ್ಲೇಖಿಸಿದ್ದಾರೆ.

ಸಾಹಿತ್ಯಕ : ಚಾವುಂಡರಾಯ 'ನೇಮಿಚಂದ್ರ ಸಿದ್ಧಾಂತ ಚಕ್ರವರ್ತಿ' ಮತ್ತು 'ಅಜಿತ ಸೇನಾಚಾರ್ಯ'ರೆಂಬ ಆಚಾರ್ಯರ ಬಳಿಯಲ್ಲಿ ಶಿಷ್ಯತ್ವವನ್ನು ಸ್ವೀಕರಿಸಿ, ಧಾರ್ಮಿಕ ಗ್ರಂಥಗಳಾದ 'ಅನುಯೋಗ ಚತುಷ್ಟಯ, ಗೃಧ್ರ ಪಿಂಛಾಚಾರ್ಯರ ತತ್ವಾರ್ಥಸೂತ್ರ, ಅದರ ಮೇಲಿನ ಭಾಷ್ಯ, ಧವಲಾ ಟೀಕೆಗಳೇ ಮೊದಲಾದ 'ಆಗಮ' ಗ್ರಂಥಗಳು, ಸಿದ್ಧಸೇನ ಆಚಾರ್ಯ ಸನ್ಮತಿತರ್ಕ, ವೀರಸೇನ ಭಟ್ಟಾರಕರು ಮತ್ತು ಜಿನಸೇನಾಚಾರ್ಯರ ಸಿದ್ಧಾಂತ ಗ್ರಂಥಗಳು, ಜಟಾಸಿಂಹನಂದಿಯ ವರಾಂಗಚರಿತೆ, ವಸುನಂದಿಯ ಶ್ರಾವಕಾಚಾರ, ಗುಣಭದ್ರರ ಕೃತಿಗಳೇ ಮೊದಲಾದ ಶಾಸ್ತ್ರಗ್ರಂಥಗಳನ್ನು ಅಭ್ಯಾಸ ಮಾಡಿದನು.

ಸಂಸ್ಕೃತ ಮತ್ತು ಕನ್ನಡ – ಎರಡೂ ಭಾಷೆಗಳ ಮೇಲೆ ಪ್ರಭುತ್ವವನ್ನು ಹೊಂದಿದ್ದ ಚಾವುಂಡರಾಯ 'ಲೇಖಕ'ನೂ ಆಗಿ ಎರಡೂ ಭಾಷೆಗಳ ಸಾಹಿತ್ಯವನ್ನು ಶ್ರೀಮಂತಗೊಳಿಸಿದ. 'ಚಾರಿತ್ರಸಾರ' 'ವೀರಮಾರ್ತಾಂಡಿ' ಮತ್ತು 'ತ್ರಿಷಷ್ಠಿ ಲಕ್ಷಣಮಹಾಪುರಾಣ' ಅಥವಾ 'ಚಾವುಂಡರಾಯಪುರಾಣ' ವೆಂಬ ಮೂರು ಕೃತಿಗಳನ್ನು ಈತ

ರಚಿಸಿದ್ದನೆಂದು ತಿಳಿದು ಬಂದಿದೆ. ಇವುಗಳಲ್ಲಿ ಉಪಲಬ್ಧವಾಗಿರುವ ಏಕೈಕ ಕೃತಿಯೆಂದರೆ ಚಾವುಂಡರಾಯಪುರಾಣ.

ಶ್ರಮಣರ ಮತ್ತು ಗೃಹಸ್ಥರ ಚಾರಿತ್ರ ನಿಯಮಗಳನ್ನು ನಿರೂಪಿಸುವ ಸಂಸ್ಕೃತ ಕೃತಿಯೇ 'ಚಾರಿತ್ರಸಾರ'. ನೇಮಿಚಂದ್ರಾಚಾರ್ಯರು 'ಗೊಮ್ಮಟಸಾರ'ವೆಂಬ ಹೆಸರಿನಲ್ಲಿ ವೀರಸೇನಾಚಾರ್ಯರು ಮತ್ತು ಜಿನಸೇನಾಚಾರ್ಯರು ರಚಿಸಿದ್ದ 'ಷಟ್‌ಖಂಡ ಆಗಮ'ವೆಂಬ ಸಂಸ್ಕೃತ ಕೃತಿಯನ್ನು ಸಂಗ್ರಹ ರೂಪದಲ್ಲಿ ರಚಿಸಿದ್ದರು. ಚಾವುಂಡರಾಯ ಗೊಮ್ಮಟಸಾರಕ್ಕೆ ಕನ್ನಡದಲ್ಲಿ 'ವೃತ್ತಿ'ಯನ್ನು ಬರೆದಿದ್ದ. ಈ ದೇಸೀವೃತ್ತಿಯ 'ವೀರಮಾರ್ತಾಂಡಿ'ಯಂಬ ಕೃತಿ.

ತ್ರಿಷಷ್ಠಿ ಲಕ್ಷಣ ಮಹಾಪುರಾಣ ಅಥವಾ ಚಾವುಂಡರಾಯಪುರಾಣ:

ಕನ್ನಡ ಗದ್ಯಸಾಹಿತ್ಯದಲ್ಲಿ ಚಾವುಂಡರಾಯಪುರಾಣಕ್ಕೆ ವಿಶಿಷ್ಟ ಸ್ಥಾನವಿದೆ. ಕ್ರಿ.ಶ. ಸುಮಾರು 920ರಲ್ಲಿ ರಚಿತವಾದ 'ವಡ್ಡಾರಾಧನೆ' ಉಪಲಬ್ಧವಾಗುವವರೆಗೆ, ಕ್ರಿ.ಶ. 977, 978ರಲ್ಲಿ ರಚಿತವಾದ ಈ ಕಾವ್ಯವೇ ಕನ್ನಡ ಗದ್ಯಸಾಹಿತ್ಯದ 'ಆದ್ಯ' ಕೃತಿಯೆಂಬ ಖ್ಯಾತಿಗೆ ಪಾತ್ರವಾಗಿತ್ತು. ಆದರೆ ಈಗಲೂ ದ್ವಿತೀಯ ಸ್ಥಾನವನ್ನಂತೂ ಪಡೆದಿದೆ. ಸಂಸ್ಕೃತ ಮಹಾಪುರಾಣಗಳ ಸ್ವರೂಪವನ್ನು ಕನ್ನಡಕ್ಕೆ ಪರಿಚಯಿಸಿದ ಪ್ರಥಮ ವ್ಯಕ್ತಿಯಾಗಿದ್ದು, ಆ ಮೂಲಕ ಜೈನಧರ್ಮದ ಬಗ್ಗೆ ಕನ್ನಡಿಗರಿಗೆ ಅಮೂಲ್ಯ ಮಾಹಿತಿಗಳನ್ನು ನೀಡಿದ್ದಾನೆ. ಜೈನ ಮತ್ತು ವೈದಿಕ ಪಾತ್ರಗಳ ಕಥೆಗಳು ಮಿಶ್ರಗೊಂಡು, ಗದ್ಯರೂಪದಲ್ಲಿ ಒಂದೇ ಕೃತಿಯಾಗಿ ಮೂಡಿ ಬಂದಿರುವುದೇ ಚಾವುಂಡರಾಯಪುರಾಣದ ವೈಶಿಷ್ಟ್ಯ. ತೀರ್ಥಂಕರರು, ಬಲದೇವ, ವಾಸುದೇವ, ಪ್ರತಿವಾಸುದೇವ, ಚಕ್ರವರ್ತಿ ಮತ್ತು ಯಕ್ಷ-ಯಕ್ಷಿಯರ ಚರಿತೆಗಳನ್ನೊಳಗೊಂಡ 34 ಅಧ್ಯಾಯಗಳ ದೀರ್ಘಕೃತಿ ಇದು.

ವಿರಚಿಸಿದರ್ ಮುನ್ನೆ ಮಹಾ ಪುರಾಣಮಂ
ನೆಗಟ್ದೆ ಕೂಚಿಭಟ್ಟಾರಕರುಂ ಪರಮಶ್ರೀ ನಂದಿಮುನೀ
ಶ್ವರರುಂ ತದನಂತರಂ ಜಿನಾಗಮ ತಿಲಕರ್

ಕವಿ ಪರಮೇಶ್ವರರ್ ಬರೆದುದಂ ಜಿನಸೇನ ಮಹಾಮುನೀಶರೀ
ಯವನಿಗೆಪೇೞ್ದು ಮಾಣೆ ಗುಣಭದ್ರ ಮುನೀಶ್ವರರೆಯ್ದೆ
ಪೇೞ್ದು ಪಲ್ಲವಿಸಿದುದಂ ತ್ರಿಷಷ್ಠಿಪುರುಷ ಪ್ರತಿಬದ್ಧ ಪುರಾಣಮಂ ಮಹೋ
ತ್ಸವದೊಳೆ ಭವ್ಯಕೋಟಿಗಱಿಯಲ್ ಬರೆದಂ ಗುಣರತ್ನಭೂಷಣಂ

ಎಂಬ ಕವಿಯ ಉಲ್ಲೇಖದ ಸಂಸ್ಕೃತದಲ್ಲಿ ರಚನೆಯಾಗಿದ್ದ ಕೂಚಿಭಟ್ಟಾರಕರು-ನಂದಿಮುನೀಶ್ವರರು, 'ಕವಿ ಪರಮೇಷ್ಠಿ (ಕವಿ ಪರಮೇಶ್ವರ)'ಯ 'ವಾಗರ್ಥ' ಮತ್ತು ಜಿನಸೇನ- ಗುಣಭದ್ರರು ರಚಿಸಿದ್ದ ಮೂರು 'ಮಹಾಪುರಾಣ' ಗ್ರಂಥಗಳು ಈ ಕೃತಿಗೆ ಮೂಲವಾಗಿವೆ.

ಅಲ್ಲದೆ ಕನ್ನಡದಲ್ಲಿ ಆದಿಕವಿ 'ಪಂಪ'ನಿಂದ ರಚಿತವಾಗಿದ್ದ 'ಆದಿಪುರಾಣ'ವನ್ನು ಅಧ್ಯಯನ ಮಾಡಿ, ಪ್ರಭಾವಿತನಾಗಿದ್ದ. 'ಅಜಿತನಾಥ ಪುರಾಣ'ವನ್ನು ರಚಿಸಿದ ಮಹಾಕವಿ 'ರನ್ನ'ನಂತೂ ಇವನ ಸಹಪಾಠಿಯೇ ಆಗಿದ್ದ. ಈ ಎಲ್ಲದರ ಪ್ರತಿಫಲವೇ ಕನ್ನಡದ ಚಾವುಂಡರಾಯಪುರಾಣ.

ಚಾವುಂಡರಾಯ ತನ್ನ ಕಾವ್ಯಕ್ಕೆ 'ತ್ರಿಷಷ್ಟಿ ಲಕ್ಷಣ ಮಹಾಪುರಾಣ'ವೆಂಬ ಹೆಸರನ್ನು ಕೊಟ್ಟಿದ್ದರೂ, ಚಾವುಂಡರಾಯಪುರಾಣವೆಂದೇ ಜನಪ್ರಿಯವಾಗಿದೆ. 24 ತೀರ್ಥಂಕರರ, 12 ಚಕ್ರವರ್ತಿಗಳ, 9 ಬಲದೇವರ, 9 ವಾಸುದೇವರ (ನಾರಾಯಣರು) ಮತ್ತು 9 ಪ್ರತಿವಾಸುದೇವರ (ಪ್ರತಿ ನಾರಾಯಣರು) ಜೀವನ ಚರಿತ್ರೆಗಳೇ ಇದರ ವಸ್ತು. ಇದರೊಂದಿಗೆ 24 ಯಕ್ಷ-ಯಕ್ಷಿಯರ ಕಥೆಗಳು, ಭವಾವಳಿಗಳು, ಪಂಚಕಲ್ಯಾಣಗಳು- ಮುಂತಾದ ವಿಷಯಗಳೂ ಮಿಳಿತವಾಗಿವೆ. ಹೀಗೆ ಚಾವುಂಡರಾಯನಿಗಿಂತ ಹಿಂದೆ ಮತ್ತು ನಂತರದ ಜೈನಕವಿಗಳಿಂದ ರಚಿತವಾಗಿರುವ, ತೀರ್ಥಂಕರರ ಚರಿತೆಗಳನ್ನು ಹೇಳುವ 'ಪುರಾಣ'ವೆಂಬ ಹೆಸರಿನ ಕಾವ್ಯಗಳು ಲಭ್ಯವಿದ್ದರೂ, ಎಲ್ಲ ತೀರ್ಥಂಕರರ ಚರಿತೆಗಳು ಒಟ್ಟಿಗೆ ನಿರೂಪಿತವಾಗಿರುವ ಏಕೈಕ ಗದ್ಯಕೃತಿ ಚಾವುಂಡರಾಯ ಪುರಾಣ.

ಜೈನಧರ್ಮಕ್ಕೆ ಸಂಬಂಧಿಸಿದ ವಿಶಿಷ್ಟಾರ್ಥಗಳನ್ನು ಧ್ವನಿಸುವ ಅನೇಕ ಪಾರಿಭಾಷಿಕ ಪದಗಳೂ ಈ ಕಾವ್ಯದ ವಸ್ತು, ವಿಷಯ, ಭಾಷೆಯ ಅನಿವಾರ್ಯ ಭಾಗ. ಬಲದೇವ, ವಾಸುದೇವ ಮತ್ತು ಪ್ರತಿವಾಸುದೇವರಲ್ಲಿ

'ರಾಮಾಯಣ. ಮಹಾಭಾರತ, ಭಾಗವತಾದಿ ಹಿಂದೂ ಧರ್ಮದ ಧಾರ್ಮಿಕ ಗ್ರಂಥಗಳ ಪಾತ್ರಗಳಾದ 'ಶ್ರೀರಾಮ, ಲಕ್ಷ್ಮಣ, ರಾವಣ, ಬಲರಾಮ, ಕೃಷ್ಣ, ಜರಾಸಂಧ'ರ ಕಥೆಗಳೂ ಸೇರಿಕೊಂಡಿವೆ.

ಪಂಪ, ರನ್ನರಿಂದ ಮಹಾಭಾರತದಲ್ಲಿರುವ 'ಕೃಷ್ಣ'ನ ವ್ಯಕ್ತಿತ್ವ ಮೊಟ್ಟ ಮೊದಲು ಕನ್ನಡಿಗರಿಗೆ ಪರಿಚಯವಾದರೆ, ಚಾವುಂಡರಾಯನಿಂದ ಕೃಷ್ಣ, ವಸುದೇವ, ದೇವಕಿ, ಪ್ರದ್ಯುಮ್ನ ಬಲರಾಮ, ಜರಾಸಂಧರಲ್ಲದೆ, ರುಕ್ಮಿಣಿ, ಸತ್ಯಭಾಮೆಯರನ್ನೊಳಗೊಂಡ ಕೃಷ್ಣನ ಸಂಸಾರದ ಚಿತ್ರ ಪರಿಚಯವಾಗುತ್ತದೆ. ಕೃಷ್ಣನ ಎಂಟು ಪತ್ನಿಯರಲ್ಲಿ 'ಮಹಾದೇವಿ'ಯ ಪಟ್ಟಕ್ಕೆ 'ರುಕ್ಮಿಣಿ' ಮಾತ್ರ ಅರ್ಹಳೆಂಬ ವಿಚಾರವನ್ನು ಚಿತ್ರಿಸುವ ಒಂದು ಪ್ರಸಂಗದ ಸೊಬಗು ಹೀಗಿದೆ:

ಜಂಬೂದ್ವೀಪದ ಭರತದ ದ್ವಾರಾವತಿ ನಗರದೊಳಿರ್ದು ವಾಸುದೇವಂ ತನ್ನೆಣ್ಬರ್ ದೇವಿಯರೊಳಾರ್ಗೆ ಮಹಾದೇವಿಪಟ್ಟಮಂ ಕಟ್ಟುವವೆಂದು ದೇವಕಿಯುಂ ಕರೆದು ಪರೀಕ್ಷಿಸಿವೆನೆ ಸತ್ಯಭಾಮಾದಿಗಳೆಣ್ಬರೊಳಂ ಕ್ರೋಧ ಮಾನ ಮಾಯಾಕಲಹ ಪ್ರಿಯತ್ವ ಪೈಶೂನ್ಯ ಡಂಭತ್ವಾದಿಗಳೊಳವವಱಿಂ ಮಹಾದೇವಿಪಟ್ಟಂಗಟ್ಟಲ್ಕೆ ಯೋಗ್ಯಮಲ್ಲರೆಂದು ರೂಪಂ ವಿಜ್ಞಾನ ವಿನಯಮೃದು ವಚನಾನು ಕೂಲತ್ವಾದಿಗಳನ್ಯ ಸಾಧಾರಣಾನ್ವಿತೆಯರಪ್ಪ ರುಕ್ಮಿಣಿಗೆ ಮಹಾದೇವಿ ಪಟ್ಟಂಗಟ್ಟುವಮೆಂದಱಿಪೆ ರುಕ್ಮಿಣಿಯಂ ಪರಿಗ್ರಹಿಸಿ ವಾಸುದೇವನತಿ ಸುರಭಿ ಪರಿಮಳಮಪ್ಪ ರುಕ್ಮಿಣಿಯ ತಂಬುಲಮಂ ಮೇಲುದುದಸೆಱಂಗಿನೊಳ್ಕ ಟ್ಟಿಕೊಂಡು ಪೋಗಿ ಸತ್ಯಭಾಮೆಯ ಮೃದು ಶಯನತಳದೊಳ್ ಪುಸಿಯನೆ ಮಱದೊಱಗಿದಂತಿರ್ಪುದುಮಿದು ಸುಗಂಧದ್ರವ್ಯಮಿದಂ ತನ್ನ ನಲ್ಲಳ್ಗೆ ಕಟ್ಟಿ ಮಡಗಿಟ್ಟನಕ್ಕುಮೆಂದು ಸೈರಿಸದೆ ಸತ್ಯಭಾಮೆ ಮೇಲುದಱ ಸೆಱಂಗಿನೊಳ್ಕಟ್ಟಿರ್ದ ತಂಬುಲಮಂ ಬಿಟ್ಟುಕೊಂಡರೆದು ಮೈಯೊಳ್ ಪೂಸಿಕೊಳುವುದುಂ ಕೃಷ್ಣನೆರ್ದು ಪೆಱರ ಮುಖಭೂಷಣಮೆ ನಿನಗೆ ಶರೀರಭೂಷಣಮಾಯ್ತೆಂದು ನಗುವುದುಂ ಸತ್ಯಭಾಮೆ ನಾಣ್ಚಿ ತನ್ನಟಿಪನೆ ಚತುರ್ಮಾಡಿ ನೀಮೇಕೆ ನಗುವಿರೆಮ್ಮಕ್ಕನ ತಂಬುಲಂ ಪವಿತ್ರಮದರ್ಕೆ ದೋಷವಾವುದೆಂದು ನಗೆಮಾಡಿ ಕಳೆದೆಮ್ಮಕ್ಕನಂ ಕಾಣಲರ್ಥಿ

ಯಾದುದಾಕೆಯಂ ನೋೞ್ಪೆನೆನೆ ಕೇಶವನಂತೆ ಗೆಯ್ಯೆಮೆಂದೊಂದು ದಿವಸಂ ಬನದೊಳಶೋಕೆಯ ಮರದಡಿಯೊಳ್ ಪೆಱ್ರಜೆಯದಂತು ಸತ್ಯಭಾಮೆಯಂ ಬಂಚಿಸಲೆಂದು ರುಕ್ಮಿಣಿಯನಸ್ಪಂದಿತೆಯಾಗಿರಿಸಿ ವನವಿಹಾರದೊಳಿರ್ಪುದುವಾಕೆಯುಂ ಸತ್ಯಭಾಮೆ ಕಂಡು ವನದೇವತೆಯೆಂದು ಬಗೆದು ಪರಿವಾರ ಸಹಿತಂ ಗಂಧಪುಷ್ಪಾದಿಗಳಿಂದರ್ಚಿಸಿ ಪೊಡಮಟ್ಟು

ಎನಗೆ ಮಧುಸೂಧನಂ ನ
ಲ್ಲನಕ್ಕೆ ರುಕ್ಮಿಣಿಯನೊಲ್ಲದಿರ್ಕನಿತೊಂದಂ
ವನಯಕ್ಷಿ ಮಾೞ್ಪುದೆಂದಾ
ವನಿತೆ ಪದಾಂಬುರುಹವಿನತೆಯಪ್ಪುದುಮಾಗಳ್

ತರುಗುಲ್ಮಾಂತರಿತನಾಗಿರ್ದ ಕೃಷ್ಣಂ ಬಂದು ನಿನ್ನೊಡಪುಟ್ಟಿದರಂ ಕಾಣಲ್ಬಯಸುತ್ತಿರ್ದಳೀಗಳ್ ವಿನಯದಿಂ ಕಂಡುದೊಳ್ಳಿತ್ತಾದುದೆಂಬುದುಂ ಸತ್ಯಭಾಮೆ ಸಿಗ್ಗಾಗದೆಮ್ಮಕ್ಕನಂ ನೋಂತು ಕಂಡೊಡೆ ದೋಷಮಿಲ್ಲಂ ನಿಮಗೇನೆಂದು ನಗೆಮಾಡಿ ಕಳೆಯೆ ಕೃಷ್ಣನೆಮಗೇಗೆಟ್ಟಪುದೆಂದು.

ಇಲ್ಲಿ ನಿರಲಂಕಾರದ, ನೇರ ನಿರೂಪಣೆಯ ಭಾಷೆ ಸ್ಪಷ್ಟವಾಗಿದ್ದು ಓದುಗರನ್ನು ತಲುಪುತ್ತದೆ. ಈ ಚಿತ್ರಗಳಲ್ಲಿ ನವಿರಾದ ಹಾಸ್ಯ, ಲವಲವಿಕೆ ಕಾಣುತ್ತದೆ.

ಹಿಂದೂ ಪುರಾಣಗಳಲ್ಲಿ ಬರುವ 'ನಾರದ'ನನ್ನು ಕನ್ನಡಕ್ಕೆ ಮೊದಲು ಪರಿಚಯಿಸಿದವರು 'ಜೈನಕವಿ'ಗಳು. ಅವರಲ್ಲಿ ಚಾವುಂಡರಾಯನೂ ಒಬ್ಬ. ಪಂಪ, ಪೊನ್ನರು 'ಕಲಹಪ್ರಿಯ' ನಾರದನನ್ನು ಪ್ರಸ್ತಾಪಿಸಿದ್ದರೆ, ಚಾವುಂಡರಾಯನು ಅದರೊಂದಿಗೆ 'ಇಷ್ಟಾರ್ಥಸೂಚಕ'ನೆಂದೂ ಹೇಳುತ್ತಾನೆ. ನಾರಾದ ವಾಸುದೇವನಾದ 'ಅನಂತಕೀರ್ತಿ'ಗೂ, ಪ್ರತಿವಾಸುದೇವನಾದ 'ದಮಿತಾರಿ'ಗೂ ಯುದ್ಧವಾಗುವಂತೆ ಮಾಡಿ, ದಮಿತಾರಿ ಸಾಯಲು ಕಾರಣಕರ್ತನಾಗುತ್ತಾನೆ,.

ಚಾವುಂಡರಾಯಪುರಾಣ ಮೂಲತಃ ಗದ್ಯಕಾವ್ಯವಾದರೂ, 24

ತೀರ್ಥಂಕರರ ಕಥೆಗಳು 'ಪುರಾಣಂ' ಎಂಬ ಹೆಸರನ್ನು ಪಡೆದು 'ಕಂದಪದ್ಯ'ದಿಂದ ಆರಂಭವಾಗುತ್ತವೆ. ಕಂದಪದ್ಯದಲ್ಲಿ ಆಯಾ ತೀರ್ಥಂಕರನನ್ನು ಸ್ತುತಿಸಿ, 'ಮೋಕ್ಷಲಕ್ಷ್ಮೀ, ಪರಮಸುಖ' ಮೊದಲಾದ 'ಅಲೌಕಿಕ ವಿಷಯ'ಗಳನ್ನು ನೀಡಿ ಆಶೀರ್ವದಿಸಲಿ ಎಂಬ ಪ್ರಾರ್ಥನೆ ಇದೆ. ಅಂತ್ಯದಲ್ಲಿ

ಇದು ಸಕಲಶಾಸ್ತ್ರ ಸಂಯಮಸಂಪನ್ನ
ಶ್ರೀಮದಜಿತಸೇನಭಟ್ಟಾರಕ ಚರಣಕಮಲ
ಚಂಚರೀಕಂ ಧರ್ಮವಿಜಯ
ಶ್ರೀಮಚ್ಚಾವುಂಡರಾಯ ವಿರಚಿತ ತ್ರಿಷಷ್ಟಿ
ಲಕ್ಷಣ ಮಹಾಪುರಾಣದೊಳ್ ಸಮಾಪ್ತಂ"

ಎಂಬ ವಾಕ್ಯಗಳಿದ್ದು ಪ್ರತಿಯೊಬ್ಬ ತೀರ್ಥಂಕರನ ಹೆಸರಿನ ನಂತರ 'ಪುರಾಣಂ' ಎಂಬ ಪದ ಬಂದು ಮುಕ್ತಾಯವಾಗುತ್ತದೆ. ಬಲದೇವ, ವಾಸುದೇವ ಮತ್ತು ಚಕ್ರವರ್ತಿಗಳ ಚರಿತಗಳು ಸಂಪೂರ್ಣ ಗದ್ಯದಲ್ಲಿದ್ದು, ಯಾವ ಸಮಾಪ್ತಿಯ ವಾಕ್ಯಗಳಿಲ್ಲದೆ ಮುಕ್ತಾಯವಾಗುತ್ತವೆ.

ಕಾವ್ಯದ ಅನೇಕ ಕಡೆಗಳಲ್ಲಿ ಕಂದಪದ್ಯಗಳು ಬರುತ್ತಲೇ ಇರುತ್ತವೆ. ಹಾಗೆಯೇ 'ಆರ್ಯೆ' 'ಶ್ಲೋಕ' ಎಂಬ ಹೆಸರಿನ ಸಂಸ್ಕೃತ ವಾಕ್ಯಗಳು, ಪ್ರಾಕೃತ 'ಗಾಹೆ'ಗಳೂ ಸೇರಿವೆ. 'ಶಾಂತಿಪುರಾಣ'ದಲ್ಲಿ 'ಕವಿಪರಮೇಶ್ವರರ ವೃತ್ತ', 'ಕವಿಪರಮೇಶ್ವರರ ಶ್ಲೋಕ', 'ಪೂರ್ವಾಚಾರ್ಯರ ಶ್ಲೋಕ' 'ಜಿನಸೇನಾಚಾರ್ಯರ ಶ್ಲೋಕಂ' ಎಂಬ ಉಪಶೀರ್ಷಿಕೆಗಳೊಂದಿಗೆ ವೃತ್ತ, ಶ್ಲೋಕಗಳಿವೆ. 'ಮುನಿಸುವ್ರತ ಪುರಾಣಂ'ನಲ್ಲಿ ಆರಂಭದ ಕಂದಪದ್ಯವಲ್ಲದೆ 7 ಗಾಹೆಗಳು ಗದ್ಯದೊಂದಿಗೆ ಬೆರೆತಿವೆ. 'ವರ್ಧಮಾನ ಪುರಾಣಂ'ನಲ್ಲಿ 'ಪೂರ್ವಾಚಾರ್ಯರ ವೃತ್ತಂ' 'ಕವಿಪರಮೇಶ್ವರ ರಚಿತ 'ಜಿನಧರ್ಮ ದೀಪಿಕಾಷ್ಟಕದೊಳಗಣ ವೃತ್ತಂ' ಎಂಬ ಉಪಶೀರ್ಷಿಕೆಗಳಿದ್ದು, ಕವಿಪರಮೇಶ್ವರನ ಈಗ ಅನುಪಲಬ್ಧವಾಗಿರುವ ಕೃತಿಯ ಹೆಸರನ್ನೂ ಉಲ್ಲೇಖಿಸಿರುವುದು ಗಮನಾರ್ಹ.

ಪ್ರಥಮ ತೀರ್ಥಂಕರರಾಗಿ, 1008 ಹೆಸರುಗಳಿಂದ ಕರೆಯಲ್ಪಡುವ

'ಋಷಭನಾಥ'ನ ಪುರಾಣವನ್ನು ಹೇಳುವ 'ಆದಿಪುರಾಣಂ' ಎಂಬ ಮೊದಲನೆಯ ಅಧ್ಯಾಯ ಅವನ ಭವಾವಳಿ, ಪಂಚಕಲ್ಯಾಣ, ವೈರಾಗ್ಯ ಪ್ರಾಪ್ತಿಯಾದ ಘಟನೆ, ಆಹಾರ ಪಡೆದ ಪ್ರಸಂಗವಷ್ಟೇ ಅಲ್ಲದೆ, ಮಡದಿ, ಮಕ್ಕಳು, ಮೊಮ್ಮಕ್ಕಳ ವಿಷಯುಗಳೆಲ್ಲಾ ಬಹಳ ವಿಸ್ತಾರವಾಗಿ ನಿರೂಪಿತವಾಗಿ, 73 ಪುಟಗಳ ವ್ಯಾಪ್ತಿಯನ್ನು ಹೊಂದಿದ್ದು, ಇದರಲ್ಲಿ ಒಟ್ಟು 54 ಕಂದ, ವೃತ್ತ, ಗಾಹೆಗಳಿವೆ. ಹಾಗೆಯೇ ಕಡೆಯ ತೀರ್ಥಂಕರನಾದ ಮಹಾವೀರನ 'ವರ್ಧಮಾನ ಪುರಾಣಂ' ಕೂಡಾ 63 ಪುಟಗಳಷ್ಟು ದೀರ್ಘವಾಗಿದೆ. ಇವುಗಳಲ್ಲದೆ 54 ಪುಟಗಳಲ್ಲಿರುವ 'ಶಾಂತಿಪುರಾಣಂ', 36 ಪುಟಗಳಲ್ಲಿರುವ 'ನೇಮಿನಾಥ ಪುರಾಣಂ'ಗಳೇ ದೀರ್ಘ ಕಥನಗಳು. ಉಳಿದೆಲ್ಲರ ಕಥೆಗಳು ಕೆಲವೇ ಪುಟಗಳಲ್ಲಿ ಮುಗಿದುಹೋಗಿವೆ. ಬಲದೇವ, ವಾಸುದೇವರ ಕಥೆಗಳಲ್ಲೆಲ್ಲಾ 31 ಪುಟಗಳಷ್ಟು ದೀರ್ಘವಾಗಿರುವ ಕಥನವೆಂದರೆ 'ರಾಮಲಕ್ಷ್ಮಣರ ಚರಿತಂ.'

ಈ ಸಮೀಕ್ಷೆಯಿಂದ ಚಾವುಂಡರಾಯ ಕೆಲವು ತೀರ್ಥಂಕರರ ಚರಿತೆಯನ್ನು ಮಾತ್ರ ವಿಸ್ತಾರವಾಗಿ ನಿರೂಪಿಸಿ, ಉಳಿದವುಗಳನ್ನು ಸಂಕ್ಷಿಪ್ತವಾಗಿಸಿದ್ದಾನೆ ಎಂದು ತಿಳಿಯುತ್ತದೆ. ಹೀಗೆ ಸಂಸ್ಕೃತ ಮಹಾಪುರಾಣಗಳ ಕಥೆಯನ್ನು 'ಸಂಗ್ರಹ' ರೂಪದಲ್ಲಿ ಅನುವಾದಿಸುವ ಕ್ರಮಕ್ಕೆ ಕವಿಪರಮೇಶ್ವರನ 'ವಾಗರ್ಥಸಂಗ್ರಹ' ವೇ ಪ್ರೇರಣೆಯಾಗಿರಬೇಕು. ಆದರೆ ಮೂಲಕಾವ್ಯದ ಕಥಾಸ್ರೋತಕ್ಕೆ ಧಕ್ಕೆಯಾಗದಂತೆ ಸಂಗ್ರಹಿಸಿರುವಲ್ಲಿ ಈತನ ವೈಶಿಷ್ಟ್ಯ ಅಡಗಿದೆ.

ಉದಾ: ಪಂಪನ ಆದಿಪುರಾಣದಲ್ಲಿರುವ ರಸಪೂರ್ಣ ಸನ್ನಿವೇಶಗಳಲ್ಲಿ 'ಭರತ–ಬಾಹುಬಲಿ'ಯ ಪ್ರಸಂಗವೂ ಒಂದು. ಭರತನ ದುರಂಹಕಾರ, ಸ್ವಾರ್ಥ; ಬಾಹುಬಲಿಯ ವೈರಾಗ್ಯ; ಸಾರ್ವಕಾಲಿಕ ಸತ್ಯವನ್ನು ಧ್ವನಿಸುವ ಸಂಸಾರದ ನಶ್ವರತೆಯ ವಿವರಣೆ – ಇಂದಿಗೂ ಪ್ರಸ್ತುತ. ಇದನ್ನು ಚಾವುಂಡರಾಯ ಕೇವಲ ಎಂಟು ವಾಕ್ಯಗಳಲ್ಲಿ ವಿವರಿಸಿ, "ತಮ್ಮಣ್ಣನ ರಾಜ್ಯಮೋಹದೊಳಾದ ಅಜ್ಞತೆಗಂ ಸಂಸಾರದ ಅಸಾರತೆಗಂ ಪೇಸಿ ಭರತನಲ್ಲಿಗೆ ಬಂದು ಅಣ್ಣ ಸಿಗ್ಗನುಳಿದು ನೀನೀ ಸಾಮ್ರಾಜ್ಯಮನಾವಗಂ ಕೈಕೊಳ್ವುದೆನಗಿದೇನುಂ ವಾರ್ತೆಯಲ್ಲೆಂದು

ತಪಶ್ಚರಣ ನಿರತಮನನಾದಂ"ಎಂದು ನಡೆದ ಘಟನೆಯನ್ನು ಮಾತ್ರ ನಿರಲಂಕಾರವಾಗಿ ವಿವರಿಸಿದ್ದಾನೆ. ರಾಯನ ಸಂಕ್ಷಿಪ್ತ ಶೈಲಿಗೆ ಇದೊಂದು ಉತ್ತಮ ನಿದರ್ಶನ.

ಭಾಷೆಯ ದೃಷ್ಟಿಯಿಂದ ಗಮನಿಸಿದಾಗ, ಚಾವುಂಡರಾಯ ಪುರಾಣದ ಭಾಷೆ ಪ್ರಧಾನವಾಗಿ 'ಹಳಗನ್ನಡ'. ಅಲ್ಲಲ್ಲಿ ಕೆಲವು 'ಪೂರ್ವದ ಹಳಗನ್ನಡ'ದ ಪ್ರಯೋಗಗಳು ಪ್ರವೇಶಿಸುತ್ತವೆ.

ಚಾವುಂಡರಾಯ ಉತ್ತಮ ಕಥೆಗಾರನೆಂದು ಮಾತ್ರ ಹೇಳಬಹುದು. ಡಾ.ಹಂ.ಪ.ನಾ.ರವರು ಹೇಳುವಂತೆ "ಕಾವ್ಯದೃಷ್ಟಿ ಗೌಣ, ಶಾಸ್ತ್ರದೃಷ್ಟಿ ಪುರಾಣದೃಷ್ಟಿ ಮತ್ತು ಕಥಾದೃಷ್ಟಿ ಪ್ರಧಾನವಾಗಿದೆ" ಎಂಬುದೇ ಚಾವುಂಡರಾಯನ ಶೈಲಿ. ಪದ್ಯದಲ್ಲಿರುವ ಸಂಸ್ಕೃತದ ಪುರಾಣಕೃತಿಗಳ ಕಥೆಯನ್ನು ಸ್ವಾತಂತ್ರ್ಯವಹಿಸದೆ, ಯಥಾವತ್ತಾಗಿ ಗದ್ಯದಲ್ಲಿ ಸಂಕ್ಷಿಪ್ತವಾಗಿ ನಿರೂಪಿಸುತ್ತಾ ಹೋಗಿದ್ದಾನೆ. ಕನ್ನಡ ಜೈನ ಸಾಹಿತ್ಯಕ್ಕೆ ಉತ್ತಮ ಕೊಡುಗೆ ನೀಡಿರುವ ಚಾವುಂಡರಾಯ ಚಿರಸ್ಮರಣೀಯ.

ಆಕರಗ್ರಂಥಗಳು:

1. ಚಾವುಂಡರಾಯಪುರಾಣ - ಒಂದು ಅಧ್ಯಯನ: ಡಾ.ಎಸ್.ಪಿ. ಪಾಟೀಲ, ವೈಶಾಲಿ ಪ್ರಕಾಶನ, ಧಾರವಾಡ, 1993
2. ವಿಶ್ವಕೋಶ, ಮೈಸೂರು ವಿಶ್ವವಿದ್ಯಾಲಯ
3. ಪ್ರೊ.ಕಮಲಾ ಹಂಪನಾ (ಸಂ): ಶಿವಕೋಟ್ಯಾಚಾರ್ಯ ಚಾವುಂಡರಾಯ ಸಂಪುಟ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2006

****

ಛಂದೋಂಬುಧಿ

– ಡಾ. ಜ್ಯೋತಿ ಶಂಕರ್
ಮುಕ್ತ ಗಂಗೋತ್ರಿ, ಮೈಸೂರು

ಅತಿಮಧುರಪ್ರಸನ್ನಪರಿಪೂರ್ಣರಸೋಚಿತೆ ರಂಜಿತಾರ್ಥಸಂ
ಯುತೆ ಸಕಲಾಗಮೋಕ್ತಿಯುತಲಕ್ಷಣಲಕ್ಷ್ಯ ಸಮಸ್ತವಸ್ತುಸಂ
(ಗ)ತೆ ಸರಸೀಜಗರ್ಭನ ಮುಖಾಂಬುಜದಿಂದಮಗಲ್ದು ಬಂದು ಭಾ
ರತಿ ನೆಲಸಿರ್ಕೆ ಕೂರ್ತು ಮುಖಪಂಕಜದೊಳ್ ಕವಿ ನಾಗವರ್ಮನಾ ॥

ನಾಗವರ್ಮ ರಚಿಸಿದ ವಿಶಿಷ್ಟ ಬಗೆಯ ಕೃತಿ ಛಂದೋಂಬುಧಿ. ಕನ್ನಡ ಭಾಷೆಯಲ್ಲಿ, ಕನ್ನಡಕ್ಕೆ ಬೇಕಾದ ವರ್ಣಗಣ, ಯತಿ, ಛಂದೋವರ್ಗ, ದೇಶ್ಯವೃತ್ತಗಳು ಮುಂತಾದ ಬಹುಮುಖ್ಯವಾದ ಸಂಗತಿಗಳನ್ನು ನಾಗವರ್ಮ ತನ್ನ ಕೃತಿಯಲ್ಲಿ ವಿಸ್ತಾರವಾಗಿಯೇ ಚರ್ಚಿಸಿದ್ದಾನೆ. ಆರಂಭದಲ್ಲಿಯೇ ಕವಿ ತನ್ನ ವಿವರಗಳನ್ನು ನೀಡುತ್ತಾನೆ.

ಜಗದೊಳಗಿದೊಂದು ಮಿಗಿಲೆನೆ
ನೆಗಟ್ದಿರ್ಪುದು ವೆಂಗಿವಿಷಯಮಾ ವಿಷಯದೊಳೊ
ಳ್ಪಗಣಿತಮೆನೆ ಸಪ್ತಗ್ರಾ
ಮಗಳೊಳಮಾ ವೆಂಗಿಪಟು ಕರಂ ಸೊಗಯಿಸುಗುಂ ॥

ಅರಸಂ ರಕ್ಕಸಗಂಗಂ
ಗುರುಗಳ್ ನೆಗಳ್ದಜಿತಸೇನ ಪಂಡಿತದೇವರ್
ಪೊರೆದ ನೃಪಸಣ್ಣನೆನೆ ಮ
ಚ್ಚರಿಸುವರಾರ್ ನಾಕಿಯಿರುಳೊಳೇಂ ಪುಟ್ಟಿದನೇ ॥

ವೆಂಗಿ ವಿಷಯದ ಸಪ್ತಗ್ರಾಮಗಳಲ್ಲಿ ಒಂದಾದ ವೆಂಗಿಪಟುವಿನ ಕೌಂಡಿನ್ಯಗೋತ್ರದ; ವೆಣ್ಣಮಯ್ಯ ಮತ್ತು ಕೌಂಡಿಕಬ್ಬೆ ದಂಪತಿಗಳ ವಂಶದಲ್ಲಿ ನಾಗವರ್ಮ ಜನಿಸಿದನು. ತಂದೆ ವೆಣ್ಣಮಯ್ಯ ತಾಯಿ ಪೋಟಿಕಬ್ಬೆ, ಆಶ್ರಯದಾತ ಗಂಗರ ದೊರೆ ರಕ್ಕಸಗಂಗ, ಗುರು ಅಜಿತಸೇನ ಪಂಡಿತದೇವ, ಪೋಷಿಸಿದವನು ಗಂಗರ ಮಂತ್ರಿ ಚಾವುಂಡರಾಯ. ಈತನ ಕಾಲ ಸುಮಾರು 990. ಈತ **ಸಯ್ಯಡಿಯ ನಾಗವರ್ಮನ ಮತದಿಂ** ಎಂದು ಪೀಠಿಕೆಯಲ್ಲೇ ಹೇಳಿರುವುದರಿಂದ ಮತ್ತು ಶಿವನನ್ನು ಪ್ರಾರ್ಥಿಸಿರುವುದರಿಂದ, ಈತ ಸಯ್ಯಡಿ ಎನ್ನುವ ಅಗ್ರಹಾರದಲ್ಲಿ ವಾಸಿಸುತ್ತಿದ್ದು, ಶಿವ ಭಕ್ತನೆನ್ನುವುದು ತಿಳಿದುಬರುತ್ತದೆ.

ಪ್ರಾಸಾನುಪ್ರಾಸಕ್ಕದು
ಲೇಸಾಗೆ ಪೆಸರ್ ಕಡಂ (ಗೆ) ಕನ್ನಡದಿಂ ಪೇ
ಳ್ದಾಸುಕರಕವಿಯ ಬಲ್ಮೆಯ
ನಾ ಸುಕವಿಪ್ರಕರಮಱಿದು ಮಚ್ಚುಗುಮಲ್ತೇ ॥

ನಾಗವರ್ಮ ಕನ್ನಡ ಭಾಷೆಯಲ್ಲಿ ನಾನು ರಚಿಸುತ್ತಿರುವ ಈ ಕಾವ್ಯ ಎಲ್ಲ ವಿದ್ವಾಂಸರಿಗೂ ಮೆಚ್ಚುಗೆಯಾಗಬಲ್ಲುದು ಎಂದು ತನ್ನ ಕೃತಿಯ ಹಿರಿಮೆಯನ್ನು ಹೇಳಿದ್ದಾನೆ. ಅದಲ್ಲದೆ ನಾಗವರ್ಮ ತಾನೇ ತಿಳಿಸಿರುವಂತೆ ಪಿಂಗಲ, ಜಯದೇವ, ಭರತ, ಜನಾಶ್ರಯ ಮುಂತಾದ ಸಂಸ್ಕೃತ ಭಾಷೆಯ ಶಾಸ್ತ್ರಕಾರರನ್ನು ಹಾಗೂ, ವಿರಹಾಂಕ ಸ್ವಯಂಭೂ ಮುಂತಾದ ಪ್ರಾಕೃತ ಶಾಸ್ತ್ರಕಾರರನ್ನು ಅನುಸರಿಸಿದ್ದರೂ, ತನ್ನದೇ ಆದ ಹೊಸಮಾರ್ಗವನ್ನು ಕಂಡುಕೊಂಡಿರುವುದು ವಿಶೇಷವಾಗಿದೆ. ಅದರಲ್ಲೂ ಈ ಕೃತಿಯನ್ನು ಯಾರು ಯಾರಿಗೆ ಹೇಳಿದರು ಎನ್ನುವ ವಿವರಗಳನ್ನು ಕೊಡುವ ನಾಗವರ್ಮ, ಪರಮೇಶ್ವರ ಪಾರ್ವತಿಗೆ ಹೇಳಿದ ಮಾದರಿಯಲ್ಲಿಯೇ, ತನ್ನ ಪತ್ನಿಗೆ ನಿರೂಪಣೆಯನ್ನು ನೀಡಿದ್ದಾನೆ.

ವಿಧುಬಿಂಬಾನನೆ ಛಂದೋಂ

ಬುಧಿಯೆಂಬುದಿದೆನ್ನ ಪೆಸರ ಛಂದಮಿದಂ ಕೇಳ್

ಬುಧಸಮಿತಿ ಮೆಚ್ಚೆ ಪೇಟ್ವೆಂ

ಮಧುರರಸಪ್ರಚುರವಚನರಚನೆಗಳಿಂದಂ ॥

ನಾಗವರ್ಮನ ಕಾಲದಲ್ಲಿಯೇ ಪತ್ನಿಗೆ ಶಾಸ್ತ್ರ ವಿಷಯಗಳನ್ನು ಹೇಳುವ ಮಾದರಿಯ ಅಭ್ಯಾಸವಿದ್ದುದು, ಸಂಸ್ಕೃತಿಯ ದೃಷ್ಟಿಯಿಂದ ಮುಖ್ಯವೆನಿಸುತ್ತದೆ. ಅಧ್ಯಯನಕ್ಕೆ ಅನುಕೂಲವಾಗುವಂತೆ ನಾಗವರ್ಮ ತನ್ನ ಕೃತಿಯನ್ನು ಆರು ಅಧ್ಯಾಯಗಳಲ್ಲಿ ವಿಭಾಗಿಸಿದ್ದಾನೆ:

ಕ್ರಮಸಂಖ್ಯೆ	ವಿಷಯ
೧.	ಸಂಜ್ಞಾಪ್ರಕರಣಂ
೨.	ಸಮವೃತ್ತ ಪ್ರಕರಣಂ
೩.	ಮಾಲಾವೃತ್ತಾರ್ಧಸಮವಿಷಮಾಧಿವೃತ್ತಪ್ರಕರಣಂ
೪.	ಕಂದಾದಿಮಾತ್ರಾವೃತ್ತಪ್ರಕರಣಂ
೫.	ಕರ್ಣಾಟವಿಷಯಜಾತಿವೃತ್ತಪ್ರಕರಣಂ
೬.	ಷಟ್ಪ್ರತ್ಯಯವಿವರಣಪ್ರಕರಣಂ

"ನಾಗವರ್ಮನು ಅಂಶಗಣಸಂಜ್ಞೆಗಳನ್ನು (ಬ್ರಹ್ಮ ವಿಷ್ಣು ರುದ್ರರು) ತಾನೇ ಕಲ್ಪಿಸಿರುವಂತೆ ತೋರುವುದು. ತುಂಬ ಹೃದಯಂಗಮವಾದ ಕಲ್ಪನೆಯಿದು. ಘಟಕದ ಆರಂಭವನ್ನು ಬ್ರಹ್ಮ (ಸೃಷ್ಟಿಕರ್ತ)ವೆಂದೂ ಅಂತ್ಯವನ್ನು ರುದ್ರ (ಲಯಕರ್ತ) ವೆಂದೂ ನಡುವೆ ನಡುವೆ ನಿಂತ ಗಣವಿಸ್ತಾರವನ್ನು ವಿಷ್ಣು (ಸ್ಥಿತಿಕರ್ತ)ವೆಂದೂ ಕರೆದಿರುವಲ್ಲಿ ಒಂದು ಬಗೆಯ ತರ್ಕಬದ್ಧತೆಯಿದೆ. ವೃತ್ತಗಳಲ್ಲಿ ವ್ಯಾಪ್ತವಾದ ಶಕ್ತಿ ವಿಷ್ಣುವಿನದೇ.

ಅದು ಸುಸ್ಥಿತಿಯ ಜೀವಾಳ, ಬೆಳವಣಿಗೆಯ ಬೆನ್ನ ಹುರಿ".
(ಛಂದೋಂಬುಧಿ ಪ್ರಸ್ತಾವನೆ, ಡಾ. ಟಿ.ವಿ. ವೆಂಕಟಾಚಲಶಾಸ್ತ್ರೀ)

ಮಾತ್ರಾಗಣಗಳು ರಚನೆಯಾಗಬೇಕಾದರೆ ಲಯಬದ್ಧ ವಾಗಿರಬೇಕು, ಅಲ್ಲದೇ ಬ್ರಹ್ಮ ವಿಷ್ಣು ರುದ್ರ ಗಣಗಳು ಸಮಾನ ಮಾತ್ರೆಗಳಿಂದಲೇ ಇರಬೇಕು, ಆಗಲೇ ಅದರ ಛಂದೋವಿನ್ಯಾಸ ಮತ್ತು ಲಯದ ಸೊಗಸು ರುಚಿಸುವುದು ಎಂದು ನಾಗವರ್ಮ ಅದಕ್ಕೊಂದು ಲಕ್ಷಣ ಪದ್ಯವನ್ನು ನೀಡಿದ್ದಾನೆ.

ಮುರರಿಪು ಬೊಮ್ಮಂ ಮುರರಿಪು ಬೊಮ್ಮಂ ಮುರರಿಪು ಶೂಲಧರಂ
ಸರಸದೆ ನಿಲ್ಕುಂ ಖರಗಣಮಕ್ಕುಂ ಸುರುಚಿರ ಮಾತ್ರೆಗಳಿಂ
ನಿರುಪಮದಿಂದಂ ಪರಿಮಿತಮಪ್ಪಂತಿರೆ ಯತಿ ಖತಿನಿಯತಂ
ಬರೆ ತರಳಾಕ್ಷೀ ಧರೆಯೊಳಿದೆತ್ತಂ ಕರಮೆಸವಕ್ಕರಿಕೆ ॥

ಈ ಪದ್ಯ ಅತ್ಯಂತ ಸತ್ವಯುತವಾಗಿ ಗಣಗಳನ್ನು ಬಳಸುವ ರೀತಿ ಮತ್ತು ಅದರಲ್ಲಿ ಇರಬಹುದಾದ ಮಾತ್ರೆಗಳ ವಿನ್ಯಾಸವನ್ನೂ, ಔಚಿತ್ಯವನ್ನೂ ತಿಳಿಸಿದೆ. ಅದಕ್ಕನುಗುಣವಾಗಿ ಮೂರುಗಣಗಳ ಒಳವಿನ್ಯಾಸಗಳನ್ನು ಪರಿಶೀಲಿಸಬಹುದು.

ಬ್ರಹ್ಮಗಣದ 4 ವಿನ್ಯಾಸಗಳು

ಅಜ, ಜಳಜಸಂಭವ, ನಾಕಿ, ಪದ್ಮಭವ, ಪೊಡೆಯಲರವಂ, ಬಿಸರುಹಜನ್ಮ ಬಿಸರುಹೋದ್ಭವ, ಬೊಮ್ಮ, ವನಜಸಂಭವ.

ಬ್ರಹ್ಮಂ	– –	ಧಾತೃ	– ᴗ
ದ್ರುಹಿಣಂ	ᴗ ᴗ –	ಸುರಪ	ᴗ ᴗ ᴗ

ವಿಷ್ಣುಗಣದ 8 ವಿನ್ಯಾಸಗಳು

ಅಧೋಕ್ಷಜ ಉಪೇಂದ್ರ, ಜಳರುಹೋದರ, ಬಿಸರುಹನೇತ್ರ, ಮದನನತಂದೆ, ಮಂದರಧರ, ಮುರರಿಪು, ವನರುಹೋದರ, ಹರಿ

ಗೋವಿಂದಂ	– – –	ಜಲಜಾಕ್ಷಂ	ᴗ ᴗ – –
ಮಾಧವಂ	– ᴗ –	ಸ್ಮರಪಿತಂ	ᴗ ᴗ ᴗ –
ಕಂಸಾರಿ	– – ᴗ	ನರಕಾರಿ	ᴗ ᴗ – ᴗ
ಶ್ರೀಪತಿ	– ᴗ ᴗ	ಮುರರಿಪು	ᴗ ᴗ ᴗ ᴗ

ರುದ್ರಗಣದ 16 ವಿನ್ಯಾಸಗಳು

ಈಶ್ವರ, ಕಂದರ್ಪರಿಪು, ಕಾಮಾಂತಕ, ಜಡೆಯ ಶಂಕರ, ಮದನಹರ, ಶಂಕರ, ಶೂಲಧರ, ಹರ

ಗಂಗಾಧೀಶಂ	– – – –	ಗಿರಿಜಾನಾಥಂ	UU – – –
ನೀಲಕಂಠಂ	– U – –	ವೃಷಭಲಕ್ಷ್ಮಂ	UUU – –
ಕಾಮಾಂತಕಂ	– – U –	ಪ್ರಮಥಾಧಿಪಂ	UU – U –
ಶೂಲಧರಂ	– UU –	ಪುರಮಥನಂ	UUUU –
ಕಂದರ್ಪಾರಿ	– – – U	ಮದನಧ್ವಂಸಿ	UU – – U
ಚಂದ್ರಮೌಳಿ	– U – U	ಭುಜಗಧಾರಿ	UUU – U
ಭೂತಾಗ್ರಣಿ	– – UU	ತ್ರಿಜಗದ್ಗುರು	UU – UU
ಕಾಮರಿಪು	– UUU	ಮದನರಿಪು	UUUUU

ಪ್ರಥಮಾಧಿಕಾರಂ – ಸಂಜ್ಞಾಪ್ರಕರಣಂ :

ನಾಗವರ್ಮ ಮೊದಲು ತಿಳಿಯಬೇಕಾದ ಗುರು ಲಘು ಗುರುತಿಸುವ, ಅದರ ಚಿಹ್ನೆಗಳನ್ನು ಹಾಕುವುದನ್ನು, **ಒತ್ತಕ್ಕರಂ ಆಗಿರೆ ಪಿಂತೆನಿಂದ ಸಯ್ತಕ್ಕರಮಮ್ ಗುರು ಅಕ್ಕುಮ್, ಗುರು ಒತ್ತುಗಳಿಂದೆ ಅಕ್ಕುಮ್** ಎಂದು ಗುರುತಿಸಿದ್ದಾನೆ ಇಲ್ಲಿ ಲಘುವೂ ಗುರುವಾಗುತ್ತದೆ ಎನ್ನುವುದು ಸ್ಪಷ್ಟವಾಗುತ್ತದೆ. ಇದಲ್ಲದೆ ಗುರುವಾಗುವ ಇತರ ಸಂದರ್ಭಗಳನ್ನೂ ಲಕ್ಷಣ ಪದ್ಯದಲ್ಲಿ ಸೂಚಿಸಿದ್ದಾನೆ.

ಬಿಂದು ವಿಸರ್ಗಂ ವ್ಯಂಜನ
ಮೊಂದಿದ ದಡ್ಡಕ್ಕರಂ ಪದಾಂತ್ಯಂ ದೀರ್ಘಂ
ಬಂದೊಡಱಿ ವನಜಮುಖಿ ಗುರು
ವೆಂದುಂ ಸಯ್ಯಡಿಯ ನಾಗವರ್ಮನ ಮತದಿಂ ॥

ಬಿಂದು, ವಿಸರ್ಗ, ಅರ್ಧಮಾತ್ರೆಯ ವ್ಯಂಜನಾಕ್ಷರ, ಒತ್ತಕ್ಷರದ

ಹಿಂದಿನ ಅಕ್ಷರ, ಪಾದದ ಕೊನೆಯ ಅಕ್ಷರ, ದೀರ್ಘ ಸ್ವರಸಹಿತವಾದ ವ್ಯಂಜನಾಕ್ಷರ ಬಂದರೂ ಅದನ್ನು ಗುರುವೆಂದು ತಿಳಿಯಬೇಕು.

ನಯದಿಂ ಗುರುವೆಂಬುದು ಕೇಳ್
ತ್ರಿಯಂಬಕಂ ಲಘು ಮುರಾಂತಕಂ ಮೃಗನಯನೇ
ಮಯರಸತಜಭನಲಗವಿನಿ
ಚಯಮೆಂಬಿವು ನಿಯಮದಿಂ ಗಣಾಕ್ಷರಮಕ್ಕುಂ ॥

ಗುರು ಎನ್ನುವುದು ತ್ರಿಯಂಬಕಂ - ಶಿವನ ಹಾಗೂ ಶಿವನ ಇತರ ನಾಮಗಳು, ಲಘು ಎನ್ನುವುದು ಮುರಾಂತಕಂ - ಹರಿ ಹಾಗೂ ಅವನ ಇತರ ನಾಮಗಳು ಮತ್ತು ಮ ಯ ರ ಸ ತ ಜ ಭ ನ ಲ ಗ ಎನ್ನುವವು ವರ್ಣ ಗಣಗಳ ಸಂಖೇತಾಕ್ಷರಗಳಾಗಿವೆ. ಗಣಗಳನ್ನು ಹೇಳುವುದಕ್ಕೆ ಬೇಕಾದ ಸುಲಕ್ಷಣಗಳನ್ನು ನಾಗವರ್ಮ ಕೆಳಗಿನ ಪದ್ಯದಲ್ಲಿ ವಿವರಿಸಿದ್ದಾನೆ.

ಗುರುಲಘುಮಿಶ್ರಂ ಮೂಱ
ಕ್ಕರದಿಂ ಗಣಮಿಡು ಲತಾಂಗಿ ಬರಲೆಂಟು ಗಣಂ
ಧರಣಿ ಜಲಾಗ್ನಿ ಮರುದ್ವ್ಯೋ
ಮ ರವಿ ಶಶಾಂಕೇಂದ್ರನಿಲಯಮಿವು ಗಣನಾಮಂ ॥

ಇಲ್ಲಿ ಎಂಟು ಗಣಗಳು ಬರುತ್ತವೆ, ಪ್ರತಿಗಣವೂ ಮೂರು ಅಕ್ಷರಗಳನ್ನು ಹೊಂದಿದ್ದು ಅವುಗಳ ಹೆಸರು - ಧರಣಿ, ಜಲ, ಅಗ್ನಿ, ಮರುತ್, ವ್ಯೋಮ, ರವಿ, ಶಶಾಂಕ ಮತ್ತು ಇಂದ್ರನಿಲಯ. ಮುಂದಿನ ಪದ್ಯ ಪ್ರತಿಗಣವೂ ಹೇಗಾಗುತ್ತದೆ ಎನ್ನುವುದನ್ನು ಪೂರ್ಣವಾಗಿ ಸೂಚಿಸಿದೆ.

ಗುರು ಮೂಱಾಗಿರೆ ಧಾತ್ರಿ ಮುಂತೆರಡು ಬಿಣ್ಣಿಂ ತೋಯಮಾದ್ಯಂತದೊಳ್
ಬರೆ ವಕ್ರಂ ಶಿಖಿಯೊಂದು ಕೊಂಕು ಕಡೆಯಿಂದಾ ಮಾರುತಂ ವ್ಯೋಮಮೊ
ಪ್ಪಿರೆ ಬಿಣ್ಣಿಂತೆರಡಾದಿಯೊಳ್ ನಡುವೆ ಕೊಂಕಾದಿತ್ಯನಬ್ಜಾರಿ ತ
ಳ್ತಿರೆ ವಕ್ರಂ ಮೊದಲಲ್ಲಿ ಮೂಱು ಲಘುವಿಂ ನಾಕಂ ವಿಲೋಲೇಕ್ಷಣೇ ॥

ಮಾತ್ರೆಗಳ ಮೂಲಕ ನಾಗವರ್ಮ ಪ್ರತಿಗಣವನ್ನು ವಿಭಾಗಿಸುವುದಕ್ಕೆ ಬೇಕಾದ ಸರಳ ಸೂತ್ರವನ್ನು ಇಲ್ಲಿ ಹೇಳಿದ್ದಾನೆ. ಗುರು ಮೂರು ಬಂದರೆ ಧಾತ್ರಿ, ಎರಡು ಗುರುವಿದ್ದರೇ ತೋಯ, ಮೊದಲು ಮತ್ತು ಕೊನೆಯಲ್ಲಿ

ಗುರುಬಂದರೆ ಶಿಖಿ, ಕಡೆಯಲ್ಲಿ ಒಂದು ಗುರು ಬಂದರೆ ಮಾರುತ, ಮೊದಲಲ್ಲಿ ಎರಡು ಗುರುಬಂದರೆ ವ್ಯೋಮ, ಮಧ್ಯದಲ್ಲಿ ಗುರುವಿದ್ದರೆ ಆದಿತ್ಯ, ಮೊದಲಲ್ಲಿ ಗುರುಬಂದರೆ ಅಬ್ಜಾರಿ ಮತ್ತು ಮೂರು ಲಘುಗಳಿದ್ದರೆ ಅದು ನಾಕ. ಇಲ್ಲಿ ಗಣದ ಹೆಸರನ್ನು ಹೆಸರಿಸಿರುವ ನಾಮಪದಗಳಿಗೆ ಸಮಾನಾರ್ಥಕ ಪದಗಳಿದ್ದರೂ, ಗಣವನ್ನು ವಿಭಾಗಿಸಲು ಈ ಕ್ರಮ ಸಾಕಷ್ಟು ಅನುಕೂಲಕರವಾಗಿದೆ. ಇದರ ಜೊತೆಗೆ ಗಣವನ್ನು ಅವರೋಹಣ ಕ್ರಮದಲ್ಲೂ ಬರೆದು ನೋಡಿದಾಗಲೂ, ಗಣವನ್ನು ವಿಭಾಗಿಸಲು ಒಂದು ಅನುಕೂಲಕರ ಪದ್ಧತಿಯನ್ನು ನಾಗವರ್ಮ ಇಲ್ಲಿ ತಿಳಿಸಿದ್ದಾನೆ. ಈ ಪದ್ಯದ ಅರ್ಥವನ್ನು ಕೆಳಗಿನ ಕೋಷ್ಟಕ ಸರಳವಾಗಿ ತಿಳಿಸುತ್ತದೆ.

ಕ್ರಮ ಸಂಖ್ಯೆ	ಗಣದ ಹೆಸರು	ಗಣ	ಗಣದ ಸ್ವರೂಪ
೧	**ಭೂಮಿ** ಮತ್ತು ಅದರ ಪರ್ಯಾಯ ಪದಗಳು	ಮಗಣ	– – –
೨	**ತೋಯ** ಮತ್ತು ಅದರ ಪರ್ಯಾಯ ಪದಗಳು	ಯಗಣ	∪ – –
೩	**ಶಿಖಿ** ಮತ್ತು ಅದರ ಪರ್ಯಾಯ ಪದಗಳು	ರಗಣ	– ∪ –
೪	**ಮಾರುತ** ಮತ್ತು ಅದರ ಪರ್ಯಾಯ ಪದಗಳು	ಸಗಣ	∪ ∪ –
೫	**ವ್ಯೋಮ** ಮತ್ತು ಅದರ ಪರ್ಯಾಯ ಪದಗಳು	ತಗಣ	– – ∪
೬	**ಆದಿತ್ಯ** ಮತ್ತು ಅದರ ಪರ್ಯಾಯ ಪದಗಳು	ಜಗಣ	∪ – ∪
೭	**ಅಬ್ಜಾರಿ** ಮತ್ತು ಅದರ ಪರ್ಯಾಯ ಪದಗಳು	ಭಗಣ	– ∪ ∪
೮	**ನಾಕ** ಮತ್ತು ಅದರ ಪರ್ಯಾಯ ಪದಗಳು	ನಗಣ	∪ ∪ ∪

ಗಣವನ್ನು ವಿಭಾಗಿಸುವ ಕ್ರಮವನ್ನು ತಿಳಿಸಿದಮೇಲೆ ನಾಗವರ್ಮ **ಯತಿ**ಯನ್ನು ವಿಶ್ಲೇಷಿಸಿದ್ದಾನೆ, ಯತಿಯ ಲಕ್ಷಣಗಳನ್ನು ಎರಡು ಕಂದದಲ್ಲಿ ಹೀಗೆ ವಿವರಿಸಿದ್ದಾನೆ.

ಯತಿಯೆಂಬುದು ಗಣನಿಯಮ
ಪ್ರತೀತಮುಸಿರ್ದಾಣಮಪ್ಪುದದು ದಾಂಟಲ್ಕಾ
ಯತಿ ಕಿಡುಗುಂ ದಾಂಟಿದೊಡಾ
ಯತಿ ಕಿಡೆ ಕವಿತಾಭಿಮಾನಮೇಸೆಸೆದಪುದೋ ॥

ಯತಿಯೆಂಬುದು ಗಣನಿಯಮ
ಪ್ರತೀತಮೆಂದರೆಬರೊ (ಲ್ವ)ರಂತದನೆ ಕೆಲರ್
ಶ್ರುತಿಸುಭಗಂ ಸ್ವಚ್ಛಂದಂ
ಯತಿಯೆಂದರ್ ಕಪಿಳಪಿಂಗಳಾದಿಗಳೊ(ಲ್ಲ)ರ್ ॥

ಯತಿ ಎನ್ನುವುದು ಗಣದ ನಿಯಮದಲ್ಲಿ ಹೇಳಿರುವುದು, ಅದು ವಿಶ್ರಾಂತಿಯ ತಾಣವಾಗಿದೆ, ಅದನ್ನು ಮೀರಿದರೆ ಅಲ್ಲಿ ಯತಿ ಭಂಗವಾಗುತ್ತದೆ ಇದನ್ನೇ ಕಪಿಲ ಪಿಂಗಳ ಮೊದಲಾದವರು ಪೂರ್ಣವಾಗಿ ಒಪ್ಪಿದ್ದಾರೆ. ಕೆಲವರು ಮಾತ್ರ ಈ ನಿಯಮದ ಪಾಲನೆ ಐಚ್ಛಿಕವಾದುದೇ ಹೊರತು ನಿರ್ಭಂಧವಲ್ಲ ಎನ್ನುತ್ತಾರೆ.

ಮುಂದುವರೆದು, ಈ ಪ್ರಕರಣದಲ್ಲಿ ನಾಗವರ್ಮ ಇಪ್ಪತ್ತಾರು ಛಂದಸ್ಸುಗಳನ್ನು ಹೇಳುತ್ತಾನೆ. ಅವುಗಳು :

ಉಕ್ತೆ	ಅತ್ಯುಕ್ತೆ	ಮಧ್ಯೆ	ಪ್ರತಿಷ್ಠೆ	ಸುಪ್ರತಿಷ್ಠೆ	ಗಾಯತ್ರಿ
ಉಷ್ಣಿಕ್	ಅನುಷ್ಟುಪ್	ಬೃಹತಿ	ಪಂಕ್ತಿ	ತ್ರಿಷ್ಟುಪ್	ಜಗತಿ
ಅತಿಜಗತಿ	ಶಕ್ವರಿ	ಅತಿಶಕ್ವರಿ	ಅಷ್ಟಿ	ಅತ್ಯಷ್ಟಿ	ಧೃತಿ
ಅತಿಧೃತಿ	ಕೃತಿ	ಪ್ರಕೃತಿ	ಆಕೃತಿ	ವಿಕೃತಿ	ಸಂಕೃತಿ
ಅಭಿಕೃತಿ	ಉತ್ಕೃತಿ				

ನಾಗವರ್ಮ ಸಮ, ಅರ್ಧಸಮ, ವಿಷಮ ಎನ್ನುವ ಮೂರು ವಿದಧ ವೃತ್ತಗಳನ್ನು ಹೇಳಿ ಅದರೊಳಗೆ ಮೇಲಿನ ಇಪ್ಪತ್ತಾರು ಛಂದೋವರ್ಗಗಳನ್ನು ಉಲ್ಲೇಖಿಸಿದ್ದಾನೆ. ಇದಲ್ಲದೇ ಮಾಲವೃತ್ತ, ದಂಡಕಗಳು, ಸ್ಕಂದಕ, ಮದನವತಿ, ಅಕ್ಕರ, ಚೌಪದಿ, ಗೀತಿಕೆ, ಏಳೆ, ತ್ರಿಪದಿ, ಉತ್ಸಾಹ, ಷಟ್ಪದಿ ಮತ್ತು ಛಂದೋವತಂಸಗಳನ್ನು ಈ ಪ್ರಕರಣದಲ್ಲಿಯೇ ಹೇಳಿದ್ದಾನೆ.

ದ್ವಿತೀಯಾಧಿಕಾರಂ – ಸಮವೃತ್ತ ಪ್ರಕರಣಂ
ಶ್ರೀಪದಮಂ ಸಮವೃತ್ತನಿ
ರೂಪಣಸಮಯದೊಳೆ ತಂದು ಮೊದಲಿಟ್ಟೆನದಂ
ಚಾಪಳಲೋಚನೆ ಬಹ್ವಾ
ಳಾಪದೊಳೇಂ ಕೆಳದಿ ಕೇಳ ನಿನಗಭ್ಯುದಯಂ ॥

ಈ ಪ್ರಕರಣದಲ್ಲಿ ನಾಗವರ್ಮ ಸಮಚತುಷ್ಪದಿಗಳನ್ನು ವಿವರವಾಗಿಯೇ ಹೇಳಿದ್ದಾನೆ ಆದ್ದರಿಂದಲೇ ಈ ಅಧಿಕಾರ ವಿಸ್ತಾರವಾಗಿ ಬಂದಿದೆ. ಅದರಲ್ಲಿ ಮುಖ್ಯವಾಗಿ ಮೊದಲು ವರ್ಣಸಮ ಚತುಷ್ಪದಿಗಳಿಗೆ ಲಕ್ಷಣವನ್ನು ಹೇಳಿ, ಅರ್ಧಸಮ, ವಿಷಮ ಮತ್ತು ಮಾತ್ರಾ ವೃತ್ತಗಳಿಗೆ ಲಕ್ಷಣಗಳನ್ನು ತಿಳಿಸಿದ್ದಾನೆ. **26 ಛಂಧೋವರ್ಗಗಳಲ್ಲಿ ಹುಟ್ಟುವ ವೃತ್ತಗಳನ್ನು ನಾಗವರ್ಮ ಸಂಗ್ರಹಿಸಿ ನೀಡಿದ್ದಾನೆ.**

೧. ಉಕ್ತೆಯೆಂಬ ಛಂದದೊಳೊಂದಕ್ಕರಂ ಪಾದಮಾಗಿ ಪುಟ್ಟುವ ೨ ವೃತ್ತಂಗಳೊಳಗೆ	ಶ್ರೀ
೨. ಅತ್ಯುಕ್ತೆಯೆಂಬ ಛಂದದೊಳೆರಡಕ್ಕರಂ ಪಾದಮಾಗಿ ಪುಟ್ಟುವ ೪ ವೃತ್ತಂಗಳೊಳಗೆ	ಗಿರಿಧರಂ, ದಿಗಂತಗಂ, ಗರ್ವಂ
೩. ಮಧ್ಯೆಯೆಂಬ ಛಂದದೊಳ್ ಮೂಱಕ್ಕರಂ ಪಾದಮಾಗಿ ಪುಟ್ಟುವ ೮ ವೃತ್ತಂಗಳೊಳಗೆ	ಶ್ಯಾಮಾಂಗಂ, ಪ್ರವರಂ, ಪಾವನಂ, ಪರಂ, ರತಾಂತಂ
೪. ಪ್ರತಿಷ್ಠೆಯೆಂಬ ಛಂದದೊಳ್ ನಾಲ್ಕಕ್ಕರಂ ಪಾದಮಾಗಿ ಪುಟ್ಟುವ ೧೬ ವೃತ್ತಂಗಳೊಳಗೆ	ಸೌಂದರಂ, ಜನೋದಯಂ, ದೇವರಮ್ಯಂ ಮೃಗನೇತ್ರಂ, ಸುರತರು, ಕಾಮಾಂಗಂ
೫. ಸುಪ್ರತಿಷ್ಠೆಯೆಂಬ ಛಂದದೊಳಯ್ದಕ್ಕರಂ ಪಾದಮಾಗಿ ಪುಟ್ಟುವ ೩೨ ವೃತ್ತಂಗಳೊಳಗೆ	ನಂದಕಂ, ಕಾಂಚನಮಾಲಾ ಸನ್ಮೃಗನೇತ್ರಂ ತಿಲಕಂ, ಅನಂಗಂ, ಪ್ರೇಮಂ, ಸರಸಿರುಹಂ
೬. ಗಾಯತ್ರಿಯೆಂಬ ಛಂದದೊಳಾಱಕ್ಕರಂ ಪಾದಮಾಗಿ ಪುಟ್ಟುವ ೬೪ ವೃತ್ತಂಗಳೊಳಗೆ	ಶಾಳಿನೀವಿತಾನಂ, ಉದಾತ್ತಂ, ಶಶಿಕಾಂತಂ ವಿಚಿತ್ರಂ, ತನುಮಧ್ಯಂ, ಕುಮುದಂ, ಮುಕುಳಂ, ಸುಲಲಿತಂ

೭. ಉಷ್ಣಿಕ್ಕೆಂಬ ಛಂದದೊಳೇಟಕ್ಕರಂ ಪಾದಮಾಗಿ ಪುಟ್ಟುವ ೧೨೮ ವೃತ್ತಂಗಳೊಳಗೆ	ವಿಶಾಳಂ, ಅಮಳಂ, ವಿನಿಮ್ನಂ, ಜಗದ್ವಿಭೂತಿ, ಚಿತ್ರಂ, ಶಶಾಂಕವಕ್ತ್ರಂ, ಸರಲಂ, ಸುಲಭಂ, ನರಗಂ, ಕೋಮಲಂ
೮. ಅನುಷ್ಟುಪ್ಪೆಂಬ ಛಂದದೊಳೆಂಟಕ್ಕರಂ ಪಾದಮಾಗಿ ಪುಟ್ಟುವ ೨೫೬ ವೃತ್ತಂಗಳೊಳಗೆ	ವಿದ್ಯುನ್ಮಾಲಾ, ಮಾಣವಕಂ, ಚಿತ್ರಪದಂ, ಪ್ರಮಾಣಿಕಂ, ಸುಮಾಲತೀ, ಶ್ರುತಾನಂದಂ
೯. ಬೃಹತಿಯೆಂಬ ಛಂದದೊಳೊಂಬತ್ತಕ್ಕರಂ ಪಾದಮಾಗಿ ಪುಟ್ಟುವ ೫೧೨ ವೃತ್ತಂಗಳೊಳಗೆ	ಉತ್ಸುಕಂ, ಉದಯಂ, ವನಜಂ, ವಿನುತಂ, ಭದ್ರಕಂ, ಭುಜಗಶಿಶುಸೃತಂ, ಮಯೂರಂ, ಬೃಹತ್ಯಾ
೧೦. ಪಙ್ಕ್ತಿಯೆಂಬ ಛಂದದೊಳ್ ಪತ್ತಕ್ಕರಂ ಪಾದಮಾಗಿ ಪುಟ್ಟುವ ೧೦೨೪ ವೃತ್ತಂಗಳೊಳಗೆ	ಪಣವಕಂ, ಮಂದಾನಿಲಂ, ಮತ್ತಂ, ಚಿತ್ರಪದಂ, ಮಣಿರಂಗಂ, ಕಲ್ಯಾಣಂ
೧೧. ತ್ರಿಷ್ಟುಪ್ ಎಂಬ ಛಂದದೊಳ್ ಪನ್ನೊಂದಕ್ಕರಂ ಪಾದಮಾಗಿ ಪುಟ್ಟುವ ೨೦೪೮ ವೃತ್ತಂಗಳೊಳಗೆ	ಇಂದ್ರವಜ್ರಂ, ಉಪೇಂದ್ರವಜ್ರಂ, ಸೇನಿಕಂ, ದೋಧಕಂ, ರಥೋದ್ಧತಾ, ಭದ್ರಿಕಾ, ಸ್ವಾಗತಂ, ಭ್ರಮರವಿಲಸಿತಂ, ಶಾಲಿನೀ, ಮಾಣಿಕ್ಯಂ, ಸಾಂದ್ರಪದಂ, ಲಯಗ್ರಾಹಿ
೧೨. ಜಗತಿಯೆಂಬ ಛಂದದೊಳ್ ಪನ್ನೆರಡಕ್ಕರಂ ಪಾದಮಾಗಿ ಪುಟ್ಟುವ ೪೦೯೬ ವೃತ್ತಂಗಳೊಳಗೆ	ದ್ರುತವಿಲಂಬಿತಂ, ತೋಟಕಂ, ಭುಜಂಗಪ್ರಯಾತಂ, ವಂಶಸ್ಥಂ, ಇಂದ್ರವಂಶಂ, ಸ್ರಗ್ವಿಣೀ, ಮತ್ತಕೋಕಿಲಂ, ದ್ರುತಪದಂ, ಲಲಿತಪದಂ, ಹಂಸಮತ್ತಂ, ಪ್ರವರಾಕ್ಷರಂ, ಪುಟಂ, ವೈಶ್ವದೇವೀ, ಚಂದ್ರವರ್ತ್ಮಂ, ಜಲೋದ್ಧತಗತಂ
೧೩. ಅತಿಜಗತಿಯೆಂಬ ಛಂದದೊಳ್ ಪದಿಮೂಱಕ್ಕರಂ ಪಾದಮಾಗಿ ಪುಟ್ಟುವ ೮೧೯೨ ವೃತ್ತಂಗಳೊಳಗೆ	ರುಚಿರಂ, ಅಭ್ಯುದಯಂ, ಅಂಗರುಚಂ, ಸೌಂದರಂ, ಪ್ರಭಾತಂ, ಮತ್ತಮಯೂರಂ
೧೪. ಶಕ್ವರಿಯೆಂಬ ಛಂದದೊಳ್ ಪದಿನಾಲ್ಕಕ್ಕರಂ ಪಾದಮಾಗಿ ಪುಟ್ಟುವ ೧೬,೩೮೪ ವೃತ್ತಂಗಳೊಳಗೆ	ವಸಂತತಿಲಕಂ, ಪ್ರಹರಣಕಲಿತಂ, ಕುಸುಮಾಂಘ್ರಿಪಂ, ವನಮಯೂರಂ, ಸುಂದರಂ, ವಸಂತಂ
೧೫. ಅತಿಶಕ್ವರಿಯೆಂಬ ಛಂದದೊಳ್ ಪದಿನಯ್ದಕ್ಕರಂ ಪಾದಮಾಗಿ ಪುಟ್ಟುವ ೩೨,೭೬೮ ವೃತ್ತಂಗಳೊಳಗೆ	ಮಾಲಿನೀ, ಮಣಿ(ಗು)ಣನಿಕರಂ, ಮಣಿವಿಭೂಷಣಂ, ಸುಕೇಸರಂ, ನವನಲಿನಂ, ವಿಚಿತ್ರಲಲಿತಂ
೧೬. ಅಷ್ಟಿಯೆಂಬ ಛಂದದೊಳ್ ಪದಿನಾಱಕ್ಕರಂ ಪಾದಮಾಗಿ ಪುಟ್ಟುವ ೬೫,೫೩೬ ವೃತ್ತಂಗಳೊಳಗೆ	ಮಂಗಳಂ, ಲಲಿತಪದಂ, ಪದ್ಮಮುಖೀ, ವಿಜಯಾನಂದಂ
೧೭. ಅತ್ಯಷ್ಟಿಯೆಂಬ ಛಂದದೊಳ್ ಪದಿನೇಟಕ್ಕರಂ ಪಾದಮಾಗಿ ಪುಟ್ಟುವ ೧,೩೧,೦೭೨ ವೃತ್ತಂಗಳೊಳಗೆ	ಮಂದಾಕ್ರಾಂತಂ, ಪೃಥ್ವೀ, ಕನಕಾಬ್ಜಿನೀ, ಶಿಖರಿಣೀ, ಹರಿಣೀಪ್ಲುತಂ
೧೮. ಧೃತಿಯೆಂಬ ಛಂದದೊಳ್ ಪದಿನೆಂಟಕ್ಕರಂ ಪಾದಮಾಗಿ ಪುಟ್ಟುವ ೨,೬೨,೧೪೪ ವೃತ್ತಂಗಳೊಳಗೆ	ಮಲ್ಲಿಕಾಮಾಲೆ, ಕುಸುಮಿತಲತಾವೇಲ್ಲಿತಂ, ಅರವಿಂದಂ
೧೯. ಅತಿಧೃತಿಯೆಂಬ ಛಂದದೊಳ್ ಪತ್ತೊಂಬತ್ತಕ್ಕರಂ ಪಾದಮಾಗಿ ಪುಟ್ಟುವ ೫,೨೪,೨೮೮ ವೃತ್ತಂಗಳೊಳಗೆ	ತರಳಂ, ಮೇಘವಿಸ್ಫೂರ್ಜಿತಂ, ಶಾರ್ದೂಲವಿಕ್ರೀಡಿತಂ, ಖಚರಪ್ಲುತಂ

೨೦.	ಕೃತಿಯೆಂಬ ಛಂದದೊಳಿರ್ಪತ್ತಕ್ಕರಂ ಪಾದಮಾಗಿ ಪುಟ್ಟುವ ೧೦,೪೮,೫೭೬ ವೃತ್ತಂಗಳೊಳಗೆ	ಮತ್ತೇಭವಿಕ್ರೀಡಿತಂ, ಅನವದ್ಯಂ, ಉತ್ಪಲಮಾಲೆ, ನಗರಂಜಿತಂ
೨೧.	ಪ್ರಕೃತಿಯೆಂಬ ಛಂದದೊಳಿರ್ಪತ್ತೊಂದಕ್ಕರಂ ಪಾದಮಾಗಿ ಪುಟ್ಟುವ ೨೦,೯೭,೧೫೨ ವೃತ್ತಂಗಳೊಳಗೆ	ಚಂಪಕಮಾಲೆ, ತರಂಗಂ, ಸ್ರಗ್ಧರಾ, ಲಲಿತಗತಿ
೨೨.	ಆಕೃತಿಯೆಂಬ ಛಂದದೊಳಿರ್ಪತ್ತೆರಡಕ್ಕರಂ ಪಾದಮಾಗಿ ಪುಟ್ಟುವ ೪೧,೯೪,೩೦೪ ವೃತ್ತಂಗಳೊಳಗೆ	ಮಹಾಸ್ರಗ್ಧರಾ, ಭದ್ರಕಂ, ವನಮಂಜರಿ, ಚೂತಕುಜಂ
೨೩.	ವಿಕೃತಿಯೆಂಬ ಛಂದದೊಳಿರ್ಪತ್ತೆಮೂಱಕ್ಕರಂ ಪಾದಮಾಗಿ ಪುಟ್ಟುವ ೮೩,೮೮,೬೦೮ ವೃತ್ತಂಗಳೊಳಗೆ	ಹಂಸಗತಿ, ಮತ್ತಾಕ್ರೀಡಾ, ಸೌಂದರಂ,
೨೪.	ಸಂಕೃತಿಯೆಂಬ ಛಂದದೊಳಿರ್ಪತ್ತನಾಲ್ಕಕ್ಕರಂ ಪಾದಮಾಗಿ ಪುಟ್ಟುವ ೧,೬೭,೭೭,೨೧೬ ವೃತ್ತಂಗಳೊಳಗೆ	ಲಲಿತಂ, ತನ್ವೀ, ಅರ್ಕಮರೀಚಿ
೨೫.	ಅಭಿಕೃತಿಯೆಂಬ ಛಂದದೊಳ್ ಇರ್ಪತ್ತಯ್ದಕ್ಕರಂ ಪಾದಮಾಗಿ ಪುಟ್ಟುವ ೩,೩೫,೫೪,೪೩೨ ವೃತ್ತಂಗಳೊಳಗೆ	ಕ್ರೌಂಚಪದಂ, ವಿದಳಿತಸರಸಿಜವನಂ, ಹಂಸಪದಂ
೨೬.	ಉತ್ಕೃತಿಯೆಂಬ ಛಂದದೊಳಿರ್ಪತ್ತಾಱಕ್ಕರಂ ಪಾದಮಾಗಿ ಪುಟ್ಟುವ ೬,೭೧,೦೮,೮೬೪ ವೃತ್ತಂಗಳೊಳಗೆ	ಭುಜಂಗವಿಜೃಂಭಿತಂ, ಮುನಿಮತಂ, ವನಲತೆ

ತೃತೀಯಾಧಿಕಾರಂ – ಮಾಲಾವೃತ್ತಾರ್ಧಸಮವಿಷಮಾದಿವೃತ್ತಪ್ರಕರಣಂ

ಈ ಅಧಿಕಾರದಲ್ಲಿ ನಾಗವರ್ಮ ಮಾಲಾವೃತ್ತ, ಅರ್ಧಸಮ ವೃತ್ತ ಮತ್ತು ವಿಷಮ ವೃತ್ತಗಳನ್ನು ವಿಶ್ಲೇಷಿಸಿದ್ದಾನೆ. ಸಂಸ್ಕೃತದ ಛಂದಸ್ಸಿನ ಪ್ರಭಾವ ಈ ಭಾಗದಲ್ಲಿ ಎದ್ದು ಕಾಣುತ್ತದೆ. ಅದರಲ್ಲಿ ಕೆಲವು ಮಾದರಿಗಳು ಛಂದಸ್ಸಿನ ಪೂರ್ವ ಶಾಸ್ತ್ರ ಗ್ರಂಥಗಳಲ್ಲಿ ಕಂಡುಬರುವುದಿಲ್ಲ ಎನ್ನುವುದನ್ನು ಗಮನಿಸಲೇಬೇಕು. **ಸಮವೃತ್ತದ ತೆಱನಂ ಮುನ್ನ ಮಱೆಪಿದೆಂ ಮಾಲಾವೃತ್ತದ ಪಾಂಗನೆಯ್ದೆ ಕೇಳಿನ್ನು** ಎಂದು ಆರಂಭಿಸಿ ಮಾಲಾವೃತ್ತಗಳಲ್ಲಿ ಹುಟ್ಟುವ **ಲಲಿತವೃತ್ತಂ, ಕುಸುಮಶರನಿರತಿಶಯಂ** ಎನ್ನುವ ಎರಡು ವೃತ್ತಗಳನ್ನು ಹೆಸರಿಸಿದ್ದಾನೆ. ಅದರಲ್ಲಿ ಕುಸುಮಶರನಿರತಿಶಯಂ ವೃತ್ತದ ಲಕ್ಷಣ ಇಂತಿದೆ –

ಸುರರ ಪಡೆ ನೆರೆದಿರಲು ಕರಿಗಳೆನಿತನಿತಱಿಕೊಳೆ ಖರಕರಸಮೀರಣಪದಾಂತಂ
ಪುರಮಥನನಿರೆ ಬಟಿಕೆ ವಿರತಿಯುಱೆ ದಶಮದೊಳೆ ತರತರದಿನೊಪ್ಪಿ ನಿಲೆ ಸಂತಂ
ಸುರಮಥನನಿರೆ ನೆಗಟ್ಟೆ ಕವಿವರಮತದೆ ಜನನುತದೆ ಪರಮಪದವೆಯ್ದಿದುದನಂತಂ
ಸರಸಿರುಹದಳನಯನೆ ಕರಮೆಸೆವ ಕುಸುಮಶರನಿರತಿಶಯಮೆಂಬುದು ನಿತಾಂತಂ ॥

ಇದರ ಸ್ವರೂಪವನ್ನು ತಾವರೆದಳದಂತೆ ಕಣ್ಣುಳ್ಳವಳೇ, ಕರಿಗಳು (ಅಷ್ಟದಿಗ್ಗಜ), ಎಂದರೆ ಭೂಭಾರವನ್ನು ಹೊತ್ತ ದಿಗ್ಗಜಗಳು ಎಷ್ಟು ಇವೆಯೋ ಅಷ್ಟರ ಸಂಖ್ಯೆಯಲ್ಲಿ ಸುರರು (ನಗಣಗಳು) ಗುಂಪಾಗಿ ಬರಲು, ಬಳಿಕ ಸೂರ್ಯ (ಜಗಣ), ವಾಯು (ಸಗಣ) ಇವುಗಳ ಸಹಿತ ಪಾದದ ಕೊನೆಯಲ್ಲಿ ಹರ (ಗುರು) ಬಂದಿರಲು, ಯತಿ ಚೆನ್ನಾಗಿ 10ನೆಯ ಅಕ್ಷರಸ್ಥಾನದಲ್ಲಿ ಮತ್ತೆ ಮತ್ತೆ ಒಪ್ಪಿ ಸುಸ್ಥಿತಿಯಿಂದ ನಿಲ್ಲಲು, ಲೋಕದಲ್ಲಿ ಇದು ಕುಸುಮಶರನಿರತಿಶಯ ಎಂಬ ವೃತ್ತ. (ಇದು) ಖ್ಯಾತ ಕವಿಶ್ರೇಷ್ಠನ (ನಾಗವರ್ಮ) ಅಭಿಪ್ರಾಯದಂತೆ, ಕನಪ್ರಶಂಸೆಯಿಂದ ಕೂಡಿ, ಸರ್ವತ್ರ ಸರ್ವದಾ ಉತ್ತಮಸ್ಥಿತಿಯನ್ನು ಪಡೆಯಿತು. (ಛಂದೋಂಬುಧಿ, ಪು, 104, ಡಾ. ಟಿ.ವಿ. ವೆಂಕಟಾಚಲ ಶಾಸ್ತ್ರಿ)

ನಾಗವರ್ಮ **ಇನ್ ಅರ್ಧಸಮವೃತ್ತಮುಮನ್ ಉತ್ಪತ್ತಿಯುಮನ್ ಪೇೞ್ವೆನ್** ಎಂದು ಅರ್ಧಸಮ ವೃತ್ತಗಳಲ್ಲಿ ಹುಟ್ಟುವ **ಅಚ್ಯುತಕಂ, ದಿವಿಜ ಕಲ್ಪಲತಾ, ರವಿಪ್ರಭಂ** ಎನ್ನುವ ಮೂರು ವೃತ್ತಗಳ ಲಕ್ಷಣಗಳನ್ನು ಹೇಳಿದ್ದಾನೆ. ಇವು ನಾಗವರ್ಮನ ಸ್ವಂತ ರಚನೆಯಾಗಿವೆ, ಇದರಲ್ಲಿ ದಿವಿಜ ಕಲ್ಪಲತಾ ವೃತ್ತದ ಲಕ್ಷಣವನ್ನು ಗಮನಿಸಬಹುದು –

ಪಾವಕಾಮರಗಣಾನಲಂ ಲಗಂ
ದಿವಿಜಚಂದ್ರಕುಮುದಾರಿಪಾವಕಂ
ಭಾವಿಸುತ್ತುಮಿರೆ ಕೋಮಲಾಂಗಿ ಕೇಳ್
ದಿವಿಜಕಲ್ಪಲತೆಯಾಯ್ತು ನಾಮದಿಂ ॥

ಇಲ್ಲಿ ಬರುವ ಗಣಗಳು ಪಾವಕ – ಅಗ್ನಿ – ರಗಣ, ಅಮರಗಣ – ಸುರಗಣ – ನಗಣ, ಅನಲಂ – ಅಗ್ನಿ – ರಗಣ, ಲಘು ಮತ್ತು ಗುರು, ದಿವಿಜ – ಸುರ – ನಗಣ, ಚಂದ್ರ – ಭಗಣ, ಕುಮುದಾರಿ – ಸೂರ್ಯ –

ಜಗಣ, ಪಾವಕ – ರಗಣ. ನಾಗವರ್ಮ ಪಾದಗಳ ಬದಲು ಮಾಡುವಿಕೆಯಿಂದ, ಒಂದು ಅಕ್ಷರದ ವ್ಯತ್ಯಾಸದಿಂದ ವೃತ್ತ ರಚನೆ ಆದಾಗ, ಅರ್ಧ ಸಮವೃತ್ತವಾಗುತ್ತದೆ.

ವಿಪರೀತ ಗಣಾಕ್ಷರಮಾಗೆ ಪದಂಗಳ್ ನಾಲ್ಕು ಪಾದಮೊಂದದೆ ನಿಲ್ಕುಂ – ಒಂದೊಂದು ಪಾದದಲ್ಲಿಯೂ ಬೇರೆ ಬೇರೆ ಗಣಗಳ ವರ್ಣಗಳಾದಾಗ ನಾಲ್ಕುಪಾದಗಳೂ ಹೊಂದದೇ ಭಿನ್ನವಾಗಿಯೇ ರಚನೆಯಾಗುತ್ತದೆ ಅದನ್ನೇ ವಿಷಮವೃತ್ತವೆನ್ನುವುದು. ಅದರ ಪ್ರಭೇದಗಳು **ಉದ್ಗತಂ, ತ್ರಿಪದೋನ್ನತಿ, ಪದಚತುರೂರ್ಧ್ವಂ.** ತ್ರಿಪದೋನ್ನತಿಯ ವಿನ್ಯಾಸ ಹೀಗಿದೆ,

ಚಂದ್ರಗಣತ್ರಿತಯಂ ಕಡೆಯೊಳ್
ಚಂದ್ರಧರಂ ಬರೆ ಮೂಱಿಡೆಯೊಳ್
ಚಂದ್ರಚತುಷ್ಟಯಮಾಗಿರೆ ಭಾವಿಸು
ಚಂದ್ರಮುಖೀ ತ್ರಿಪದೋನ್ನತಿಯಂ ॥

ಮೂರು ಚಂದ್ರಗಣಗಳು – ಭಗಣ – ಕೊನೆಯಲ್ಲಿ ಗುರು, ಮೂರನೆಯ ಪಾದದಲ್ಲಿ ಚಂದ್ರ ಚತುಷ್ಟಯ – ನಾಲ್ಕುಗಣಗಳು – ಭಗಣ ಬರುತ್ತದೆ.

ಅನುಷ್ಟುಪ್ ಜಾತಿಯಲ್ಲಿ ಹುಟ್ಟುವ ಶ್ಲೋಕ ಛಂದಸ್ಸಿನ ಲಕ್ಷಣವನ್ನು ನಾಗವರ್ಮ ಕಂದದಲ್ಲಿ ತಿಳಿಸಿದ್ದಾನೆ –

ಆಯ್ದಾಱಿಂಬೆರಡೆಡೆಯೊಳ
ಮೆಯ್ದುಗೆ ಲಘು ಗುರು ಕರಾಬ್ಧಿಪದಸಪ್ತಕದೊಳ್
ಮೆಯ್ದೋಱುಗೆ ಲಘು ಲಕ್ಷಣ
ಮೆಯ್ದುಗೆ ಪರಿಪೂರ್ಣಮಷ್ಟವರ್ಣಂ ಶ್ಲೋಕಂ ॥

ಶ್ಲೋಕ ಛಂದಸ್ಸಿನ ಪದ್ಯದಲ್ಲಿ ಪ್ರತಿ ಪಾದದಲ್ಲಿ ಎಂಟು ಅಕ್ಷರಗಳಿದ್ದು, ಐದು ಮತ್ತು ಆರನೆಯ ಸ್ಥಾನದಲ್ಲಿ ಲಘು ಮತ್ತು ಗುರು ಬರಬೇಕು, ನಾಲ್ಕನೆಯ ಪಾದದ ಏಳನೆಯ ಅಕ್ಷರ ಸ್ಥಾನದಲ್ಲಿ ಲಘು ಬರುತ್ತದೆ.

ವೈತಾಳೀಯದಲ್ಲಿ ಸಮ ಮತ್ತು ವಿಷಮದ ಪ್ರಭೇದವನ್ನು, ಸಂಸ್ಕೃತದಂತೆಯೇ ನಾಗವರ್ಮನು ಮಾಡಿದ್ದಾನೆ. **ಜಾತಿಗಾಥೆ** ಪದ್ಯ ಜಾತಿಗೆ ಶ್ಲೋಕದ ಲಕ್ಷಣಗಳೆಲ್ಲ ಅನ್ವಯಿಸುತ್ತದೆ ಆದರೆ ಇಲ್ಲಿ ಆರು ಪಾದಗಳು

ಬರುತ್ತವೆ. **ರಗಳೆಯ** ಲಕ್ಷಣವನ್ನು ನಾಗವರ್ಮ ಕಂದ ಪದ್ಯದಲ್ಲಿಯೇ ಹೇಳಿದ್ದಾನೆ

ಗಣನಿಯಮವಿಪರ್ಯಾಸದೊ
ಳೆಣೆವಡೆದೊಳ್ಪೆಸೆಯೆ ಮಾತ್ರೆ ಸಮನಾಗೆ ಗುಣಾ
ಗ್ರಣಿಯ ಮತದಿಂದೆ ತಾಳದ
ಗಣನೆಗೊಡಂಬಟ್ಟೊಡದುವೆ ರಘಟಾಬಂಧಂ ॥

ಗಣಗಳ ನಿಯಮದ ವಿನ್ಯಾಸದಿಂದ, ಪಾದಗಳು ಸಮಾನವಾಗಿದ್ದಾಗ ಒಳ್ಳೆಯದಾಗಿದ್ದಾಗ, ಅಕ್ಷರಗಳು ಸಮಾನವಾಗಿದ್ದಾಗ, ಲಯ ತಾಳದ ವಿನ್ಯಾಸಕ್ಕೆ ಹೊಂದುವಂತಿದ್ದರೆ ಅದು ರಗಳೆಯ ಛಂದಸ್ಸು. ಇದು ಪೂರ್ಣ ಲಕ್ಷಣಗಳನ್ನು ಹೇಳದಿದ್ದರೂ ಒಂದು ಮಟ್ಟಕ್ಕೆ ರಗಳೆಯ ಸ್ವರೂಪವನ್ನು ವಿವರಿಸುತ್ತದೆ. **ದಂಡಕಗಳಲ್ಲಿ** ಆರು ಪ್ರಭೇದಗಳನ್ನು ನಾಗವರ್ಮ ಗುರುತಿಸಿದ್ದಾನೆ ಅವುಗಳೆಂದರೆ – **ಚಂಡವೃಷ್ಟಿಪ್ರಯಾತ, ಅರ್ಣ, ಅರ್ಣವ, ವ್ಯಾಳ, ಜೀಮೂತ, ಲೀಲಾಕರ.** ಇದಷ್ಟನ್ನು ನಾಗವರ್ಮ ವಿಸ್ತಾರವಾಗಿಯೇ ತಿಳಿಸಿದ್ದಾನೆ.

ಚತುರ್ಥಾಧಿಕಾರಂ – ಕಂದಾದಿಮಾತ್ರಾವೃತ್ತಪ್ರಕರಣಂ

ಕಂದಕ್ಕಾರ್ಯೆಗೆ ಗೀತಿಕೆ
ಗೊಂದಿದ ಸಂಕೀರ್ಣಕೆಸವ ದುವಯಿಗೆ ಮಾತ್ರಾ
ವೃಂದಮುಮಂ ಗಣವಿವರಣೆ
ಯಂದಮುಮಂ ತಿಳಿಯೆ ಪೇೞ್ವೆನಂಬುಜವದನೇ ॥

ಕಂದ, ಆರ್ಯೆ, ಗೀತಿಕೆ – ಇವುಗಳಿಗೆ ಸಂಬಂಧಿಸಿದ ಸಂಕೀರ್ಣಕ್ಕೆ, ದುವಯಿಗೆ ಮಾತ್ರಾ ವಿನ್ಯಾಸಕ್ರಮವನ್ನು ತಿಳಿಯುವ ರೀತಿಯಲ್ಲಿ ಹೇಳುತ್ತೇನೆ. ಕಂದದ ಲಕ್ಷಣ.

ಪುರ ಬಾಣ ವಹ್ನಿ ಶರಗಣ
ಮಿರೆ ನಾಲ್ಕುಂ ಪದದೊಳೋಜೆಯುಗ್ಮಗಳೊಳ್ ಪ
ನ್ನೆರಡಿರ್ಪತ್ತೋಳಿಯೆ ಪ ನ್ನೆರಡಿರ್ಪತ್ತಕ್ಕೆ ಮಾತ್ರೆಗಳ್ ವೃಗನಯನೇ ॥

ನಾಲ್ಕು ಪಾದದಲ್ಲಿ ಪುರ – ತ್ರಿಪುರ, ಬಾಣ – ಪಂಚಬಾಣ – ಐದು, ವಹ್ನಿ – ಅಗ್ನಿತ್ರಯ – ಮೂರು, ಶರ – ಪಂಚಬಾಣ – ಐದು ಈ ಮಾದರಿಯಲ್ಲಿ ವಿಷಮ ಮತ್ತು ಸಮಪಾದಗಳಲ್ಲಿ ಪದ್ಯವಿದ್ದಾಗ 12 – 20 ಮಾತ್ರೆಗಳು ಬರಬೇಕು

ಗಿ ರಿ ಶಂ । ಧೂ ರ್ಜ ಟಿ । ಶ ರ್ವಂ ।

ಪು ರಾ ರಿ । ಪು ರ ರಿ ಪು । ವೆ ನಿ ಪ್ಪು । ಎಂ ತ । ಯ್ದು ಗಣಂ ॥

ಬ ರೆ ಶ ಶಿ । ಪು ರ ವಿ ಷ । ಯಾ ದ್ರಿ ಯೊ ।

ಳಿ ರ ದಿ । ರ್ಕೆ ಪು ರಾ । ರಿ ಯೆಂ ಬ । ಗ ಣ ಮ । ಬ್ಜ ಮು ಖೀ ॥

ಆರ್ಯೆಯ ಲಕ್ಷಣ –

ಮೊದಲೊಳ್ ಪನ್ನೆರಡೆರಡನೆ

ಯದಱೊಳ್ ಪದಿನೆಂಟು ಮೂಱಱೊಳ್ ಪನ್ನೆರಡಂ

ತ್ಯದ ಪಾದದಲ್ಲಿ ಪದಿನೆ

ಯ್ದಿದು ಮಾತ್ರಾನಿಯಮಮಾರ್ಯೆಯೊಳ್ ವನಜಮುಖೀ ॥

ಆರ್ಯೆಯಲ್ಲಿ ಮೊದಲನೆಯ ಪಾದದಲ್ಲಿ 12 ಮಾತ್ರೆಗಳು, ಎರಡನಯದರಲ್ಲಿ 18, ಮೂರನೆಯದರಲ್ಲಿ 12, ನಾಲ್ಕನೆಯ ಪಾದದಲ್ಲಿ 15 ಮಾತ್ರೆ ಬರಬೇಕು ಅದರ ಸ್ವರೂಪವನ್ನು ಈ ಮಾದರಿಯಲ್ಲಿ ಬರೆಯಬಹುದು

4 + 4 + 4

4 + 4 + 4 + 4 + ಗುರು

4 + 4 + 4

4 + 4 + ಲಘು + 4 + ಗುರು ॥

ಗೀತಿಯ ಲಕ್ಷಣ

ವಿಪುಳಾರ್ಯೆಯ ಪೂರ್ವಾಧ

ದ್ವಿಪಾದದಂತಾಗಿ ಬರ್ಕೆ ಗೀತಿಗೆ ಕೇಳಿ

ನ್ನಪರಾರ್ಧಪಾದಯುಗ[ಮದ

ಱು] ಪಮೆಯೆ ಬರೆದೋದು ಕಲ್ತು ತಿಳಿವವೊಲಿಳೆಯೊಳ್ ॥

ಗೀತಿಯ ಲಕ್ಷಣವೆಂದರೆ ಪೂರ್ವಾರ್ಧವು ವಿಪುಳಾರ್ಯೆಯ ಎರಡು ಪಾದಗಳ ಹಾಗಿರಲಿ, ಉತ್ತರಾರ್ಧದ ಎರಡು ಪಾದಗಳು ಅದರ ಹಾಗೆಯೇ ಇರಲೀ. ಅಂದರೆ ಆರ್ಯೆಯ ಪೂರ್ವಾರ್ಧದ ಗಣವಿನ್ಯಾಸವೇ, ಗೀತಿಯ ಉತ್ತರಾರ್ಧದಲ್ಲೂ ಬರುತ್ತದೆ. ಅದರ ಸ್ವರೂಪವನ್ನು ಈ ಮಾದರಿಯಲ್ಲಿ ಬರೆಯಬಹುದು

4 + 4 + 4

4 + 4 + 4 + 4 + ಗುರು

4 + 4 + 4

4 + 4 + 4 + 4 + ಗುರು

ಸಂಕೀರ್ಣಕದ ಲಕ್ಷಣ

ಕಂದದ ಪೂರ್ವಾರ್ಧದೊಳನು
ಸಂದಿಸಿದಾರ್ಯಾಪರಾರ್ಧಮದನುಕ್ರಮದಿಂ
ದೊಂದಿರ್ದೊಡೆ ಸಂಕೀರ್ಣಕ
ಮೆಂದಂ ಕವಿರಾಜಹಂಸನಂಬುಜವದನೇ ॥

ಸಂಕೀರ್ಣಕದಲ್ಲಿ ಕಂದದ ಪೂರ್ವಾರ್ಧದಲ್ಲಿ ಬರುವ ಆರ್ಯಾ ವೃತ್ತದ ಉತ್ತರಾರ್ಧವನ್ನು ಅನುಕ್ರಮವಾಗಿ ಸೇರಿದರೆ ಅದು ಸಂಕೀರ್ಣಕ. ಅದರ ಸ್ವರೂಪವನ್ನು ಹೀಗೆ ವಿನ್ಯಾಸ ಮಾಡಬಹುದು.

4 + 4 + 4

4 + 4 + 4 + 4 + 4

4 + 4 + 4

4 + 4 + ಲಘು + 4 + ಗುರು

ದುವಯಿಗೆ ಲಕ್ಷಣಂ

ಮೊದಲೊಳೆ ಮಾತ್ರೆಗಳಾಱ
ಪ್ಪುದು ಪದಮೆರಡಱೊಳಮಂತೆ ಕಂದದ ಗಣಮು
ಯ್ದುದಯಿಸಿ ಗುರುವೆರಸಿರ್ಕಿಂ
ತ್ಯದಿನಿರ್ಪತ್ತೆಂಟು ಮಾತ್ರೆ ದುವಯಿಗೆ ನಿಯಮಂ ॥

ನಾಗವರ್ಮನ ಪ್ರಕಾರ ಮೊದಲನೆಯ ಪಾದದಲ್ಲಿ ಆರಂಭದಲ್ಲಿ ಆರು ಮಾತ್ರೆಗಳು ಬರುತ್ತವೆ, ಎರಡನೆಯ ಪಾದದಲ್ಲಿ ಆರಂಭದಲ್ಲಿ ಆರು ಮಾತ್ರೆಗಳು ಬರುತ್ತವೆ. ಅನಂತರ ಕಂದ ಪದ್ಯದ ಚತುರ್ಮಾತ್ರಾ ಗಣವೆ ಐದು ಬಂದು ಕೊನೆಯಲ್ಲಿ ಗುರು ಬರುತ್ತದೆ, ದುವಯಿಗೆ ಒಂದು ಪಾದಕ್ಕೆ 28 ಮಾತ್ರೆಗಳು ಬರುತ್ತವೆ. ಈ ಅಧಿಕಾರದಲ್ಲಿ ನಾಗವರ್ಮ ರಗಳೆ, ಸಂಕೀರ್ಣಕ ಮತ್ತು ದುವಯಿ ಎನ್ನುವ ಪ್ರಾಕೃತ ಮೂಲದ ಪದ್ಯಗಳ ಜಾತಿಯನ್ನು ಕನ್ನಡಕ್ಕೆ ತಂದಿರುವುದು ಶ್ಲಾಘನೀಯ ಸಂಗತಿ.

ಪಂಚಮಾಧಿಕಾರಂ – ಕರ್ಣಾಟವಿಷಯಜಾತಿವೃತ್ತಪ್ರಕರಣಂ

ಈ ಅಧಿಕಾರದಲ್ಲಿ ನಾಗವರ್ಮ ಕನ್ನಡ ಭಾಷೆಯ ವಿಶಿಷ್ಟವಾದ ಪದ್ಯ ಪ್ರಕಾರಗಳನ್ನು ವಿವರಿಸಿದ್ದಾನೆ. ಕರ್ಣಾಟಕವಿಷಯಜಾತಿಯನ್ನು, ದೇಶೀ ಛಂದಸ್ಸು, ಅಂಶ ಛಂದಸ್ಸು ಮುಂತಾದ ಹೆಸರುಗಳಿಂದ ಗುರುತಿಸಲಾಗುವುದು. ಮೊದಲು ಗಣಗಳು ಹುಟ್ಟುವ ರೀತಿಯನ್ನು ಪ್ರಸ್ತಾಪಿಸಿದ ನಾಗವರ್ಮ, ಆ ಗಣಗಳಿಂದಾಗುವ ಐದು ಅಕ್ಕರಗಳ ಛಂದಸ್ಸಿನ ಲಕ್ಷಣವನ್ನು ತಿಳಿಸಿದ್ದಾನೆ. ಅವುಗಳೆಂದರೆ

ಪಿರಿಯಕ್ಕರಂ

ಮೊದಲೊಳಜಗಣಂ ಕುಂದದೆ ಬರ್ಕತ್ತಮಯ್ದುಗಣಂಗಳೆ ವಿಷ್ಣುವಕ್ಕುಂ
ತುದಿಯೊಳೇೞನೆಂಬ ತಾಣದೊಳೆಲ್ಲಿಯುಂ ಕಂದರ್ಪರಿಪುಗಣಂ ನೆಲಸಿ ನಿಲ್ಕೆ
ಪದದೊಳೆರಡೆಂಬ ಸಂಖ್ಯೆಯೊಳಾಱಱೊಳಜಗಣಂ ಸಮವಾಯಮಪ್ಪೊಡಕ್ಕುಂ
ಸದಮಳೇಂದುನಿಭಾನನೆ ನಾಕಿಗನಿಷ್ಟದಿನಿಂತಿದು ಪಿರಿಯಕ್ಕರಂ ॥

ಪಿರಿಯಕ್ಕರದ ಲಕ್ಷಣವನ್ನು ಹೀಗೆ ವಿವರಿಸಬಹುದು – ಪ್ರತಿಪಾದದಲ್ಲಿಯೂ ಮೊದಲು ಅಜಗಣ – ಬ್ರಹ್ಮಗಣ, ಮುಂದೆ ಐದು ಗಣಗಳೂ ವಿಷ್ಣುಗಣಗಳು. ಕೊನೆಯಲ್ಲಿ ಏಳನೆಯ ಸ್ಥಾನದಲ್ಲಿ ನಾಲ್ಕು ಪಾದಗಳಲ್ಲೂ ರುದ್ರಗಣ ಬರುತ್ತದೆ. ಪಾದಗಳಲ್ಲಿ ಎರಡನೆಯ ಗಣದ ಜಾಗದಲ್ಲಿ, ನಾಲ್ಕನೆಯ ಗಣದ ಸ್ಥಾನದಲ್ಲಿ ಬ್ರಹ್ಮಗಣ ಬಂದರೂ ಬರಬಹುದು.

ದೊರೆಯಕ್ಕರಂ

ದೊರೆಯಕ್ಕರವನ್ನು ನಾಗವರ್ಮ ಈ ಪದ್ಯದಲ್ಲಿ ಪ್ರಸ್ತಾಪಿಸುತ್ತಾನೆ

ಸರಸಿಜೋದರಗಣಮೆರಡಜನುಮಲ್ಲಿ ನೆರೆದಿರ್ಕೆ ಮತ್ತಂ
ಸರಸಿಜೋದರಗಣಮೆರಡಜನುಮಕ್ಕೆ ಗುಣಮುಮಾಱಕ್ಕುಂ
ಸರಸಿಜಲೋಚನೇ ದೊರೆವೆತ್ತ ಗಣದಿಂ ದೊರೆವೆತ್ತ ಪೆಸರಿಂ
ದೊರೆಯಾಗಿ ಸಂದುದು ದೊರೆಯಕ್ಕರಮಿದನಱವುದೀ ತೆಱದಿಂ ॥

ಸರಸಿಜ ಲೋಚನೆ, ಇಲ್ಲಿ ಪ್ರತಿಪಾದದಲ್ಲಿಯೂ ಎರಡು ವಿಷ್ಣುಗಣಗಳು ಮತ್ತು ಒಂದು ಬ್ರಹ್ಮಗಣ ಬರಲಿ, ಆನಂತರ ಎರಡು ವಿಷ್ಣುಗಣಗಳು ಮತ್ತು ಒಂದು ಬ್ರಹ್ಮಗಣವೂ ಕೂಡ ಬರಲಿ. ಇದರಿಂದ ಒಟ್ಟಾರೆಯಾಗಿ ಆರು ಗಣಗಳು ಬರುವುದರಿಂದ ಇದು ದೊರೆಯಕ್ಕರವೆಂದು ಪ್ರಸಿದ್ಧವಾಯಿತು.

ನಡುವಣಕ್ಕರಂ

ನಡುವಣಕ್ಕರದ ಲಕ್ಷಣ ಈ ಮಾದರಿಯಲ್ಲಿದೆ –

ಜಳಜಸಂಭವಗಣಮಕ್ಕೆ ಮೊದಲೊಳೆ ನಡುವೆ ಮೂಱುಂ
ಜಳರುಹೋದರಗಣಮಕ್ಕೆ ಬೞೆ[ಕೆ] ಕಾಮಾರಿಗಣಂ
ತಿಳಕದಂತಿರೆ ತಲೆಯೊಳೆ ಬಂದಿರ್ಕೆ ಕಾಮಬಾಣಾ
ವಳಿಯ ಪಾಂಗಯ್ದೆ ಗಣಮಕ್ಕೆ ನಡುವಣಕ್ಕರಕೆ ಸಖೀ ॥

ಪ್ರಿಯ ಸಖಿ, ನಡುವಣಕ್ಕರದಲ್ಲಿ ಪ್ರತಿಪಾದದ ಮೊದಲಲ್ಲೇ ಒಂದು ಬ್ರಹ್ಮಗಣ ಬಂದು ನಡುವೆ ಮೂರು ವಿಷ್ಣುಗಣಗಳು ಬರಲಿ. ಪ್ರತಿಪಾದಕ್ಕೂ ತಿಲಕವಿಟ್ಟಹಾಗೆ ಕೊನೆಯ ಗಣ ಸ್ಥಾನದಲ್ಲಿ ರುದ್ರಗಣ ಬರಲಿ, ಒಟ್ಟಾರೆ ಮನ್ಮಥನ ಪಂಚಬಾಣಗಳಂತೆ ಪ್ರತಿಪಾದದಲ್ಲೂ ಐದು ಗಣಗಳು ಬರಲಿ.

ಎಡೆಯಕ್ಕರಂ

ಎಡೆಯಕ್ಕರದ ವಿನ್ಯಾಸ ಹೀಗಿದೆ

ವನಜಸಂಭವಗಣಮಕ್ಕೆ ಮೊದಲೊಳತ್ತಲ್
ವನರುಹೋದರಗಣಯುಗಳಮದಕ್ಕೆ ರು
ದ್ರನದಱಂತ್ಯದೊಳ್ ಬಂದಿರ್ಕೆ ನಾಲ್ಕೆ ಗಣ
ವನಿತೆ ವನಿತೇ ಕೇಳೆಡೆಯಕ್ಕರಕ್ಕೆನಸುಂ ॥

ವನಿತೆ ಕೇಳು ಎಡೆಯಕ್ಕರದಲ್ಲಿ ಮೊದಲು ಬ್ರಹ್ಮಗಣ ಬಂದು,

ಅದರ ಜೊತೆಯಲ್ಲೇ ವಿಷ್ಣುಗಣವೂ ಬರಲಿ, ಅಂತ್ಯದಲ್ಲಿ ರುದ್ರಗಣ ಪ್ರತಿಪಾದದಲ್ಲಿಯೂ ಇರುತ್ತದೆ. ಎಡೆಯಕ್ಕರದಲ್ಲಿ ನಾಲ್ಕುಗಣಗಳು ಬರುತ್ತವೆ.

ಕಿರಿಯಕ್ಕರಂ

ಕಿರಿಯಕ್ಕರದ ಲಕ್ಷಣಗಳನ್ನು ನಾಗವರ್ಮ ಈ ಪದ್ಯದಲ್ಲಿ ಹೊಂದಿಸಿದ್ದಾನೆ

ಪೊಡೆಯಲರವರಿರ್ವರ್ ಮೊದಲೊಳಿರ್ಕೆ

ಜಡೆಯ ಶಂಕರನೊರ್ವಂ ತುದಿಯೊಳಿರ್ಕೆ

ಮಡದಿ ಕೇಳ್ ಮೂಱಿ ಗಣಮೆಸೆದಿರ್ಕೆ

ಗಡ ಕಿಱಿಯಕ್ಕರಕ್ಕಿದೆ ಲಕ್ಷಣಂ ॥

ಮಡದಿ ಕೇಳು ಕಿರಿಯಕ್ಕರ ಹೆಸರಿನಂತೆ ಕಿರಿದಾದುದು. ಅದಕ್ಕಾಗಿಯೇ ಪ್ರತಿಪಾದದಲ್ಲೂ ಮೊದಲಲ್ಲಿ ಎರಡು ವಿಷ್ಣುಗಣಗಳು ಇದ್ದು ಕೊನೆಯಲ್ಲಿ ಒಂದು ರುದ್ರಗಣ ಇರುತ್ತದೆ. ಇದು ಕಿರಿಯಕ್ಕರವಾದುದರಿಂದ ಇದರಲ್ಲಿ ಮೂರುಗಣಗಳು ಬರುತ್ತವೆ. ವಿಶೇಷವೆಂದರೆ ನಾಗವರ್ಮನ ಈ ಲಕ್ಷಣಗಳು ಛಂದಸ್ಸಿನ ಹೆಸರಿಗೆ ಅನ್ವರ್ಥವಾಗುವಂತೆ ಇವೆ

ತ್ರಿಪದಿಯ ಲಕ್ಷಣ – ತ್ರಿಪುರುಷರಿಂದಾದ ಅಂಶಗಣಗಳಿಂದ ತ್ರಿಪದಿಯು ಉಂಟಾಗುತ್ತದೆ. ಅದರ ಲಕ್ಷಣದ ಪದ್ಯ ಕೆಳಗಿನಂತಿದೆ.

ವಿ ವಿ ವಿ ವಿ

ಬಿಸರುಹೋ ದ್ಭವಗಣಂ । ರಸದಶ ಸ್ಥಾನದೊಳ್

ವಿ ಬ್ರ ವಿ ವಿ

ವಿಸರುಹ ನೇತ್ರ ಗಣಮೆ ಬ. ರ್ಕುಟಿದುವು

ವಿ ಬ್ರ ವಿ

ಬಿಸರುಹ. ನೇತ್ರೇ. ತ್ರಿಪದಿಗೆ ॥

ತ್ರಿಪದಿ ಛಂದಸ್ಸಿನಲ್ಲಿ ಮೂರು ಸಾಲುಗಳಿದ್ದು ಮೊದಲನೆಯ ಪಾದದಲ್ಲಿ ನಾಲ್ಕು ವಿಷ್ಣುಗಣ, ಎರಡನೆಯ ಪಾದದಲ್ಲಿ ವಿಷ್ಣು, ಬ್ರಹ್ಮ, ಎರಡು ವಿಷ್ಣುಗಣಗಳು ಮತ್ತು ಮೂರನೆಯ ಪಾದದಲ್ಲಿ ವಿಷ್ಣು, ಬ್ರಹ್ಮ ಮತ್ತು ವಿಷ್ಣುಗಣಗಳು ಬರುತ್ತವೆ.

ಏಳೆ – ಏಳೆಯ ಲಕ್ಷಣವನ್ನು ನಾಗವರ್ಮ ನಿರೂಪಿಸಿದ್ದಾನೆ

ವಿ ವಿ ವಿ ವಿ

ಭುಜಪಕ್ಷ ಪುರಗಣ। ವ್ರಜದೊಳಾ ಱಱಕೊಳಕ್ಕು

ವಿ ವಿ ವಿ

ಮಜಗಣ ಮೇಳೆ ಗಿಭಗತೀ

ದೇಶೀ ಛಂಡಸ್ಸುಗಳಲ್ಲಿ ಅತಿ ಚಿಕ್ಕದಾದ ಛಂದಸ್ಸಿದು, 2, 2, 3ರ ಕ್ರಮದಲ್ಲಿ ಗಣಗಳು ಬರುತ್ತವೆ – ಭುಜ 2, ಪಕ್ಷ – 2, ತ್ರಿಪುರ – 3. ಆರನೆಯ ಸ್ಥಾನದಲ್ಲಿ ಬ್ರಹ್ಮಗಣ ಬಂದು ಉಳಿದ ಗಣಗಳು ವಿಷ್ಣುಗಣಗಳಾಗಿರುತ್ತವೆ.

ಚೌಪದಿ –

ಮದನನ ತಂದೆಯ ಮುಂ

ದುದಯಿಸೆ ಶಂಕರನೊ

ಳ್ಪೊದವಿರೆ ಸಂದುದು ನೋ

ಡಿದೆ ಸತಿ ಚೌಪದಿಗೆ ॥

ಚೌಪದಿಯ ಲಕ್ಷಣವೆಂದರೆ ಮದನನ ತಂದೆಯ ಮುಂದೆ ಶಂಕರನು ಉದಯಿಸಬೇಕು – ಮದನನ ತಂದೆ ವಿಷ್ಣು, ವಿಷ್ಣುಗಣದ ಮುಂದೆ ರುದ್ರಗಣ ಕಾಣಿಸಿಕೊಂಡರೆ ಅದು ಸೊಗಸಾದ ಚೌಪದಿಯಾಗುತ್ತದೆ.

ಛಂದೋವತಂಸಂ

ಮಂದರಧರಗಣಮೆಸೆದಿರೆ ಮೊದಲೊಳ್

ಬಂದಿರೆ ನಾಲ್ಕೆಡೆ ಬಿಸರುಹಜನ್ಮಂ

ಸಂದುದು ಲಕ್ಷಣಮೀ ತೆಱದಿಂದಂ

ಛಂದೋವತಂಸಕೆ ಮದಗಜಗಮನೇ ॥

ಮದಗಜಗಮನೇ ಛಂದೋವತಂಸದ ಲಕ್ಷಣವನ್ನು ಹೀಗಿದೆ – ಮೊದಲಲ್ಲಿ ಮಂದರಧರಗಣ – ಮೂರು ವಿಷ್ಣುಗಣ ಬಂದು ನಾಲ್ಕನೆಯ ಸ್ಥಾನದಲ್ಲಿ ಬ್ರಹ್ಮಗಣ ಬರುತ್ತದೆ.

ಅಕ್ಕರಿಕೆ – ಅಕ್ಕರಿಕೆಯ ಲಕ್ಷಣ ಬಹುಸೊಗಸಾಗಿ ನಿರೂಪಿತವಾಗಿದೆ ಮತ್ತು ಲಯಬದ್ಧವಾಗಿದೆ.

ಮುರರಿಪು ಬೊಮ್ಮಂ ಮುರರಿಪು ಬೊಮ್ಮಂ ಮುರರಿಪು ಶೂಲಧರಂ
ಶಿರದೊಳೆ ನಿಲು ಖರಗಣಮಕ್ಕುಂ ಸುರುಚಿರಮಾತ್ರೆಗಳಿಂ
ನಿರುಪಮಛಂದಂ ಪರಿಮಿತಮಪ್ಪಂತಿರೆ ಯತಿ ಋತುನಿಯತಂ
ಬರೆ ತರಳಾಕ್ಷೀ ಧರೆಯೊಳಿದೆತ್ತಂ ಕರಮೆಸೆವಕ್ಕರಿಕೆ ॥

ತರಳಾಕ್ಷಿ – ಮುರರಿಪು ಬೊಮ್ಮಂ – ವಿಷ್ಣು ಬ್ರಹ್ಮ, ವಿಷ್ಣು ಬ್ರಹ್ಮ, ಪುನಃ ವಿಷ್ಣು ಮತ್ತು ರುದ್ರ ಗಣ ಕೊನೆಯಲ್ಲಿ ನಿಲ್ಲುತ್ತದೆ. ಇದರಿಂದ ಒಟ್ಟು ಆರುಗಣಗಳಾಗುತ್ತವೆ, ಬಹು ಸುಂದರವಾದ ಮಾತ್ರೆಗಳ ಜೋಡಣೆ ಇರುವ ವಿಶೇಷವಾದ ಛಂದಸ್ಸಿದು.

ಮದನವತಿ –

ಮದನನ ತಂದೆಯ ಗಣಮವು ವಿಷಯದೊಳಿರೆ ಗುರು ಮುಂ
ದೊದವಿರೆ ಪದದೊಳಮದಱವೊಲಪ್ಪುದು ಹರಪದಮುಂ
ವಿದಿತಮುಪೇಂದ್ರಚತುಷ್ಟಯದತ್ತಲಬುಜವದನೇ
ಮದನಹರತ್ರಯದಿಂ ಹರಿ ಕಡೆಪಡೆ ಮದನವತೀ ॥

ಅಬುಜವದನೆ ಎಂದು ಹೇಳುವ ಈ ಪದ್ಯ ಮದನನ ತಂದೆಯ, ಎಂದರೆ ವಿಷ್ಣುವಿನ ಗಣದಿಂದಲೇ ಆರಂಭವಾಗುತ್ತದೆ. ಅದು ಐದು ಗಣ ಸ್ಥಾನದಲ್ಲಿ ಬಂದು ಮುಂದೆ ಒಂದು ಗುರು, ಮುಂದಿನ ಪಾದದಲ್ಲಿ ನಾಲ್ಕು ವಿಷ್ಣುಗಣ ಕೊನೆಯಲ್ಲಿ ರುದ್ರಗಣ, ಮುಂದಿನ ಪಾದದಲ್ಲಿ ಮೂರು ರುದ್ರಗಣ ಮತ್ತು ಕೊನೆಯಲ್ಲಿ ವಿಷ್ಣುಗಣ ಬಂದರೆ ಅದು ಮದನವತಿ ಛಂದಸ್ಸಾಗುತ್ತದೆ.

ಗೀತಿಕೆ

ಎರಡಱಕೊಳಾಱಿಂಬ ಸಂಖ್ಯೆಯೊಳ್
ಬರೆ ಪದ್ಮಭವನಱಿದುವು ಮಚ್ಚುವ ತೆಱದಿಂ
ದಿರೆ ಮುಂದಣ ಪದಂ ಮುನ್ನಿನಂ
ತಿರೆ ಕರಂ ಗೀತಿಕೆಯಿಂತಕ್ಕುಂ ಸಖೀ ॥

ಗೆಳತಿ ಇಲ್ಲಿ ಬ್ರಹ್ಮಗಣ ಎರಡು ಮತ್ತು ಆರನೆಯ ಸ್ಥಾನದಲ್ಲಿ ಬಂದು, ಉಳಿದ ಗಣಗಳು ಮೆಚ್ಚಿಗೆಯಾಗುವ ಮಾದರಿಯಲ್ಲಿ ಬರಬೇಕು.

ಮೊದಲ ಎರಡು ಪಾದಗಳ ಮಾದರಿಯಲ್ಲಿಯೇ ಮುಂದಿನ ಎರಡು ಪಾದಗಳು ಬಂದರೆ ಅದು ಗೀತಿಕೆಯಾಗುತ್ತದೆ.

ಉತ್ಸಾಹ

ಭೂಹಿತಾರ್ಥಮೆನಿಸುವಜನ ಗಣಮವೆಯ್ದೆ ಸಪ್ತಸಂ
ದೋಹಮತ್ತಲೊಂದೆ ಗುರು ಬೆಡಂಗನಾಳ್ದು ನಿಲೆ ಲಯ
ಗ್ರಾಹಿಯಾಗಿ ಮಧುರವಚನರಚನೆವೆತ್ತು ಬಂದೊಡು
ತ್ಸಾಹಮೆಂಬ ಪೆಸರೊಳೆಸೆವುದಬ್ಜಪತ್ರಲೋಚನೇ ॥

ಕಮಲದ ಎಸಳಿನಂತಹ ಕಣ್ಣವಳೆ, ಭೂಮಿಗೆ ಹಿತವೆನಿಸುವ ಅಜನ – ಬ್ರಹ್ಮನ ಗಣಗಳು ಏಳು ಗಣ ಸ್ಥಾನಗಳಲ್ಲಿ ಬಂದು ಕೊನೆಯಲ್ಲಿ ಗುರು ಬರುವುದರಿಂದ, ಇಲ್ಲಿನ ಲಯ ಬಹುಮಧುರವಾಗಿರುತ್ತದೆ.

ಉತ್ಸಾಹದಂಡಕಂ

ಮೃದುಮಧುರವೆನಿಸುವುತ್ಸಾ
ಹದಂಡಕಂ ಧರೆಗೆ ನಾಕಿಯೆಂಬಜಗಣದಿಂ
ಪುದಿದಬಲೆ ಕಡೆಯ ಗುರು ಚೆ
ಲ್ವೊದವಿರೆ ಲಕ್ಷಣನಿಯುಕ್ತಮೆನೆ ಪೆಸರ್ವಡೆಗುಂ ॥

ಈ ದಂಡಕದ ಲಕ್ಷಣವನ್ನು ನಾಗವರ್ಮ ಪೂರ್ಣಪ್ರಮಾಣದಲ್ಲಿ ತಿಳಿಸಿಲ್ಲ, ಉತ್ಸಾಹದಂಡಕ ಬ್ರಹ್ಮಗಣದಿಂದ ತುಂಬಿದ್ದು ಕೊನೆಯಲ್ಲಿ ಗುರು ಬರಬೇಕು ಎನ್ನುವುದನ್ನು ಹೇಳಿದ್ದಾನೆಯೇ ಹೊರತು ಎಷ್ಟು ಗಣಗಳು ಎನ್ನುವುದು ಸೂಚಿತವಾಗಿಲ್ಲ.

ಷಟ್ಪದಿ – ಮೂಲ ಅಂಶ ಛಂದಸ್ಸಿನ ಷಟ್ಪದಿಯನ್ನು ಮಾತ್ರಾ ಛಂದಸ್ಸಿನ ಶರಷಟ್ಪದಿಯೊಂದಿಗೆ ಹೋಲಿಸುವ ಅಗತ್ಯವಿಲ್ಲ. ಷಟ್ಪದಿಯ ಲಕ್ಷಣ ಇಂತಿದೆ–

ಮಂದರಧರಗಣಂ
ಬಂದಿರ್ಕಾಜಿಂತ್ಯದೊಳ್
ಕುಂದದೆ ನೆಲಸುಗೆ ಮದನಹರಂ
ಇಂದುನಿಭಾನನೆ
ಮುಂದಣ ಪದ[ಮು]ಮೀ
ಯಂದಮೆಯಾಗ[ಲ್ಕೆ] ಷಟ್ಪದಿ ಕೇಳ್ ॥

ಇಂದು ನಿಭಾನನೆ ಕೇಳು ಮೊದಲು ಮಂದರಧರ – ವಿಷ್ಣುಗಣಗಳು ಆರು ಬಂದು, ಕೊನೆಯಲ್ಲಿ ರುದ್ರಗಣ ಇರಬೇಕು. ಮುಂದಿನ ಪಾದಗಳೂ ಅದೇ ರೀತಿಯಲ್ಲಿದ್ದರೆ ಅದು ಷಟ್ಪದಿ ಎಂದು ಹೇಳಿ ನಾಗವರ್ಮ ಈ ಪ್ರಕರಣವನ್ನು ಮುಕ್ತಾಯಮಾಡುತ್ತಾನೆ.

ಷಷ್ಠಾಧಿಕಾರಂ – ಷಟ್ಪ್ರತ್ಯಯವಿವರಣಪ್ರಕರಣಂ

ಇದು ಛಂದೋಂಬುಧಿಯ ಕೊನೆಯ ಅಧಿಕಾರ, ಇದರಲ್ಲಿ ಷಟ್ಪ್ರತ್ಯಯ ಎನ್ನುವ ವಿಷಯವನ್ನು ಕುರಿತು ನಾಗವರ್ಮ ಚರ್ಚಿಸಿದ್ದಾನೆ. ಇದು ವರ್ಣವೃತ್ತಗಳಿಗೆ ಮಾತ್ರ ಅನ್ವಯವಾಗುವ **ಪ್ರಸ್ತಾರ, ನಷ್ಟ, ಉದ್ದಿಷ್ಟ, ಏಕದ್ವ್ಯಾದಿಲಗಕ್ರಿಯಾ, ಸಂಖ್ಯಾನ ಮತ್ತು ಅಧ್ವಯೋಗ** ಎನ್ನುವ ವಿಷಯಗಳನ್ನು ಕುರಿತು ಚರ್ಚೆಮಾಡಿದ್ದಾನೆ.

ನಾಗವರ್ಮನ ಛಂದೋಂಬುಧಿ ಒಂದು ಉತ್ತಮ ಕೃತಿ. ಇಡೀ ಕೃತಿಯಲ್ಲಿ ಕನ್ನಡ ಛಂದಸ್ಸಿನ ಲಕ್ಷಣಗಳನ್ನು ನಿರೂಪಿಸಿರುವ ನಾಗವರ್ಮನ ಶಾಸ್ತ್ರಜ್ಞತೆ ಎದ್ದು ಕಾಣುವುದು ಕನ್ನಡ ದೇಶ್ಯವೃತ್ತಗಳ ನಿರೂಪಣೆಯಲ್ಲಿ. ಕನ್ನಡ ಕಾವ್ಯ ಮತ್ತು ಜನಪದ ಸಾಹಿತ್ಯದಲ್ಲಿನ ವೃತ್ತಗಳ ಲಕ್ಷಣ ಮತ್ತು ಸ್ವರೂಪ ಸಾಹಿತ್ಯಾಭ್ಯಾಸಿಗಳ ಅವಗಾಹನೆಗೆ ಬಂದದ್ದೇ ಈ ಕೃತಿಯಿಂದ. ಅದಲ್ಲದೆ ಅನೇಕ ಕವಿಗಳು ತಮ್ಮ ಕೃತಿಯಲ್ಲಿನ ವಿಷಯದ ಸಮರ್ಥನೆಗೆ ನಾಗವರ್ಮನ ಛಂದೋಂಬುಧಿಯನ್ನು ಬಳಸಿರುವುದು ಕೂಡ, ಹೆಮ್ಮೆಯ ಸಂಗತಿಯಾಗಿದೆ.

ಪರಾಮರ್ಶನ ಗ್ರಂಥಗಳು

1. **ಛಂದೋಂಬುಧಿ,** ಸಂ. ಕುಕ್ಕಿಲ ಕೃಷ್ಣಭಟ್, ಡಿ.ವಿ.ಕೆ ಮೂರ್ತಿ, ಮೈಸೂರು, 1975

2. **ಛಂದೋಂಬುಧಿ,** ಡಾ. ಟಿ.ವಿ. ವೆಂಕಟಾಚಲ ಶಾಸ್ತ್ರೀ, ತನುಮನ ಪ್ರಕಾಶನ, ಮೈಸೂರು, 2018

****

ಕರ್ನಾಟಕ ಕಾದಂಬರಿ : ಪ್ರೇಮದ ಭಿನ್ನ ನೆಲೆಗಳು

– ಡಾ. ಶ್ರೀಧರ.ಎನ್, ಕಾಸರಗೋಡು

ಕರ್ನಾಟಕ ಕಾದಂಬರಿಯು ಬಾಣಭಟ್ಟನು ಸಂಸ್ಕೃತದಲ್ಲಿ ರಚಿಸಿದ ಪ್ರಸಿದ್ಧ ಗದ್ಯಕೃತಿ ಕಾದಂಬರಿ ಕಾವ್ಯದ ಕನ್ನಡ ರೂಪ. ಸಂಸ್ಕೃತ ಕಾವ್ಯ ಪರಂಪರೆಯಲ್ಲಿ ಪದ್ಯಕ್ಕೆ ಕಾಳಿದಾಸ ಹೆಸರಾಗಿರುವಂತೆ, ಗದ್ಯಕಾವ್ಯಕ್ಕೆ ಬಾಣಭಟ್ಟ ಹೆಸರಾಗಿದ್ದಾನೆ. ಕಾದಂಬರಿಯ ಕಥೆ ಬಾಣ ಕವಿಯ ಸ್ವಂತ ಸೃಷ್ಟಿಯಲ್ಲ. ಅದರ ಮೂಲವು ಪೈಶಾಚೀ ಭಾಷೆಯಲ್ಲಿ ರಚಿತವಾದ ಗುಣಾಢ್ಯನ ಬೃಹತ್ಕಥೆಯಲ್ಲಿದೆ. ಬೃಹತ್ಕಥೆಯು ಇಂದು ನಮಗೆ ಉಪಲಬ್ಧವಿಲ್ಲ. ಆದರೆ ಅದನ್ನು ಅನುಸರಿಸಿ ಬರೆದಿರುವ ಸಂಸ್ಕೃತದ ಕಥಾ ಸರಿತ್ಸಾಗರ ನಮಗೆ ಸಿಕ್ಕಿದೆ. ಈ ಕೃತಿಯ ಮಕರಂದಿಕೋಪಾಖ್ಯಾನದಲ್ಲಿ ಕಾದಂಬರಿ ಕಥೆಯ ಮೂಲ ರೇಖೆಗಳಿವೆ. ಬಾಣಭಟ್ಟ ಈ ಕಥೆಯನ್ನು ವಿಸ್ತರಿಸಿ, ವರ್ಣಿಸಿ ಸುಂದರ ಗದ್ಯಕಾವ್ಯವಾಗಿ ಪರಿವರ್ತಿಸಿದ್ದಾನೆ. ಬಾಣಕವಿಯು ಕಾದಂಬರಿ ಕಾವ್ಯವನ್ನು ಸಂಪೂರ್ಣವಾಗಿ ರಚಿಸಲಿಲ್ಲವೆಂದೂ, ಕಾದಂಬರಿ ಚಂದ್ರಾಪೀಡರ ಪ್ರಥಮ ಸಮಾಗಮದ ವರೆಗೆ ಬರೆದು ನಿಲ್ಲಿಸಿದನೆಂದೂ, ಮುಂದೆ ಅವನ ಮಗನಾದ ಭೂಷಣಭಟ್ಟನು ಈ ಕಾವ್ಯವನ್ನು ಪೂರ್ತಿಗೊಳಿಸಿದನೆಂದೂ ಹೇಳಲಾಗಿದೆ.

ಬಾಣಭಟ್ಟನು ಉತ್ತರ ಭಾರತದ ಪ್ರಸಿದ್ಧ ಚಕ್ರವರ್ತಿ ಸ್ಥಾಣೇಶ್ವರದ ಶ್ರೀಹರ್ಷನ ಆಸ್ಥಾನಕವಿಯಾಗಿದ್ದನು. ಹರ್ಷಚರಿತೆ ಮತ್ತು ಕಾದಂಬರಿ ಅವನ ಎರಡು ಕಾವ್ಯಗಳು. ಬಾಣಕವಿಯ ಪ್ರತಿಭೆ ಅದ್ಭುತವಾದುದು. ಅವನೇ ಹೇಳುವಂತೆ ಕಾದಂಬರಿ ಕಾವ್ಯ ಒಂದು 'ಜಗತ್ಕೌತುಕ'. ಈ ಕಾವ್ಯದಲ್ಲಿ ಅವನು ಮಾನವ ಹೃದಯದ ಸೂಕ್ಷ್ಮ ಭಾವಗಳನ್ನೂ, ಪ್ರಕೃತಿಯ ವಿಧವಿಧ ಸೌಂದರ್ಯವನ್ನೂ ಸುಂದರವಾಗಿ ವರ್ಣಿಸಿದ್ದಾನೆ. ಸುದೀರ್ಘವಾದ ಸಮಸ್ತ ಪದಗಳಿಂದಲೂ, ಅನೇಕ ವಿಧವಾದ ವರ್ಣನೆಗಳಿಂದಲೂ ಕೂಡಿರುವ ಕಾದಂಬರಿ ಕಾವ್ಯವು ಪಂಡಿತರಿಗೆ ಒರೆಗಲ್ಲು. ಅವನ ಕಾವ್ಯದ ಅಳ ಅಗಲಗಳನ್ನು ಗಮನಿಸಿದರೆ 'ಬಾಣೋಚ್ಚಿಷ್ಟಂ ಜಗತ್ಸರ್ವಂ' ಎಂಬ ಮಾತು ಸತ್ಯ ಎಂದು ಹೇಳಬೇಕಾಗುತ್ತದೆ.

ಬಾಣಭಟ್ಟನ ಸಂಸ್ಕೃತ ಕಾದಂಬರಿ ಕಾವ್ಯವನ್ನು ಕನ್ನಡಕ್ಕೆ ಅನುವಾದಿಸಿದ ಕವಿ ನಾಗವರ್ಮ. ಕನ್ನಡದಲ್ಲಿ ನಾಗವರ್ಮರು ಎಷ್ಟು ಮಂದಿ ಎಂಬುದು ಬಹು ಚರ್ಚಿತ ವಿಚಾರ. ನಾಗವರ್ಮ ಎಂಬ ಹೆಸರಿನ ಅನೇಕ ಕವಿಗಳು ಕನ್ನಡದಲ್ಲಿದ್ದು, ಯಾರು ಯಾವ ಕಾವ್ಯವನ್ನು ಬರೆದರು ಎಂಬುದು ಇಂದಿಗೂ ಸಂದಿಗ್ಧವಾಗಿದೆ. ಛಂದೋಬುಧಿ ಮತ್ತು ಕರ್ನಾಟಕ ಕಾದಂಬರಿ ಕಾವ್ಯವನ್ನು ಬರೆದ ಕವಿ ಒಂದನೇ ನಾಗವರ್ಮನಿರಬೇಕೆಂದು ಸಾಧಾರವಾಗಿ ಊಹಿಸಲಾಗಿದೆ. ಅವನ ಕಾಲವನ್ನು ಕ್ರಿ.ಶ. ಸುಮಾರು 990 ಎಂದು ಅಂದಾಜಿಸಲಾಗಿದೆ. ತನ್ನ ಮತವನ್ನು ಕುರಿತು ಕವಿಯು ಸ್ಪಷ್ಟವಾಗಿ ಹೇಳಿಕೊಂಡಿಲ್ಲವಾದರೂ ಕಾದಂಬರಿಯ ಆವರಣವನ್ನು ನೋಡಿದರೆ ಈತನು ಬ್ರಾಹ್ಮಣ ಕವಿ ಎಂದು ತೋರುತ್ತದೆ. ಛಂದೋಬುಧಿಯನ್ನು ಬರೆದವನು ಇದೇ ನಾಗವರ್ಮನಾಗಿದ್ದರೆ, ಅದರಲ್ಲಿಯೂ ಕವಿ ಬ್ರಾಹ್ಮಣನೆಂಬುದಕ್ಕೆ ಆಧಾರಗಳು ದೊರಕುತ್ತವೆ. ಕರ್ನಾಟಕ ಕಾದಂಬರಿ ಕಾವ್ಯದಲ್ಲಿ ಈತನು ತನ್ನ ಸ್ವವಿಷಯವನ್ನು ಹೆಚ್ಚು ಹೇಳಿಕೊಂಡಿಲ್ಲ. ಕಾವ್ಯದ ಮೊದಲನೆಯ ಪದ್ಯದಲ್ಲಿ ಶಿವನ ಜಟೆಯನ್ನು ಅಲಂಕರಿಸಿರುವ ಚಂದ್ರನನ್ನೂ, ಎರಡನೆಯ ಪದ್ಯದಲ್ಲಿ ಸರಸ್ವತಿಯನ್ನೂ ಸ್ತುತಿಸಿದ್ದಾನೆ. ಮೂರನೆಯ ಪದ್ಯದಲ್ಲಿ ಬಾಣಕವಿಯನ್ನೂ, ನಾಲ್ಕು, ಐದು ಮತ್ತು ಆರನೇ ಪದ್ಯದಲ್ಲಿ ಸಂಸ್ಕೃತ

ಮತ್ತು ಕನ್ನಡ ಕಾದಂಬರಿಗಳ ಮಹತ್ವವನ್ನೂ ವರ್ಣಿಸಿದ್ದಾನೆ. ಬಳಿಕ ಏಳನೆಯ ಪದ್ಯದಲ್ಲಿ,

> **ಕೃತಿಪತಿ ನರೇಂದ್ರಚಂದ್ರಂ**
> **ಕೃತಿಯಂ ಪೇೞ್ದಂ ಬುಧಾಬ್ಜವನಕಳಹಂಸಂ**
> **ಕೃತಿ ಕಾದಂಬರಿಯೆನೆ ಸ**
> **ತ್ಕೃತಿ ಕಥಿತ ಕಥಾವತಾರಮೇಂ ಕೇವಳಮೇಂ** (ಕರ್ನಾಟಕ ಕಾದಂಬರಿ,1–7)

ಎಂದು ಹೇಳಿದ್ದಾನೆ. ಇಲ್ಲಿ 'ಕೃತಿಪತಿ ನರೇಂದ್ರಚಂದ್ರಂ' ಎಂದು ಹೇಳಿರುವುದರಿಂದ ಕವಿಗೆ ಚಂದ್ರನೆಂಬ ರಾಜನು ಆಶ್ರಯದಾತನಾಗಿದ್ದನು ಎಂದು ಅನುಮಾನಿಸಬಹುದು. 'ಬುಧಾಬ್ಜವನಕಳಹಂಸ' ಎಂಬುದು ಕವಿಯ ಬಿರುದು. ಭೂಮಿಯಲ್ಲಿ ರಾಜನಾಗಿ ಅವತರಿಸಿದ ಚಂದ್ರನೇ ಕಾವ್ಯದ ನಾಯಕನಾಗಿರುವಾಗ ಇದರ ಕಥಾವಸ್ತು ಸಾಮಾನ್ಯವಲ್ಲ ಎಂಬುದು ಅವನ ಅಭಿಪ್ರಾಯ.

ಕರ್ನಾಟಕ ಕಾದಂಬರಿ ಕಾವ್ಯದ ಕೊನೆಯ ಭಾಗದಲ್ಲಿ ಮತ್ತೆ ನಾಲ್ಕು ಪದ್ಯಗಳು ಕವಿಯ ಸ್ವವಿಚಾರದ ಕಡೆಗೆ ಬೆಳಕು ಚೆಲ್ಲುತ್ತವೆ. ಬಾಣನಿಂದ ಸಂಸ್ಕೃತದಲ್ಲಿ ರಚಿತವಾದ ಕಾದಂಬರಿ ಕಾವ್ಯವು 'ಕರ್ನಾಟಭಾಷಾ ಚತುರತ್ವಂ ಪೊರ್ದಿ ಪಸರಿಸಿ ರಾಜೇಂದ್ರ ಚಂದ್ರಾರ್ಕನೊಳ್ ಸಂಗತಿವೆತ್ತಾದಂ ತ್ರಿಲೋಕೀ ಸಹಚರಿಯೆನಿಸಿದುದು' ಎಂಬ ಮಾತು ಚಂದ್ರನೆಂಬ ರಾಜನು ನಾಗವರ್ಮನಿಗೆ ಆಶ್ರಯದಾತನಾಗಿದ್ದನು ಎಂಬ ಅಭಿಪ್ರಾಯವನ್ನು ಬಲಪಡಿಸುತ್ತದೆ. ಕಾವ್ಯಾರಂಭದ ಮಂಗಳಪದ್ಯದಲ್ಲಿ ಚಂದ್ರನನ್ನು ಸ್ತುತಿಸಿರುವುದು ಕೂಡ ಇದಕ್ಕೆ ಪೂರಕವಾಗಿದೆ. ಮುಂದಿನ ಪದ್ಯದಲ್ಲಿ ಭೋಜರಾಜನು ಮೆಚ್ಚಿ ತನಗೆ ಕಳಿಂಗ, ಕಾಂಭೋಜ ಮತ್ತು ಬಾಹ್ಲಿಕ ದೇಶಗಳ ಜಾತ್ಯಶ್ವಗಳನ್ನು ಕಾಣಿಕೆಯಾಗಿ ನೀಡಿದ ಎಂದು ತಿಳಿಸಿದ್ದಾನೆ. ಇಲ್ಲಿ ಉಕ್ತನಾದ ಭೋಜರಾಜ ಧಾರಾಪುರವನ್ನು ಆಳಿದ್ದ ಭೋಜನಾಗಿರಬೇಕು ಎಂದು ಕವಿಚರಿತಕಾರರು ಅಭಿಪ್ರಾಯಪಡುತ್ತಾರೆ. ಕವಿಗಳಿಗೆ ರಾಜರು ಮೆಚ್ಚಿ ಧನಕನಕ ವಸ್ತ್ರಗಳನ್ನೋ ಗ್ರಾಮಗಳನ್ನೋ ದಾನವಾಗಿ ನೀಡುವುದು ಸಂಪ್ರದಾಯ. ಆದರೆ ಭೋಜರಾಜನು ತನಗೆ ಜಾತ್ಯಶ್ವಗಳನ್ನು ಕೊಟ್ಟು ಗೌರವಿಸಿದನೆಂದು ಕವಿ ಹೇಳಿಕೊಂಡಿರುವುದರಿಂದ

ಈತನೊಬ್ಬ ಯುದ್ಧವೀರನಾಗಿರಬೇಕೆಂದು ಊಹಿಸಬಹುದು. ಕವಿಯ ಆಶ್ರಯದಾತನಾದ ಚಂದ್ರನು ಭೋಜರಾಜನ ಸಾಮಂತನಾಗಿದ್ದಿರಬಹುದು. ಧಾರಾನಗರದ ಭೋಜರಾಜನ ಕಾಲ ಕ್ರಿ.ಶ. 1000–1045 ಎಂದು ದೃಢಪಟ್ಟಿರುವುದರಿಂದ ಅವನ ಸಮಕಾಲೀನನಾದ ನಾಗವರ್ಮನು ಹತ್ತನೆಯ ಶತಮಾನದ ಅಂತ್ಯ ಹಾಗೂ ಹನ್ನೊಂದನೆಯ ಶತಮಾನದ ಆದಿಭಾಗದಲ್ಲಿ ಬದುಕಿ, ಚಂದ್ರನೆಂಬ ರಾಜನ ಆಸ್ಥಾನ ಕವಿಯಾಗಿ ಮೆರೆದು, ಯುದ್ಧದಲ್ಲಿ ಸಾಹಸವನ್ನು ತೋರಿಸಿ ಚಂದ್ರನ ಅಧಿರಾಜನಾದ ಭೋಜರಾಜನಿಂದಲೂ ಗೌರವವನ್ನು ಪಡೆದುಕೊಂಡಿರಬೇಕು.

ನಾಗವರ್ಮನು ಸಂಸ್ಕೃತ ಭಾಷೆಯಲ್ಲಿ ಪ್ರೌಢಕಾವ್ಯವೆಂದು ಪ್ರಸಿದ್ಧವಾದ ಕಾದಂಬರಿಯನ್ನು ಕನ್ನಡಕ್ಕೆ ಅನುವಾದಿಸುವ ಸಾಹಸವನ್ನು ಮಾಡಿದನು. ಈ ಸಾಹಸದ ಕೆಲಸದಲ್ಲಿ ಹತ್ತನೇ ಶತಮಾನದಲ್ಲಿ ರೂಢಿಯಲ್ಲಿದ್ದ ಕಾವ್ಯ ಪರಂಪರೆಯನ್ನು ಅವನು ಮುರಿದ. ತನಗಿಂತ ಹಿಂದಿನ ಕನ್ನಡ ಕವಿಗಳಾದ ಪಂಪ, ಪೊನ್ನ, ರನ್ನರು ಹಾಕಿಕೊಟ್ಟ ಧಾರ್ಮಿಕ ಮತ್ತು ಲೌಕಿಕ ಕಾವ್ಯ ಪರಂಪರೆಯನ್ನು ಅವನು ತಿರಸ್ಕರಿಸಿದ. ಪಂಪಾದಿ ಜೈನ ಕವಿಗಳು ಜೈನ ಪುರಾಣಗಳಿಂದ ತೀರ್ಥಂಕರರ ಕಥೆಗಳನ್ನು ಆರಿಸಿಕೊಂಡು ಆಗಮಿಕ ಕಾವ್ಯಗಳನ್ನು ಬರೆದರು. ವೈದಿಕ ಪುರಾಣಗಳಿಂದ ವಸ್ತುಗಳನ್ನು ಆಯ್ದುಕೊಂಡು ಸಮಕಾಲೀನ ರಾಜಕೀಯದ ಕಥೆಗಳನ್ನು ಬೆರೆಸಿ ಲೌಕಿಕ ಕಾವ್ಯಗಳನ್ನು ಬರೆದರು. ಆದರೆ ಇದೇ ಕಾಲಕ್ಕೆ ಸೇರಿದ ನಾಗವರ್ಮನು ಭಿನ್ನಮಾರ್ಗವನ್ನು ತುಳಿದು ಬಾಣಭಟ್ಟನ ಗದ್ಯಕಾವ್ಯವನ್ನು ಕನ್ನಡಕ್ಕೆ ಅನುವಾದಿಸುವ ಕೆಲಸವನ್ನು ಮಾಡಿದ. ಹಾಗೆ ಅನುವಾದ ಮಾಡುವಾಗ ಪದ್ಯವೇ ಮುಖ್ಯವಾಗಿರುವ ಚಂಪೂ ಸಾಹಿತ್ಯ ಪ್ರಕಾರವನ್ನು ಬಳಸಿಕೊಂಡ. ಜೈನ ಧರ್ಮದವನಲ್ಲದಿರುವುದರಿಂದ ಅವನಿಗೆ ಆಗಮಿಕ ಮತ್ತು ಲೌಕಿಕ ಎಂಬ ಎರಡು ದಾರಿಗಳಲ್ಲಿ ನಡೆಯುವ ಪ್ರಮೇಯ ಬರಲಿಲ್ಲ. ಲೌಕಿಕ ವೀರಕಾವ್ಯದ ಬದಲಿಗೆ ಸುಂದರವಾದ ಲೌಕಿಕ ಪ್ರೇಮಕಾವ್ಯವನ್ನು ಬರೆದ. ಆದರೆ ಯುಗಧರ್ಮವೋ ಎಂಬಂತೆ ಚಂಪೂ ಲೌಕಿಕ ಕಾವ್ಯದಲ್ಲಿ ತನ್ನ ಆಶ್ರಯದಾತ ರಾಜನನ್ನು ಸಮೀಕರಿಸುವ ಪ್ರಯತ್ನವನ್ನು ಮಾಡಿದ. ಉಪಮೆ, ರೂಪಕ, ಶ್ಲೇಷೆ, ಯಮಕ ಮೊದಲಾದ

ಅಲಂಕಾರಗಳಿಂದಲೂ, ದೀರ್ಘ ಸಮಾಸ ಪದಗಳಿಂದಲೂ, ಅನೇಕ ಧ್ವನಿ, ವ್ಯಂಗ್ಯಾರ್ಥಗಳಿಂದಲೂ ಕೂಡಿರುವ ಸಂಸ್ಕೃತ ಮಹಾಗದ್ಯವನ್ನು ಕನ್ನಡಕ್ಕೆ ಅನುವಾದಿಸುವುದು ಸುಲಭದ ಕೆಲಸವಾಗಿರಲಿಲ್ಲ. ನಾಗವರ್ಮನಿಗೆ ಕನ್ನಡದಲ್ಲಿ ಲೀಲಾಜಾಲವಾಗಿ ಪದ್ಯಗಳನ್ನು ಬರೆಯುವ ಕೌಶಲ್ಯ ಕರಗತವಾಗಿತ್ತು. ಬಾಣನ ಗದ್ಯಕ್ಕಿಂತಲೂ ಸುಲಭವಾಗಿ ನಾಗವರ್ಮನ ಪದ್ಯಗಳು ಅರ್ಥಬೋಧೆಯನ್ನು ಉಂಟುಮಾಡುತ್ತವೆ. ಅಷ್ಟು ಸರಳವಾಗಿ ಅನುವಾದಿಸುವ ಕಲೆ ಅವನಿಗೆ ಕರಗತವಾಗಿತ್ತು. ನಾಗವರ್ಮನು ಬಾಣನ ಕಾದಂಬರಿಯನ್ನು ಕನ್ನಡಕ್ಕೆ ಅನುವಾದಿಸಿದ್ದಾನೆ ಎಂದು ಹೇಳುವುದಕ್ಕಿಂತಲೂ ಪರಿವರ್ತಿಸಿದ್ದಾನೆ ಎಂದು ಹೇಳುವುದು ಉಚಿತ. ಮೂಲಗ್ರಂಥವನ್ನು ಅವನು ಹೆಜ್ಜೆ ಹೆಜ್ಜೆಗೆ ಅನುಸರಿಸಿದ್ದಾನೆ. ಆದರೆ ಅದು ಮಕ್ಕಿಕಾಮಕ್ಕಿ ಅನುವಾದವಲ್ಲ. ಅನುಸೃಷ್ಟಿ ಎಂದು ಹೇಳಬಹುದು. ಮೂಲದ ವಾಕ್ಯಸರಣಿಯನ್ನು ಅದೇ ರೀತಿಯಲ್ಲಿ ಬಹುತೇಕ ಅನುಸರಿಸಿದ್ದರೂ, ಅನೇಕ ವೇಳೆ ಛಂದಸ್ಸಿನ ಸೌಕರ್ಯಕ್ಕಾಗಿ ವಾಕ್ಯಗಳನ್ನು ಬದಲಾಯಿಸಿದ್ದಾನೆ. ಅತಿಯಾದ ವರ್ಣನೆಗಳನ್ನು ಕೈಬಿಟ್ಟಿದ್ದಾನೆ. ಒಂದೆರಡು ಕಡೆ ಸ್ವತಂತ್ರವಾಗಿ ತಾನೇ ವಿಸ್ತರಿಸಿಕೊಂಡಿರುವುದೂ ಉಂಟು. ನಾಗವರ್ಮನು ಮೂಲಕ್ಕೆ ನಿಷ್ಠನಾಗಿರುವ ಆದರ್ಶ ಅನುವಾದಕ ಎಂದರೂ, ಕೆಲವು ಕಡೆ ಸಂಕ್ಷೇಪ, ಕೆಲವು ಕಡೆ ವಿಸ್ತಾರಗಳನ್ನು ಮಾಡುತ್ತ ಸೃಜನಶೀಲ ಅನುವಾದಕ ಎನಿಸಿದ್ದಾನೆ. ಒಟ್ಟಿನಲ್ಲಿ ಕರ್ನಾಟಕ ಕಾದಂಬರಿ ಕಾವ್ಯವು ಮೂಲಕೃತಿಗೆ ಹೊಸ ಮಾಟವನ್ನು ಒದಗಿಸಿದ ಉತ್ಕೃಷ್ಟ ಪರಿವರ್ತನವೆನ್ನಬಹುದು. 'ನಾಗವರ್ಮನ ಕಾದಂಬರಿ ಕಾವ್ಯವು ಅನುವಾದವಾಗಿಯೂ ಸ್ವತಂತ್ರಕೃತಿಯ ಸತ್ವವುಳ್ಳುದಾಗಿ ಕನ್ನಡ ಸಾಹಿತ್ಯದ ಚಿರಂತನ ಮೌಲ್ಯಗ್ರಂಥಗಲ್ಲಿ ಒಂದಾಗಿದೆ' (ಕನ್ನಡ ಸಾಹಿತ್ಯ ಚರಿತ್ರೆ, ರಂ.ಶ್ರೀ.ಮುಗಳಿ, ಪು.115) ಎಂಬ ಅಭಿಪ್ರಾಯವನ್ನು ಈ ಹಿನ್ನೆಲೆಯಲ್ಲಿ ಪುರಸ್ಕರಿಸಬಹುದು.

ಕರ್ನಾಟಕ ಕಾದಂಬರಿಯು ಒಂದು ಸುಂದರವಾದ ಕಥಾಕಾವ್ಯ. ಆದರೆ ಅದರ ಕಥಾಸೂತ್ರವು ಸರಳವಾಗಿಲ್ಲ; ತುಂಬ ಜಟಿಲವಾಗಿದೆ. ಈ ಜಟಿಲತೆಯನ್ನು ಬಗೆಹರಿಸಿಕೊಂಡು ಕಾವ್ಯವನ್ನು ಓದಬೇಕಾಗಿದೆ. ಕಾದಂಬರಿ ಕಾವ್ಯವು ಕಥೆಯ ಕೊನೆಯ ಘಟನೆಯಿಂದ

ಪ್ರಾರಂಭವಾಗುತ್ತದೆ. ಕಥೆಯೊಳಗೆ ಕಥೆಗಳು ಸೇರಿಕೊಂಡು ಕಥೆಗಳ ಒಂದು ಚಕ್ರವ್ಯೂಹ ಕಾವ್ಯದಲ್ಲಿ ಸೃಷ್ಟಿಯಾಗಿದೆ. ಇಲ್ಲಿ ಬರುವ ಜನ್ಮಾಂತರದ ಕಥೆಗಳೂ ಏಕಸೂತ್ರದಲ್ಲಿ ನಿರೂಪಿತವಾಗಿಲ್ಲ.

ಕಾದಂಬರಿ ಕಾವ್ಯದಲ್ಲಿ ಎರಡು ಪ್ರೇಮ ಕಥಾನಕಗಳಿವೆ. ಕಥಾನಾಯಕ ಚಂದ್ರಾಪೀಡ ಮತ್ತು ಕಾದಂಬರಿಯರ ಪ್ರಣಯ ಕಥೆ ಹಾಗೂ ಚಂದ್ರಾಪೀಡನ ಗೆಳೆಯನಾದ ಪುಂಡರೀಕ ಮತ್ತು ಮಹಾಶ್ವೇತೆಯರ ಪ್ರಣಯಕಥೆ. ಈ ಎರಡೂ ಕಥೆಗಳು ಹಾಸುಹೊಕ್ಕಾಗಿ ಒಂದರೊಳಗೊಂದು ಬೆರೆತು ಕಾವ್ಯದ ಪರಿಪೂರ್ಣತೆಗೆ ಕಾರಣವಾಗಿವೆ. ಕಥಾನಾಯಕಿಯರಾದ ಕಾದಂಬರಿ ಮತ್ತು ಮಹಾಶ್ವೇತೆಯರು ದೇವವರ್ಗಕ್ಕೆ ಸೇರಿದವರು. ಕಾದಂಬರಿ ಗಂಧರ್ವ ಕನ್ಯೆ; ಮಹಾಶ್ವೇತೆ ಅಪ್ಸರ ಕನ್ಯೆ. ಇವರು ವರಿಸಿದ ಪುರುಷರು ದೇವಾಂಶ ಸಂಭೂತರಾದರೂ ಮಾನವವರ್ಗಕ್ಕೆ ಸೇರಿದವರು. ಇವರಿಬ್ಬರೂ ಶಾಪಗ್ರಸ್ತರಾಗಿ ಜನ್ಮಾಂತರಗಳನ್ನು ಪಡೆಯುತ್ತಾರೆ. ಪುಂಡರೀಕನಿಂದ ಶಾಪವನ್ನು ಹೊಂದಿದ ಚಂದ್ರನು ಚಂದ್ರಾಪೀಡನಾಗಿ ಹುಟ್ಟಿ ಕಾದಂಬರಿಯ ಪ್ರೇಮಕ್ಕೆ ಭಾಜನನಾಗಿ, ಆಕೆಯನ್ನು ಮದುವೆಯಾಗುವ ಮೊದಲೇ ದೇಹತ್ಯಾಗ ಮಾಡಬೇಕಾಗುತ್ತದೆ. ಮುಂದಿನ ಜನ್ಮದಲ್ಲಿ ಅವನು ಶೂದ್ರಕನಾಗಿ ಹುಟ್ಟಿ ಶಾಪವಿಮೋಚನೆಯ ಬಳಿಕ ಚಂದ್ರಾಪೀಡನ ದೇಹವನ್ನು ಹೊಂದಿ ಕಾದಂಬರಿಯನ್ನು ಮದುವೆಯಾಗುತ್ತಾನೆ. ಪುಂಡರೀಕನು ಚಂದ್ರನ ಸಿಟ್ಟಿಗೆ ಬಲಿಯಾಗಿ ದೇಹತ್ಯಾಗವನ್ನು ಮಾಡಿ, ಚಂದ್ರನು ಚಂದ್ರಾಪೀಡನಾಗಿ ಹುಟ್ಟಿದಾಗ ಅವನ ಪ್ರಿಯ ಗೆಳೆಯ ವೈಶಂಪಾಯನನಾಗಿ ಹುಟ್ಟುತ್ತಾನೆ. ಆಗ ಪೂರ್ವ ಜನ್ಮ ವಾಸನೆಯಿಂದ ಪ್ರೇರಿತನಾಗಿ ಮಹಾಶ್ವೇತೆಯಲ್ಲಿ ಮೋಹಗೊಂಡು, ಅವಳಿಂದ ಶಾಪವನ್ನು ಹೊಂದಿ ಗಿಳಿಯಾಗಿ ಜನಿಸುತ್ತಾನೆ. ಶಾಪ ವಿಮೋಚನೆಯ ಬಳಿಕ ಪುಂಡರೀಕನ ದೇಹವನ್ನು ಮರಳಿ ಪಡೆದು ಮಹಾಶ್ವೇತೆಯನ್ನು ಮದುವೆಯಾಗುತ್ತಾನೆ. ಚಂದ್ರಾಪೀಡನು ಶೂದ್ರಕನಾಗಿಯೂ ಪುಂಡರೀಕನು ಗಿಳಿಯಾಗಿಯೂ ಜನ್ಮಗ್ರಹಣ ಮಾಡಿದ ಕಾಲದಲ್ಲಿ ಕಾದಂಬರಿ ಕಾವ್ಯದ ಕಥೆ ಆರಂಭವಾಗುತ್ತದೆ. ಕಾದಂಬರಿ ಕಾವ್ಯದ ವಸ್ತು ದೇವತೆಗಳು, ಗಂಧರ್ವರು, ಅಪ್ಸರೆಯರು, ಯಕ್ಷರು, ಕಿನ್ನರರು, ಋಷಿಗಳು, ಮನುಷ್ಯರು, ಪ್ರಾಣಿಗಳು ಹೀಗೆ ವಿವಿಧ ಪಾತ್ರಗಳಿಂದ ಹಾಗೂ ಲೋಕೋತ್ತರವಾದ ಅನೇಕ ಸನ್ನಿವೇಶಗಳಿಂದ ಇಡಿಕಿರಿದಿವೆ.

ಈ ಎಲ್ಲ ಕಥೆಗಳನ್ನು ಕವಿಯು ತಾನೇ ನಿರೂಪಿಸುವುದಿಲ್ಲ. ಅದರ ಬಹುಭಾಗವನ್ನು ಬೇರೆಬೇರೆ ಪಾತ್ರಗಳಿಂದ ಹೇಳಿಸುವ ಕಥನತಂತ್ರವನ್ನು ಬಳಸಿದ್ದಾನೆ. ಕಥೆಯ ಆರಂಭವನ್ನು ಕವಿಯೇ ನಿರ್ವಹಿಸುತ್ತಾನೆ. ಶೂದ್ರಕ ರಾಜನ ಆಸ್ಥಾನಕ್ಕೆ ಚಂಡಾಲ ಕನ್ಯೆಯು ಗಿಳಿಯನ್ನು ತರುವವರೆಗಿನ ಕಥೆಯನ್ನು ಕವಿಯೇ ನಿರೂಪಿಸುತ್ತಾನೆ. ಅನಂತರ ಗಿಳಿಯು ತಾನು ಹುಟ್ಟಿ ಬೆಳೆದು ಜಾಬಾಲಿ ಋಷಿಗಳ ಅಶ್ರಮಕ್ಕೆ ಹೋಗುವ ವರೆಗಿನ ಕಥೆಯನ್ನು ಶೂದ್ರಕನಿಗೆ ಹೇಳುತ್ತದೆ. ಗಿಳಿಗೆ ಆ ಜನ್ಮ ಬರುವುದಕ್ಕೆ ಕಾರಣವಾದ ಕಥೆಯನ್ನು ಜಾಬಾಲಿ ಮುನಿಗಳು ತಮ್ಮ ಆಶ್ರಮದ ಋಷಿಗಳಿಗೆ ಹೇಳುತ್ತಾರೆ. ಈ ಕಥೆಯ ಕೆಲವು ಭಾಗಗಳು ಕಪಿಂಜಲ ಮತ್ತು ಮಹಾಶ್ವೇತೆ ಹೇಳುವಂತೆ ನಿರೂಪಿತವಾಗಿದೆ. ಅನಂತರ ಗಿಳಿ ತನ್ನ ಕಥೆಯನ್ನು ಮುಂದುವರಿಸಿ ಶೂದ್ರಕನಿಗೆ ಹೇಳುತ್ತದೆ. ಚಂಡಾಲಕನ್ಯೆಯು ಕೊನೆಯಲ್ಲಿ ತನ್ನ ವೃತ್ತಾಂತವನ್ನು ತಿಳಿಸುತ್ತಾಳೆ. ಕಥೆಯ ಕೊನೆಯ ಭಾಗವನ್ನು ಕವಿ ಸ್ವತಃ ನಿರೂಪಿಸುತ್ತಾನೆ. ಕಾದಂಬರಿ ಕಾವ್ಯದ ಕಥೆಗಳ ನಿರೂಪಣೆಯಲ್ಲಿ ಜೈನ ಪುರಾಣಗಳ ಭವಾವಳಿಯ ನೆರಳು ಕಾಣಿಸಿಕೊಂಡರೂ, ಅದಕ್ಕೂ ಹಿಂದಿನ ಪಂಚತಂತ್ರದ ಕಥೆಗಳ ಕಥನತಂತ್ರವೂ ಬಳಕೆಯಾಗಿದೆ ಅನ್ನಿಸುತ್ತದೆ.

ಕಾವ್ಯಕ್ಕೆ ಹೆಸರು ಕೊಟ್ಟಿರುವ ಕಾದಂಬರಿ ಚಂದ್ರಾಪೀಡರ ಪ್ರೇಮಕ್ಕಿಂತ ಪುಂಡರೀಕ – ಮಹಾಶ್ವೇತೆಯರ ಪ್ರೇಮ ನಮ್ಮನ್ನು ಸೆಳೆಯುತ್ತದೆ. ಗೆಳೆಯ ವೈಶಂಪಾಯನನೊಂದಿಗೆ ದಿಗ್ವಿಜಯಕ್ಕಾಗಿ ಹೊರಟ ಚಂದ್ರಾಪೀಡನು ವಿಲಕ್ಷಣವಾದ ಕಿನ್ನರ ಮಿಥುನವನ್ನು ಕಂಡು ಬೆನ್ನಟ್ಟಿ ಹಿಮಾಲಯದ ತಪ್ಪಲಿನ ಅಚ್ಛೋದ ಸರೋವರದ ಬಳಿಗೆ ಬರುತ್ತಾನೆ. ಅಲ್ಲಿ ಒಂದು ಸಿದ್ಧಾಯತನ ಕಣ್ಣಿಗೆ ಬೀಳುತ್ತದೆ. ಆ ಸಿದ್ಧಾಯತನದಲ್ಲಿ ಅತ್ಯಂತ ಸುಂದರಿಯೂ, ನವ ಯೌವನ ಭರಿತೆಯೂ, ತೇಜಸ್ವಿನಿಯೂ ಆದ ಒಬ್ಬಳು ತಾಪಸ ವೇಷಧಾರಿಣಿ ಶಿವನನ್ನು ಆರಾಧಿಸುತ್ತಿದ್ದಳು. ಅವಳು–

> **ಶಿವನಾಮಾಂಕಿತಮಂ ರ**
> **ತ್ನವಿರಚಿತಮನುತ್ತಮಾಂಗದೊಳ್ ಪಾದೂಯು**
> **ಗ್ಮಮನೆಸೆಯೆ ತಳೆದು ಭಕ್ತಿಯೆ**
> **ಭವಸನ್ನಿಧಿಯಲ್ಲಿ ರೂಪುಗೊಂಡಂತಿರ್ದಳ್** (ಕರ್ನಾಟಕ ಕಾದಂಬರಿ, 4–47)

ಕೊರಳಲ್ಲಿ ಪವಿತ್ರವಾದ ಅಕ್ಷಮಾಲೆಯನ್ನು ಧರಿಸಿಕೊಂಡಿದ್ದ ಅವಳು ದೃಢ ಪಾಶುಪತ ವ್ರತೆಯಾಗಿದ್ದಳು. ಅವಳ ಆತಿಥ್ಯವನ್ನು ಸ್ವೀಕರಿಸಿದ ಚಂದ್ರಾಪೀಡನು ಅವಳ ವೃತ್ತಾಂತವನ್ನು ಕೇಳಿದನು. ಆಗ ಅವಳು ಶೋಕಾಕ್ರಾಂತೆಯಾಗಿ ಕಣ್ಣೀರು ಸುರಿಸಿದಳು. ಅವಳು ಹಂಸ ಎಂಬ ಗಂಧರ್ವ ಮತ್ತು ಗೌರಿ ಎಂಬ ಅಪ್ಸರೆಯ ಮಗಳಾದ ಮಹಾಶ್ವೇತೆಯಾಗಿದ್ದಳು. ತನ್ನ ಯೌವನದಲ್ಲಿ ಒಂದು ದಿವಸ ಅವಳು ಸುಂದರನಾದ ಮುನಿಕುಮಾರನನ್ನು ಕಂಡು ಮೋಹಪರವಶಳಾದಳು. ಆ ಮುನಿಕುಮಾರನೂ ಅವಳ ಸೌಂದರ್ಯವನ್ನು ಕಂಡು ಕಾಮವಿಕಾರಕ್ಕೊಳಗಾದನು.

ಮದನಂ ದುರ್ಜಯನಿಂದ್ರಿಯಂಗಳನಿವಾರ್ಯಂಗಳ್ ವಸಂತಂ ಮದ
ಪ್ರದನಾಸ್ಥಾನವತಿರಮ್ಯಮೆನಗಂ ದು:ಖಂಬರಲ್ವೇಳ್ಕುಮ
ಪ್ಪುದರಿಂ ಭಾವಿಸಿ ಮದ್ವಿಕಾರಮನೆ ನೋಡುತಿರ್ಪುದುಂ ಗಾಳಿಗೊ
ಡ್ಡಿದ ದೀಪಾಂಕುರದಂತೆ ತನ್ಮುನಿಯುಮುಂ ಕಾಮಂ ಚಲಂ ಮಾಡಿದಂ
(ಕರ್ನಾಟಕ ಕಾದಂಬರಿ, 5–41)

ಆ ಮುನಿಕುಮಾರ ಬೇರೆ ಯಾರೂ ಅಲ್ಲ. ಶ್ವೇತಕೇತು ಮುನಿ ಮತ್ತು ಲಕ್ಷ್ಮಿಯ ಪುತ್ರನಾಗಿದ್ದ. ಅವನಿಗೆ ವನದೇವತೆಯೊಬ್ಬಳು ದಿವ್ಯ ಕುಸುಮಮಂಜರಿಯನ್ನು ಕಿವಿಗೆ ತೊಡಿಸಿದ್ದಳು. ಅವನು ತನ್ನ ಕಿವಿಯಲ್ಲಿ ಧರಿಸಿದ್ದ ಕುಸುಮ ಮಂಜರಿಯನ್ನು ಮಹಾಶ್ವೇತೆಯ ಕಿವಿಗೆ ತೊಡಿಸಿದನು. ಆಗ ಅವಳ ಕದಪಿನ ಸೋಂಕಿನಿಂದ ಅವನ ಕೈ ಕಂಪಿಸಿತು. ಕೈಯಲ್ಲಿದ್ದ ಅಕ್ಷಮಾಲೆಯು ಜಾರಿಬಿತ್ತು. ಅವಳು ಕೂಡಲೇ ಅದನ್ನು ಎತ್ತಿಕೊಂಡು 'ತೊಳಗುವ ಹಾರಮಂ ತಳೆವಂತೆ' ತನ್ನ ಕೊರಳಲ್ಲಿ ಧರಿಸಿದಳು. ಕಾಮಪರವಶನಾದ ಪುಂಡರೀಕನನ್ನು ಅವನ ಗೆಳೆಯ ಕಪಿಂಜಲ ಎಚ್ಚರಿಸಿದನು. ಆಗ ಪುಂಡರೀಕನು ಕೋಪಗೊಂಡಂತೆ ನಟಿಸಿ 'ಎಲೆ ಚಪಲೆ, ಜಪದ ಮಣಿಯಂ ಕುಡು' ಎಂದು ಕೇಳಿದ. ಆಗ ಅವಳು ಜಪದ ಮಾಲೆ ಎಂದು ಭಾವಿಸಿ ತನ್ನ ಹಾರವನ್ನು ಅವನಿಗೆ ಕೊಡುತ್ತಾಳೆ. ಹೀಗೆ ತಪಸ್ಸಿನ ಸಂಕೇತವಾದ ಪುಂಡರೀಕನ ಪವಿತ್ರವಾದ ಅಕ್ಷಮಾಲೆ ಮಹಾಶ್ವೇತೆಯ ಕೊರಳನ್ನು ಸೇರುತ್ತದೆ. ಶೃಂಗಾರದ ಸಂಕೇತವಾದ ಅವಳ ಹಾರವು ಅವನ ಕೈ ಸೇರುತ್ತದೆ.

ಅನಂತರ ವಿರಹದಿಂದ ತಪ್ತನಾದ ಪುಂಡರೀಕನು ಮಹಾಶ್ವೇತೆಗೆ ಒಂದು ಪ್ರೇಮಪತ್ರವನ್ನು ಬರೆದು ಕಪಿಂಜಲನ ಮೂಲಕ ಕಳುಹಿಸಿಕೊಡುತ್ತಾನೆ. ಆದರೆ ಅವಳಿಗೆ ಸಕಾಲದಲ್ಲಿ ಉತ್ತರವನ್ನು ಕೊಡಲು ಸಾಧ್ಯವಾಗಲಿಲ್ಲ. ಕಪಿಂಜಲನು ತನ್ನ ಮಿತ್ರನ ಪ್ರಾಣವನ್ನು ಉಳಿಸಬೇಕೆಂದು ಅಂಗಲಾಚುತ್ತಾನೆ. ಆದರೆ ಅವಳು ಪುಂಡರೀಕನ ಬಳಿಗೆ ತಲುಪುವ ಮೊದಲೇ ಅವನ ಪ್ರಾಣಪಕ್ಷಿ ಹಾರಿ ಹೋಗಿತ್ತು. ಪುಂಡರೀಕನ ಅಗಲಿಕೆಯ ದು:ಖವನ್ನು ಸಹಿಸಲಾರದೆ ಅವಳು ಸಹಗಮನಕ್ಕೆ ಸಿದ್ಧಳಾದಳು. ಆಗ ಒಂದು ಅಶ್ಚರ್ಯದ ಘಟನೆ ನಡೆಯಿತು. ಚಂದ್ರಮಂಡಲದಿಂದ ಒಬ್ಬ ದಿವ್ಯಪುರುಷನು ಇಳಿದು ಬಂದು ಪುಂಡರೀಕನ ದೇಹವನ್ನು ಎತ್ತಿಕೊಂಡು, 'ಮಗಳೆ, ಸಾಯುವ ಆಸೆ ಬೇಡ. ನೀನು ಮತ್ತೆ ಈತನನ್ನು ಕೂಡುವೆ' ಎಂದು ಹೇಳಿ ಅಕಾಶಕ್ಕೆ ನೆಗೆದನು. ಕಪಿಂಜಲನೂ ಅವನನ್ನು ಹಿಂಬಾಲಿಸಿ ಹೋದನು. ಅಂದಿನಿಂದ ಮಹಾಶ್ವೇತೆ ಪುಂಡರೀಕನ ವಲ್ಕಲ, ಕಮಂಡಲು, ಅಕ್ಷಾವಳಿಗಳನ್ನು ಸ್ವೀಕರಿಸಿ, ತಾಪಸ ವೇಷವನ್ನು ಧರಿಸಿ ಅಚ್ಛೋದ ಸರೋವರದ ತೀರದ ಸಿದ್ಧಾಯತನದಲ್ಲಿ ತಪಸ್ಸು ಮಾಡುತ್ತಿದ್ದಳು.

ಆತನ ಪರಮ ಪ್ರೀತಿಯಿ
ನಾತನ ವಲ್ಕಲದಿನಾತನಕ್ಷಾವಳಿಯಿಂ
ದಾತನ ಕಮಂಡಲುವಿನಿಂ
ದಾತನ ವೇಷಮನೆ ತಾಳ್ದಿ ತಳೆದೆ ವ್ರತಮಂ
(ಕರ್ನಾಟಕ ಕಾದಂಬರಿ, 5–193)

ಮಹಾಶ್ವೇತೆಯು ತನ್ನ ಕಥೆಯನ್ನು ಅರುಹಿದ ಬಳಿಕ ತನ್ನ ಗೆಳತಿಯಾದ ಕಾದಂಬರಿಯ ವೃತ್ತಾಂತವನ್ನೂ ಚಂದ್ರಾಪೀಡನಿಗೆ ತಿಳಿಸಿದಳು. ಚಿತ್ರರಥನೆಂಬ ಗಂಧರ್ವ ರಾಜನ ಮಗಳು ಕಾದಂಬರಿ. ಮಹಾಶ್ವೇತೆ ಮತ್ತು ಕಾದಂಬರಿಯರು ಆತ್ಮೀಯ ಗೆಳತಿಯರು. ಆದರೆ ತಾನು ಹೀಗೆ ಶೋಕಾಕುಲೆಯಾಗಿ ತಪಸ್ಸಿನಲ್ಲಿ ಕಾಲ ಕಳೆಯುವುದನ್ನು ಕೇಳಿ ದು:ಖಿತೆಯಾದ ಕಾದಂಬರಿಯು ತಾನು ಕನ್ಯಾವ್ರತದಲ್ಲಿ ಇರುವುದಾಗಿ ಪ್ರತಿಜ್ಞೆ ಮಾಡಿ ಅವಳ ರಾಜಧಾನಿಯಲ್ಲಿ ಕಾಲಕಳೆಯುತ್ತಿದ್ದಳು. ಅವಳಿಗೆ ಸಾಂತ್ವನವನ್ನು ಹೇಳಬೇಕೆಂದು ಮಹಾಶ್ವೇತೆ ಚಂದ್ರಾಪೀಡನನ್ನು

ಕೇಳಿಕೊಳ್ಳುತ್ತಾಳೆ. ಚಂದ್ರಾಪೀಡನು ಒಪ್ಪಿ ಆಕೆಯೊಡನೆ ಚಿತ್ರರಥನ ರಾಜಧಾನಿಗೆ ಹೋದನು. ಕಾದಂಬರಿಯನ್ನು ನೋಡಿದ ಕೂಡಲೇ ಅವನಿಗೆ ಅವಳಲ್ಲಿ ಅನುರಾಗ ಹುಟ್ಟಿತು. ಅವಳಿಗೂ ಈತನ ಮೇಲೆ ಪ್ರೀತಿ ಹುಟ್ಟಿತು.

ಬಗೆಯೊಳ್ ಪಿರಿದುಂ ಕೌತುಕ
ಮೊಗೆಯಲ್ಕನ್ಯೋನ್ಯಮೊಲ್ದು ನೋಡುತಿರ್ಪ
ನ್ನೆಗಮೊರ್ಮೊದಲಿರ್ವರ ದಿ
ಟ್ಟಿಗಳುಂ ಸಮದಿಟ್ಟಿಯಾದುವಂತಾಕ್ಷಣದೊಳ್

(ಕರ್ನಾಟಕ ಕಾದಂಬರಿ, 6-63)

ಮಹಾಶ್ವೇತೆಯು ಕಾದಂಬರಿಯಿಂದ ಚಂದ್ರಾಪೀಡನಿಗೆ ತಾಂಬೂಲವನ್ನು ಕೊಡಿಸಿದಳು. ಅವಳು ನಾಚಿಕೆಯಿಂದ ಬೆವರುತ್ತಾ, ನಡುಗುತ್ತಾ ತಾಂಬೂಲವನ್ನು ಕೊಟ್ಟಳು. ಹೀಗೆ ಕಾದಂಬರಿಗೆ ಚಂದ್ರಾಪೀಡನಲ್ಲಿ ಪ್ರೇಮವು ಬಲವಾಯಿತು. ಕಾದಂಬರಿಯು ತನ್ನ ಪ್ರಣಯದ ಕುರುಹಾಗಿ ಶೇಷವೆಂಬ ಮುತ್ತಿನ ಹಾರವನ್ನು ತನ್ನ ಸೇವಕಿಯ ಮೂಲಕ ಕಳುಹಿಸಿಕೊಟ್ಟಳು. ಸ್ವಲ್ಪಕಾಲದಲ್ಲಿ ಅವನಿಗೆ ತನ್ನ ರಾಜಧಾನಿಗೆ ಹಿಂದಿರುಗಬೇಕಾಯಿತು.

ಚಂದ್ರಾಪೀಡನು ಉಜ್ಜೈನಿಗೆ ಬಂದು ಕಾದಂಬರಿಯನ್ನು ಸ್ಮರಿಸುತ್ತ ಪತ್ರಲೇಖೆಯ ಆಗಮನವನ್ನೇ ನಿರೀಕ್ಷಿಸುತ್ತಿದ್ದನು. ಕೆಲವು ದಿವಸಗಳ ಬಳಿಕ ಆಕೆಯಿಂದ ಕಾದಂಬರಿಯ ವಿರಹ ವ್ಯಥೆಯ ಸುದ್ದಿಯನ್ನು ತಿಳಿಯುತ್ತಾನೆ. ದಿಗ್ವಿಜಯ ಸಮಯದಲ್ಲಿ ಬೇರ್ಪಟ್ಟ ಗೆಳೆಯ ವೈಶಂಪಾಯನ ಅಚ್ಛೋದ ಸರೋವರ ತೀರದಿಂದ ಬರಲೊಪ್ಪುವುದಿಲ್ಲ. ಅವನನ್ನು ಕರೆ ತರುವ ನೆಪದಲ್ಲಿ ಕಾದಂಬರಿಯನ್ನು ಪುನಃ ಭೇಟಿಯಾಗುವ ಉತ್ಸುಕತೆಯಲ್ಲಿ ಚಂದ್ರಾಪೀಡನು ಹೊರಟನು. ಅಚ್ಛೋದ ಸರೋವರದ ತೀರದಲ್ಲಿ ಮಹಾಶ್ವೇತೆಯನ್ನು ಭೇಟಿಯಾಗಿ ವೈಶಂಪಾಯನನ ಕುರಿತು ಕೇಳುತ್ತಾನೆ. ಆಗ ಅವಳು – ಒಬ್ಬ ಬ್ರಾಹ್ಮಣ ಕುಮಾರ ತನ್ನನ್ನು ತದೇಕ ಚಿತ್ತದಿಂದ ನೋಡುತ್ತ ಚಪಲ ವಾಕ್ಯಗಳನ್ನು ನುಡಿಯುತ್ತಿದ್ದ. ಒಂದು ದಿವಸ ಅವನು 'ಮನ್ಮಥ ಸಹಾಯದಿಂದ ಚಂದ್ರನು ನನ್ನನ್ನು ಕೊಲ್ಲುತ್ತಿದ್ದಾನೆ.

ನನ್ನನ್ನು ರಕ್ಷಿಸು' ಎಂದು ಕೇಳಿಕೊಂಡ. ಪುಂಡರೀಕನ ನೆನಪಿನಲ್ಲಿ ಬದುಕುತ್ತಿದ್ದ ನಾನು ಸಿಟ್ಟಿನಿಂದ ಗಿಳಿಯಾಗಿ ಹುಟ್ಟು ಎಂದು ಶಪಿಸಿದೆ. ಆತನು ನಿನ್ನ ಗೆಳೆಯನೆಂದು ಆಮೇಲೆ ತಿಳಿಯಿತು – ಎಂದಳು. ಈ ಸುದ್ದಿಯನ್ನು ಕೇಳುತ್ತಿದ್ದಂತೆ ಚಂದ್ರಾಪೀಡನು ಎದೆಯೊಡೆದು ನೆಲಕ್ಕೆ ಕುಸಿದನು. ಆ ಹೊತ್ತಿಗೆ ಅಲ್ಲಿ ಬಂದ ಕಾದಂಬರಿಯೂ ಮೂರ್ಛಿತಳಾದಳು.

ಪುಂಡರೀಕನು ಶ್ವೇತಕೇತುವ್ರತಿಗೆ ಮಗನಾಗಿ ಹುಟ್ಟಿ ಕಾಮಪರವಶತೆಯಿಂದ ದೇವತ್ವವನ್ನು ಕಳೆದುಕೊಂಡು ಶುಕನಾಸನಿಗೆ ವೈಶಂಪಾಯನನೆಂಬ ಮಗನಾಗಿ ಹುಟ್ಟಿ, ಕಾಮಿಯಾಗಿ ಮಹಾಶ್ವೇತೆಯ ಶಾಪದಿಂದ ಗಿಳಿಯಾಗಿ ಹುಟ್ಟಿದನು. ಈ ಎಲ್ಲ ಕಥೆಯನ್ನು ಜಾಬಾಲಿ ಮಹರ್ಷಿಗಳಿಂದ ಕೇಳಿಸಿಕೊಂಡ ಗಿಳಿಯು ತನ್ನ ದೇಹವನ್ನು ತ್ಯಜಿಸಿ ಪುಂಡರೀಕನಾಗಿ ಹುಟ್ಟಿ ಬಂದು ಮಹಾಶ್ವೇತೆಯನ್ನು ಮದುವೆಯಾದನು. ಚಂದ್ರನು ಚಂದ್ರಾಪೀಡನಾಗಿ ಹುಟ್ಟಿ, ಅನಂತರ ಶೂದ್ರಕ ರಾಜನಾಗಿ ಜನಿಸಿ ಗಿಳಿ ಹೇಳಿದ ಕಥೆಯನ್ನು ಕೇಳಿ ದೇಹತ್ಯಾಗ ಮಾಡಿ ಚಂದ್ರಾಪೀಡನಾಗಿ ಬಂದು ಕಾದಂಬರಿಯನ್ನು ಮದುವೆಯಾದನು.

ನಾಗವರ್ಮನ ಕರ್ನಾಟಕ ಕಾದಂಬರಿಯಲ್ಲಿ ಒಂದು ಕಡೆ ಮಹಾಶ್ವೇತೆ – ಪುಂಡರೀಕರ ಪ್ರೇಮ ಮತ್ತು ಇನ್ನೊಂದು ಕಡೆ ಕಾದಂಬರಿ–ಚಂದ್ರಾಪೀಡರ ಪ್ರೇಮ ಕಂಡು ಬರುತ್ತದೆ. ಈ ಎರಡೂ ಪ್ರೇಮದ ಸನ್ನಿವೇಶಗಳು ವಿವಾಹಪೂರ್ವ ಪ್ರೇಮದ ನೆಲೆಗಳನ್ನು ವ್ಯಾಖ್ಯಾನಿಸುತ್ತವೆ. ಮಹಾಶ್ವೇತೆ ಮತ್ತು ಪುಂಡರೀಕರು ಸಂಧಿಸುವಲ್ಲಿ ಎರಡು ಮುಖ್ಯ ರೂಪಕಗಳನ್ನು ಕಾಣಬಹುದು. ಒಂದು ಪಾರಿಜಾತ ಪುಷ್ಪಮಂಜರಿ. ಇನ್ನೊಂದು ಅಕ್ಷಮಾಲೆ. ಪುಷ್ಪ ಮಂಜರಿಯು ಅವರ ಪ್ರೇಮಕ್ಕೆ ಸಂಕೇತವಾಗಿದೆ. ಆ ಹೂವಿನ ಗೊಂಚಲಿಗೆ ಅವಳು ಬಯಸುವುದು ಎಂದರೆ ಅವಳ ಪ್ರೇಮದ ಔನ್ನತ್ಯವನ್ನು ವ್ಯಂಜಿಸುತ್ತದೆ. ಇದರ ಜತೆಗೆ ಪುಂಡರೀಕನ ಕೈಯಲ್ಲಿರುವ ಅಕ್ಷಮಾಲೆ ನೆಲಕ್ಕೆ ಬೀಳುತ್ತದೆ. ಅಕ್ಷಮಾಲೆ ತಪಸ್ಸಿನ, ಧ್ಯಾನದ ಸಂಕೇತವಾಗಿದೆ. ವ್ರತನಿಷ್ಠೆಯಲ್ಲಿರಬೇಕಾದ ಮುನಿಕುಮಾರನೊಬ್ಬ ಪ್ರೇಮಾತುರನಾಗುವುದು ಎಂದರೆ ತಪಸ್ಸಿನ ಶಕ್ತಿಯನ್ನು ಕಳೆದುಕೊಳ್ಳುವುದು ಎಂದು ಅರ್ಥ. ಬೀಳುತ್ತಿದ್ದ ಅಕ್ಷಮಾಲೆಯನ್ನು ಹಿಡಿದುಕೊಂಡು ಅವಳು ಕೊರಳಿನಲ್ಲಿ ಧರಿಸುವುದು

ಕೂಡ ಸಾಂಕೇತಿಕವಾಗಿದೆ. ಮುಂದೆ ಪುಂಡರೀಕನ ನೆನಪಿನಲ್ಲಿ ಮಹಾಶ್ವೇತೆ ಸಿದ್ಧಾಯತನದಲ್ಲಿ ತಪಸ್ಸಿನಲ್ಲಿ ಕಳೆಯುವ ಸನ್ನಿವೇಶವನ್ನು ಇದು ಸಾಂಕೇತಿಕವಾಗಿ ನಿರೂಪಿಸುತ್ತದೆ. ಮಹಾಶ್ವೇತೆ ಬಯಸಿದ್ದು ಕೇವಲ ಪುಷ್ಪಮಂಜರಿಯನ್ನು. ಆದರೆ ಅಕ್ಷಮಾಲೆ ಆಕಸ್ಮಿಕವಾಗಿ ಅವಳ ಕೈಗೆ ಬಂತು. ಇವೆರಡನ್ನೂ ಸಮಾನವಾಗಿ ಸ್ವೀಕರಿಸಿಕೊಂಡ ಮಹಾಶ್ವೇತೆಯ ಪಾತ್ರ ಕಾವ್ಯದಲ್ಲಿ ಬೆಳಗುವುದನ್ನು ಕಾಣಬಹುದು. ತಪಸ್ವಿನಿಯೂ, ಪ್ರಣಯಿನಿಯೂ, ನವಯೌವನಶಾಲಿಯೂ ಆದ ಮಹಾಶ್ವೇತೆಯ ಗಂಭೀರವಾದ ಚಿತ್ರವನ್ನು ಕಾವ್ಯದಲ್ಲಿ ಬರೆಯಲಾಗಿದೆ. ಪತಿ ವಿರಹ ದುಃಖಿತೆಯಾದರೂ ತನ್ನ ಗೆಳತಿಯ ಸುಖ ಸಾಧನೆಗೆ ಅವಳು ಉತ್ಸಾಹದಿಂದ ವರ್ತಿಸುವುದು ಅವಳ ವ್ಯಕ್ತಿತ್ವಕ್ಕೊಂದು ಗಾಂಭೀರ್ಯವನ್ನು ತಂದು ಕೊಟ್ಟಿದೆ.

ಚಂದ್ರಾಪೀಡ ಕಾದಂಬರಿಯರ ಪ್ರಣಯದ ಸನ್ನಿವೇಶದಲ್ಲಿ ತಾಂಬೂಲವನ್ನು ನೀಡಿ ಸಂಬಂಧವನ್ನು ಗಟ್ಟಿಗೊಳಿಸುವ ಲೌಕಿಕದ ಸುಂದರ ಚಿತ್ರಣ ಬಂದಿದೆ. ತಾಂಬೂಲವು ಪ್ರೇಮವನ್ನು ಉದ್ದೀಪನಗೊಳಿಸುವ ಪರಿಕರ. ಇದು ಅವರ ಪ್ರೇಮದ ಸಂಕೇತವೂ ಕೂಡ. ಮಹಾಶ್ವೇತೆಯ ಒತ್ತಾಯಕ್ಕೆ ಕಟ್ಟುಬಿದ್ದು ಚಂದ್ರಾಪೀಡನಿಗೆ ತಾಂಬೂಲವನ್ನು ಕೊಡುವ ಕಾದಂಬರಿಯು ಹೇಳುವ ಮಾತುಗಳು ಶೃಂಗಾರದ ಅಪೂರ್ವ ಚಿತ್ರವಾಗಿದೆ.

ಬೆಮರಿ ಮುಳುಗಿದಪೆಂ ಸಂ
ಭ್ರಮದಿಂ ಬಿಳ್ದಪ್ಪೆನರಸ ಕೈಗುಡು ನೀಂ ಬೇ
ಗಮೆನಿಪ್ಪ ತೆರದೆ ತಾಂಬೂ
ಲಮಿಳಿತಮಂ ಕಾಂತೆ ನೀಡಿದಳ್ ನಿಜಕರಮಂ

(ಕರ್ನಾಟಕ ಕಾದಂಬರಿ, 6–79)

ಎಂಬ ಪದ್ಯದಲ್ಲಿ ಅವಳ ಶೃಂಗಾರ, ನಾಚಿಕೆ, ಸಂಭ್ರಮ, ಸಡಗರ ಎಲ್ಲವನ್ನು ಕವಿ ಚಿತ್ರಿಸಿದ್ದಾನೆ. 'ಬುವಿಬಾನುಗಳಿಗೆ ಒಂದು ರಸಸೇತುವೆಯನ್ನು ನಿರ್ಮಿಸಿದಂತಿರುವ ಕಾದಂಬರಿಯ ಕಥೆ ಗಂಡು ಹೆಣ್ಣಿನ ಪ್ರಣಯ ವ್ಯಾಪಾರವನ್ನು ಮನೋಹರವಾಗಿ ಚಿತ್ರಿಸಿದೆ. ಮೊದಲು ಕೇವಲ

ಕಾಮುವಾಗಿದ್ದುದು ವಿರಹ ವೇದನೆಯ ಬೆಂಕಿಯಲ್ಲಿ ಬೆಂದು, ಜನ್ಮಾಂತರಗಳನ್ನು ದಾಟಿ ಬರುವಾಗ ತನ್ನ ಕಾಳಿಕೆಯನ್ನು ಕಳೆದುಕೊಂಡು, ಕೊನೆಯಲ್ಲಿ ಅಪರಂಜಿಯಂತಹ ಪ್ರೇಮವಾಗಿ ಪರಿವರ್ತಿತವಾಗುತ್ತದೆ' (ಕನ್ನಡ ಸಾಹಿತ್ಯ ಚರಿತ್ರೆ, ತ.ಸು.ಶಾಮರಾವ್, ಪು.37) ಎಂಬ ಅಭಿಪ್ರಾಯವನ್ನು ಇಲ್ಲಿ ಪರಿಗಣಿಸಬಹುದು. ಒಟ್ಟಿನಲ್ಲಿ ಕರ್ನಾಟಕ ಕಾದಂಬರಿ ಕಾವ್ಯದಲ್ಲಿ ಪ್ರೇಮದ ಎರಡು ಅಪೂರ್ವವಾದ ನೆಲೆಗಳನ್ನು ಕವಿ ಚಿತ್ರಿಸಿದ್ದಾನೆ -ಎಂದು ಹೇಳಬಹುದು.

ಪರಾಮರ್ಶನ ಗ್ರಂಥಸೂಚಿ

1. ಕನ್ನಡ ಸಾಹಿತ್ಯ ಚರಿತ್ರೆ, ತ.ಸು. ಶಾಮರಾವ್, ತಳುಕಿನ ವೆಂಕಣ್ಣಯ್ಯ ಸ್ಮಾರಕ ಗ್ರಂಥಮಾಲೆ, ಮೈಸೂರು, 1997.
2. ಕನ್ನಡ ಸಾಹಿತ್ಯ ಚರಿತ್ರೆ, ರಂ.ಶ್ರೀ. ಮುಗಳಿ, ಗೀತಾ ಬುಕ್ ಹೌಸ್, ಮೈಸೂರು, 2014.
3. ಕನ್ನಡ ಸಾಹಿತ್ಯ ಚಾರಿತ್ರಿಕ ಬೆಳವಣಿಗೆ, ಡಾ.ಸಿ. ವೀರಣ್ಣ, ನವಕರ್ನಾಟಕ ಪ್ರಕಾಶನ, ಬೆಂಗಳೂರು, 2011
4. ಕರ್ನಾಟಕ ಕಾದಂಬರಿ, (ಸಂ.) ಹ.ವೆ. ನಾರಾಯಣಶಾಸ್ತ್ರಿ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, 2011.
5. ನಮ್ಮ ಕನ್ನಡ ಕಾವ್ಯ, (ಸಂ.) ಓ.ಎಲ್. ನಾಗಭೂಷಣ ಸ್ವಾಮಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 1997.

****

ರನ್ನನ ಗದಾಯುದ್ಧ

– ಡಾ. ನಳಿನಿ ವೆಂಕಟೇಶ್, ಬೆಂಗಳೂರು

ಕನ್ನಡ ಸಾಹಿತ್ಯಕ್ಕೆ ಸಾವಿರ ವರ್ಷಕ್ಕೂ ಮೇಲ್ಪಟ್ಟು ಇತಿಹಾಸವಿದೆ. ಹತ್ತನೆಯ ಶತಮಾನವು ಕನ್ನಡ ಸಾಹಿತ್ಯದ "ಸುವರ್ಣಯುಗ"ವೆಂದೇ ಕರೆಯಲ್ಪಟ್ಟಿದೆ. ಕನ್ನಡದ ಆದಿಕವಿ, ಅಗ್ರಕವಿ ಎಂದು ಹೆಸರಾಗಿರುವ ಪಂಪನು ಹತ್ತನೆಯ ಶತಮಾನದವನು. ಪಂಪ ಪೂರ್ವದಲ್ಲಿಯೇ ಸಾಹಿತ್ಯ ರಚನೆಯಾಗಿತ್ತು. ಆದರೆ ನಮಗೆ "ಕವಿರಾಜಮಾರ್ಗ" ವೊಂದೇ ಉಪಲಬ್ಧ ಕೃತಿಯಾಗಿದೆ. ಇದು ಶಾಸ್ತ್ರಗ್ರಂಥ ನಂತರ ಹತ್ತನೆಯ ಶತಮಾನದ ಆದಿಯಲ್ಲಿ "ವೊಡ್ಡಾರಾಧನೆ" ಎಂಬ ಗದ್ಯಕೃತಿಯ ರಚನೆಯಾಗಿದೆ. ಈ ಗ್ರಂಥಗಳನ್ನು ಬಿಟ್ಟರೆ ಪಂಪನ ಕೃತಿಗಳಾದ "ಆದಿಪುರಾಣ" ಹಾಗೂ "ವಿಕ್ರಮಾರ್ಜುನ ವಿಜಯ" ಕಾವ್ಯಗಳೇ ನಮಗೆ ಉಪಲಬ್ಧವಾಗಿರುವ ಗ್ರಂಥಗಳು. ನಂತರ ಅಂದರೆ ಪಂಪನ ನಂತರ ಬಂದವರು ಪೊನ್ನ ಹಾಗೂ ರನ್ನ ಕವಿಗಳು. ಕವಿ ರನ್ನನು "ಅಜಿತ ತೀರ್ಥಂಕರ ಪುರಾಣ ತಿಲಕಂ" ಹಾಗೂ "ಸಾಹಸಭೀಮ ವಿಜಯಂ" ಎಂಬ ಕಾವ್ಯಗಳನ್ನು ರಚಿಸಿದ್ದಾನೆ.

ಘಟಪ್ರಭಾ ಹಾಗೂ ಕೃಷ್ಣಾ ನದಿಗಳ ನಡುವೆ ಬೆಳಗುಲಿ ದೇಶವಿದೆ. ಈ ಬೆಳಗುಲಿ–500ರಲ್ಲಿ ಪ್ರಸಿದ್ಧವಾದ ಜಂಬುಖಂಡಿ ಎಂಬ ಪ್ರದೇಶವಿದೆ. ಆ ವಿಷಯದಲ್ಲಿ ತಿಲಕ ಪ್ರಾಯವಾದುದು "ಮುದುವೊಳಲ್" ಎಂಬ ಪಟ್ಟಣ. ಈ ಪ್ರಸಿದ್ಧವಾದ ಊರೇ ರನ್ನನ ಜನ್ಮಸ್ಥಳ. ರನ್ನನು ತನ್ನ

ಸ್ವಂತ ವಿಚಾರಗಳನ್ನು ತನ್ನ ಕೃತಿಯಲ್ಲಿ ಹೇಳಿಕೊಂಡಿದ್ದಾನೆ. ರನ್ನನ ತಾಯಿ ಅಬ್ಬಲಬ್ಬೆ ಆಕೆ ಪತಿವ್ರತೆಯು, ತಂದೆ "ಜಿನೇಂದ್ರ ಪಾದ ಕಮಲ ಭ್ರಮರ" ಜಿನವಲ್ಲಭ. ರೇಚಣ ಮತ್ತು ಮಾರಮಯ್ಯ ಎಂಬ ಇಬ್ಬರು ರನ್ನನ ಸಹೋದರರು. ರನ್ನನಿಗೆ ಇಬ್ಬರು ಪತ್ನಿಯರು ಶಾಂತಿ ಮತ್ತು ಜಕ್ಕಿ ಹಾಗೂ ರಾಯ ಎಂಬ ಮಗನೂ, ಅತ್ತಿಮಬ್ಬೆ ಎಂಬ ಮಗಳೂ ರನ್ನನಿಗೆ ಇದ್ದರು. ರನ್ನನು ಜೈನ ಧರ್ಮಿಯನು, ಬಳೆಗಾರ ಕುಲದಲ್ಲಿ ಹುಟ್ಟಿದವನು. ಕವಿಯು ತನ್ನನ್ನು "ವಣಿಕ್ಕುಳಾರ್ಕ" ಎಂದೂ "ವೈಶ್ಯಧ್ವಜ" ಎಂದೂ ಕರೆದುಕೊಂಡಿದ್ದಾನೆ.

ಕಾಲ : ರನ್ನನು ಕ್ರಿ.ಶ. 949ರ ಸೌಮ್ಯ ಸಂವತ್ಸರದಲ್ಲಿ ಜನಿಸಿದನು. ರನ್ನನು ಒಟ್ಟು ಐದು ಕೃತಿಗಳನ್ನು ರಚಿಸಿದ್ದಾನೆ. ಕ್ರಿ.ಶ. 993 ರಲ್ಲಿ "ಅಜಿತ ತೀರ್ಥಂಕರ ಪುರಾಣ ತಿಲಕಂ" ಹಾಗೂ ಕ್ರಿ.ಶ. 1005ರಲ್ಲಿ "ಗದಾಯುದ್ಧಂ" ಅಥವಾ "ಸಾಹಸಭೀಮವಿಜಯಂ" ಎಂಬ ಕೃತಿಗಳನ್ನು ರಚಿಸಿದ್ದಾನೆ. ಇವಲ್ಲದೆ "ರನ್ನಕಂದ" ಎಂಬ ನಿಘಂಟು ಸಹ ಉಪಲಬ್ಧವಾಗಿದೆ. ಆದರೆ ಇನ್ನೆರಡು ಗ್ರಂಥಗಳಾದ "ಪರಶುರಾಮ ಚರಿತೆ" ಹಾಗೂ "ಚಕ್ರೇಶ್ವರ ಚರಿತೆ" ಕೃತಿಗಳು ಉಪಲಬ್ಧವಾಗಿಲ್ಲ.

ಆಶ್ರಯದಾತರು : ರನ್ನನಿಗೆ ಗಂಗಮಂಡಲದಲ್ಲಿ ಅಜಿತಸೇನಾಚಾರ್ಯರು ಗುರುವಾಗಿ ದೊರೆತರು ಹಾಗೂ ಗಂಗಮಂತ್ರಿ ಚಾವುಂಡರಾಯನು ಆಶ್ರಯದಾತನಾದನು. ಗಂಗಮಂಡಲದಿಂದ ಹಿಂದಿರುಗಿ ತನ್ನ ನಾಡಿಗೆ ಬಂದು ಚಾಳುಕ್ಯ ರಾಜ ತೈಲಪನ ಆಶ್ರಯಕ್ಕೆ ಬಂದನು. ಅಲ್ಲಿ ಮತ್ತೊಬ್ಬ ಆಶ್ರಯದಾತೆಯಾದ ಅತ್ತಿಮಬ್ಬೆಯ ಪ್ರೀತಿ, ವಾತ್ಸಲ್ಯವೂ ದೊರೆಯಿತು. ಸಹಜವಾಗಿಯೇ ಇಲ್ಲಿ ಆಧ್ಯಾತ್ಮಿಕ ವಾತಾವರಣದಲ್ಲಿ ಇದ್ದು, ಕಾವ್ಯ ಪುರಾಣಗಳ ಆಳವಾದ ಅಧ್ಯಯನ ನಡೆದಿರಬೇಕು.

ಅಜಿತ ಪುರಾಣ : ಅಜಿತನಾಥ ಪುರಾಣದ ರಚನಾಕಾಲ ಕ್ರಿ.ಶ. 993. ಇದು ಎರಡನೆಯ ತೀರ್ಥಂಕರನಾದ ಅಜಿತನಾಥ ಹಾಗೂ ಎರಡನೆಯ ಚಕ್ರವರ್ತಿಯಾದ ಸಗರನ ಚರಿತ್ರೆಯುಳ್ಳ ಜೈನ ಪುರಾಣ. ಈ ಪುರಾಣ ಕಾವ್ಯದಲ್ಲಿ ಅಜಿತನಾಥನ ಪಂಚಕಲ್ಯಾಣದ ವರ್ಣನೆಯು ವಿವರವಾಗಿ ಬಂದಿದೆ. ಇಲ್ಲಿ ಅಜಿತನಾಥನ ಒಂದೇ ಒಂದು ಜನ್ಮವು

ನಿರೂಪಿತವಾಗಿರುವುದರಿಂದ ಹಲವಾರು ಪೂರ್ವಭವಾವಳಿಗಳ ತೊಡಕಿಲ್ಲ. ಈ ಪುರಾಣದ ರಚನೆಯಲ್ಲಿ ವಿಶೇಷವಾದ ಉತ್ಸಾಹ ಹಾಗೂ ತಾದಾತ್ಮ್ಯತೆಯನ್ನು ಕವಿಯಲ್ಲಿ ಕಾಣುತ್ತೇವೆ. ವೈರಾಗ್ಯವರ್ಣನೆ ಜಿನಶಿಶುವಿನ ಜನ್ಮಾಭಿಷೇಕ ಆ ಕಾಲದ ನಾಟ್ಯಗೀತೆ, ಪರಿನಿಷ್ಕ್ರಮಣ ಮೊದಲಾದ ಸಂದರ್ಭಗಳಲ್ಲಿ ರೂಪದ, ನಿಸರ್ಗದ ವರ್ಣನೆಗಳಲ್ಲಿ ಕವಿಯ ಪ್ರತಿಭೆಯು ಕಂಡುಬರುತ್ತದೆ. ಮುಂದೆ ತೀರ್ಥಂಕರನಾಗಲಿರುವ ವ್ಯಕ್ತಿಯ ಹಿಂದಿನ ಜನ್ಮದ ವಿವರವನ್ನು ಚಿತ್ರಿಸುವುದು ಜೈನ ಪುರಾಣಗಳಲ್ಲಿ ಸ್ವಾಭಾವಿಕವಾಗಿದೆ. ಅದೇ ರೀತಿ ಅಜಿತನಾಥನ ಪೂರ್ವಭವದ ಚಿತ್ರವನ್ನು ಕವಿಯು ರೇಖಿಸಿದ್ದಾನೆ. ವಿಮಲವಾಹನನಿಗೆ ಕೆನ್ನೆಯಲ್ಲಿ ನರೆಗೂದಲನ್ನು ಕಂಡು ವೈರಾಗ್ಯವು ಪ್ರಾಪ್ತವಾಯಿತು. ವಿಮಲವಾಹನನ ವೈರಾಗ್ಯ ನಿರೂಪಣೆ ತುಂಬ ಸುಂದರವಾಗಿದೆ. ಈ ನಿರೂಪಣೆಯಲ್ಲಿ ದೇಹದ ಅನಿತ್ಯತೆ, ಸಂಸಾರ ವಿಮುಖತೆ, ಜೀವ ಸಂಬೋಧನೆ ಮತ್ತು ಧರ್ಮಗಳು ವರ್ಣಿತವಾಗಿದೆ.

ಬಡಿವ ಪಿಡಿದುಡಿವ ಕಟ್ಟುವ
ಕಡಿವ ಕರಂ ಜಡಿವ ಬಯ್ದುನುಡಿವ ತೊಡರ್ಪಂ
ತೊಡರಿಸುವ ನರಕಗತಿಯೊಳ್
ತೊಡರ್ವುದೆ ತೊಡರದೆ ಜಿನೇಂದ್ರ ಮತದೊಳ್ ಹಿತದೊಳ್

ನುಡಿಯದೆ ನೋಡದೆ ಕೇಳದೆ
ಮಿಡುಕದೆ ಸಮತಿಯೊಳೆ ಸಂಯಮಂ ಬೆರಸಿರೆ ಬಂ
ದಡಿಗಡಿಗೆ ಧರ್ಮ ಶುಕ್ಲ
ಕ್ಕೆಡೆಗುಡದೆವುಗುಗುಮಾರ್ತರೌದ್ರಧ್ಯಾನಂ

ಹೀಗೆ ಜೀವಸಂಬೋಧನೆ ಮಾಡುವ ಪದ್ಯಗಳಲ್ಲಿ ಅತ್ಯಂತ ಮುಖ್ಯವಾಗಿ ಧರ್ಮದ ಸಾರವನ್ನೇ ಹೇಳುತ್ತದೆ, ಈ ಕಂದಪದ್ಯಗಳು ಸರಳ ಭಾಷೆಯಲ್ಲಿದೆ. ನಾಟಕೀಯವಾಗಿದೆ. ಹೀಗೆ ತನ್ನ ಆತ್ಮಕ್ಕೆ ಕುರಿತು ಹೇಳುವ ರೀತಿ ಹೃದ್ಯವಾಗಿದೆ. ಜೊತೆಗೆ ಜಿನಧರ್ಮ ಮೇಲ್ಮೆಯನ್ನು ಎತ್ತಿ ಹಿಡಿದಿರುವುದು ಕಂಡುಬರುತ್ತದೆ. ಜೊತೆಗೆ ಬೇರೆ ಧರ್ಮದೊಡನೆ

ಹೋಲಿಸಿ, ಜಿನಧರ್ಮದ ವಿಶಿಷ್ಟತೆಯನ್ನು ನಿರೂಪಿಸಿದ್ದಾನೆ. "ವಿಮಲವಾಹನನ ಸಂಸಾರ ವಿಮುಖತೆಯನ್ನು ಬಣ್ಣಿಸುವ ನೆಪದಲ್ಲಿ ಅವನು (ರನ್ನನು) ತನ್ನ ಭಾವನೆಗಳನ್ನೇ ಅಭಿವ್ಯಕ್ತಿಗೊಳಿಸಿದಂತೆ ತೋರುತ್ತದೆ" ಎಂದು ಸಿ.ಪಿ. ಕೃಷ್ಣಕುಮಾರ್ ಅವರು "ರನ್ನಪರೀಕ್ಷೆ"ಯಲ್ಲಿ ಹೇಳುತ್ತಾರೆ. "ವಿಮಲವಾಹನನ ನಿಮಿತ್ತವಾಗಿ ಇಲ್ಲಿ ಕವಿಯ ಸ್ವಾತ್ಮಚಿಂತನೆಯೇ ಸ್ವಗತಲಹರಿಯಾಗಿ ಹರಿದಿದೆ ಎನಿಸುವುದು" ಎಂದು ಜಿ. ವರದರಾಜ್‌ರಾವ್ ಅವರು (ಕನ್ನಡ ಸಾಹಿತ್ಯ ಚರಿತ್ರೆ ಮೈ.ವಿ.ವಿ.) ಅಭಿಪ್ರಾಯ ಪಟ್ಟಿದ್ದಾರೆ. ರನ್ನನು ಜೈನಶಾಸ್ತ್ರ, ನಾಟ್ಯಶಾಸ್ತ್ರ, ಅಲಂಕಾರ ಶಾಸ್ತ್ರ ಇವುಗಳನ್ನು ಚೆನ್ನಾಗಿ ಅಧ್ಯಯನ ಮಾಡಿರುವುದು ಅಜಿತ ಪುರಾಣದಲ್ಲಿ ತಿಳಿಯುತ್ತದೆ. ಇದರಲ್ಲಿ ಎರಡನೆಯ ತೀರ್ಥಂಕರನಾದ ಅಜಿತನಾಥನ ಕಥಾನಕದೊಂದಿಗೆ ಆ ಕಾಲದ ಎರಡನೆಯ ಚಕ್ರವರ್ತಿಯಾದ ಸಗರನ ಕಥೆಯು ನಿರೂಪಣೆಗೊಂಡಿದೆ. ಜಯಸೇನ ಮಹಾರಾಜನು ವೈರಾಗ್ಯಪರನಾಗುವುದು ಮಗನ ಸಾವಿನಿಂದ. ಮುಂದೆ ಸಗರ ಚಕ್ರವರ್ತಿಯಾಗಿ ಜನ್ಮ ಪಡೆದಾಗ, ಚಕ್ರರತ್ನವು ಆಯುಧಾಗಾರದಲ್ಲಿ ಹುಟ್ಟಿ, ಅವನು ದಿಗ್ವಿಜಕ್ಕೆ ಹೊರಡುವನು, ವೃಷಭಾಚಲದಲ್ಲಿ ವಿಜಯ ಪ್ರಶಸ್ತಿಯನ್ನು ಬರೆಯಲು ಹೊದಾಗ ಗರ್ವವು ಸೋರಿಹೋಗುವುದು, ಹಿಂದೆ ಚಕ್ರವರ್ತಿಯೊಬ್ಬನು ಬರೆಸಿದ ಪ್ರಶಸ್ತಿಯನ್ನು ದಂಡರತ್ನದಿಂದ ಅಳಿಸಿ ತನ್ನ ಪ್ರಶಸ್ತಿಯನ್ನು ಬರೆಯಿಸುವುದು ಇವೆಲ್ಲ ಅಂಶಗಳು ಬಂದಿದೆ. ಹಿಂದಿನ ಜನ್ಮದಲ್ಲಿ ಮಹಾಬಲ ಹಾಗೂ ಮಣಿಕೇತು ಇಬ್ಬರೂ ಒಂದು ಒಪ್ಪಂದವನ್ನು ಮಾಡಿಕೊಂಡಿದ್ದರು. ಇಲ್ಲಿ ಮಣಿಕೇತುವಿನ ಪಾತ್ರ ಪ್ರಮುಖವಾದುದು. ಆತನಿಂದ ಚಕ್ರವರ್ತಿಯಾದ ಸಗರನು ವೈರಾಗ್ಯವನ್ನು ಹೊಂದುವಂತೆ ಸನ್ನಿವೇಶವನ್ನು ರಚಿಸುತ್ತಾನೆ. ಈ ಭಾಗದ ಕಾವ್ಯವು ನಾಟಕೀಯತೆಯಿಂದ ಕೂಡಿ ಸುಂದರವಾಗಿದೆ.

ರನ್ನನು ಚಿತ್ರಿಸಿರುವ ಅತ್ತಿಮಬ್ಬೆ : ಅಜಿತಪುರಾಣದಲ್ಲಿ ಮತ್ತೊಂದು ಪ್ರಮುಖವಾದ ಭಾಗ ಅತ್ತಿಮಬ್ಬೆಯನ್ನು ಕುರಿತ ನಿರೂಪಣೆ. "ಸಾಹಿತ್ಯ ಜಗತ್ತಿನ ಅವಿಸ್ಮರಣೀಯ ಪಾತ್ರಪಂಕ್ತಿಯಲ್ಲಿ ಅದಕ್ಕೊಂದು ಸ್ಥಾನ ಮೀಸಲು" ಎಂದು ಸಿ.ಪಿ.ಕೆ. ಅವರು "ರನ್ನಪರೀಕ್ಷೆ" ಯಲ್ಲಿ ಹೇಳಿದ್ದಾರೆ. ಕವಿ ರನ್ನನು ಅತ್ತಿಮಬ್ಬೆಯ ಆಶ್ರಯಕ್ಕೆ ಬಂದು ಆಕೆಯ ಸಮೀಪದ ಒಡನಾಟದಿಂದ ಆಕೆಯ ಶಕ್ತಿ, ಭಕ್ತಿ, ದಾನಶೀಲತೆ, ಧರ್ಮ ಮಾರ್ಗದಲ್ಲಿ ನಡೆಯುವ

ವ್ಯಕ್ತಿತ್ವ ಇತ್ಯಾದಿಗಳನ್ನು ಯಾವ ಉತ್ಪ್ರೇಕ್ಷೆಯೂ ಇಲ್ಲದೆ ಸರಳವಾದ ಭಾಷೆಯಲ್ಲಿ ಚಿತ್ರಿಸಿದ್ದಾನೆ. ಅತ್ತಿಮಬ್ಬೆಯ ಪಾತ್ರ ಚಿತ್ರಣಕ್ಕೆ ಪೂರಕವಾಗಿ ಲಕ್ಕುಂಡಿಯ ಶಾಸನವಿದೆ, ಅದನ್ನು ರನ್ನನೇ ರಚಿಸಿರಬಹುದೆಂದು ತೀ.ನಂ. ಶ್ರೀಯವರು ಸಕಾರಣವಾಗಿ ಊಹಿಸಿದ್ದಾರೆ.

ಅತ್ತಿಮಬ್ಬೆಯ ತವರಿನ ಪರಿಚಯ : ಅತ್ತಿಮಬ್ಬೆಯ ತಾತ ವೆಂಗಿಮಂಡಲದ ಕಮ್ಮೆನಾಡಿನ ಪುಂಗನೂರಿನ ನಾಗಮಯ್ಯ. ಮಲ್ಲಪಯ್ಯ ಹಾಗೂ ಪುನ್ನಮಯ್ಯರು ಆತನ ಮಕ್ಕಳು. ಮಲ್ಲಪಯ್ಯನು ಪೊನ್ನ ಕವಿಗೆ ಆಶ್ರಯದಾತನಾಗಿದ್ದನು. ಮತ್ತೊಬ್ಬ ಮಗ ಪುನ್ನಮಯ್ಯನು ಶಸ್ತ್ರ ಶಾಸ್ತ್ರಗಳಲ್ಲಿ ಪರಿಣತನಾಗಿದ್ದನು. ಈತನು ಚಕ್ರವರ್ತಿ ತೈಲಪನಿಗೆ ಸಹಾಯಕನಾಗಿ, ಯುದ್ಧದಲ್ಲಿ ಶತ್ರುಗಳನ್ನು ಕೊಂದು ತಾನೂ ಸತ್ತನು, ಈ ಇಬ್ಬರು ಸಹೋದರರು ಪೊನ್ನಕವಿಯಿಂದ ಪುರಾಣ ಚೂಡಾಮಣಿಯಾದ ಶಾಂತಿ ಪುರಾಣವನ್ನು ಬರೆಸಿದರು. ಅತ್ತಿಮಬ್ಬೆಯ ಪರಿಶುದ್ಧವಾದ ವ್ಯಕ್ತಿತ್ವವನ್ನು ರನ್ನನು ಒಂದು ಪದ್ಯದಲ್ಲಿ ಕಂಡರಿಸಿದ್ದಾನೆ.

ಬಿಳಿಯರಳೆಯಂತೆ ಗಂಗಾ

ಜಳದಂತೆಸೆವಜಿತಸೇನ ಮುನಿಪತಿಯ ಗುಣಾ

ವ ಳಿದ್ದಳಿಯಂತೆ ನೆಗಪ್ದಿ ಕೊಪಣಾ

ಚಳದಂತೆ ಪವಿತ್ರಮತ್ತಿಮಬ್ಬೆಯ ಚರಿತಂ

ಮಲ್ಲಪಯ್ಯನ ಮಗಳು ಅತ್ತಿಮಬ್ಬೆ, ಆಕೆಗೆ ಐದು ಮಂದಿ ಸಹೋದರರೂ, ಇಬ್ಬರು ಸಹೋದರಿಯರೂ ಇದ್ದರು, ಈಕೆಯ ಒಬ್ಬಳು ತಂಗಿ ಗುಂಡಮಬ್ಬೆಯು ಸವತಿಯಾಗಿದ್ದಳು. ಗಂಡ ನಾಗದೇವನ ಸಾವಿನ ನಂತರ ಈಕೆ ಸಹಗಮನ ಮಾಡಿದಳು ಎಂದು ಕವಿ ರನ್ನನು ತಿಳಿಸಿದ್ದಾನೆ. ಅತ್ತಿಮಬ್ಬೆಯು ಪೊನ್ನನ "ಶಾಂತಿ ಪುರಾಣ" ಕೃತಿಯನ್ನು ಒಂದು ಸಾವಿರ ಪ್ರತಿ ಮಾಡಿಸಿ ಹಂಚಿದಳೆಂದು ಪೊನ್ನನು ಹೇಳಿದ್ದಾನೆ. ಲಕ್ಕುಂಡಿಯ ಶಾಸನದಲ್ಲಿ ಅತ್ತಿಮಬ್ಬೆಯ ಪವಾಡ ಸದೃಶವಾದ ಘಟನೆಗಳು ನಿರೂಪಣೆಗೊಂಡಿವೆ. ಶ್ರವಣಬೆಳಗೊಳದ ಉನ್ನತ ಕುಕ್ಕಟೇಶ್ವರ ಬಾಹುಬಲಿಯನ್ನು ನೋಡುವವರೆಗೂ ಆಹಾರವನ್ನು ತ್ಯಜಿಸಿದ್ದಳು. ಬೆಟ್ಟವನ್ನು ಹತ್ತುವಾಗ ಆಕೆಗೆ ಆಯಾಸವಾಯಿತು. ಆಗ ಅಕಾಲದಲ್ಲಿ ಮಳೆ ಬಂದಿತು. ಆ ದೈವಭಕ್ತಿಗೆ ಪುಷ್ಪವೃಷ್ಟಿಯೇ ಆಗಬೇಕಾಗಿತ್ತು ಎಂದು

ಕವಿ ರನ್ನನು ಹೇಳುತ್ತಾನೆ. (ಈ ಪದ್ಯ ಅಜಿತ ಪುರಾಣದಲ್ಲೂ ಬಂದಿದೆ) ಅತ್ತಿಮಬ್ಬೆಯು 1500 ಬಸದಿಗಳನ್ನು ಕಟ್ಟಿಸಿದಳು ಅವುಗಳಿಗೆ ಕಳಶದೀಪಾದಿಯಲ್ಲಿ ಲಕ್ಕುಂಡಿಯ ಆದಿನಾಥ ಬಸದಿಯು ಕಂಗೊಳಿಸುತ್ತಿತ್ತು. ಒಮ್ಮೆ ಆಕೆ ರಾಜನ ಅನುಜ್ಞೆಯಂತೆ ತಲೆಯ ಮೇಲೆ ಜಿನಬಿಂಬವನ್ನು ಹೊತ್ತು ಗೋದಾವರಿ ನದಿಯನ್ನು ದಾಟುತ್ತಿದ್ದಾಗೆ, ನದಿಯ ಪ್ರವಾಹ ತಗ್ಗಿಹೋಯಿತು. ಮದದಾನೆಯೊಂದು ಬಂಧನದಿಂದ ಬಿಡಿಸಿಕೊಂಡು ಕೋಪದಿಂದ ಬಂದಾಗ, ಹೆದರದೆ ಅತ್ತಿಮಬ್ಬೆಯು ಅದರ ಎದುರು ನಿಂತಾಗ, ಆನೆಯು ಅವಳಿಗೆ ನಮಸ್ಕರಿಸಿತು. ತಾನು ಭಕ್ತಿಯಿಂದ ಅರ್ಚಿಸುತ್ತಿದ್ದ ಜಿನಪ್ರತಿಮೆಯು ನದಿಯಲ್ಲಿ ಬಿದ್ದು ಹೋಯಿತು, ಅದು ದೊರಕುವವರೆಗೂ ಆಕೆ ಆಹಾರವನ್ನು ತ್ಯಜಿಸಿದ್ದಳು. ಎಂಟು ದಿನಗಳಿಗೆ ಆ ಜಿನಬಿಂಬವು ಆಕೆಯ ಕೈಸೇರಿತು. ಬೆಂಕಿಯು ಸೈನ್ಯವನ್ನು ಆವರಿಸಿದಾಗ ಜಿನಗಂಗೋದಕವನ್ನು ಅತ್ತಿಮಬ್ಬೆಯು ಚಿಮುಕಿಸಲು ಬೆಂಕಿಯು ನಂದಿಹೋಯಿತು. ಪಡೆವಳ ತೈಲನು ಅತ್ತಿಮಬ್ಬೆಯ ಮಗ. ಆತನು ಮಾಸವಾಡಿ 140ನ್ನು ಆಳುತ್ತಿದ್ದನು. ಈತ ಕೂಡ ಶೂರ, ಪರಾಕ್ರಮಿಯಾಗಿದ್ದನು. ನನ್ನಿ ನಾರಾಯಣ, ಸಮ್ಯಕ್ತ್ವರತ್ನಾಕರ ಎಂದೂ ಶಾಸನ ಹೊಗಳಿದೆ. ನಾನಾ ಶಿಖರಗಳಿಂದ ಕೂಡಿದ ಲಕ್ಕುಂಡಿಗೆ ಶೋಭೆಯನ್ನುಂಟು ಮಾಡುವ ಜಿನ ಬಸದಿಯನ್ನು ಅತ್ತಿಮಬ್ಬೆಯು ಮಾಡಿಸಿದಳು ಎಂದು ಶಾಸನವು ಹೊಗಳಿದೆ ಈ ಬಸದಿಗೆ "ಬ್ರಹ್ಮಜಿನಾಲಯ" ಎಂಬ ಹೆಸರೂ ಇತ್ತು ಎಂದು ಶಾಸನ ಹೇಳುತ್ತದೆ. ಹೀಗೆ ಐತಿಹಾಸಿಕ ವ್ಯಕ್ತಿಯೂ ಅದರಲ್ಲೂ ಸಹಸ್ರಮಾನದ ಪರಿಶುದ್ಧ ವ್ಯಕ್ತಿತ್ವದ ಮಹಿಳೆಯಾದ ಅತ್ತಿಮಬ್ಬೆಯ ಚರಿತವು ರನ್ನ ಕವಿಯಿಂದಾಗಿ ಇಲ್ಲಿಯವರೆಗೂ ಉಳಿದುಬಂದಿದೆ.

ಸಾಹಸಭೀಮ ವಿಜಯಂ : ರನ್ನನು ಪಂಪನನ್ನೇ ಆದರ್ಶವಾಗಿರಿಸಿಕೊಂಡಿದ್ದಾನೆ. "ಪಂಪನು ಬೆಳಗುವೆನಿಲ್ಲಿ ಲೌಕಿಕಮನ್ ಅಲ್ಲಿ ಜಿನಾಗಮಮಂ" ಎಂದು ಎರಡು ಕಾವ್ಯಗಳನ್ನು ರಚಿಸಿದ್ದಾನೆ. ಲೌಕಿಕ ಕಾವ್ಯವನ್ನಾಗಿ "ವಿಕ್ರಮಾರ್ಜುನ ವಿಜಯ"ವನ್ನು ಆಗಮಿಕ ಕಾವ್ಯವಾಗಿ "ಆದಿಪುರಾಣ"ವನ್ನೂ ರಚಿಸಿದ್ದಾನೆ. ರನ್ನನೂ ಇದೇ ಮಾರ್ಗದಲ್ಲಿ ನಡೆದು "ಸಾಹಸಭೀಮವಿಜಯ"ವನ್ನು ಲೌಕಿಕ ಕಾವ್ಯವನ್ನಾಗಿಯೂ, "ಅಜಿತ ಪುರಾಣ"ವನ್ನು ಆಗಮಿಕ ಕಾವ್ಯವನ್ನಾಗಿಯೂ ರಚಿಸಿದ್ದಾನೆ. ಇದಲ್ಲದೆ

ಮೊದಲೇ ಹೇಳಿದಂತೆ ಮತ್ತೆ ಮೂರು ಕೃತಿಗಳನ್ನು ರಚಿಸಿದ್ದಾನೆ. ಸಾಹಸಭೀಮವಿಜಯಕ್ಕೆ ಭೀಮನೇ ನಾಯಕ, ಚಾಳುಕ್ಯ ಚಕ್ರವರ್ತಿ ಸತ್ಯಾಶ್ರಯನನ್ನು ತನ್ನ ಕಾವ್ಯನಾಯಕನಾದ ಭೀಮನಿಗೆ ಅಭೇದಗೊಳಿಸಿ ಕಾವ್ಯರಚನೆ ಮಾಡಿದ್ದಾನೆ. ಮಹಾಭಾರತ ಯುದ್ಧದ ಕೊನೆಯ ಭಾಗವಾದ ಭೀಮ ದುರ್ಯೋಧನರ ಗದಾಯುದ್ಧವೇ ಈ ಕೃತಿಯ ವಸ್ತುವಾಗಿದೆ. ಮಹಾಭಾರತದ ಕಥಾ ವಸ್ತುವೇ ಆಗಿದ್ದರೂ, "ಗದಾಯುದ್ಧ" ಕಾವ್ಯಕ್ಕೆ "ಪಂಪಭಾರತ"ವೇ ಮುಖ್ಯ ಹಾಗೂ ಪ್ರಧಾನ ಆಕರವಾಗಿದೆ, ಭಟ್ಟನಾರಾಯಣನ ಸಂಸ್ಕೃತ "ವೇಣೀಸಂಹಾರ" ನಾಟಕದಿಂದಲೂ ರನ್ನನು ಪ್ರಭಾವಿತನಾಗಿದ್ದಾನೆ. ಚಾಳುಕ್ಯ ಸತ್ಯಾಶ್ರಯನು ಶೌರ್ಯ ಸಾಹಸಗಳಿಂದ ಗೂರ್ಜರರಾಜನ ಗಜ ಸೈನ್ಯದ ಮೇಲೆ ಯುದ್ಧ ಮಾಡಿ ಗೆದ್ದ ಪ್ರಸಂಗ, ತಮ್ಮನನ್ನು ಕೊಂದವನನ್ನು ಬೆನ್ನಟ್ಟಿ ಸೆರೆಹಿಡಿದು ತಂದು ತನ್ನ ಛಲವನ್ನು ಮೆರೆದವನು ಇತ್ಯಾದಿ ಸತ್ಯಾಶ್ರಯನ ಶೌರ್ಯ ಪರಾಕ್ರಮಗಳನ್ನು ರನ್ನನು ಸಮರ್ಥವಾಗಿ ಚಿತ್ರಿಸಿದ್ದಾನೆ. ಗದಾಯುದ್ಧವು ಹತ್ತು ಆಶ್ವಾಸಗಳಿಂದ ಕೂಡಿದೆ. ಮಹಾಭಾರತದ ಯುದ್ಧದ ಕೊನೆಯ ದಿನಗಳಲ್ಲಿ ನಡೆದ ಭೀಮ – ದುರ್ಯೋಧನರ ಯುದ್ಧವೇ ಈ ಕಾವ್ಯದ ಕಥಾವಸ್ತುವಾಗಿದೆ. ರಣರಂಗದಲ್ಲಿ ದ್ರೌಪದಿಯು ಭೀಮನನ್ನು ಭೇಟಿಯಾಗುವುದರಿಂದ ಕಾವ್ಯ ಪ್ರಾರಂಭವಾಗುತ್ತದೆ. ಅಂತಿಮವಾಗಿ ಭೀಮನಿಂದ ದುರ್ಯೋಧನನ ತೊಡೆ ಮುರಿದು ಬಿದ್ದು, ದ್ರೌಪದಿಯ ಮುಡಿಕಟ್ಟಿ ಭೀಮನು ಪಟ್ಟಾಭಿಷಕ್ತನಾಗುವುದರೊಂದಿಗೆ ಕಾವ್ಯ ಮುಕ್ತಾಯವಾಗುತ್ತದೆ.

ಗದಾಯುದ್ಧದ ವಸ್ತು : "ಗದಾಯುದ್ಧದ " ಕಾವ್ಯಕ್ಕೆ ಪಂಪಭಾರತದ ಹದಿಮೂರನೇ ಆಶ್ವಾಸವೇ ಪ್ರಧಾನವಾದ ಆಕರವಾಗಿರುವುದೆಂದು ಸಾಧಾರಣವಾಗಿ ಎಲ್ಲರೂ ಹೇಳುತ್ತಾರೆ. ಸ್ವಲ್ಪಮಟ್ಟಿಗೆ ಇದಕ್ಕಿಂತ ಭಿನ್ನವಾದ ಹೆಚ್ಚಿನ ಪ್ರಭಾವವು ಇರಬಹುದೆಂದು ಊಹಿಸಿರುವ ಅಭಿಪ್ರಾಯವು ಹೀಗಿದೆ.

ರನ್ನನ ಮೇಲೆ ಭಾಸ, ಭಟ್ಟನಾರಾಯಣರಿಗಿಂತ ಪಂಪನ ಪ್ರಭಾವವೇ ಹೆಚ್ಚು. "ಸಾಹಸಭೀಮವಿಜಯ"ಕ್ಕೆ "ವಿಕ್ರಮಾರ್ಜುನ ವಿಜಯ"ವೇ ನೇರ ಆಕರ. ಪಂಪಭಾರತದ 13ನೇ ಆಶ್ವಾಸವೇ ಇಡೀ ಕಾವ್ಯಕ್ಕೆ ವಸ್ತು ಆದರೂ, ಪಂಪಭಾರತದ ಬೇರೆ ಬೇರೆ ಆಶ್ವಾಸಗಳಿಂದಲೂ ಅಲ್ಲಲ್ಲಿ ನುಡಿ

ಭಾವಗಳನ್ನು ಸ್ವೀಕರಿಸಬಹುದೆಂದು ಕಾಣುತ್ತದೆ. ಮೇಲೆ ಹೇಳಿರುವ ಅಭಿಪ್ರಾಯಗಳ ಹಿನ್ನೆಲೆಯಲ್ಲಿ ಗದಾಯುದ್ಧ ಕಾವ್ಯವು ಸಿಂಹಾವಲೋಕನ ಕ್ರಮದಲ್ಲಿದೆ ಎಂಬುದನ್ನು ಗಮನದಲ್ಲಿಟ್ಟುಕೊಂಡು, ಪಂಪನಿಂದ ಸ್ವೀಕರಿಸಿರುವ ಮುಖ್ಯ ಅಂಶಗಳನ್ನು ನೋಡಬಹುದು.

1. ಸಂಜಯನ ಪ್ರಸಂಗ, ಅಭಿಮನ್ಯು ಪ್ರಸಂಗ

2. ಕಾವ್ಯ ಪ್ರಾರಂಭದಲ್ಲಿ ಬರುವ ದೇವತೆಗಳ ಹೋಲಿಕೆ

3. ಘೋಷಯಾತ್ರೆ

4. ಭೀಮನ ಪ್ರತಿಜ್ಞೆ – ಪ್ರತಿಜ್ಞೆಯ ಪೂರೈಕೆ

5. ಗದಾಯುದ್ಧ – ಊರುಭಂಗ – ಮುಕುಟಭಂಗ

6. ಗದಾಯುದ್ಧದ ಸಂದರ್ಭದಲ್ಲಿ ಬಲರಾಮನ ಪ್ರಸಂಗ

7. ಅಶ್ವತ್ಥಾಮ – ಲಕ್ಷ್ಮೀ ಪ್ರಸಂಗ – ಇರುಳ್ಗಾಳಿಗ

ರನ್ನನು ಸ್ವತಂತ್ರವಾಗಿ ನಿರ್ವಹಿಸಿರುವ ಭಾಗಗಳೆಂದರೆ ಗದಾಯುದ್ಧದ ಪೂರ್ವಭಾವೀ ಸಿದ್ಧತೆ, ವೈಶಂಪಾಯನ ಸರೋವರದ ಸುತ್ತಮುತ್ತಲಿನ ಭಾಗದ ವರ್ಣನೆ, ಅಭಿಮನ್ಯುವಿನ ಶವವನ್ನು ನೋಡಿದಾಗಿನ ವರ್ಣನೆ, ದ್ರೌಪದಿಯ ಸೌಂದರ್ಯದ ವರ್ಣನೆ, ಯುದ್ಧರಂಗದಲ್ಲಿ ನವರಸ ವರ್ಣನೆ, ಭೀಮನೇ "ಗದಾಯುದ್ಧ" ಕಾವ್ಯದ ನಾಯಕ ಎಂದು ಕವಿಯು ನಿಸ್ಸಂದೇಹವಾಗಿ ಹೇಳಿದ್ದಾನೆ. ಗದಾಯುದ್ಧದಲ್ಲಿ ದ್ರೌಪದಿಯು ಭೀಮನನ್ನು ಕಾಣಲು ಬರುತ್ತಾಳೆ, ಅವರಿಬ್ಬರ ಸಂಭಾಷಣೆಯಿಂದ ಕಾವ್ಯವು ಪಾರಂಭವಾಗುತ್ತದೆ. ಭೀಮನು ಧರ್ಮರಾಯನ ಸಲಹೆಯಂತೆ ಸಂಧಿಗೆ ಎಲ್ಲಿ ಒಪ್ಪಿಗೆ ಕೊಡುವನೋ ಎಂಬ ಆತಂಕ–ಭಯಗಳಿಂದ ದ್ರೌಪದಿಯು ಯುದ್ಧಕ್ಕೆ ಪ್ರಚೋದಿಸಿ ಮಾತನಾಡುತ್ತಾಳೆ. ಈ ಭಾಗವು ಭೀಮ–ದ್ರೌಪದಿಯರ ಸಂಭಾಷಣೆಯು ನಾಟಕೀಯತೆಯಿಂದ ಕೂಡಿ ಸುಂದರವಾಗಿದೆ. ಭೀಮನ ಸೌಹಾರ್ದತೆಯೂ ಇಲ್ಲಿ ನಿರೂಪಣೆಗೊಂಡಿದೆ. ಆ ನಂತರ ಭೀಮನು ಕಾಣಿಸಿಕೊಳ್ಳುವುದು ದುರ್ಯೋಧನನನ್ನು ಹುಡುಕುವಾಗ, "ಕುರುಧರೆಯೊಳ್ ಕುರುಪತಿಯುನರಸಿದಂ ಪವನಸುತಂ". ಮುಂದೆ ಧೃತರಾಷ್ಟ್ರ–

ಗಾಂಧಾರಿಯರನ್ನು ಭೇಟಿ ಮಾಡಿದಾಗ, ಮಕ್ಕಳನ್ನು ಕಳೆದುಕೊಂಡು ದುಃಖದಿಂದಿದ್ದ ಅವರ ಮುಂದೆ ಆಡಿದ ಸಿಟ್ಟಿನ, ಕ್ರೋಧದ ಮಾತುಗಳು ಅವನು "ಉದ್ಧತ" ಎನಿಸಿಕೊಳ್ಳಲು ಕಾರಣವಾಗಿದೆ. ಭೀಮನು ಅನೇಕ ಬಾರಿ ತನ್ನ ಪ್ರತಿಜ್ಞೆಯನ್ನು ದೊಡ್ಡ ಗಂಟಲಿನಲ್ಲಿ ಘೋಷಿಸಿರುತ್ತಾನೆ. ಇಲ್ಲೆಲ್ಲ ಸಿಟ್ಟುಕ್ರೋಧವೇ ವಿಜೃಂಭಿಸುತ್ತಿರುತ್ತದೆ. ಆದರೆ ಭೀಮನ ಒಳ್ಳೆಯತನವಾಗಲೀ, ಸಹೃದಯ ಮನಸ್ಸಾಗಲೀ ರನ್ನನಲ್ಲಿ ಎದ್ದು ಕಾಣುವುದಿಲ್ಲ, ಭೀಮನು ದ್ರೌಪದಿಗೆ ಸೌಗಂಧಿಕಾ ಪುಷ್ಪವನ್ನು ತಂದುಕೊಟ್ಟ ಪ್ರಸಂಗ, ಹಾಗೂ ಕೀಚಕ ವೃತ್ತಾಂತಗಳು ದ್ರೌಪದಿಗೆ ಭೀಮನ ಮೇಲಿರುವ ಪ್ರೇಮವನ್ನೂ, ಭೀಮನಿಗೆ ದ್ರೌಪದಿಯ ಮೇಲಿರುವ ಅಭಿಮಾನವನ್ನೂ ಎತ್ತಿಹಿಡಿಯುವ, ಮಾನವೀಯ ಮೌಲ್ಯವನ್ನೂ ಕಾಣುವ ಪ್ರಸಂಗಗಳು, ಹನುಮಂತನನ್ನು ತನಗಾಗಿ ಏನನ್ನೂ ಕೇಳದೆ ತಮ್ಮನಾದ ಅರ್ಜುನನ ಬಾವುಟದಲ್ಲಿ ನೆಲೆಸುವಂತೆ ಅವನ ಗುಣವು ಪ್ರಕಾಶಕ್ಕೆ ಬರುತ್ತಿತ್ತು. ಇದೂ ಅಲ್ಲದೆ ಭೀಮನಿಗೆ ಸಂಬಂಧಪಟ್ಟ ಅನೇಕ ಮುಖ್ಯ ಪ್ರಸಂಗಗಳು ಪ್ರಸ್ತಾಪಿತವಾಗಿಲ್ಲ, ಇದು ಓದುಗರಿಗೆ ಆಶ್ಚರ್ಯ ಉಂಟುಮಾಡುತ್ತದೆ. ಬಕ, ಕಿಮ್ಮೀರ, ಕೀಚಕ, ಜರಾಸಂಧ ಇತ್ಯಾದಿ ರಾಕ್ಷಸರ ಹೆಸರುಗಳು ಸಾಲಾಗಿ ಬಂದಿರುವ ಒಂದೆರಡು ಪದ್ಯಗಳೂ ಪಂಪಭಾರತದ ಅದೇ ಧಾಟಿಯ ಪದ್ಯಾನುವಾದವಾಗಿದೆ. ಆದರೆ ಪಂಪಭಾರತದಲ್ಲಿ ತನ್ನ ನಾಯಕನಾದ ಅರ್ಜುನನಿಗೇ ಮಹತ್ವಕೊಟ್ಟು ರಚಿಸಿರುವ ಪ್ರಸಂಗಗಳನ್ನು ರನ್ನನು ಸ್ವೀಕರಿಸಿರುವುದನ್ನು ನೋಡುತ್ತೇವೆ. ಕೆಲವೊಮ್ಮೆ ಭೀಮನ ಬಗೆಗೆ ಪಂಪನು ಹೇಳಿರುವಷ್ಟನ್ನೇ ರನ್ನನು ತೆಗೆದುಕೊಂಡಿದ್ದರೂ ಭೀಮನ ಪಾತ್ರ ತುಂಬುತ್ತಿತ್ತು. ಭೀಮನ ಶೌರ್ಯ ಸಾಹಸಗಳಿಗೆ ಸಂಬಂಧಿಸಿದ ಬಕ, ಹಿಡಿಂಬ ಇತ್ಯಾದಿಗಳ ವಧೆಯು ಭೀಮನ ಶೌರ್ಯ ಸಾಹಸಗಳಿಗೆ ಸಂಬಂಧಿಸಿದವು ಎಂಬುದನ್ನು ಮರೆಯಬಾರದು. ರನ್ನನ ಗದಾಯುದ್ಧದಲ್ಲಿ ದುರ್ಯೋಧನನ ಪಾತ್ರ ವಿಶಿಷ್ಟವಾದದ್ದು. ವ್ಯಾಸ ಭಾರತದಲ್ಲಿ ಅವನದು ದುಷ್ಟ ಪಾತ್ರವೇ ಆಗಿದೆ. ಆದರೆ ರನ್ನನ ದುರ್ಯೋಧನನ ಪಾತ್ರವು ತನ್ನ ಸುತ್ತಮುತ್ತಲಿನ ಎಲ್ಲ ಪಾತ್ರಗಳನ್ನು ಹಿಂದೆ ಸರಿಸುತ್ತದೆ. ಏಕೆಂದರೆ ಗದಾಯುದ್ಧದ ಸಂದರ್ಭವೊಂದನ್ನು ಬಿಟ್ಟು, ಇಲ್ಲಿ ಕ್ರಿಯೆ ಇಲ್ಲ. ಅವನ ನೆನಪುಗಳು, ಮೃತದೇಹಗಳನ್ನು ನೋಡುತ್ತ ನೋಡುತ್ತ ತೋರಿಸುವ

ಪ್ರತಿಕ್ರಿಯೆಗಳು ಅವನ ಅಭಿಪ್ರಾಯಗಳು ಸಂಜಯನ ಮರು ಪ್ರತಿಕ್ರಿಯೆ ಹೀಗೆ ಇಡೀ ಕುರುಕ್ಷೇತ್ರದಲ್ಲಿ ಅವನೇ ಅವನಾಗಿ ವಿಜೃಂಭಿಸುತ್ತಾನೆ ಈ ಸಂದರ್ಭದಲ್ಲೆಲ್ಲ ರನ್ನನ ಕಾವ್ಯತಂತ್ರವಾದ ಸಿಂಹಾವಲೋಕನ ಕ್ರಮ ಹಾಗೂ ನಾಟಕೀಯತೆ ಗರಿಗೆದರಿದೆ. ಮಹಾಭಾರತ ಯುದ್ಧದ ಕೊನೆಯ ಅರ್ಧದಿನ ಘಟನೆಯನ್ನು ಮಾತ್ರ ತನ್ನ ಕಾವ್ಯಕ್ಕೆ ಆಯ್ದುಕೊಂಡಿದ್ದಾನೆ. ಆದ್ದರಿಂದ ದುರ್ಯೋಧನನು ಮಾಡಿದ ಅನ್ಯಾಯದ ಘಟನೆಗಳನ್ನು ಗತಕಾಲದ ಸಂಗತಿಗಳನ್ನಾಗಿ ಮಾಡಿದ್ದಾನೆ, ಮತ್ತು ಅವನ ದುಃಖ ಸಂಕಟಗಳನ್ನು ಮಾತ್ರ ನಮ್ಮೆದುರಿಗೆ ತೆರೆದಿಡುತ್ತಾನೆ. ಆದ್ದರಿಂದಾಗಿ ದುರ್ಯೋಧನನ ಪಾತ್ರ ಸಹಾನುಭೂತಿಯನ್ನು ಗಳಿಸಿಕೊಳ್ಳುತ್ತದೆ. ಪಾಂಡವರು ಯುದ್ಧದಲ್ಲಿ ಇನ್ನೇನು ಗೆಲ್ಲುತ್ತಾರೆ ಎಂಬ ಹೊತ್ತಿನಲ್ಲಿ ಕೌರವನನ್ನು ಹುಡುಕಿಕೊಂಡು ಹೋಗುವ, ಅವನು ತನ್ನವರನ್ನೆಲ್ಲ ಕಳೆದುಕೊಂಡು ವಿಧಿವಂಚಿತನಂತೆ ತೋರುತ್ತಾನೆ. ಇವುಗಳು ಓದುಗರಲ್ಲಿ ಕರುಣೆ-ಸಹಾನುಭೂತಿಗಳನ್ನು ಮೂಡಿಸುತ್ತವೆ.

ನಾಟಕೀಯತೆ : ಗದಾಯುದ್ಧ ವಸ್ತುವಿನ ಐಕ್ಯ ನಮ್ಮ ಗಮನವನ್ನು ಇನ್ನೊಂದು ಅನ್ಯಾದೃಶ್ಯವಾದ ಗುಣದತ್ತ ಸೆಳೆಯುತ್ತದೆ. ಅದು ನಾಟಕೀಯತೆ, ಕಾವ್ಯದ ಅಂತರಾಳದಲ್ಲಿ ನಾಟಕವೊಂದನ್ನು ಹುದುಗಿಸಿಟ್ಟಿದ್ದಾನೆ ರನ್ನಕವಿ. ರನ್ನನನ್ನು ಕುವೆಂಪು ಅವರು "ಶಕ್ತಿಕವಿ" ಎಂದು ಕರೆದಿದ್ದಾರೆ. ನಿರ್ಣಯ ಸರಿಯಾಗಿದ್ದು ರನ್ನನ ಬಲ ದೌರ್ಬಲ್ಯ ಎರಡನ್ನು ತಿಳಿಸುತ್ತದೆ. ಇದು ಓಜೋ ಸಮನ್ವಿವಾಗಿದ್ದು, ವೀರ ರೌದ್ರ ರಸಗಳ ನಿರೂಪಣೆಗೆ ಅನುಕೂಲಕರವಾಗಿದೆ, ಗದಾಯುದ್ಧ ಕಾವ್ಯದಲ್ಲಿ ಈ ಎರಡು ರಸಗಳೇ ಪ್ರಮುಖವಾಗಿದ್ದು, ಕವಿಯ ಶಕ್ತಿಯನ್ನು ತೋರಿಸುತ್ತದೆ. ಕವಿ ರನ್ನನ ಪ್ರತಿಭೆ ಈ ವೀರ ರೌದ್ರವನ್ನು ಅಭಿವ್ಯಕ್ತಿಸುವುದಕ್ಕೆ ಇರುವ ಶಕ್ತಿ ಇತರೆ ರಸಗಳನ್ನು ಅಭಿವ್ಯಕ್ತಿಸುವುದರಲ್ಲಿ ಇಲ್ಲ. ಈ ಕಾವ್ಯದ ಮಟ್ಟಿಗೆ ಬೇರೆ ರಸಗಳನ್ನು ಅಭಿವ್ಯಕ್ತಿಸುವ ಘಟನೆಗಳೂ ಇಲ್ಲ - ಸ್ವಲ್ಪ ಮಟ್ಟಿಗೆ ಕರುಣರಸವೊಂದನ್ನು ಉಳಿದು. "ವೀರ ರೌದ್ರದಿ ರಜೋಗುಣ ಪ್ರಚಾರವಾದ ಕಾವ್ಯಭಾಗಗಳನ್ನು ನಿರ್ವಹಿಸುವುದರಲ್ಲಿ ರನ್ನನ ಕಲೆ ಒಮ್ಮೊಮ್ಮೆ ಪಂಪನೂ ಕಣ್ಣೆತ್ತಿ ನೋಡಿ ತಲೆದೂಗುವಂತೆ ಮಹೋನ್ನತವಾಗುತ್ತದೆ. ಆದರೆ ಶಾಂತಿ ಸೌಮ್ಯತೆ ಸೌಂದರ್ಯ ಇತ್ಯಾದಿ ದೈವೀಲಕ್ಷಣದ ಸತ್ವಗುಣ ಪ್ರಚಾರವಾದ

ಕಾವ್ಯಾಂಗಗಳ ನಿರ್ವಹಣೆಯಲ್ಲಿ ರನ್ನ ಪಂಪನಿಗೆ ಯಾವಾಗಲೂ ಕಿರಿಯ ಮಾತ್ರವಲ್ಲ ಈ ಅಂಶದಲ್ಲಿ ಅವನನ್ನು ಪಂಪನಿಗೆ ಹೋಲಿಸುವುದೂ ಸಲ್ಲದ ಗೌರವವಾದೀತು" ಎಂದು ಕುವೆಂಪು ಅವರು ಹೇಳುತ್ತಾರೆ. (ತಪೋನಂದನ–ಪು. 89)

ರನ್ನನ ಕಾವ್ಯಕ್ಕೆ ಮೆರಗು ನೀಡಿರುವುದು ಅದರ ನಾಟಕೀಯ ಶೈಲಿ ಕಥೆಯನ್ನು ದೃಶ್ಯಗಳಾಗಿ ಮಾಡುವುದು, ಇಡೀ ಪದ್ಯಗಳನ್ನು ಪಾತ್ರಗಳ ಸಂಭಾಷಣೆಯಾಗಿ ಮಾರ್ಪಡಿಸುತ್ತಾನೆ. ರನ್ನ "ಆಡು ಮಾತಿನಲ್ಲಿ ಮಾಡುವ ಕಾಕಾ ದನಿ, ಭಂಗಿಗಳು ಪದ್ಯದ ಲಯವನ್ನು ರೂಪಿಸುತ್ತ ಎಷ್ಟು ಸಹಜವಾಗಿ ಮೂಡಿಬಿಡುತ್ತವೆಂದರೆ ಪಾತ್ರಗಳ ದುಃಖ ಉದ್ವೇಗ, ರೋಷ, ಆವೇಶ, ಕೊಂಕು, ಬಿಸಿಬಿಸಿಯಾಗಿ ಕಿವಿಗೆ ಬಡಿಯುತ್ತದೆ" ಎಂದು ಎನ್. ಎಸ್. ಲಕ್ಷ್ಮೀನಾರಾಯಣ ಭಟ್ಟ ಅವರು ಹೇಳುವುದು ನಿಜ. (ರನ್ನ – ಕವಿ ಕಾವ್ಯ ವಿಮರ್ಶೆ ಪು. 57) "ಭೀಮ ದುರ್ಯೋಧನರ ಯುದ್ಧ ವರ್ಣನೆಯ ಸಂದರ್ಭದಲ್ಲಿ ಅವರು ಪರಸ್ಪರ ಮೂದಲಿಸುವ ಪ್ರಸಂಗದಲ್ಲಿ ಪರುಷ ವರ್ಣಗಳು, ಸಂಸ್ಕೃತದ ಪೆಡಸು ಪದಗಳು, ಸಮಾಸಗಳು ಧಾರಾಳವಾಗಿ ನುಗ್ಗುತ್ತದೆ." ಎಂದು ಅವರು ಗುರುತಿಸುತ್ತಾರೆ. (ರನ್ನ–ಕವಿ ಕಾವ್ಯವಿಮರ್ಶೆ, ಪು. 59), ಗದಾಯುದ್ಧದ ನಾಟಕೀಯತೆಗೆ ಸಿಂಹಾವಲೋಕನ ತಂತ್ರವು ಅನುವಾಗಿ ಬಂದಿದೆ. ಇಲ್ಲಿ ಸಂಜಯನ ಪಾತ್ರವೂ ಮುಖ್ಯವಾದುದು, ಅವನಿಲ್ಲದೆ "ಗದಾಯುದ್ಧ" ವನ್ನು ಕಲ್ಪಿಸಿಕೊಳ್ಳುವುದೂ ಸಾಧ್ಯವಿಲ್ಲ ಎಂಬಷ್ಟು ಅವನ ಪಾತ್ರದ ಅನಿವಾರ್ಯತೆ ಇದೆ ಎಂದು ನಾನು ಭಾವಿಸುತ್ತೇನೆ. ದುರ್ಯೋಧನನು ಭೀಷ್ಮರನ್ನು ಭೇಟಿಯಾಗಿ, ಅವರ ಸಲಹೆಯಂತೆ ವೈಶಂಪಾಯನ ಸರೋವರದಲ್ಲಿ ಅಡಗಿ ಕುಳಿತುಕೊಳ್ಳಲು ಒಪ್ಪಿಕೊಳ್ಳುತ್ತಾನೆ. ಗದಾಯುದ್ಧದಲ್ಲಿ ಕೌರವನ ಕಡೆಯವನಾಗಿ ಕಾವ್ಯದಲ್ಲಿ ಪ್ರತ್ಯಕ್ಷವಾಗಿ ಕಾಣಿಸಿಕೊಳ್ಳುವ ಪಾತ್ರವೆಂದರೆ ಸಂಜಯನದು. ದುರ್ಯೋಧನನೊಡನೆ ಇದ್ದು ಭೀಷ್ಮರ ಭೇಟಿಯವರೆಗೂ ಜೊತೆಗೂಡುತ್ತಾನೆ. ಸಿಂಹಾವಲೋಕನಕ್ಕೆ ಚಾಲನೆ ಕೊಟ್ಟು ದುರ್ಯೋಧನನ್ನು ಸಮಾಧಾನಪಡಿಸುವ, ತಂದೆ–ತಾಯಿಯರನ್ನು ಭೇಟಿಯಾಗಲು ಸಲಹೆ ಕೊಟ್ಟು ಅವನನ್ನು ಸಮಾಧಾನಪಡಿಸುವ, ರಣಕ್ಷೇತ್ರದಲ್ಲಿ ನಡೆದು ಹೋಗುವಾಗ–ಆತ್ಮೀಯರ ಶವಗಳನ್ನು ನೋಡಿ ಅವನು ದುಃಖ ಪಟ್ಟಾಗ, ಕೆಲವು ಸಲ ಪಾಂಡವರ

ಭೀಷ್ಮ, ದ್ರೋಣ, ಅಶ್ವತ್ಥಾಮರ ಪರವಾಗಿಯೂ ಮಾತನಾಡುವ ಸಂಜಯನು ಗದಾಯುದ್ಧ ಕಾವ್ಯವು ಲವಲವಿಕೆಯಿಂದಲೂ, ಸಂಭಾಷಣಾಯುಕ್ತವಾದ ನಾಟಕೀಯತೆಯಿಂದಲೂ ಕೂಡಿರಲು ಕಾರಣನಾಗಿದ್ದಾನೆ.

ದುರ್ಯೋಧನನ ಕೋಪ, ದುಃಖ ಹೊರಹೊಮ್ಮಲು, ದುಶ್ಶಾಸನನ ಸಹೋದರ ಪ್ರೇಮ, ಕರ್ಣನ ಸ್ನೇಹಮಯ ವೃತ್ತಾಂತ ಇತ್ಯಾದಿಗಳು ಸಂಜಯನೊಂದಿಗಿನ ಸಂಭಾಷಣೆಯಿಂದ ಕಾವ್ಯಕ್ಕೆ ನಾಟಕೀಯತೆಯನ್ನು ತಂದುಕೊಟ್ಟಿದೆ. ಸಾಧಾರಣವಾಗಿ ಕವಿಗಳು ಕಾವ್ಯರಚನೆ ಮಾಡುವ ಸಂದರ್ಭದಲ್ಲಿ ತನ್ನ ಹಿಂದಿನ ಕವಿಗಳ ಕಾವ್ಯಗಳಿಂದ ಪ್ರೇರಿತರಾಗಿರುತ್ತಾರೆ. ಕಾವ್ಯ ಮೀಮಾಂಸಕರೂ ಸಹ ಈ ವಿಷಯವನ್ನು ಪ್ರಸ್ತಾಪಿಸಿದ್ದಾರೆ, ತಮ್ಮ ಹಿಂದಿನ ಕವಿಗಳ ಕಾವ್ಯಗಳನ್ನೇ ಅಲ್ಲದೆ ಅನೇಕ ಶಾಸ್ತ್ರಾಧ್ಯಯನಗಳೂ ಪುರಾಣೇತಿಹಾಸಗಳೂ ಕವಿಗೆ ತಿಳಿದಿರಬೇಕು ಎಂಬುದನ್ನು ಹೇಳಿದ್ದಾರೆ. ಹೀಗೆ ಹಲವಾರು ಬಗೆಯ ಅಧ್ಯಯನಗಳಿಂದ ಉಂಟಾದ ಪ್ರಭಾವಗಳನ್ನು ಹೀಗೆ ಸ್ಥೂಲವಾಗಿ ಗುರುತಿಸಬಹುದು.

ಕವಿಲೋಕದಲ್ಲಿ ಪ್ರಭಾವ ವೈವಿಧ್ಯ :

1. ಸೂಕ್ಷ್ಮ ಪ್ರಭಾವ : ಬೇರೊಬ್ಬರಿಂದ ಪಡೆದುದನ್ನು ಆತ್ಮಸಾತ್ ಮಾಡಿಕೊಳ್ಳುವುದು. ತನ್ನದೇ ಎನ್ನುವಷ್ಟು ಆತ್ಮೀಯವಾಗುವುದು. ಇದು ಸೂಕ್ಷ್ಮ ಹಾಗೂ ದಟ್ಟ ಸ್ವರೂಪದಲ್ಲಿರುವುದು.

2. ದಟ್ಟ ಪ್ರಭಾವ : ಹಿಂದೆ ಓದಿದ್ದೆಲ್ಲ ವೈವಿಧ್ಯಮಯವಾಗಿದ್ದು ಅದು ಸಂಶ್ಲೇಷಣೆಗೊಂಡು ಸೇರಿಕೊಂಡು ಬಿಡುತ್ತವೆ. ಉತ್ತಮ ಸಾಹಿತ್ಯವು ನಿರ್ಮಾಣವಾಗುವುದು ಹೀಗೆಯೇ. ಹಿಂದಿನದಕ್ಕಿಂತ ಉತ್ತಮವಾದುದು ಸಿದ್ಧವಾಗುತ್ತದೆ. Relay Race ರೀತಿಯಲ್ಲಿ ಪ್ರಭಾವ ಎಂಬುದು ಇದೇ. ಸಂಶ್ಲೇಷಣೆಗೊಳ್ಳದೆ ಹಸಿಹಸಿಯಾಗಿ ಮಾಡಿದರೆ ಅದು ಕಾಪಿ ಎನಿಸಿಕೊಳ್ಳುತ್ತದೆ.

3. ಅನುಕರಣ : ಮೂಲವನ್ನು ಕಣ್ಣುಮುಚ್ಚಿ ಸ್ವೀಕರಿಸಿ ಕೃತಿರಚನೆಯನ್ನು ಮಾಡುವುದು, ಬದಲಾವಣೆ ಇದ್ದರೂ ಗಮನಾರ್ಹವಲ್ಲ. "ಕೃತಿಯಲ್ಲಿ ಸತ್ವವೇ ಇಲ್ಲದೆ ಬರಿಯ ಬಾಹ್ಯರೂಪ ಮಾತ್ರ ಆಗಿದ್ದಲ್ಲಿ ಅದು ಅನುಕರಣ ಮಾತ್ರ ಆಗುತ್ತದೆ."

4. ಅನುವಾದ : ಒಂದು ಭಾಷೆಯ ಕೃತಿಯನ್ನು ಇನ್ನೊಂದು ಭಾಷೆಗೆ ತರುವಾಗ ಸ್ಥಳ, ಕಾಲ, ಭಾಷೆಗಳಿಗೆ ಬೇಕಾದ ಅವಶ್ಯಕ ಬದಲಾವಣೆಗಳನ್ನು ಮಾಡಿ ಹೊಸದೇನನ್ನೂ ಸೇರಿಸದೆ, ಇದ್ದುದರಲ್ಲಿ ಯಾವುದನ್ನೂ ಕಳೆಯದೆ ಒಂದು ಭಾಷೆಯಿಂದ ಇನ್ನೊಂದು ಭಾಷೆಯ ಪರಿಸರಕ್ಕೆ ಹೊಂದಿಸುವುದು ಅನುವಾದ ಇಲ್ಲಿ ಸ್ವಂತಿಕೆಗಿಂತ ಪರಿಶ್ರಮವೇ ಹೆಚ್ಚು.

5. ರೂಪಾಂತರ : ಒಂದು ಮೂಲಕೃತಿಯನ್ನು ಇನ್ನೊಂದು ಭಾಷೆಗೆ ತರುವಾಗ ಸ್ಥಳ, ಕಾಲ ಭಾಷೆಗಳನಷ್ಟೇ ಬದಲಾಯಿಸದೆ "ಸಂದರ್ಭಗಳನ್ನು ಬದಲಾಯಿಸಿ ಮೂಲದಲ್ಲಿ ಕೆಲವನ್ನು ತೆಗೆದು, ಹೊಸದು ಕೆಲವನ್ನು ಸೇರಿಸಿ ಒಟ್ಟು ರೂಪಾಂತರಿಸುವುದು, ಕಾವ್ಯವನ್ನು ನಾಟಕವಾಗಿ, ಗದ್ಯದಲ್ಲಿ ನಿರೂಪಿಸುವುದು, ನಾಟಕವನ್ನು ಕಥೆಯಾಗಿ, ಕಾದಂಬರಿಯನ್ನು ನಾಟಕವಾಗಿ, ಹಿರಿದಾದ ಕಾದಂಬರಿಗಳನ್ನು ಸ್ವಾರಸ್ಯ ಕೆಡದಂತೆ ಸಂಕ್ಷೇಪಿಸುವುದು ಇತ್ಯಾದಿ ನಾನಾ ರೀತಿಗಳಲ್ಲಿ ರೂಪಾಂತರಿಸಬಹುದು. ಹೀಗೆ ರೂಪಾಂತರಿಸುವುದರಲ್ಲಿ ಸ್ವಂತಿಕೆ ಇರುವುದಿಲ್ಲ, ಆದರೆ ಪರಿಶ್ರಮ ಅಗತ್ಯ, ಆದರೆ ಮೂಲದ ಸ್ವಾರಸ್ಯ ಕೆಡದಂತೆ ನಿರೂಪಿಸಲು ಬುದ್ಧಿವಂತಿಕೆ ಹಾಗೂ ಸಹೃದಯತೆ ಬೇಕಾಗುತ್ತದೆ.

6. ಸ್ವೀಕರಣ : ಒಬ್ಬ ಕವಿಯು ತಾನು ಕೃತಿರಚನೆಯನ್ನು ಮಾಡುವಾಗ ತನ್ನ ಹಿಂದಿನ ಕವಿ ಕೃತಿಗಳಲ್ಲಿ ಕಥಾವಸ್ತು, ವರ್ಣನೆ, ಪಾತ್ರ ಶೈಲಿಗಳಲ್ಲಿನ ಸಾಧನೆಗಳನ್ನು ಗುರುತಿಸಿ ಮೆಚ್ಚಿ "ಔಚಿತ್ಯ"ವರಿತು ತೆಗೆದುಕೊಳ್ಳುವುದೇ ಸ್ವೀಕರಣ.

7. ಕೃತಿಚೌರ್ಯ : ಇನ್ನೊಂದು ಭಾಷೆಯ ಕೃತಿಯನ್ನು ತಟ್ಟನೆ ಗುರುತು ಸಿಗದಂತೆ ಬದಲಾಯಿಸಿ ಅಲ್ಲಿ ಇಲ್ಲಿ ಕೆಲವನ್ನು ಸೇರಿಸಿ, ಮೂಲಕೃತಿಯ ಹೆಸರುನ್ನು ಹೇಳದೆ, ತನ್ನದೇ ಸ್ವತಂತ್ರ ಕೃತಿಯೆಂದು ತನ್ನ ಭಾಷೆಗೆ ತರುವುದು, ಇದೂ ರೂಪಾಂತರವೇ ಆದರೂ ಮೂಲವನ್ನು ಹೆಸರಿಸದಿರುವ ಕಾರಣದಿಂದ ಅಂತಹ ಕೃತಿಯನ್ನು "ಕೃತಿ ಚೌರ್ಯ" ಎಂದು ಹೇಳಬೇಕಾಗುತ್ತದೆ. ಪುರಾಣ ಪುಣ್ಯಕಥೆಗಳು, ನೀತಿ ಕಥೆಗಳು, ಮಹಾಕಾವ್ಯಗಳು, ಜಾನಪದ ಕಥೆಗಳು ಹಾಗೂ ಇತಿಹಾಸ ಇವು

ಯಾವೊಬ್ಬ ವ್ಯಕ್ತಿಯ ಸೊತ್ತಾಗದೆ ಇಡೀ ಸಮಾಜದ ಜನಾಂಗದ ಸೊತ್ತಾಗಿರುತ್ತದೆ. ಆದ್ದರಿಂದ ಇವುಗಳನ್ನಾದರಿಸಿ ಮಾಡಿದ ಕೃತಿ ರಚನೆಗಳು ಮೂಲವನ್ನು ಹೇಳಿಕೊಂಡಿಲ್ಲ ಎಂಬ ಕಾರಣಕ್ಕೆ ಕೃತಿಚೌರ್ಯ ಎಂದು ಪರಿಗಣಿಸಲಾಗುವುದಿಲ್ಲ.

ಮರುಜೋಡಣೆ : ಮೇಲಿನ ವಿವರಗಳಲ್ಲಿ, ತನ್ನ ಕಾವ್ಯಕ್ಕೆ ಅನ್ಯ ಕವಿಗಳಿಂದ ಸ್ವೀಕರಿಸುವ ಹಲವು ರೀತಿಗಳನ್ನು ಗಮನಿಸಲಾಗಿದೆ. ಆದರೆ ಇವುಗಳಿಗಿಂತ ಬೇರೆಯಾದ ಅಥವಾ ಅಷ್ಟನ್ನೂ ಒಳಗೊಂಡ ಮತ್ತೊಂದು ವಿಭಾಗವನ್ನು ಗುರುತಿಸಬಹುದು. ಅದೇ ಮರುಜೋಡಣೆ ಇಂತಹ ಮರುಜೋಡಣೆಯನ್ನು "ಗದಾಯುದ್ಧ"ದಲ್ಲಿ ಕಾಣಬಹುದು." ಒಬ್ಬ ಕವಿಯು ಬೇರೆ ಕವಿಯಿಂದ ಪ್ರಭಾವಿತನಾಗಿ, ಪಡೆಯುವಾಗ ಒಂದು ಕ್ರಮಬದ್ಧತೆ ಇಲ್ಲದಿರುವುದು, ಮೂಲದಲ್ಲಿದ್ದುದನ್ನು ಎಲ್ಲಿಯದೋ ಇನ್ನೆಲ್ಲಿಯದಕ್ಕೋ ಜೋಡಿಸುವುದು. ಇಂತಹ ಸಂದರ್ಭದಲ್ಲಿ ಔಚಿತ್ಯವು ಇಲ್ಲದೆ ಇರಬಹುವುದು ಅಥವಾ ಔಚಿತ್ಯ ಪೂರ್ಣವಾಗಿಯೂ ಇರಬಹುದು. ಆದರೆ ಇದು ಪ್ರಭಾವದ ಪರಿಣಾಮದಿಂದ ಉಂಟಾದುದಲ್ಲ, ಪ್ರಜ್ಞಾಪೂರ್ವಕವಾಗಿ ಮಾಡುವ ತಂತ್ರ. ರನ್ನನ "ಗದಾಯುದ್ಧ"ದಲ್ಲಿ "ಪಂಪಭಾರತ"ದ ಅನೇಕಾಂಶಗಳು ಮರುಜೋಡಣೆಗೊಂಡಿರುವುದು ಪ್ರಜ್ಞಾಪೂರ್ವಕವಾಗಿ ಒಂದು ತಂತ್ರವಾಗಿ ಬಂದಿದೆ. "(ಈ 'ಪ್ರಭಾವ ವೈವಿಧ್ಯ' ವಿವರಗಳಿಗೆ ಈ ಸಂಶೋಧಕಿಯ 'ರನ್ನನ ಮೇಲೆ ಪಂಪನ ಪ್ರಭಾವ' ಗ್ರಂಥದ" ಕವಿಲೋಕದಲ್ಲಿ ಪ್ರಭಾವ ವೈವಿಧ್ಯತೆ ಅಧ್ಯಾಯವನ್ನು ನೋಡಿ)"

ಸ್ಥಾನ ಪಲ್ಲಟ : "ಗದಾಯುದ್ಧ"ದಲ್ಲಿ ಎಲ್ಲ ವೀರರೂ ಮಡಿದು ದುರ್ಯೋಧನನೊಬ್ಬನೇ ಉಳಿದಿರುವಾಗ ಸಹಜವಾಗಿಯೇ ಎಲ್ಲ ಕ್ರಿಯೆಗಳೂ ಅನಂತರವೇ ಬರಬೇಕು. ರನ್ನನ ಕಾವ್ಯವಾದ "ಗದಾಯುದ್ಧ"ವನ್ನು ವಿಮರ್ಶೆ ಮಾಡಿದವರೆಲ್ಲರೂ "ಪಂಪನಿಂದ ರನ್ನನು ಸ್ವೀಕರಿಸಿದ್ದಾನೆ" ಎಂಬುದನ್ನು ಗುರುತಿಸಿದ್ದಾರೆ. "ವಸ್ತುವಿನ ರಚನೆಯಲ್ಲಿ ಭೀಮನಿಗೆ ಪ್ರಾಧಾನ್ಯವನ್ನು ಕೊಟ್ಟು ಆರಂಭ ಮುಕ್ತಾಯಗಳಲ್ಲಿ ಅವನ ಪ್ರತಿಜ್ಞಾ ಘೋಷಣೆ ಮತ್ತು ಅದರ ಪೂರ್ತಿಗಳಿಂದ ಕೂಡಿದ ಕಥೈಕ್ಯವನ್ನು ತೋರಿದ್ದು ಗದಾಯುದ್ಧದ ವೈಶಿಷ್ಟ್ಯ" ಎಂಬ ರಂ. ಶ್ರೀ. ಮುಗಳಿಯವರ

ಮಾತು ನಿಜ. ಆದರೂ ಭೀಮನ ಪ್ರತಿಜ್ಞೆ ಮತ್ತು ಅದನ್ನು ನೆರವೇರಿಸುವ ಬಗೆಗಿನ ಆರ್ಭಟ ಈ ಅಂಶಗಳಿಗೆ ಮಾತ್ರ ಹೆಚ್ಚಿನ ಗಮನ ಕಂಡುಬರುತ್ತದೆ. ಪಂಪನಿಂದ ರನ್ನನು ಸ್ವೀಕರಿಸಿದ್ದಾನೆ ಎಂದಾಗ ಕೆಲವು ಅಂಶಗಳು ನಮ್ಮ ಗಮನಕ್ಕೆ ಬರುತ್ತದೆ. ಪಂಪನು ವ್ಯಾಸ ಭಾರತದ ಎಷ್ಟೋ ವಿಷಯಗಳನ್ನು ಬದಲಾಯಿಸಿಕೊಂಡು ತನ್ನ ಕೃತಿರಚನೆ ಮಾಡಿದ್ದಾನೆ, ತನ್ನ ಕಾವ್ಯ ನಾಯಕನಾದ ಅರ್ಜುನನಿಗೇ ಪ್ರಾಮುಖ್ಯತೆ ಕೊಟ್ಟಿದ್ದಾನೆ, ಎಷ್ಟೇ ಮುಖ್ಯವಾಗಿದ್ದರೂ ಅರ್ಜುನನ ಹೊರತಾದ ಪ್ರಸಂಗಗಳನ್ನು ಕಡೆಗಣಿಸಿ, ಕೆಲವೊಮ್ಮೆ ತುಂಬ ಸಂಕ್ಷೇಪಿಸಿ ತಿಳಿಸಿದ್ದಾನೆ, ಅವುಗಳಲ್ಲಿ ಹೆಚ್ಚಿನ ಭಾಗವನ್ನು ರನ್ನನು ಹಾಗೆಯೇ ತನ್ನ ಕೃತಿಯುಲ್ಲಿ ಅಳವಡಿಸಿಕೊಂಡಿದ್ದಾನೆ. ಇದಕ್ಕೆ "ಗದಾಯುದ್ಧ"ದಲ್ಲಿ ಉದ್ದಕ್ಕೂ ಉದಾಹರಣೆಗಳಿದ್ದು, ಅಪವಾದಗಳು ಬಹಳ ಅಲ್ಪ ಪ್ರಮಾಣದಲ್ಲಿವೆ. ಉದಾ: ದುರ್ಯೋಧನನಿಗೆ ಕರ್ಣನ ಜನ್ಮರಹಸ್ಯ ತಿಳಿದಿದ್ದುದು, "ಪಾರ್ವರ ಪಿಳ್ಳೆಯ ಪೋದ ಜೀವ"ವನ್ನು ಅರ್ಜುನನು ವಾಪಸ್ಸು ತರುವುದು, ಅಭಿಮನ್ಯುವಿನ ಶವವನ್ನು ನೋಡಿದಾಗ ದುರ್ಯೋಧನನು ಗೌರವ ತೋರುವ ಪ್ರಸಂಗ ಇತ್ಯಾದಿ ಪ್ರಸಂಗಗಳನ್ನು ಗದಾಯುದ್ಧದಲ್ಲಿ ನೋಡಬಹುದು.

ರನ್ನಕವಿಯು ತಾನು ಕಂಡುಂಡ ಅನುಭವಗಳನ್ನು ಕಣ್ಣಿಗೆ ಕಟ್ಟುವಂತೆ ಚಿತ್ರಿಸಿದ್ದಾನೆ, ಸತ್ಯಾಶ್ರಯನ ಪಾತ್ರಚಿತ್ರಣದಲ್ಲಿ ಅವನ ಶೌರ್ಯ, ಮಾಡಿದ ಯುದ್ಧಗಳು, ತಮ್ಮನ ಮೇಲಿನ ಪ್ರೀತಿ ವಿಶ್ವಾಸಗಳು, ಅವನ ಸಾವಿನ ಮೇಲಿನ ಸೇಡನ್ನು ತೀರಿಸಿಕೊಳ್ಳಲು ಸ್ನಾನವನ್ನು ಮಾಡದೆ ಶತ್ರುಗಳನ್ನು ಅಟ್ಟಿಸಿಕೊಂಡು ಹೋಗಿ ಸೇಡನ್ನು ತೀರಿಸಿಕೊಂಡ ಅವನ ಮನೋದಾರ್ಢ್ಯ, ಇವುಗಳನ್ನು ರನ್ನನು ಸುಂದರವಾಗಿ ಚಿತ್ರಿಸಿದ್ದಾನೆ. ಅಜಿತ ಪುರಾಣದಲ್ಲಂತೂ ಅತ್ತಿಮಬ್ಬೆಯ ಚಿತ್ರಣವು ಚಿರನೂತನವಾದುದು, ಆಕೆಯ ಸಂಸಾರ, ಪರಿವಾರದವರು, ಆಕೆಯ ವ್ಯಕ್ತಿತ್ವ ರನ್ನನ ಜೀವನದ ಅವಿಭಾಜ್ಯ ಅಂಗವಾಗಿದ್ದು ಪ್ರತ್ಯಕ್ಷ ಕಂಡದ್ದನ್ನು ನಿರಲಂಕೃತ ಭಾಷೆಯಲ್ಲಿ ಮನ ಮುಟ್ಟುವಂತೆ ಚಿತ್ರಿಸಿದ್ದಾನೆ. ರನ್ನನ "ದೃಶ್ಯ ನಿರ್ಮಾಣ ಶಕ್ತಿ"ಯು ಕಾವ್ಯದುದ್ದಕ್ಕೂ ಹರಡಿಕೊಂಡಿದೆ. ಕಾವ್ಯಭಾಷೆಯು ಆಡುಭಾಷೆಗೆ ಸಮೀಪವಾಗಿದ್ದು, ಸಣ್ಣ ಸಣ್ಣ ವಾಕ್ಯಗಳಿದ್ದು ಸಂಭಾಷಣಾ ಪ್ರಧಾನ

ಶೈಲಿಗೆ ಅತ್ಯಂತ ಅನುಕೂಲವಾಗಿದೆ. ಗದಾಯುದ್ಧ ಕಾವ್ಯವನ್ನು ಓದಿದಾಗ ರಸಾನುಭವ ಉಂಟಾಗುತ್ತದೆ. ಕೇವಲ ನಾಲ್ಕಾರು ಪಾತ್ರಗಳುಳ್ಳ ಈ ಕಾವ್ಯದಲ್ಲಿ ಸಿಂಹಾವಲೋಕನ ಕ್ರಮದಿಂದಾಗಿ ಕಾವ್ಯವು ಮೈದುಂಬುತ್ತದೆ. ಗದಾಯುದ್ಧವು ಒಂದುವೇಳೆ ನಾಟಕದ ರೂಪದಲ್ಲಿಯೇ ರಚಿತವಾಗಿದ್ದರೆ ಮೊಟ್ಟಮೊದಲನೆಯ ಅತ್ಯುತ್ತಮವಾದ ನಾಟಕವು ಕನ್ನಡ ಸಾಹಿತ್ಯಕ್ಕೆ ದೊರಕುತ್ತಿತ್ತು. ಪಂಪನ ಭಟ್ಟನಾರಾಯಣ ಇತ್ಯಾದಿ ಪ್ರಭಾವಗಳು ಯಾವುದೂ ಗಣನೆಗೆ ಬರದೆ ನಮ್ಮ ಕನ್ನಡ ಸಾಹಿತ್ಯವು ಇನ್ನೂ ಹೆಚ್ಚು ಶ್ರೀಮಂತವಾಗುತಿದ್ದಿತ್ತು. ಆದರೂ "ಗದಾಯುದ್ಧ" ಕಾವ್ಯದಲ್ಲಿ ನಾಟಕವನ್ನು ಹುದುಗಿಸಿಟ್ಟ ರನ್ನ ಕವಿಯು ಕನ್ನಡ ಸಾಹಿತ್ಯ ಪ್ರಪಂಚದಲ್ಲಿ ತನ್ನದೇ ಆದ ವಿಶಿಷ್ಟ ಸ್ಥಾನವೊಂದನ್ನು ಗಳಿಸಿಕೊಂಡಿದ್ದಾನೆ.

ಗ್ರಂಥ ಋಣ :

1 ಅ. ರನ್ನನ ಕೃತಿರತ್ನ ರಂ.ಶ್ರೀ. ಮುಗಳಿ – ಪು. 5

ಆ. ರನ್ನಕವಿ ಪ್ರಶಸ್ತಿ "ಗದಾಯುದ್ಧವೂ ಸ್ವೀಕರಣವಿಚಾರವೂ" ಪು.80

ಇ. ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ (ಬೆಂ.ವಿ.ವಿ.) ಪು. 157

ಈ. ಸಾಹಸಭೀಮ ವಿಜಯಂ–ಸಂ.ಬಿ.ಎಸ್. ಸಣ್ಣಯ್ಯ ರಾಮೇಗೌಡ

ಉ. ಕನ್ನಡ ಸಾಹಿತ್ಯ ಚರಿತ್ರೆ ಸಂ.7 (ಮೈ.ವಿ.ವಿ.) ಪು. 620

2. ರನ್ನನ ಕೃತಿರತ್ನ – ರಂ.ಶ್ರೀ. ಮುಗಳಿ – ಪು. 6

ರನ್ನನ ಮೇಲೆ ಪಂಪನ ಪ್ರಭಾವ – ಡಾ. ನಳಿನಿ ವೆಂಕಟೇಶ್

****

ರನ್ನನ "ಗದಾಯುದ್ಧ"

ಶ್ರೀ ರವಿ ಶಂಕರ,
ನಾರ್ತ್ ಕೆರೋಲಿನ, ಯು.ಎಸ್.ಎ

ಸಹಸ್ರಾರು ವರ್ಷಗಳು ನಿರಂತರವಾಗಿ ಹರಿದು ಬಂದ ಭಾರತೀಯ ಕಾವ್ಯಲಕ್ಷಣದ ಚಿಂತನೆಯ ಪರಂಪರೆಯಲ್ಲಿ ಗುಣ, ರೀತಿ, ಔಚಿತ್ಯ, ಅಲಂಕಾರ, ಧ್ವನಿ, ರಸ ಮುಂತಾದ ತತ್ತ್ವಗಳ ಒರೆಗಲ್ಲಿಗೆ ಲೋಕಭಾಷೆಯ ಕಾವ್ಯಗಳು ವಿಷಯವಾಗಿವೆ. ಒಂಬತ್ತನೆಯ ಶತಮಾನದಂಚಿನಲ್ಲಿ ಕಾಶ್ಮೀರದಲ್ಲಿ ಚಿಗುರಿದ ಆನಂದವರ್ಧನನ "ಧ್ವನಿ ಸಿದ್ಧಾಂತ" ಹಲವಾರು ದಶಕಗಳ ಪರೀಕ್ಷೆಯನ್ನು ಸಫಲವಾಗಿ ದಾಟಿ ಹತ್ತನೆಯ ಶತಮಾನದಲ್ಲಿ ಶಾಸ್ತ್ರದ ಪ್ರಬುದ್ಧತೆಯನ್ನೂ ಶಾಸ್ತ್ರಪ್ರಪಂಚದ ಪ್ರಭುತ್ವವನ್ನೂ ಗಳಿಸಿತು. ಆಚಾರ್ಯ ಅಭಿನವಗುಪ್ತರು ಉತ್ತರದ ಕಾಶ್ಮೀರದಲ್ಲಿ ಧ್ವನಿಸಿದ್ಧಾಂತದ ವಿಜಯಪತಾಕೆಯನ್ನು ಹಾರಿಸುತ್ತಿರುವ ಸಮಕಾಲದಲ್ಲಿ ದಕ್ಷಿಣದ ಕನ್ನಡದ ನೆಲದಲ್ಲಿ ರನ್ನ-ಪೊನ್ನರೆಂಬ ರತ್ನಗಳು ಉದಯಿಸಿದರೆಂಬುದು ಕಾಕತಾಳೀಯವಲ್ಲ. ರನ್ನನ "ಸಾಹಸ ಭೀಮ ವಿಜಯ" (ಅಥವಾ ಗದಾಯುದ್ಧ) ಎಂಬ ಸಾಹಿತ್ಯರತ್ನವು ಕಾವ್ಯಶಾಸ್ತ್ರದ ಶಿಖರಪ್ರಾಯವೆನಿಸುವ ಅಭಿನವಗುಪ್ತರ ಧ್ವನ್ಯಾಲೋಕದ ವ್ಯಾಖ್ಯಾನವಾದ ಧ್ವನ್ಯಾಲೋಕಲೋಚನ ಹಾಗೂ ನಾಟ್ಯಶಾಸ್ತ್ರದ ವ್ಯಾಖ್ಯಾನವಾದ ಅಭಿನವಭಾರತೀ ಎಂಬ

ಶಾಸ್ತ್ರರತ್ನಗಳನ್ನು ರಚಿಸಿದ ಕಾಲಕ್ಕೆ ಅತಿ ಸಮೀಪವಾದದ್ದು ಎನ್ನುವ ವಿಶೇಷವು ಗಮನಿಸಲೇ ಬೇಕಾದದ್ದು.

ಧ್ವನಿರಸಾಲಂಕಾರಾದಿ ವಿಷಯಗಳಲ್ಲಿ ನಡೆದ ವಿಪುಲ ಚರ್ಚೆಯ ಹಿನ್ನೆಲೆಯಲ್ಲಿ ರನ್ನನು ತನ್ನ "ಗದಾಯುದ್ಧ" ಕಾವ್ಯನಿರ್ಮಿತಿಗೆ ಒಂದು ಭದ್ರವಾದ ಶಾಸ್ತ್ರೀಯ ತಳಪಾಯವನ್ನೂ ರೂಪಿಸಿಕೊಂಡಿದ್ದಾನೆ ಎಂದು ಊಹಿಸಬಹುದು: ಇದರ ಅರಿವು ಮತ್ತು ಅದಕ್ಕೆ ಅರ್ಹವಾದ ಅಭಿಮಾನವನ್ನು ರನ್ನನೇ ಪ್ರಕಟಿಸಿದ್ದಾನೆ. ವಾಕ್ಸುಂದರಿಯಾದ ಸರಸ್ವತಿಯನ್ನು ತನ್ನ ಮುಖಾಂಬುಜದಲ್ಲಿ ಆಹ್ವಾನಿಸುತ್ತಾ ಹೇಳುತ್ತಾನೆ – 'ಪದಿನಾರಲ್ಲವ್ ಅಲಂಕ್ರಿಯಾರಚನೆ ಮೂವತ್ತಾರು, ಶೃಂಗಾರಂ ಅದಲ್ಲವೊಂದೆ ರಸಮ್ ಒಂಬತ್ತು'. ಅಂಗನೆಯರಿಗೆ ಸ್ನಾನಾದಿ ಹದಿನಾರು ಅಲಂಕಾರಗಳಾದರೆ ಕಾವ್ಯಾಂಗನೆಗೆ ಮೂವತ್ತಾರು ಅಲಂಕಾರಗಳು, ಕೇವಲ ಶೃಂಗಾರವೊಂದೇ ಅಲ್ಲ, ನವರಸಗಳು. ಇಲ್ಲಿ ಭರತನ ನಾಟ್ಯಶಾಸ್ತ್ರದಲ್ಲಿ ಉಲ್ಲೇಖವಾಗಿರುವ ಮೂವತ್ತಾರು ಲಕ್ಷಣಗಳನ್ನು ಕವಿ ಸ್ಮರಿಸುತ್ತಾನೆಂದು ಹಲವು ವಿಮರ್ಶಕರ ಮತ.

ಹೀಗಾಗಿ ಭಾರತೀಯ ಕಾವ್ಯಶಾಸ್ತ್ರದ ಹಾದಿಯಲ್ಲಿ ಗದಾಯುದ್ಧವನ್ನು ಅವಲೋಕಿಸುವ ಒಂದು ಪ್ರಯತ್ನವಿದು. ಈ ದಿಶೆಯಲ್ಲಿ ಬಿಎಂಶ್ರೀ ಆದಿಯಾಗಿ ಸಾಹಿತ್ಯಲೋಕದ ಅನೇಕ ದಿಗ್ಗಜರು ಮೀರಲಸಾಧ್ಯವಾದ ಉತ್ತಮ ಕಾರ್ಯಗಳನ್ನು ಈಗಾಗಲೇ ಮಾಡಿರುವುದರಿಂದ ಇದನ್ನು ಒಂದುಮಟ್ಟಿಗೆ ಹಂಚಿ ಹರಡಿಹೋಗಿರುವ ವಿಚಾರಗಳ ಸಂಗ್ರಹಲೇಖನವೆಂದು ಪರಿಗಣಿಸುವುದು ಉತ್ತಮ. ಆದರೆ ಈ ವಿಚಾರಗಳೆಲ್ಲ ನನ್ನ ಅಭಿಪ್ರಾಯದ ಮೂಸೆಯಿಂದ ಹೊರಹೊಮ್ಮಿರುವುದರಿಂದ ಇಲ್ಲಿ ಅಂಟಿರುವ ಕಲ್ಮಷಗಳೆಲ್ಲ ನನ್ನದು.

ರನ್ನನ ಕೃತಿಗಳಲ್ಲಿ ಬರುವ ಶಬ್ದಶಕ್ತಿ ಹಾಗೂ ಉಕ್ತಿವೈಚಿತ್ರ್ಯದಿಂದ ಅವನು ಸಂಸ್ಕೃತ ಹಾಗೂ ಕನ್ನಡ ಭಾಷೆಗಳೆರಡರಲ್ಲೂ ಅಗಾಧ ಸಾಮರ್ಥ್ಯವನ್ನು ಹೊಂದಿದ್ದನೆಂಬುದು ವಿದಿತವಾಗುತ್ತದೆ. ಧ್ವನ್ಯಾಲೋಕದಲ್ಲಿ ಆನಂದವರ್ಧನನು ಹೇಳುವುದನ್ನು ಇಲ್ಲಿ ಸ್ಮರಿಸಬೇಕು. ರಸಸಮಾಧಿಯಲ್ಲಿ

ತನ್ಮಯಚಿತ್ತನಾದ ಪ್ರತಿಭಾಶಾಲಿಯಾದ ಕವಿಗೆ ಮೇಲ್ನೋಟಕ್ಕೆ ದುಸ್ಸಾಧ್ಯವೆನಿಸುವ ಅಲಂಕಾರಗಳೂ 'ನಾನು ಮುಂದು, ತಾನು ಮುಂದು' ಎಂಬಂತೆ ಸಹಜವಾಗಿಯೇ ಸ್ಫುರಿಸುತ್ತವೆ. ಇದಕ್ಕೆ ಕವಿ ರನ್ನನು ಸ್ಪಷ್ಟವಾದ ಸಾಕ್ಷಿ. ರಣರಂಗದಲ್ಲಿ ಮಡಿದು ಬಿದ್ದಿದ್ದ ಅಭಿಮನ್ಯುವನ್ನು ದುರ್ಯೋಧನನು ನೋಡಿದ ಸಂದರ್ಭದಲ್ಲಿ ಕವಿಯು ಅಭಿಮನ್ಯುವಿನ ಶರೀರವನ್ನು ಹೀಗೆಂದು ವರ್ಣಿಸುತ್ತಾನೆ – 'ಅರೆಮುಗಿದಿರ್ದ ಕಣ್ಗಳ್, ಅಲರ್ದ ಮೊಗಂ, ಕಡಿವೋದ ಕೆಯ್ಯುಂ, ಆಸುರತರಮಾಗೆ ಕರ್ಚಿದ ಔಡುಂ, ಜರ್ಜರಿತ ಶರೀರನಾಗಿ ನವಲೋಹಿತವಾರ್ಧಿಯೊಳ್ ಅಬ್ಬು ಬಿಬ್ಬಿನಂ, ಅಜಿವೀರನಂ'. ಅವನ ತಾಯಿಯ ಬಗ್ಗೆ ದುರ್ಯೋಧನನು ಹೇಳುವ ಮಾತಿದು 'ನಿನ್ನಂ ಪೆತ್ತಳ್ ಮೊಲೆವೆತ್ತಳೆ ವೀರಜನನಿ ಪೆಸರಂ ಪೆತ್ತಳ್'. ಇಲ್ಲಿ ಸಂದರ್ಭೋಚಿತವಾದ ಶಬ್ದಗುಂಫನಗಳು ಪಾಂಡವದ್ವೇಷಿಯಾದ ದುರ್ಯೋಧನನಲ್ಲೂ ಅಭಿಮನ್ಯುವಿನ ಬಗೆಗೆ ಸ್ಫುರಿಸುವ ಮಾನವಸಹಜ ಭಾವಗಳನ್ನು ಕಾಣಿಸುತ್ತಾ ವೀರರಸಧಾರೆಯನ್ನು ಸುರಿಸುತ್ತಾ ನಾ ಮುಂದು ತಾ ಮುಂದೆಂದು ಬರುತ್ತವೆ.

ರನ್ನನು ಸಂಸ್ಕೃತ ಶಬ್ದಗಳನ್ನೂ ಯಥಾವತ್ತಾಗಿ ಹೇರಳವಾಗಿ ಬಳಸಿದ್ದಾನೆ. ಪಾತ್ರವನ್ನು ಬೆಳೆಸುವಲ್ಲಿ ಹಲವಾರು ವಿಶೇಷಣಗಳೊಂದಿಗೆ ವ್ಯಕ್ತಿಯನ್ನು ಅಭಿವ್ಯಕ್ತಿಸುವುದು ಸಂಸ್ಕೃತದ ಕ್ರಮ. ದೀರ್ಘವಾದ ಹಾಗೂ ಸಂಕೀರ್ಣವಾದ ಸಮಾಸಪದಗಳು ವಿಶೇಷಣವಾಗಿ ಬರುವುದು ಸಂಸ್ಕೃತ ಕಾವ್ಯಗಳಿಗೆ ಸಹಜ. ರನ್ನನು ಇದೇ ಕ್ರಮವನ್ನು ತನ್ನ ಕಾವ್ಯದಲ್ಲಿ ಹಲವೆಡೆ ಬಳಸಿದ್ದಾನೆ. ಕನ್ನಡಕ್ಕೆ ಇದು ಸಹಜವಲ್ಲದಿದ್ದರೂ ಕನ್ನಡಕಾವ್ಯಭಾಷೆಗೆ ವಿಲಕ್ಷಣವೆನಿಸದಂತೆ ಪ್ರಯೋಗಿಸಿದ್ದಾನೆ.

ಭೀಮಸೇನನನ್ನು ಕವಿ ವರ್ಣಿಸಲು ಬಳಸುವ ವಿಶೇಷಣಗಳ ಮಾಲೆಯನ್ನು ಸರಳ ಕನ್ನಡಾನುವಾದದೊಂದಿಗೆ ನೋಡಿ:– 'ಕುರುಭೂಭೃದ್ಬಲತೂಲಕಾಪವನ' – ಕುರುವಂಶದ ರಾಜನ ಬಲವೆಂಬ ಅರಳೆಗೆ (ಹತ್ತಿ) ಬಿರುಗಾಳಿಯಾದವನು; 'ಕೌರವಗಂಧೇಭಕೇಸರಿ' – ಕೌರವರೆಂಬ ಮದಿಸಿದ ಆನೆಗಳಿಗೆ ಸಿಂಹವಾದವನು;

'ದುಶ್ಯಾಸನರಕ್ತರಕ್ತವದನಂ' – ದುಶ್ಯಾಸನನ ರಕ್ತಕ್ಕೆ ಜಿಗುಣೆಯಾದವನು; 'ದುರ್ಯೋಧನೋರುಕ್ಷಮಾಧರವಜ್ರಂ' – ದುರ್ಯೋಧನ ತೊಡೆಗಳೆಂಬ ಪರ್ವತಕ್ಕೆ ವಜ್ರವಾದವನು, ಇಲ್ಲಿ ಇಂದ್ರನು ವಜ್ರಾಯುಧದಿಂದ ಪರ್ವತಗಳ ರೆಕ್ಕೆಯನ್ನು ಕತ್ತರಿಸಿದ್ದು ಧ್ವನಿತವಾಗುತ್ತದೆ; ಇಲ್ಲಿ ಬರುವ ಅಲಂಕಾರಗಳ ಸರಮಾಲೆ, ಅದರಿಂದ ಧ್ವನಿತವಾಗುವ ವ್ಯಂಜಕಶಕ್ತಿ, ವೀರರಸದ ಉತ್ಕರ್ಷ ಇವೆಲ್ಲಕ್ಕೂ ಸಂಸ್ಕೃತಮೂಲದ ವಿಶೇಷಣಾಭಿವ್ಯಕ್ತಿ ಬಲವನ್ನೊದಗಿಸಿದೆ. ಜಿಗಣೆಗೆ ಪರ್ಯಾಯಪದವಾಗಿ ಬಳಸಿರುವ ರಕ್ತವದನವೆಂಬ ಪದದ ಶಬ್ದಚಮತ್ಕಾರದಿಂದ ಉಕ್ತಿಯ ಸೌಂದರ್ಯ ಇನ್ನಷ್ಟು ಬೆಳೆದಿದೆ.

ರನ್ನನು ಪಂಪನಿಂದ ಪ್ರೇರಿತನಾಗಿದ್ದನೆಂಬುದು ನಿರ್ವಿವಾದ. ರನ್ನನು ಸಂಸ್ಕೃತದ ಕಾವ್ಯಸಿದ್ಧಿಯಿಂದಲೂ ಪ್ರಭಾವಿತನಾಗಿದ್ದನೆಂದು ಮನದಟ್ಟಾಗುತ್ತದೆ. ಭೀಮ–ದುರ್ಯೋಧನರ ಗದಾಯುದ್ಧದ ಕಥೆಯು ಭಗವಾನ್ ವ್ಯಾಸವಿರಚಿತ ಮಹಾಭಾರತದ ಗದಾಸೌಪ್ತಿಕಪರ್ವಗಳಲ್ಲಿ ರೋಚಕವಾಗಿ ಚಿತ್ರವಾಗಿದೆ. ಹದಿನೆಂಟು ದಿನಗಳ ಯುದ್ಧವು ಮುಗಿದು ಅಂತಿಮ ಸೇನಾನಾಯಕನಾದ ಶಲ್ಯನೂ ಸಾವನ್ನಪ್ಪಿದ್ದಾನೆ. ತಮ್ಮಂದಿರೆಲ್ಲರನ್ನು ಕಳೆದುಕೊಂಡ ದುರ್ಯೋಧನನು ಒಬ್ಬಂಟಿಗನಾಗಿದ್ದಾನೆ. ಸರೋವರದಲ್ಲಿ ಅಡಗಿರುವ ದುರ್ಯೋಧನನನ್ನು ಕೆರಳಿಸಿ, ಮೇಲೇಳಿಸಿ, ಗದಾಯುದ್ಧದಲ್ಲಿ ಅವನ ತೊಡೆಗಳನ್ನು ಮುರಿಯುವ ಸಂದರ್ಭ. ಈ ಕಥೆಯನ್ನು ಭಾಸನು ತನ್ನ "ಊರುಭಂಗ" ನಾಟಕದಲ್ಲಿ ಅದ್ಭುತವಾಗಿ ಚಿತ್ರಿಸಿದ್ದಾನೆ. ಭಟ್ಟನಾರಾಯಣನ "ವೇಣೀಸಂಹಾರಂ" ನಾಟಕದಲ್ಲೂ ಈ ಕಥೆಯು ಅಡಕವಾಗಿದೆ. ರನ್ನನು ತನ್ನ ಕೃತಿಯಲ್ಲಿ ಇದೇ ವಸ್ತುವನ್ನು ಬಳಸಿ ಪೂರ್ವಕವಿಗಳ ಪ್ರಭಾವಕ್ಕೆ ಒಳಗಾಗಿದ್ದರೂ ಕಥೆಯನ್ನು ನಿರೂಪಿಸುವ ಶೈಲಿಯಲ್ಲಿ ಸ್ವಂತಿಕೆಯನ್ನು ಮೆರೆದಿದ್ದಾನೆ.

ಕೆಲವೆಡೆ ಅಲ್ಲಿನ ಮಾತುಗಳನ್ನು ಎರವಲು ಪಡೆದಿದ್ದಾನೆ ಎಂಬುದು ನಿಜ. ಪ್ರತೀಕವಾಗಿ ಉದಾಹರಿಸಬಲ್ಲ ಒಂದು ಪ್ರಸಂಗ. ವೇಣೀಸಂಹಾರದ ಐದನೆಯ ಅಂಕದಲ್ಲಿ ದುರ್ಯೋಧನನನ್ನು ಅರಸಿ ಬರುವ ಗಾಂಧಾರಿ ಧೃತರಾಷ್ಟ್ರರ ಕರುಣಾಜನಕ ಸನ್ನಿವೇಶ.

ದುರ್ಯೋಧನನ ಮೌನವನ್ನು ಸಹಿಸಲಾರದೆ ಗಾಂಧಾರಿ ಅಳುತ್ತಾ ಕೇಳುತ್ತಾಳೆ – 'ವತ್ಸ, ಯದಿ ತ್ವಮಪಿ ಅಸ್ಮಾನ್ನಾಲಪಸಿ ತತ್ಕಿಂ ಸಾಂಪ್ರತಂ ವತ್ಸೋ ದುಶ್ಶಾಸನ ಆಲಪತು ದುರ್ಮರ್ಷಣೋ ವಾ ಅಥಾನ್ಯೋ ವಾ? ಇದೇ ಸನ್ನಿವೇಶವನ್ನು ರನ್ನನು ಗದಾಯುದ್ಧದ ಮೂರನೆಯ ಆಶ್ವಾಸದಲ್ಲಿ ನಿರೂಪಿಸಿದ್ದಾನೆ. ಕನ್ನಡಕ್ಕೆ ಅನುವಾದಿಸಿ ಗಾಂಧಾರಿಯಿಂದ ಅದೇ ಮಾತುಗಳನ್ನು ಹೀಗೆ ಹೇಳಿಸುತ್ತಾನೆ :–

'ಮಡಿದೀ ದುಶ್ಶಾಸನನೇಂ ನುಡಿಯಿಸುವನೋ ಕುರುನರೇಂದ್ರ ದುರ್ಮರ್ಷಣನೇಂ?

ನುಡಿಯಿಸುವೇನ್ ದುಷ್ಕರ್ಣಂ ನುಡಿಯಿಸುವನೋ ನೀನುಮ್ ಉಸಿರದಿರ್ಪುದೇ ಮಗನೇ?'

ಇಲ್ಲಿನ ಇಡೀ ಸನ್ನಿವೇಶ ವೇಣೀಸಂಹಾರದ ನೆನಪನ್ನು ತರುತ್ತದೆ. ಇದೇ ರೀತಿ ಗದಾಯುದ್ಧದ ಎರಡನೆಯ ಆಶ್ವಾಸದಲ್ಲಿ ಬರುವ ಪಿಶಾಚಿ–ದುರ್ಯೋಧನರ ಸಂವಾದ ವೇಣೀಸಂಹಾರದ ಮೂರನೆಯ ಅಂಕದಲ್ಲಿ ಬರುವ ರುಧಿರಪ್ರಿಯ–ವಸಾಗಂಧಾ ಎಂಬ ರಾಕ್ಷಸ–ರಾಕ್ಷಸಿಯರ ಸಂವಾದವನ್ನು ನೆನಪಿಸುತ್ತದೆ. ಪಿಶಾಚಿಯು ಆಡುವ 'ಗುರುವಿನ ನೆತ್ತರಂ ಕುಡಿವೆನಪ್ಪೊಡೆ ದ್ವಿಜವಂಶಜಂ' ಎನ್ನುವ ಮಾತು ವೇಣೀಸಂಹಾರದ ರಾಕ್ಷಸನಾಡುವ 'ಬ್ರಾಹ್ಮಣಶೋಣಿತಂ ಖಲು ಏತದ್ ಗಲಂ ದಹದ್-ದಹದ್ ಪ್ರವಿಶತಿ' ಎನ್ನುವ ಮಾತಿನೊಡನೆ ಹೋಲುತ್ತದೆ.

ಹಾಗೆಂದ ಮಾತ್ರಕ್ಕೆ ರನ್ನನ ಕೃತಿಯನ್ನು ಅನುಕರಣ ಕೃತಿಯೆಂದು ಭಾವಿಸದೆ, ಕನ್ನಡದ ಸತ್ತ್ವಕ್ಕೆ ಕುಂದಾಗದಂತೆ ನೀಡಿದ ಒಂದು ಸೃಜನಾತ್ಮಕ ಪ್ರತಿಕ್ರಿಯೆ ಎನ್ನುವುದು ಸೂಕ್ತ. ಆನಂದವರ್ಧನನು ಹೇಳಿರುವಂತೆ ಶಬ್ದಾರ್ಥ ವೈಚಿತ್ರ್ಯ ಹಾಗು ವಸ್ತುವಿನ ಅನಂತತೆಯಿಂದಾಗಿ ಪೂರ್ವಕಾವ್ಯಗಳಿಂದ ಪ್ರೇರಿತನಾದ ಕವಿಯ ಸೃಷ್ಟಿಯೂ ನವನವೀನವೇ. ಕುವೆಂಪುರವರ "ಕನ್ನಡದಿ ಬೇರೆ ಕಥೆಯೆಂಬಂತೆ, ಬೇರೆ ಮೈಯಾಂತಂತೆ, ಮರುವುಟ್ಟುವಡೆದಂತೆ" ಎಂಬ ರಾಮಾಯಣದರ್ಶನದ ಕುರಿತಾದ ಮಾತು ಈ ಕೃತಿಗೂ ಅನ್ವಯವಾಗುತ್ತದೆ.

ಹತ್ತು ಆಶ್ವಾಸಗಳಾಗಿ ಭಾಗಿಸಲ್ಪಟ್ಟ ಈ ಕೃತಿಯಲ್ಲಿ ರನ್ನನು ಕಥೆಯ ನಿರೂಪಣೆಗಾಗಿ ಸಿಂಹಾವಲೋಕನದ ಕ್ರಮವನ್ನು ಅನುಸರಿಸಿದ್ದಾನೆ. ಗದಾಯುದ್ಧದ ಪ್ರಸಂಗ ಈ ಕೃತಿಯ ಪ್ರಧಾನವಸ್ತುವಾದರೂ ಕೃತಿಯ ಮೊದಲನೆಯ ಆಶ್ವಾಸದಲ್ಲಿ ರನ್ನನೇ ಹೇಳಿರುವಂತೆ ಮಹಾಭಾರತದ ಕಥೆಯೆಲ್ಲವನ್ನೂ ಒಳಹೊಕ್ಕು ಅದನ್ನು ಇಲ್ಲಿ ಸಾರವತ್ತಾಗಿ ಸ್ಥೂಲವಾಗಿ ಸಿಂಹಾವಲೋಕನ ಕ್ರಮದಿಂದ ಇಳಿಸಿದ್ದಾನೆ – **"ಒಳಪೊಕ್ಕು ನೋಡೆ ಭಾರತದೊಳಗಣ ಕಥೆಯೆಲ್ಲಂ ಈ ಗದಾಯುದ್ಧದೊಳಂತೊಳಕೊಂಡತ್ತು ಎನೆ ಸಿಂಹಾವಳೋಕನಕ್ರಮದಿನ್ ಅಱಿಪಿದಂ ಕವಿರನ್ನಂ."** ಸಿಂಹಾವಲೋಕನದ ಕ್ರಮ ರನ್ನನ ಕಾಲಕ್ಕೆ ಹೊಸತೇನು ಅಲ್ಲ. ಮಹಾಭಾರತವಿಡೀ ವೈಶಂಪಾಯನರು ಹಿಂದೆ ನಡೆದ ಕಥೆಯನ್ನು ಜನಮೇಜಯನಿಗೆ ಸರ್ಪಯಾಗದ ಸಂದರ್ಭದಲ್ಲಿ ಅರುಹುವ ಸ್ವರೂಪದಲ್ಲಿದೆ. ಆದರೆ ರನ್ನನ ವಿಶೇಷವೆಂದರೆ ಅವನು ಈ ಕ್ರಮವನ್ನು ಪಾತ್ರಗಳ ಬೆಳವಣಿಗೆಗಾಗಿ ಸಶಕ್ತವಾಗಿ ವ್ಯವಸ್ಥಿತವಾಗಿ ಬಳಸಿದ್ದಾನೆ, ಸ್ವಂತಿಕೆಯನ್ನು ಬೆಳಗಿದ್ದಾನೆ. ದೃಶ್ಯಕಾವ್ಯದ ನಾಟಕೀಯತೆಯ ಹೂರಣವನ್ನು ಕಣ್ಣಿಗೆ ಕಟ್ಟುವಂತೆ ಚಂಪೂಕಾವ್ಯದ ಕಣಕದಲ್ಲಿ ತುಂಬಲು ಈ ಶೈಲಿ ಸಹಾಯಕವಾಗಿದೆ. ಭಾವೋತ್ಕರ್ಷವನ್ನು ಹಂತಹಂತವಾಗಿ ಸಾಧಿಸುತ್ತಾ ರಸಸೃಷ್ಟಿಯ ಪರಾಕಾಷ್ಠೆಯತ್ತ ಓದುಗರನ್ನು ಒಯ್ಯುವಲ್ಲಿ ಸಾಧಕವಾಗಿದೆ.

ಕಥಾನಕದ ವಿಭಿನ್ನ ಪಾತ್ರಗಳ ನೆನಪಿನ ಗರಿ ಬಿಚ್ಚುತ್ತಾ ಹೋದಂತೆ ಹಂತಹಂತವಾಗಿ ಆಯಾ ಪಾತ್ರಗಳ ದೃಷ್ಟಿಯ ಆಧಾರದಲ್ಲಿ ಕಥೆಯೊಡನೆ ಪಾತ್ರಗಳೂ ಬೆಳೆಯುತ್ತಾ ಹೋಗುತ್ತದೆ. ಹಲವೆಡೆ ಸ್ವಗತದ ಮೂಲಕ ಮತ್ತೆ ಕೆಲವೆಡೆ ಸಂಭಾಷಣೆಯ ಮೂಲಕವೂ ಹಿಂದೆ ನಡೆದ ಘಟನೆ ಪ್ರಸ್ತುತವಾಗುತ್ತದೆ. ಕಥೆಯ ಗತಿ ಒಂದೇ ದಿಕ್ಕಿನಲ್ಲಿ ಹೋಗದೆ ಹಿಂದೆ ಮುಂದೆ ಓಡಾಡುತ್ತದೆ. ಹೀಗಾಗಿ ಈ ಹಿನ್ನೋಟದ ಶೈಲಿಯಲ್ಲಿ ಏಕತಾನಕ್ಕೆ ಅವಕಾಶವಿಲ್ಲ. ಕೆಲವೊಂದು ಉದಾಹರಣೆಗಳನ್ನು ಪರಿಶೀಲಿಸೋಣ.

ಮೂರನೆಯ ಆಶ್ವಾಸದಲ್ಲಿ ದುರ್ಯೋಧನ – ಸಂಜಯರ ಸಂವಾದ. ದುರ್ಯೋಧನನು ಹಿಂದೆ ನಡೆದದ್ದನ್ನು ಮೆಲುಕು ಹಾಕುತ್ತಾ ಪಾಂಡವರನ್ನು

ಒಬ್ಬೊಬ್ಬರಾಗಿ ಮೂದಲಿಸುತ್ತಾನೆ. ಅರ್ಜುನನ್ನು ಮೂದಲಿಸುತ್ತಾ ಅವನ ಪಾಡನ್ನು ಹೀಗೆಂದು ವರ್ಣಿಸುತ್ತಾನೆ :-

"ಎನಗಾ ಜೂದಿನೊಳ್ ಅಗ್ರಜಾನುಜಸಮೇತಂ ಗಂಡುದೊಟ್ಟಾಗಿ ಕಾ

ನನದೊಳ್ ವಲ್ಕಲಧಾರಿಯಾಗಿ ಹರನೊಳ್ ದಿವ್ಯಾಸ್ತ್ರಮನ್ ಬೇಡೆ ಬೆ,

ಳ್ತನದಿನ್ ತಾಪಸನಾಗಿ ಪೇಡಿಯೆನೆ ಮತ್ಸ್ಯಾವಾಸದೊಳ್ ವಾಸುದೇ

ವನನಂಟನ್ ನಟನಾಗಿ ಬಾರದ ಭವಂ ಬಂದನ್ ಪೃಥಾನಂದನನ್?"

"ಜೂಜಾಟದಲ್ಲಿ ಅಣ್ಣತಮ್ಮಂದಿರೊಡನೆ ಸೋತು ನನಗೆ ಗಂಡುತೊತ್ತಾಗಿ, ಕಾಡಿನಲ್ಲಿ ನಾರುಬಟ್ಟೆಯನ್ನು ಉಟ್ಟು, ಹರನಲ್ಲಿ ದಿವ್ಯಾಸ್ತ್ರವನ್ನು ಬೇಡಲು ಬೆಪ್ಪು ತಾಪಸಿಯಾಗಿ, ನಪುಂಸಕನೆನಿಸಿಕೊಂಡು ಬರಬಾರದ ಜನ್ಮಗಳನ್ನು ಹೊತ್ತನಲ್ಲ ಈ ಪಾರ್ಥ" ಎಂದು. ಈ ಮಾತುಗಳಿಂದ ಕವಿ ದ್ಯೂತಪರ್ವದಿಂದ ಅರಣ್ಯಕಪರ್ವಕ್ಕೆ, ಕಿರಾತಪರ್ವಕ್ಕೆ, ವಿರಾಟಪರ್ವಕ್ಕೆ ಸಾಗಿ ಅಲ್ಲಲ್ಲಿನ ಘಟನೆಗಳನ್ನು ಸಹೃದಯರ ಮನಃಪಟಲದಲ್ಲಿ ಕಿಂಚಿತ್ ಮೂಡಿಸುತ್ತಾನೆ. ಗುಣಗಾನಕ್ಕೆ ಅರ್ಹವಾದ ಅರ್ಜುನನ ದಿವ್ಯವಾದ ತಪಸ್ಸು ಉಪಹಾಸಮಾಡುವ ಸಂದರ್ಭದಲ್ಲಿಯೂ ದುರ್ಯೋಧನನ ನೆನಪಿಗೆ ಬಂದಿರುವುದು ಅವನ ಮನಃಸ್ಥಿತಿಯನ್ನೂ ಸೂಚಿಸುತ್ತದೆ. ಅರ್ಜುನನು ಈ ದಿವ್ಯತಪಸ್ಸಿನ ಫಲವಾಗಿ ಪಡೆದ ಶಸ್ತ್ರಾಸ್ತ್ರದಿಂದಲೇ ತನ್ನ ಪರಮಮಿತ್ರನಾದ ಕರ್ಣನನ್ನು ಕೊಂದದ್ದು ದುರ್ಯೋಧನನಿಗೆ ನುಂಗಲಾರದ ತುತ್ತಾಗಿರುವುದು ಇಲ್ಲಿ ಧ್ವನಿತವಾಗುತ್ತದೆ. ತನ್ನ ಮನಸ್ಸಿನ ತೀಟೆಯನ್ನು ತೀರಿಸಿಕೊಳ್ಳಲು ಉಪಹಾಸ ಮಾಡುವುದೊಂದೇ ಅವನಿಗೆ ಉಳಿದಿರುವ ದಾರಿ.

ಎರಡನೆಯ ಆಶ್ವಾಸದಲ್ಲಿ ಬರುವ ಮತ್ತೊಂದು ಸಂದರ್ಭ. ಇಲ್ಲಿ ದುರ್ಯೋಧನನು ಸ್ವಗತದಲ್ಲಿ ಹಳೆಯದನ್ನು ಮೆಲಕು ಹಾಕುತ್ತಿದ್ದಾನೆ. ದ್ರೋಣರು ಕರ್ಣನ ವಿಷಯದಲ್ಲಿ ಮಾಡಿದ ಅನ್ಯಾಯವನ್ನು ನೆನೆದು ಕರುಬುತ್ತಾನೆ –

'ಪ್ರಿಯಮಿತ್ರನೆನಗೆ ಕಮಲಪ್ರಿಯನಂದನನವನನೆನ್ನ ಪಕ್ಕದೆ ಪಟಿಽದ?
ಪ್ರಿಯಮಂಮಾಡಿದನಾ ಕಳಶಯೋನಿ ನೆಗ‌ಟ್ದಿಂದ್ರಸುತನಿನೇಗುಂದಿದನೋ?'

ಇಲ್ಲಿ ದ್ರೋಣ-ಕರ್ಣರ ಸಂಘರ್ಷದ ಅನೇಕ ಸಂದರ್ಭಗಳು ಮನದಲ್ಲಿ ಮೂಡುತ್ತವೆ.

ಹಳೆಗನ್ನಡದ ಸಾಹಿತ್ಯದಲ್ಲಿ ಸಿಂಹಾವಲೋಕನದ ಕ್ರಮವನ್ನು ಅದ್ವಿತೀಯವಾಗಿ ಬಳಸಿರುವ ಈ ಬಗೆಯು ಮುಂದಿನ ಕವಿಗಳೆಲ್ಲರಿಗೂ ಮಾರ್ಗದರ್ಶಕವಾಗಿದೆ. ಇಂದಿನ ಅತ್ಯುತ್ತಮ ಕೃತಿಗಳಲ್ಲೊಂದಾದ ಭೈರಪ್ಪನವರ ಪರ್ವದಲ್ಲೂ ಈ ಶೈಲಿಯನ್ನು ಕಾಣಬಹುದು.

ಇನ್ನು ಮುಂದೆ ಗದಾಯದ್ಧದ ಕಾವ್ಯಲಕ್ಷಣಗಳನ್ನು ಪರಿಶೀಲಿಸೋಣ. ತೀನಂಶ್ರೀಯವರು ಹೇಳಿರುವಂತೆ 'ಕಾವ್ಯದ ಆತ್ಮ ರಸ; ಅದನ್ನು ಕಾವ್ಯಶರೀರವು ಅಭಿವ್ಯಕ್ತಿಪಡಿಸುವ ಮಾರ್ಗ ಧ್ವನಿ; ಆತ್ಮಶರೀರಗಳ ಹೊಂದಿಕೆಯೇ ಔಚಿತ್ಯ. ರಸ-ಧ್ವನಿ-ಔಚಿತ್ಯ, ಇದೇ ಕಾವ್ಯಗಾಯತ್ರಿ.' ಗದಾಯುದ್ಧದ ಭೀಮನನ್ನು ಕವಿಯ ಆಶ್ರಯದಾತನಾದ ಸತ್ಯಾಶ್ರಯನನ್ನಾಗಿ ಮಾಡಿದ ಸಂದರ್ಭಗಳಲ್ಲೆಲ್ಲ ಔಚಿತ್ಯದ ಚ್ಯುತಿಯಾದಂತೆ ಭಾಸವಾಗುತ್ತದೆ. ಅಲ್ಲದೆ ಆಶ್ರಯದಾತನ ಗುಣಗಾನವನ್ನು ಮಾಡುವ ಅನಿವಾರ್ಯತೆಯಿಂದ ಇದನ್ನು ಕವಿಯು ಮಂಗಳಶ್ಲೋಕಕ್ಕೋ ಅಥವಾ ಅವತರಣಿಕೆಗಷ್ಟೆ ಸೀಮಿತಗೊಳಿಸಿದ್ದರೆ ಅದನ್ನು ಉಪೇಕ್ಷಿಸಿ ರಸಾಸ್ವಾದದ ದೃಷ್ಟಿಯಿಂದ ಮುಂದುವರಿಯಬಹುದಿತ್ತು. ಆದರೆ 'ಗಳಯಿಸುತಿರುವ ಕಬರಿಭರಂ' ನೋಡಿ ಉದ್ಗಮಿಸುವ 'ಕುರಕುಳಾಂತಕನ' ಕೋಪದ ಭಾವೋತ್ಕರ್ಷದ ನಡುನಡುವಿನಲ್ಲೂ ಮತ್ತೆ ಮತ್ತೆ ಸತ್ಯಾಶ್ರಯನು ತಲೆಯೆತ್ತುತ್ತಿದ್ದರೆ ಅಗ್ನಿಪುತ್ರಿಯ ಜ್ವಾಲೆಯನ್ನು ಉದ್ದೀಪಿಸುತ್ತಿರುವ ಪವಮಾನತನೂಭವನು ಸಹೃದಯನ ಚಿತ್ತದಲ್ಲಿ ನೆಲೆಸುವುದಾದರೂ ಹೇಗೆ ! ಈ ಅಬೇಧಕಲ್ಪನೆಯಲ್ಲಿ ಕಾಣಬರುವ ಶ್ಲೇಷಾದಿ ಅಲಂಕಾರಪ್ರಯೋಗಗಳಲ್ಲಿ ರನ್ನನ ಉಕ್ತಿಚಮತ್ಕಾರ ಮೆಚ್ಚುವಂತಹದು. ಆದರೆ ಉತ್ತಮ ಉಕ್ತಿವೈಚಿತ್ರ್ಯವೂ ರಸಪೋಷಣೆಯ ದೃಷ್ಟಿಯಿಂದ ತ್ಯಾಜ್ಯವಾದಾಗ ಔಚಿತ್ಯ ಜಾರಿಹೋಗುತ್ತದೆ. ಗದಾಯುದ್ಧದ ಈ ಸತ್ಯಾಶ್ರಯಸ್ಮರಣೆ ಮೊಸರನ್ನ ಮೆಲ್ಲುವಾಗ ಕಲ್ಲು ಸಿಕ್ಕಂತೆ, ಆದರೂ ಕಾವ್ಯಾನಂದದ ಅಭಿಲಾಷಿಗಳು ಕಲ್ಲುಗಳನ್ನು ಪಕ್ಕಕ್ಕೆ ಸರಿಸಿ, ಉಪೇಕ್ಷಿಸಿ ಮುಂದುವರಿಯುವುದು ಅನಿವಾರ್ಯ.

ಗದಾಯುದ್ಧದಲ್ಲಿ ವೀರ-ರೌದ್ರ ರಸಗಳು ಪ್ರಧಾನ. ಅದಕ್ಕೆ ಆನುಷಂಗಿಕವಾಗಿ ಬರುವ ಬೀಭತ್ಸ-ಕರುಣಾರಸಗಳು ಔಚಿತ್ಯಪೂರ್ಣವಾಗಿವೆ. 'ಕೋಪಾರುಣನೇತ್ರಂ .. ನೀರೊಳಗಿರ್ದುಂ ಬೆಮರ್ತನುರಗಪತಾಕಂ" ಎನ್ನುವ ಗದಾಯುದ್ಧದ ಪ್ರಸಿದ್ಧ ವಾಕ್ಯವು ವಿಭಾವಾನುಭಾವಗಳ ಸಹಯೋಗದಿಂದ ಸಹೃದಯನ ಚಿತ್ತದಲ್ಲಿ ಬಹುಕಾಲ ಅನುರಣಿಸುತ್ತದೆ. 'ಆ ರವಂ ನಿರ್ಜಿತ ಕಂಠೀರವರವಂ ನಿರಸ್ತಘನರವವಂ' ಎಂದು ಭೀಮನ ಸಿಂಹನಾದವನ್ನು ವರ್ಣಿಸುವಲ್ಲಿ ಅನುರಣಿಸುವ 'ರವ' ಶಬ್ದವು ಓಜೋಗುಣವನ್ನು ಮತ್ತೆ ಮತ್ತೆ ಪ್ರಕಾಶಿಸುತ್ತಾ ಅನುಪ್ರಾಸದ ಶಬ್ದಾಲಂಕಾರದಿಂದ ಶಕ್ತಿಯನ್ನು ಪಡೆದು ಭೀಮನ ಕೋಪದ ತೀಕ್ಷ್ಣತೆಯನ್ನು ಧ್ವನಿಸುವಲ್ಲಿ ಸಫಲವಾಗುತ್ತದೆ. ಇಲ್ಲಿ ನಾಲಿಗೆಯನ್ನು ತಿರುಗಿಸುವ 'ರ' , ಮಹಾಪ್ರಾಣದ 'ಘ' ವರ್ಣಗಳ ಬಳಕೆಯಿಂದ ವರ್ಣಪಾರುಷ್ಯದ ಅನುಭೂತಿಯೂ ಪೂರಕವಾಗಿ ಸಿದ್ಧಿಸುತ್ತದೆ. 'ಮೇಘದ ಗುಡುಗನ್ನೂ ಸೋಲಿಸಿದ, ಸಿಂಹದ ಗರ್ಜನೆಯನ್ನೂ ಮೀರಿಸಿದ' ಎನ್ನುವಲ್ಲಿರುವ ಅರ್ಥಮೂಲದ ಅತಿಶಯೋಕ್ತಿ, 'ನೀರಲ್ಲಿದ್ದರೂ ಬೆವತನು' ಎನ್ನುವಲ್ಲಿರುವ ವಿರೋಧಾಭಾಸ ಪರಸ್ಪರ ತಕ್ಕಿಸಿ ಭೀಮ-ದುರ್ಯೋಧನರ ನಡುವೆ ಧಗಧಗನೆ ಉರಿಯುತ್ತಿರುವ ಕ್ರೋಧದ ಕಿಚ್ಚಿನ ಬಿಸಿಗೆ ನಮ್ಮ ಚಿತ್ತವು ಕರಗಿ ರೌದ್ರರಸದ ಅನುಭೂತಿಗೆ ಹದವಾದ ನೆಲವಾಗುತ್ತದೆ. ರನ್ನನ ಪ್ರತಿಭೆಗೆ ಕನ್ನಡಿಯನ್ನು ಹಿಡಿಯಲು ಇದೊಂದು ಪದ್ಯವೇ ಸಾಕು. ಅಹೋ ! ಶಕ್ತಿಕವಿಯೆಂದು ಇದಕ್ಕಲ್ಲವೇ ಉದ್ಗರಿಸಿದ್ದು ಕುವೆಂಪುರವರು !

ರೌದ್ರರಸಕ್ಕೆ ಆನುಷಂಗಿಕವಾಗಿ ಬರುವ ಬೀಭತ್ಸ ಸನ್ನಿವೇಶದ ಉದಾಹರಣೆಯನ್ನು ರಣಭೂಮಿಯಲ್ಲಿ ರಕ್ತಸಿಕ್ತವಾಗಿ ಚೆಲ್ಲಿ ಚದುರಿಹೋಗಿರುವ ಹೆಣಗಳ ನಡುವೆ ಪೆಣದಿನಿಗಳ (ಪಿಶಾಚಿಗಳ) ತಂಡದ ಸಂಭ್ರಮದಲ್ಲಿ ಕಾಣಬಹುದು. ಇಲ್ಲಿ ಅಲ್ಲಲ್ಲಿ ಪೂರಕವಾಗಿ ಹಾಸ್ಯ, ಕರುಣೆಯೂ ಮಿಂಚಿ ಮಾಯವಾಗುತ್ತದೆ. ಕದನದೊಳ್ ಉಣ್ಮಿದ ಒಳ ಮಿದುಳಿನ ಕರ್ದಮ (ಕೆಸರು), ಸತ್ತು ಬಿದ್ದಿರುವ ಆನೆಗಳ ಬೆಟ್ಟಗಳು, ರುಧಿರಸ್ರೋತಗಳು, ಸುಲಿದ ಚರ್ಮ ಹರಿದ ತಲೆ ಬಿಟ್ಟ ಬಾಯಿ ರಕ್ತದ

ಹೊಳೆಯಲ್ಲಿ ತೊಯ್ದ ಹೆಣಗಳು ಎಲ್ಲೆಲ್ಲೂ ಹರಡಿವೆ. ಊದಿದ ಹೆಣಗಳನ್ನು ಅರೆಸುತ್ತಾ ಬರುತ್ತಿರುವ ಪೆಣದಿನಿಗಳ ತಂಡ, ತಮ್ಮೊಡಯರ ಹೆಣವನ್ನು ಪಿಶಾಚಿಗಳಿಂದ ರಕ್ಷಿಸಲು ಕಾಯುತ್ತಿರುವ ಭಟರು, ರಣಭೂಮಿಯಲ್ಲಿ ಚದುರಿಹೋಗಿದ್ದ ಹೆಣಗಳನ್ನು ದಾಟುತ್ತಾ ಕುಂಟುತ್ತಾ ಬರುತ್ತಿರುವ ದುರ್ಯೋಧನ – ಈ ಚಿತ್ರಣ ಇಲ್ಲಿ ವಿಸ್ತರಣಗೊಂಡು ಸಮರ್ಥವಾಗಿ ದೃಶ್ಯವಾಗುತ್ತದೆ. ಹೆಣವನ್ನು ಕಾಯುತ್ತಿರುವ ಭಟರಿಂದಲೇ ಕುರುಪತಿಯು 'ಏನಯ್ಯ, ನೀನು ಹುಟ್ಟು ಕುರುಡನೋ, ಕುರುಡುರಾಜನ ಮಗನೋ, ಹೆಣಗಳನ್ನು ಮೆಟ್ಟದೆ ಹೋಗು' ಎಂದು ಬೈಗುಳನ್ನು ಉಣ್ಣುತ್ತಾನೆನ್ನುವ ವ್ಯಂಗ್ಯ ಕುರುಪತಿಯನ್ನು ಪಿಶಾಚಿಗಳೊಂದಿಗೆ ಸಮೀಕರಿಸಿ ಅವನ ದಯನೀಯ ಸ್ಥಿತಿಯ ಅನುಭವವಾಗುತ್ತದೆ.

ಲೋಭಿ ಪಿಶಾಚಿಗಳೋ 'ಇನಿಸಿನಿಸೇ ತಿಂಬೆವು. ಒರ್ಮೆಯೆ ತಿನ್ನೆ ಮುಗಿದುಹೋದೀತು' ಎಂದು ಆನೆಯ ಹೆಣವನ್ನು ತಾವೂ ತಿನ್ನದೆ ಪರರಿಗೂ ಇಕ್ಕದೆ ಹಸಿವಿನಿಂದ ಇದ್ದವು. ಗುರುವಿನ ನೆತ್ತರನ್ನು ಕುಡಿವೆನೆಂದರೆ ಅವನು ದ್ವಿಜನು, ಇನ್ನು ನಿನ್ನ ತಮ್ಮ ದುಶ್ಶಾಸನನ ರಕ್ತ ಕುಡಿಯೋಣವೆಂದರೆ ಭೀಮನೇ ಎಲ್ಲವನ್ನೂ ಹೀರಿದ್ದಾನೆ. ಭೀಷ್ಮರ ಬಿಸಿನೆತ್ತರು ಕುಡಿಯಲು ಅವನಿನ್ನೂ ಬದುಕಿದಿದ್ದಾನೆ. ಹಾಗಾಗಿ 'ಕುರುರಾಜ, ನಿನ್ನ ನೆತ್ತರ ಸವಿನೋಟಿಪ್ಪೊಡಾಂ ಬಯಸಿ ಬಂದಪೆನ್' ಎಂದು ಹೇಳುತ್ತದೆ ಒಂದು ಹುಲು ಪಿಶಾಚಿ. ಇಲ್ಲಿ ಹಾಸ್ಯ ಇಣುಕುತ್ತದೆ, ಕುರುರಾಜನ ಬಗ್ಗೆ ಕರುಣೆ ಒಸರುತ್ತದೆ, ರುದ್ರತೆ ಅನುಭವಕ್ಕೆ ದಕ್ಕುತ್ತದೆ.

ಸಂಸ್ಕೃತದ ಕಾವ್ಯಜಗತ್ತಿನಲ್ಲಿ ಹಲವಾರು ಉತ್ತಮ ನಾಟಕಕೃತಿಗಳು ಬಂದಿದ್ದರೂ ಅದೇಕೋ ಏನೋ ಹಳೆಗನ್ನಡ ಸಾಹಿತ್ಯದಲ್ಲಿ ಅದರ ಕೊರತೆ ಎದ್ದು ಕಾಣಿಸುತ್ತದೆ. ಈ ಕೊರತೆಯನ್ನು ತುಂಬಲೆಂದೇನೋ ಬಿಎಂಶ್ರೀಯವರು ರನ್ನನ ಕಾವ್ಯಗಳಿಂದ ಸಾಲುಗಳನ್ನು ಆಯ್ದು 'ಗದಾಯುದ್ಧ ನಾಟಕಂ' ರಚಿಸಿದರು. ಆದರೆ ಮೂಲಕಾವ್ಯದಲ್ಲಿಯೇ ಇರುವ ನಾಟಕೀಯತೆ ಎಷ್ಟೊಂದು ತೀವ್ರವಾಗಿದೆಯೆಂದರೆ ತನ್ನ ಸ್ವರೂಪದಲ್ಲೇ ನಾಟಕಕ್ಕೆ ಉತ್ತಮ ವಸ್ತುವಾಗಬಲ್ಲ ಸಾಮರ್ಥ್ಯವನ್ನು ಹೊಂದಿದೆ. ಇದೇ

ಕಾರಣದಿಂದಿರಬಹುದು ಇಂದಿಗೂ ಯಕ್ಷಗಾನಗಳಲ್ಲಿ ಗದಾಯುದ್ಧ ಪ್ರಸಂಗ ಜನಪ್ರಿಯವಾಗಿರುವುದು. ಕಾವ್ಯದ ನಾಟಕೀಯತೆಗೆ ದೃಷ್ಟಾಂತವೆಂಬಂತೆ ದುರ್ಯೋಧನನ ಊರುಭಂಗವಾದ ಬಳಿಕ ಬರುವ ಈ ಸಾಲುಗಳನ್ನು ನೋಡಿ –

(ಯಾಜ್ಞಸೇನಿಗೆ ನಿಜೋರುಯುಗಳವಿಕಳನಾಗಿರ್ದ ದುರ್ಯೋಧನನಂ ತೋಱಿ)

ಭೀಮಸೇನಂ – 'ಪಗೆ ಮಡಿದದು, ಮುಡಿ' (ಎನೆ ನಗಮೊದದಿಂ)

ಪಾಂಚಾಳಿ – 'ಮಱೆದೆನಾಂ ಪಲಕಾಲಂ ವಿಗತಾಭ್ಯಾಸದೆ ಸತ್ತಿಗ, ಪಗೆಯಂ ಮಡಿಯಿಸಿದ ನೀನೆ ಮುಡಿಯಲ್ವೇೞ್ಕುಂ

(ಎಂದು ತನ್ನ ಕಯ್ಯಂ ಪಿಡಿದು ತೆಗುವುದುಂ ಅಂತೆ ಗೆಯ್ವೆನೆಂದು ಆಕೆಯ ವೇಣೀಸಂಹಾರಮಂ ತಾನೇ ಮಾಡಿ)

ಬೀಮಸೇನಂ – 'ಇದಱೊಲ್ .. ನಿನ್ನೀ ಕೇಶಪಾಶಂ ಕುರುಪತಿಗಾಯ್ತಲ್ತೆ ಕೀನಾಶಪಾಶಂ'

(ಎಂದು ಪೊಗೞ್ದು ಮಾಂಗಲ್ಯಮಾಲಾಲಂಕೃತಂ ಮಾಡೆ ಸ್ಮರಸಂಜೀವನೆ ಕೃಷ್ಣೆ ಪೂಮುಡಿದಳಾ ..)

'ಹಗೆ ಮುಗಿದಿದೆ, ಮುಡಿ' ಎನ್ನುವ ಭೀಮನ ಮಾತುಗಳಿಗೆ 'ಮುಡಿಗಟ್ಟುವ ಅಭ್ಯಾಸ ತಪ್ಪಿದೆ, ನೀನೇ ಮುಡಿಸು' ಎನ್ನುವ ಚಂದವಾದ ಮಾತುಗಳಲ್ಲಿನ ಕೋಮಲರತಿಭಾವ ಶೃಂಗಾರಕ್ಕೆ ಪುಷ್ಟಿ ಕೊಡುತ್ತದೆ. ನಟನೆಗೆ ಬೇಕಾದ ಸೂಚನೆಗಳೆಲ್ಲವೂ ಛಂದೋಮಯವಾಗಿ ಗದ್ಯದ ಬಂಧದಲ್ಲಿ ವ್ಯಕ್ತವಾಗಿದೆ. ಮಾತುಗಳು ಗುರಿ ಮುಟ್ಟುವಂತಿವೆ, ನಾಟಕದ ಹಿಡಿಯಿದೆ, ನಟನೆಗೆ ಒದಗುವ ಚೊಕ್ಕತೆಯಿದೆ. ಚಂಪೂಕಾವ್ಯದ ಬಂಧದಲ್ಲೇ ಒಂದು ಉತ್ತಮವಾದ ನಾಟಕವನ್ನೂ ಒಳಗೊಂಡ ಗದಾಯುದ್ಧ ಕಾವ್ಯವು ಕನ್ನಡಸಾಹಿತ್ಯ ನಭದಲ್ಲಿ ಸದಾ ಮಿನುಗುವ ತಾರೆ.

ಆಕರಗ್ರಂಥಗಳು

1. ಭಾರತೀಯ ಕಾವ್ಯಮೀಮಾಂಸೆ, ಪ್ರೊ. ತೀ. ನಂ. ಶ್ರೀಕಂಠಯ್ಯ, ಪ್ರಸಾರಾಂಗ ಮೈಸೂರು ವಿಶ್ವವಿದ್ಯಾನಿಲಯ 2021
2. ಆನಂದವರ್ಧನನ ಕಾವ್ಯಮೀಮಾಂಸೆ ಮತ್ತು ಕನ್ನಡ ಧ್ವನ್ಯಾಲೋಕ. ಡಾ. ಕೆ. ಕೃಷ್ಣಮೂರ್ತಿ, ಅಭಿನವ ಪ್ರಕಾಶನ, 1951
3. ಶ್ರೀ ಸಾಹಿತ್ಯ, ಬಿ.ಎಂ. ಶ್ರೀಕಂಠಯ್ಯ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, 2002
4. Gadayuddham - The dual of the maces, edited by Akkamahadevi, Translated by R. V. S Sundaram and Ammel Sharon, Kannada Language Chair of JNU, New Delhi, 2021
5. ಗದಾಯುದ್ಧ ಸಂಗ್ರಹಂ, ಸಂಪಾದನೆ ಪ್ರೊ. ತೀ. ನಂ. ಶ್ರೀಕಂಠಯ್ಯ, ಕಾವ್ಯಾಲಯ ಪ್ರಕಾಶನ, 1949
6. ವೇಣೀಸಂಹಾರಂ ಭಟ್ಟನಾರಾಯಣ Ed. M. R. Kale, Motilal Banarsidass publishers, 1936

****

ರನ್ನ ಕವಿ ವಿರಚಿತ ಅಜಿತ ತೀರ್ಥಂಕರ ಪುರಾಣ ತಿಲಕಂ: ಸಂಕ್ಷಿಪ್ತ ಪಕ್ಷಿನೋಟ

ಎಸ್. ಕಾರ್ತಿಕ್, ಮೈಸೂರು

ರನ್ನ ಕವಿಯ ಜನ್ಮವರ್ಷ ಕ್ರಿ.ಶ. 949. ಇಂದಿನ ಕರ್ನಾಟಕ ರಾಜ್ಯದ ಬಾಗಲಕೋಟೆ ಜಿಲ್ಲೆಯ ಮುದವೊಳಲು {ಇಂದಿನ ಮುಧೋಳ} ಜನ್ಮಸ್ಥಳ. ತಂದೆ ಜಿನವಲ್ಲಭೇಂದ್ರ, ತಾಯಿ ಅಬ್ಬಲಬ್ಬೆ. ಒಡಹುಟ್ಟಿದ ಅಣ್ಣಂದಿರು ದೃಢಬಾಹು, ರೇಚಣ, ಮಾರಮಯ್ಯ. ಶಾಂತಿ, ಜಕ್ಕಿ ಎಂಬ ಇಬ್ಬರು ಪತ್ನಿಯರು, ಅತ್ತಿಮಬ್ಬೆ, ರಾಯ ಎಂಬ ಹೆಸರಿನ ಇಬ್ಬರು ಮಕ್ಕಳು ಎಂಬುದಾಗಿ ತನ್ನ ವೈಯಕ್ತಿಕ ವಿವರಗಳನ್ನು ರನ್ನನೇ ಹೇಳಿಕೊಂಡಿದ್ದಾನೆ. ಈತ ತಲಕಾಡು ಗಂಗರ ರಾಚಮಲ್ಲ ಮತ್ತು ಇಮ್ಮಡಿ ಮಾರಸಿಂಹರ ಮಹಾಮಂತ್ರಿ ಹಾಗೂ ಸೇನಾಧಿಪತಿಯಾಗಿದ್ದ ಚಾವುಂಡರಾಯನ ಆಶ್ರಯದಲ್ಲಿದ್ದು ನಂತರ ಕಲ್ಯಾಣದ ಚಾಲುಕ್ಯರ ಚಕ್ರವರ್ತಿ ಇಮ್ಮಡಿ ತೈಲಪ ಮತ್ತು ಇರಿವಬೆಡಂಗ ಸತ್ಯಾಶ್ರಯರ ಆಶ್ರಯವನ್ನು ಹೊಂದಿ ಕೃತಿ ರಚನೆ ಮಾಡಿದ್ದಾನೆ. ಅಜಿತ ಪುರಾಣವನ್ನು ದಾನಚಿಂತಾಮಣಿ ಅತ್ತಿಮಬ್ಬೆಯ ಪ್ರೋತ್ಸಾಹದಿಂದ ರಚಿಸಿದ್ದಾನೆ. ಗದಾಯುದ್ಧದ ರಚನೆಯ ಕಾಲ ಈಚಿನ ಸಂಶೋಧನೆಗಳಿಂದ ತಿಳಿದು ಬಂದಿರುವಂತೆ ಕ್ರಿ.ಶ. ಸುಮಾರು 1000–1007 ರೊಳಗೆ ಎಂಬುದು ಖಚಿತ. ಅಜಿತ ಪುರಾಣದ ರಚನೆಯ ಕಾಲ ಅನೇಕ ಸಂದೇಹಗಳನ್ನು ಒಳಗೊಂಡೂ ಕ್ರಿ.ಶ. 993 ಎನ್ನಲಾಗಿದೆ. ರನ್ನ ನಿಘಂಟಿನ ರಚನೆಯ ಕಾಲ ತಿಳಿದುಬಂದಿಲ್ಲ. ಆದರೂ ಕ್ರಿ.ಶ.

ಸುಮಾರು ಹತ್ತನೆಯ ಶತಮಾನದ ಉತ್ತರಾರ್ಧ, ಹನ್ನೊಂದನೆಯ ಶತಮಾನದ ಆದಿಭಾಗದಲ್ಲಿ ರಚನೆಯಾಗಿರಬಹುದು ಎಂದು ಹೇಳಬಹುದೇನೋ. ಇದಕ್ಕಿಂತ ಹೆಚ್ಚಿನ ವಿವರಗಳಿಗೆ ಮಾಹಿತಿಗಳ ಕೊರತೆಯಿದೆ.

ಕನ್ನಡ ಭಾಷೆಯಲ್ಲಿ ನಮ್ಮ ಗಮನಕ್ಕೆ ಬಂದಂತೆ ಜೈನರ ಎರಡನೆಯ ತೀರ್ಥಂಕರ ಅಜಿತನಾಥನನ್ನು ಕುರಿತು ರಚಿತವಾಗಿರುವ ಏಕೈಕ ಕಾವ್ಯ ರನ್ನನದೇ ಆಗಿದೆ. ಇದನ್ನು ಹೊರತುಪಡಿಸಿ ಬೇರಾವ ಕಾವ್ಯಗಳ ವಿವರವೂ ಇದುವರೆಗೂ ಗಮನಕ್ಕೆ ಬಂದಿಲ್ಲ. ಜೈನರ ಎರಡನೆಯ ತೀರ್ಥಂಕರ ಅಜಿತಸ್ವಾಮಿಯನ್ನು ಕುರಿತ 12 ಆಶ್ವಾಸಗಳ ವಿಸ್ತೃತ ಚರಿತ್ರೆಯನ್ನು ದಾನಚಿಂತಾಮಣಿ 'ಅತ್ತಿಮಬ್ಬೆ'ಯು ರನ್ನನಿಂದ ಬರೆಯಿಸಿದಳು.

ಚಾಲುಕ್ಯ ಚಕ್ರವರ್ತಿ ತೈಲಪ ರನ್ನನಿಗೆ 'ಕವಿ ಚಕ್ರವರ್ತಿ' ಎಂಬ ಬಿರುದನ್ನೂ ಕೊಟ್ಟನಷ್ಟೆ. ಈ ಕವಿ ಚಕ್ರವರ್ತಿ ಪದವಿ ತನಗೆ ಹೇಗೆ ಒಪ್ಪುತ್ತದೆ ಎಂಬುದನ್ನು ಅಜಿತ ಪುರಾಣದಲ್ಲಿ ಹೀಗೆ ವರ್ಣಿಸಿದ್ದಾನೆ.

"ಬುದ್ಧಿಯೇ ಭಂಡಾರ, ಪದವಿದ್ಯೇ ಕತ್ತಿನ ಹಾರ, ಯಶಸ್ಸು ಬಿಳಿಯ ಛತ್ರಿ, ಸರಸ್ವತಿಯೇ ಮಹಾರಾಣಿ, ಪದ್ಯ ರಚನೆಯ ಶೈಲಿಯೇ ಭೇರಿನಾದ, ಪಾಂಡಿತ್ಯವೇ ಸಿಂಹಾಸನ, ಕಾವ್ಯದ ಅಲಂಕಾರವೇ ಬೀಸುವ ಚಾಮರ" ಕವಿತಾ ಸಾಮ್ರಾಜ್ಯವನ್ನು ಹೊಂದಿರುವ ಮೇಲ್ಮೆಯಿಂದ ರನ್ನನಿಗೆ ಕವಿಚಕ್ರವರ್ತಿ ಎಂಬ ಹೆಸರು ಚೆನ್ನಾಗಿ ಒಪ್ಪಿದೆ.

ಅಜಿತಪುರಾಣ, ಇತಿಹಾಸ ಮತ್ತು ಸಂಕ್ಷಿಪ್ತ ಕಥಾಸಾರ:ಅತ್ತಿಮಬ್ಬೆಯು ಪ್ರಾಚೀನ ಕರ್ನಾಟಕದ ಅತ್ಯಂತ ಪ್ರಸಿದ್ಧ ಮಹಿಳೆಯರಲ್ಲಿ ಒಬ್ಬಳು. ಆಕೆಯ ಆಶ್ರಿತರಲ್ಲಿ ಒಬ್ಬನಾದ ಮಹಾಕವಿ ರನ್ನನು ತನ್ನ 'ಅಜಿತಪುರಾಣ'ದಲ್ಲಿ ಅತ್ತಿಮಬ್ಬೆಯನ್ನು ತುಂಬು ಮನಸ್ಸಿನಿಂದ ಪ್ರಶಂಸಿಸಿದ್ದಾನೆ. ಪ್ರಾಯಶಃ ರನ್ನನಿಂದಲೇ ಬರೆಯಲ್ಪಟ್ಟ, ಗದಗ ಜಿಲ್ಲೆಯ ಲಕ್ಕುಂಡಿಯಲ್ಲಿ ಸಿಕ್ಕಿರುವ ಒಂದು ಶಾಸನದಲ್ಲಿ ಮತ್ತು ಪೊನ್ನನ 'ಶಾಂತಿಪುರಾಣ'ದಲ್ಲಿ ಅತ್ತಿಮಬ್ಬೆಯನ್ನು ಕುರಿತ ಮಾಹಿತಿಗಳು ದೊರಕಿವೆ. ಇವು ಅತ್ತಿಮಬ್ಬೆಯ ಬಗೆಗೆ ತಿಳಿದುಕೊಳ್ಳಲು ಪರಸ್ಪರ ಪೂರಕ ವಿವರಗಳನ್ನು ಒಳಕೊಂಡಿವೆ. ಅತ್ತಿಮಬ್ಬೆಯು ಹತ್ತನೆಯ ಶತಮಾದ ಉತ್ತರಾರ್ಧ ಮತ್ತು ಹನ್ನೊಂದನೆಯ

ಶತಮಾನದ ಮೊದಲ ಭಾಗದಲ್ಲಿ ಜೀವಿಸಿದ್ದಳು. ಅವಳ ಪೂರ್ವಜರು, ಈಗ ಆಂಧ್ರಪ್ರದೇಶದಲ್ಲಿರುವ ವೆಂಗಿಮಂಡಲದ ಪುಂಗನೂರು ಪ್ರದೇಶದಿಂದ ಬಂದವರು. ಮಲ್ಲಪ್ಪಯ್ಯ ಮತ್ತು ಅಪ್ಪಕಬ್ಬೆ ಅವಳ ತಾಯಿ-ತಂದೆಯರು. ಅವಳ ತಂದೆಯು ಕಲೆ ಮತ್ತು ಸಾಹಿತ್ಯಗಳ ದೊಡ್ಡ ಪೋಷಕನಾಗಿದ್ದನು. ಮಲ್ಲಪ್ಪಯ್ಯನ ತಮ್ಮ ಪೊನ್ನಮಯ್ಯ. ಪೊನ್ನ ಕವಿಯು ಇವರಿರ್ವರ ಆಶ್ರಿತನಾಗಿ ಶಾಂತಿಪುರಾಣವನ್ನು ರಚಿಸಿದ್ದಾನೆ. ಕಲ್ಯಾಣದ ಚಾಲುಕ್ಯ ಚಕ್ರವರ್ತಿಯಾದ ಆಹವಮಲ್ಲ ಸೋಮೇಶ್ವರನ ಸಮರ್ಥ ಸೇನಾನಿಯಾಗಿದ್ದ ನಾಗದೇವನು ಅತ್ತಿಮಬ್ಬೆಯ ಪತಿ. ಇವನಿಗೆ 'ಒರಟರಮಲ್ಲ' ಎಂಬ ಬಿರುದಿತ್ತು. ಅತ್ತಿಮಬ್ಬೆಯ ಸೋದರಿಯಾದ ಗುಂಡಮಬ್ಬೆಯೂ ಅವನ ಪತ್ನಿಯಾಗಿದ್ದಳು. ಅಣ್ಣಿಗದೇವನು ಅತ್ತಿಮಬ್ಬೆಯ ಮಗ. ನಾಗದೇವನ ಅಕಾಲಮರಣದ ಅನಂತರ ಗುಂಡಮಬ್ಬೆಯು ಪತಿಯೊಡನೆ ಸಹಗಮನ ಮಾಡಿದಳು. ತನ್ನ ಪತಿ ಮತ್ತು ಸೋದರಿಯರನ್ನು ಕಳೆದುಕೊಂಡು ವಿಷಾದದಲ್ಲಿ ಮುಳುಗಿದ ಅತ್ತಿಮಬ್ಬೆಯು ದುಃಖವನ್ನು ನುಂಗಿಕೊಂಡು ಧಾರ್ಮಿಕವಾದ ಸರಳ ಜೀವನವನ್ನು ನಡೆಸಿದಳು. ಅವಳ ಜೀವನವು ಕಲೆಗಳು ಮತ್ತು ಧರ್ಮದ ಪುನರುಜ್ಜೀವನಕ್ಕೆ ಮೀಸಲಾಯಿತು. ಪರೋಪಕಾರದಲ್ಲಿ ಮಗ್ನವೂ ಅತ್ಯಂತ ಸರಳವೂ ಆದ ಜೀವನವನ್ನು ನಡೆಸಿದ ಅತ್ತಿಮಬ್ಬೆಯು 'ದಾನಚಿಂತಾಮಣಿ' ಎಂಬ ಬಿರುದನ್ನು ಪಡೆದಳು. ಅತ್ತಿಮಬ್ಬೆಯು ಲಕ್ಕುಂಡಿಯಲ್ಲಿ ಒಂದು ವಿಶಾಲವಾದ ಜೈನ ಬಸದಿಯನ್ನು ನಿರ್ಮಿಸಿದಳು. (ಕ್ರಿ.ಶ. 1007) ಆ ದೇವಾಲಯದ ನಿರ್ವಹಣೆಗೆ ಅಗತ್ಯವಾದ ದಾನ-ದತ್ತಿಗಳನ್ನೂ ಅವಳೇ ನೀಡಿದಳು. 1500 ರತ್ನಖಚಿತವಾದ ಬಂಗಾರದ ಜಿನಬಿಂಬಗಳನ್ನು ಮಾಡಿಸಿ ಭಕ್ತರಿಗೆ ದಾನವಾಗಿ ನೀಡಿದಳು. ಪೊನ್ನನ 'ಶಾಂತಿಪುರಾಣ'ದ ಒಂದು ಸಾವಿರ ಪ್ರತಿಗಳನ್ನು ಓಲೆಗರಿಗಳ ಮೇಲೆ ಬರೆಸಿ ವಿದ್ವಾಂಸರಿಗೆ ವಿತರಣೆ ಮಾಡಿದಳು. ಅವಳ ಮರಣದ ಅನಂತರ ಸ್ಥಾಪಿತವಾದ ಅನೇಕ ಶಾಸನಗಳು ಮತ್ತು ಅನಂತರದ ಪೀಳಿಗೆಗಳ ಹಲವು ಕವಿಗಳು ಅವಳ ಹಿರಿಮೆಯನ್ನು ಹೊಗಳಿದ್ದಾರೆ. ಆದರೆ, ರನ್ನನು ರಚಿಸಿರುವ ಪದ್ಯಗಳು ತಮ್ಮ ಸಾಹಿತ್ಯಕ ಗುಣಕ್ಕಾಗಿಯೂ ಸ್ಮರಣೀಯವಾಗಿವೆ. ಅವನು ಅವಳ ಪಾವಿತ್ರ್ಯವನ್ನು ಗಂಗಾನದಿಯ ನೀರಿಗೆ, ಬಿಳಿಯ ಅರಳೆಗೆ ಮತ್ತು ಕೊಪ್ಪಳನಗರದಲ್ಲಿರುವ ಪವಿತ್ರವಾದ ಬೆಟ್ಟಕ್ಕೆ ಹೋಲಿಸಿದ್ದಾನೆ.

ಅಜಿತಜಿನಪದಪಯೋರುಹ
ರಜಸ್ಸಮಾಸಂಗಿ ಭೃಂಗಿ ಗುಣಶೀಲದಯಾ
ಧ್ವಜೆಯೆಂದು ನಾಡೆ ಸುವಿನೇ
ಯಜನಂ ಬಣ್ಣಿಪುದು ದಾನಚಿಂತಾಮಣಿಯಂ

ಈ ರೀತಿಯಾಗಿ ಅತ್ತಿಮಬ್ಬೆಯ ಚರಿತೆಯನ್ನು ಮನೋಜ್ಞವಾಗಿ ನಿರೂಪಿಸಿದ ರನ್ನನು ಅನಂತರ ಅಜಿತತೀರ್ಥಂಕರನ ಕಥೆಯ ಕಡೆಗೆ ಗಮನ ಹರಿಸುತ್ತಾನೆ.

ಇಕ್ಷ್ವಾಕು ವಂಶದ ಜಿತಶತ್ರು ಎಂಬ ರಾಜನು ಅಯೋಧ್ಯಾನಗರಿಯ ಸಾಕೇತಪುರದಲ್ಲಿ ರಾಜ್ಯವಾಳುತ್ತಿದ್ದನು. ಈತನ ಪಟ್ಟಮಹಿಷಿ ವಿಜಯ ಸೇನಾದೇವಿ. ಜಿತಶತ್ರುವು ಜೀವನದ ಎಲ್ಲ ಸುಖಗಳನ್ನು ಅನುಭವಿಸಿ, ಎಲ್ಲ ಶತ್ರುಗಳನ್ನೂ ಜಯಿಸಿ ತನ್ನ ಹೆಸರನ್ನು ಸಾರ್ಥಕಪಡಿಸಿಕೊಂಡಿದ್ದನು. ವತ್ಸಕಾವತಿಯ ಸುಸೀಮಾ ನಗರದ ರಾಜನಾಗಿದ್ದ ವಿಮಲವಾಹನನು ತನ್ನ ಕೆನ್ನೆಯಲ್ಲಿ ನರೆಗೂದಲನ್ನು ಕಂಡು ವೈರಾಗ್ಯವನ್ನು ತಾಳಿ ತಪೋನಿರತನಾಗಿ, ತನ್ನ ಜನ್ಮವನ್ನು ಕೊನೆಗೊಳಿಸಿಕೊಂಡು ಮುಂದಿನ ಜನ್ಮದಲ್ಲಿ ಜಿತಶತ್ರುವಿನ ಮಗ ಅಜಿತನಾಗಿ ಹುಟ್ಟುತ್ತಾನೆ. ಕಾಲಕ್ರಮದಲ್ಲಿ ಅಜಿತನು ಬೆಳೆದು ದೊಡ್ಡವನಾಗಲು, ಜಿತಶತ್ರುವು ಸಾವಿರ ಕನ್ಯೆಯರೊಡನೆ ಈತನ ವಿವಾಹವನ್ನು ಮಾಡುತ್ತಾನೆ. ಅನಂತರ ರಾಜ್ಯಾಭಿಷೇಕವನ್ನು ಕೂಡ ನಡೆಸಿ ಸಂತೋಷದಿಂದಿರಲು ಅಜಿತನಿಗೆ ಅಜಿತಸೇನನೆಂಬ ಪುತ್ರನು ಹುಟ್ಟುತ್ತಾನೆ. ಈ ಪುತ್ರನು ಪ್ರಾಪ್ತವಯಸ್ಸಿಗೆ ಬಂದಾಗ ಅಜಿತನು ಅವನಿಗೆ ಯೌವರಾಜ್ಯಾಭಿಷೇಕವನ್ನು ಕೂಡ ಮಾಡುತ್ತಾನೆ. ಒಂದು ದಿನ ಆಕಾಶದಲ್ಲಿ ಉಲ್ಕಾಪಾತವಾದುದನ್ನು ನೋಡಿ, ಆ ಸಮಯಕ್ಕೆ ಅಲ್ಲಿಗೆ ಬಂದ ಲೋಕಾಂತಿಕ ದೇವರ ಹಿತೋಪದೇಶಗಳನ್ನು ಕೇಳಿ, ಅದುವರೆಗಿನ ವೈಭವದ ಬದುಕನ್ನು ತ್ಯಜಿಸಿ, ತಪಸ್ಸನ್ನು ಆಚರಿಸಿ ಕೇವಲಜ್ಞಾನವನ್ನು ಪಡೆದು, ಸಮ್ಮೇದಗಿರಿಯಲ್ಲಿ ನಿರ್ವಾಣವನ್ನು ಹೊಂದಿದನು.

ವತ್ಸಕಾವತಿಯ ಪೃಥ್ವೀನಗರದಲ್ಲಿ ಇದ್ದ ಜಯಸೇನನೆಂಬ ಅರಸನಿಗೆ ವಿಜಯಸೇನೆಯೆಂಬ ಪತ್ನಿಯಿದ್ದಳು. ಇವರ ಇಬ್ಬರು ಮಕ್ಕಳಲ್ಲಿ ಒಬ್ಬ ಮೃತನಾಗಲು ಇದರಿಂದ ನೊಂದ ಜಯಸೇನನು ಅತಿಯಾಗಿ

ದುಃಖಪಡುತ್ತಿದ್ದ. ಈತನ ಮೈದುನನು ಜಯಸೇನನಿಗೆ ಜಿನದೀಕ್ಷೆಯನ್ನು ವಹಿಸಿದರೆ ಶಾಂತಚಿತ್ತನಾಗುವೆಯೆಂದು ಹೇಳಿದ. ಇದನ್ನು ಕೇಳಿ ಜಯಸೇನನು ದೀಕ್ಷೆಯನ್ನು ಸ್ವೀಕರಿಸಿದ. ಅನಂತರ ಸಂನ್ಯಸನ ಮರಣವನ್ನು ಪಡೆದು 15 ನೆಯ ಕಲ್ಪದಲ್ಲಿ ಮಹಾಬಲದೇವನಾಗಿ ಹುಟ್ಟಿದ. ಜಯಸೇನನ ಮೈದುನ ಮಣಿಕೇತುವಾಗಿ ಜನ್ಮತಾಳಿದ. ಇವರಿಬ್ಬರೂ ದೇವಲೋಕದಲ್ಲಿ ಅನೇಕ ವರ್ಷಗಳ ಕಾಲ ಸುಖವನ್ನು ಅನುಭವಿಸಿದರು. ಅನಂತರ ವಿಧಿಗನುಸಾರವಾಗಿ ಮನುಷ್ಯಲೋಕಕ್ಕೆ ಯಾರು ಮೊದಲು ಹೋಗುತ್ತಾರೋ ಅವರನ್ನು ದೇವಲೋಕದಲ್ಲಿ ಇರುವವರು ಎಚ್ಚರಿಸಬೇಕು ಎಂದು ನಿಯಮವನ್ನು ಮಾಡಿಕೊಂಡರು. ಅದರಂತೆ ಮಹಾಬಲದೇವನಾಗಿದ್ದ ಜಯಸೇನನು ಅಯೋಧ್ಯೆಯಲ್ಲಿ ಸಗರನೆಂಬ ರಾಜಕುಮಾರನಾಗಿ ಹುಟ್ಟಿದ. ಸಗರನಿಗೆ 60,000 ಮಕ್ಕಳು. ಐಹಿಕ ಸುಖದಲ್ಲಿ ಮೈಮರೆತಿದ್ದ ಸಗರನನ್ನು ಮಣಿಕೇತುವು ಎರಡು ಬಾರಿ ಎಚ್ಚರಿಸಲು ಪ್ರಯತ್ನಿಸಿ ವಿಫಲನಾದ. ಒಂದು ಸಲ ಸಗರನ 60,000 ಮಕ್ಕಳು ಕೈಲಾಸ ಪರ್ವತದ ಬಳಿ ಅಗಳು ತೆಗೆಯಲು ಬಂದಾಗ ಮಣಿಕೇತುವು ಭಗೀರಥನನ್ನು ಬಿಟ್ಟು ಉಳಿದವರನ್ನು ದೃಷ್ಟಿವಿಷಸರ್ಪರೂಪದಲ್ಲಿ ಕೊಂದು, ಸುಟ್ಟುಬೂದಿ ಮಾಡುವ ಕಪಟವ್ಯಾಜವನ್ನು ಹೂಡಿ ಸಗರನನ್ನು ಎಚ್ಚರಿಸುವಲ್ಲಿ ಯಶಸ್ವಿಯಾದ. ಕಾಲಾನಂತರದಲ್ಲಿ ಸಗರ, ಭಗೀರಥಾದಿಯಾಗಿ ಎಲ್ಲರೂ ಮೋಕ್ಷವನ್ನು ಪಡೆದರು.

ಅಜಿತಪುರಾಣದ ಸ್ಥೂಲವಿಮರ್ಶೆ : 1 ಮತ್ತು 12 ನೆಯ ಆಶ್ವಾಸಗಳಲ್ಲಿ ಅತ್ತಿಮಬ್ಬೆಗೆ ಸಂಬಂಧಪಟ್ಟ ವಿವರಗಳಿವೆ. 2 ನೆಯ ಆಶ್ವಾಸದಿಂದ ಅಜಿತನಾಥನ ಪೂರ್ವಜನ್ಮದ ಕಥೆ ಆರಂಭವಾಗುತ್ತದೆ. 8 ಆಶ್ವಾಸ ಪೂರ್ಣವಾಗಿ ತೀರ್ಥಂಕರನ ಕಥೆಗೆ ಮೀಸಲಾಗಿದೆ. 9 ನೆಯ ಆಶ್ವಾಸದಲ್ಲಿ ಅಜಿತನಾಥನಿಗೆ ಸಮಕಾಲೀನನಾದ 2 ನೆಯ ಚಕ್ರವರ್ತಿ ಸಗರನ ಪೂರ್ವವೃತ್ತಾಂತದಿಂದ ಕಥೆ ಆರಂಭವಾಗಿ 12 ನೆಯ ಆಶ್ವಾಸದಲ್ಲಿ ಮುಕ್ತಾಯವಾಗುತ್ತದೆ.

ಅಜಿತಪುರಾಣದಲ್ಲಿ ಅಜಿತನಾಥನ ಪೂರ್ವದ ಭವಾವಳಿಯನ್ನು (ಪೂರ್ವಜನ್ಮದ) ವಿಸ್ತಾರವಾಗಿಯೇ ಕೊಡಲಾಗಿದೆ. ಬೇರೆ ಜೈನಕಾವ್ಯಗಳಲ್ಲಿರುವಂತೆ ಹಾಗೂ ಬೇರೆ ತೀರ್ಥಂಕರರಿಗಿರುವಂತೆ ಇಲ್ಲಿ

ಭವಾವಳಿಗಳ ಹೆಚ್ಚು ತೊಡಕಿಲ್ಲ. ಅಜಿತನಾಥನು ಒಂದೇ ಒಂದು ಭವಾವಳಿಯನ್ನು ಉಳ್ಳವನಾಗಿದ್ದು, ಪೂರ್ವಜನ್ಮದಲ್ಲಿ ವಿಮಲವಾಹನನೆಂಬ ಚಕ್ರವರ್ತಿ. ಇವನು ತನ್ನ ಕೆನ್ನೆಯಲ್ಲಿ ನರೆಗೂದಲನ್ನು ಕಂಡು ವೈರಾಗ್ಯಕ್ಕೆ ಸಲ್ಲುತ್ತಾನೆ. ಈ ವಿಮಲವಾಹನ ಚಕ್ರವರ್ತಿಯ ವೈರಾಗ್ಯವನ್ನು ವಿವರವಾಗಿ ಚಿತ್ರಿಸಿದ ರನ್ನನು ಅನಂತರ ಅಜಿತನಾಥನ ಚರಿತ್ರೆಯನ್ನು ಹೇಳುತ್ತಾನೆ. ಅಜಿತನಾಥನ ವೈರಾಗ್ಯ, ಪತ್ನಿಯರ ವಿಲಾಪ, ಅಜಿತನಾಥನ ಪಂಚಕಲ್ಯಾಣಗಳ ವಿವರ ಇವುಗಳನ್ನು ಕವಿ ದೀರ್ಘವಾಗಿ ಮನಮುಟ್ಟುವಂತೆ ವರ್ಣಿಸಿದ್ದಾನೆ. ಶೃಂಗಾರ, ವೈರಾಗ್ಯಗಳ ಅನುಭವವನ್ನು, ಸಾರವನ್ನು ಧ್ವನಿಪೂರ್ಣವಾಗಿ ಕಟ್ಟಿಕೊಟ್ಟಿರುವುದು ಈ ಕಾವ್ಯದ ಅಗ್ಗಳಿಕೆಗಳಲ್ಲಿ ಒಂದಾಗಿದೆ. ಸಗರ ಚಕ್ರವರ್ತಿಯ ಕಥೆಯಲ್ಲಿ ಆದಿಪುರಾಣದ ಅನುಸರಣೆ, ಪ್ರಭಾವ ಇರುವುದು ಕಂಡುಬರುತ್ತದೆ. ಸಗರನು ತನ್ನ ದಿಗ್ವಿಜಯ ಪ್ರಶಸ್ತಿಯನ್ನು ವೃಷಭಾಚಲದಲ್ಲಿ ಬರೆಸಲು ಹೋಗಿ ಗರ್ವದಿಂದ ಹಿಂದಿನದನ್ನು ಅಳಿಸಿ ತನ್ನ ಹೆಸರನ್ನು ಕೊರೆಯಿಸುವುದು, ತನ್ನ ಪುತ್ರರ ಮರಣದ ಸುದ್ದಿಯನ್ನು ಶ್ರೀಭಟ್ಟಾರಕರ ಮೂಲಕವಾಗಿ ತಿಳಿದು ವೈರಾಗ್ಯವಂಕುರಿಸಿದ್ದು ಮುಂತಾದವುಗಳು ಒಟ್ಟು ಕೃತಿಗೆ ಜೀವಕಳೆಯನ್ನು ತಂದಿವೆ. ರನ್ನನ ಈ ಕಾವ್ಯಕ್ಕೆ ಗುಣಭದ್ರಾಚಾರ್ಯರ ಉತ್ತರಪುರಾಣವೇ ಮೂಲವಾದರೂ ಸಣ್ಣಪುಟ್ಟ ವ್ಯತ್ಯಾಸಗಳು ಕಂಡುಬರುತ್ತವೆ. ಸಗರನ ಕತೆಯು ಉತ್ತರಪುರಾಣದಲ್ಲಿ 143 ಶ್ಲೋಕಗಳಲ್ಲಿ ಅಡಕವಾಗಿದ್ದರೆ, ರನ್ನನಲ್ಲಿ ವಿಸ್ತೃತವಾಗಿದೆ. ಸಗರನ ಮಂತ್ರಿಯಾದ ಬುದ್ಧಿಸಾಗರನು ಮಣಿಕೇತುವಿಗೆ ಸಾವಿಲ್ಲದ ಮನೆಯಿಂದ ಬೆಂಕಿಯನ್ನೂ ಹುಲ್ಲನ್ನೂ ತರುವಂತೆ ಹೇಳಿದ ವಿವರವು ಬುದ್ಧನ ಕಥೆಗೆ ಸಂಬಂಧಿಸಿದಂತೆ ಬರುವ ಕಿಸಾಗೋತಮಿಯ ಕಥೆಯನ್ನು ಹೋಲುತ್ತದೆ. ಬುದ್ಧಿಸಾಗರನ ಪಾತ್ರವೂ ಉತ್ತರ ಪುರಾಣದಲ್ಲಿ ಇಲ್ಲ. ಇದು ಕೂಡ ರನ್ನನ ಸೇರ್ಪಡೆಯೇ ಆಗಿದೆ. ಸಗರ, ಭಗೀರಥ ಈ ಪಾತ್ರಗಳು ವೈದಿಕ ಸಾಹಿತ್ಯದಲ್ಲಿಯೂ ಇವೆ. ಆದರೆ ಅಲ್ಲಿಗೂ ಅಜಿತಪುರಾಣಕ್ಕೂ ಕಥೆಯಲ್ಲಿ ವ್ಯತ್ಯಾಸವಿದೆ. ಭಗೀರಥನು ಸಗರನ ಮಗನೆಂದು ರನ್ನನು ಹೇಳಿದರೆ ವೈದಿಕ ಸಾಹಿತ್ಯದಲ್ಲಿ ಸಗರನ ಮೊಮ್ಮಗನಾದ ಅಂಶುಮಂತನ ಮೊಮ್ಮಗ ಭಗೀರಥ.

ಅಜಿತ ಪುರಾಣದ ಛಂದಸ್ಸು : ಈ ಚಂಪೂ ಕಾವ್ಯದಲ್ಲಿ ಕಂದ–ವೃತ್ತಗಳೇ ಹೆಚ್ಚಾಗಿ ಬಳಕೆಯಾಗಿದ್ದರೂ ರಗಳೆಗಳು ಕೂಡ ಬಳಕೆಯಾಗಿರುವುದು ಗಮನಿಸಬೇಕಾದ ಅಂಶ. ಒಂದು ರಗಳೆಯು (2–8) ಉತ್ಸಾಹ ರಗಳೆಯೆಂದು ಪ್ರಸಿದ್ಧವಾದುದರ ಪ್ರಥಮ ಪರಿಷ್ಕೃತ ರೂಪವೆಂದು ವಿದ್ವಾಂಸರು ತಿಳಿದಿದ್ದಾರೆ. ಇದೇ ರೀತಿಯಾಗಿ ಮತ್ತೆರಡು ರಗಳೆಗಳು (4–7 ಲಲಿತ ರಗಳೆ ; 7–15 ವಚನದ ಅನಂತರ) ವರ್ಣನೆಗಳಿಗೆ ಬಳಕೆಯಾಗಿದ್ದು, ಸೊಗಸಾದ ನಾಟ್ಯಗತಿಯಲ್ಲಿವೆ. ವೃತ್ತಗಳಲ್ಲಿ ಖ್ಯಾತ ಕರ್ಣಾಟಕಗಳು ಇದ್ದು ಸಂಸ್ಕೃತಭೂಯಿಷ್ಠವಾಗಿವೆ. ಗದ್ಯಭಾಗಗಳು ಬಲುಮಟ್ಟಿಗೆ ಸಂಸ್ಕೃತಭೂಯಿಷ್ಠವಾಗಿರುವುದು ಗಮನಿಸಬೇಕಾದ ಅಂಶವಾಗಿವೆ. ಇದು ಧಾರ್ಮಿಕಕಾವ್ಯವಾದ ಕಾರಣ ಪಾರಿಭಾಷಿಕ ಶಬ್ದಗಳು ವಿಪುಲವಾಗಿ ಬಳಕೆಯಾಗಿವೆ. ಇದರಿಂದಲೂ ಗದ್ಯಭಾಗಗಳು ಸಂಸ್ಕೃತಭೂಯಿಷ್ಠತೆಯನ್ನು ಹೊಂದಿವೆಯೆಂದು ಹೇಳಬಹುದು. ಕೆಲವೊಂದು ವಿರಳವೃತ್ತಗಳು, ದಂಡಕ/ಚಕ್ರವಾಳ ಗದ್ಯ ಇವನ್ನೂ ಈ ಸಂದರ್ಭದಲ್ಲಿ ಗಮನಿಸಬಹುದಾಗಿದೆ.

ಅಜಿತ ಪುರಾಣದಲ್ಲಿನ ಲಲಿತ ಕಲೆಗಳ ವಿವರ : ಸಂಗೀತ, ಚಿತ್ರಕಲೆ, ನರ್ತನ ಇವುಗಳಿಗೆ ಸಂಬಂಧಿಸಿದಂತೆ ದೊರಕುವ ವಿವರಗಳು ಅಪೂರ್ವವಾದವು. ಗೊಂಡಲಿ ಎಂಬ ಕರ್ನಾಟಕದ್ದೇ ಆದ ನೃತ್ಯದ ಪ್ರಕಾರವನ್ನು ಹೇಳುವುದಲ್ಲದೆ ಲಾಸ್ಯ, ತಾಂಡವ, ದೇಶೀ, ಮಾರ್ಗ ನೃತ್ತಗಳನ್ನು ಪ್ರೇಂಖಣವನ್ನೂ ಹೇಳುತ್ತಾನೆ. ನೂರೆಂಟು ಕರಣಗಳು, ನಾಲ್ಕು ವಿಧದ ಅಭಿನಯಗಳು, ಭ್ರಮರಿಗಳು ಮತ್ತು ನಾಟ್ಯ, ದಶರೂಪಕಗಳು (5 ಮತ್ತು 7 ನೆಯ ಆಶ್ವಾಸಗಳು) ಇತ್ಯಾದಿಯಾದ ನಾಟ್ಯಶಾಸ್ತ್ರದ ಪರಿಭಾಷೆಯನ್ನೆಲ್ಲಾ ಹೇಳಿರುವುದು ರನ್ನನ ವೈಶಿಷ್ಟ್ಯವಾಗಿದೆ. ನಾಟಕಶಾಲೆಯ ವರ್ಣನೆಯಂತೂ ಸೊಗಸಾಗಿ ಮೂಡಿಬಂದಿದೆ.

ಅಜಿತ ಪುರಾಣದಲ್ಲಿನ ಶಾಸ್ತ್ರಪರಿಭಾಷೆ : ಗಜಶಾಸ್ತ್ರ, ಅಶ್ವಶಾಸ್ತ್ರ ಇತ್ಯಾದಿಗಳಿಗೆ ಸಂಬಂಧಪಟ್ಟಂತೆ ದೊರಕುವ ವಿವರಗಳು ಅಪೂರ್ವವಾದುವು. ಇದು ನಮ್ಮ ಕವಿಗಳ ಶಾಸ್ತ್ರಪಾಂಡಿತ್ಯವನ್ನು ತೋರಿಸುತ್ತದೆ.

ಅಜಿತ ಪುರಾಣದಲ್ಲಿನ ವರ್ಣನೆಗಳು : ರನ್ನನು ವಸಂತ ಋತುವಿನ ವರ್ಣನೆ, ಚಂದ್ರೋದಯ ವರ್ಣನೆ, ಬೆಳುದಿಂಗಳ ವರ್ಣನೆ ಇತ್ಯಾದಿಗಳನ್ನು ಹಿತಮಿತವಾಗಿ ಮಾಡಿರುತ್ತಾನೆ. ಶಾಂತರಸ, ವೀರರಸಗಳ ಬಳಕೆ ಔಚಿತ್ಯಕ್ಕೆ ತಕ್ಕಂತೆ ಬಂದಿದೆ. ಸಂಸಾರವ್ಯಾಮೋಹದಿಂದ ವಿಮುಖನನ್ನಾಗಿಸಲು ಪ್ರಯತ್ನಪಟ್ಟು ಸಫಲನಾದ ಮಣಿಕೇತುವಿನ ಪಾತ್ರ ಗಮನಸೆಳೆಯುತ್ತದೆ. ಗ್ರಂಥದುದ್ದಕ್ಕೂ ಸುಂದರವಾದ ಅಲಂಕಾರ ಪ್ರಪಂಚ ಉಪಮಾ, ರೂಪಕಗಳು ಮನಸೆಳೆಯುತ್ತವೆ. ಪಂಪ, ಪೊನ್ನರ ಪ್ರಭಾವಕ್ಕೆ ಒಳಗಾಗಿರುವ ರನ್ನನು ಅವರ ಕೃತಿಗಳಿಂದಲೂ ಎಷ್ಟೋ ವರ್ಣನೆಗಳನ್ನು, ಶಬ್ದಗಳನ್ನು ಸ್ವೀಕರಿಸಿರುವುದು ಕಂಡುಬರುತ್ತದೆ.

ರನ್ನನ ಕಾವ್ಯದ ಪದ್ಯಗಳನ್ನು ಅನೇಕ ಉತ್ತರಕಾಲೀನ ಕವಿಗಳು ವಿಶೇಷವಾಗಿ ವ್ಯಾಕರಣಶಾಸ್ತ್ರಕಾರರು (ಜೊತೆಗೆ ಅಲ್ಪವಾಗಿ ಆಲಂಕಾರಿಕರು, ಕಾವ್ಯಸಂಕಲನಕಾರರು) ತಮ್ಮ ಕೃತಿಗಳಲ್ಲಿ ಉದ್ಧರಿಸಿದ್ದಾರೆ. ಉದಾಹರಣೆಗೆ: ನಾಗವರ್ಮನ ಶಬ್ದಸ್ಮೃತಿ, ಕೇಶಿರಾಜನ ಶಬ್ದಮಣಿದರ್ಪಣ, ಸಾಳ್ವನ ರಸರತ್ನಾಕರ, ಮಲ್ಲಿಕಾರ್ಜುನನ ಸೂಕ್ತಿಸುಧಾರ್ಣವ.

ಅಜಿತಪುರಾಣದ ಹಸ್ತಪ್ರತಿಗಳು : ಅಜಿತ ಪುರಾಣದ ಏಳು ಹಸ್ತಪ್ರತಿಗಳು ನಮ್ಮ ಗಮನಕ್ಕೆ ಬಂದಂತೆ ದೊರೆತಿವೆ. ಅವುಗಳ ಸೂಚಿಯನ್ನು ಕೊನೆಗೆ ನೀಡಲಾಗಿದೆ.

ಅಜಿತಪುರಾಣವು ಒಂದು ಧಾರ್ಮಿಕ ಕಾವ್ಯವಾದರೂ ತನ್ನದೇ ಆದ ವೈಶಿಷ್ಟ್ಯದಿಂದ ಮನಸೆಳೆಯುತ್ತದೆ. ಇದರ ಶುದ್ಧಪಾಠದಿಂದ ಕೂಡಿದ ಆವೃತ್ತಿ ಪ್ರಕಟವಾದಲ್ಲಿ ಎಷ್ಟೋ ಹೊಸ ವಿವರಗಳ ಬಗೆಗೆ ಬೆಳಕು ಚೆಲ್ಲಲು ಸಾಧ್ಯವಾಗುತ್ತದೆ. ಪ್ರಕೃತ ಬರಹದಲ್ಲಿ ಈ ಕಾವ್ಯದ ಸಂಕ್ಷಿಪ್ತ ಪಕ್ಷಿನೋಟವನ್ನಷ್ಟೇ ನೀಡಲಾಗಿದೆ. ಬೇರೆ ಬೇರೆ ಮುಖಗಳಲ್ಲಿಯೂ ಅಧ್ಯಯನ ನಡೆಯಬೇಕಾದ ಅಗತ್ಯ ಬಹಳವಾಗಿದೆ.

ಅಜಿತತೀರ್ಥಂಕರ ಪುರಾಣತಿಲಕದ ಹಸ್ತಪ್ರತಿಗಳ ಸೂಚಿ

ಕ್ರಮ ಸಂಖ್ಯೆ ಹಸ್ತಪ್ರತಿ ಸಂಖ್ಯೆ ಓಲೆ/ಕಾಗದ ಗರಿ/ಹಾಳೆ ಲಿಪಿ ಸಮಗ್ರ/ಅಸಮಗ್ರ ಹಸ್ತಪ್ರತಿ ಪ್ರತಿಯಾದ ಕಾಲ ಹೆಚ್ಚಿನ ವಿವರಗಳು ಈಗ ಇರುವ ಸ್ಥಳ

1 ಕೆ 8 ಓಲೆ 1–61 ಕನ್ನಡ ಸಮಗ್ರ 59, 61 ನೆಯ ಸಂಖ್ಯೆಯ ಪತ್ರಗಳು ಹರಿದಿವೆ. ಗರಿಯ ಅಂಚುಗಳು ಮುರಿದಿವೆ.
ಕಅಸಂ, ಮೈವಿವಿ

2 ಕೆ ಎ 16 ಕಾಗದ 1–105 ಕನ್ನಡ ಸಮಗ್ರ ಕ್ರಿ.ಶ. ಜನವರಿ 1883 ಅಲ್ಲಲ್ಲಿ ಪದಗಳು ಲುಪ್ತವಾಗಿವೆ. ಇದನ್ನು ಪ್ರತಿ ಮಾಡಿದವರು ಡಿ. ಪಿ. ಐ ಆಫೀಸಿನ ಚಂದ್ರಶೇಖರ ಶಾಸ್ತ್ರಿ ಎಂಬುದಾಗಿ ತಿಳಿಯುತ್ತದೆ. ಈ ವಿವರ ಇಂಗ್ಲಿಷ್‌ನಲ್ಲಿದೆ.
ಕಅಸಂ, ಮೈವಿವಿ

3 ಕೆ ಎ 53 ಕಾಗದ 1–190 ಕನ್ನಡ ಕ್ರಿ.ಶ. 1885–1905 ಹಾಳೆಯ ಒಂದು ಬದಿಯಲ್ಲಿ ಮಾತ್ರ ಬರಹವಿದೆ. 1–100 ಪುಟಗಳ ಬರಹವನ್ನು ಒಬ್ಬರು, 100–162 ರವರೆಗೂ ಒಬ್ಬರು, 162–190 ರ ವರೆಗೂ ಮತ್ತೊಬ್ಬರು ಪ್ರತಿ ಮಾಡಿದಂತೆ ತಿಳಿದುಬರುತ್ತದೆ. ಈ ಕಾಗದದ ಬಹುಪಾಲು ಭಾಗವನ್ನು ಪ್ರತಿ ಮಾಡಿದವರು ಪದ್ಮರಾಜ ಪಂಡಿತ ಎಂದು ತಿಳಿದುಬರುತ್ತದೆ. ಇವರು ಮೈಸೂರು ಶಾಸನ ಇಲಾಖೆಯಲ್ಲಿ ಲೂಯಿ ರೈಸರ ಮಾರ್ಗದರ್ಶನದಲ್ಲಿ ಕಾರ್ಯನಿರ್ವಹಿಸುತ್ತಿದ್ದರು. ಆದ ಕಾರಣ ಈ ಹಸ್ತಪ್ರತಿ ಪ್ರತಿಯಾದ ಕಾಲ ಕ್ರಿ.ಶ. ಸು 1885–1905 ರೊಳಗೆ ಎಂಬುದು ಖಚಿತ. ಈ ಕಾಗದದ ಹಸ್ತಪ್ರತಿಗೆ ಮೂಲವಾದ ಓಲೆಗರಿ ಹಸ್ತಪ್ರತಿಯನ್ನು ಪ್ರತಿಮಾಡಿದವನು ಮೈಸೂರು ದೊರೆ ಚಿಕ್ಕದೇವರಾಜರ ರಾಯಸದ ಲಕ್ಷ್ಮೀಪತಿ ಎಂಬಾತ. ಈತ ತಾನು ಪ್ರತಿ ಮಾಡಿದ ಕಾಲವನ್ನು ಶಕ 1585, ಶೋಭಕೃತ್ ಸಂವತ್ಸರ, ಭಾದ್ರಪದ ಶುಕ್ಲ ತೃತೀಯ, ಬಾಲೇಂದ್ರಾತ್ಮಜ ಎಂದು ಹೇಳಿಕೊಂಡಿದ್ದಾನೆ. ಇದು ಚಾಂದ್ರಮಾನ

ಪಂಚಾಂಗದಂತೆ ಕ್ರಿ.ಶ. 25-8-1663, ಸೋಮವಾರಕ್ಕೆ ಸರಿಹೊಂದುತ್ತದೆ. ಬಾಲೇಂದ್ರಾತ್ಮಜ ಎಂಬ ಶಬ್ದದ ಅರ್ಥ ಸ್ಪಷ್ಟವಿಲ್ಲ. ಬಹುಶಃ ಸೋಮವಾರ ಎಂಬ ಅರ್ಥದ ಶಬ್ದ ಇದಾಗಿರಬೇಕು. ಇಲ್ಲವೇ ಸೋಮನ ಮಗ ಬುಧನಾದ ಕಾರಣ ಬುಧವಾರವಿರಬೇಕು. ಆದರೆ ಈ ತೇದಿ ಸೋಮವಾರಕ್ಕೆ ಮಾತ್ರ ಸರಿಹೊಂದುತ್ತದೆ. ಈ ಕಾವ್ಯದ [ಬಹುಶಃ] ಮೂಲ ಓಲೆಪ್ರತಿಯನ್ನು ಪ್ರತಿಮಾಡಿದವನು ಬ್ರಾಹ್ಮಣ ಕವಿಯಾದ ರಾಯಸದ ಲಕ್ಷ್ಮೀಪತಿ. ತನ್ನ ಇತಿ ವೃತ್ತವನ್ನು ಹೇಳಿಕೊಳ್ಳುವಾಗ 2, 3 ಪದ್ಯಗಳಲ್ಲಿ ಚಿಕದೇವರಾಜರನ್ನು ಹೊಗಳಿ ಬರೆದಿರುವ ಪದ್ಯಗಳಿವೆ.
ಕಅಸಂ, ಮೈವಿವಿ

4 ಎನ್ 650 ಓಲೆ 1-61 ಕನ್ನಡ ಸಮಗ್ರ ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯದ ಕೆ 8 ಹಸ್ತಪ್ರತಿಯ ಮೈಕ್ರೋಫಿಲಂ ಕಅಸಂ, ಮೈವಿವಿ

5 ಎನ್ 259 ಓಲೆ 1-147 ಕನ್ನಡ ಅಸಮಗ್ರ ಮೈಕ್ರೋಫಿಲಂ ಪ್ರತಿ. ಇದು ಎಲ್ಲಿನದು ಸೂಚಿಯಲ್ಲಿ ದಾಖಲಿಸಿಲ್ಲವಾದರೂ ಬಲುಮಟ್ಟಿಗೆ ಶ್ರವಣಬೆಳಗೊಳ ಜೈನಮಠದ ಕೆ 51 ರ ಮೈಕ್ರೋಫಿಲಂ ಪ್ರತಿ ಇರಬಹುದೇ ವಿಚಾರಣೀಯ ಕಅಸಂ, ಮೈವಿವಿ

6 ಕೆ 51 ಓಲೆ 1-147 ಕನ್ನಡ ಅಸಮಗ್ರ ಇದನ್ನು ಪ್ರತಿಮಾಡಿದವನು ವೈದಿಕ ಮತದ ಶ್ರೀವೈಷ್ಣವ ಬ್ರಾಹ್ಮಣನೆಂದು ಹೇಳಬಹುದು. ಹಸ್ತಪ್ರತಿಯ ಪ್ರಾರಂಭದಲ್ಲಿ ಮಹಾಲಕ್ಷ್ಮೀ, ರಾಮಾನುಜರ ಸ್ಮರಣೆ ಇದೆ. ಕೆಲವು ಪತ್ರಗಳು ತುಂಡಾಗಿವೆ. ಅಲ್ಲಲ್ಲಿ ಹುಳು ಹೊಡೆದಿದೆ. ಶ್ರವಣಬೆಳಗೊಳ ಜೈನಮಠ

7 528 ಓಲೆ 30 ಕನ್ನಡ ಅಸಮಗ್ರ ಸಾಮಾನ್ಯವಾಗಿ ಶುದ್ಧಪ್ರತಿ ಜೈನಮಠ, ಮೂಡಬಿದರೆ

ಆಧಾರಸೂಚಿ :

* ಅಜಿತ ತೀರ್ಥಂಕರ ಪುರಾಣ ತಿಲಕಂ–(ಸಂ) ಮಂ.ಆ. ರಾಮಾನುಜ ಅಯ್ಯಂಗಾರ್, ಕರ್ಣಾಟಕ ಕಾವ್ಯಕಲಾನಿಧಿ ಗ್ರಂಥಮಾಲೆ–26, ಮೈಸೂರು–1910

* ಅಜಿತ ತೀರ್ಥಂಕರ ಪುರಾಣ ತಿಲಕಂ–(ಸಂ) ಎಚ್. ದೇವೀರಪ್ಪ ಮತ್ತು ಎಂ.ಸಿ. ಪದ್ಮನಾಭಶರ್ಮ, ಮೈಸೂರು–1959

* ಅಜಿತ ತೀರ್ಥಂಕರ ಪುರಾಣ ತಿಲಕಂ–ಎನ್. ಅನಂತರಂಗಾಚಾರ್, ಅನಂತನಿಧಿ {ಡಾ. ಎನ್. ಅನಂತರಂಗಾಚಾರ್ ಅವರ ಸಂಸ್ಮರಣ ಗ್ರಂಥ [ಮತ್ತು ಆಯ್ದ ಲೇಖನಗಳ ಸಂಪುಟ]}, (ಪ್ರಸಂ) ಟಿ.ವಿ.ವೆಂಕಟಾಚಲಶಾಸ್ತ್ರೀ, ಡಾ. ಎನ್. ಅನಂತರಂಗಾಚಾರ್ಯರ ಶತಮಾನೋತ್ಸವ ಸಮಿತಿ, ಮೈಸೂರು–2004, ಪುಟ 152–158

* ಚಾಮುಂಡರಾಯ ಪುರಾಣದ ಅಜಿತನಾಥ ಚರಿತ್ರೆ–ಎನ್. ಎಸ್. ತಾರಾನಾಥ, ಶೋಧನಲೋಕ, ತಳುಕಿನ ವೆಂಕಣ್ಣಯ್ಯ ಸ್ಮಾರಕ ಗ್ರಂಥಮಾಲೆ, ಬೆಂಗಳೂರು–2021, ಪುಟ 102–112

* ದಾನಚಿಂತಾಮಣಿ ಅತ್ತಿಮಬ್ಬೆ–ತೀ.ನಂ. ಶ್ರೀಕಂಠಯ್ಯ, ತೀ.ನಂ. ಶ್ರೀ ಸಮಗ್ರ ಗದ್ಯ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು–2006, ಪುಟ 154–167

* ರನ್ನ–ಡಿ.ಎಲ್. ನರಸಿಂಹಾಚಾರ್, ಪೀಠಿಕೆಗಳು, ಲೇಖನಗಳು, ಡಿ.ವಿ.ಕೆ. ಮೂರ್ತಿ, ಮೈಸೂರು–2005, ಪುಟ 514–516

* ರನ್ನನ ಅಜಿತ ತೀರ್ಥಂಕರ ಪುರಾಣ ತಿಲಕ : ಐತಿಹಾಸಿಕ ಆಕರ–ಟಿ.ವಿ. ವೆಂಕಟಾಚಲಶಾಸ್ತ್ರೀ, ಶಾಸ್ತ್ರೀಯ, ಸಂಪುಟ–3, ಸಪ್ನ ಬುಕ್ ಹೌಸ್, ಬೆಂಗಳೂರು–1999, ಪುಟ 480–488

* ರನ್ನ ಕವಿಯ ಕೃತಿಪಾಠಗಳು ಮತ್ತು ಕನ್ನಡ ಲಕ್ಷಣಗ್ರಂಥಗಳು, ಸಂಕಲನ ಗ್ರಂಥಗಳು– ಟಿ.ವಿ. ವೆಂಕಟಾಚಲಶಾಸ್ತ್ರೀ, ಸಾಹಿತ್ಯಶೋಧ {ಶಾಸ್ತ್ರೀಯ, ಸಂಪುಟ–6}, ಸಪ್ನ ಬುಕ್ ಹೌಸ್, ಬೆಂಗಳೂರು–2005, ಪುಟ 43–67

* ರನ್ನಕವಿ ಕೃತಿಗಳು– ಟಿ.ವಿ. ವೆಂಕಟಾಚಲಶಾಸ್ತ್ರೀ, ಕವಿ ಚಕ್ರವರ್ತಿ ರನ್ನ ಪ್ರತಿಷ್ಠಾನ, ಮುಧೋಳ, ಬಾಗಲಕೋಟೆ ಜಿಲ್ಲೆ–2015

* ಗೋವಿಂದ ಪೈ ಸಂಶೋಧನ ಸಂಪುಟ–(ಸಂ) ಹೆರಂಜೆ ಕೃಷ್ಣಭಟ್ಟ, ಮುರಳೀಧರ ಉಪಾಧ್ಯ ಹಿರಿಯಡಕ, ರಾಷ್ಟ್ರಕವಿ ಗೋವಿಂದ ಪೈ ಸಂಶೋಧನ ಕೇಂದ್ರ, ಉಡುಪಿ–1995

* ಕನ್ನಡ ಚಿತ್ರಕಾವ್ಯ – ಟಿ.ವಿ. ವೆಂಕಟಾಚಲಶಾಸ್ತ್ರೀ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು– 2011, ದ್ವಿತೀಯ ಮುದ್ರಣ

* ಕನ್ನಡ ಛಂದಃಸ್ವರೂಪ–ಟಿ.ವಿ. ವೆಂಕಟಾಚಲಶಾಸ್ತ್ರೀ, ಡಿ.ವಿ.ಕೆ. ಮೂರ್ತಿ ಪ್ರಕಾಶನ, ಮೈಸೂರು–2014, ಆರನೆಯ ಪರಿಷ್ಕೃತ ಮುದ್ರಣ

• Bharatanatya : A Critical Study - R.Satyanarayana, Sri Varalakshmi Academies of Fine Arts, Mysore- 1969

• Studies in Indian Dance - R. Satyanarayana, Sri Varalakshmi Academy Publication Series, Mysore-1970

* * *

ರನ್ನ ಕಂದ

– ಅನಿತ. ಕೆ. ವಿ.,
ಮೌಂಟ್ ಕಾರ್ಮೆಲ್ ಕಾಲೇಜು, ಬೆಂಗಳೂರು

ಶ್ರೀವಾಗ್ದೇವಿಗೆ ಶಬ್ದದಿ
ನಾವಾವಿಂದ್ರಿಯದ ವಿಷಯಮಂ ಶ್ರೋತ್ರದೊಳು
ದ್ಭಾವಿಪ ನಿರ್ಮಳಮೂರ್ತಿಗೆ
ಳಾವಂದ್ಯೆಗೆ ಶಾಸ್ತ್ರಮುಖದೊಳವನತನಪ್ಪೆಂ

– ಕೇಶೀರಾಜ

ಪೂರ್ವಪೀಠಿಕೆ

ರನ್ನ ಕಂದ ಕನ್ನಡದ ಪ್ರಥಮ ನಿಘಂಟು ಎಂದು ಪರಿಭಾವಿಸಲಾಗಿದೆ. ಹತ್ತನೆಯ ಶತಮಾನದಲ್ಲಿ ಪ್ರಸಿದ್ಧ ಕವಿಚಕ್ರವರ್ತಿಗಳಲ್ಲಿ ಒಬ್ಬನಾದವನು ರನ್ನ. 'ರನ್ನಕಂದ'ವನ್ನು ರನ್ನನೇ ರಚಿಸಿರುವನೆಂದು ತಿಳಿಯಲಾಗಿದೆ. ಮೊದಲಿಗೆ ರನ್ನಕಂದದ ಹನ್ನೊಂದು ಕಂದಪದ್ಯಗಳು ತ. ಸು. ಶಾಮರಾಯರಿಗೆ ಲಭ್ಯವಾಗಿ ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ ಸಂಪುಟ ೩೧, ಸಂಚಿಕೆ ೩–೪ರಲ್ಲಿ ಮೊದಲಿಗೆ ಪ್ರಕಟಿಸಿದರು. ಇದು ತೀರ ಅಶುದ್ಧ ಹಾಗೂ ಸ್ಖಾಲಿತ್ಯದಿಂದ ಕೂಡಿತ್ತು. ನಂತರ ಈ ಕುರಿತು ವಿದ್ವಾಂಸರು ಸಂಶೋಧಿಸಿದರು. ೧೯೭೪ರಲ್ಲಿ ಎಂ. ಎಂ. ಕಲಬುರ್ಗಿ ಅವರು ಕೊಲ್ಲಾಪುರದ ಎರಡು ಓಲೆಪ್ರತಿಗಳನ್ನು ಬಳಸಿ, ಒಟ್ಟು ೪೫ ಕಂದಪದ್ಯಗಳ ಸ್ವರೂಪದ ಕೃತಿಯನ್ನು ಪ್ರಕಟಿಸಿದರು. ಹಳಗನ್ನಡ ಮತ್ತು ತಮಿಳು ಪದಗಳ

ಮಿಶ್ರಣವನ್ನು ಈ ನಿಘಂಟಿನಲ್ಲಿ ಕಾಣಬಹುದಾಗಿದೆ. ಇದೊಂದು ಕಾವ್ಯಮಾದರಿಯಲ್ಲಿ ಪರಸ್ಪರ ಅರ್ಥಗಳನ್ನು ಧ್ವನಿಸುವ ನಿಘಂಟು ಸ್ವರೂಪವಾಗಿದೆ. ಇದು ನಮ್ಮ ಸಾಹಿತ್ಯದಲ್ಲಿಯೇ ವಿಭಿನ್ನ ಮಾದರಿಯಾಗಿದೆ. ಮುಖ್ಯವಾಗಿ ಈ ನಿಘಟ್ಟಿನಲ್ಲಿ ಲಭ್ಯವಿರುವ ೪೫ ಕಂದಪದ್ಯಗಳ ಶಬ್ದಾರ್ಥವನ್ನು ಸರಳವಾಗಿ ಅರಿತುಕೊಳ್ಳಲು ಈ ಲೇಖನದಲ್ಲಿ ಪ್ರಯತ್ನಿಸಲಾಗಿದೆ. ಇದೊಂದು ಅಧ್ಯಯನ, ಸಂಶೋಧನೆ ಹಾಗೂ ರನ್ನಕಂದದ ವರ್ತಮಾನದ ನೋಟ.

ನಮ್ಮ ಪ್ರಾಚೀನ ಕವಿಗಳು ಗದ್ಯವಾಗಿ ಹೇಳಿರುವುದು ನೆನಪಿನಲ್ಲಿರುವುದಿಲ್ಲ. ಆದರೆ ಛಂದೋಬದ್ಧವಾಗಿ, ಪದ್ಯವಾಗಿ ಹೇಳಿರುವುದು ನೆನಪಿನಲ್ಲಿ ಉಳಿಯುತ್ತವೆ. "ಕವನ ನೆನಪಿಗೆ ಸುಲಭ ಮಂಕುತಿಮ್ಮ" ಎಂಬ ಡಿ.ವಿ.ಜಿ. ಅವರ ಮಾತನ್ನು ಇಲ್ಲಿ ಸ್ಮರಿಸಬಹುದು. ವೇದಗ್ರಂಥಗಳು, ರಾಮಾಯಣ, ಮಹಾಭಾರತ, ಶಾಸ್ತ್ರಗಳು ಪದ್ಯರೂಪದಲ್ಲಿರುವುದನ್ನು ಗಮನಿಸಬಹುದು. ನಮ್ಮ ಇತಿಹಾಸವನ್ನು ಛಂದೋಬದ್ಧ ಪದ್ಯಗಳಲ್ಲಿ, ಜಾನಪದ ಗೀತೆಗಳಲ್ಲಿ, ದಾಖಲಿಸಿರುವುದು ಸಹ ಗಮನಾರ್ಹ. ಸಾಹಿತ್ಯ ಬರವಣಿಗೆಯಲ್ಲಿ ದಾಖಲಾಗುವ ಮುನ್ನವೇ ನಮ್ಮನ್ನು ತಲುಪಲು ಅಲ್ಲಿನ ಸರ್ವ ಛಂದ್ಸು ಕಾರಣ. ಹೀಗಾಗಿಯೇ ರನ್ನನೂ 'ರನ್ನ ಕಂದ' ಎಂಬ ನಿಘಂಟನ್ನು ಕಂದ ಪದ್ಯದಲ್ಲಿ ರಚಿಸಿದ್ದಾನೆಂದು ಅಭಿಪ್ರಾಂಯ ಪಡಬಹುದಾಗಿದೆ.

ನಿಘಂಟು ಸಾಹಿತ್ಯದ ಹಿನ್ನೇಲೆ :

ನಿಘಂಟಿನ ಕುರಿತು ಸಾಕಷ್ಟು ಲೇಖನ, ಸಂಶೋಧನೆಗಳು ನಡೆದಿವೆ. ಅಲ್ಲೆಲ್ಲಾ ನಿಘಂಟಿನ ಕುರಿತು ಚರಿತ್ರೆಯನ್ನು ಸ್ಪಷ್ಟವಾಗಿ ಉಲ್ಲೇಖಿಸಿದ್ದಾರೆ. ಅದರ ಸಾರ ವಿಚಾರವನ್ನು ಮಾತ್ರ ಈ ಲೇಖನದ ಪೀಠಿಕೆಯಾಗಿ ಬಳಸಿಕೊಳ್ಳಬಹುದು. ಪ್ರಪಂಚದಲ್ಲಿಯೇ ಅತಿ ಹೆಚ್ಚು ಹಿನ್ನೆಲೆಯನ್ನು ಹೊಂದಿರುವ ನಮ್ಮ ಭಾರತೀಯ ಸಾಹಿತ್ಯದಲ್ಲಿ ಮೊದಲಿಗೆ ಸಂಸ್ಕೃತ ಭಾಷೆಯಲ್ಲಿ ಈ ನಿಘಂಟು ಸಾಹಿತ್ಯ ಸೃಷ್ಟಿಯಾಯಿತು. ಇದನ್ನೂ ಶಾಸ್ತ್ರದ ಸ್ಥಾನ ನೀಡುವ ಮೂಲಕ ಈ ಪ್ರಕಾರಕ್ಕೂ ಗೌರವ ನೀಡಿದ್ದರು. 'ಕೋಶ ಓದು, ದೇಶ ನೋಡು' ಎಂಬ ಜನಸಾಮಾನ್ಯರ ಗಾದೆಯಲ್ಲಿಯೇ ಈ ನಿಘಂಟಿನ ಅರ್ಥವು ಸೃಷ್ಟಿಯಾಯಿತು. ಹಾಗಾದರೆ ಈ ನಿಘಂಟು ಎಂದರೇನು ಎಂಬ ಪ್ರಶ್ನೆಯನ್ನು ಗ್ರಹಿಸಿದರೆ ಪದಕ್ಕೆ ಅರ್ಥಗಳ ಸೃಷ್ಟಿಯೆಂಬ

ತೀರ್ಮಾನಕ್ಕೆ ಬರಬಹುದು. ವ್ಯಾಡಿಯು ತನ್ನ ಸಂಸ್ಕೃತ ಕೋಶದಲ್ಲಿ "ಯಸ್ಮಾದರ್ಥಾನ್ನಿಘಂಟಯತಿ ತಸ್ಮಾನ್ನಿಘಂಟುಃ", ಯಾಸ್ಕನು ತನ್ನ ನಿರುಕ್ತದಲ್ಲಿ "ಸಮಾಮ್ನಯಃ ಸಮಾಮ್ನಾತಃ ಸ ವ್ಯಾಖ್ಯಾತವ್ಯಃ ತಮಿಮಂ ಸಮಾಮ್ನಾಯಂ ನಿಘಂಟವ ಇತ್ಯಾಚಕ್ಷತೇ" ಎಂದು ವಿವಿಧ ಬಗೆಯಲ್ಲಿ ನಿಘಂಟಿನ ಅರ್ಥವನ್ನು ವ್ಯಾಖ್ಯಾನಿಸಿದ್ದಾರೆ. ವಾಚಸ್ಪತಿ ತನ್ನ ಸಂಸ್ಕೃತ ಕೋಶದಲ್ಲಿ "ಪ್ರಾಯೇಣೋಪದಿಶ್ಯತೇ ತತ್ರ ನಿಘಂಟುಶಬ್ದ ಪ್ರಸಿದ್ಧಃ", ಭರತನು ತನ್ನ ನಾಟ್ಯಶಾಸ್ತ್ರದಲ್ಲಿ "ನಾನಾನಾಮಾಶ್ರಯೋತ್ಪನ್ನಂ ನಿಘಂಟು ನಿಗಮಾನ್ವಿತಂ, ಧಾತ್ವರ್ಥ ಹೇತು ಸಂಯುಕ್ತಂ ನಾನಾಸಿದ್ಧಾಂತ ಸಾಧಿತಂ" ಎಂದು ಇನ್ನೂ ವಿವಿಧ ಬಗೆಯಲ್ಲಿ ನಿಘಂಟು ಕುರಿತು ವ್ಯಾಖ್ಯಾನಗಳನ್ನು ಗಮನಿಸಬಹುದು.

"A book containing the words of language arranged alphabetically with explanations of their meanings; a lexicon; a vocabulary; a word book." (Shorter Oxford Dictionary, P. 21)

"The lexicon is an inventory of the free forms of a language arranged systematically, and against each form are shown their functional load of meaning in each distinct meaningful situation." (S.M. Katre; Lexicography)

ಪ್ರಪಂಚದ ನಿಘಂಟು ಶಾಸ್ತ್ರಗಳನ್ನು ಅಧ್ಯಯನ ಮಾಡಿದ ವಿದ್ವಾಂಸರು ಅವುಗಳ ರಚನೆಯ ಆಧಾರದಲ್ಲಿ ಮೊದಲ ನಿಘಂಟುಗಳನ್ನು ಗುರುತಿಸಿದ್ದಾರೆ. ಸಂಸ್ಕೃತದಲ್ಲಿ ಕ್ರಿ. ಪೂರ್ವ ಕಾಲಘಟ್ಟದ ಕೆಲವು ಶಬ್ದಕೋಶಗಳು ಲಭ್ಯ ಇರುವುದನ್ನು ಗುರುತಿಸಬಹುದು. ನಂತರ ಅತಿ ಹೆಚ್ಚು ಪ್ರಥಮಗಳಲ್ಲಿ ಉಲ್ಲೇಖಿತವಾಗಿರುವುದು ಗ್ರೀಕ್ ಮತ್ತು ಲ್ಯಾಟಿನ್ ಭಾಷೆಯ ಶಬ್ದಕೋಶಗಳು. ನಂತರದಲ್ಲಿ ಇಂಗ್ಲಿಷ್ ಭಾಷೆಯ ನಿಘಂಟುಗಳು ಲಭ್ಯವಾಗಿವೆ. ಸಂಸ್ಕೃತದಲ್ಲಿ ವೈದಿಕ ನಿಘಂಟು ಮೊದಲೆಂದು ಗುರುತಿಸುತ್ತಾರೆ.

ಸಂಸ್ಕೃತ ಮತ್ತು ಕನ್ನಡದಲ್ಲಿ ರಚನೆಯಾದ ನಿಘಂಟುಗಳನ್ನು ಈ ರೀತಿಯಲ್ಲಿ ವಿಂಗಡಿಸಬಹುದು. ಕಾವ್ಯ ಮಾದರಿಯಲ್ಲಿ ಛಂದೋನಿಯಮಬದ್ಧವಾಗಿ ಶ್ಲೋಕ, ಸೂತ್ರಗಳಲ್ಲಿ ನಿರೂಪಿತ ನಿಘಂಟುಗಳು, ಸಂಸ್ಕೃತ ಶಬ್ದಗಳಿಗೆ ಕನ್ನಡ ಟೀಕು ರಚನೆಯಾದ ನಿಘಂಟುಗಳು, ಪ್ರಾದೇಶಿಕ, ವೈದ್ಯಕೀಯ, ಪ್ರಾಣಿ, ಪಕ್ಷಿ, ವಸ್ತುಗಳು, ಧರ್ಮ, ಜಾತಿ ಹಾಗೂ ಜನಾಂಗ

ಆಧಾರಿತ ಬಳಕೆಯ ಪದಗಳ ಸಂಗ್ರಹಿತ ನಿಘಂಟುಗಳು, ಕನ್ನಡ ಪದಗಳಿಗೆ ಇಂಗ್ಲಿಷ್, ಇತರ ಭಾಷೆಗಳ ಅರ್ಥಗಳು ಹೊಂದುವ ಪರಸ್ಪರ ಶಬ್ದಕೋಶಗಳು ಹೀಗೆ ಇಂದಿಗೂ ಜಾನಪದ, ಪ್ರಾದೇಶಿಕ, ಕವಿ, ಕಾವ್ಯ ಮೊದಲಾದಂತೆ ಹೊಸ ಸ್ವರೂಪದ ನಿಘಂಟುಗಳು ಸೃಷ್ಟಿಯಾಗುತ್ತಿವೆ. ಬೇಂದ್ರೆ, ಕುವೆಂಪು ಬಳಸಿದ ಹೊಸ ಸೃಷ್ಟಿಯ ಪದಗಳನ್ನೂ ಹೀಗೆ ಗುರುತಿಸಬಹುದು.

ಇದುವರೆಗೂ ಉಲ್ಲೇಖಿತವಾದ ನಿಘಂಟುಗಳು ಈ ರೀತಿಯಲ್ಲಿವೆ. ಹತ್ತನೇ ಶತಮಾನದ ರನ್ನನ 'ರನ್ನಕಂದ', ೧೧೪೫ರ ಎರಡನೇ ನಾಗವರ್ಮ ವಿರಚಿತ ಅಭಿದಾನ ವಸ್ತುಕೋಶ, ಅಭಿಧಾನ ರತ್ನಮಾಲಾ ಕರ್ಣಾಟಕ ಟೀಕೆ, ೧೨೬೦ರ ಕೇಶಿರಾಜನ ಶಬ್ದಮಣಿ ದರ್ಪಣಂ, ಅಮರಕೋಶದ ಕನ್ನಡ ವ್ಯಾಖ್ಯಾನ ರಚಿಸಿದ ೧೩೦೦ರ ಅಮರಸಿಂಹನ ನಾಚಿರಾಜೀಯ, ೧೩೦೦ರ ಅಮೃತನಂದಿಯ ಅಕಾರಾದಿ ವೈದ್ಯನಿಘಂಟು, ೧೩೯೮ರ ಎರಡನೇ ಮಂಗರಾಜನ 'ಅಭಿನವಾಭಿಧಾನಂ', ೧೪೦೦ರಲ್ಲಿ ರಚಿತವಾದ ಕನ್ನಡದ ಮೊದಲ ಗದ್ಯ ನಿಘಂಟು ಎಂದು ಕರೆಯುವ ಕರ್ಣಾಟಕ ಶಬ್ದಸಾರಂ, ಕರ್ಣಾಟಕ ನಿಘಂಟು, ೧೪೫೦ರ ಚತುರಾಸ್ಯ ಬೊಮ್ಮರಸನ ಚತುರಾಸ್ಯ ನಿಘಂಟು, ೧೫೦೦ರ ಚೆನ್ನವೀರನ ಕಾಶಕೃತ್ಸ್ನ ಧಾತುವ್ಯಾಖ್ಯಾ, ಇದೇ ಕಾಲದ ಧನ್ವಂತರಿಯ ನಿಘಂಟು, ೧೫೩೦ರ ಲಿಂಗಮಂತ್ರಿಯ ಕಬ್ಬಿಗರ ಕೈಪಿಡಿ, ೧೫೬೦ರ ವಿರಕ್ತ ತೋಂಟದಾರ್ಯನ ಕರ್ಣಾಟಕ ಶಬ್ದಮಂಜರಿ, ೧೬೦೦ರ ಕುಮಾರವ್ಯಾಸನ ಭಾರತ ನಿಘಂಟು, ಶೃಂಗಾರ ಕವಿಯ ಕರ್ಣಾಟಕ ಸಂಜೀವನಂ, ಶಬ್ದರತ್ನಾಕರ, ಪದ್ಯ ನಾನಾರ್ಥ, ನಾನಾರ್ಥ ಕಂದ, ೧೬೪೦ರ ಸೂರ್ಯಕವಿಯ ಕವಿಕಂಠಹಾರ, ೧೭೪೮ರ ಅಕ್ಷರಾದಿ ನಿಘಂಟು, ೧೭೭೫ರ ಲಕ್ಷ್ಮಣ ಪಂಡಿತನ ಅಕಾರಾದಿ ನಿಘಂಟು, ೧೮೧೦ರ ಚಂದ್ರಸಾಗರವರ್ಣಿಯ ಶಬ್ದಾರ್ಥ ಮಂಜರಿ, ೧೮೩೦ರ ಶ್ರೀರಂಗಪಟ್ಟಣದ ಕೃಷ್ಣಮಾಚಾರ್ಯರ ಶಬ್ದಮಂಜರಿ, ಕಾಲ, ಕರ್ತೃ ತಿಳಿಯದ ಇಂದ್ರದೀಪಿಕಾ ನಿಘಂಟು, ಏಕಾಕ್ಷರ ನಿಘಂಟು, ತತ್ತ್ವಾಭಿನಯ ನಿಘಂಟು, ಧನಂಜಯ ನಿಘಂಟು, ಮದನಾರಿ ವೈದ್ಯ ನಿಘಂಟು, ಪೂರ್ಣಾನಂದ ಅವಧೂತ ಶಿವಯೋಗಿಯ ಕೋಶ ಪ್ರತಿಕೋಶದ ಟೀಕು. ಇವೆಲ್ಲವೂ ನಮ್ಮ ಪಂಡಿತರಿಂದ, ಕವಿಗಳಿಂದ ರಚನೆಯಾದರೆ, ಭಾರತಕ್ಕೆ ಬಂದ ವಿದೇಶಿ ವಿದ್ವಾಂಸರಿಂದ ರಚನೆಯಾದ ೧೮೩೨ರ ರೆ. ರೀವ್ ಅವರ ಕನ್ನಡ ಇಂಗ್ಲಿಷ್ ನಿಘಂಟು (ಇದರಲ್ಲಿ ಕನ್ನಡ, ಸಂಸ್ಕೃತ ಶಬ್ದಗಳಿಗೆ ಇಂಗ್ಲಿಷ್ ಅರ್ಥವನ್ನು ನೀಡಿದೆ), ೧೮೫೮ರ

ಡೇನಿಯಲ್ ಸ್ಯಾಂಡರ್‌ಸನ್ ರೆ. ರೀವ್ ಅವರ ಕನ್ನಡ ಇಂಗ್ಲಿಷ್ ನಿಘಂಟು, ೧೮೭೧ರಲ್ಲಿ ಪ್ರಕಟಿಸಿದ ಜಾನ್ ಗ್ಯಾರೆಟ್ ಅವರ ಕನ್ನಡ ಇಂಗ್ಲಿಷ್ ನಿಘಂಟು, ದೇಸಿಯ ವಿದ್ವಾಂಸರಾದ ೧೮೭೪ರಲ್ಲಿ ಪ್ರಕಟಿಸಿದ ವಿಠಲವೋಹರೆ ಅವರ ಶಬ್ದಸಂಗ್ರಹ, ೧೮೮೫ರಲ್ಲಿ ಪ್ರಕಟಿತ ರಾಮಸ್ವಾಮಿಶಾಸ್ತ್ರಿ ಮತ್ತು ಹೆಸರುಘಟ್ಟದ ಹೊನ್ನಪ್ಪ ಅವರ ಕರ್ಣಾಟಕ ಕಲ್ಪದ್ರುಮ, ೧೮೯೦ರಲ್ಲಿ ಪ್ರಕಟಿಸಿದ ಗಂಗಾಧರ ಮಡಿವಾಳೇಶ್ವರ ತುರುಮುರಿಯವರ ಶಬ್ದಮಂಜರಿ, ೧೮೯೧ರ ನರಸಿಂಗರಾವ್ ಅವರ ಕಿಸಂವಾರ್ ಗ್ಲಾಸರಿ, ೧೮೯೧ರ ಜಯರಾಯಾಚಾರ್ಯರ ಕರ್ಣಾಟಕ ಭಾಷಾಕರ, ೧೮೯೪ರಲ್ಲಿ ಪ್ರಕಟವಾದ ರೆ. ಎಫ್. ಕಿಟೆಲ್ಲರ ಕನ್ನಡ ಇಂಗ್ಲಿಷ್ ನಿಘಂಟು (ವ್ಯಾಕರಣ ದೃಷ್ಟಿಯಿಂದ ವಿಭಿನ್ನ ನಿಘಂಟು - ಇದನ್ನು ಆಧರಿಸಿ, ಕನ್ನಡದಲ್ಲಿ ಹಲವು ನಿಘಂಟುಗಳು ಬಂದಿವೆ), ಕನ್ನಡ ಸಾಹಿತ್ಯ ಪರಿಷತ್ತಿನ ಷಟ್ಪದೀ ಕಾವ್ಯಗಳ ನಿಘಂಟು, ಮಠದ ರುದ್ರಯ್ಯನವರ ನಿಘಂಟು, ತಿರುಮಕೂಡ್ಲು ಶಾಮಣ್ಣನವರ ನಿಘಂಟು, ಕನ್ನಡ ನಿಘಂಟುಗಳ ನಿಘಂಟು, ಅಟಿ ಕುಳ ನಿಘಂಟು, ಕನ್ನಡ ನಿಘಂಟು, ಸಂಕ್ಷಿಪ್ತ ಕನ್ನಡ ನಿಘಂಟು, ೧೯೨೪ರಲ್ಲಿ ಪ್ರಕಟಿತ ರಘುಪತ್ಯಾಚಾರ್ಯರ ಕರ್ಣಾಟ ಭಾಷಾ ರತ್ನಾಕರ, ೧೯೨೯ರಲ್ಲಿ ಪ್ರಕಟಿತ ಪಂಡಿತ ಪ್ರಭಣ್ಣನವರ ನಿಘಂಟು, ೧೯೩೦ರಲ್ಲಿ ಪ್ರಕಟಿತ ಮ. ಪ್ರ ಪೂಜಾರ ಅವರ ಜೈನಧರ್ಮ ಪರಿಭಾಷೆ, ೧೯೪೦ರಲ್ಲಿ ಪ್ರಕಟಿತ ಶಿವರಾಮಕಾರಂತರ ಸಿರಿಗನ್ನಡ ಅರ್ಥಕೋಶ, ೧೯೪೧ರಲ್ಲಿ ಪ್ರಕಟಿತ ಬೆನಗಲ್ ರಾಮರಾವ್ ಮತ್ತು ವಿದ್ವಾನ್ ಪಾನ್ಯಂ ಸುಂದರಶಾಸ್ತ್ರಿ ಅವರ ಪುರಾಣನಾಮ ಚೂಡಾಮಣಿ, ೧೯೪೭ರಲ್ಲಿ ಪ್ರಕಟಿತ ಫ. ಗು. ಹಳಕಟ್ಟಿ ಅವರ ಶಿವಾನುಭವ ಶಬ್ದಕೋಶ, ೧೯೫೧ರಲ್ಲಿ ಪ್ರಕಟಿತ ಮಚ್ಚಿಮಲೆ ಶಂಕರನಾರಾಯಣರಾವ್, ಆರ್. ಎಸ್. ನಾವೂರ್ ಕರ್ ಮತ್ತು ಸೇಡಿಯಾಪು ಕೃಷ್ಣಭಟ್ಟರ ಕನ್ನಡ ನಿಘಂಟು, ೧೯೫೨ರಲ್ಲಿ ಪ್ರಕಟಿತ ಎಚ್. ವಿ. ರಮಾಕಾಂತರಾವ್ ಅವರ ಕನ್ನಡ ಕನ್ನಡ ಶಬ್ದಕೋಶ, ೧೯೫೬ರಲ್ಲಿ ಪ್ರಕಟಿತ ಗುರುನಾಥ ಜೋಶಿ ಮತ್ತು ಜಿ. ಅಶ್ವತ್ಥನಾರಾಯಣರಾವ್ ಅವರ ಕನ್ನಡ ಕನ್ನಡ ಶಬ್ದಕೋಶ, ೧೯೫೭ರಲ್ಲಿ ಪ್ರಕಟಿತ ಪಂಡಿತ ಜೆ. ಎ. ಕವಲಿ ಅವರ ಸಚಿತ್ರ ಕನ್ನಡ ಕನ್ನಡ ಕಸ್ತೂರಿಕೋಶ, ೧೯೬೫ರಲ್ಲಿ ಪ್ರಕಟಿತ ಆರ್. ಎಸ್ ರಾಮರಾವ್ ಅವರ ಕನ್ನಡ ಕನ್ನಡ ಇಂಗ್ಲಿಷ್ ನಿಘಂಟು, ೧೯೭೦ರಲ್ಲಿ ಪ್ರಕಟಿತ ಸ. ಸ ಮಾಳವಾಡ, ಕ. ವೆಂ. ರಾಜಗೋಪಾಲ ಮತ್ತು ಟಿ. ಕೇಶವಭಟ್ಟ ಅವರ

ಕನ್ನಡ ಕಾವ್ಯಪದಮಂಜರಿ, ೧೯೭೧ರಲ್ಲಿ ಪ್ರಕಟಿತ ಟಿ. ವಿ. ವೆಂಕಟಚಲಶಾಸ್ತ್ರಿ ಅವರ ಶ್ರೀವತ್ಸ ನಿಘಂಟು, ೧೯೭೧ರಲ್ಲಿ ಪ್ರಕಟಿತ ಎನ್ ಕುಲಕರ್ಣಿ ಅವರ ಕುಮಾರವ್ಯಾಸ ನಿಘಂಟು, ಪಂಡಿತ ಯಜ್ಞನಾರಾಯಣ ಉಡುಪ ಅವರ ಅವರ ಪುರಾಣ ಭಾರತಕೋಶ, ಮದರಾಸು ವಿಶ್ವವಿದ್ಯಾಲಯದ ಓಷದಿಕೋಶಂ, ಹೀಗೆ ಅನರ್ಥಕೋಶ, ಪದಾರ್ಥ ಕೋಶ, ಕನ್ನಡ ವಿಷಯ ವಿಶ್ವಕೋಶ, ಕನ್ನಡ ಜಾನಪದ ವಿಶ್ವಕೋಶ, ಜಿ. ವೆಂಕಟಸುಬ್ಬಯ್ಯ ಅವರ ಕನ್ನಡ - ಇಂಗ್ಲಿಷ್ ನಿಘಂಟು, ಇಂಗ್ಲಿಶ್ ಕನ್ನಡ ನಿಘಂಟು, ದಾಸ ಸಾಹಿತ್ಯ ಕೋಶ, ವಿವರಣಾತ್ಮಕ ಪರಿಸರ ಅರ್ಥಕೋಶ, ನವಕರ್ನಾಟಕ ವಿಜ್ಞಾನ - ತಂತ್ರಜ್ಞಾನ ಪದಸಂಪದ, ಕೃಷಿ ಪದಕೋಶ, ಕೃಷಿ ಮತ್ತು ಪಶುವೈದ್ಯಕೀಯ ವಿಜ್ಞಾನ ಪಾರಿಭಾಷಿಕ ಪದಕೋಶ, ಸಂಕ್ಷಿಪ್ತ ಆಡಳಿತ ಪದಕೋಶ, ಕಾನೂನು ಪದಕೋಶ, ಕನ್ನಡ ಜಾನಪದ ಕೋಶ, ಕನ್ನಡ ರತ್ನಕೋಶ, ಹೆಚ್. ನಂಜೇಗೌಡ ಅವರ ಜಾನಪದ ಕೋಶ, ಮುದೇನೂರು ಸಂಗಣ್ಣ ಅವರ ಚಿಗಟೇರಿ ಪದಕೋಶ, ಬುಕ್ಕಾಂಬುಧಿ ಕೃಷ್ಣಮೂರ್ತಿ ಅವರ ಬುಕ್ಕಾಂಬುಧಿ ಪ್ರಾದೇಶಿಕ ಕನ್ನಡ ಶಬ್ದಕೋಶ, ರಾಮೇಗೌಡ ಅವರ ಕನ್ನಡ ಜಾನಪದ ನಿಘಂಟು, ಎನ್. ವಿಶ್ವರೂಪಾಚಾರ್ ಹಾಗೂ ಎಂ. ಬಿ. ಗಿರೀಶ್ ತಾಳಿಕಟ್ಟಿ ಅವರ ವೈದ್ಯ ಪದಗಳ ಅರ್ಥ ವಿವರಣಾ ಕೋಶ, ಬೇದ್ರೆ ಮಂಜುನಾಥ ಅವರ ಇಂಗ್ಲಿಷ್ ನುಡಿಗಟ್ಟು ಮತ್ತು ಪಡೆನುಡಿಗಳ ವಿವರಣಾತ್ಮಕ ಕೋಶ, ಡಾ. ವಿಲ್ಯಂ ಮಾಡ್ತಾ. ಆರ್. ವಾಯ್. ಕುಲಕರ್ಣಿ ಅವರ ನಿಘಂಟು ರಚನಾ ವಿಜ್ಞಾನ, ಆಶೋಕ ಕುಮಾರ ರಂಜೇರ ಅವರ ವಿವಿಧ ವೃತ್ತಿಪದಕೋಶ, ಡಾ. ಮಂಜುನಾಥ ಬೇವಿನಕಟ್ಟೆ ಅವರ ಸಾಂಸ್ಕೃತಿಕ ಪದಕೋಶ, ಡಾ. ರಮೇಶ್ ಅವರ ಲ್ಯಾಟಿನ್ ಕಾನೂನು ಸೂತ್ರಗಳು ಮತ್ತು ಪದಗಳ ನಿಘಂಟು, ಎಚ್. ಎಸ್ ಶ್ರೀಮತಿ ಅವರ ಸ್ತ್ರೀವಾದ ಪದ ವಿವರಣ ಕೋಶ, ಬಸವರಾಜ ಕುಂಚೂರು ಅವರ ಕುಂಬಾರಿಕೆ ವೃತ್ತಿ ಪದಕೋಶ, ದೇಶಾಂಶ ಹುಡುಗಿ ಅವರ ಬೀದರ ಕನ್ನಡ ಕೋಶ, ಡಾ. ಜಿ. ಕೃಷ್ಣಪ್ಪ ಅವರ ಬೇಂದ್ರೆಕಾವ್ಯ: ಪದನಿರುಕ್ತ, ಎಚ್. ಕೆ. ನರಸಿಂಹೇಗೌಡ ಅವರ ಅರಣ್ಯಶಾಸ್ತ್ರ ಪಾರಿಭಾಷಿಕ ಶಬ್ದಕೋಶ, ಬೇಸಾಯಶಾಸ್ತ್ರ ಪಾರಿಭಾಷಿಕ ಶಬ್ದಕೋಶ, ಹೈನುಗಾರಿಕೆ ಪಾರಿಭಾಷಿಕ ಶಬ್ದಕೋಶ, ಕೀಟಶಾಸ್ತ್ರ ಪಾರಿಭಾಷಿಕ ಶಬ್ದಕೋಶ, 'ಕೆಲವು ಸಸ್ಯಗಳ ವೈಜ್ಞಾನಿಕ, ಕುಟುಂಬ, ಇಂಗ್ಲಿಷ್ ಹಾಗೂ ಕನ್ನಡ ಹೆಸರುಗಳು', ಕೃಷಿ ರಸಾಯನಶಾಸ್ತ್ರ ಪಾರಿಭಾಷಿಕ ಶಬ್ದಕೋಶ, ಮೀನುಗಾರಿಕೆ ಪಾರಿಭಾಷಿಕ ಶಬ್ದಕೋಶ, ಕೃಷಿ ಸಸ್ಯಶಾಸ್ತ್ರ ಪಾರಿಭಾಷಿಕ

ಶಬ್ದಕೋಶ, ಕೃಷಿ ಸೂಕ್ಷ್ಮಜೀವಿಶಾಸ್ತ್ರ ಪಾರಿಭಾಷಿಕ ಶಬ್ದಕೋಶ, ಸ. ಚಿ. ರಮೇಶ ಅವರ ಸಂಪಾದಿತ ಜಾನಪದ ವಸ್ತುಕೋಶ, ಪಿ. ವಿ ನಾರಾಯಣ ಅವರ ಚಂಪೂ ನುಡಿಗನ್ನಡಿ, ಪಂಪನ ನುಡಿಗಣಿ, ಟಿ.ಜಿ. ಶ್ರೀನಿಧಿ ಅವರ ಕಂಪ್ಯೂಟರ್ – ತಂತ್ರಜ್ಞಾನ ಪದವಿವರಣ ಕೋಶ, ಅಧ್ಯಾತ್ಮ ಪ್ರಕಾಶ ಕಾರ್ಯಾಲಯದ ಪಾರಿಭಾಷಿಕ ಶಬ್ದಕೋಶ, ಕೇಂದ್ರೀಯ ಹಿಂದಿ ನಿರ್ದೇಶನಾಲಯದ ಹಿಂದಿ–ಕನ್ನಡ–ಆಂಗ್ರೇಜಿ ಸಂಪುಟಗಳು, ಕೃಷಿ ವಿಶ್ವವಿದ್ಯಾಲಯದ ಜೀವಶಾಸ್ತ್ರ ಪಾರಿಭಾಷಿಕ ಶಬ್ದಕೋಶ, ಕೃಷಿ ವಿಜ್ಞಾನ ಪದಕೋಶ, ಕೃಷಿ ವಿಜ್ಞಾನ ತಾಂತ್ರಿಕ ಪದಕೋಶ, ಕೃಷಿ ಇಂಜಿನಿಯರಿಂಗ್ ಪಾರಿಭಾಷಿಕ ಶಬ್ದಕೋಶ, ಕೃಷಿ ರಸಾಯನಶಾಸ್ತ್ರ ಶಬ್ದಾರ್ಥ ನಿರೂಪಣಾವಳಿ, ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿಯ ಕೈಪುಡಿ ಪುಸ್ತಕ, ಕರ್ನಾಟಕ ಕೊಂಕಣಿ ಸಾಹಿತ್ಯ ಅಕಾಡೆಮಿಯ ಕೊಂಕಣಿ ಸಮಾಂತರ ಶಬ್ದಕೋಶ, ಎಸ್. ಡಿ ವೇಣಾಕ್ಷಿ ಅವರ ಮಲೆನಾಡ ನುಡಿಕೋಶ, ಎಚ್. ಅಲ್ಲಿಸಾಬ್ ಅವರ ಸಟೀಕ ಶಬ್ದಮಂಜರಿ ಕೋಶವು, ಸಿ. ಬಿ ಶೈಲಾ ಜಯಕುಮಾರ್ ಅವರ ನುಡಿಗನ್ನಡಿ, ಕ. ನಂ. ಪ್ರಸನ್ನ ಅವರು ಸಂಪಾದಿಸಿರುವ ಅಮರಸಿಂಹನ ಅಮರಕೋಶಕ್ಕೊಂದು ನಿಘಂಟು, ಲಿಂಗದಹಳ್ಳಿ ಹಾಲಪ್ಪ ರಚಿತ ಹಾಲುಮತ ಸಾಂಸ್ಕೃತಿಕ ಪದಕೋಶ ಸಂಪುಟಗಳು, ಜಿ. ಎನ್ ಚಕ್ರವರ್ತಿ ಅವರ ಸಂಸ್ಕೃತ – ಕನ್ನಡ ನಿಘಂಟು, ಎಲ್. ಎಸ್ ಶೇಷಗಿರಿರಾವ್ ಅವರ ಇಂಗ್ಲಿಷ್–ಇಂಗ್ಲಿಷ್–ಕನ್ನಡ ನಿಘಂಟು, ಪಾ. ಶ. ಶ್ರೀನಿವಾಸ ಅವರ ತಮಿಳು–ಕನ್ನಡ ನಿಘಂಟು, ಶ್ರೀನಿವಾಸ ಹಾವನೂರರ ಕನಕದಾಸರ ಕೀರ್ತನೆಗಳ ಶಬ್ದ–ಪ್ರಯೋಗ ಕೋಶ, ಎಸ್. ಬಸವಾರಾಧ್ಯರ ಹಳಗನ್ನಡ ಶಬ್ದಾರ್ಥಕೋಶ, ಆರ್. ಶೇಷಶಾಸ್ತ್ರಿ ಅವರ ಪಾರಮಾರ್ಥ ಪದಕೋಶ, ಸಂಗಮೇಶ ಸವದತ್ತಿಮಠ ಅವರ ವರ್ಣನಾತ್ಮಕ ವಚನ ಪದಕೋಶ, ಮಲ್ಲೇಪುರಂ ಜಿ. ವೆಂಕಟೇಶ ಅವರ ಸಂಕ್ಷಿಪ್ತ ಪಾಲಿ ಕನ್ನಡ ನಿಘಂಟು, ಪಂಜು ಗಂಗೊಳ್ಳಿ ಅವರ ಸಂಪಾದಿಸಿದ ಕುಂದಾಪ್ರ ಕನ್ನಡ ನಿಘಂಟು, ವಿ. ಕೃಷ್ಣ ಅವರ ವಸಂತ ಕನ್ನಡ–ಇಂಗ್ಲಿಷ್ ಸಂಕ್ಷಿಪ್ತ ನಿಘಂಟು, ಅರವಿಂದ ಚಂದ್ರಕಾಂತ ಶ್ಯಾನಭಾಗ ಅವರು ರಚಿಸಿದ ಕೊಂಕಣಿ–ಕನ್ನಡ ಶಬ್ದಕೋಶ, ಎಸ್. ಶಿವರಾಜಪ್ಪ ಅವರ ರಚಿತ ಸಂಸ್ಕೃತ ಕನ್ನಡ ಇಂಗ್ಲಿಷ್ ಶಬ್ದಕೋಶ (ತ್ರಿಭಾಷಾ ನಿಘಂಟು), ಜೆ. ಆರ್. ಲಕ್ಷ್ಮಣರಾವ್ ಅವರ ಇಂಗ್ಲಿಷ್–ಕನ್ನಡ ವಿಜ್ಞಾನ ಶಬ್ದಕೋಶ, ಎಂ. ವಿ. ನಾಗರಾಜರಾವ್ ಅವರ ತತ್ಸಮ–ತದ್ಭವ ಕೋಶ,

ಪರ್ಯಾಯವಾಚಕ ಶಬ್ದಕೋಶ, ಶಬ್ದಾರ್ಥಕೋಶ, ಟಿ. ಎಸ್. ವಿವೇಕಾನಂದ್ ಅವರ ಪರಿಸರ ನಿಘಂಟು, ಬಿ. ಬಿ. ರಾಜ ಪುರೋಹಿತ ಅವರ ಬೇಂದ್ರೆ ಕಾವ್ಯದ ನುಡಿಗಟ್ಟು ಕೋಶ, ದ.ರಾ. ಬೇಂದ್ರೆ ಸಮಗ್ರ ಕಾವ್ಯ ನಿಘಂಟು, ಎಚ್. ಎಂ. ಮರುಳಸಿದ್ಧಯ್ಯ ಸಂಪಾದಿಸಿದ ಸಮಾಜಕಾರ್ಯದ ಶಬ್ದಕೋಶ, ಆರ್. ಲಕ್ಷ್ಮೀನಾರಾಯಣ ಅವರು ಕನ್ನಡಕ್ಕೆ ತಂದ ಪ್ರಾಕೃತ–ಕನ್ನಡ ಬೃಹತ್ ನಿಘಂಟು, ಸಿ.ಕೆ ರೇಣುಕಾರ್ಯ ಅವರ ಅರ್ಥಶಾಸ್ತ್ರ ಪರಿಭಾಷೆ, ಜಿ. ವೆಂಕಟಸುಬ್ಬಯ್ಯ ಅವರ ಮುದ್ದಣ ಪದಪ್ರಯೋಗ ಕೋಶ ಹೀಗೆ ನೂರಾರು ಶಬ್ದಕೋಶಗಳನ್ನು ಹಲವು ಸ್ವರೂಪಗಳಲ್ಲಿ ದಾಖಲಿಸಬಹುದು.

ಕನ್ನಡ ಸಾಹಿತ್ಯದಲ್ಲಿ ನಮ್ಮ ಜ್ಞಾನ ಮತ್ತು ಸಂಪನ್ಮೂಲಗಳನ್ನು ಶಬ್ದಕೋಶಗಳ ಸಂಗ್ರಹಕಾರ್ಯಕ್ಕಾಗಿಯೇ ಇನ್ನೂ ಬಳಸಿಕೊಳ್ಳುತ್ತೀದ್ದೇವೆ. ಈ ಕಾರ್ಯಗಳ ಕುರಿತು ಕೆಲಸ ಮಾಡಿರುವ ವಿದ್ವಾಂಸರೆಲ್ಲಾ ಇನ್ನೂ ಕನ್ನಡದಲ್ಲಿ ಆಗಬೇಕಾದ ಹಲವು ಕಾರ್ಯಗಳ ಕುರಿತು ಚರ್ಚಿಸಿದ್ದಾರೆ. ಆದರೆ ಹೊಸಪದಗಳ ಸೃಷ್ಟಿಯ ಶಬ್ದಕೋಶ ಕಾರ್ಯವು ಅತಿಕಡಿಮೆ ಮಟ್ಟದಲ್ಲಿ ನಡೆಯುತ್ತಿದೆ. ಸಂಪಾದನೆ, ನಿರುಕ್ತ, ಹಲವು ವಿಧದಲ್ಲಿ ಸಂಗ್ರಹಕಾರ್ಯವು ಇನ್ನೂ ಉತ್ಕೃಷ್ಟವಾಗಿ ನಡೆಯಬೇಕಿದೆ. ಈ ಕಾರಣದಿಂದ ರನ್ನಕಂದವನ್ನು ಸರಳವಾದ ಅಧ್ಯಯನ ಮುಖೇನ ಇಲ್ಲಿ ದಾಖಲಿಸಲಾಗಿದೆ. ಹೊಸ ತಲೆಮಾರಿಗೆ ಕನ್ನಡದ ಮೊದಲ ನಿಘಂಟನ್ನು ಪರಿಚಯಿಸುವ ಕಾರ್ಯವೂ ಇದಾಗಿದೆ.

ನಿಘಂಟು

ಕೋಶ, ಶಬ್ದ ಭಂಡಾರ, ಪದನೆರಕೆ, ನಿರುಕ್ತ ಎಂದೆಲ್ಲ ಅರ್ಥಗಳನ್ನು ಹೊಂದಿದೆ ನಿಂಘಟು ಪದ. ನಿಘಂಟು ಎಂದರೆ ಪದಗಳ ಅರ್ಥವನ್ನು ಮತ್ತು ಸಮಾನಾರ್ಥಕ ಪದಗಳನ್ನು ತಿಳಿಸುವುದಾಗಿದೆ. ಇದನ್ನು ಶಬ್ದಕೋಶ ಎಂತಲೂ ಕರೆಯುವರು. ವೇದಾಂಗಗಳು ಆರು. ಶಿಕ್ಷಾ, ವ್ಯಾಕರಣ, ಛಂದಸ್ಸು, ಜ್ಯೋತಿಷ್ಯ, ಕಲ್ಪ ಮತ್ತು ನಿರುಕ್ತ. ನಿರುಕ್ತ ವೇದಗಳಲ್ಲಿ ಪ್ರಮುಖವಾದುದು. ಏಕೆಂದರೆ ಅದು (ನಿರುಕ್ತ) ವೇದಗಳಲ್ಲಿನ ಶಬ್ದಗಳ ವ್ಯುತ್ಪತ್ತಿ ಮತ್ತು ಅರ್ಥವನ್ನು ತಿಳಿಸುತ್ತದೆ. ಪ್ರಾಚೀನರು ನಿರುಕ್ತದ ವ್ಯಾಖ್ಯಾನವನ್ನು ಈ ರೀತಿ ಹೇಳಿದ್ದಾರೆ. "ನಿಃ ನಿಶ್ಚಯೇನ ಉಕ್ತಂ ನಿರುಕ್ತಂ". ಈ ಹಿನ್ನೆಲೆಯಲ್ಲಿ ರನ್ನಕಂದದಲ್ಲಿರುವ ಹಳಗನ್ನಡ ಪದಗಳನ್ನು ಬಿಡಿಸಿ ಹೊಸಗನ್ನಡದ

ಅರ್ಥಗಳನ್ನು ನೀಡಲು ಪ್ರಯತ್ನಿಸಲಾಗಿದೆ.

ಪದ್ಯ

ಕುಳಿರೆನೆ೧ಶೈ೧ತ್ಯಂ ಮಿಳಿರೆನೆ।
ಪೊಳೆದುದು ಬಿಲ್ಲೆಂ೨ದೆ೨ನಲ್ಕೆ ಮಾ೩ರಂ೩ಬರ್ಥಂ ॥
ಬಳೆದು*[ದೆ]*ನಲ್ಕೆಱಗಿದುದುಂ।
ಕಿಳಿರೆನೆ ವಾ೪ಜಿ೪ಯ ನಿನಾದಮೆಲೆ ಕವಿರತ್ನಾ॥ ೧ ॥

ಶಬ್ದ– ಅರ್ಥ

ಕುಳಿರ್ – ಶೈತ್ಯ, ಶೀತಲ, ತಂಪು
ಮಿಳಿರ್ – ಪೊಳೆದುದು, ಹೊಳೆದುದು
ಬಳೆದುದು – ಎರಗಿದುದು
ಬಿಲ್ಲು – ಮಾರಂಬು, ಮನ್ಮಥನ ಬಾಣ
ಕಿಳಿರ್ – ವಾಜಿಯ ನಿನಾದ, ಕುದುರೆಯ ಶಬ್ದ

ಪದ್ಯ

ಬರೆಯೆನಲತ್ಯರ್ಥಂ ೧[ಮುಂ
ಮು]೧ ರಿಯನೆನೆ ಕಾಸಿದ ಮಳ೨ಲ್ಕಿ೨ಳಂಗೆನೆ ಗೆಳ೩ಸಂ೩।
ಮು೪ರಿ೪ಪೆನೆ ಮರಳಿದಭಾವಂ।
ಸಿರಿವಂತಿಕೆಯೆಂದೆನಲ್ಕೆ ಹುರಿಯೋಡುಕ್ಕುಂ ॥ ೨ ॥

ಶಬ್ದ – ಅರ್ಥ

ಬರೆ – ಅತ್ಯರ್ಥಂ
ಮುಂಮುರಿ – ಕಾಸಿದ ಮರಳು
ಇಳಂಗು – ಗೆಳ ?
ಮುರಿಪು – ಮರಳಿದ ಭಾವಂ
ಸಿರಿವಂತಿಕೆ – ಹುರಿಯೋಡು

ಪದ್ಯ

ಹಕ್ಕಿಯೆನ।ಲ್ವಿಹಗಂ ನೆ೧ಜೆ೧।
ಪಕ್ಕೆಯೆನಲ್ಪಾಸು ವುಂಡೆಯೆಂದೆನೆ ಮೊಳಕಾ॥
೩ಲ್ಕು೩ಕ್ಕೆನೆ ಬೆ೪ಳ್ಳ೪ಕ್ಕಿಯೆ ೫ತಾ೫ನೆ ।

ಎಕ್ಕೆಕ್ಕನೆ ದಿಂಡುವಿಡಿದು ಬಪ್ಪುದುದಕ್ಕುಂ ॥ ೩ ॥

ಶಬ್ದ – ಅರ್ಥ

ವಿಹಗ – ಹಕ್ಕಿ
ಪಕ್ಕೆ – ಪಾಸು
ಉಂ(ವುಂ)ಡೆ – ಮೊಳಕಾಲು
ಕುಕ್ಕೆ – ಬೆಳ್ಳಕ್ಕಿ
ಎಕ್ಕೆಕ್ಕೆ – ದಿಂಡುವಿಡಿದು ಬರುವುದು

ಪದ್ಯ

ಬಲಗೆನೆ ಬಿಸುಡೆಂಬರ್ಥಂ।
ಬಲಮರ್ದನೆ ಅಂಕದೌಷಧಂ ತಾನಕ್ಕುಂ॥
ಪೊಲಿಗೆನೆ ಬಿರ್ಚುಗೆಯ ತೆಱಂ ।
ಕೆಲಕನೆನಲ್ಕಿಕ್ಕುಮಲ್ಲನೆಲೆ ಕವಿರತ್ನಾ ॥ ೪ ॥

ಶಬ್ದ – ಅರ್ಥ

ಬಲಗೆ(ಗು) – ಬಿಸುಡು
ಬಲಮರ್ದು – ಅಂಕದೌಷದ, ಔಷದ, ಶ್ರೇಷ್ಠವಾದ ಮದ್ದು
ಪೊಲಿಗು – ಬಿರ್ಚು
ಕೆಲಕನ್ – ಇಕ್ಕುಮಲ್ಲನ್

ಪದ್ಯ

ಅಂಚಮನಲ್ಕಂಜಿಕೆಯತಿ ।
ಬಂಚನೆಯನೆ ಮರಸಿಡಕ್ಕು ಬೆಳಕೆನೆ ದೀಪಂ॥
ಪೊಂಚನೆ ಪೊರ್ದಿದಬಗೆವಾ ।
ನೆಂಚಲೆನಲ್ಕೆಂಜಕಲುಪ್ಪುದೆಲೆ ಕವಿರತ್ನಾ ॥ ೫ ॥

ಶಬ್ದ – ಅರ್ಥ

ಅಂಚ – ಅಂಜಿಕೆ
ಅತಿಬಂಜನೆ – ಮರಸು
ಮರಸಿಡು, ಬೆಳಕು – ದೀಪ
ಪೊಂಚೆ [ಹೊಂಚು] – ಹೊಂದುವ ಬಗೆ

ಎಂಚಲ್ – ಅಂಜಕಲ್

ಪದ್ಯ

[ಸ]ಣ್ಣದೆನದಲ್ಕಿಜಿಕ್ಕುಂ।
ಪಣ್ಣೆನೆ ಮಾಡೆಂಬ ವಾಚಿ ಬಳಿಯನೆ ವಂಶಂ॥
ಎಣ್ಣೆನೆ ಲೆಕ್ಕಿಪುದುಂ ಬಿಸು ।
ಗ[ಣ್ಣ]ನೆನಲ್ಗೊರವನಪ್ಪನೆಲೆ ಕವಿರತ್ನಾ ॥ ೬ ॥

ಶಬ್ದ – ಅರ್ಥ

ಸಣ್ಣ – ಚಿಕ್ಕ, ಕಿರಿದು
ಅಕ್ಕುಂ – ಹೌದು
ಪಣ್ಣು – ಮಾಡು
ವಾಚಿ – ಶಬ್ದ
ಬಳಿ – ವಂಶ
ಎಣ್ – ಎಣಿಸು
ಬಿಸುಗಣ್ಣನ್ – ಗೊರವ, ಶಿವ
ಎನೆ – ಎನಲ್, ಎನ್ನಲು, ಹೇಳಲು

ಪದ್ಯ

ಕೋ೧ಸಿ೧ತೆನಲ್ಪೋಣಿಸಿದುದು।
ಸೂಸಿದುದೆನೆ ೨ತು೨ಳ್ಕಿತೆಂಬುದುಂ ಪರಿಮಳಮುಂ।
ಬಾಸತ೩ಮೆ೩ನೆ ಕಂಪುಂ ಮಿಗೆ।
*[ಸೌ]*ಸಾಸವಮೆನೆ ಸಮ್ಮದರ್ಥಮೆಲೆ ಕವಿರತ್ನಾ ॥ ೭ ॥

ಶಬ್ದ – ಅರ್ಥ

ಕೋಸಿತು – ಪೋಣಿಸಿದುದು
ಬಾಸತಂ – ಪರಿಮಳ, ಕಂಪು
ಸೌಸಾಸವ – ಸಮ್ಮದ

ಪದ್ಯ

ಸುಗಿಪವುಮೆನೆ ಸುಲಿಹಂ ತಾಂ।
ತೆಗಳೆನೆ ಪೆಳಗು೧ಳ್ಮ೧ ತೆಂದೆನಲ್ಪುದು೨ಮಂ೨ ತಾಂ ॥
೩ಬಗ೩ಸೆನೆ ಮನ೪ವಿ೪ಟ್ಟುದು ಮುಂ ।

ನೆಗ್ಗಿಮಗ್ಗಿದೆನಲ್ ದೊಡ್ಡಿ ತಪ್ಪುದೆಲೆ ಕವಿರತ್ನಾ ॥ ೮ ॥

ಶಬ್ದ – ಅರ್ಥ

ಸುಗಿಪ – ಸುಲಿಹ

ತೆಗಳ್ – ಪೆಳಗು,

ಉಳ್ಮಿತು – ಪುದುಮಂ

ಬಗಸು – ಮನಸ್ಸಿಡುವುದು

ನೆಗಮ್ – ದೊಡ್ಡಿತಪ್ಪುದು

ಪದ್ಯ

ಅಜಿಲೆನೆ ತಾರಗೆ ೧ತಿಟ್ಟೆಂ೧।

ದುೀ[ಜಿ ಬಲ್‌ಬೈಗುಳಿನಿಸುನನಸೆಂ]ೀದೆನೆ ದಿಟಮುಂ ।

ಗಜಿವೂಿವೆಿನೆ ಳಕೇಳದಗೆ ೫ಪಡಿ೫ ।

ಯಜಿವಕ್ಕಿಯೆೀನೆಯೀನಲ್ಕೆ ಕೋಕಿಲನಕ್ಕುಂ ॥ ೯ ॥

ಶಬ್ದ – ಅರ್ಥ

ಅರಿಲ್ – ನಕ್ಷತ್ರ

ತಿಟ್ಟೆಂದರಿ – ಬಲ್ ಬೈಗುಳ

ತಿಟ್ಟು – ದಿಬ್ಬ

ಇನಿಸು ನನಸು – ದಿಟ, [ಭ್ರಮೆ x ನಿಜ]

ಗರಿವೂ – ಕೇದಗೆ, ತಾಳೆಹೂ

ಪಡಿಯರವಕ್ಕಿ – ಕೋಗಿಲೆ, ಪರಪುಟ್ಟ

ಪದ್ಯ

ಕೈವಟ್ಟ೧ಲ್ ಸ೧ಟ್ಟುಗೆ ಮುಡಿ ।

ಪೊಯಿವೆಕ್ಕಲ್ ಪೊಯಿಗಿಲಂ ಮಡಂತಿಳಿ ಜೋಳಂ॥

ಕೈವಲೆ ಕಣ್ಬಲೆ ಿಜಿಜಿಸುಳಿ ।

ಕೈಪಿಡಿಯೆಂಬುದನೆ ತಿಳಿಯೆ ಕಬ್ಬಿಗರರಸಾ ॥ ೧೦ ॥

ಶಬ್ದ – ಅರ್ಥ

ಮುಡಿಪೊಯಿವೆಕ್ಕಲ್ – ಪೊಯಿಗಿಲ

ಮುಡಿ – ಕೊನೆ

ಮಡಂತಳೆ – ಜೋಳಂ

ಜರಸುಳಿ – ಕೈಪಿಡಿ

ಪದ್ಯ

ಬಲಯುರಮೆನೆ ತಲೆವಾಗಿಲು ।
ಕಱಿಲಱಿಗಲಮೆನೆ ಕೂಳಡಿಳ ಬೆರಸಿದಕ್ಕುಂ ನೈಲಂ!
ಗಲಮೆನೆ ಚೆಲ್ವಿಕೆ ಸಲೆ ಸೈ ।
ಗೆಲಮೆನೆ ತಾಂ ಪುಣ್ಯಶಕ್ತಿಯಲೆ ಕವಿರತ್ನಾ ॥ ೧೧ ॥

ಶಬ್ದ – ಅರ್ಥ

ಬಲಯರ – ತಲೆವಾಗಿಲು
ಕಲಗಲ – ಕೂಡಿ ಇರುವುದು
ನೈಲಂ – ಚೆಲ್ವಿಕೆ, ಚೆಲುವು, ಸೌಂದರ್ಯ
ಸೈಗೆಲ – ಪುಣ್ಯಶಕ್ತಿ [ಸೈಪು – ಪುಣ್ಯ]

ಪದ್ಯ

ತೋರ್ಪನೆ ಕಾಣ್ಕೆ ಮುಸುರ್ಪನೆ ।
ವಾರ್ಪನೆ ಕೈವಿಡಿದುದಕ್ಕುಮಿಳಿಪನೆ ಸೋಲಂ ॥
ಕೂರ್ಪನೆ ನಿಲುವರಗೆನೆ ಮೋ?
ಲಾರ್ಪನೆ ಸುಸ್ನಪ ಮಪ್ಪುದಲೇ ಕವಿರತ್ನಾ ॥ ೧೨ ॥

ಶಬ್ದ – ಅರ್ಥ

ತೋರ್ಪು – ಕಾಣ್ಕೆ,
ಮುಸುರ್ಪು; ಆರ್ಪು – ಕೈವಿಡಿದದ್ದು,
ಮಿಲಿಪು – ಸೋಲಂ [ಪಣ],
ಕೂರ್ಪು; ನಿಲುವೆರಗು; ಮೋರ್ಪು – ಸುಸ್ನಪ [ಸ್ನಪ (ಸಂ)–
ಸ್ನಾನ ಮಾಡಿಸುವುದು].

ಪದ್ಯ

ಊರ್ಪನೆ ಕೀಲಿಸಿದುದು ಕ
ಣ್ಣಾರ್ಪನೆ ನೋಳ್ಪುಜ್ಜುಗಂ ಮಿಳಿರ್ಪನೆ ಮುರಿಪಂ॥
ಕಾರ್ಪೊಱಯೆನೆ ಮಳೆಗಾಲಂ।
ನೇರ್ಪೊಱಯೆನೆ ಅಱಿಮೆಱಿಯೆಳೇಱಿಯಲೆ ಕವಿರತ್ನಾ ॥ ೧೩ ॥

ಶಬ್ದ – ಅರ್ಥ

ಊರ್ಪು – ಕೀಲಿಸುದುದು

ಕಣ್ಣಾರ್ಪು, ನೋಳ್ಪುಜ್ಜುಗಂ – ನೋಡುವ ಕೆಲಸ

ಮಿಳಿಪು – ಮುರಿ (ಮುರಿಪು – ಮುಷ್ಟಿಯಿಂದ ಹಿಡಿ)

ಆರ್ಪೊರೆ – ಮಳೆಗಾಲ

ನೇರ್ಪೊರೆ – ಅರಿಮೆ

ಪದ್ಯ

ಭಂಡಣಮೆನೆಪುಯ್ಯಲ್ಪಲ।
ಬಂಡನೆ ಜೇನ್ ಪೆರಬಳಿಯನೆಂದೆನೆ ಪಾಣ್ಬಂ॥
ಗುಂಡೆನೆ ನೆರವಿ ತುಳಿಲ್ಪರಿ ।
ಗೊಂಡೆನೆ ನಳಲ್ವೀರರಸನೆಲೇ ಕವಿರತ್ನಾ ॥ ೧೪ ॥

ಶಬ್ದ – ಅರ್ಥ

ಭಂಡಣ, ಪುಯ್ಯಲ್ [ಹುಯ್ಯಲು], ಫಲಬಂಡು – ಜೇನು [ಅ]

ಭಂಡಣ – ಪುಯ್ಯಲ್ [ಹುಯ್ಯಲು] [ಆ]

ಫಲಬಂಡು – ಜೇನ್, ಜೇನು, [ಫಲಬಂಡು–ತುಂಬಾಫಲ]

ಪೆರಬಳಿಯನ್ – ಪಾಣ್ಬನ್, ಪಾಪಿ

ಗುಂಡೆ – ನೆರವಿ, ಗುಂಪು

ತುಳಿಲ್ಪರಿಗೊಂಡ – ವೀರರಸ [ತುಳಿಲ್ – ಅರಸ]

ಪದ್ಯ

ಎಱೆಯಱಿಯಂ ತೊಳ।
ರ್ಪಜಿವಜಿವಂ ಸಗ್ಗಿಗರ ಪಿರಿಯನುರು ಬಳಿಗಂ ಪಾ ।
ಲೆಱಕಿಲುಣಿವಕ್ಕಿದೆಱಂ ।
ನಿಱುಬಱಿಗಂ ಪೊನ್ನಬಸುಱನೆಲೆ ಬಿದಿ ರತ್ನಾ ॥ ೧೫ ॥

ಶಬ್ದ – ಅರ್ಥ

ಎರೆಯರಿಯಂ, ಪರಿವರಿವಂ – ಸಗ್ಗಿಗರ ಪಿರಿಯನ್ [ಇಂದ್ರ]

ತೊಳರ್ಪ [ಶೋಭಿಸುವ]

ಉರು ಬಳಿಗಂ – ಪಾಲ್

ಎರಕಿಲ್ – ಉಣಿವಕ್ಕಿ
ಎರಂ– ನಿರುಬರೆಗಂ
ಪೊನ್ನಬಸುರನ್ – ಬಿದಿ; ವಿದಿ? [ಚಿನ್ನದ ಹೊಟ್ಟೆಯನ್ನು ಉಳ್ಳವನು]

ಪದ್ಯ

[೧]ವೃ॥[೧] ಮುಗಿಲಲ[೨]ರೇ[೨]ಱಿದಂ ಸಿರಿಮಗಂ ನೆಲವೆಣ್ಣರ[೩]ಸಂ[೩] ನೆಲಕ್ಕರಂ।
ಬಗೆದಿಳಿಗಂಮದುರ್ಗ[೪]ಬಲಿಗ[೪]ನ[೫]ಚ್ಚ[೫]ರಮೊರ್ಮೊದಲೋ[೬]ದಿ[೬]ಗಂ ಸುಳುಂ?
ಬೆಗಡಱಿಗಂ ಸೊಗಂಬೊಱೆಗನೆಚ್ಚರವಾಳಿಗ ವಾಳವಾಳಿಗಂ ।
ತೆಗ[೭]ಲು[೭]ಡೆಗಂ ಪೊಗಲಳ್ಳುಲಡಿಗನೆಂದೆನೆ ನೀಂ ತಿಳಿ
ಬೊಮ್ಮನೆಂಬುದಂ ಕವಿರತ್ನಾ ॥ ೧೬ ॥

ಶಬ್ದ – ಅರ್ಥ

ನೆಲವೆಣ್ಣರಸಂ, ನೆಲಕ್ಕರಂ ಬಗೆದಿಳಿಗಂ, ಮದುರ್ಗ ಬಲಿಗಂ, ಅಚ್ಚರಂ ಒರ್ಮೊದಲ್ ಓದಿಗಂ, ಸುಳುಂ, ಬೆಗಡರಿಗಂ, ಸೊಗಂಬೊರೆಗಂ, ಎಚ್ಚರವಾಳಿಗ, ವಾಳವಾಳಿಗಂ, ತೆಗಲುಡೆಗಂ, ಪೊಗಳ್ ಉಡಿಗಂ ಎಂದೆನೆ ನೀ ತಿಳಿ ಬೊಮ್ಮನೆಂಬುದಂ.

ಪದ್ಯ

ಸೊಂಪುವೆ[೧]ಱೆ[೧]ಯಿಂಪುಗ[೨]ಳೆ[೨]ವ[೩]ಲಿ[೩]।
ಗಂಪುಳಿಲಿಗೆ [೪]ಯುಣಿಸು[೫]ಸಾಸ[೫]ದಡಿ [೬]ಕಿಂ[೬] ।
ಲ್ಗೆಂ ಪಿಡಿಕೆ ಬೆವೆತುಳಿರ್ವಡಿ।
ಗುಂಪೆ[೭]ನೆ[೭] ತಿಳಿ ಕೈಪೆವರನೆನಿಪ್ಪುದು ರತ್ನಾ ॥ ೧೭ ॥

ಶಬ್ದ – ಅರ್ಥ

ಸೊಂಪುವೆರೆ – ಯಿಂಪುಗಳೆವಲಿ
ಗಂ(ಕಂ)ಪುಳಿಲಿಗೆ–ಯುಣಿಸು (ಕ್ರಿ–ವುಣಿಸು) (ನಾ–ಆಹಾರ)
ಸಾಸದ – ಸಾಹಸ
ಕಿಲ್ಗೆಂ – ಪಿಡಿಕೆ
ಬೆವತುಳಿರ್ವಡಿ – ಗುಂಪು [ಬೆವತು + ಉಳಿರ್ವ+ ಅಡಿ]
ಚಂದ್ರನನ್ನು ಧರಿಸಿರುವವನು

ಕೈಪೆವರ – ಚಂದ್ರ, [ಕೈಪೆ – ಕಹಿರುಚಿ, ತಿಕ್ತ]

ಪದ್ಯ

ಅಱಿಯಮೆಯ಼ದ಼ಯ ಸೊಂಪುಸೆಽದೆಽಯ ।
ಪೊಱಗೆಳೆಯಳ ಬೇಟ಼ದಾಣದೊಱ಼ ಕಣ್ಣಿಳತುಳಪ ।
ಲ್ಱಿಱಱ ಪಸಡಿಕೊ಼ಲ್ಗ಼ ಬನವೆ ।
ಙ್ಱಿಱಪೆನಾಂ ನೆಲ್ಲಿ ಼ಮ಼ರನೆನಿಪ್ಪುದು ರತ್ನಾ ॥ ೧೮ ॥

ಶಬ್ದ – ಅರ್ಥ

ಅರಿಯಮೆದೆಯ – ಸೊಂಪುಸೊದೆಯ

ಬೇಟ – ಪ್ರೇಮ

ಒರೆ – ಹೇಳು

ಕುರಿಪೆನಾಂ – ಕುರಿತು ಹೇಳುವುದು [ಕುರಿತು+ಎನೆ+ಆಂ]

ಪದ್ಯ

ತಳಿರ್ಗಣೆನ ಬಲ್ಬಸವಿಯ ।
ಬ಼ಳ಼ಗವ಼ಜ಼ಗೆ ಬಳಸಿ ನಱಕೆ ಇಂಗೋಲಿ಼ಪಿರ್ಙ಼।
಼ಗೆಳ಼ಮುಗಿಲೆಳ್ದೊಱಯೆಂದೆನೆ।
ತಿಳಕಬ್ಬೆಂದೆಯ್ದೆ ಬೆಳ್ಳಿವೆಸರಾಂತ಼ವ಼ನೇ ॥ ೧೯ ॥

ಶಬ್ದ – ಅರ್ಥ

ತಳಿರ್ – ಚಿಗುರು

ಕಣೆ – ಬಾಣ

ಇಂಗೋಲ್ – ಇನಿದಾದ ಕೋಲು

ಇರ್ಪಂ – ಇದ್ದಾನೆ ?

ಎಳ್ದೊರೆಯ – ಎಳೆಯ ಮುಗಿಲಿನ ಒಡೆಯ

ಪದ್ಯ

ಸಾಸವದೊಟ್ಟಿಲ್ಮೆಲ್ಲಡಿ ।
ಬಾನಪರ್ಣ಼ಣೆ಼ ವಕ್ಕಿವಾಡಮಗಲಿದರೆಡೆ ಕಂ ।
ಣ್ಬಾಸ಼ಣಿ಼ಕೆ಼ನೆ಼ಲನಮ಼ಬೆ಼ಟ್ಟೊ।
ಳ್ಬಾಸ಼ಟಿ಼ ಕಣ್ಬುಳಿಲೆನಿಪುದೆಲೇ ಕವಿರತ್ನಾ ॥ ೨೦ ॥

ಪದ್ಯ

ಮ೧ಱುನೆಲೆ೧ ಸಾಸವದಾಣಂ ।
ನಿಱುಬೆಳಗೆನೆ ಬಾಯಕೆಂಪು ಮೊಗಸಿರಿ ಪೊರ್ದಿಂ।
ಗರಕೆಯು೨ರಲಂ೨ಬ ನೆರವಿಗೆ ।
ತುಱುಗಿಪ್ಪೆನೆ ತಿಳಿಗೆ ವೀ೩ಳ೩ಯಂ ಕವಿರತ್ನಾ ॥ ೨೧ ॥

ಶಬ್ದ – ಅರ್ಥ

ಮರುನೆಲೆ – ಸಾಸವದಾಣಂ
ನಿರುಬೆಳೆಗೆನೆ – ಬಾಯಕೆಂಪು ಮೊಗಸಿರಿ
ಪೊರ್ದಿಂ – ಹೊಂದಿರಿ
ಗರಕೆ ಅರಲ್ – ವೀಳೆಯ
ಅಂಬ ನೆರವಿಗೆ – ಬಾಣದ ಸಹಾಯಕ್ಕೆ
ತುರುಗಿಪ್ಪೆನೆ – ತಿಳಿಗೆ

ಪದ್ಯ

ತೊಳ್ಗಿದನೆನೆ ಪೊಡವಟ್ಟಂ ।
ಗಿಳ್ಗಿದನೆನೆ ಗಿಡ್ಡನವಿಳನೆಂದೆನೆ ಕುಱುಬಂ ।
೧ಪುಳ್ಗಿದನೆನೆ೧ ಕುರುಬಂ ತಳ ।
ವ೨ಳ್ಗಿ೨ದನೆನೆ ಬೆಗಡುದೊಂಡವಂ ಕವಿರತ್ನಾ ॥ ೨೨ ॥

ಶಬ್ದ – ಅರ್ಥ

ತೊಳ್ಗಿದನ್ – ಪೊಡವಟ್ಟಂ, ನಮಸ್ಕರಿಸು
ಗಿಳ್ಗಿದನ್ – ಗಿಡ್ಡಂ
ಅವಿಳನ್ – ಕುರುಬ
ಪುಳ್ಗಿದನ್ – ಕುರುಬ
ತಳವಳ್ಗಿದನ್ – ಬೆಗಡುಗೊಂಡವಂ, ಆಶ್ಚರ್ಯಗೊಂಡವನು

ಪದ್ಯ

ದೋಷವಿನಿತೆಳಸದಿರು ನೀಂ ।
ಲೇಸಾಗಿರೆ ಪೇಳ್ದ ಕನ್ನಡಂಗಳ ತಿಳಿಯ೧ಲ್೧ ।
ಕಾ[ಮ]ಸರಮ ೨ಪಿಡಿ೨ದೊಡಾವಂ ।
ಮಾಸಱಸುಳಿನಿಟ್ಟಿಸದೊಡೆನೇಸರ್ಗಿಳಿದೆ ಕವಿರತ್ನಾ ॥ ೨೩ ॥

ಶಬ್ದ – ಅರ್ಥ
ಕಾಸರ – ಚಿನ್ನ
ಮಾಸರ – ಪಚ್ಚೆ, ಅಂದವಾದುದು, ಮಹಾಸ್ವರ

ಪದ್ಯ
ಬೆಳಾಯಲ್ಕುಡು ಬೆಳಗ ।
ಲ್ತೆಳಾಜಿವು ಬೆಳಸು ಮೊದಲನೋಟಮೆನಲ್ಲಿಂ ?
ಚುಳಾ ಬಲ್ಬಸವಿಯ ಬಗೆ ।
ಗುಳ್ಳಾಗಲ್ ನೈದಲಜಿಗೆ ನೀಂ ಕವಿರತ್ನಾ ॥ ೨೪ ॥
ಶಬ್ದ – ಅರ್ಥ
ಬೆಳಾಯಲ್ಕೆ – ಉಡುಬೆಳಗಲ್ತು, ಬೆಳಗಲ್ಲ
ಆರವು ಬೆಳಸು – ಮೊದಲ ನೋಟವು
ಅಲ್ಲಿಂ – ಬಳಿ

ಪದ್ಯ
ಮುಗಿಲರಲೊಗೆಗೈಗೂಟಂ।
ಬಗೆದೊಜಿ ಪಾಲ್ದೊಜಿಗೆ ತಕ್ಕದೆನೆಯೊಳ್ದಾವರೆ॥
ಮುಗುಳೆಂದಜಿ ನೆಗಳ್ದವೆನೆ ।
ಮಿಗೆ ಜಾಜಿಯ ಬೆಳ್ಳಿಗೂರ್ತವೆಸರಾಂತವನೇ ॥ ೨೫ ॥
ಶಬ್ದ – ಅರ್ಥ
ಮುಗಿಲ್ ಅರಲ್ – ಗಗನ ಕುಸುಮ
ಒಗೆಯಲ್ – ಕಾಣಿಸುವುದು
ಕೈಕೂಟ – ಕೈಗೆ ಸಿಕ್ಕಿದ
ಒಳ್ದಾವರೆ – ಮುಗುಳ್ ತಾವರೆಯ
ಬಗೆದು – ತಿಳಿದು [ಹೇಳು]
ಪಾಲ್ದೊರೆ – ಹಾಲಿನ ಪ್ರವಾಹ
ನೆಗಳ್ದವೆನೆ – ಶೋಭಿಸುವ

ಪದ್ಯ

ಗೊರ್ಬರ್ಣನೆ ಗಂಭೀರಂ ಪಱಿ।
ಪರ್ಬಿದುದೆನೆ ಬಳ್ಳಿವರಿದುದಕ್ಕುಂ ದೈತ್ಯಂ ॥
ಮರ್ಬುಸುಳಿಕಾರರೆನೆ ಪೊಳೆ
ದುರ್ಬನೆ ಸಿಡಿಲಪ್ಪುದಮಲ ನಿಜಕವಿರತ್ನಾ ॥ ೨೬ ॥

ಶಬ್ದ – ಅರ್ಥ

ಗೊರ್ಬು – ಗಂಭೀರ
ಪರೆಪರ್ಬಿದುದು – ಆವರಿಸಿಕೊಳ್ಳುವುದು
ಮರ್ಬುಸುಳಿಕಾರರು – ದೈತ್ಯಂ
ಪೊಳೆದು ದುರ್ಬನೆ – ಸಿಡಿಲು

ಪದ್ಯ

ಝುಳಮೆಂದೆನಲುಷ್ಣಂ ಬಾ ।
ಗುಳಮಂದೆನೆ ದುಃಖಮಲ್ಲಣಿಕೆಯೆನೆ ಮೇಳಂ ।
ಪಳಗೆಂದೆನೆ ಒಣಗಿದಯೆಲೆ!
ಮಳಗೆನೆ ಳಬಿಟ್ಟಿಯಳ ಬಟ್ಟ ಗಸಿಲೆನೆ ಶಂಖಂ ॥ ೨೭ ॥

ಶಬ್ದ – ಅರ್ಥ

ಝುಳಂ – ಉಷ್ಣ
ಬಾಗುಳ – ದುಖ
ಅಲ್ಲಣಿಗೆ – ಮೇಳಂ
ಪಳಗೆ – ಒಣಗಿದೆ ಎಳೆ
ಮಳಗೆನೆ – ಬಿಟ್ಟಿಯ ?

ಪದ್ಯ

ಬದ್ದರನೆನೆ ಬಗಿದುಗಿಕಿದವಿಪಂವಿ।
ಕದ್ದರನೆನೆ ಖಕಳ್ಳನೆದ್ದಖಿರೆನಲೋಡಿದಪಂ
ಬಿದ್ದಿಗನೆನೆ ನಂಟಂ ಕೈ?
ಗುದ್ದಿಗರನೆ ಮಲ್ಲರೆಂಬುದೆಲೆ ಕವಿರತ್ನಾ ॥ ೨೮ ॥

ಶಬ್ದ – ಅರ್ಥ
ಬರ್ದರ್ – ಬದುಕಿದಪ – ಬದುಕಿರುವವನು
ಕದ್ದರ್ – ಕಳ್ಳ
ಎದ್ದರ್ – ಓಡಿದಪಂ
ಬಿದ್ದಿಗ – ನಂಟಂ
ಕೈಗುದ್ದಿಗರ್ – ಮಲ್ಲರ್

ಪದ್ಯ
ಬೆಳವರವಿಂಪು ಜಾಗಿಲ ಗಿಳಿರ್ಪೊಡೆ ಇಂಗೆಲೆಯೂನ್ಮದಾವಳಿ।
ಗ ಯಗಲ್ದಿರಾಳ್ದವನೆ ಪೂ ಚರ ಬಲ್ಲಿಸಾಜೆನ್ನೈಲವೆಚ್ಚುಂ ।
ಗಳೊಗೆದಾರೊ ಮಾಂಪನನೆ ಗೊಲ್ಗೊನೆವೇಟದ ನೀಱಮೆಂದನ।
ಲ್ಕಳೆಯದ ಕಾಣ್ಕೆ ಮಲ್ಲಿಗೆಯನಿಪ್ಪುದ ಬೆಳ್ಳಿವಸರ್ಗೆ ತ[ಕ್ಕ]ನೇ ॥೨೯॥

ಪದ್ಯ
ಚಲ್ಲದ ನೆಲೆ ಇಲ್ಲದ ಮುಳಿ ।
ಸೊಲ್ಲದ ಬಗೆಯಱಿಕೆ ಬೆಲ್ಲ ಬಳಿ ಬಲ್ಲರ ಸೋಂ
ಕೆಲ್ಲರ ಗೆಲವಲ್ಲದ ನುಡಿ।
ಸೊಲ್ಲದು ಪೂವಿಲ್ಲಡಿರೆನಿಪ್ಪುದು ರನ್ನಾ ॥ ೩೦ ॥
ಶಬ್ದ – ಅರ್ಥ
ಚೆಲ್ಲದ ನೆಲೆ – ಇಲ್ಲದ ಮುಳಿಸು [ಕೋಪವಿಲ್ಲದ]
ಒಲ್ಲದ ಬಗೆ – ಇಷ್ಟವಿಲ್ಲದ
ಬೆಲ್ಲಬಳಿ – ಬೆಲ್ಲದ ರೀತಿ
ಬಲ್ಲರ್ ಸೋಕು – ಎಲ್ಲರ ಗೆಲವಲ್ಲದ ನುಡಿ
ಪೂವಿಲ್ಲಡಿ – ಮನ್ಮಥನ ಹೆಜ್ಜೆ
ಪೂವಿಲ್ – ಮನ್ಮಥ

ಪದ್ಯ
ಸಿರಿಯೊಗದಾಣಂ ನೈಲಂ!
ಬರೆ ಬಣ್ಗೊಡಿ ಪುಟ್ಟು ಬಾನ್ವರುಣಿ ಸಿಂಗಡಲೆ
ಚ್ಚಱ ಬಗೆಯರಮೊಗಸಚ್ಚರ?
ದಿರಿಯನೆ ಪಯಸಾಬ್ದಿ ಬೆಳ್ಳವೆಸರಾಂತವನೇ ॥ ೩೧ ॥

ಶಬ್ದ – ಅರ್ಥ

ಸಿರಿಯೊಗೆದಾಂ – ಸಂಪತ್ತು ಹುಟ್ಟಿದ ಸ್ಥಳ

ಇಂಗಡಲ್ – ಇನಿದಾದ ಕಡಲು

ಬಾನ್ವರುಣಿ – ಚಂದ್ರ

ಪದ್ಯ

ಕಾಯಿ ಪಣ್ಣುದಾಣಮಿಳಿಪಿನ ।
ತಾಯಿ ಪೊಳೆನಿರೊಟ್ಟನಿಲ್ಗೆ ಬಿಸುಡಿ ಬೆಕ್ಕಂ ?
ಜಾಯಿಪು ಸೊಡಮ್ರ್ಯೆಂ ಗಾಣ್ಕೆ ।
ಲಾಯಿಪುದೆ ಝುಳವಾಳ್ಕೆ ಪೆರಳುರ್ವಿದಿ ರನ್ನಾ ॥ ೩೨ ॥

ಪದ್ಯ

ನವಿಲಗಾರ್ತಿಯ ನಡೆದೊಳ ।
ಸವಿಯುಳಿಮ್ಮೈಗೊಡುವಕ್ಕಿ ಮೆಲ್ಲದಿ ಬೆಳ್ಗಂಚ ।
ವಲುವೆಸು ಸರೆನ ಇಲ್ವಳಸುವ ।
ಗಿಳಿ ಎನ್‌ಲಂಚೆ ಬೆಳ್ಳಿವೆಸರಾಂತವನೇ ॥ ೩೩ ॥

ಪದ್ಯ

ಸಬಬಾಸನೆಯಿರ್ಪೊಡೆ ಸೆ ।
ಸಬೆಯದ ಪೂನೆಲಬಗ್ಗು ಬಿಳಿಗ್ಗಿನಬೆಳಗಿಂ?
ಪುಬಸನೆ ಬಾನ್ಬಳಿಯರಕಂ ।
ಣ್ಗಬಳಲೆ ತಿಳಿ ಎನೆ ದೇವಭೂರುಹಂ ಕವಿರತ್ನಾ ॥ ೩೪ ॥

ಪದ್ಯ

ಸೊಗಬಳಿಗಿ ಸುಪುವರರ್ಗೆ ।
ಬಗಸೊಲಪಿಗೆ ನೈಲಸಿರಿಗೆ ಮೆಲ್ಲಡಿ ಬೊರೆ!
ಇಗೆ ತಗದಶ ಸೆಜವಿಗೆ ಕಣ್ಬೆರ ।
ಲೊಗೆ ಬಸಳನಿಳಯೆನಲ್ಕೆ ಲಲನೆಯರ್ ಕವಿರತ್ನಾ ॥ ೩೫ ॥

ಪದ್ಯ

ಬಳಿಗೆಲಯಂ ಬದಗಂ ನಾ ?
ಳ್ಗಿಳಿವಾಡಂ ನನ್ನಿಡಿಗಳನುಳಿಗಂತಳೆಗಂ ।
ಸಳಿಬೊಳೆಗಿಳಿಯಂ ಸಾಜುಳಿ ।
ಗೆಳೆಯನೆನಲ್ಸಗ್ಗನುಳಿದನೆಲೆ ಕವಿರತ್ನಾ ॥ ೩೬ ॥

ಪದ್ಯ

ನೆಲಬಲಲಂ ನಿಜೌ ಬೆಳಲಂ ।
ಬಲಸೊಲಹಂ ಬಚ್ಚಬಣಿಸೆ ಬಲ್ಪಣಿವಾ೧ದಂ೧।
ಪೊಲಗೆ ಸುಸಿಳಗಿಲಿ ಬಾ
ಳ್ತೊ೨ಲೆ೨ಗೆಲೆಯುಣಿಸಾರ್ಕೆ೩ಯ೩ ಸೊಕೆಯೆಲೆ ಕವಿರತ್ನಾ ॥೩೭॥

ಪದ್ಯ

ಕೊನರ್ವಿಡಿ ಸುಳಿದಾಳ್ಕೈಲಂ ।
ಗೊನೆ ನುಣ್ಬ೧ಸು೧ ಗಾಣ್ಕೆ ಬಗಸುನಿಲೆ ಬಂಬಲ್ವಾ।
ಲ್ಪನೆ ನೈಲಸರಿಗೆ ಪಾರ್ದಂ ।
ದೆನೆ ತಿಳಿ೨ನಿಂ೨ಪ೩ಚ್ಚ೩ದೆನೆಯೆನಿಪ್ಪದು ರತ್ನಾ ॥ ೩೮ ॥

ಪದ್ಯ

ಮೀನಾ೧ಣ್ಮ೧ ನದಳೆ೨ಯಿಂ೨ ಗೈ ।
ಬಾನಂ ಬೊಪವರ್ಗಲುಣಿಸು ಕಂ೩ಡೆರ್ದೆ೩ ಬಾಳ್ ನೀ।
೪ವುಂ೪ ನಾಣ್ಕೆಯ ೫ಕೊಲ್ಲಾ೫ಲ್ಪೆಳೆ ।
ತಾನೆನೆ ಬೆಳ್ದಿಂಗಳೆಂಬುದಲೆ ಕವಿರತ್ನಾ ॥ ೩೯ ॥

ಶಬ್ದ – ಅರ್ಥ

ಮೀನಾಣ್ಮ – ಚಂದ್ರ
ದಳೆ – ಬೆಳದಿಂಗಳು
ಯಿನ್ – ಸವಿಯಾದ, ಆಕಾಶದಲ್ಲಿ ಸವಿಯಾಗಿರುವವನು

ಪದ್ಯ

ಆ೧ಲೆನ೧ ಬಲ್ಸರವಲಗ೨ಲಿ೨ ।
ವಾಲಿಂಗಳ೪ಲೆಂ೪ದು ಪಕ್ಕವನೆ ಬಿಲ್ನೆರಂ ॥
ಕೋಲಾಂಕೆ ತಾನೆನಲ್ ಮಱು।
ಗೋಲೆನ ಬಿಲ್ಲಾರಿಯೆಂಬು೨ದಂ೨ ತಿಳಿ ರತ್ನಾಂ ॥ ೪೦ ॥

ಶಬ್ದ – ಅರ್ಥ

ಪಕ್ಕೆ, ಬಿಲ್ನೆರಂ, ಕೋಲಾಂಕೆ, ಮರುಗೋಲ್ = ಬಾಣ

ಪದ್ಯ

ಸೂಡಗುರೆ ಸೆ೨ಕ್ಕ೨ ಬೆಂಗೊನೆ
ಗೂಡಳ೨ಱ೨ಲ್ ಸುಳಿಬೆದರ್ಚು ಪೆ೪ಱ೪ ೨ಬೆಂಗಿ೨।
೬ಳ್ಳೊಡೆ೬ ಮುಟ್ಟಜಿಮೆ ಕಳಲಡಿ ।
ವಾಡನೆ ೮ಬಿಂ೮ಗೆಯೆಂಬುದಂ ೯ತಿಳ್೯ ರತ್ನಾ ॥ ೪೧ ॥

ಪದ್ಯ

ವೃ?? ಮಿಳಿರೆಲೆ ಪೋಲ೧ರಾ೧ಣ್ಮನ೨ಜ೨ ವಟ್ಟಿಗರಿಚ್ಚೆಗನೆ೩ಣ್ಣ೩ವಾಡಿಗಂ
ಪೊಳಜಿಕೆಯಿಲ್ಲದಂ ಸವಲನೆಚ್ಚ೪ಱ೪ಮೆಯ೫ಜ೫ನ್ನೈಲವ೬ಳ್ಕೆ೬ ಗಂ।
ಝು೭ಳ೭ವಿಲಿಗಂ ಮಿಳಿರ್ವಲಲನೆಂದೆ೮ನ೮ಲಿಂದ್ರನ ರಂಚು ತು೯ಳ್ತು೯ಗಂ।
೧೦ಪಿಳಿ೧೦ ವಳಿಗೋಲನೆಂದೆನೆ ಖಲಂ ಬಗೆ ಸಾಸವ ಚನ್ನವಾಳವಾಳ್ ।
ಕುಳಿರಲೆ ೧೧ವಟ್ಟಿ೧೧ ದೋರ್ಕೆ ಮಗಳೆಂದೆನೆ ಮುನ್ನ ಗೌರಿಯೆಂಬುದಂ ॥೪೨॥

೧ಪೆಱ೧ಬಳ೨ಕ್ಕ೨ಯೆಸುರ್ಪಡೆ।
೩ಯು೩ಱಅ೪ಳೆ೪ಮ೫ಗು೫ಳಳತೆ ಕಾಣ್ಬೆ ೬ಇಂ೬ನಡೆ।
ನೆಜಿ೭ದಾ೭ಳಳರಳಿ೮ಕೆ ಪೊಳ್ತುಳದಿಕೆಯೆಂ ।
ದಜಿಗೊಳ್ಮಲ್ತೆಂದು ಬೆಳ್ಳಿವೆಸರಾಂತವನೇ ॥ ೪೩ ॥

ಪದ್ಯ

ಪೊತ್ತಿ೧ಕ್ಕೆ೧ನೆ ಪೊರದಾಳ್ದಿಹ ?
ರುತ್ತಕ್ಕೆನೆ ಕೂಡೆ ಬಾಳ್ದಪ೨ರ್೨ ಪೊಱ೩ಪಾ೩ಳುಂ ।
ಪತ್ತಿ೪ಕ್ಕೆ೪ನೆ ಸಾರ್ದಪರೆಂ ?
ಬು೫ತ್ತಿ೫ಯ ನೀಂ ತಿಳಿ೬ಯೊ೬ ಬೆಳ್ಳವೆಸರಾಂತವನೇ ॥೪೪॥

ಶಬ್ದ - ಅರ್ಥ
ಪೊತ್ತಿಕ್ಕೆನೆ - ಪೊರೆದಾಳ್ದಿಹರ್
ಉತ್ತಕ್ಕೆನೆ - ಕೂಡೆ ಬಾಳ್ದಪರ್
ಪೊರೆಪಾಳುಂ ಪತ್ತಿಕ್ಕೆನೆ - ಸಾರ್ದಪರ್
ಎಂಬ ಉಕ್ತಿಯ ನೀಂ ತಿಳಿ

ಪದ್ಯ

ಸುಳಿವಳಿಸಾರೆ ಗಾಲ್ಸರಗಿನಗಿ ನಾಳ್ಕೆ ಕಣ್ಬಸೆನ್ಯೆಲಿದೋಳು ಪೆ।
ಚ್ಚ ಳಗೆಜೆಯೆಂದನಲ್ಧುನದಿ ಕೇಳ್ಕೆನಿರ್ದುಂಬಂಳ ಸೊರ್ಲ್ದೆ ಬಂಣಣಂ।
ಕುಳಿರೆ ದೆ ಕ್ಕಲನಣ್ಬ ಗರೆ ತಿಂಗಳವಟ್ಟ ರೆ ॥೪೫॥

ರನ್ನನಿಘಂಟು ಸಮಾಪ್ತ ಮಂಗಳ ಮಹಾಶ್ರೀ

ಮೂಲದ್ರಾವಿಡ ಭಾಷೆಯಿಂದ ಪ್ರತ್ಯೇಕವಾದ ಮೇಲೆ ಹಲವು ಬಗೆಯ ಧ್ವನಿವ್ಯತ್ಯಾಸಗಳು ಎಲ್ಲಾ ಭಾಷೆಗಳಲ್ಲೂ ಸಂಭವಿಸಿವೆ. (ಉದಾ- ಪೊಡಮಟ್ಟು ಕನ್ನಡ -ಪೊರಮಟ್ಟು ತಮಿಳ್, ಪುಳಿಯೋಗರೆ - ಪುಳಿಯೊಗರೆ) ಧಾತು ಪದಗಳಲ್ಲಿ ಉಂಟಾಗಿರುವ ವ್ಯತ್ಯಾಸವನ್ನು ಕೆಲವು ಪದಗಳಲ್ಲಿ ಗಮನಿಸಬಹುದು. ಕಾಲ ಸರಿದಂತೆ ಹೊಸ ಭಾಷೆಯ ಪ್ರಭಾವಗಳಿಗೊಳಗಾಗಿ ಪದಗಳು ಬದಲಾವಣೆಗೊಂಡಿವೆ. ಒಂದು ಭಾಷೆಯನ್ನು ಆಡುವ ಜನರು, ವಾಸಿಸುವ ಪ್ರದೇಶದಲ್ಲಿ ಮೈತಳೆಯುವ ಸಾಮಾಜಿಕ, ರಾಜಕೀಯ ಮತ್ತು ಮತೀಯ ಬೆಳವಣಿಗೆಗಳಿಂದ, ವಿಜ್ಞಾನ, ತಂತ್ರಜ್ಞಾನ ಬೆಳವಣಿಗೆಯಿಂದ ಹೊಸ ಪದಗಳು ಉತ್ಪತ್ತಿಯಾಗುತ್ತಿರುತ್ತವೆ. ಆ ಪದಗಳಿಗೆ ಒಂದೇ ಅರ್ಥವಿರುವುದಿಲ್ಲ. ಎಲ್ಲಾ ಕಾಲದೇಶಕ್ಕೂ ಒಂದೇ ಅರ್ಥವಿರುವುದಿಲ್ಲ. ಸಂದರ್ಭಾನುಸಾರವಾಗಿ ಶಬ್ದದ ಅರ್ಥಗಳು ಬದಲಾಗುತ್ತಿರುತ್ತವೆ. ಆದುದರಿಂದ ಪ್ರತಿಯೊಂದು ಶಬ್ದದ ವ್ಯುತ್ಪತ್ತಿ, ಅದು ಬದಲಾವಣೆ ಹೊಂದಿದ ಬೇರೆ ಬೇರೆಯ ರೂಪಗಳು, ಪ್ರಸ್ತುತದ ಅದರ ರೂಪ, ಉಳಿದ ಶಬ್ದಗಳೊಂದಿಗೆ ಹೋಲಿಸಿದಾಗ ಕಾಣಬಹುದಾದ ಏಕರೂಪತೆ ಮತ್ತು ಅನನ್ಯತೆಯನ್ನು ಗಮನಿಸಬೇಕಾಗುತ್ತದೆ. ಈ ಹಿನ್ನೆಲೆಯಲ್ಲಿ

ಮೂಲದ್ರಾವಿಡ ಭಾಷಾ ವರ್ಗಕ್ಕೆ ಸೇರಿದ ತಮಿಳು ಪದಗಳನ್ನು ರನ್ನಕಂದದಲ್ಲಿ ಗುರುತಿಸಲಾಗಿದೆ. ಆ ಪದಗಳು ಈ ಕೆಳಗಿನಂತಿವೆ.

1) ಕುಳಿರ್‌ಕಾಲ – ಶೀತಕಾಲ (1ನೇ ಪದ್ಯ)
2) ಅಂಬು–ಬಾಣ (1ನೇ ಪದ್ಯ)
3) ಮಾರನ್ – ಮಾರ (1ನೇ ಪದ್ಯ) ಮುಂಉರಿಯನ್
4) ಕಾಸರದ್ – ಕಾಸಿದ ಮಳಗ್ (2ನೇ ಪದ್ಯ)
5) ಸೊಲ್ಲು – ಮಾತು (30ನೇ ಪದ್ಯ)
6) ನೈದಲ್ – ನೈದಲ ಹಳೆಗನ್ನಡ [ನೈದಿಲೆ]
7) ಮೊಳಂಗಾಲ್ (3ನೇ ಪದ್ಯ)
8) ಮರುನೆಲೆ – ಬದಲಾದ ನೆಲೆ (21ನೇ ಪದ್ಯ) ಮತ್ತೊಂದು ನೆಲೆ
9) ಪೊಡವಟ್ಟವಂ–ಪೊರಪಟ್ಟಾಣ್, ಪೊರಮೊಟ್ಟು ತಮಿಳ್ (22ನೇಪದ್ಯ)
10) ಅಚ್ಚಂ – ಅಂಜಿಕೆ (ಅಂಚ – ರನ್ನ ಕಂದ) (5ನೇ ಪದ್ಯ)
11) ಅರಲ್ – ಹೂ
12) ವಟ್ಟಿಲ್–ಬಟ್ಟಲು [ತೆಂಗಿನ ಸಟ್ಟುಗ ಕಾಯಿ ಕರಟದ ಬಟ್ಟಲು] (10ನೇ ಪದ್ಯ)
13) ತಗಂದವಣೇ – ತಕ್ಕನೇ (29ನೇ ಪದ್ಯ)
15) ಅಲ್ಕು – ನೆಲೆಯಾಗಿ ನಿಲ್ಲುವುದು
14) ಕಲಿಗಲ – ಕೂಡಬೆರಸಿದಕ್ಕು [ಎಲ್ಲರೂ ಕೂಡಿರುವುದು]
15) ಕೈಪಿಡಿತ್ತು – ಕೈವಿಡಿದು ಆಗಿ ಬದಲಾಗಿರಬಹುದು ಕೈ ಹಿಡಿದು.
16) ಕೂರ್ಪ್ – ಕೂರ್–ಚೂಪು [ಕೂರ್–ಪ್ರೀತಿ] ಕನ್ನಡದ್ದು
17) ಕಾರ್‌ಪೊರೆ – ಮಳೆ ಸುರಿಯಿತು.
18) ಕಾರ್‌ಪೊಳಿ ಎಲೆ – ಪೊಳಿಂಡದ–(13ನೇ ಪದ್ಯ)
19) ನೇರ್ – ನೇರ, ನೇರವಾದ – (13ನೇ ಪದ್ಯ)
20) ಅರಿಮೆ – ಅರಿವು, [ನೆಲದ ದನಿಗಳು]
21) ನಲ್ವೀರ್‌ಅರಸನ್ – ಒಳ್ಳೆಯ ಅರಸ (14ನೇ ಪದ್ಯ)
22) ಎನೆ – ಎಲೆ
23) ಮುಗಿಲ್ – ಮೋಡ (16ನೇ ಪದ್ಯ)
24) ಪೊನ್ನ – ಬಂಗಾರ (15ನೇ ಪದ್ಯ)
25) ತಳಿರ್ – ಚಿಗುರು (19ನೇ ಪದ್ಯ)

26) ಮೆಲ್ಲಡಿ – ಮೆಲ್ಲಗೆ (20ನೇ ಪದ್ಯ)
27) ಎಣೆವಕ್ಕಿ – ಜೊತೆಯಿರುವ ಹಕ್ಕಿ
28) ಬಾಯ್ನುಡಿ – (21ನೇ ಪದ್ಯ)

ಕವಿಗಳು ತಮ್ಮನ್ನು ಹಾಗೂ ತಮ್ಮ ಆಶ್ರಯದಾತರನ್ನು, ರಾಜರನ್ನು, ದೇವ-ದೇವತೆಯರನ್ನು ಹೊಗಳಲು ಅಥವಾ ವರ್ಣಿಸಲು ವಿಶೇಷ ಪದಗಳನ್ನು ಬಳಸುತ್ತಿದ್ದರು. ಇಂತಹ ಪದಗಳನ್ನು ಈ ಸಂಶೋಧನೆಯಲ್ಲಿ ಗುರುತಿಸಲಾಗಿದೆ. 'ಸಂಗಂ ಸಾಹಿತ್ಯ'ದಲ್ಲೂ ಇಂತಹ ಪದಗಳನ್ನು ಕಾಣಬಹುದಾಗಿದೆ. 'ರನ್ನಕಂದ'ದಲ್ಲಿನ ಕೆಲವು ಪದಗಳನ್ನು ಗುರುತಿಸಿ ನೀಡಲಾಗಿದೆ. ಉದಾ – ಬಂಗಾರದಂತಹವನೇ.

ಬೆಳ್ಳಿವೆಸರಾಂತವನೇ– [ಬೆಳ್ಳಿಯಂತಹ ಹೆಸರನ್ನು ಪಡೆದವನೇ]
ಊನ್ಮದಾವಳಿಗಯಗಲ್ದಿರಾಳ್ದವನೆ
ಸಾಜೆನ್ನೈಲವೆರ್ಚ್ಚುಗಳೊಗೆದಾರೊಮಾಂಪನನೆ
ಬೆಳ್ಳಿವೆಸರ್ಗೆ ತಕ್ಕನೇ
ಗಂರ್ಝುಳವಿಲಿಗಂ ಮಿಳಿರ್ವಲಲನೆ
ಇಂದ್ರನ ರಂಚು ತುಳ್ತುಗಂಪಿಳಿ ವಳಿಗೋಲನೆ
ಮರ್ಬುಸುಳಿಕಾರರೆನೆ

ಪ್ರಾಚೀನರ ಜ್ಞಾನ ಸಂಪತ್ತು ನಮ್ಮ ಅರಿವಿನ ವಿಸ್ತರಣೆಗೆ ಅತ್ಯಂತ ಅವಶ್ಯಕ. ಈ ನಿಟ್ಟಿನಲ್ಲಿ ಶಬ್ದಭಂಡಾರಗಳ ಅಧ್ಯಯನ ನೀಡುವ ಅರಿವು ಅಪಾರವಾದುದು. ಇವುಗಳ ಅಧ್ಯಯನದಿಂದ ಪದಗಳ ಅರ್ಥದೊಂದಿಗೆ ಭಾಷೆಯ ಇತಿಹಾಸ, ಸಾಮಾಜಿಕ ಸಂದರ್ಭ ಮತ್ತು ಸಾಂಸ್ಕೃತಿಕ ಮಹತ್ವವನ್ನು ತಿಳಿಯುತ್ತೇವೆ. ಪದ ನಮ್ಮ ಮಾತೃಭಾಷೆಯದ್ದಾಗಿದ್ದಾಗ ಭಾವನಾತ್ಮಕವಾಗಿ ಸ್ಪಂದಿಸುತ್ತೇವೆ. ಜೀವಂತಿಕೆಗೆ ಮಿಡಿಯುತ್ತೇವೆ. ಶಬ್ದಗಳು ಜನರ ಧಮನಿಯ ದನಿಯಾಗಿ ಸಾಗುತ್ತಿರುತ್ತವೆ. ನಿಘಂಟುಗಳ ಅಧ್ಯಯನದಿಂದಾಗುವ ಪ್ರಯೋಜನವನ್ನು ಕೇಶೀರಾಜ ತನ್ನ 'ಶಬ್ದಮಣಿದರ್ಪಣ'ದಲ್ಲಿ ಹೀಗೆ ನುಡಿದಿದ್ದಾನೆ.

ವ್ಯಾಕರಣದಿಂದ ಪದಮಾ
ವ್ಯಾಕರಣದ ಪದದಿನರ್ಥಮರ್ಥದೆ ತತ್ವಾ
ಲೋಕಂ ತತ್ವಾಲೋಕದಿ
ನಾಕಾಂಕ್ಷಿಪ ಮುಕ್ತಿಯಕ್ಕುಮಿದೆ ಬುಧರ್ಗೆ ಫಲಂ.

ಈ ಸಂಶೋಧನಾ ಲೇಖನದಲ್ಲಿ ರನ್ನ ಕಂದದ ಸಂಪೂರ್ಣ ಪದ್ಯಗಳಲ್ಲಿನ ಪದಗಳನ್ನು ಬಿಡಿಸಿ ಅರ್ಥ ಕೊಡಲು ಸಾಧ್ಯವಾಗಲಿಲ್ಲ. ಕಾರಣ ಕೆಲವು ಪದ್ಯಗಳು ಅರ್ಥಪೂರ್ಣವಾಗಿಲ್ಲ. ಆದ್ದರಿಂದ ಈ ನಿಘಂಟುವಿನಲ್ಲಿರುವ ಪದ್ಯಗಳನ್ನು ಬಿಡಿಸಿ, ಹೊಸಗನ್ನಡದ ಅರ್ಥಗಳನ್ನು ಮತ್ತು ಆ ಪದಗಳ ವರ್ತಮಾನದ ಬಳಕೆಯನ್ನು ಗುರುತಿಸುವ ಸಲುವಾಗಿ ಈ ಸಂಶೋಧನಾ ಕಾರ್ಯವನ್ನು ಮುಂದುವರೆಸಲಾಗುವುದು.

****

ದುರ್ಗಸಿಂಹನ ಕರ್ಣಾಟಕ ಪಂಚತಂತ್ರ

ಡಾ. ರವಿಶಂಕರ್ ಎ.ಕೆ.
ಕ್ರಿಸ್ತು ಜಯಂತಿ ಕಾಲೇಜು, ಬೆಂಗಳೂರು

ಪೂರ್ವಪೀಠಿಕೆ

ಭಾರತದ ಕಥಾ ಲೋಕದಲ್ಲಿ ಪಂಚತಂತ್ರಕ್ಕೆ ವಿಶೇಷವಾದ ಸ್ಥಾನವಿದೆ. ಸಂಸ್ಕೃತದ ಹಿನ್ನಲೆಯಲ್ಲಿ ದೊರಕುವ ಸಾಹಿತ್ಯ ಪರಂಪರೆಯು ಎರಡು ಮಾದರಿಯ ಕಥಾ ಜಗತ್ತನ್ನು ನಮಗೆ ನೀಡಿದೆ. ಬೃಹತ್ಕಥಾ ಮತ್ತು ಪಂಚತಂತ್ರ. ಗುಣಾಢ್ಯನ ಪೈಶಾಚಿ ಭಾಷೆಯ ಅಲಭ್ಯ ಕೃತಿ ಬೃಹತ್ಕಥಾ. ಇದು ದೊರೆಯದಿದ್ದರೂ ಇದರ ಪ್ರಭಾವವನ್ನು ಮೂರು ಕೃತಿಗಳಲ್ಲಿ ಕಾಣಬಹುದು. ಕ್ಷೇಮೇಂದ್ರನ ಬೃಹತ್ಕಥಾಮಂಜರಿ, ಸೋಮದೇವನ ಕಥಾಸರಿತ್ಸಾಗರ, ಬುಧಸ್ವಾಮಿಯ ಬೃಹತ್ ಕಥೆಯ 'ಶ್ಲೋಕ ಸಂಗ್ರಹ' ಈ ಕೃತಿಗಳ ಹಿನ್ನೆಲೆಯಲ್ಲಿ ಗಮನಿಸುವುದಾದರೆ 10–11ನೇ ಶತಮಾನದ ಕಾಲದಲ್ಲಿ ಸಂಸ್ಕೃತಕ್ಕೆ ಬೃಹತ್ಕಥಾ ಬಂದಿರಬಹುದು ಎಂದು ವಿದ್ವಾಂಸರು ಅಧ್ಯಯನ ನಡೆಸಿದ್ದಾರೆ. ಈ ಪಂಚತಂತ್ರಗಳು ಎರಡು ಮಾದರಿಯವು. ವಸುಭಾಗಭಟ್ಟನ ಪಂಚತಂತ್ರ ಹಾಗೂ ವಿಷ್ಣು ಶರ್ಮನ ಪಂಚತಂತ್ರ. ಇದರಲ್ಲಿ ವಸುಭಾಗಭಟ್ಟನ ಪಂಚತಂತ್ರವು ದಕ್ಷಿಣ ಭಾರತದಲ್ಲಿ ವ್ಯಾಪಕವಾಗಿ ಹರಡಿದೆ. ಇದೇ ಕೃತಿಯು ದುರ್ಗಸಿಂಹನ ಪಂಚತಂತ್ರದ ಮೇಲೆ ಪ್ರಭಾವಿಸಿರುವುದನ್ನು ಕಾಣಬಹುದು.

ವಸುಭಾಗಭಟ್ಟ ಕೃತಿಯಂ ಸುಧಾದಿಪಹತಮನಖಿಲವಿಭುದಸ್ತುತಮಂ।

ಪೊಸತಾಗಿರೆ ವಿರಚಿಸುವೆಂ ವಸುಮತಿಯೊಳ್ ಪಂಚತಂತ್ರ ಕನ್ನಡದಿಂ॥

ದುರ್ಗಸಿಂಹನೇ ಹೇಳುವಂತೆ ಈ ಶ್ಲೋಕವು ಶಿವನು ಹೇಳಿದ ಕಥೆಯನ್ನು ಪುಷ್ಪದತ್ತನೆಂಬ ಗಣಧರನು ಕೇಳಿಸಿಕೊಂಡು ಮತ್ತೆ ಭೂಮಿಯಲ್ಲಿ ಗುಣಾಢ್ಯನಾಗಿ ಹುಟ್ಟಿ, ಪೈಶಾಚಿಕ ಭಾಷೆಯಲ್ಲಿ ಬರೆದನು. ಅದರಲ್ಲಿ ಐದು ತಂತ್ರಗಳನ್ನು ಆಯ್ದುಕೊಂಡು ವಸುಭಾಗಭಟ್ಟನು ಸಂಸ್ಕೃತದಲ್ಲಿ ಬರೆದನು. ಅದನ್ನು ಹೊಸದಾಗಿ ಕನ್ನಡದಲ್ಲಿ ಬರೆದಿರುವೆನೆಂಬ ಈತನ ಪೀಠಿಕೆಯೇ ಕನ್ನಡದ ಪಂಚತಂತ್ರವಾದ ಹಿನ್ನಲೆಯನ್ನು ತಿಳಿಸುತ್ತದೆ.

ಪ್ರಪಂಚದಲ್ಲಿ ಪಂಚತಂತ್ರದ ಕಥೆಗಳು

ಜನಪದ ಕಥೆಗಳು ಪ್ರಪಂಚದ ಎಲ್ಲಾ ಭಾಗಗಳಲ್ಲಿಯೂ ಅಲ್ಲಿನ ಜನಗಳ ಬದುಕನ್ನು ಅರ್ಥಪೂರ್ಣಗೊಳಿಸಿವೆ. ಈ ಕಥೆಗಳಲ್ಲಿ ಪಂಚತಂತ್ರದ ಕಥೆಗಳು ಸೇರಿವೆ. ಇವುಗಳ ಸೃಷ್ಟಿಯನ್ನು ತಿಳಿಯಲಾಗದಿದ್ದರೂ, ಅವುಗಳ ಪ್ರಸಿದ್ಧಿಯನ್ನು ತಿಳಿಯಬಹುದು. ಅಧ್ಯಯನಕಾರರ ದೃಷ್ಟಿಯಿಂದ ನಾಲ್ಕು ದಾಖಲೆಗಳು ನಮಗೆ ದೊರೆತಿವೆ. ಪಹಲವಿ ಭಾಷೆಯಲ್ಲಿ ಕ್ರಿ.ಶ ಆರನೇ ಶತಮಾನದಲ್ಲಿ ಅನುವಾದಗೊಂಡಿರುವ ಅಲಭ್ಯ ಪಂಚತಂತ್ರ ಕೃತಿ. ಆದರೆ ಈ ಕೃತಿಯು ಸಿರಿಯನ್ ಮತ್ತು ಅರಬ್ಬೀ ಭಾಷೆಗಳಲ್ಲಿ ಲಭ್ಯ ಇವೆ. ಗುಣಾಢ್ಯನ ಬೃಹತ್ಕಥಾ ಎಂಬ ಪೈಶಾಚಿ ಭಾಷೆಯ ಕೃತಿ. ಈ ಕೃತಿಯು ಕ್ಷೇಮೇಂದ್ರ ಮತ್ತು ಸೋಮದೇವನ ಕೃತಿಗಳಲ್ಲಿ ಈ ಕೃತಿಯ ಅನುವಾದವನ್ನು ಕಾಣಬಹುದು. ತಂತ್ರಾಖ್ಯಾಯಿಕಾ ಎಂಬ ಗ್ರಂಥದಲ್ಲಿ ಪಂಚತಂತ್ರದ ಕತೆಗಳಿವೆ. ನೇಪಾಳದ ಪಂಚತಂತ್ರ ಮತ್ತು ಹಿತೋಪದೇಶಗಳಲ್ಲಿ ಪಂಚತಂತ್ರದ ಕಥೆಗಳನ್ನು ಕಾಣಬಹುದು. ಪಂಚತಂತ್ರ ಕುರಿತು ಆಳವಾಗಿ ಅಧ್ಯಯನ ಮಾಡಿದ ಎ.ವೆಂಕಟಸುಬ್ಬಯ್ಯ ಅವರು ಪ್ರಾಚೀನ ಮತ್ತು ಅರ್ವಾಚೀನವೆಂದು ಎರಡು ರೀತಿಯಲ್ಲಿ ಅಧ್ಯಯನಮಾಡಿದ್ದಾರೆ. ಪ್ರಾಚೀನದಲ್ಲಿ ಆರು ಬಗೆಯ ಪಂಚತಂತ್ರಗಳನ್ನು ಗುರ್ತಿಸಿದ್ದಾರೆ. 1. ಕಾಶ್ಮೀರ ಪಂಚತಂತ್ರ, 2. ಲಾಟೀಯ ಪಂಚತಂತ್ರ (ಸೌರಾಷ್ಟ್ರ ಮತ್ತು ಲಾಟೀಯ ದೇಶಗಳಲ್ಲಿ ದೊರೆಯುವ

ಪಾಠ. ಇದನ್ನು ಹರ್ಟೆಲ್ ವಿದ್ವಾಂಸರು Textus Simplicitor ಎಂದಿದ್ದಾರೆ. 3. ಲಾಟೀಯ ಪಂಚತಂತ್ರದ ಬ್ರಹತ್ಪಾಠ. (ಈ ಕೃತಿಯನ್ನು ಪೂರ್ಣಭದ್ರನೆಂಬ ಜೈನಮುನಿಯು ರಚಿಸಿರುವ ಕಾರಣ ಹರ್ಟೆಲ್ ವಿದ್ವಾಂಸರು ಪೂರ್ಣಭದ್ರನ ಪಂಚತಂತ್ರ ಎಂಬ ಹೆಸರು ನೀಡಿದ್ದಾರೆ) 4. ದಕ್ಷಿಣ ಪಂಚತಂತ್ರ 5. ದಕ್ಷಿಣ ಪಂಚತಂತ್ರದ ಬೃಹತ್ಪಾಠ. 6. 'ಕಲಿಲದ ಪದಮ್ನ' ಎಂಬ ಹೆಸರಿನಿಂದ ಕರೆಯುವ ಅರಬ್ಬೀ ಭಾಷೆಯ ಪ್ರಭೇದವಾದ ಪಹಲವಿ ಪಂಚತಂತ್ರ ಕೃತಿ. ಜಗತ್ತಿನಲ್ಲಿ ಸಂಶೋಧನೆಯ ಪ್ರಕಾರ 90 ರೀತಿಯ ಪಂಚತಂತ್ರದ ಪರಿಷ್ಕರಣೆಗಳಿವೆ. ಅಧ್ಯಯನಗಳು ತಿಳಿಸುವಂತೆ ಸುಮಾರು. 200 ರೀತಿಯಲ್ಲಿ ಅನುವಾದ, ರೂಪಾಂತರಗೊಂಡಿರುವುದನ್ನು ಕಾಣಬಹುದು.

ದುರ್ಗಸಿಂಹನ ಪರಿಚಯ :

ದುರ್ಗಸಿಂಹನು 1030ರ ಕಾಲದ ಚಂಪೂಕವಿ. ಗದಗ ಜಿಲ್ಲೆಯ ರೋಣ ತಾಲ್ಲೂಕಿನ ಸವಡಿಯು ಅಂದಿನ ಕಿಸುನಾಡಿನ ಸಯ್ಯಡಿ ಈ ಗ್ರಾಮದವನು. ಕಮ್ಮೆ ಕುಲದ ಸ್ಮಾರ್ತ ಭಾಗವತ ಬ್ರಾಹ್ಮಣನಾಗಿ ಜನಿಸಿದರೂ, ಅವನ ಪಂಚತಂತ್ರ ಕೃತಿಯು ಜೈನ ಪ್ರಭಾವವನ್ನು ಕುರಿತು ತಿಳಿಸುತ್ತದೆ. ತಾತ ದುರ್ಗಮಯ್ಯ, ತಂದೆ ಈಶ್ವರಾರ್ಯ ಹಾಗೂ ತಾಯಿ ರೇವಕಬ್ಬೆ. ಇವನ ಗುರು ಮಹಾಯೋಗಿ ಶಂಕರಭಟ್ಟರು. ಕುಮಾರಸ್ವಾಮಿ ಎಂಬಾತನು ಇವನಿಗೆ ಚಾಲುಕ್ಯ ಜಗದೇಕಮಲ್ಲನ ಆಸ್ಥಾನದಲ್ಲಿ ಸಂಧಿವಿಗ್ರಹಿ ಪದವಿಯನ್ನು ಕೊಡಿಸಿದರೂ, ಜಗದೇಕಮಲ್ಲನ ಅಣತಿಯಂತೆ ಕಿಸುನಾಡಿನ ಸಯ್ಯಡಿಯಲ್ಲಿ ಹರಿಹರಭವನಗಳನ್ನು ನಿರ್ಮಿಸಿದನು. ಪಂಚತಂತ್ರ ಕೃತಿಯಲ್ಲಿ ತನ್ನ, ತನ್ನ ವಂಶದ ಕುರಿತು ಒಂದಿಷ್ಟು ಹೆಚ್ಚೇ ಹೊಗಳಿಕೊಂಡಿದ್ದಾನೆ. ಅಥವಾ ಬೇರೆಯುವರು ಗೌರವಾಧಾರಗಳನ್ನು ನೀಡುವಂತೆ ಗೌರವಿಸಿಕೊಂಡಿದ್ದಾನೆ.

ದುರ್ಗಸಿಂಹನು ತನ್ನ ಕೃತಿಯಲ್ಲಿ ನಾರಾಯಣ, ಧನಂಜಯ, ವಾಮನ, ಭಾಮಹ, ಭಲ್ಲಟ, ಭೀಮ, ಭವಭೂತಿ, ಬಾಸ, ಭಟ್ಟಿ, ಶ್ರೀಮಾಘ, ಹರ್ಷ, ರಾಜಶೇಖರ, ಕಾಮಂದಕ, ದಂಡಿ, ಗುಣಾಡ್ಯ, ವರರುಚಿ, ಕಾಳಿದಾಸ, ಬಾಣ, ಭಾರವಿ ಮೊದಲಾದ ಸಂಸ್ಕೃತ ಕವಿಗಳನ್ನೂ,

ಶ್ರೀವಿಜಯ, ಕಣ್ಣಮಯ್ಯ, ಚಂದ್ರ, ಪೊನ್ನ, ಪಂಪ, ಗಣಾಂಕುಶ ಮೊದಲಾದ ಕನ್ನಡ ಕವಿಗಳನ್ನು ಸ್ಮರಿಸಿದ್ದಾನೆ. ಕಥೆಗಳ ಮೂಲಕ ಕನ್ನಡ ಸಾಹಿತ್ಯದಲ್ಲಿ ರಾಜನೀತಿಯನ್ನು ಮತ್ತು ವ್ಯವಹಾರ ನೀತಿಯನ್ನು ಚರ್ಚಿಸಿದ ಮೊದಲಿಗನೀತ. ಕನ್ನಡದಲ್ಲಿ ವಸುಭಾಗಭಟ್ಟನ ಪರಂಪರೆಯನ್ನು ಉಳಿಸಿದವನು. ವಿಶ್ವ ಕಥಾ ಸಾಹಿತ್ಯದೊಂದಿಗೆ ಅದರಲ್ಲೂ ಪಂಚತಂತ್ರದೊಂದಿಗೆ ಅನುಸಂಧಾನ ನಡೆಸಲು ಈತನೇ ಆಧಾರಕೊಂಡಿಯಾಗಿದ್ದಾನೆ.

ದುರ್ಗಸಿಂಹನ ಪದಸಂಪತ್ತು ವಿಶೇಷವಾದುದು. ಬಳಸಿದ ಪದಗಳನ್ನೇ ಬಳಸದೆ ಕಥೆಯ ಸ್ವಾರಸ್ಯವನ್ನು ಉನ್ನತ ನೆಲೆಗೆ ಕೊಂಡೊಯ್ಯುವ ಜಾಣ್ಮೆ ವಿಶೇಷವಾದದು. ಪ್ರಾಣಿಗಳ ಹೆಸರನ್ನು ಬಳಸುವಾಗ ಶಿವಭೂತಿಯ ಕಥೆಯಲ್ಲಿ ಹುಲಿ ಎಂಬುದಕ್ಕೆ ಪುನಃ ಪುನಃ ಬಳಸುವಾಗ ಶಾರ್ದೂಲ, ಪುಂಡರೀಕ, ವ್ಯಾಘ್ರ, ಚಮೂರ ಎಂಬುದಾಗಿ ಬಳಸಿದ್ದಾನೆ. ನರಿಯ ಕಥೆಯಲ್ಲಿ ನರಿ ಎಂಬುದಕ್ಕೆ ಜಂಬುಕ, ಕ್ರೋಷ್ಟು, ಸೃಗಾಲ, ಬಳ್ಳು ಎಂಬುದಾಗಿ, ಕಪಿಯ ಕಥೆಯಲ್ಲಿ ಕಪಿ ಎಂಬುದನ್ನು ಕೋಡಗು, ಮರ್ಕಟ, ಗೋಲಾಂಗೂಲ, ಬಲೀಮುಖ ಎಂಬುದಾಗಿ ಬಳಸಿದ್ದಾನೆ. ಇವುಗಳು ಅಂದಿನ ಸಂಸ್ಕೃತ ಹಾಗೂ ಜನಪದರ ಬಳಕೆಯ ಪದಗಳೇ ಆಗಿರುವುದನ್ನು ಗುರ್ತಿಸಬಹುದು.

ದುರ್ಗಸಿಂಹನ ವಿಶೇಷತೆಯನ್ನು ವಿಡಂಬನ ವೀರತೆಯಾಗಿ ಗುರ್ತಿಸಿದ್ದಾರೆ. ಚಿಕ್ಕ ಚಿಕ್ಕ ನುಡಿಗಳನ್ನು ವಿಡಂಬಿಸುವ, ಪ್ರಧಾನವಾಗಿಸುವ ಸನ್ನಿವೇಶ ಬಂದಾಗ ದೊಡ್ಡಮಾತಿನಲ್ಲಿ, ಸಂಸ್ಕೃತಪದ ಪುಂಜಗಳಲ್ಲಿ ಹೇಳುತ್ತಾನೆ. ಪ್ರಾಣಿ, ಕೀಟಗಳ ಮೂಲಕ ಮನುಷ್ಯನ ಸಣ್ಣತನಗಳನ್ನು ಅಣಕಮಾಡುವುದನ್ನು ಕಾಣಬಹುದು. ಸಂಸ್ಕೃತವನ್ನು ಅಗತ್ಯದ ಕಡೆ ಬಳಸುತ್ತಾ, ದೇಸಿಯ ನುಡಿಗಳನ್ನು ಅಗತ್ಯದಲ್ಲಿ ಅರ್ಥಪೂರ್ಣವಾಗಿ ಧ್ವನಿಸಿದ್ದಾನೆ.

ದುರ್ಗಸಿಂಹನು ಪಂಚತಂತ್ರ ಕಥೆಯ ಮೂಲಕ ಜೈನಪುರಾಣದ ಚೌಕಟ್ಟು ನಿರ್ಮಿಸಿದ್ದಾನೆ. ಈ ಕಥೆಯಲ್ಲಿ ಬರುವ ವೃಷಭ ಮತ್ತು ಸಿಂಹವು ಆ ಸಂಕೇತವಾಗಿ ಕಾಣಬಹುದು. ವೃಷಭವು ಜೈನರಲ್ಲಿ ಆದಿತೀರ್ಥಂಕರನ

ಹೆಸರು ಮತ್ತು ಲಾಂಛನ. ಸಿಂಹವು ಇಪ್ಪತ್ತನಾಲ್ಕನೇ ತೀರ್ಥಂಕರನಾದ ಮಹಾವೀರನ ಭವವೂ, ಲಾಂಛನವೂ ಹೌದು. ಹೀಗೆ ಅಹಿಂಸಾ ಮಾರ್ಗಕ್ಕಾಗಿ ಎಲ್ಲಾ ಧರ್ಮಗಳೊಂದಿಗೆ ಮಧುರ ಮೈತ್ರಿಯನ್ನು ಹಂಬಲಿಸಿದರೂ, ಕೆಲವು ಕಹಕಿಗಳು ಹೊಂಚುಹಾಕಿ ಕೆಡಿಸಿದರು. ಅವರೇ ಈ ಕರಟಕ–ದಮನಕರರನ್ನು ಜೈನಧರ್ಮಭಂಜಕರನ್ನಾಗಿ ಕಲ್ಪಿಸಿರುವುದನ್ನು ಕಾಣಬಹುದು.

ಕೃತಿಯ ಹಿನ್ನಲೆ :

ವಸುಭಾಗಭಟ್ಟನು ರಾಜನ ಮಕ್ಕಳಿಗೆ ಹೇಳಿದ ಕಥೆಗಳ ಗುಚ್ಛವಿದು. ಸೌರೂಪ್ಯಪುರದ ಅಮರಶಕ್ತಿ ಎಂಬ ರಾಜನಿಗೆ ಏಕಶಕ್ತಿ, ವಸುಶಕ್ತಿ ಮತ್ತು ರುದ್ರಶಕ್ತಿ ಎಂಬ ಮೂವರು ದಡ್ಡ ಮಕ್ಕಳು ಇದ್ದರು. ಇವರನ್ನು ಗುಣ ಮತ್ತು ಜ್ಞಾನವಂತರನ್ನಾಗಿ ಮಾಡುವಂತೆ ರಾಜನು ರಾಜಸಭೆಯಲ್ಲಿ ವಿಜ್ಞಾಪಿಸಲಾಗಿ ವಸುಭಾಗಭಟ್ಟನು ಆ ಕಾರ್ಯವನ್ನು ಒಪ್ಪಿದನು. ಈತನು ರಾಜನ ಮಕ್ಕಳಿಗೆ ನರಿಯ ಕಥೆಯ ಮೂಲಕ ಉಪದೇಶವನ್ನು ಪ್ರಾರಂಭಿಸಿ, ನೀತಿಯನ್ನು ಹೇಳುತ್ತಾ, ಪಂಚತಂತ್ರಗಳ ಮೂಲಕ ಅವರನ್ನು ಬುದ್ಧಿವಂತರನ್ನಾಗಿ ಮಾಡಿದನು.

ಪಂಚತಂತ್ರ ಕೃತಿಯ ಚಿಂತನೆ :

ಪಂಚತಂತ್ರದ ಕತೆಗಳ ಪ್ರಾರಂಭವನ್ನು ಕುರಿತು ವರದರಾಜ ಹುಯಿಲಗೋಳರು ಹೀಗೆ ನುಡಿದಿದ್ದಾರೆ : "ಈ ಕಥಾಮುಖಗಳ ಮಹತ್ವ ಹೀಗಿದೆ: 1. ಕಥಾಮುಖಗಳು ಗ್ರಂಥಕ್ಕೆ ಪ್ರಸ್ತಾವನೆ ಇದ್ದ ಹಾಗೆ, 2) ಕೆಲವೊಂದು ಪಂಚತಂತ್ರಗಳಲ್ಲಿ ಕಥಾಮುಖಗಳು ಬೇರೆ ರೀತಿಯವಿರುವುದರಿಂದ ಈ ಕಥಾಮುಖಗಳು ಗ್ರಂಥದ ಸಂಪ್ರದಾಯವನ್ನು ತಿಳಿದುಕೊಳ್ಳಲು ನೆರವಾಗುವುವು. 3) ಪಂಚತಂತ್ರ ಕಥೆಗಳಲ್ಲಿರುವ ಮೂಲ ತತ್ವಗಳನ್ನು ತಿಳಿದುಕೊಳ್ಳಲೂ ಇವು ಸಹಾಯಕವಾಗುವುದು. 4) ಇದೂ ಒಂದು ಕಥೆ, ಮುಖ್ಯ ಕಥೆ, ಈ ದೊಡ್ಡ ಪೆಟ್ಟಿಗೆಯಲ್ಲಿಯೇ ಉಳಿದೆಲ್ಲ ಕಥೆಗಳೂ ಚಿಕ್ಕ ಪೆಟ್ಟಿಗೆಗಳಾಗಿ ಒಳಸೇರಿವೆ. ಈ ಕಥಾಮುಖ ಚಿಕ್ಕದಾಗಿ ಬಂದರೂ, ದೊಡ್ಡದು! ಕಥೆಗಳ ಚೌಕಟ್ಟಿನ ಕಥೆಯಿದು!" ['ಪಂಚತಂತ್ರ ಸಮೀಕ್ಷೆ: ಪು. 84].

ಈ ಕೃತಿಯು ಇದುವರೆಗಿನ ಅಧ್ಯಯನಗಳ ಮೂಲಕ ಕ್ರಿ.ಶ 1031ರಲ್ಲಿ ರಚಿತವಾಗಿದೆ ಎಂದು ತಿಳಿಯಬಹುದು. ವಸುಭಾಗಭಟ್ಟನ ಸಂಸ್ಕೃತ ಕೃತಿಯು ಅನುವಾದವಾಗಿದೆ. ಗದ್ಯಪ್ರಚುರವಾದ ಚಂಪೂಕೃತಿಯಾಗಿದೆ. ಇದು ರಾಜನೀತಿ ಮತ್ತು ವ್ಯವಹಾರ ನೀತಿಗಳನ್ನು ಬೋಧಿಸುವ ಕೃತಿಯಾಗಿದೆ. ಪ್ರಾಣಿಗಳೇ ಈ ಕಥೆಗಳಲ್ಲಿ ಪ್ರಮುಖ ಪಾತ್ರವಹಿಸಿವೆ. ಈ ಕಥೆಗಳು ಸಂಸ್ಕೃತ ಶ್ಲೋಕಗಳ ಮೂಲಕ ಆರಂಭವಾಗುತ್ತವೆ. ಗ್ರಂಥದ ಆದಿಯಲ್ಲಿ ವಿಷ್ಣುವನ್ನು ಸ್ತುತಿಸಿ, ಬಳಿಕ ಈಶ್ವರ, ಬ್ರಹ್ಮ, ಸರಸ್ವತಿ, ಚಂದ್ರ, ಮನ್ಮಥ, ಸೂರ್ಯ, ಗಣಪತಿ, ದುರ್ಗೆ ಇವರನ್ನು ಅನುಕ್ರಮವಾಗಿ ಸ್ತುತಿಸಲಾಗಿದೆ.

"ಶ್ರೀವಧು ರಾಗದಿಂದಗಲದಾವನ ವಕ್ಷದೊಳಿರ್ಪಳಾವಗಂ

ದೇವನಿಕಾಯಮೋಲಗಿಪುದಾವನ ನಾಭಿಸರೋಜದೊಳ್ ವಚ

ಶ್ರೀವರನುತ್ಸವಂವೆಂಬೆರಸು ಪುಟ್ಟಿದನಾವಶೇಷ ದೈತ್ಯವಿ

ದ್ರಾವಣನೀಗೆ ದುರ್ಗವಿಭುಗಚ್ಯುತನಚ್ಯುತಸೌಖ್ಯಕೋಟಿಯಂ".

ಎಂಬ ಪೀಠಿಕಾ ಪದ್ಯದಿಂದ ಪ್ರಾರಂಭವಾಗುತ್ತದೆ.

ಪ್ರತಿಯೊಂದು ತಂತ್ರದ ಕೊನೆಯಲ್ಲಿ ..

"ಇದು ವಿನಮದಮರರಾಜ ಮೌಳಿಮಾಣಿಕ್ಯಮರೀಚಿಮಂಜರೀಪುಂಜರಂಜಿತ

ಭಗವದ್ಭವಾನೀವಲ್ಲಭ ಚರಣಸರಸಿರುಹಷಟ್ಚರಣಂ ಶ್ರೀಮನ್ಮಹಾಸಂಧಿವಿಗ್ರಹಿ

ದುರ್ಗಸಿಂಹವಿರಚಿತಮಪ್ಪ ಪಂಚತಂತ್ರದೊಳ್... ಪ್ರಕರಣಂ...ತಂತ್ರಂ ಸಮಾಪ್ತಂ."

ಈ ರೀತಿಯಲ್ಲಿ ಪ್ರತಿಯೊಂದು ಪ್ರಕರಣಗಳು ಮುಕ್ತಾಯವಾಗುತ್ತವೆ.

ಕರ್ಣಾಟಕ ಪಂಚತಂತ್ರ ಕೃತಿಯಲ್ಲಿ 445 ಪದ್ಯಗಳಿವೆ. 230 ಶ್ಲೋಕಗಳಿವೆ. ಪೀಠಿಕಾ ಪ್ರಕರಣದ ಒಂದು ಕಥೆ, ಐದು ಮೂಲಕಥೆಗಳು ಹಾಗೂ ನಲವತ್ತೆಂಟು ಉಪಕಥೆಗಳು ಸೇರಿ ಒಟ್ಟು ಐವತ್ತನಾಲ್ಕು (54) ಕಥೆಗಳಿವೆ. ಈ ಕೃತಿಯಲ್ಲಿ ಭೇದಪ್ರಕರಣವೇ ಅತ್ಯಂತ ದೀರ್ಘವಾದ ಪ್ರಕರಣವಾಗಿದ್ದು, ವಂಚನಾ ಪ್ರಕರಣವು ಅತ್ಯಂತ ಚಿಕ್ಕ ಪ್ರಕರಣವಾಗಿದೆ.

ಈ ಕೃತಿಯು ಕನ್ನಡ ಗದ್ಯ ಸಾಹಿತ್ಯದಲ್ಲಿಯೇ ವಿಶಿಷ್ಟ ಮೊದಲಕೃತಿಯಾಗಿದೆ. ಇದರಲ್ಲಿ ಪ್ರಯೋಗವಾಗುವ ಗದ್ಯ ಶೈಲಿಯು ರಾಮಾಯಣ, ಮಹಾಭಾರತ, ಭಾಗವತ, ಭಗವದ್ಗೀತೆ ಮೊದಲಾದ ಕೃತಿಗಳಲ್ಲಿ ಬಳಕೆಯಾಗುವ ಶ್ಲೋಕಗಳ ಗಾಂಭೀರ್ಯವೇ ಇಲ್ಲಿ ಅಭಿವ್ಯಕ್ತಗೊಂಡಿದೆ. ನೀತಿಯಾಗಲಿ, ಮೋಸವಾಗಲಿ ಇಂತಹ ಶ್ಲೋಕಗಳು ಅತ್ಯಂತ ಧೀಮಂತವಾಗಿ ಮೂಡುವ ಕಾರಣ, ಸಾರ್ವಕಾಲಿಕ ಸತ್ಯಧರ್ಮಗಳ ದೀಪಸ್ತಂಬಗಳಂತೆ ಈ ಗ್ರಂಥದ ತುಂಬಾ ಬೆಳಗುತ್ತವೆ. ಒಟ್ಟು 14 ಇಂತಹ ವಿಶೇಷ ಶ್ಲೋಕಗಳು ಕೃತಿಯ ಮಹತ್ವವನ್ನು ಹೆಚ್ಚಿಸಿವೆ. ಈ ಶ್ಲೋಕಗಳಿಲ್ಲದೆ ಕೃತಿಯ ಮಹತ್ವವನ್ನು ಅರಿಯಲಾಗದು.

ನಮ್ಮಲ್ಲಿ ಕೆಲವು ವಿದ್ವಾಂಸರು ವಿಷ್ಣುಶರ್ಮನ ಪಂಚತಂತ್ರವನ್ನು ಅನುವಾದಿಸಿ, ಓದುಗರಲ್ಲಿ ಗೊಂದಲ ಸೃಷ್ಟಿಸಿರುವುದು ಸಹಜ. ಕಾರಣ, ಪಂಚತಂತ್ರವೆಂಬ ಶೀರ್ಷಿಕೆಯಷ್ಟೇ ನೀಡಿ, ಕೃತಿಯೊಳಗೆ ಇದು ವಿಷ್ಣುಶರ್ಮನು ರಚಿಸಿದ್ದಾನೆ ಎಂದಿದ್ದಾರೆ. ವಿಷ್ಣುಶರ್ಮನ ಪಂಚತಂತ್ರದಲ್ಲಿ ಒಟ್ಟು 70 ಕಥೆಗಳಿವೆ. 1650ರ ವೇಳೆಗೆ ಶಂಕರ ಕವಿ ಎಂಬಾತನು ಕನ್ನಡದಲ್ಲಿ ಪಂಚತಂತ್ರ ರಚಿಸಿದ್ದಾನೆ. ಈ ಕೃತಿಯು ವಿಷ್ಣುಶರ್ಮನ ಕಥೆಗಳ ಸಂಪ್ರದಾಯಗಳನ್ನು ಒಳಗೊಂಡಿದೆ. ಈ ಕೃತಿಯನ್ನು ಜಾನ್ ಗ್ಯಾರೆಟ್ ಮತ್ತು ಎಂ.ಡಿ. ಸಿಂಗರಾಚಾರಿಯವರು ಸಂಪಾದಿಸಿ 1864ರಲ್ಲಿ ಪ್ರಕಟಿಸಿದ್ದಾರೆ. ಮುಂದೆ ಮುಮ್ಮಡಿ ಕೃಷ್ಣರಾಜ ಒಡೆಯರ್ ಈ ಕೃತಿಯನ್ನು ಕನ್ನಡದಲ್ಲಿ ರಚಿಸಿದ್ದಾರೆ. ಈ ಕೃತಿಯನ್ನು ಎ. ವೆಂಕಟಸುಬ್ಬಯ್ಯನವರು ಸಂಪಾದಿಸಿ 1893ರಲ್ಲಿ ಪ್ರಕಟಿಸಿದ್ದಾರೆ. ವಿಷ್ಣುಶರ್ಮ ಮತ್ತು ವಸುಭಾಗಭಟ್ಟರ ಕೃತಿಗಳಲ್ಲಿ ಸಂಪ್ರದಾಯಗಳ ವ್ಯತ್ಯಾಸಗಳಿದ್ದರೂ ಸಾದೃಶ್ಯಗಳೇ ಹೆಚ್ಚಿವೆ.

ದುರ್ಗಸಿಂಹನ ಕೃತಿಯು ಚಂಪೂಶೈಲಿಯಂತೆ ಕಂಡರೂ ಗದ್ಯವೇ ಪ್ರಧಾನ. ಪದ್ಯಗಳನ್ನು ಗಮನಿಸಿದರೆ 458 ಪದ್ಯಗಳು ಕನ್ನಡದಲ್ಲಿಯೂ (ಅದರಲ್ಲಿ 304 ಕಂದಪದ್ಯಗಳಿವೆ), 230 ಸಂಸ್ಕೃತದಲ್ಲಿಯೂ ಕಂಡುಬರುತ್ತವೆ.

ಪಂಚತಂತ್ರ ಎಂದರೆ ಐದು ಉಪಾಯಗಳು ಎಂದರ್ಥ. ಆ ಐದು ಉಪಾಯಗಳು ಇಂತಿವೆ.

ಭೇದಃ ಪರೀಕ್ಷಾ ವಿಶ್ವಾಸಃ ಚತುರ್ಥಂ ವಂಚನಂ ಕಥಾ
ಮಿತ್ರ ಕಾರ್ಯಂ ಚ ಪಂಚೈತೆ ತಥಾಸ್ತಂತ್ರಾರ್ಥ ಸಂಜ್ಞಕಾಃ

1. ಭೇಧ – ಅನೇಕ ಕಪಟ ಉಪಾಯಗಳಿಂದ ಮಿತ್ರರ ನಡುವೆ ಭೇದವನ್ನು ಉಂಟುಮಾಡುವುದು.
2. ಪರೀಕ್ಷಾ – ಯಾವ ಕಾರ್ಯವನ್ನು ಮಾಡಬೇಕಾದರೂ ವಿಚಾರಿಸಬೇಕು ಎಂಬುದು ಪರೀಕ್ಷೆ.
3. ವಿಶ್ವಾಸ – ನಂಬಿಕೆ ಇಲ್ಲದವರಿಗೂ ನಂಬಿಕೆಯು ಬರುವಂತೆ ಮಾಡುವುದೇ ವಿಶ್ವಾಸ.
4. ವಂಚನೆ – ಇತರರ ಮನಸ್ಸಿನ ಅಭಿಪ್ರಾಯಗಳನ್ನು ತಿಳಿದು ಸಂಧಾನಗಳ ಮೂಲಕ ವಂಚಿಸುವುದು.
5. ಮಿತ್ರಕಾರ್ಯ – ಶತ್ರುಗಳನ್ನೂ ಅತಿ ಸ್ನೇಹದಿಂದ ತನ್ನವರನ್ನಾಗಿ ಮಾಡಿಕೊಳ್ಳುವುದು.

ದುರ್ಗಸಿಂಹನು ಅನುಸರಿಸದ ವಿಷ್ಣುಶರ್ಮನ ಪಂಚತಂತ್ರದ ಐದು ವಿಭಾಗಗಳಿವು. ಕೆಲವು ಸಾದೃಶ್ಯವಿರುವುದನ್ನು ಕಾಣಬಹುದು.

ಮಿತ್ರಭೇದಃ ಸುಹೃಲ್ಲಾಭಃ ಸಂಧಿರ್ವಿಗ್ರಹ ಏವ ಚ

ಲಬ್ಧನಾಶಮಸಂಪ್ರೇಕ್ಷ ಕಾರಿತಾ ಪಂಚತಂತ್ರಕಂ

(ಮಿತ್ರಭೇದ, ಮಿತ್ರ ಸಂಪ್ರಾಪ್ತಿ, ಕಾಕೋಲೂಕೀಯಂ, ಲಬ್ಧಪ್ರಣಾಶಮ್, ಅಪರೀಕ್ಷಿತ ಕಾರಕಂ ಎಂಬ ಐದು ತಂತ್ರಗಳು)

ದುರ್ಗಸಿಂಹನ ಪಂಚತಂತ್ರವು ಈ ನಮ್ಮ ಪರಿಸರಕ್ಕೆ ಹತ್ತಿರವಾದುದು. ಆದ್ದರಿಂದಲೇ ದಕ್ಷಿಣ ಭಾರತದ ಮೇಲೆ ವಸುಭಾಗಭಟ್ಟನ ಪ್ರಭಾವ ಜಾಸ್ತಿ ಇರುವುದನ್ನು ತಿಳಿಯಬಹುದು. ಕಥೆಯನ್ನು ಕೃತಿಯಲ್ಲಿ ಅಧ್ಯಯನಮಾಡುತ್ತಾ ಅದರ ಪರಿಚಯವನ್ನು ವಿಶ್ಲೇಷಣಾತ್ಮಕವಾಗಿ ಗಮನಿಸೋಣ.

ಪೀಠಿಕಾ ಪ್ರಕರಣ – ನರಿಯ ಕಥೆ : – ಪಂಚತಂತ್ರದಲ್ಲಿ ವಸುಭಾಗಭಟ್ಟನು ರಾಜನ ಮಕ್ಕಳಿಗಾಗಿ ನೀತಿ ಹೇಳಲು ಬಳಸಿದ ಕಥೆ

ಇದು. ಒಂದೇ ಕಥೆಯಿರುವ ಇಲ್ಲಿ ನರಿಯ ಮೂಲಕ ನೀತಿವಂತರನ್ನಾಗಿ ಬದಲಿಸುವ ತಂತ್ರವಾಗಿ ಕಂಡುಬರುತ್ತದೆ.

ಭೇಧ ಪ್ರಕರಣ – ಇದರಲ್ಲಿ ಎರಡು ಮಾದರಿಯ ಕಥೆಗಳನ್ನು ಕಾಣಬಹುದು.

ಮೂಲ ಕಥೆ : ಸಂಜೀವಕ ಎಂಬ ಎತ್ತು ಮತ್ತು ಪಿಂಗಳ ಎಂಬ ಸಿಂಹಕ್ಕೂ ಉಂಟಾಗಿದ್ದ ಸ್ನೇಹವನ್ನು ಚಾಡಿಕೋರನಾದ ದಮನಕ ಎಂಬ ನರಿಯು ಭೇಧಿಸಿ ಕೆಡಿಸುವ ಕಥೆಯೇ ಬೇಧ ಪ್ರಕರಣದ ಮೂಲಕಥೆಯಾಗಿದೆ.

ಇತರ ಕಥೆಗಳು : ಇದರಲ್ಲಿ ಕಚ ದ್ರುಮನ ಕಥೆ, ಕೀಲನುರ್ಚಿದ ಕೋಡಗನ ಕಥೆ, ನರಿಯುಂ ಬಿಲನುಂ, ನರಿಯೂ ಭೇರಿಯೂ, ದೇವಶರ್ಮನ ಕಥೆ, ಕಾಗೆ ಕೃಷ್ಣಸರ್ಪನಂ ಕೊಂದ ಕಥೆ, ಕೊಕ್ಕರೆಯೂ ಏಡಿಯೂ, ಮೊಲಂ ಸಿಂಹಂ ಕೊಂದ ಕಥೆ, ಉಪಕಾರ ಮಾಡಿ ಕೆಟ್ಟ ಕಪಿ ಕಥೆ, ಶಿವಭೂತಿಯ ಕಥೆ, ಎರಡು ಗಿಳಿಗಳ ಕಥೆ, ತಿಗುಣೆಯುಂ ಕೂರೆಯುಂ, ಕೃಷ್ಣೋರಗನನೊಳಕೊಂಡ ಒಳ್ಳೆಗಳ ಕಥೆ, ರಾಜಹಂಸನುಂ ಆಂದೆಂಯುಂ, ಒಟ್ಟೆಂಯುಂ ಕಾಗೆಂಯುಂ, ನಾಳೀಜಂಘನೆಂಬ ಗೋಲಾಂಗೂಲದ ಕಥೆ, ನಾಲ್ವರು ಧೂರ್ತರು ಓರ್ವ ಬ್ರಾಹ್ಮಣನಂ ವಂಚಿಸಿದ ಕಥೆ, ಯದ್ಭವಿಷ್ಯನೆಂಬ ಮತ್ಸ್ಯದ ಕಥೆ, ಆರ್ಥೀ ದೋಷಂ ನಂ ಪಶ್ಯತೀ, ದುಷ್ಟಬುದ್ಧಿಯುಂ ಧರ್ಮಂಬುದ್ಧಿಯುಂ, ಬಕನ ತತ್ತಿಯುಂ ಮುಂಗುರಿಗಳುಂ, ತಗರಿನ ಮತ್ತು ತೊತ್ತನ ಕಲಹದಿಂದ ಕಪಿಗಳು ಕೆಟ್ಟ ಕಥೆ.

ಹೀಗೆ ಒಟ್ಟು 27 ಉಪಕಥೆಗಳಿವೆ. ಪಂಚತಂತ್ರದಲ್ಲಿಯೇ ಅತಿ ದೀರ್ಘವಾದ ಹಾಗೂ ಹೆಚ್ಚು ಕಥೆಗಳನ್ನು ಒಳಗೊಂಡ ಪ್ರಕರಣವಿದು.

ಪರೀಕ್ಷಾ ವ್ಯಾವರ್ಣನಂ ಪ್ರಕರಣ

ಮೂಲ ಕಥೆ : ಬ್ರಾಹ್ಮಣನು ಮುಂಗುಸಿಯನ್ನು ಕೊಂದ ಕಥೆ.

ಇತರ ಕಥೆಗಳು : ಸೋಮಶರ್ಮನ ತಂದೆಯ ಕಥೆ, ಪರದನ ಕಥೆ, ಅಜಿತನ ಕಥೆ ಮತ್ತು ವೃದ್ಧ ಗೌತಮಿ ಹೀಗೆ ಒಟ್ಟು ನಾಲ್ಕು ಕಥೆಗಳಿವೆ.

ವಿಶ್ವಾಸ ಪ್ರಕರಣ

ಮೂಲಕಥೆ : ಗೂಗೆಗಳು ತುಂಬಿದ್ದ ಗುಹೆಯನ್ನು ಕಾಗೆಗಳು ಸುಟ್ಟ ಕಥೆ

ಇತರ ಕಥೆಗಳು : ಕಪಿಂಜರನಂ ಮೊಲನುಂ ಪುಲಿಯುಂ, ನಾರಾಯಣ ಭಟ್ಟನ ಕಥೆ, ಶಿಶುಪಾಲನ ಕಥೆ, ಬುದ್ಧಿ ಪೇಳಿದ ಹಕ್ಕಿಯುಂ ಕಪಿಯು ಕೊಂದ ಕಥೆ, ಕಪೋತಂ ಕಿರಾತಂಗೆ ತನ್ನಸುವನಿತ್ತ ಕಥೆ, ಬ್ರಹ್ಮ ರಾಕ್ಷಸನುಂ ತಸ್ಕರನುಂ, ತುಂಗಭುಜನ ಕಥೆ, ಸತ್ತ ಪುಲಿಯನ್ನೆತ್ತಿದ ಗಾರುಡಿಗನ ಕಥೆ, ಮುನಿಯುಂ ಇಲಿಯುಂ, ದುರ್ವಾಸನುಂ ನಾಯುಂ, ಕಪ್ಪೆಗಳಂ ಬೆನ್ನೇರಿಸಿಕೊಂಡ ಸರ್ಪದ ಕಥೆ ಮತ್ತು ವಿಷ್ಣುಶರ್ಮನ ಕಥೆ ಇವು ಈ ಪ್ರಕರಣದ ಒಟ್ಟು 12 ಕಥೆಗಳು

ವಂಚನಾ ಪ್ರಕರಣಂ

ಮೂಲ ಕಥೆ : ಮೊಸಳೆಯನ್ನು ಕಪಿ ವಂಚಿಸಿದ ಕಥೆ

ಇತರ ಕಥೆಗಳು : ನರಿಯ ಮಾತಂ ನಂಬಿ ಸತ್ತ ಬೆಳ್ಗತ್ತೆಯ ಕಥೆ ಈ ಪ್ರಕರಣದ ಏಕೈಕ ಉಪಕಥೆ

ಮಿತ್ರಕಾರ್ಯ ಪ್ರಕರಣ

ಮೂಲ ಕಥೆ : ಕಾಗೆಯುಂ ಆಮೆಯುಂ ಸಾರಂಗಮುಂ ಇಲಿಯು.

ಇತರ ಕಥೆಗಳು : ವನದಲ್ಲಿ ಕಟ್ಟು ಬಿದ್ದಿದ್ದ ಆನೆಯಂ ಇಲಿ ಬಿಡಿಸಿದ ಕಥೆ, ಬ್ರಾಹ್ಮಣನುಂ ಏಡಿಯುಂ, ಅತಿ ಲೋಭಿಯಾದ ನರಿಯ ಕಥೆ ಮತ್ತು ಕಪ್ಪೆಯ ಕಥೆ ಈ ಪ್ರಕರಣದ ಒಟ್ಟು ನಾಲ್ಕು ಕಥೆಗಳಿವು.

ದುರ್ಗಸಿಂಹನ ಕಥಾ ಶೈಲಿಯನ್ನು ಕೆಲವು ವಿಶೇಷ ಸನ್ನಿವೇಶಗಳ ಮೂಲಕ ತಿಳಿಯಬಹುದು. ತನ್ನ ಕೃತಿಯಲ್ಲಿ ಬಹಳಷ್ಟು ಸಂಸ್ಕೃತ ಶ್ಲೋಕಗಳು, ಸೂಕ್ತಿಗಳನ್ನು ಬಳಸಿದ್ದಾನೆ. ವೆಂಕಟಸುಬ್ಬಯ್ಯನವರು ತಿಳಿಸುವಂತೆ 230 ಶ್ಲೋಕಗಳು, 157 ಸುಭಾಷಿತಗಳಿವೆ. 130 ಶ್ಲೋಕಗಳು ಪ್ರಾಚೀನ ಗ್ರಂಥಗಳಿಂದ ಆಯ್ದುಕೊಳ್ಳಲಾಗಿದೆ. 100 ಶ್ಲೋಕಗಳನ್ನು ಇತರ ಪಂಚತಂತ್ರಗಳಿಂದ ಆಯ್ದುಕೊಳ್ಳಲಾಗಿದೆ. ದುರ್ಗಸಿಂಹನು 458 ಪದ್ಯಗಳನ್ನು ರಚಿಸಿದ್ದಾನೆ ಎಂದಿದ್ದಾರೆ.

* 'ಬ್ರಾಹ್ಮಣೋತ್ತಮನಪ್ಪ ನಾವೊಂದು ಪಾಪ ನಿವಾರಣಾರ್ಥವಾಗಿ ಗೋವಿನ ಜಠರಮಂ ಪೊಕ್ಕಿರ್ದೆವು' ಎಂದು ಸತ್ತ ಎತ್ತಿನ ಹೊಟ್ಟೆಯೊಳಗಿಂದ ಹೊರಬರಲಾರದೆ ಒದ್ದಾಡುವ ನರಿ ಈ ಮಾತು ಹಾಸ್ಯವನ್ನೇ ಸೃಷ್ಟಿಮಾಡಿದೆ.

* ಸಂಜೀವಕನೆಂಬ ಎತ್ತು 'ಕಾಳಿಂದೀನದೀ ಕಚ್ಚದೊಳಾತೇಚ್ಛೆಯಿಂ ನಲಿನಲಿದು ರುಚಿರಮರಕತಶ್ಯಾಮ ದೂರ್ವಾಂಕುರ ಗ್ರಾಸದೊಳಂ ಅತಿಸ್ವಚ್ಛಸ್ವಾದುಸಲಿಲಪಾನದೊಳಂ ಮೆಲ್ಲಮೆಲ್ಲನೆ ಪಥಪರಿಶ್ರಮಮನಾಜೆಸಿಕೊಂಡು ಕೆಲವು ದಿವಸಕ್ಕೆ ಬಾಲೇಂದುಶೇಖರ ಶಕ್ವರಾಕಾರಮಂ ತಾಳ್ದಿ' ಭಯಂಕರವಾಗಿ ತೋರಿತು ಎನ್ನುವಾಗ ಮುಂದೆ ಸಿಂಹವು ಎತ್ತಿನ ಗುಟುರನ್ನು ಕೇಳಿ ಗಾಬರಿಗೊಂಡುದೂ, ದವನಕನು ಅದರ ಹೆದರಿಕೆಯನ್ನು ದುರುಪಯೋಗ ಪಡಿಸಿಕೊಂಡುದೂ ಕಥೆಯ ಹಂದರಕ್ಕೆ ಸಹಜವೆನ್ನಿಸುತ್ತದೆ. 'ಪಿಂಗಳಕನತಿ ವಿಸ್ಮಯಂಬಟ್ಟು ಧಾತು ರಕ್ತಾಶೋಕಕಿಸಲಯವಿಭಾಸಿಭಾಸುರಸಟಾಕಲಾಪ ಮಲ್ಲಾಡೆ ತಲೆಯಂ ತೂಗಿ' ಎಂಬಲ್ಲಿ ಸಿಂಹವು ಪ್ರತಿಮೆಯಂತೆ ಕಣ್ಣಲ್ಲಿ ಉಳಿಯುತ್ತದೆ.

* "ಬಿಲನೆ, ನೀನಿನಿತು ಕಾಲಂ ನಾಂ ಬರ್ಪಾಗಳಿದಿರ್ವಂದು ಸೇವೆಯಂ ಮಾಡುತಿರ್ದಯ್; ಈಗಳದುಗೆಟ್ಟು ಕರೆದೊಡಂ ಮೊದಲಾಗಿ ಸರಂದೋಱಿದಪೆಯಿಲ್ಲ. ಪೆಱನೋರ್ವಂಗೆ ಕೂರ್ತೆಯಕ್ಕುಂ" ಎಂದು 'ನರಿಯ ಬಿಲವೂ' ಎಂಬ ಕಥೆಯಲ್ಲಿ ಹುಲಿ ಒಳಗಿರಬಹುದೆಂಬುದನ್ನು ಗೊತ್ತುಮಾಡಿಕೊಳ್ಳಲು ಸಿದ್ಧ ಮಾಡುವ ಉಪಾಯವೂ ಅದರ ವರ್ತನೆಯೂ ಓದುಗನಿಗೆ ಆಕರ್ಷಕವಾಗಿದೆ. ಆಹಾರವಿಲ್ಲದ ನರಿಯನ್ನು ಕಾಗೆಯು "ಎಲೆ ಭಾವ! ಏಂ ಬಡವಾದಿ?" ಎಂದು ಕೇಳುವುದು ಗ್ರಾಮ್ಯ ನಗುವಂತೆ ಮೂಡಿ ಬಂದಿದೆ.

* ದೇವಶರ್ಮನ ಕಥೆಯಲ್ಲಿ ಕಂಡುಬರುವ ತಂತುವಾಯಿಕೆಯ ವೃತ್ತಾಂತದಲ್ಲಿ ತಂತುವಾಯನು ಬಯ್ಯುವ, 'ನಿನ್ನ ಬೇಟದ ಮಿಂಡನಾ ವನವನಂ ಪೇೞ್' ಎಂಬ ಮಾತಿನಲ್ಲಿ ದೇಸಿಯ

ಒಗರಿದೆ, ತಂತುವಾಯಿಯ ಕಪಟ ಪ್ರತಿಭೆಯಲ್ಲೂ ಅದೇ ರುಚಿಯಿದೆ : "ಆನಂತಪ್ಪ ಒರ್ಬ ತಾಯ್ಗಂ ತಂದೆಗಂ ಪುಟ್ಟಿದೆನಾದೊಡೆ ನಾಂ ಪತಿವ್ರತೆಯಾದೊಡೆ, ಮನದ್ಯೆವಂಗಳೆನಗೆ ಸನ್ನಿದಮಾದೊಡೆನ್ನ ಮೂಗು ಮುನ್ನಿನಂತಾಗಲೀ ಕಟ್ಟಿರ್ದ ಕಟ್ಟೆಲ್ಲಂ. ಬಿಟ್ಟು ಪೋಗಲೆವೇಟಿಸ್ಕಂ..." ಮುಂದೆ ಆ ತಂತುವಾಯನು ಹೆಚ್ಚಿನ ಮನಸ್ಸನ್ನು ತಿಳಿಯದೆ ಶರಣಾಗತನಾದನಂತೆ.

* ಶಿವಭೂತಿಯ ಕಥೆಯಲ್ಲಿ ಪುರಾಣಕೂಪದಲ್ಲಿ ಬಿದ್ದ ನಾಲ್ಕು ಪ್ರಾಣಿಗಳನ್ನು ಹೇಳುವಾಗ ಕಪಿಯನ್ನು ಕುರಿತು ಅವರ ಸ್ವಭಾವಕ್ಕನುಗುಣವಾಗಿ ವರ್ಣಿಸಿದ್ದಾನೆ : **"ಅನ್ನೆಗಮೊಂದು ಚಪಲಕನೆಂಬ ಕಪಿ ನೀರ್ಗುಡಿಯಲೆಂದು ಬಾವಿಯಂ ಪುಗುತಂದು ತತ್ಕೂಪ ಸಮೀಪದೊಳ್ ನಿಂದು ಪೊಗಲಿಂಬಿಲ್ಲದೆ ತಡಿವಿಡಿದೆಳಲುತ್ತಿರ್ದ ಸರ್ಪನ ಬಾಲಮಂ ಬಳ್ಳಿಯೆಂದು ಬಗೆದು ಪಿಡಿದಿಟಿಯುತ್ತುಮಹಿಸಹಿತಂ ಬಿರ್ದುದು".**

* ಎರಡು ಗಿಣಿಗಳ ಕಥೆಯಲ್ಲಿ ಕಂಡು ಬರುವ ಮುನಿಯ ಆಶ್ರಮವನ್ನು ವರ್ಣಿಸುತ್ತ ವೃದ್ಧ ತಾಪಸರ ಕಯ್ಯನ್ನು ಹಿಡಿದುಕೊಂಡು ಗೋಲಾಂಗೂಲಗಳು ನಡೆಯಿಸುತ್ತಿದ್ದವು. ಎನ್ನುತ್ತಾನೆ. ಇಲ್ಲಿ ಮನುಷ್ಯ ಮುದುಕನಾದಾಗ ಮಂಗನಂತೆ ಎಂದು ವ್ಯಂಗ್ಯವಾಡಿದ್ದಾರೆ.

* **'ಒಟ್ಟೆಯುಂ ಕಾಗೆಯುಂ'** ಎಂಬ ಕಥೆಯಲ್ಲಿ ಒಂಟೆಯನ್ನು ಒಂದು ಕಾಗೆಯು ಸಿಂಹದ ಆಸ್ಥಾನಕ್ಕೆ ಕರೆದುತರುತ್ತದೆ. ಆಗ ಅದನ್ನು ನೋಡಿ ಸಿಂಹಕ್ಕೆ ಈ ರೀತಿಯಲ್ಲಿ ಅನಿಸಿತು. **"ಅದಱ ವಿಕಟರೂಪಮಂ ಕಂಡು ಮದೋತ್ಕಟನುತ್ಕಟಹರ್ಷನಾ ನಮಗೊಂದು ವಿನೋದಪಾತ್ರಮಿದೊಂದಾದುದೆಂದು ಸಂತೋಷಂಬಟ್ಟು...",** ನಾಲ್ವರು ಧೂರ್ತರೂ ಬ್ರಾಹ್ಮಣನು ಎತ್ತಿಕೊಂಡು ಹೋಗುತ್ತಿದ್ದ ಆಡನ್ನು ನಾಯಿಯೆಂದಾಗ ಆತ ಒಮ್ಮೆ ಭ್ರಮೆಗೊಳ್ಳುವಂತಾದ ಸಂದರ್ಭವನ್ನು ಸೊಗಸಾಗಿ ಕವಿಯು ಹೇಳಿದ್ದಾನೆ **"ಭೂ ಭುವನ ಪ್ರಸಿದ್ಧಮಜಮೆಂದವಧಾರಿಸಿ ಹೊತ್ತುಕೊಂಡು ಪೋದಂ ಪಾರ್ವಂ"**

* 'ಸೋಮಶರ್ಮನ ತಂದೆಯ ಕಥೆ'ಯಲ್ಲಿ ಮುಂಗುಸಿಯ ಮಗುವನ್ನು ಸರ್ಪದ ಬಾಯಿಯಿಂದ ರಕ್ಷಿಸಿದ ಸಂದರ್ಭವನ್ನು ಹೇಳುವಾಗ ದುರ್ಗಸಿಂಹನ ಕಥನ ಶೈಲಿಯಲ್ಲಿ ಉನ್ನತಿಯನ್ನು ಕಾಣಬಹುದು. ಇಲ್ಲಿ ಸರ್ಪದ ಭೀಕರತೆಯನ್ನೂ, ಮಗುವಿನ ಮುಗ್ಧತೆಯನ್ನೂ, ಬ್ರಾಹ್ಮಣನ ಅವಿವೇಕವನ್ನೂ ಒಟ್ಟಿಗೆ ಚಿತ್ರಿಸಿ ಓದುಗರ ಮನಮುಟ್ಟುವಂತೆ ಬರೆದಿದ್ದಾನೆ. ಇದು ಕನ್ನಡದಲ್ಲಿ ಮುಂಗುಸಿಯ ಕಥೆಯಾಗಿಯೂ, ಸಿನಿಮಾಗಳಲ್ಲಿ ಬ್ರಾಹ್ಮಣನ ಬದಲು ಹೆಂಗಸನ್ನು ತಂದು ಮಕ್ಕಳ ಕಥೆಯಾಗಿಯೂ ಮೂಡಿಸಲಾಗಿದೆ.
* ಕಾಗೆಗಳ ರಾಜ ಮೇಘವರ್ಣನ ವರ್ಣನೆಯಲ್ಲಿ ಆಡಂಬರವಿದೆ, ಅಣಕವಿದೆ, ರಾಜರನ್ನು ನೋಡಿದ ವಿಡಂಬನ ದೃಷ್ಟಿಯಿದೆ
* 'ನಾರಾಯಣಭಟ್ಟನ ಕಥೆ'ಯಲ್ಲಿ ಪತಿವ್ರತೆಯಂತೆ ತೋರಿಸುತ್ತಿದ್ದ ಹೆಂಡತಿಯೊಬ್ಬಳು ಹೇಗೆ ಪತಿತೆಯಾಗಿದ್ದಳು ಎಂಬುದನ್ನು ಸುಂದರವಾಗಿ ನಿರೂಪಿಸಿದ್ದಾನೆ.
* 'ಮೊಸಳೆಯಂ ಕಪಿ ವಂಚಿಸಿದ ಕಥೆ'ಯಲ್ಲಿ ಮೊಸಳೆಯ ಮೇಲೆ ಸವಾರಿ ಮಾಡಿದ ಕಪಿಯ ಸುಂದರ ಚಿತ್ರವನ್ನು ಕವಿ ಕೊಡುತ್ತಾನೆ. ಇಂದು ಇಂದಿಗೂ ಬುದ್ಧಿವಂತ ಮತ್ತು ಮೂರ್ಖನನ್ನು ಬಿಂಬಿಸಲು, ಶಕ್ತಿಗಿಂತ ಯುಕ್ತಿಮೇಲು ಎಂದು ಬಿಂಬಿಸಲು ಈ ಚಿತ್ರವನ್ನು ಬಳಸಲಾಗುತ್ತಿದೆ.
* ಹೀಗೆ ಗ್ರಂಥದ ಉದ್ದಕ್ಕೂ ದುರ್ಗಸಿಂಹನ ಅನ್ಯಾದೃಶ ಅಣಕುಶೈಲಿಯನ್ನು ಸಹೃದಯರು, ಮನಗಾಣಬಹುದು. ತನ್ನ ಪಾತ್ರಗಳಿಗೆ ಹೆಸರಿಡುವಾಗಲೂ, ಧ್ವನಿ ರಮ್ಯತೆಯನ್ನೂ, ಅನ್ವರ್ಥತೆಯನ್ನೂ ಮೆರೆದಿದ್ದಾನೆ : ಅನಾಗತಮತಿ, ಯದ್ಭವಿಷ್ಯ, ಉತ್ಪನ್ನಮತಿ ಎಂಬ ಮೀನುಗಳು, ಜಿಪಾಕ್ಷ, ಕ್ರೂರಾಕ್ಷ, ರಕ್ತಾಕ್ಷ ಎಂಬ ಗೂಬೆಗಳು, ಅದೀಪಿ, ಉದ್ದೀಪಿ, ಪ್ರದೀಪಿ, ಚಿರಂಜೀವಿ, ಲಘುಪತನಕ, ಸಂದೀಪಿ, ಮೇಘವರ್ಣ – ಎಂಬ ಕಾಗೆಗಳು, ಅರಿಮರ್ದನನೆಂಬ ಗೂಬೆಗಳ ರಾಜ, ತುಂಬಾ ಲೌಲ್ಯ, ಕರಟಕ, ದವನಕ, ಜಾಂಬವಂತ, ಮಹಾಬೀರು, ಮೃಗಧೂರ್ತ, ಬಕರ್ಣ,

ಉಪಾಯ ನಿಪುಣ ಎಂಬ ನರಿಗಳು, ಕಕುದ್ಬಲ, ಕೃಷ್ಣವದನ, ನಾಳೀಜಂಘ, ಚಪಲಕ – ಎಂಬ ಕಪಿಗಳು, ಪಿಂಗಳಕ, ಮದೋತ್ಕಟ ಎಂಬ ಸಿಂಹಗಳು, ಬಲುದಲೆಯ, ಹಿರಣ್ಯರೋಮ – ಎಂಬ ಇಲಿಗಳು, ಕೈಕಚ ಎಂಬ ಮೊಸಳೆ, ಚಂಡಪರಾಕ್ರಮ, ಮಧುರಾಲಾಪೆ ಎಂಬ ಟಿಟ್ಟಿಭ ಮಿಥುನ, ಧವಲಪಕ್ಷ, ಸುಮಿತ್ರ, ಸಕಟ, ಪಾಟ– ಎಂಬ ಹಂಸಗಳು, ಸೂಚೀಮುಖ ಎಂಬ ಹಕ್ಕಿ, ಜಲಪಾಲ ಎಂಬ ಕಪ್ಪೆ, ಮಂದಕ ಎಂಬ ಆಮೆ– ಮೊದಲಾದವುಗಳು ದುರ್ಗಸಿಂಹನ ಪಂಚತಂತ್ರದ ಅದ್ಭುತ ಪಾತ್ರಗಳು, ಇವು ಮನುಷ್ಯನ ಸುಗುಣ ದುರ್ಗುಣಗಳನ್ನು ಹೊತ್ತು ಮನುಷ್ಯನನ್ನೇ ಅಣಕಿಸಲು ಪ್ರಯೋಗೊಂಡಿವೆ. ಹೀಗೆ ದುರ್ಗಸಿಂಹನು ತನ್ನ ಕಥೆಗಳ ಮೂಲಕ ಬದುಕಿನ ಸಣ್ಣತನಗಳು, ಸಾಹಸಗಳು, ಮನೋವೃತ್ತಿಗಳನ್ನು ಸಾರ್ವಕಾಲಿಕವಾಗಿ ಉಳಿಯುವಂತೆ ವರ್ಣಿಸಿದ್ದಾನೆ.

ಜಗತ್ತಿನ ಪಂಚತಂತ್ರ ಕೃತಿಯ ಅನುವಾದಗಳು

* ಪಹಲವಿ ಭಾಷೆಗೆ ಕ್ರಿ.ಶ 550ರಲ್ಲಿ 'ಕರಟಕ್ ವಾ ದಮನಕ್' ಶೀರ್ಷಿಕೆಯಲ್ಲಿ ಅನುವಾದಿಸಲಾಗಿದೆ.
* ಸಿರಿಯಾಕ್ ಭಾಷೆಗೆ 'ಕರಟಕ್ ವಾ ದಮನಕ್' ಕೃತಿಯನ್ನು ಬುಡಾ ಅಬ್ದುಲ್ ಇನು ಕ್ರಿ.ಶ. 770ರಲ್ಲಿ ಅನುವಾದಿಸಿದ.
* ಇಬ್ನ್ ಉಲ್ ಮುಖಫ್ಫಾ ಈ 'ಕರಟಕ್ ವಾ ದಮನಕ್' ಕೃತಿಯನ್ನು ಕ್ರಿ.ಶ. 750ರಲ್ಲಿ ಅರಬ್ಬಿ ಭಾಷೆಗೆ ಅನುವಾದಿಸಿದನು.
* ಪರ್ಷಿಯನ್ ಭಾಷೆಗೆ ಈ 'ಕರಟಕ್ ವಾ ದಮನಕ್' ಕೃತಿಯನ್ನು ಕ್ರಿ.ಶ. 940ರಲ್ಲಿ ಭಾಷಾಂತರಿಸಿದನು.
* ಹನ್ನೊಂದನೇ ಶತಮಾನದಲ್ಲಿ ಪಂಚತಂತ್ರ ಕೃತಿಯನ್ನು ಸಾಇಮಿಅನ್ ಸೇತ್ ಎಂಬುವವನು ಅರಬ್ಬಿಯಿಂದ ಯುನಾನಿ ಭಾಷೆಗೆ ಅನುವಾದಿಸಿದನು.
* ಐಂಟೊನಿಯನ್ ವಾನ್‌ಘೋರ್ ಎಂಬಾತನು ಪಂಚತಂತ್ರವನ್ನು ಅರಬ್ಬಿ ಭಾಷೆಯಿಂದ ನೇರವಾಗಿ ಜರ್ಮನ್ ಭಾಷೆಗೆ ಅನುವಾದಿಸಿದನು.

* ಜಾನ್ ಆಫ್ ಕೇಫುಅ ಎಂಬಾತನು ಲ್ಯಾಟಿನ್ ಭಾಷೆಗೆ ಅನುವಾದಿಸಿನು.
* ಡೋನಿ ಎಂಬವನು ಲ್ಯಾಟಿನ್ ಅನುವಾದವನ್ನು ಇಟಲಿಯನ್ ಭಾಷೆಗೆ ಅನುವಾದಿಸಿದನು. ಈ ಕೃತಿಯು 1552ರಲ್ಲಿ ಮುದ್ರಿತವಾಗಿದೆ.
* ಸರ್ ಥಾಮಸ್ ನಾರ್ತ್ ಎಂಬಾತನು ಇಂಗ್ಲೀಷ್ ಭಾಷೆಗೆ 'ಮಾರಲ್ ಫಿಲಾಸಫಿ ಆಫ್ ದೋನಿ' ಎಂದು 1590ರಲ್ಲಿ ಅನುವಾದಿಸಿದನು.
* ತುರ್ಕಿ ಭಾಷೆಗೆ ಪಾರ್ಸಿ ಕವಿಯೊಬ್ಬ ಹುಸೇನ್ ಇಬ್ನ್ ಅಲೀಲ್ ಬಾಜ್ ಎಂಬಾತನು 'ಅನ್ವರಿ ಸುಹೇಲಿ' ಎಂಬ ಹೆಸರಿನಲ್ಲಿ ಅನುವಾದಿಸಿದನು.
* ಪ್ರೆಂಚ್ ಭಾಷೆಯಲ್ಲಿ ಲ ಫಾಂಟೇನ್ ತನ್ನ ನೀತಿ ಕಥೆಗಳಲ್ಲಿ ಪಂಚತಂತ್ರದ ಅನೇಕ ಕಥೆಗಳನ್ನು ಅಳವಡಿಸಿಕೊಂಡಿದ್ದಾರೆ.
* ಎಡ್ವರ್ಡ್ ಡೆನಿಸನ್ ರಾಸ್‌ನ ಕಥಾ ಸಾಗರದಲ್ಲಿ (ಸೋಮದೇವನ ಕಥಾ ಸರಿತ್ಸಾಗರದ ಅನುವಾದ) ಪಂಚತಂತ್ರದ ಅನೇಕ ಕಥೆಗಳಿವೆ. ಪರ್ಷಿಯನ್ ಭಾಷೆಗೆ ಕೋತಿ ಮತ್ತು ಮೊಸಳೆ ಕಥೆಯನ್ನು ಅನುವಾದಿಸುವಾಗ ಮೊಸಳೆಯು ಬದಲು ಆಮೆ ಬಳಕೆಯಾಗಿರುವುದನ್ನು ಗುರ್ತಿಸಬಹುದು.

ಅಧ್ಯಯನ ಕೃತಿಗಳು

1. ಕನ್ನಡ ಸಾಹಿತ್ಯ ಚರಿತ್ರೆ., ರಂ.ಶ್ರೀ ಮುಗಳಿ, 1953
2. ಕರ್ಣಾಟಕ ಪಂಚತಂತ್ರ., ಎನ್. ಅನಂತರಂಗಾಚಾರ್, 1963
3. ದುರ್ಗಸಿಂಹನ ಪಂಚತಂತ್ರ ಸಮೀಕ್ಷೆ., ವರದರಾಜ ಹುಯಿಲಗೋಲ, 1976
4. ಸಂಸ್ಕೃತ ಸಾಹಿತ್ಯ ಚರಿತ್ರೆ, ಬಲದೇವ ಉಪಾಧ್ಯಾಯ, 1980
5. ಕರ್ಣಾಟಕ ಪಂಚತಂತ್ರಂ, ಗುಂಡ್ಮಿ ಚಂದ್ರಶೇಖರ ಐತಾಳ, 1999

****

ಜಾತಕ ತಿಲಕಂ

– ಡಾ ಭಾರತಿ ರವೀಂದ್ರ,

ಶ್ರೀಧರಾಚಾರ್ಯ ವಿರಚಿತ ಗ್ರಂಥ ಜಾತಕ ತಿಲಕಂ. 11 ನೇ ಶತಮಾನದ ಮಧ್ಯಭಾಗದಲ್ಲಿ ಬಂದ ಈ ಗ್ರಂಥವು ಕನ್ನಡದ ಮೊದಲ ಜ್ಯೋತಿಷ್ಯ ಗ್ರಂಥವೆಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಪ್ರಖ್ಯಾತ ಜ್ಯೋತಿಷಾಚಾರ್ಯರಾದ ವರಾಹಮಿಹಿರರು ಫಲ ಜ್ಯೋತಿಷ್ಯಕ್ಕೆ ಸಂಬಂಧಪಟ್ಟಂತೆ ಬೃಹಜ್ಜಾತಕ ಹಾಗೂ ಲಘುಜಾತಕ ಎಂಬ ಎರಡು ಗ್ರಂಥಗಳನ್ನು ಸಂಸ್ಕೃತದಲ್ಲಿ ರಚಿಸಿದ್ದಾರೆ. ಕಲ್ಯಾಣವರ್ಮ ಎಂಬ ಮತ್ತೊಬ್ಬ ಜ್ಯೋತಿಷಿಯೂ ಸಾರಾವಳಿ ಎಂಬ ಗ್ರಂಥವನ್ನು ಫಲಜ್ಯೋತಿಷ್ಯದ ಮೇಲೆ ಬರೆದಿರುವನು. ಈ ಮೂರೂ ಸಂಸ್ಕೃತ ಫಲ ಗ್ರಂಥಗಳನ್ನು ಆಧರಿಸಿ ಬರೆದ ಗ್ರಂಥವೇ ಜಾತಕ ತಿಲಕಂ. ಕನ್ನಡ ಭಾಷೆಗೆ ಜ್ಯೋತಿಷ್ಯವನ್ನು ಮೊದಲ ಬಾರಿಗೆ ತಂದ ಕೀರ್ತಿ ಶ್ರೀಧರಾಚಾರ್ಯರಿಗೆ ಸಲ್ಲುವುದು.

ಪ್ರಾಚೀನ ಕಾಲದಿಂದಲೂ ಕನ್ನಡ ಸಾಹಿತ್ಯಕ್ಕೆ ಜೈನರ, ಜೈನ ಕವಿಗಳ ಕೊಡುಗೆ ಅಪಾರವಾಗಿದೆ. ಪಂಪ, ರನ್ನ ಮೊದಲಾದ ಕವಿಗಳು ಲೌಕಿಕ ಜೀವನಕ್ಕೊಂದು ಕಾವ್ಯವನ್ನು ರಚಿಸಿ, ಅಲೌಕಿಕತೆಯನ್ನೂ ಬಿಡದೆ ಧಾರ್ಮಿಕ ಗ್ರಂಥವೊಂದನ್ನೂ ರಚಿಸಿರುವುದು ತಿಳಿದ ಸಂಗತಿಯಾಗಿದೆ. ಶ್ರೀಧರಾಚಾರ್ಯರೂ ಜೈನ ಮತದವರಾಗಿದ್ದು, ಕಾವ್ಯಶಾಸ್ತ್ರವಾಗಿ ಚಂದ್ರಪ್ರಭ ಚರಿತೆಯನ್ನು ರಚಿಸಿದ್ದಾರೆ. ಜಾತಕ ತಿಲಕಂ ಗ್ರಂಥವು ಶಾಸ್ತ್ರ ಗ್ರಂಥವಾಗಿದ್ದು, ಇದರಲ್ಲಿ ಜ್ಯೋತಿಷ್ಯ ಶಾಸ್ತ್ರದ ಧರ್ಮವನ್ನು ತಿಳಿಸಲಾಗಿದೆ. ಚಂದ್ರಪ್ರಭ

ಚರಿತೆಯಲ್ಲಿ ಕಾವ್ಯಧರ್ಮ-ಜಿನ ಧರ್ಮಗಳೆರಡನ್ನೂ ಜಗತ್ತಿಗೆ ತಿಳಿಸಿರುವರು. ಪ್ರಸ್ತುತ ಜಾತಕ ತಿಲಕಂ ಗ್ರಂಥವು ಶಾಸ್ತ್ರ ಕಾವ್ಯವಾದ್ದರಿಂದ, ಕಾವ್ಯಧರ್ಮಗಳಾದ ರಸ, ಭಾವ, ಅಲಂಕಾರ, ವರ್ಣನೆ ಮೊದಲಾದವುಗಳಿಗೆ ಎಡೆಯಿಲ್ಲ. ಆದರೂ ಕವಿ ಸಿಕ್ಕ ಅವಕಾಶದಲ್ಲೇ ತನ್ನ ಪ್ರೌಢಿಮೆಯನ್ನು ಉಪಮಾ, ರೂಪಕ ಮೊದಲಾದ ಅಲಂಕಾರಗಳಲ್ಲಿ ತಿಳಿಸಿರುವರು.

ಜ್ಯೋತಿಷ್ಯದ ಹಿರಿಮೆ

ಜ್ಯೋತಿಷ್ಯವು ವೇದದಷ್ಟೇ ಪುರಾತನತೆಯನ್ನು ಹೊಂದಿರುವ ಜ್ಯೋತಿರ್ವಿಜ್ಞಾನವಾಗಿದೆ. ಇದರ ಅಧ್ಯಯನವು ಭೌತಶಾಸ್ತ್ರ, ಖಗೋಳ ಶಾಸ್ತ್ರ ಹಾಗೂ ಗಣಿತ ಭಾಗವನ್ನು ಹೊಂದಿದ್ದು, ವೇದದ ಷಡಂಗಗಳಲ್ಲಿ ಪ್ರಧಾನವಾದ ಸ್ಥಾನವನ್ನು ಪಡೆದಿದೆ.

ಕರ್ಮಸಿದ್ಧಾಂತದ ಪ್ರಕಾರ, ಈ ಜನ್ಮವು ಸಂಚಿತ ಕರ್ಮದ ಯಾವ ಭಾಗವನ್ನು ಅನುಭವಿಸಲು ಬಂದಿದೆ ಎಂಬುದನ್ನು ಪತ್ತೆ ಹಚ್ಚುವುದೇ ಜ್ಯೋತಿಷ್ಯದ ಮುಖ್ಯ ಪ್ರಯೋಜನವಾಗಿದೆ. ಜ್ಯೋತಿಷ್ಯ ಶಾಸ್ತ್ರವು ಯುಗ ಯುಗಾಂತರಗಳಿಂದಲೂ ಪ್ರಚಲಿತದಲ್ಲಿತ್ತು ಎಂಬುದನ್ನು ನಮ್ಮ ಋಷಿಮುನಿಗಳು ತಮ್ಮ ಗ್ರಂಥಗಳಲ್ಲಿ, ಪುರಾಣಗಳಲ್ಲಿ ಉಲ್ಲೇಖಿಸಿದ್ದಾರೆ. ಪ್ರಪಂಚದ ಸೃಷ್ಟಿಯಾದಾಗಿನಿಂದ ಈ ಶಾಸ್ತ್ರವು ತನ್ನ ಘನತೆಯನ್ನು ಎತ್ತಿ ಹಿಡಿದಿರುವುದೇ ಇದರ ಹಿರಿಮೆಗೆ ಸಾಕ್ಷಿಯಾಗಿದೆ.

ಕಾಲಾನುಕ್ರಮಣಿಕೆಯಲ್ಲಿ ಜ್ಯೋತಿಷ್ಯ ಶಾಸ್ತ್ರಕ್ಕೆ ಸಂಬಂಧಿಸಿದ ಗ್ರಂಥಗಳ ರಚನಾ ಬೆಳವಣಿಗೆಯನ್ನು ಗಮನಿಸಿದಾಗ ಜ್ಯೋತಿಷ್ಯ ಪ್ರವರ್ತಕರಾದ 18 ಮುನಿಗಳೂ ಗ್ರಂಥಗಳನ್ನು ಸಂಸ್ಕೃತದಲ್ಲಿ ರಚಿಸಿದ್ದಾರೆ. ಆದರೆ ಕನ್ನಡದಲ್ಲಿ ಜ್ಯೋತಿಷ್ಯ ಗ್ರಂಥವನ್ನು ಬರೆದವರೆಂದರೆ ಶ್ರೀಧರಾಚಾರ್ಯರು.

ಕವಿ ಪರಿಚಯ

ಧಾರವಾಡ ಜಿಲ್ಲೆಯ ನರಗುಂದ ಗ್ರಾಮವು ಶ್ರೀಧರಾಚಾರ್ಯರ ಜನ್ಮಸ್ಥಳವಾಗಿದೆ. ಚಾಲುಕ್ಯ ರಾಜನಾದ ಅಹವಮಲ್ಲನ ಆಳ್ವಿಕೆಗೆ ಒಳಪಟ್ಟ

ಗ್ರಾಮ ಇದಾಗಿತ್ತು. ಶ್ರೀಧರಾಚಾರ್ಯರ ಜನ್ಮದಿನ ಮತ್ತು ಜೀವಿತಾವಧಿಯ ಕಾಲ ಖಚಿತವಾಗಿ ತಿಳಿದು ಬಂದಿಲ್ಲ. ಆದರೆ, ಜಾತಕತಿಲಕ ಗ್ರಂಥದ ಅಂತ್ಯಭಾಗದಲ್ಲಿ ಕ್ರಿ.ಶ. 1049ನೇ ವಿರೋಧಿ ಸಂವತ್ಸರದ ಮಾರ್ಗಶೀರ್ಷ ಮಾಸ ಕೃಷ್ಣಪಕ್ಷದ ಚತುರ್ಥಿ ಗುರುವಾರ ಪುಷ್ಯ ನಕ್ಷತ್ರದಲ್ಲಿ ಈ ಗ್ರಂಥ ಪ್ರಕಾಶ ಪಡಿಸಿದೆನೆಂದು ಹೇಳಿರುವುದರಿಂದ ಶ್ರೀಧರನು 11ನೆಯ ಶತಮಾನದ ಮಧ್ಯಭಾಗದಲ್ಲಿದ್ದವನೆಂದು ತಿಳಿದುಬರುವುದು.

ಗ್ರಂಥದ ಆರಂಭದಲ್ಲಿ ಕವಿ ಜಿನನನ್ನು ಸ್ತುತಿಸಿ, ತನ್ನನ್ನು ವಿಪ್ರಕುಲೋತ್ತಮಂ ಎಂದು ಕರೆದುಕೊಂಡಿರುವುದಿಂದ ಶ್ರೀಧರನು ಜೈನ ಬ್ರಾಹ್ಮಣನೆಂದು ತಿಳಿದುಬರುವುದು. ಕವಿ ನಾಗಕುಮಾರನು ತನ್ನ ಒಂದು ಕಾವ್ಯದಲ್ಲಿ ಶ್ರೀಧರಾಚಾರ್ಯರನ್ನು ಸ್ತುತಿಸಿ ನಮಸ್ಕರಿಸಿದ್ದಾನೆ. ನಾಗಕುಮಾರನನ್ನು ಬಿಟ್ಟರೆ, ಮತ್ತಾವ ಕವಿಯೂ ಶ್ರೀಧರಾಚಾರ್ಯರನ್ನು ಸ್ಮರಿಸಿರುವುದು ಕಂಡುಬಂದಿಲ್ಲ.

ಶ್ರೀಧರಾಚಾರ್ಯರು ತಮ್ಮ ಗ್ರಂಥದಲ್ಲಿ ಪಂಪಾದಿ ಕವಿಗಳನ್ನು ಸ್ಮರಿಸುವುದರ ಜೊತೆಗೆ ಜ್ಯೋತಿಷಾಚಾರ್ಯರಲ್ಲಿ ಪ್ರಮುಖನಾದ ಆರ್ಯಭಟ್ಟನನ್ನೂ ಸ್ಮರಿಸಿದ್ದಾರೆ. ಶ್ರೀಧರಾಚಾರ್ಯರಿಗೆ ಇರುವ ಬಿರುದುಗಳನ್ನು ಗಮನಿಸಿದಾಗ, ಇವರಿಗೂ ರಾಜಾಶ್ರಯವಿದ್ದಿತು ಎನ್ನುವುದರಲ್ಲಿ ಅನುಮಾನವಿಲ್ಲ. ಪ್ರಜ್ಞಾಧರ, ವಾಕ್ಶ್ರೀಧರ, ಶಾಸ್ತ್ರ ಕವಿತಾ ಚತುರ, ಕರಣರತ್ನ, ಬುಧತಿಲಕ, ಬುಧಮಿತ್ರ, ಸಮ್ಯಕ್ತ್ವ– ರತ್ನಾಕರ, ಕವಿರಾಜ ಬಾಂಧವ, ಪದ್ಯಾ ವಿದ್ಯಾಧರ, ಸುಜನೈಕ ಬಾಂಧವ – ಎಂಬ ಬಿರುದುಗಳು ಶ್ರೀಧರಾಚಾರ್ಯರಿಗೆ ಇದ್ದುವೆಂದು ಜಾತಕ ತಿಲಕಂ ಗ್ರಂಥದಿಂದ ತಿಳಿದು ಬರುವುದು. ಈ ಗ್ರಂಥದಿಂದಲೇ ಕವಿ ಈ ಮೊದಲು ಚಂದ್ರಪ್ರಭ ಚರಿತೆಯನ್ನು ರಚಿಸಿದ್ದರೆಂದು ತಿಳಿಯುವುದು. ಈ ಗ್ರಂಥ ಉಪಲಬ್ಧವಾಗಿದ್ದರೆ, ಶ್ರೀಧರಾಚಾರ್ಯರ ಬಗ್ಗೆ ಇನ್ನಷ್ಟು ವಿಷಯುಗಳನ್ನು ತಿಳಿಯುವ ಸಾಧ್ಯತೆಯಿತ್ತು.

ಮುಖಪುಟದ ಹೊರನೋಟ

ಈ ಗ್ರಂಥದ ಮುಖಪುಟವೂ ಆಕರ್ಷಕವಾಗಿದ್ದು ಜ್ಯೋತಿಷ್ಯದ ಗ್ರಂಥವೆಂದು ಸೂಚಿಸುವ ಚಿತ್ರಪಟವನ್ನು ಹೊಂದಿದೆ. ಚಿತ್ರದ ವಿವರ ಈ ರೀತಿ ಇದೆ–

* ಚಿತ್ರದ ಮಧ್ಯದಲ್ಲಿ ಭೂಮಿಯ ಚಿತ್ರವಿದೆ. ಅದರ ಮೇಲೆ ಕಾಲಪುರುಷನ ಚಿತ್ರವಿದೆ.
* ಈತನ ಚಿತ್ರವನ್ನು ರಾಶಿಗಳ ಅಂಗವಿಭಾಗಕ್ಕೆ ತಕ್ಕಂತೆ ಅಳವಡಿಸಿದೆ.
* ಅದರ ಸುತ್ತ ಇರುವ 12 ಚದುರಗಳಿಂದ ಕೂಡಿರುವ ಚಿತ್ರ ಫಲಗಳನ್ನು ತಿಳಿಯುವುದಕ್ಕೆ ಉಪಯುಕ್ತವಾಗಿರುವಂತೆ ಗ್ರಂಥಗಳ ಸನ್ನಿವೇಶವನ್ನು ತಿಳಿಸುವುದಕ್ಕಾಗಿ ನಮ್ಮ ದೇಶದಲ್ಲಿ ಬರೆಯುವ ಕುಂಡಲಿಯ ಕ್ರಮವನ್ನು ಸೂಚಿಸುತ್ತದೆ.
* ಈ ಕುಂಡಲಿಯಲ್ಲಿರುವ ಪ್ರತಿ ವಿಭಾಗವೂ ಒಂದೊಂದು ರಾಶಿಯನ್ನು ಸೂಚಿಸುವುದು.
* ಕುಂಡಲಿಯ ಮೇಲಿರುವ ವರ್ತುಲದಲ್ಲಿ ಬರೆದಿರುವ ಮೇಷ, ವೃಷಭ ಮೊದಲಾದ ಹನ್ನೆರಡು ಚಿತ್ರಗಳಿಂದ ರಾಶಿಸ್ವರೂಪವು ತಿಳಿದುಬರುತ್ತದೆ.
* ಚದುರದೊಳಗೆ ಬರೆದಿರುವುದು ಗ್ರಹಗಳ ಚಿತ್ರ.
* ಗ್ರಹಗಳಿಗಿರುವ ರಾಶಿಗಳ ಆಧಿಪತ್ಯವನ್ನು ಸೂಚಿಸುವುದಕ್ಕಾಗಿ ರಾಶಿಗಳಲ್ಲಿ ಅಧಿಪತಿಗಳಾಗಿರುವ ಗ್ರಹಗಳ ಚಿತ್ರವನ್ನು ಕೊಟ್ಟಿದೆ.
* ರಾಶಿಯ ಮೇಲ್ಭಾಗದ ವರ್ತುಲದಲ್ಲಿ ಆಯಾ ರಾಶಿಗೆ ಸಂಬಂಧಪಟ್ಟಂತೆ ಅಶ್ವಿನ್ಯಾದಿ 27 ನಕ್ಷತ್ರಗಳ ವಿಭಾಗವಿದೆ. ಅದರ ಮೇಲ್ಭಾಗದ ವರ್ತುಲಗಳಲ್ಲಿ, ರಾಶಿಗಳ ದ್ರೇಕ್ಕಾಣ ಮತ್ತು ನವಾಂಶ ವಿಭಾಗಗಳನ್ನು ಚಿತ್ರಿಸಿದೆ.

ಒಟ್ಟಿನಲ್ಲಿ ಒಮ್ಮೆ ನೋಡುವುದರಿಂದಲೇ ಜ್ಯೋತಿಶ್ಯಾಸ್ತ್ರಕ್ಕೆ ಸಂಬಂಧಪಟ್ಟ ಹಲವು ಮುಖ್ಯವಾದ ಮತ್ತು ಅವಶ್ಯಕವಾದ ವಿಚಾರಗಳು ಸುಲಭವಾಗಿ ತಿಳಿಯುವಂತೆ ಈ ಚಿತ್ರವನ್ನು ಅಳವಡಿಸಲಾಗಿದೆ.

ಜಾತಕತಿಲಕ – ಗ್ರಂಥ ಪರಿಚಯ

ಜನ್ಮ ಕಾಲದಲ್ಲಿದ್ದ ಗ್ರಹಗಳ ಸ್ಥಿತಿಗಳನ್ನಾಧರಿಸಿ ಪೂರ್ವಜನ್ಮದ ಕರ್ಮಾನುಸಾರ ಸಂಭವಿಸುವ ಶುಭಾಶುಭ ಫಲಗಳನ್ನು ತಿಳಿಸುವ ಜ್ಯೋತಿಷ್ಯ ಶಾಸ್ತ್ರಕ್ಕೆ ಸಂಬಂಧಪಟ್ಟ ಮೊದಲ ಗ್ರಂಥ ಇದಾಗಿದೆ. ಈ ಗ್ರಂಥವನ್ನು ಮೈಸೂರು ವಿಶ್ವವಿದ್ಯಾಲಯ 1959 ರಲ್ಲಿ ಪ್ರಥಮ ಮುದ್ರಣ, 1977 ರಲ್ಲಿ ದ್ವಿತೀಯ ಮುದ್ರಣ, 2003 ರಲ್ಲಿ ತೃತೀಯ ಮುದ್ರಣವನ್ನು ಮಾಡಿ ಪ್ರಕಟಿಸಿದೆ.

ಇದುವರೆಗೂ ಸಂಸ್ಕೃತ ಭಾಷೆಯಲ್ಲೇ ಜ್ಯೋತಿಷ್ಯ ಶಾಸ್ತ್ರಕ್ಕೆ ಸಂಬಂಧಪಟ್ಟ ಗ್ರಂಥಗಳಿರುವುದರಿಂದ ಕನ್ನಡಕ್ಕೆ ಇದನ್ನು ತರಲು ಶ್ರೀಧರನೇ ಸಮರ್ಥ ಎಂದು ಪಂಡಿತ ವಲಯವು ಹೇಳಿದ್ದರಿಂದ ಈ ಗ್ರಂಥವನ್ನು ರಚಿಸಿದೆನೆಂದು ಕವಿಯೇ ಗ್ರಂಥದ ಆದಿಯಲ್ಲಿ 16, 17, 18 ನೇ ಪದ್ಯಗಳಲ್ಲಿ ಹೇಳಿರುವನು. ಇಷ್ಟೇ ಅಲ್ಲದೆ, ಗ್ರಂಥಾದಿಯಲ್ಲಿ, ಚಿತ್ರದಂತೆ ಮನೋಹರವೂ, ದುರ್ಯೋಧನನ ಸೇನೆಯಂತೆ ಕರ್ಣ ಸುಂದರವೂ, ಗಣಿಕೆಯಂತೆ ಭಾವಾದ್ಯಲಂಕಾರ ಬಂಧುರವೂ ಆಗಿರುವ ಈ ಕೃತಿಯುನ್ನು ರಚಿಸಿರುವೆನೆಂದು ತಿಳಿಸಿದ್ದಾನೆ ಶ್ರೀಧರಾಚಾರ್ಯ. ತಾನು ವಿವರಿಸಿರುವ ಜ್ಯೋತಿಷ್ಯದ ಎಲ್ಲಾ ವಿಷಯಗಳನ್ನು ಈ ಎರಡು ಪದ್ಯಗಳಲ್ಲಿ ಕವಿ ವಿವರಿಸಿದ್ದಾನೆ–

ತರದಿಂ ಸಂಜ್ಞೆ ಬಲಾಬಲವಾಧಾನಂ ಜನ್ಮ ತಿರ್ಯಗ್ಜನ್ಮಾರಿಷ್ಟಾರಿಷ್ಟ
ಹರಣ ಮಾಯುರ್ದಾಯಂ ದಶಾಂತರ್ದಶೆಯಷ್ಟಕವರ್ಗಂ ಕರ್ಮಜೀವನಂ
ಧರಣೀನಾಥ ನಾಭಸ ಚಾಂದ್ರ ದ್ವಿತ್ರಿಗ್ರಹಾದಿ ದೀಕ್ಷಾಯೋಗಂ ರಾಶಿಫಲೋ
ತ್ಕರ ವಿಲಗ್ನಭಾವತ್ರ್ಯಂಶಲಕ್ಷಣ ದೃಷ್ಟಿಫಲಾನಿಷ್ಟಂ ಸ್ತ್ರೀ ಜಾತಕಂ ॥
(ಅಧಿ–24, ಪದ್ಯ–34)

ಮನುಜರ ನಿರ್ಯಾಣಪ್ರಾ
ಪ್ತಿ ನಷ್ಟಜಾತಕಮೆನಿಪ್ಪ ಭೇದದಿನಖಿಳಾ
ವನಿಯೊಳ್ ನೆಗಳ್ದಿತ್ತಿರ್ಪ
ತ್ತು ನಾಲ್ಕುಮಧಿಕಾರದಿಂದೆ ಜಾತಕತಿಲಕಂ ॥ (ಅಧಿ–24, ಪದ್ಯ–35)

ಹೀಗೆ ಗ್ರಂಥದ ಅಂತ್ಯ ಭಾಗದಲ್ಲಿ ತಾನು ಪ್ರಸ್ತುತ ಪಡಿಸಿದ ವಿಷಯಗಳನ್ನು ತಿಳಿಸಿ ಅದರ ಸಾರ್ಥಕತೆಯನ್ನು ಮೆರೆದಿದ್ದಾನೆ. ಈ ಎಲ್ಲ ವಿಷಯಗಳನ್ನು ಒಳಗೊಂಡಿರುವ ಜಾತಕ ತಿಲಕಂ ಗ್ರಂಥ ಕೂಡ ಸಂಸ್ಕೃತ ಜ್ಯೋತಿಷ್ಯ ಶಾಸ್ತ್ರ ಗ್ರಂಥಗಳಂತೆಯೇ ಸಂಜ್ಞಾ ಪ್ರಕರಣದಿಂದಲೇ ಆರಂಭವಾಗುವುದು. ಹಳಗನ್ನಡದಲ್ಲಿರುವ ಈ ಗ್ರಂಥದ ವಿಷಯವು ಎಲ್ಲರಿಗೂ ತಿಳಿಯುವಂತಾಗಲೆಂದು ಸರಳ ಕನ್ನಡಾರ್ಥದ ವಿವರವೂ ಇಲ್ಲಿದೆ. ಈ ಟೀಕು ಕನ್ನಡಿಗರಿಗೆ ಇನ್ನಷ್ಟು ಹತ್ತಿರವಾಗಲು ಕಾರಣವಾಯಿತು. ಹೀಗೆ ಹಳಗನ್ನಡದ ಶಾಸ್ತ್ರ ವಿಚಾರಕ್ಕೆ ಹೊಸಗನ್ನಡದಲ್ಲಿ ಅರ್ಥ ವಿವರಣೆಯನ್ನೂ ಪ್ರಸ್ತುತ ಗ್ರಂಥದಲ್ಲೇ ಕಾಣಬಹುದು.

ಪ್ರತ್ಯಕ್ಷಂ ಜ್ಯೋತಿಷಂ ಶಾಸ್ತ್ರಂ ಚಂದ್ರಾರ್ಕೌ ಯತ್ರ ಸಾಕ್ಷಿಣಾ ಎಂದು ಹೇಳುವಂತೆ ಜ್ಯೋತಿಷ್ಯ ಶಾಸ್ತ್ರವೂ ಎಲ್ಲಾ ಕಾಲದಲ್ಲಿಯೂ ಗೌರವಕ್ಕೆ ಪಾತ್ರವಾಗಿರುವುದು. ಜ್ಯೋತಿಷ್ಯ ಶಾಸ್ತ್ರದಲ್ಲಿ ಸಿದ್ಧಾಂತ, ಸಂಹಿತಾ, ಹೋರಾ ಎಂಬ ಮೂರು ಮುಖ್ಯ ವಿಭಾಗಗಳಿವೆ.

1. ಗ್ರಹ, ಗ್ರಹಣಾದಿ ಗಣಿತ ವಿಭಾಗವು ಸಿದ್ಧಾಂತದಲ್ಲಿ ಬರುವುದು.
2. ಶಕುನ, ಸ್ವಪ್ನ, ಸ್ವರ, ಸಾಮುದ್ರಿಕ, ವಾಸ್ತು, ವೃಷ್ಟಿ, ಉತ್ಪಾತಾದಿ ವಿವಿಧ ವಿಚಾರಗಳು ಸಂಹಿತೆಯಲ್ಲಿ ಬರುವುದು.
3. ಜಾತಕ ಫಲ, ಪ್ರಶ್ನ ಶಾಸ್ತ್ರ, ಮುಹೂರ್ತ ಶಾಸ್ತ್ರ – ಇವೆಲ್ಲಾ ಹೋರಾ ವಿಭಾಗದಲ್ಲಿ ಬರುವುದು.

ಮುಂದಿನ ಹಂತದಲ್ಲಿ ಪ್ರತೀ ಸಂಜ್ಞಾ ಪ್ರಕರಣದಲ್ಲಿ ವಿವರಿಸಿರುವ ವಿಷಯಗಳನ್ನು ಸಂಕ್ಷಿಪ್ತವಾಗಿ ತಿಳಿಯೋಣ.

ಮೊದಲನೇ ಸಂಜ್ಞಾ ಪ್ರಕರಣ

ಕಾಲಪುರುಷನ ಅಂಗ ವಿಭಾಗ, ರಾಶಿವರ್ಣ, ಪುರುಷ–ಸ್ತ್ರೀ, ಕ್ರೂರ–ಸೌಮ್ಯ ಮತ್ತು ಚರ–ಸ್ಥಿರ–ದ್ವಿ ಸ್ವಭಾವ ರಾಶಿಗಳು, ರಾಶಿಗಳಿಗೆ ದಿಕ್ಕು, ರಾಶ್ಯಾಧಿಪತಿಗಳು, ಷಡ್ವರ್ಗ ವಿಭಾಗ, ಚತುಷ್ಪಾದ–ಮನುಷ್ಯ–ಕೀಟ – ಜಲಚರ ರಾಶಿಗಳು, ರಾಶಿಗಳಿಗೆ ಕಾಲ ಮತ್ತು ದಿಗ್ಬಲ, ಗ್ರಾಮಾರಣ್ಯ

ರಾಶಿಗಳು, ದ್ವಾದಶ ಭಾವಗಳ ಹೆಸರು, ಕೇಂದ್ರ, ಫಣಫರ, ಆಪೋಕ್ಲೀಬ, ಉಪಚಯ ಸ್ಥಾನಗಳು, ವರ್ಗೋತ್ತಮಾಂಶ, ಶೀರ್ಷೋದಯ, ಪೃಷ್ಠೋದಯ, ಉಭಯೋದಯ ರಾಶಿಗಳು, ಉಚ್ಚ ರಾಶಿಗಳು, ನೀಚ ಮತ್ತು ಮೂಲ ತ್ರಿಕೋಣ ರಾಶಿಗಳು, ಗ್ರಹಗಳ ದೃಷ್ಟಿ– ಈ ಎಲ್ಲ ವಿಷಯಗಳ ವಿವರ ಮೊದಲನೆಯ ಸಂಜ್ಞಾ ಪ್ರಕರಣದಲ್ಲಿವೆ.

ಎರಡನೇ ಸಂಜ್ಞಾ ಪ್ರಕರಣ

ಈ ಪ್ರಕರಣದಲ್ಲಿ ಗ್ರಹಗಳಿಗೆ ಸಂಬಂಧಪಟ್ಟ ದಿಕ್ ಅಧಿಪತಿಗಳು, ಶುಭ – ಪಾಪ ಗ್ರಹಗಳ ವಿವರ, ಪುರುಷ–ಸ್ತ್ರೀ–ನಪುಂಸಕಾದಿಗಳು, ವೇಧಾ ಅಧಿಪತಿ ಮತ್ತು ವರ್ಣಾಧಿಪತಿಗಳು, ಗ್ರಹಗಳ ಷಡ್ಬಲ, ನಿಸರ್ಗ ಮತ್ತು ತತ್ಕಾಲ ಶತ್ರು–ಮಿತ್ರಾದಿಗಳು, ಗ್ರಹಗಳ ಸ್ವರೂಪಗಳ ವಿವರವಿದೆ.

ಮೂರನೇ ಸಂಜ್ಞಾ ಪ್ರಕರಣ

ಗರ್ಭಾದಾನ ಪ್ರಕರಣದಲ್ಲಿ ಆಧಾನ ವಿಚಾರ, ದೀಪಜ್ಞಾನ ಗರ್ಭ ಸ್ವರೂಪ, ಮಾಸಾಧಿಪತಿಗಳು, ಆಧಾನ ಲಗ್ನಫಲ, ಕಾರಕ ಗ್ರಹ ಮತ್ತು ಅದರ ಫಲ, ಗರ್ಭ ಸಂಭವ ಜ್ಞಾನ, ಪುರುಷ–ಸ್ತ್ರೀ ಜನ್ಮ ಜ್ಞಾನ, ಯಮಳಾದಿಯೋಗ, ಪ್ರಸವ ದಿನ ಮತ್ತು ಕಾಲಜ್ಞಾನ – ಇವು ವರ್ಣಿತವಾಗಿವೆ.

ನಾಲ್ಕನೇ ಸಂಜ್ಞಾ ಪ್ರಕರಣ

ಈ ಪ್ರಕರಣದಲ್ಲಿ ಗ್ರಹಗಳ ಸಾತ್ವಿಕ, ರಾಜಸ, ತಾಮಸ ಗುಣಗಳು, ಶಿಶುವಿನ ಗುಣ, ಬಣ್ಣ ಮತ್ತು ಆಕಾರ, ಜನನ ಕಾಲದಲ್ಲಿ ತಂದೆಯ ಸಾನಿಧ್ಯಾಸಾನಿಧ್ಯ ವಿಚಾರ, ಜನ್ಮಲಗ್ನ ನಿರ್ಣಯ, ತಾಯಿಯೊಡನೆ ಕೂಸಿನ ಯೋಗ, ಮಗುವಿಗೆ ಅಧಿಕಾಂಗ, ಹೀನಾಂಗ, ತೊದಲು, ಹೆಳವು ಮತ್ತು ಕಿವಿಡು – ಈ ಯೋಗಗಳು ವಿವೃತವಾಗಿವೆ.

ಐದನೆಯ ಸಂಜ್ಞಾ ಪ್ರಕರಣ

ಐದನೆಯ ಜನ್ಮ ಪ್ರಕರಣದಲ್ಲಿ, ವಿಯೋನಿ ಜನ್ಮ ಜ್ಞಾನ, ಪಶುವರ್ಣ,

ಪಕ್ಷಿ ಮತ್ತು ವೃಕ್ಷಗಳ ಜನ್ಮಜ್ಞಾನ, ಅವುಗಳ ಸಂಖ್ಯೆ, ವಿಯೋನಿಗಳ ಆಯಸ್ಸುಗಳ ಬಗ್ಗೆ ವರ್ಣಿಸಲಾಗಿದೆ.

ಆರನೆಯ ಸಂಜ್ಞಾ ಪ್ರಕರಣ

ಆರನೆಯ ಅರಿಷ್ಟ ಯೋಗ ಪ್ರಕರಣದಲ್ಲಿ ಹುಟ್ಟಿದ ಕೂಡಲೇ ಅಥವಾ ಕೆಲವೇ ತಿಂಗಳು, ವರ್ಷಗಳೊಳಗೆ ಮೃತ್ಯುವುಂಟಾಗುವ ಅರಿಷ್ಟ ಯೋಗಗಳು ಮತ್ತು ತಾಯಿಯೊಡನೆ ಶಿಶುವಿನ ಸಾವು, ಶಸ್ತ್ರಾಘಾತದಿಂದ ಮರಣ, ಗಂಡಾಂತ್ಯದಲ್ಲಿ ಜನಿಸುವುದರಿಂದ ಮೃತ್ಯು– ಇವೇ ಮೊದಲಾದ ಬಾಲಾರಿಷ್ಟ ಯೋಗಗಳ ವಿವರವಿದೆ.

ಏಳನೆಯ ಸಂಜ್ಞಾ ಪ್ರಕರಣ

ಏಳನೆಯ ಅರಿಷ್ಟ ಭಂಗ ಪ್ರಕರಣದಲ್ಲಿ ಚಂದ್ರಾರಿಷ್ಟ, ಜನ್ಮ ರಾಶ್ಯಾಧಿಪತಿಯಿಂದ ಸಂಭವಿಸುವ ಅರಿಷ್ಟ, ಸರ್ವಾರಿಷ್ಟ – ಇವುಗಳಿಗೆ ಭಂಗ ಉಂಟಾಗುವ ಯೋಗಗಳ ವಿಚಾರವಿದೆ.

ಎಂಟನೆಯ ಸಂಜ್ಞಾ ಪ್ರಕರಣ

ಎಂಟನೆಯ ಆಯುರ್ದಾಯ ಪ್ರಕರಣದಲ್ಲಿ ಆಂಶಾಯುರ್ದಾಯ, ಲಗ್ನಾಯುರ್ದಾಯ, ಮಾನವ, ಮೃಗ ಮತ್ತು ಪಕ್ಷಿ ವರ್ಗದ ಪರಮಾಯುರ್ದಾಯ, ಪ್ರಮಾಣ, ಅಮಿತಾ ಆಯುರ್ ಯೋಗ ಮತ್ತು ಫಲ – ಈ ವಿಚಾರಗಳು ಸಂಗ್ರಹಿತವಾಗಿವೆ.

ಒಂಭತ್ತನೆಯ ದಶಾಂತರ್ದಶ ಸಂಜ್ಞಾ ಪ್ರಕರಣ

ಈ ಪ್ರಕರಣದಲ್ಲಿ ದಶಾಕಾಲ ಪ್ರಮಾಣ, ದಶಾಕ್ರಮ ಮತ್ತು ಅಂತರ್ದಶಾ ಕ್ರಮ ಮತ್ತು ಫಲಗಳ ವಿವರಗಳಿವೆ.

ಹತ್ತನೆಯ ಸಂಜ್ಞಾ ಪ್ರಕರಣ

ಅಷ್ಟಕವರ್ಗ ವಿನ್ಯಾಸ ಕ್ರಮ, ಸೂರ್ಯಾದಿ ಗ್ರಹಗಳಿಂದ ಬಿಂದುಪ್ರದ ಸ್ಥಾನಗಳು, ಅಷ್ಟಕವರ್ಗ ಫಲ – ಇವುಗಳ ವಿಚಾರವಿದೆ.

ಹನ್ನೊಂದನೆಯ ಕರ್ಮಜೀವನ ಪ್ರಕರಣ

ಈ ಪ್ರಕರಣದಲ್ಲಿ ಧನಪ್ರಾಪ್ತಿ, ವೃತ್ತಿ, ಜೀವಿಕೆಯ ನಿರ್ಣಯ – ಈ ವಿಷಯಗಳಿವೆ.

ಹನ್ನೆರಡನೆಯ ರಾಜಯೋಗ ಪ್ರಕರಣ

ಈ ಪ್ರಕರಣದಲ್ಲಿ ರಾಜ ಮತ್ತು ಅನ್ಯ ವಂಶೀಯರಿಗೆ ಸಂಭವಿಸುವ ರಾಜಯೋಗ, ಕರ್ಕಾಟಕ, ಕನ್ಯಾ, ಮಕರ, ಮೀನ ಲಗ್ನಗಳಲ್ಲಿ ಹುಟ್ಟಿದವರಿಗೆ ಸಂಭವಿಸುವ ರಾಜಯೋಗ, ರಾಜಕುಮಾರ ರಾಜಯೋಗ, ರಾಜಸಮ ಧನಿಕ ಯೋಗ, ಚೋರಸ್ವಾಮಿಯೋಗ, ಧನಾಢ್ಯಯೋಗ – ಇವುಗಳ ವರ್ಣನೆಯಿದೆ.

ಹದಿಮೂರನೆಯ ನಾಭಸಯೋಗಪ್ರಕರಣ

ಈ ಪ್ರಕರಣದಲ್ಲಿ ರಜ್ಜು, ಮುಸಲ, ನಳ – ಈ ಮೂರು ಆಶ್ರಯ ಯೋಗಗಳೂ, ಗದಾ, ಶಕಟ, ವಿಹಗ ಮುಂತಾದ ಇಪ್ಪತ್ತು ಆಕೃತಿ ಯೋಗಗಳೂ, ಗೋಳ, ಯುಗ, ಶೂಲ, ಕೇದಾರ ಮುಂತಾದ ಏಳು ಸಂಖ್ಯಾ ಯೋಗಗಳೂ, ಸರ್ಪ, ಮಾಲಾ ಎಂಬ ಎರಡು ದಲಯೋಗಗಳೂ – ಹೀಗೆ ಒಟ್ಟು ಮೂವತ್ತೆರಡು ವಿಧ ನಾಭಸ ಯೋಗಗಳು ಮತ್ತು ಅವುಗಳ ಫಲಗಳೂ ವಿವೃತವಾಗಿವೆ.

ಹದಿನಾಲ್ಕನೇ ಚಾಂದ್ರಯೋಗ ಪ್ರಕರಣ

ಈ ಪ್ರಕರಣದಲ್ಲಿ ಚಂದ್ರನಿಂದ ಉಂಟಾಗುವ ಯೋಗಗಳಾದ ಸುನಫಾ, ಅನಫಾ, ಧುರಧುರ್ಯಾ, ಕೇಮದ್ರುಮ ಯೋಗಗಳು ಮತ್ತು ಅವುಗಳ ಫಲಗಳೂ, ಚರ – ಸ್ಥಿರ – ದ್ವಿಸ್ವಭಾವ ರಾಶಿಸ್ಥಿತ ಚಂದ್ರಫಲ, ನವಾಂಶ ಫಲಗಳು ವರ್ಣಿತವಾಗಿವೆ.

ಹದಿನೈದನೆಯ ದ್ವಿ – ತ್ರಿಗ್ರಹ ಯೋಗ ಪ್ರಕರಣ

ಈ ವಿಭಾಗದಲ್ಲಿ ಸೂರ್ಯನೊಡನಿರುವ ಚಂದ್ರ ಮೊದಲಾದ ಗ್ರಹಗಳ ಫಲ, ಚಂದ್ರನೊಡನಿರುವ ಕುಜ ಮೊದಲಾದ ಗ್ರಹಗಳ ಫಲ, ಶತ್ರು–ನೀಚ ಕ್ಷೇತ್ರ ಸ್ಥಿತ ಗ್ರಹಫಲಗಳ ವಿವರವಿದೆ.

ಹದಿನಾರನೆಯ ಪ್ರಕರಣ

ಇದರಲ್ಲಿ ಪ್ರವ್ರಜ್ಯಾ ಯೋಗ ಸಂಭವ ಗ್ರಹ ಸ್ಥಿತಿ, ದೀಕ್ಷಾ ಭೇದಗಳು, ಶನಿಯಿಂದ ಪ್ರವ್ರಜ್ಯಾ ಸಂಭವ ಯೋಗಗಳ ವಿವರಣೆ ಇದೆ.

ಹದಿನೇಳನೆಯ ರಾಶಿ ಪ್ರಕರಣ

ಇಲ್ಲಿ 12 ರಾಶಿಗಳಲ್ಲಿ ಸೂರ್ಯ ಮೊದಲಾದ ಗ್ರಹಗಳಿರುವಾಗ ಪ್ರತ್ಯೇಕವಾಗಿ ಸಂಭವಿಸುವ ಫಲಗಳು ಮತ್ತು ಲಗ್ನಫಲ ನಿರ್ಣಯ – ಇವುಗಳ ವಿಚಾರವಿದೆ.

ಹದಿನೆಂಟನೆಯ ಲಗ್ನಾದಿಭಾವ ಪ್ರಕರಣ

ಸೂರ್ಯ ಮೊದಲಾದ ಏಳು ಗ್ರಹಗಳೂ, ಲಗ್ನಾದಿ 12 ಭಾವಗಳಲ್ಲಿ ಸಂಚರಿಸುವಾಗ ಸಂಭವಿಸುವ ಭಾವ ಫಲಗಳೂ, ಕ್ಷೇತ್ರ ವಿಶೇಷದಿಂದ ಭಾವಫಲದಲ್ಲಿ ವಿಶೇಷವೂ, ಭಾವಫಲ ತಾರತಮ್ಯವೂ ವರ್ಣಿತವಾಗಿವೆ.

ಹತ್ತೊಂಭತ್ತನೆಯ ದ್ರೇಕ್ಕಾಣ ಪ್ರಕರಣ

ಇಲ್ಲಿ ಮೇಷಾದಿ ಹನ್ನೆರಡು ರಾಶಿಗಳಿಗೆ ಸಂಬಂಧಪಟ್ಟ ಮೂವತ್ತಾರು ದ್ರೇಕ್ಕಾಣಗಳ ಸ್ವರೂಪ ವರ್ಣನೆ ಇದೆ.

ಇಪ್ಪತ್ತನೆಯ ದೃಷ್ಟಿ ಪ್ರಕರಣ

ಈ ವಿಭಾಗದಲ್ಲಿ ಮೇಷಾದಿ ಹನ್ನೆರಡು ರಾಶಿ ಹೋರೆ, ದ್ರೇಕ್ಕಾಣ, ನವಾಂಶ, ದ್ವಾದಶಾಂಶ – ಇವುಗಳ ಸ್ಥಿತಿ ವಿಶೇಷದಿಂದ ಗ್ರಹದೃಷ್ಟಿ ಫಲ, ಸೂರ್ಯನಿಗೆ ಗ್ರಹದೃಷ್ಟಿ ಫಲ, ನವಾಂಶ ಸ್ಥಿತ ಗ್ರಹದೃಷ್ಟಿ ಫಲ, ವರ್ಗೋತ್ತಮ ಫಲಗಳೆಲ್ಲ ವಿವೃತವಾಗಿವೆ.

ಇಪ್ಪತ್ತೊಂದನೆಯ ಅನಿಷ್ಟಯೋಗ ಪ್ರಕರಣ

ಈ ಪ್ರಕರಣದಲ್ಲಿ ಪತ್ನಿ, ಪುತ್ರರಿಲ್ಲದಿರುವುದು, ಪತ್ನೀ ಮರಣ, ವಂಧ್ಯಾ ಪತಿ, ಶ್ವಾಸ, ಕ್ಷಯ, ದಂತರೋಗ, ವಿಕಲಾಂಗ, ಬಹುರೋಗ ಮುಂತಾದ ಅನಿಷ್ಟ ಯೋಗಗಳ ವಿವರಗಳಿವೆ.

ಇಪ್ಪತ್ತೆರಡನೆಯ ಪ್ರಕರಣ

ಸ್ತ್ರೀ ಜಾತಕ, ಸ್ತ್ರೀ ಸ್ವಭಾವ, ಭರ್ತೃ ವಿಚಾರ, ವೈಧವ್ಯ, ವ್ಯಭಿಚಾರಿಣೀ ಯೋಗ, ಸೌಮಂಗಲ್ಯ ಯೋಗ, ಅಲ್ಪ ಪುತ್ರಯೋಗ, ಬ್ರಹ್ಮವಾದಿನೀ ಯೋಗ, ಪತ್ನಿಯಿಂದ ಪತಿಗುಂಟಾಗುವ ಫಲ – ಇವುಗಳ ವಿಚಾರವಿದೆ ಈ ಪ್ರಕರಣದಲ್ಲಿ.

ಇಪ್ಪತ್ತಮೂರನೆಯ ಪ್ರಕರಣ

ನಿರ್ಯಾಣ ಪ್ರಕರಣ ಇದಾಗಿದೆ. ಸಾವಿಗೆ ಕಾರಣ, ಮೃತ್ಯು ಪ್ರದೇಶ ಜ್ಞಾನ, ಬಂಧನ, ವ್ಯಾಧಿ, ವಾಹನ ಮತ್ತು ಯಂತ್ರದ ಅಪಘಾತ, ಶಸ್ತ್ರಚಿಕಿತ್ಸೆ, ಮರಣಾನಂತರದ ಗತಿ, ಮೋಕ್ಷ ಪ್ರಾಪ್ತಿ – ಈ ವಿಷಯಗಳಿಗೆ ಸಂಬಂಧಪಟ್ಟ ಯೋಗಗಳಿವೆ.

ಇಪ್ಪತ್ತ ನಾಲ್ಕನೆಯ ಪ್ರಕರಣ

ನಷ್ಟ ಜಾತಕ ಪ್ರಕರಣದಲ್ಲಿ ಪ್ರಶ್ನೆ ಕಾಲವಶದಿಂದ ಜನ್ಮ ಕಾಲದ ವರ್ಷ, ಆಯನ, ಮಾಸ, ದಿನ, ಜನ್ಮಕಾಲ, ನಕ್ಷತ್ರ, ಲಗ್ನಾದಿ ಷಡ್ವರ್ಗ – ಇವುಗಳನ್ನು ತಿಳಿಯುವ ಕ್ರಮದ ವಿವರಗಳಿವೆ.

ಹೀಗೆ ಇಪ್ಪತ್ತನಾಲ್ಕು ಪರಿಶಿಷ್ಟದಲ್ಲಿ ಈ ಪದ್ಯಗಳಿಗೆ ಸಂವಾದಿಯಾದ ಸಂಸ್ಕೃತ ಶ್ಲೋಕಗಳನ್ನೂ, ಮೂರನೆಯ ಪರಿಶಿಷ್ಟದಲ್ಲಿ ಜ್ಯೋತಿಷ್ಯ ಶಾಸ್ತ್ರಕ್ಕೆ ಸಂಬಂಧಪಟ್ಟ ಕೆಲವು ಪದಗಳ ಅರ್ಥ ಮತ್ತು ವಿವರವನ್ನೂ ಕೊಟ್ಟಿದೆ. ಈ ಎರಡೂ ಪರಿಶಿಷ್ಟಗಳ ಸಹಾಯದಿಂದ ಈ ಶಾಸ್ತ್ರ ಗ್ರಂಥದ ನಿಜ ಸ್ವರೂಪವನ್ನು ತಿಳಿಯಲು ಸಹಾಯವಾಗುವುದು.

****

ಸುಕುಮಾರ ಚರಿತಂ – ಶಾಂತಿನಾಥ

– ಕಲ್ಪನಾ
ಸರ್ಕಾರಿ ಪ್ರಥಮ ದರ್ಜೆ ಕಾಲೇಜು,ಬೆಂಗಳೂರು

ಜೈನ ಕಥಾ ಪರಂಪರೆಯನ್ನು ಇಟ್ಟುಕೊಂಡು ತೀರ್ಥಂಕರರ ಚರಿತೆಗೆ ಪ್ರತಿಯಾಗಿ ಬಂದ ಮೊದಲ ಕೃತಿ ಶಾಂತಿನಾಥನ ಸುಕುಮಾರ ಚರಿತೆ. ವೊಡ್ಡಾರಾಧನೆ ಕಥಾಕೋಶದ ಬಳಿಕ ಶಾಂತಿನಾಥನು ಕಥೆಗಳ ಮಾದರಿಯಲ್ಲಿ ತೀರ್ಥಂಕರರ ಬದಲು ಚಕ್ರವರ್ತಿಗಳ ಕಥೆಯನ್ನು ಚರಿತ ಕಾವ್ಯವನ್ನಾಗಿ ನಿರ್ಮಿಸಿ ಜೈನ ಪುರಾಣಗಳ ಸ್ಥಾನದಲ್ಲಿ ಲೌಕಿಕ ಕಾವ್ಯವನ್ನು ಸ್ಥಾಪಿಸಿದವನು. ಪಂಪ ರನ್ನರಂತಹ ಶ್ರೇಷ್ಠ ಕವಿಗಳು ಮೈವೆತ್ತುಬಂದ ಹತ್ತನೆಯ ಶತಮಾನದೊಡನೆ ಹೋಲಿಸಿದಾಗಲಾಗಲೀ, ನಂತರದಲ್ಲಿ ಬಂದ ಹನ್ನೆರಡನೆಯ ಶತಮಾನದ ವಚನಗಳ ಜೊತೆಗೆ ಹೋಲಿಸಿದಾಗಲಾಗಲೀ, ಹನ್ನೊಂದನೆಯ ಶತಮಾನದ ಸಾಹಿತ್ಯ ತುಂಬಾ ಸಾಮಾನ್ಯವೆನಿಸುವುದು ಸಹಜ. ಆ ಕಾಲದಲ್ಲಿ ಶಾಸ್ತ್ರಗಳೇ ಹೆಚ್ಚು. ಭಾವಕ್ಕಿಂತ ಬುದ್ಧಿಗೇ ಹೆಚ್ಚು ಪ್ರಾಶಸ್ತ್ಯ. ಆದ್ದರಿಂದ ಸಾಹಿತ್ಯದ ದೃಷ್ಟಿಯಿಂದ ಈ ಕಾಲವನ್ನು ಬರಡುಗಾಲ ಎಂದು ಕರೆಯುವುದು ವಾಡಿಕೆಯಾಗಿತ್ತು. ಆದರೆ ಶಾಂತಿನಾಥನ ಈ ಕೃತಿ ಆ ಕಾಲದಲ್ಲಿ ಉತ್ಕೃಷ್ಟ ಕೃತಿಯಾಗಿ ಹೊರಹೊಮ್ಮಿ ಬರಡುಗಾಲ ಎಂಬ ಅಪವಾದವನ್ನು ಸ್ವಲ್ಪಮಟ್ಟಿಗೆ ಹೋಗಲಾಡಿಸುವ ಸತ್ವ ಹೊಂದಿರುವಂಥದ್ದು ಎಂಬ ಪ್ರಶಂಸೆಗೆ ಪಾತ್ರವಾಗಿದೆ.

ಪ್ರಾಚೀನ ಕನ್ನಡ ಜೈನ ಸಾಹಿತ್ಯ ಪರಂಪರೆಯಲ್ಲಿ ಶಾಂತಿನಾಥನ 'ಸುಕುಮಾರ ಚರಿತಂ' ಚಂಪೂಕಾವ್ಯವು ಅನೇಕ ದೃಷ್ಟಿಗಳಿಂದ ಅನನ್ಯವಾದ, ವಿಶಿಷ್ಟವಾದ ಕೃತಿಯಾಗಿದೆ. ಶಿವಕೋಟ್ಯಾಚಾರ್ಯನ ವಡ್ಡಾರಾಧನೆ ಹಾಗೂ ಪಂಪನ ಆದಿಪುರಾಣದ ಆಶಯುಗಳನ್ನು ಒಟ್ಟುಗೂಡಿಸಿಯೂ ಅವುಗಳಿಗಳಿಗಿಂತ ಪ್ರತ್ಯೇಕವಾಗಿ ಉಳಿಯುವ ಕೃತಿ ಇದು. ವಡ್ಡಾರಾಧನೆಯಲ್ಲಿನ ಸುಕುಮಾರನ ಗದ್ಯಕತೆ ಶಾಂತಿನಾಥನಲ್ಲಿ ಕಾವ್ಯವಾಗಿ ವಿಸ್ತರಣಗೊಂಡಿದೆ. ಪಂಪನ ಆದಿಪುರಾಣದ ವಿನ್ಯಾಸವಿದ್ದರೂ ಈ ಕೃತಿ ತೀರ್ಥಂಕರರ ಪುರಾಣ ಚರಿತೆ ಅಲ್ಲ. ಲೌಕಿಕ ಕಥೆಯೊಂದಕ್ಕೆ ಚಂಪೂಕಾವ್ಯದ ಆಕಾರವನ್ನು ತೊಡಿಸಿ ಜೈನಧರ್ಮದ ಸಾರವನ್ನು ಪ್ರಸಾರ ಮಾಡುವ ಜಾಣತನ ಶಾಂತಿನಾಥನಲ್ಲಿ ಕಾಣಿಸುತ್ತದೆ.

ನಿಜವಾದ ಅರ್ಥದಲ್ಲಿ ಮಾರ್ಗದ ದೇಹದೊಳಗೆ ದೇಸಿಯ ಆತ್ಮವನ್ನು ಮೊದಲು ತಂದುಕೊಟ್ಟವನು ಶಾಂತಿನಾಥ. ಸುಕುಮಾರ ಚರಿತೆ ಕನ್ನಡ ಛಂದಸ್ಸಿನ ಚರಿತ್ರೆಯಲ್ಲಿ ಹೆಚ್ಚು ಬಾರಿ ಉಲ್ಲೇಖಗೊಂಡ ಕೃತಿ. ಇದರಲ್ಲಿ ಕನ್ನಡದ ದೇಸಿಮಟ್ಟುಗಳಾದ ತ್ರಿಪದಿ, ರಗಳೆ, ಪಿರಿಯಕ್ಕರ ಹಾಗೂ ಅಂಶಷಟ್ಪದಿ ಕೂಡ ಪ್ರಯೋಗವಾಗಿದೆ. ರಗಳೆಯ ಮೂಲರೂಪವಾದ ಪದ್ಧಳಿ ಅಥವಾ ಪಜ್ಝಟಿಕಾ ಮೊತ್ತಮೊದಲಿಗೆ ನಮಗೆ ದೊರಕುವುದು ಇಲ್ಲಿಯೇ. ಹೀಗೆ ವಸ್ತು, ಭಾಷೆ, ಛಂದಸ್ಸುಗಳಲ್ಲಿ ಕನ್ನಡತನವನ್ನು ಇಟ್ಟುಕೊಂಡು ಚಂಪೂವಿನ ಕಾವ್ಯ ಮಾದರಿಯಲ್ಲಿ ಸುಕುಮಾರ ಚರಿತೆಯನ್ನು ಶಾಂತಿನಾಥ ರಚಿಸಿರುವುದು ಕನ್ನಡ ಜೈನ ಸಾಹಿತ್ಯ ಇತಿಹಾಸದಲ್ಲಿ ಒಂದು ಕುತೂಹಲಕಾರಿಯಾದ ಸಂಗತಿ.

ಜನ್ನ, ನಯಸೇನ, ಬ್ರಹ್ಮಶಿವ, ವೃತ್ತವಿಲಾಸರಂಥ ಜೈನ ಕಥನಕವಿಗಳಿಗೆ ಸುಕುಮಾರ ಚರಿತೆ ಪ್ರೇರಣೆಯನ್ನು ಕೊಟ್ಟಿದೆ. ಜೈನಕವಿಗಳು ಉದ್ದಕ್ಕೂ ದೇಸಿಯ ಕಡೆ ತುಡಿಯುತ್ತಿದ್ದರು ಎಂಬುದಕ್ಕೆ ಈ ಕೃತಿ ಮೊದಲ ಸಾಕ್ಷಿಯಾಗಿ ನಿಲ್ಲುತ್ತದೆ. ಶಾಂತಿನಾಥ ಬಳಸಿದ ಅನೇಕ ದೇಸಿಪದಗಳು ಕನ್ನಡ ಮತ್ತು ಸಂಸ್ಕೃತದ ಪರ ವಿರೋಧ ಚರ್ಚೆಗೆ ಪರೋಕ್ಷ ಪ್ರೇರಣೆಯನ್ನು ಕೊಟ್ಟಿತೆನ್ನಬಹುದು. ನಯಸೇನನು ಸಂಸ್ಕೃತವನ್ನು ವಿರೋಧಿಸಿ ಕನ್ನಡಪರ ಮಾತಾಡುವುದಕ್ಕೂ, ಅಂಡಯ್ಯನು ತನ್ನ ಕಬ್ಬಿಗರ ಕಾವದಲ್ಲಿ ಅಚ್ಚಗನ್ನಡವನ್ನು

ತನ್ನ ಕಾವ್ಯದ ಭಾಷೆಯನ್ನಾಗಿ ರೂಪಿಸುವುದಕ್ಕೂ ಪರೋಕ್ಷವಾಗಿ ಸುಕುಮಾರ ಚರಿತೆಯೇ ಪ್ರೇರಣೆ ಇದ್ದಿರಬಹುದು. ಕಥನದ ಶೈಲಿಯ ದೃಷ್ಟಿಯಿಂದಲೂ ಘಟನೆ ಮತ್ತು ವರ್ಣನೆಗಳನ್ನು ವಿಸ್ತರಿಸುವ ಕಲೆಗಾರಿಕೆಯನ್ನು ಇದು ಸಮರ್ಥವಾಗಿ ಬಳಸಿಕೊಂಡಿದೆ. ಭಿನ್ನ ಛಂದೋಮಾದರಿಗಳನ್ನು ಮಿಶ್ರಣ ಮಾಡುವುದರ ಮೂಲಕ ಈ ಕಥನ ಕಾವ್ಯಕ್ಕೆ ನಾಟಕೀಯ ಗುಣ ಪ್ರಾಪ್ತವಾಗಿದೆ. ಜನಪದ ಕಥೆಯನ್ನು ಕಾವ್ಯವಾಗಿ ರಂಗಭೂಮಿಗೆ ಪ್ರದರ್ಶನಗೊಳ್ಳುವ ಮಾದರಿಯನ್ನು ಸುಕುಮಾರ ಚರಿತೆಯಲ್ಲಿ ಕಾಣಬಹುದು.

ಕವಿ ವಿಚಾರ

ಸುಕುಮಾರ ಚರಿತೆಯ ರಚನಕಾರ ಶಾಂತಿನಾಥನ ಬಗ್ಗೆ ನಮಗೆ ಎರಡು ಕಡೆಯಲ್ಲಿ ವಿವರಗಳು ಸಿಗುತ್ತವೆ. ಒಂದು ಸ್ವತಃ ಅವನ ಕೃತಿಯಲ್ಲಿ. ಇನ್ನೊಂದು ತನ್ನ ಕೃತಿಯ ನಂತರ ಅವನೇ ಪದ್ಯ ರಚಿಸಿರುವ ಶಿಕಾರಿಪುರದ 136ನೇ ಶಾಸನದಲ್ಲಿ. ಅದರ ಪ್ರಕಾರ ಶಾಂತಿನಾಥನ ತಂದೆ ಗೋವಿಂದರಾಜ, ಗುರುಗಳು ವರ್ಧಮಾನ ಯತಿಗಳು, ಕರ್ಣಪಾರ್ಯ ಎಂಬ ಅಣ್ಣ ಹಾಗೂ ರೇವಣ ಎಂಬ ತಮ್ಮ ಇದ್ದಂತೆ ತಿಳಿದುಬರುತ್ತದೆ. ಈತನಿಗೆ ರಾಜಹಂಸ, ಚತುರಕವಿ, ಸರಸ್ವತೀಮುಖಮುಕುರ ಇತ್ಯಾದಿ ಬಿರುದುಗಳಿದ್ದವು.

ಕ್ರಿ.ಶ.1065 ರಿಂದ ಕ್ರಿ.ಶ.1069 ರವರೆಗೆ ಬನವಾಸಿ ಪನ್ನಿರ್ಚ್ಛಾಸಿರ ನಾಡಿನ ಮಹಾಮಂಡಲೇಶ್ವರನಾಗಿ ಆಳಿದ ಲಕ್ಷ್ಮಣರಾಜನ ಆಶ್ರಯದಲ್ಲಿದ್ದವನು. ಸುಕುಮಾರ ಚರಿತೆ ಕೃತಿಯ ರಚನೆಯ ನಂತರ ಶಾಂತಿನಾಥನು ಈ ರಾಜನ ಆಶ್ರಯಕ್ಕೆ ಬಂದಿರಬೇಕು. ಯಾಕೆಂದರೆ ಈ ಕಾವ್ಯದಲ್ಲಿ ಎಲ್ಲಿಯೂ ರಾಜನ ಪ್ರಸ್ತಾಪ ಇಲ್ಲ. ಆದರೆ ಶಾಸನದಲ್ಲಿ ಅವನನ್ನು ಕುರಿತ ಧಾರಾಳ ಸ್ತುತಿ ಪದ್ಯಗಳಿವೆ. ಈ ಶಾಸನದ ಕಾಲ ಕ್ರಿ.ಶ. 1068. ಲಕ್ಷ್ಮಣರಾಜ ಮಹಾಮಂಡಲೇಶ್ವರನಾಗಿದ್ದದ್ದು ಕ್ರಿ.ಶ. 1065. ಆದ್ದರಿಂದ ಸುಕುಮಾರ ಚರಿತೆ ಅದಕ್ಕಿಂತ ಮುಂಚೆಯೇ ರಚಿತವಾಗಿದ್ದಿರಬೇಕು. ಮಲ್ಲಿನಾಥ ಎಂಬುವವನು ನಗರದ ಎರಡು ಶಾಸನಗಳನ್ನು ಕ್ರಿ.ಶ. 1062ರಲ್ಲಿ

ರಚಿಸಿದ್ದು, ಅದರಲ್ಲಿನ ಒಂದು ಶಾಸನದಲ್ಲಿನ ಪದ್ಯವೊಂದು ಸುಕುಮಾರ ಚರಿತಂ ಕಾವ್ಯದ ಮೊದಲ ಆಶ್ವಾಸದ 26 ನೇ ಪದ್ಯದ ನೇರ ಪ್ರಭಾವಕ್ಕೆ ಒಳಗಾಗಿದೆ ಎಂದು ಹೇಳುವ ಡಿ.ಎಲ್.ನರಸಿಂಹಾಚಾರ್ ಕಾವ್ಯದ ರಚನಾ ಕಾಲ ಕ್ರಿ.ಶ. 1060 ಎಂದು ತೀರ್ಮಾನಿಸುತ್ತಾರೆ.

ಶಾಂತಿನಾಥನು ಲಕ್ಷ್ಮಣರಾಜನ ಆಪ್ತನಾಗಿದ್ದುದು ಮಾತ್ರವಲ್ಲದೆ, ರಾಜನ ಭಂಡಾರದ ಅಧಿಕಾರಿಯೂ, ರಾಜಕಾರ್ಯಧುರಂಧರನೂ ಆಗಿದ್ದನು. ಪಂಪನಂತೆಯೇ ರಾಜವಲಯದಲ್ಲಿ ಪ್ರಭಾವಶಾಲಿಯೂ, ಶ್ರೀಮಂತನೂ ಆಗಿದ್ದ ಕವಿ ಈತ. ಈತನ ಕಾವ್ಯಪ್ರೌಡಿಮೆ ರಾಜಾಶ್ರಯಕ್ಕೆ ಬರುವ ವೇಳೆಗಾಗಲೇ ಪ್ರಸಿದ್ಧವಾಗಿದ್ದರಿಂದ ಈತನಿಗೆ ಆಸ್ಥಾನದಲ್ಲಿ ಉತ್ತಮ ಸ್ಥಾನಮಾನವಿತ್ತು. ಮಾತ್ರವಲ್ಲ, ಪಂಪನಂತೆ ಅನವಶ್ಯಕವಾಗಿ ಆಶ್ರಯದಾತ ರಾಜನನ್ನು ವೈಭವೀಕರಿಸುವ ಅವಶ್ಯಕತೆ ಒದಗಲಿಲ್ಲ ಎಂಬುದು ಅದೃಷ್ಟವೇ ಸರಿ.

ಶಾಂತಿನಾಥನು ದೊಡ್ಡ ಸಂಸ್ಕೃತ ಪಂಡಿತನಾಗಿದ್ದನೆಂಬುದು ಈತನ ಪ್ರೌಢವಾದ ಕಾವ್ಯ ಶೈಲಿಯಿಂದ ಗೊತ್ತಾಗುತ್ತದೆ. ಇವನು ಕೆಲ ಅಂಶಗಳಲ್ಲಿ ಪಂಪನನ್ನು ಹೋಲುತ್ತಾನೆ. ಇನ್ನು ಕೆಲವದರಲ್ಲಿ ಅವನನ್ನು ಅನುಸರಿಸುತ್ತಾನೆ. ಪಂಪನ ಆತ್ಮಪ್ರತ್ಯಯ ಇವನಲ್ಲೂ ಇದೆ.

"ಸಹಜಕವಿ ಚತುರಕವಿ ನಿ

ಸ್ಸಹಾಯಕವಿ ಸುಕವಿ ಸುಕರಕವಿ ಮಿಥ್ಯಾತ್ವ

ಪ್ರಹರಕವಿ ಸುಭಗಕವಿ ನುತ

ಮಹಾಕವೀಂದ್ರಂ ಸರಸ್ವತೀ ಮುಖ ಮುಕುರಂ."

ಎಂದು ತನ್ನನ್ನು, ತನ್ನ ಕಾವ್ಯಶಕ್ತಿಯನ್ನು ಹೊಗಳಿಕೊಳ್ಳುತ್ತಾನೆ.

ಕಾವ್ಯದ ಆರಂಭದಲ್ಲಿ ಕವಿಯು ಅಕಳಂಕದೇವ, ವಾದಿರಾಜ, ಧನಂಜಯ ಮುಂತಾದ ಸಂಸ್ಕೃತ ಕವಿಗಳನ್ನು, ಪಂಪ, ಪೊನ್ನ, ರನ್ನ ಮೊದಲಾದ ಕನ್ನಡ ಕವಿಗಳನ್ನು ಸ್ಮರಿಸಿದ್ದಾನೆ, ಹೊಗಳಿದ್ದಾನೆ. ಇವನು ಉಭಯ ಭಾಷಾ ಪಾಂಡಿತ್ಯವನ್ನು ಹೊಂದಿರುವುದು ಮಾತ್ರವಲ್ಲದೆ, ಪ್ರಾಕೃತ

ಭಾಷೆಯ ಅಲ್ಪಸ್ವಲ್ಪ ಪರಿಚಯವೂ ಇದ್ದಂತೆ ತೋರುತ್ತದೆ. ನಂತರದಲ್ಲಿ ತನ್ನ ಸ್ವಂತ ಗುರು ವರ್ಧಮಾನರೊಂದಿಗೆ ಒಂದು ಇಡೀ ಗುರುಸಮೂಹವನ್ನೇ ಸ್ತುತಿಸಿದ್ದಾನೆ.

ತನ್ನ ತಂದೆಯ ದೈವನಿಷ್ಠೆಯನ್ನೂ, ಧರ್ಮಶ್ರದ್ಧೆಯನ್ನೂ ತನ್ನ ಆಚಾರ್ಯರ ಮಹತ್ತನ್ನೂ ತಿಳಿಸುವುದರ ಜೊತೆಗೆ ಶಾಂತಿನಾಥನು ಸ್ವತಃ ತಾನು ಹೇಗೆ ಧರ್ಮಾನುರಾಗಿಯಾಗಿದ್ದೇನೆಂಬುದನ್ನು ಹೇಳಿಕೊಂಡಿದ್ದಾನೆ. ಅವನಿಗೆ ಮೋಕ್ಷ ಮಾರ್ಗವನ್ನು ತೋರುವ ರತ್ನತ್ರಯಗಳೇ ಅಲಂಕಾರವಾಗಿವೆಯಂತೆ. ಶಾಂತಿನಾಥನಿಗೆ ತನ್ನ ಜಿನಮತ – ಜೈನಧರ್ಮದಲ್ಲಿ ಅಪಾರ ಶ್ರದ್ಧೆ, ಅನಂತ ಗೌರವ, ಅಮಿತವಾದ ಆಸಕ್ತಿ, ಅತೀವವಾದ ಅನುರಾಗ. ತನ್ನ ಸ್ವಧರ್ಮವಾದ ಜಿನಧರ್ಮವೇ ಪರಮ ಧರ್ಮವೆಂಬ ನಂಬಿಕೆ. ಅಲ್ಲದೆ ಜಿನಮತವೇ ಉದಾತ್ತ ಮತವೆಂದೂ, ಜಿನತತ್ತ್ವವೇ ಪರಮ ತತ್ತ್ವವೆಂದೂ, ಜಿನಮಾರ್ಗವೇ ಸ್ವೈರಮಾರ್ಗವೆಂದೂ ಶಾಂತಿನಾಥನ ಅಚಲವಾದ ವಿಶ್ವಾಸ.

ಸುಕವೀಂದ್ರರೂ, ವಿನೇಯಜನರೂ 'ಈ ಸುಕುಮಾರ ಚರಿತದೊಳ್ ನೋಟ್ಕೆ ಕಾವ್ಯಧರ್ಮಮುಮನಮಳ ಜಿನಧರ್ಮಮುಮಂ' ಎಂದು ಮಹಾಕವಿ ಪಂಪನಂತೆ ಶಾಂತಿನಾಥ ಕವಿಯೂ ತನ್ನ ಕಾವ್ಯಾರಂಭದಲ್ಲೇ ಉದ್ಘೋಷಿಸಿದ್ದಾನೆ. ಶಾಂತಿನಾಥ ಕವಿಯ ಈ ಸದಾಶಯ ವಿಮರ್ಶೆಯ ದೃಷ್ಟಿಯಿಂದ ಸಮೀಕ್ಷಿಸಿದಾಗಲೂ ಬಹುಮಟ್ಟಿಗೆ ನೆರವೇರಿರುವುದು ಸ್ಪಷ್ಟವಾಗಿ ಕಾಣುತ್ತದೆ. ಕಾವ್ಯ ಪಾಕದಲ್ಲಿ ಧರ್ಮ ಪ್ರತ್ಯೇಕವಾಗಿ ಒಡೆದು ನಿಲ್ಲದೆ ಸಮಪಾಕವಾಗಿ ಸೇರಿದೆ. ಶಾಂತಿನಾಥನು ಕಾವ್ಯಧರ್ಮದ ಮಹತ್ವವನ್ನೂ, ಜೈನಧರ್ಮದ ಮಹಿಮೆಯನ್ನೂ ಸುಕುಮಾರ ಚರಿತೆಯ ರಸಪಾಕದಲ್ಲಿ ಹದವಾಗಿ ಒಂದುಗೂಡಿಸಿದ್ದಾನೆ.

ಕತಾ ಹಂದರ

ಜಂಬೂದ್ವೀಪದ ಮೇರುಪರ್ವತದ ದಕ್ಷಿಣಕ್ಕಿರುವುದು ವತ್ಸದೇಶ; ಅದರ ರಾಜಧಾನಿ ಕೌಶಂಭಿಪುರ. ಅದರ ದೊರೆ ಅತಿಬಲ ಎಂಬ ಅರಸು; ರಾಣಿ ಮನೋಹರಿ. ರಾಜನಿಗೆ ಮಂತ್ರಿ ಮತ್ತು ಪುರೋಹಿತನಾಗಿದ್ದವನು

ಸೋಮಶರ್ಮನೆಂಬ ಬ್ರಾಹ್ಮಣ, ಅವನ ಹೆಂಡತಿ ಕಾಶ್ಯಪಿ. ಈ ಬ್ರಾಹ್ಮಣ ದಂಪತಿಗಳಿಗೆ ಇಬ್ಬರು ಗಂಡು ಮಕ್ಕಳು, ಅಗ್ನಿಭೂತಿ ಮತ್ತು ವಾಯುಭೂತಿ ಎಂಬುವವರು. ಇವರಿಗೆ ವಿದ್ಯೆಯಲ್ಲಿ ಆಸಕ್ತಿಯಿರಲಿಲ್ಲ; ಆದರೆ ವಿಷಯಾಸಕ್ತಿ ಧಾರಾಳವಾಗಿತ್ತು. ಮನೆಯಲ್ಲಿ ಬೇಕಾದಷ್ಟು ಇದ್ದುದರಿಂದ ಈ ಮಕ್ಕಳು ಉಂಡುತಿಂದು ಉಂಡಾಡಿಗಳಾಗಿ ಬೆಳೆದರು; ತಂದೆ ಗಳಿಸಿದ್ದನ್ನು ಉಡಾಯಿಸುವುದೇ ತಮ್ಮ ಪರಮಕರ್ತವ್ಯವೆಂಬಂತೆ ವೆಚ್ಚ ಮಾಡಿದರು. ಇದರಿಂದಾಗಿ ತಂದೆಯ ಮನಸ್ಸು ಕೊರಗಿ, ಕೆಲಕಾಲದ ಬಳಿಕ ಅವನು ಕಾಲವಶನಾದ.

ಸೋಮಶರ್ಮನ ಸಾವಿನ ಸುದ್ದಿ ತಿಳಿದು ದುಃಖಿತನಾದ ಅತಿಬಲನು ಅಗ್ನಿಭೂತಿ - ವಾಯುಭೂತಿಗಳನ್ನು ಆರಮನೆಗೆ ಬರಮಾಡಿಕೊಂಡು ಸಾಂತ್ವನದ ಮಾತುಗಳನ್ನಾಡಿದ. ಅಲ್ಲದೆ ಅವರಿಗೆ ಗೌರವ ಸಲ್ಲಿಸಿ, ಅವರ ತಂದೆಯ ಪದವಿಯನ್ನು ದಯಪಾಲಿಸಿ ಕಳಿಸಿಕೊಟ್ಟ. ಆದರೇನು, ನಾಯಿ ಬಾಲಕ್ಕೆ ದಬ್ಬೆ ಕಟ್ಟಿದಂತಾಯಿತು. ಒಮ್ಮೆ ರಾಜಾಸ್ಥಾನಕ್ಕೆ ವಿಜಯಜಿಹ್ವನೆಂಬ ವಾದಿ ಎಲ್ಲಿಂದಲೋ ಬಂದು ತನ್ನ ಚಾತುರ್ಯವನ್ನು ಪ್ರದರ್ಶಿಸಿದ. ತನ್ನಲ್ಲಿಯೂ ದೊಡ್ಡ ವಿದ್ವಾಂಸರಿರುವುದನ್ನು ಅವನಿಗೆ ತೋರಿಸಲು ರಾಜನು, ಸೋಮಶರ್ಮನ ಮಕ್ಕಳು ತಂದೆಯಂತೆಯೇ ಪಂಡಿತರೆಂದು ಭಾವಿಸಿದ್ದರಿಂದ, ಅವರನ್ನು ಬರಹೇಳಿದ. ಆದರೆ ಆವರು ಶುಂಠರಾದದ್ದರಿಂದ ಕಕ್ಕಾಬಿಕ್ಕಿಗಳಾಗಿ, ಕಣ್ಣೀರು ಸುರಿಸುತ್ತ ನಿಂತರೇ ವಿನಾ ವಾದಮಾಡುವ ಯಾವುದೇ ಸಾಮರ್ಥ್ಯವನ್ನು ಪ್ರದರ್ಶಿಸಲಿಲ್ಲ. ಇದರಿಂದ ಅತಿಬಲನಿಗೆ ನಿರಾಸೆಯೂ ಆಯಿತು; ಅವಮಾನವಾದಂತೆಯೂ ಅಯಿತು. ಅವರಿಗಿತ್ತಿದ್ದ ಸ್ಥಾನಮಾನಗಳನ್ನು ರಾಜ ಕಿತ್ತುಕೊಂಡು ಇಬ್ಬರನ್ನೂ ಮನೆಗಟ್ಟಿದ.

ಮನೆಗೆ ಮರಳಿದ ಅಣ್ಣತಮ್ಮಂದಿರು ತಾಯಿಗೆ ಮುಖ ತೋರಿಸಲಾರದೆ ಅಳುತ್ತ ನಿಂತರು. ಬಹಳ ವಿಚಾರಿಸಿದ ಮೇಲೆ ನಡೆದದ್ದನ್ನೆಲ್ಲ ವಿವರಿಸಿದರು; ವಿದ್ಯೆ ಕಲಿಯದೆ ಅವಮಾನಗೊಂಡ ಬಗೆಯನ್ನು ಅರುಹಿದರು; ಈಗ ತಾವು ವಿದ್ಯೆ ಕಲಿಯಲು ತಯಾರಿರುವುದನ್ನು ಸೂಚಿಸಿದರು. ತಾಯಿ ಮೊದಮೊದಲು ಮೂದಲಿಕೆಯ ಮಾತುಗಳನ್ನಾಡಿದರೂ ಕೊನೆಗೆ, ಅವರು

ಪಶ್ಚಾತ್ತಾಪ ಪಡುವುದನ್ನು ಕಂಡು ಅವರನ್ನು ಸಮಾಧಾನಮಾಡಿ, ಇನ್ನೂ ಕಾಲ ಮಿಂಚಿಲ್ಲವೆಂದು ತಿಳಿಸಿ, ಮಗಧ ದೇಶದ ಸುಬಲ ಮಹಾರಾಜನ ಮಂತ್ರಿಯಾದ ಸೂರ್ಯಮಿತ್ರನು ತನ್ನ ನಾದಿನಿಯ ಗಂಡ, ಆದ್ದರಿಂದ ಅವರ ಸೊದರಮಾವ, ತುಂಬ ದೊಡ್ಡ ಪಂಡಿತ, ಅವನಲ್ಲಿ ಅವರು ವಿದ್ಯೆ ಕಲಿಯುವ ಏರ್ಪಾಡು ಮಾಡುವೆನೆಂದು ಆಶ್ವಾಸನೆಯಿತ್ತಳು. ಆಂತೆಯೇ ಸೂರ್ಯಮಿತ್ರನಿಗೆ ಒಂದು ಓಲೆಯನ್ನು ಬರೆಯಿಸಿ ಅವರ ಕೈಗಿತ್ತು ಸೂಕ್ತ ಹಿತವಚನಗಳೊಡನೆ ಅವರನ್ನು ಮಗಧಕ್ಕೆ ಕಳಿಸಿಕೊಟ್ಟಳು.

ಅಗ್ನಿಭೂತಿ – ವಾಯುಭೂತಿಯರು ಉತ್ಸಾಹದಿಂದ ಪ್ರಯಾಣ ಬೆಳೆಸಿ ಕೆಲವು ದಿನಗಳ ಬಳಿಕ ಮಗಧದ ರಾಜಧಾನಿ ರಾಜಗೃಹವನ್ನು ತಲುಪಿದರು; ಸೂರ್ಯಮಿತ್ರನನ್ನು ಕಂಡು ತಾಯಿ ಕೊಟ್ಟಿದ್ದ ಓಲೆಯನ್ನು ಅವನ ಕೈಗಿತ್ತರು. ಅದನ್ನು ಮನಸ್ಸಿನಲ್ಲಿಯೇ ಓದಿಕೊಂಡ ಆತನು, ವಿದ್ಯೆಗಾಗಿ ಬಂದ ಅವರನ್ನು ಸೋದರಳಿಯರೆಂದು ಒಪ್ಪಿಕೊಂಡರೆ ಅವರು ಸದರ ವಹಿಸಿ ಕಲಿಯಲಾರದೇ ಹೋಗಬಹುದೆಂದು ಹೆದರಿ, ತನಗೆ ಕಾಶ್ಯಪಿ ಯಾರು ಎಂಬುದೇ ತಿಳಿಯದು ಎಂದು ನಟಿಸಿ, ಆದರೂ ವಿದ್ಯೆಯ ಹಂಬಲದಿಂದ ಬಂದಿರುವುದರಿಂದ, ತಮ್ಮ ಆಹಾರದ ಏರ್ಪಾಟು ತಾವೇ ಮಾಡಿಕೊಂಡರೆ. ಅವರಿಗೆ ತಾನು ವಿದ್ಯೆ ಹೇಳಿಕೊಡುವುದಾಗಿ ಆಶ್ವಾಸನೆ ಕೊಟ್ಟು ತನ್ನ ಮನೆಯಲ್ಲಿಯೇ ಇರಿಸಿಕೊಂಡ. ಹೇಗಾದರೂ ವಿದ್ಯಾವಂತರಾದರೆ ಸಾಕೆಂದು ಒಪ್ಪಿದ ಅವರು ಭಿಕ್ಷೆ ಎತ್ತಿ ಹೊಟ್ಟೆಪಾಡು ನಿಭಾಯಿಸುವುದೆಂದು ನಿರ್ಣಯಿಸಿದರು. ಆದರೆ ಬೇಡಿ ತಂದ ಅನ್ನಕ್ಕೆ ಎಣ್ಣೆ–ಉಪ್ಪುಗಳನ್ನು ನೀಡಬಾರದೆಂದು ಸೂರ್ಯಮಿತ್ರ ಅಡಿಗೆಯವರಿಗೆ ಕಟ್ಟಪ್ಪಣೆ ಮಾಡಿದ.

ಸರಿ, ಅಣ್ಣ ತಮ್ಮಂದಿರ ವಿದ್ಯೆ ಆರಂಭಗೊಂಡಿತು. ಹುಡುಗರೂ ಬುದ್ಧಿವಂತರೇ, ಆದರೆ ಈವರೆಗೆ ಉಂಡಾಡಿಗಳಾಗಿದ್ದರು. ಈಗ ಶ್ರದ್ಧೆಯಿಂದ ಹಾಗೂ ಕಷ್ಟ ಪಟ್ಟು ಕಲಿಯಲು ತೊಡಗಿದ್ದರಿಂದ ಬೇಗ ಓದು ಕಲಿತರು; ಸೂರ್ಯಮಿತ್ರ ತುಂಬ ಕಕ್ಕುಲತೆಯನ್ನು ಮನಸ್ಸಿನಲ್ಲಿ ಹೊಂದಿದ್ದು ಅವರಿಗೆ ವಿದ್ಯೆಯನ್ನು ಧಾರೆ ಎರೆದ. ಕಾಲಕಾಲಕ್ಕೆ ಅವರಿಬ್ಬರೂ ವೇದವೇದಾಂತ, ತರ್ಕ, ವ್ಯಾಕರಣ ಮುಂತಾದ ಆ ಕಾಲದ ಸಕಲಶಾಸ್ತ್ರಗಳಲ್ಲೂ

ಪಾರಂಗತರಾದರು. ಆದರೆ ವಿಚಿತ್ರ, ಒಂದೇ ತಂದೆತಾಯಿಗಳ ಮಕ್ಕಳಾಗಿದ್ದರೂ, ಒಂದೇ ವಾತಾವರಣದಲ್ಲಿಯೇ ಇಬ್ಬರೂ ವಿದ್ಯೆ ಕಲಿತಿದ್ದರೂ ಅವರಿಬ್ಬರ ಹುಟ್ಟುಗುಣಗಳ ವ್ಯತ್ಯಾಸದಿಂದಾಗಿ ಕಾಲಕ್ರಮೇಣ ಇಬ್ಬರೂ ಸ್ವಭಾವದಲ್ಲಿ ಭಿನ್ನರಾದರು. ಅಗ್ನಿಭೂತಿ ಸಾತ್ವಿಕನಾದರೆ, ವಾಯುಭೂತಿ ಗರ್ವಿಷ್ಠನಾದ. ಕಲಿಸಬಹುದಾದುದೆಲ್ಲವನ್ನೂ ಹೇಳಿಕೊಟ್ಟ ಮೇಲೆ ಸೂರ್ಯಮಿತ್ರ, ತಾನು ಅವರ ಸೋದರಮಾವನೇ ಎಂದು ಒಪ್ಪಿಕೊಂಡು, ಅದನ್ನು ನಿರಾಕರಿಸಿದ್ದ ತನ್ನ ಉದ್ದೇಶವನ್ನು ವಿವರಿಸಿ ಅವರನ್ನು ಸತ್ಕರಿಸಿದ; ಉಡಲು ತೊಡಲು ವಸ್ತ್ರಾಭರಣಗಳನ್ನಿತ್ತು ಔತಣ ಮಾಡಿಸಿ ಬೀಳ್ಕೊಟ್ಟ. ಅವರು ಊರಿಗೆ ವಾಪಸು ಹೊರಟರು. ಅಗ್ನಿಭೂತಿಗೆ ಸೂರ್ಯಮಿತ್ರನ ಬಗ್ಗೆ ಕೃತಜ್ಞತೆ ಬಲಗೊಂಡಿತು; ಆದರೆ ವಾಯುಭೂತಿಗೆ ತಮಗೆ ಯಾವ ಸೌಲಭ್ಯವನ್ನು ಕೊಡದ ಅವನ ಬಗ್ಗೆ ಮನಸ್ಸು ಕಹಿಯಾಯಿತು. ಅವನನ್ನು ಪಾಪಕರ್ಮಿ ಎಂದು ಜರೆದ; ಗುರುನಿಂದೆ ಮಾಡಿದ.

ಕೌಶಂಬಿಪುರಕ್ಕೆ ಅವರಿಬ್ಬರೂ ಮರಳಿದರು; ಮನೆಗೆ ಬಂದು ತಾಯಿಗೆ ನಮಸ್ಕರಿಸಿದರು. ತನ್ನ ಮಕ್ಕಳು ಈಗ ಸರಿದಾರಿಗೆ ಬಂದರಲ್ಲ ಎಂದು ಅವಳು ಸಂತಸಗೊಂಡಳು, ಸಕಲ ವಿದ್ಯಾಪಾರಂಗತರಾದ ಅವರ ಬಗ್ಗೆ ಅಭಿಮಾನ ತಾಳಿದಳು. ಮಾರನೆಯ ದಿನ ಅವರಿಬ್ಬರೂ ರಾಜನ ಬಳಿ ಬಂದು ತಮ್ಮ ಸಾಧನೆಗಳನ್ನು ತಿಳಿಸಿದರು. ಅವನಿಗೂ ಸಂತೋಷವಾಯಿತು. ಪಂಡಿತರಾದ ಇಬ್ಬರೂ ಈಗ ಎಲ್ಲ ಗೌರವಗಳಿಗೆ ಅರ್ಹರೆಂಬುದನ್ನು ಮನಗಂಡ ರಾಜನು ಅವರಿಗೆ ಹಿಂದಿನ ಪದವಿಗಳನ್ನಿತ್ತು ಸನ್ಮಾನಿಸಿದ. ಹೀಗೆ ಅವರ ಬದುಕು ಒಂದು ನಿಶ್ಚಿತ ಘಟ್ಟವನ್ನು ಮುಟ್ಟಿತು.

ಈ ಕಡೆ ರಾಜಗೃಹದಲ್ಲಿ ಒಂದು ದಿನ ಅನಿರೀಕ್ಷಿತ ಘಟನೆಯೊಂದು ನಡೆಯಿತು; ಸುಬಲ ಮಹಾರಾಜನು ಒಮ್ಮೆ ಸ್ನಾನಕ್ಕೆ ಹೋಗುವಾಗ ತನ್ನ ಬೆರಳಲ್ಲಿದ್ದ ರತ್ನಖಚಿತ ಉಂಗುರವೊಂದನ್ನು ತೆಗೆದು ಬಳಿಯಿದ್ದ ಸೂರ್ಯಮಿತ್ರನ ಕೈಗಿತ್ತ. ಅವನು ಅದನ್ನು ತನ್ನ ಬೆರಳಿಗೆ ಸಿಕ್ಕಿಸಿಕೊಂಡ. ಮಾರನೆಯ ಬೆಳಿಗ್ಗೆ ಸೂರ್ಯಮಿತ್ರನು ತೋಟದ ತಾವರೆಯ ಕೊಳದಲ್ಲಿ ಮಿಂದು ಅರ್ಘ್ಯವೀಯುವಾಗ ಅವನ ಬೆರಳಲ್ಲಿದ್ದ ಉಂಗುರ

ಅವನಿಗರಿವಿಲ್ಲದಂತೆ ಜಾರಿತು. ಮುಂದೆ ಯಾವಾಗಲೋ ಒಮ್ಮೆ ಆಕಸ್ಮಾತ್ತಾಗಿ ಬೆರಳು ನೋಡಿಕೊಂಡಾಗ ಅವನಿಗೆ ಉಂಗುರದ ನೆನಪು ಬಂದು ಗಾಬರಿಯಾಯಿತು; ಕಳೆದು ಹೋಯಿತು ಎಂದರೆ ರಾಜನಿಗೆ ಅನುಮಾನವೂ ಬರಬಹುದು ಎಂದು ಖೇದವಾಯಿತು. ಸುತ್ತುಮುತ್ತ ಹುಡುಕಿದರೂ ಪ್ರಯೋಜನವಾಗದೆ, ಅದನ್ನು ಹುಡಕಲೆಂದು ಹೊರಗೆ ಹೊರಟ. ಸ್ವಲ್ಪ ದೂರ ಹೋದ ಮೇಲೆ ಸುಧರ್ಮಾಚಾರ್ಯರೆಂಬ ಒಬ್ಬ ಮುನಿಗಳು ಕಾಣಿಸಿದರು; ಇವನನ್ನು ಕಂಡ ತಕ್ಷಣವೇ ಇವರ ಚಿಂತೆಯ ಕಾರಣವಾವುದೆಂಬುದನ್ನು ತಿಳಿಸಿದುದಲ್ಲದೆ, ಸೂರ್ಯಮಿತ್ರ ಧರಿಸಿದ್ದ ಉಂಗುರ ಮೀಯುವಾಗ ಕಳಚಿಹೋಗಿ ತಾವರೆಯಲ್ಲಿ ಸಿಕ್ಕಿಕೊಂಡಿದೆಯೆಂದೂ ಮಾರನೆಯ ಬೆಳಿಗ್ಗೆ ಸೂರ್ಯೋದಯವಾದಾಗ ತಾವರೆ ಅರಳಿ ಉಂಗುರ ಸಿಕ್ಕುವುದೆಂದೂ ತಮ್ಮ ಅವಧಿಜ್ಞಾನದ ಬಲದಿಂದ ಹೇಳಿದರು.

ಸೂರ್ಯಮಿತ್ರ ರಾತ್ರಿಯೆಲ್ಲ ಕಾದು ಮರುದಿನ ಬೆಳಿಗ್ಗೆ ಕೊಳದ ಬಳಿ ಹೋಗಿ ನೋಡಿದರೆ, ಮುನಿಗಳು ಹೇಳಿದಂತೆಯೇ ಉಂಗುರ ಸಿಕ್ಕಿತು! ಅವನ ಗಮನ ಈಗ ಅವರ ಜ್ಞಾನದ ಕಡೆ ತಿರುಗಿತು; ತನಗೂ ಅದನ್ನು ಹೇಳಿಕೊಡಲು ಗುರುಗಳನ್ನು ಕೇಳಿಕೊಂಡ. ಆ ವಿದ್ಯೆ ದಿಗಂಬರ ಮಲಧಾರಿಗೆ ಮಾತ್ರ ಸಾಧ್ಯವೆಂಬುದನ್ನು ಗುರುಗಳು ಹೇಳಿದಾಗ, ಅದನ್ನು ಕೈವಶಮಾಡಿಕೊಳ್ಳಬೇಕೆಂಬ ಸಂಕಲ್ಪದಿಂದ ತಾನೂ ಹಾಗೆಯೇ ಮಾರ್ಪಟ್ಟ. ದಿನ ಕಳೆದಂತೆ ಆಚಾರ್ಯರು ಹೇಳಿದ ಧರ್ಮ ಗ್ರಂಥಗಳನ್ನೆಲ್ಲ ಓದುತ್ತ, ಅವನಿಗೆ ಭವಿಷ್ಯ ಜ್ಞಾನದ ಮೇಲಣ ಮೋಹ ಕಡಿಮೆಯಾಗಿ ಸೃಷ್ಟಿ ರಹಸ್ಯವು ಬೆರಗುಂಟುಮಾಡಿ, ಸಂಸಾರದ ಅನಿತ್ಯತೆ ಅನುಭವಕ್ಕೆ ಬಂದು, ಜೈನತತ್ವದಲ್ಲಿ ನಂಬಿಕೆಯುಂಟಾಗಿ ತಪಸ್ಸು ಮಾಡಿ ಅವಧಿಜ್ಞಾನವನ್ನು ಸಾಧಿಸಿದರೂ ಕೈವಲ್ಯಕ್ಕೆ ಮನ ಹಾತೊರೆಯಿತು. ಅನೇಕ ವ್ರತಗಳನ್ನು ತಾಳಿ ಕೃಶವಾದ; ಕೊನೆಗೆ ಏಕವಿಹಾರಿಯಾಗಿ ಸಂಚಾರಕ್ಕೆಂದು ಹೊರಟ.

ಕೊನೆಗೊಮ್ಮೆ ಸೂರ್ಯಮಿತ್ರ ಭಟ್ಟಾರಕ ಕೌಶಂಬಿ ನಗರಕ್ಕೆ ಬಂದ. ಅಗ್ನಿಭೂತಿಯು ಗುರುವನ್ನು ಗುರುತಿಸಿ ಮನೆಗೆ ಕರೆತಂದು ಭಕ್ತಿಯಿಂದ ಸತ್ಕಾರಗೈದ. ಗುರುವನ್ನು ಬೀಳ್ಕೊಡುವಾಗ ತಮ್ಮನಾದ ವಾಯುಭೂತಿಯನ್ನೂ

ಕಂಡು ಹರಸಬೇಕೆಂದು ಬೇಡಿಕೊಂಡ. ಅದರಂತೆ ಅವನ ಮನೆಗೆ ಅವನನ್ನು ಕರೆತಂದಾಗ ತಮ್ಮ ಕಂಡರೂ ಕಾಣದಂತೆ ಅವಜ್ಞೆಮಾಡಿ ಉದಾಸೀನನಾಗಿದ್ದ. ಅಗ್ನಿಭೂತಿ ಸಂಕಟದಿಂದ ತಮ್ಮನಿಗೆ ಬುದ್ಧಿಮಾತು ಹೇಳಿದ. ಆದರೆ ವಾಯುಭೂತಿಯು ಸೋದರಮಾವನ ಮೇಲಿನ ಹಿಂದಿನ ಸಿಟ್ಟೆಲ್ಲ ಘನೀಭವಿಸಿ ಸೂರ್ಯಮಿತ್ರನನ್ನೂ, ಅವನ ಕುಲವನ್ನೂ ಹೀನಾಮಾನವಾಗಿ ಬೈದ. ಆದರೆ ಸೂರ್ಯಮಿತ್ರ ಕ್ಷಮಾಮೂರ್ತಿಯಾಗಿ ಸಮಾಧಾನಚಿತ್ತದಿಂದಲೇ ಅಲ್ಲಿಂದ ಹೊರಟ. ಗುರುಗಳಿಗೆ ತನ್ನಿಂದಲೇ ಅವಮಾನವಾಯಿತೆಂಬ ಪಾಪಪ್ರಜ್ಞೆಯಿಂದ ಬೆಂದುಹೋದ ಅಗ್ನಿಭೂತಿಯು, ಅವನಲ್ಲಿಯೇ ದೀಕ್ಷೆ ಪಡೆದು ಗುರುವಿನೊಡನೆಯೇ ವಿಹಾರಕ್ಕೆ ಹೊರಟ.

ನಡೆಯುತ್ತ ಬಂದ ಅವರು ಅಂಗದೇಶದ ಚಂಪಾನಗರವನ್ನು ತಲುಪಿದರು. ಅಲ್ಲಿನ ಉದ್ಯಾನವನದಲ್ಲಿದ್ದ ನಾಗಮಂಟಪದಲ್ಲಿ ಉಳಿದುಕೊಂಡರು. ಮರುದಿನ ಗುರು ಅಗ್ನಿಭೂತಿಯನ್ನು ಭಿಕ್ಷೆಗೆ ಕಳಿಸಿದ. ದಾರಿಯಲ್ಲಿ ಅವನು ಒಂದು ನೇರಿಳೆ ಮರದ ಕೆಳಗೆ ತಡಕಾಡಿ ಹಣ್ಣು ಆಯುತ್ತಿದ್ದ ಒಬ್ಬ ಹುಟ್ಟುಗುರುಡಿ ಹೊಲೆಯ ಹುಡುಗಿಯನ್ನು ಕಂಡ. ಅವಳ ಮೈಯೆಲ್ಲ ಗಾಯಗಳು, ರಕ್ತ, ಕೀವುಗಳಿಂದ ಹೊಲಸು ನಾರುತ್ತಿತ್ತು. ಅವಳನ್ನು ಕಂಡಾಗ ಅಗ್ನಿಭೂತಿಗೆ ಮರುಕವುಂಟಯಿತು, ತನ್ನ ಕುಂಚದಿಂದ ನೇರಿಳೆ ಹಣ್ಣುಗಳನ್ನು ಗುಡಿಸಿ ಅವಳೆಡೆಗೆ ನೂಕಿ ವಿಹ್ವಲ ಮನದಿಂದಲೇ ಬೀಡುದಾಣಕ್ಕೆ ವಾಪಾಸಾದ.

ಅಗ್ನಿಭೂತಿಯು ಭಿಕ್ಷವಿಲ್ಲದೆ ಬಂದುದನ್ನು ಕಂಡು ಸೂರ್ಯಮಿತ್ರನು ವಿಷಯ ತಿಳಿದು ತನ್ನ ಅವಧಿಜ್ಞಾನದಿಂದ ಆ ಹುಟ್ಟುಗುರುಡಿಯ ವಿಷಯವನ್ನೆಲ್ಲ ತಿಳಿದು ಅಗ್ನಿಭೂತಿಗೆ ವಿವರಿಸಿದ; ಮುನಿಗೆ ಅವಮಾನ ಮಾಡಿದ ವಾಯುಭೂತಿಯ ಜೀವವೇ ಈಗ ಹೊಲತಿಯಾಗಿರುವುದು. ವಾಯುಭೂತಿ ಮುನಿಯಾಗಿದ್ದ ತನಗೆ ಅವಮಾನ ಮಾಡಿದುದಷ್ಟೇ ಅಲ್ಲದೆ, ಅಗ್ನಿಭೂತಿ ದೀಕ್ಷೆ ಪಡೆದ ಮೇಲೆ ಅವನ ಹೆಂಡತಿ ಸೋಮದತ್ತೆಯ ಅಸ್ತಿಯನ್ನು ಕಬಳಿಸಿ ಒದ್ದು ಮನೆಯಿಂದ ಹೊರಗೆ ದಬ್ಬಿದ. ಆಗ ಸೋಮದತ್ತೆಯು ಕೋಪದಿಂದ ಒದ್ದ ಅವನ ಕಾಲುಗಳನ್ನು ಜನ್ಮಾಂತರದಲ್ಲಿಯಾದರೂ ಕಿತ್ತು ತಿನ್ನುವುದಾಗಿ ಶಪಥಮಾಡಿದಳು. ಆ

ಕಾರಣದಿಂದ ವಾಯುಭೂತಿ ಕುಷ್ಠ ರೋಗದಿಂದ ಬಳಲಿ ಸತ್ತು, ಕೌಶಂಬಿಯ ದೊಂಬನೊಬ್ಬನ ಮನೆಯ ಕತ್ತೆಯಾಗಿ ಹುಟ್ಟಿ ಸತ್ತು, ಮರುಜನ್ಮದಲ್ಲಿ ಹಂದಿಯಾಗಿ, ಆಮೇಲೆ ಹೆಣ್ಣು ನಾಯಿಯಾಗಿ, ಈಗ ಇಲ್ಲಿ ಹೀಗೆ ಹುಟ್ಟಿದ್ದಾನೆ; ಸೋಮದತ್ತೆಯೂ ಜನ್ಮಾಂತರದಲ್ಲಿ ಸುತ್ತುತ್ತಿದ್ದಾಳೆ. ಹೀಗೆಂದು ತಿಳಿಸಿ "ಆ ಕುರುಡಿಗೆ ಈ ಜನ್ಮದಲ್ಲಿ ಇವತ್ತು ಮಾತ್ರ ಆಯಸ್ಸಿದೆ. ನೀನು ಉಪದೇಶ ಮಾಡಿ ವ್ರತಗಳನ್ನಿತ್ತರೆ ಅವಳು ಸದ್ಗತಿ ಪಡೆಯುವಳು" ಎಂದ. ಅಗ್ನಿಭೂತಿ ಅಂತೆಯೇ ಅವಳಿಗೆ ಅಣುವ್ರತಗಳನ್ನು ಉಪದೇಶಗೈದ. ಅವಳು ಆ ದಿನವೇ ಹಾವು ಕಚ್ಚಿ ಸತ್ತು, ಆ ಊರಿನ ರಾಜಪುರೋಹಿತನಾದ ನಾಗಶರ್ಮನ ಮಗಳು ನಾಗಶ್ರೀಯಾಗಿ ಜನ್ಮ ತಳೆದಳು.

ಅಲ್ಲಿಂದ ಮುಂದೆ ಸಾಗಿದ ಸೂರ್ಯಮಿತ್ರ – ಅಗ್ನಿಭೂತಿಯರು ಅನೇಕ ವರ್ಷಗಳ ಬಳಿಕ ಮತ್ತೆ ಚಂಪಾಪುರಕ್ಕೆ ಬಂದರು. ಅಷ್ಟು ಹೊತ್ತಿಗೆ ನಾಗಶ್ರೀ ಯುವತಿಯಾಗಿದ್ದಳು. ಅವಳು ನಾಗ ಪೂಜೆಗೆಂದು ನಾಗ ಮಂಟಪಕ್ಕೆ ಬಂದು ಇವರಿಬ್ಬರನ್ನೂ ನೋಡಿ ಜಾತಿಸ್ಮರಣೆಗೊಂಡಳು. ಅವಳ ವಿಷಯವನ್ನು ಸೂರ್ಯಮಿತ್ರ ಆಗ್ನಿಭೂತಿಗೆ ವಿವರಿಸಿದುದಲ್ಲದೆ, ಅವಳಿಗೆ ತತ್ವೋಪದೇಶ ಮಾಡಿದ. ಆ ವಿಷಯವನ್ನು ತಿಳಿದು ಕೋಪಗೊಂಡ ನಾಗಶರ್ಮನು ಅಣುವ್ರತಗಳನ್ನು ಕೊಟ್ಟ ಮುನಿಯ ಬಳಿಯೇ ಅವುಗಳನ್ನು ಎಸೆಯಲು ಮಗಳನ್ನು ಕರೆತಂದ. ದಾರಿಯಲ್ಲಿ ಬರುವಾಗ ಒಬ್ಬ ಕೊಲೆಪಾತಕಿಯನ್ನು ವಧೆಗಾಗಿ ಕೊಂಡೊಯ್ಯುತ್ತಿದ್ದುದು, ಸುಳ್ಳನ್ನು ಹೇಳಿ ಶಿಕ್ಷೆಗೊಳಗಾದ ಕಳ್ಳ, ಹಣ ಕದ್ದವನು ಕ್ರೂರ ಶಿಕ್ಷೆಗೆ ಒಳಗಾದದ್ದು, ಹಾದರಕ್ಕಾಗಿ ನಾಗಸೂರನ ಜಾರೆಯ ತಲೆಯನ್ನು ಕತ್ತರಿಸಿ ಜಾರೆಯ ಕಿವಿಮೂಗು ತರಿದು ಮದ್ದಾನೆಯ ಕೊರಳಿಗೆ ಕಟ್ಟಿ ಬೀದಿಯಲ್ಲಿ ಕೊಂಡೊಯ್ಯುವುದು – ಇವನ್ನೆಲ್ಲ ಕಂಡು ತಂದೆಗೆ ವಿವರಿಸಿದ ಮೇಲೆ ವಾಪಾಸು ಮಾಡಬೇಕೆಂದು ಬಯಸಿದ್ದ ನಾಗಶ್ರೀಯ ಪಂಚಾಣುವ್ರತಗಳನ್ನು ತನ್ನಲ್ಲಿಯೇ ಉಳಿಸಿಕೊಳ್ಳಲು ತಂದೆ ಅವಳಿಗೆ ಅನುಮತಿಯಿತ್ತ. ಆದರೂ ನಾಗಶರ್ಮನು ಬಂದು ಸೂರ್ಯಮಿತ್ರನನ್ನು ಅಕ್ಷೇಪಿಸಿದಾಗ ಅವಳನ್ನು ತನ್ನ ಮಗಳೆಂದು ಹೇಳಿ ಅವಳನ್ನು ಸೂರ್ಯಮಿತ್ರ ತನ್ನೊಡನೆಯೇ ಉಳಿಸಿಕೊಂಡ.

ನಾಗಶರ್ಮ ದೊರೆಯ ಬಳಿ ಬಂದು ನಾಗಶ್ರೀಯನ್ನು ತನ್ನ ಮಗಳೆಂದು ಹೇಳುತ್ತಿರುವ ಮುನಿಯ ವಿರುದ್ಧ ದೂರು ಕೊಟ್ಟ. ರಾಜನು ಪರಿವಾರಸಮೇತ ಅಲ್ಲಿಗೆ ಬಂದು ವಿಚಾರಣೆ ಆರಂಭಿಸಿದ. ತಾನು ಅವಳಿಗೆ ಶಾಸ್ತ್ರಾಗಮಗಳನ್ನು ಹೇಳಿಕೊಟ್ಟಿರುವುದಾಗಿ ತಿಳಿಸಿದ ಸೂರ್ಯಮಿತ್ರ ಅವಳ ಮೇಲೆ ಕೈಯಿರಿಸಿದಾಗ, ಎಲ್ಲರಿಗೂ ಅಚ್ಚರಿಯಾಗುವಂತೆ, ನಾಗಶ್ರೀ ವಾಯುಭೂತಿಯಾಗಿದ್ದಾಗಿನ ಜನ್ಮದಲ್ಲಿ ಸೂರ್ಯಮಿತ್ರನಿಂದ ಕಲಿತ ವಿದ್ಯೆಯನ್ನೆಲ್ಲ ಒಪ್ಪಿಸಿದಳು. ಇದರಿಂದಾದ ಆಶ್ಚರ್ಯದಿಂದಾಗಿ ರಾಜನಾದಿಯಾಗಿ ಅನೇಕರು ದೀಕ್ಷೆ ಪಡೆದರು. ಕೆಲವು ದಿನಗಳಲ್ಲಿಯೇ ಸೂರ್ಯಮಿತ್ರ ಮತ್ತು ಅಗ್ನಿಭೂತಿಗಳು ಮುಕ್ತಿ ಹೊಂದಿದರು. ನಾಗಶ್ರೀ ತಪಸ್ಸು ಮಾಡಿ ಅಚ್ಯುತಕಲ್ಪದಲ್ಲಿ ಪದ್ಮಪ್ರಭನೆಂಬ ಹೆಸರಿನ ದೇವನಾಗಿ ಹುಟ್ಟಿದಳು.

ಇತ್ತ, ಆವಂತಿ ದೇಶದ ಉಜ್ಜೇನಿಯಲ್ಲಿ ವೃಷಭಾಂಕನು ಆಳುತ್ತಿದ್ದ; ಅವನ ಮಹಾರಾಣಿ ಲಕ್ಷಣಾದೇವಿ. ಅವನ ಪ್ರಧಾನ ಶ್ರೇಷ್ಠಿ ಇಂದ್ರದತ್ತ, ಭಾರಿ ಶ್ರೀಮಂತ. ಅವನ ಹೆಂಡತಿ ಮನೋರಮೆ. ಆ ಇಬ್ಬರ ಮಗ ಸೂರದತ್ತ; ಅವನ ಹೆಂಡತಿ ಯಶೋಭದ್ರೆ. ಆ ಶ್ರೇಷ್ಠಿ ದಂಪತಿಗೆ ಮಕ್ಕಳಿರಲಿಲ್ಲ. ಒಮ್ಮೆ ಅಭಿನಂದನ ಮುನೀಂದ್ರನು ಅಲ್ಲಿಗೆ ಬಂದ. ಅವರಿಗೆ ಒಬ್ಬ ಮಗನು ಹುಟ್ಟುವುದಾಗಿಯೂ, ಮಗುವಿನ ಮುಖ ಕಂಡ ತಕ್ಷಣ ಸೂರದತ್ತ ತಪಸ್ಸಿಗೆ ಹೋಗುತ್ತಾನೆಂದೂ, ಮಗುವೂ ಜಿನಮುನಿಯ ದರ್ಶನ ಮಾತ್ರದಿಂದಲೇ ವಿರಾಗಿಯಾಗುವನೆಂದೂ ಮುನಿ ಭವಿಷ್ಯ ನುಡಿದ. ಕೆಲವು ಕಾಲದ ಮೇಲೆ ಯಶೋಭದ್ರೆ ಗಂಡು ಮಗುವನ್ನು ಹೆತ್ತಳು; ಸೂರದತ್ತನಿಗೆ ತಕ್ಷಣವೇ ವೈರಾಗ್ಯ ಹುಟ್ಟಿ ದೀಕ್ಷೆ ಪಡೆದ. ಯಶೋಭದ್ರೆ ಮಗನಿಗೆ ಸುಕುಮಾರನೆಂಬ ಹೆಸರಿಟ್ಟು, ಅವನೆಲ್ಲಿ ಮುನಿಯು ಭವಿಷ್ಯ ನುಡಿದಂತೆ ವಿರಾಗಿಯಾಗುತ್ತಾನೋ ಎಂದು ಹೆದರಿ, ಅವನ ಕಣ್ಣಿಗೆ ಯಾವ ಮುನಿಯೂ ಕಾಣಿಸದಂತೆ ಅವನಿಗಾಗಿಯೇ ಒಂದು ಅರಮನೆಯನ್ನು ಕಟ್ಟಿಸಿ, ಅದರಲ್ಲಿ ಎಲ್ಲ ಅನುಕೂಲಗಳನ್ನೂ ಕಲ್ಪಿಸಿಕೊಟ್ಟು, ಮಗನನ್ನು ಒಂಟಿಯಾಗಿರಿಸಿದಳು. ಮುಂದೆ ಅವನಿಗೆ ಮೂವತ್ತೆರಡು ಕನ್ಯಾಮಣಿಗಳನ್ನು ತಂದು ಮದುವೆ

ಮಾಡಿಸಿದಳು. ಅವನ ವೈಭವವನ್ನು ಕಂಡು ಆಗ ಆವಂತಿಯ ದೊರೆಯಾಗಿದ್ದ ವೃಷಭಾಂಕನೂ ಬೆರಗು ಪಡುವಂತಾಯಿತು.

ಒಮ್ಮೆ ಸುಕುಮಾರನ ಸೋದರಮಾವನೇ ಆಗಿದ್ದ ಯಶೋಭದ್ರ ಮುನಿಯು ಚಾತುರ್ಮಾಸದ ಆಚರಣೆಗಾಗಿ ಉಜ್ಜೇನಿಗೆ ಬಂದು ಸುಕುಮಾರನ ಆರಮನೆಯ ಬಳಿಯಿದ್ದ ಉಪವನದ ಬಸದಿಯೊಂದರಲ್ಲಿ ಬೀಡುಬಿಟ್ಟ. ಆ ಮುನಿಯು ಅಲ್ಲಿರದಂತೆ ಮಾಡಲು ಯಶೋಭದ್ರೆ ಸಾಕಷ್ಟು ಪ್ರಯತ್ನಗಳನ್ನು ಮಾಡಿದರೂ ಫಲಕಾರಿಯಾಗಲಿಲ್ಲ. ಕೊನೆಗೆ ಅಲ್ಲಿರುವವರೆಗೂ ಮೌನವಾಗಿರಬೇಕೆಂದು ಕೇಳಿಕೊಂಡು ಅವನನ್ನು ಒಪ್ಪಿಸಿದಳು. ಸ್ವಲ್ಪ ನೆಮ್ಮದಿಯಿಂದ ಅವಳು ಉಸಿರಾಡುವಂತಾಯಿತು.

ಮುನಿಯ ಚಾತುರ್ಮಾಸ ಕಾರ್ತಿಕ ಹುಣ್ಣಿಮೆಯಂದು ಕೊನೆಗೊಂಡಿತು. ಅಂದು ಮಧ್ಯರಾತ್ರಿಯ ನಂತರ ಯಶೋಭದ್ರ ಮುನಿಯು ಮೌನ ಮುರಿದು ತ್ರಿಲೋಕ ಪ್ರಜ್ಞಪ್ತಿಯನ್ನು ಜೋರಾಗಿ ಹೇಳತೊಡಗಿದ. ಅದು ತನ್ನ ಆರಮನೆಯ ಉಪ್ಪರಿಗೆಯ ಮೇಲೆ ಮಲಗಿದ್ದ ಸುಕುಮಾರನನ್ನು ಎಚ್ಚರಿಸಿತು. ಆ ಧ್ವನಿಯು ಅವನಲ್ಲಿ ಜಾತಿಸ್ಮರಣೆಯನ್ನು ಉಕ್ಕಿಸಿತು; ಜೊತೆ ಜೊತೆಗೇ ಅವನಲ್ಲಿನ ವೈರಾಗ್ಯ ಕಟ್ಟೆಯೊಡೆಯಿತು. ಕಾವಲುಭಟರ ಕಣ್ತಪ್ಪಿಸಿ ಹೊರಬರಲು ಸುಕುಮಾರನಿಗೆ ಸಾಧ್ಯವಿರಲಿಲ್ಲ. ಹಾಗಾಗಿ ಅವನು ತನ್ನ ದಿವ್ಯ ವಸ್ತ್ರಗಳನ್ನೇ ಒಂದರ ತುದಿಗಿನ್ನೊಂದರಂತೆ ಸೇರಿಸಿ ಮೇಲೆ ಬಿಗಿದು ಇಳಿಯಬಿಟ್ಟು ಅದರ ಸಹಾಯದಿಂದ ಕೆಳಗಿಳಿದು, ಕೊಳೆತ ಹುಲ್ಲು ಕಡ್ಡಿಯನ್ನು ಬಿಸಾಡಿದಂತೆ ತನ್ನ ಭೋಗವನ್ನೆಲ್ಲ ತೊರೆದು, ಮುನಿಗಳ ಬಳಿ ಬಂದು ಅವರ ಚರಣೋಪಾಂತರದಲ್ಲಿ ದೀಕ್ಷೆ ಪಡೆದ. ಹೀಗೆ ಮುನಿಯಾದ ಸುಕುಮಾರನು ಗುರುಗಳ ಅಜ್ಞೆಯಂತೆ ಪ್ರಾಯೋಪಗಮನದಿಂದ ಆತ್ಮಾನುಸಂಧಾನದಲ್ಲಿ ತೊಡಗಲು ನಿಶ್ಚಯಿಸಿದ. ಅಷ್ಟರಲ್ಲಿ ಬೆಳಗಾಯಿತು; ಗುರುವು ದಕ್ಷಿಣ ದಿಕ್ಕಿನ ಚೈತ್ಯಾಲಯಕ್ಕೆ ತೆರಳಿದರೆ, ಸುಕುಮಾರನು ಉತ್ತರ ದಿಕ್ಕಿಗೆ ಪಯಣ ಬೆಳೆಸಿದ.

ಇತ್ತ, ಬೆಳಿಗ್ಗೆ ಎದ್ದಾಗ ತನ್ನ ಪತಿ ಜೊತೆಯಲ್ಲಿ ಇಲ್ಲದುದನ್ನು ಅರಿತ ಮನೋಹರಿ ಎಂಬ ಸುಕುಮಾರನ ಒಬ್ಬ ವಲ್ಲಭೆಯು ಅವನಿಗಾಗಿ ತಳಮಳದಿಂದ ಎಲ್ಲೆಡೆ ಹುಡುಕಾಡಿದಳು. ಯಶೋಭದ್ರೆಗೂ ಈ ವಿಷಯ

ತಿಳಿಯಿತು. ಎಲ್ಲ ಕಡೆ ಶೋಧ ನಡೆಸಿದಾಗ ಕೊನೆಗೆ, ಮೇಲಿನಿಂದ ಇಳಿಯಬಿಟ್ಟಿದ್ದ ದಿವ್ಯವಸ್ತ್ರಗಳ ಮಾಲೆ ಕಾಣಿಸಿತು. ವಿಷಯ ಎಲ್ಲರಿಗೂ ಸ್ಪಷ್ಟವಾಯಿತು. ಸುಕುಮಾರನಿಗಾಗಿ ಊರಲ್ಲೆಲ್ಲ ಹುಡುಕಿಸಿದರು. ಗಿಳಿ ಪಂಜರದಿಂದ ತಪ್ಪಿಸಿಕೊಂಡು ಹಾರಿ ಹೋಗಿತ್ತು. ತಾಯಿ ಮಗನ ಸುಳಿವು ಸಿಕ್ಕದೆ ಸೊರಗಿ ಹೋದಳು.

ಬರಿಗಾಲಲ್ಲಿ ನಡೆಯುತ್ತ ಹೊರಟ ಸುಕುಮಾರನ ಕಾಲುಗಳು ಗಾಯಗಳಿಂದ ತುಂಬಿಹೋಗಲು, ರಕ್ತ ಸೋರಿಸಿಕೊಂಡೇ ಸುಕೋಮಲನಾದ ಆತ ಮುನ್ನಡೆದ. ಕೊನೆಗೆ ಅವನು ತಲುಪಿದ್ದು ಮಹಾಕಾಳ ಎಂಬ ಮಸಣವನ್ನು. ಭೇದ ವಿಜ್ಞಾನಿಯಾಗಿ ಏಕಾಗ್ರಚಿತ್ತದಿಂದ ಅವನು ತಪಸ್ಸಿನಲ್ಲಿ ತೊಡಗಿದ. ಅಷ್ಟು ಹೊತ್ತಿಗೆ, ಸುಕುಮಾರನು ವಾಯುಭೂತಿಯಾಗಿದ್ದಾಗಿನ ಅತ್ತಿಗೆ ಸೋಮದತ್ತೆ ಹುಟ್ಟು ಸಾವುಗಳ ಚಕ್ರದಲ್ಲಿ ತಿರುಗುತ್ತ ಈ ಜನ್ಮದಲ್ಲಿ ಹೆಣ್ಣು ನರಿಯಾಗಿದ್ದಳು. ತನ್ನೆರಡು ಮರಿಗಳೊಡನೆ ಆ ನರಿ ಮಸಣದತ್ತ ನಡೆತಂದು, ನಿಶ್ಚಲನಾಗಿ ತಪಸ್ಸು ಮಾಡುತ್ತಿದ್ದ ಸುಕುಮಾರನನ್ನು ಶವವೆಂದು ಭಾವಿಸಿ ಒಂದು ಕಾಲನ್ನು ತಾನು, ಇನ್ನೊಂದನ್ನು ಮರಿಗಳು ತಿನ್ನಲು ತೊಡಗಿದವು. ಆ ಹೊತ್ತಿಗೆ "ಶರೀರ ಬೇರೆ, ಜೀವ ಬೇರೆ" ಎಂಬ ಭಾವ ತಳೆದಿದ್ದ ಸುಕುಮಾರನು ತನಗಾಗುತ್ತಿದ್ದ ನೋವಿನ ಕಡೆ ಕಿಂಚಿತ್ತೂ ಗಮನ ಹರಿಸಲಿಲ್ಲ. ಮುಂದೆರಡು ದಿನಗಳಲ್ಲಿ ನರಿ ಮತ್ತದರ ಮರಿಗಳು ಅವನ ದೇಹವನ್ನೆಲ್ಲ ಪೂರ್ತಿಯಾಗಿ ತಿಂದು ಹಾಕಿದವು. ಸುಕುಮಾರನ ಜೀವವು ಶುಕ್ಲಧ್ಯಾನದಲ್ಲಿರಲು, ಅವನ ಪ್ರಾಣಪಕ್ಷಿಯು ಹಾರಿಹೋಯಿತು. ಹೀಗೆ ದೇಹವನ್ನು ತೊರೆದ ಅವನು ಸರ್ವಾರ್ಥಸಿದ್ಧಿ ಎಂಬ ವಿಮಾನದಲ್ಲಿ ಅಹಮಿಂದ್ರನಾಗಿ ಹುಟ್ಟಿದ.

ಮಗನನ್ನು ಹುಡುಕುತ್ತ ಓಡಾಡುತ್ತಿದ್ದ ಯಶೋಭದ್ರೆಗೆ ಮೂರನೆಯ ದಿನದ ಸಂಜೆ ದೇವದುಂದುಭಿಯೊಡನೆ ದೇವತೆಗಳ ಹೊಗಳಿಕೆಯ ಧ್ವನಿ ಕೇಳಿಸಿ, ಸುಕುಮಾರನು ದೇಹತ್ಯಾಗ ಮಾಡಿರುವನೆಂದು ಅರಿತಳು. ಸೊಸೆಯಂದಿರಿಗೆ ಅಲಂಕಾರಗೊಳ್ಳಲು ತಿಳಿಸಿ, ಅವರೊಂದಿಗೆ ಮಹಾಕಾಳ ಸ್ಮಶಾನಕ್ಕೆ ಬಂದಳು. ಅಲ್ಲಿ ಸುಕುಮಾರನ ದೇಹ ಪುಷ್ಪವೃಷ್ಟಿಯಿಂದ ಮುಚ್ಚಿಹೋಗಿತ್ತು. ಎಲ್ಲರೂ ಜೋರಾಗಿ ಗೋಳಾಡಿದರು. ಕೊನೆಗೆ

ಗರ್ಭವತಿಯಾರಾಗಿದ್ದ ಎಂಟು ಮಂದಿಯನ್ನು ಹೊರತುಪಡಿಸಿ ಉಳಿದ ಇಪ್ಪತ್ತನಾಲ್ಕು ಮಂದಿ ಸುಕುಮಾರನ ಹೆಂಡತಿಯರು ಯಶೋಭದ್ರೆ ಜೊತೆಯಲ್ಲಿ ದಯಾಭದ್ರರೆಂಬ ಗುರುಗಳ ಸನ್ನಿಧಿಯಲ್ಲಿ ದೀಕ್ಷೆ ಪಡೆದರು; ಕುಂತಿಯರಾಗಿ ಸದ್ಗತಿ ಹೊಂದಿದರು. ಸುಕುಮಾರನು ದೇಹತ್ಯಾಗ ಮಾಡಿದ ನಂತರ ಅವನನ್ನು ದೇವತೆಗಳು ಪೂಜಿಸಿದ ಸುಗಂಧದ್ರವ್ಯಗಳು ಕರಗಿ ಉಜ್ಜೇನಿಯ ದಕ್ಷಿಣಭಾಗದಲ್ಲಿ "ಗಂಧವತಿ" ಎಂಬ ತೊರೆಯಾಗಿ ಈಗಲೂ ಹರಿಯುತ್ತಿದೆ!

ಕಾವ್ಯವಿಚಾರ – ವಿಮರ್ಶೆ

ಧರ್ಮ – ಕಾವ್ಯಧರ್ಮಗಳನ್ನು ಮೇಳವಿಸಿ ಓದುಗರಿಗೆ ಉಣಬಡಿಸುವುದು ಪಂಪನ ಆದರ್ಶ. ಶಾಂತಿನಾಥನು ಜೈನ ಕವಿಯಾಗಿ ಪಂಪನನ್ನು ತನ್ನ ಮಾದರಿಯಾಗಿ ಹೊಂದಿದ್ದುದು ಅಚ್ಚರಿಯಲ್ಲ. ಅದರ ಒಂದು ಭಾಗವಾಗಿ ಅವನಂತೆ ಇವನೂ ಚಂಪೂ ಕಾವ್ಯವನ್ನು ರಚಿಸಲು ಹೊರಟ. ಮಹಾಪುರಾಣದ ಆದಿ ತೀರ್ಥಂಕರ ಪುರಾಣ ಕತೆಯನ್ನು ಅವನು ಕಾವ್ಯ ಸ್ಪರ್ಶದಿಂದ ಹೃದ್ಯವಾಗಿ ಮಾಡಿದುದೇ ಈ ನಮ್ಮ ಪ್ರಸ್ತುತ ಕವಿಗೂ ಪ್ರೇರಣೆಯೊದಗಿಸಿದೆ. ಆದರೆ ಅವನಂತೆ ಇವನು ಮಾಂತ್ರಿಕನಲ್ಲ. ಹಾಗಾಗಿ ಅವನಲ್ಲಿ ಪುರಾಣದ ಕಣಕ ಕಾವ್ಯತ್ವದ ಹೂರಣವನ್ನು ತುಂಬಿಸಿಕೊಂಡಂತೆ ಇಲ್ಲಿ ಕಾಣಿಸುವುದಿಲ್ಲ. ಶಾಂತಿನಾಥ ಕಥಾ ನಿರೂಪಣೆಗೆ ಆಕರವಾಗಿ ಹೊಂದಿದ್ದ 'ವಡ್ಡಾರಾಧನೆ'ಯದು ಹೃದ್ಯಗದ್ಯದ ತಂಗಾಳಿಯ ತೀಟ; 'ಸುಕುಮಾರಚರಿತಂ' ಕಾವ್ಯದ್ದು ಬೀಸಣಿಗೆಯ ಬೀಸು. ಅಲ್ಲಿ ಸಾಹಿತ್ಯ ರಚನೆಯ ಉದ್ದೇಶವಿಲ್ಲದೆ ರಸಭರಿತ ಕಾವ್ಯ ಸೃಷ್ಟಿಯಾಗಿದೆ; ಇಲ್ಲಿ ಆ ಉದ್ದೇಶ ಅಲ್ಲಲ್ಲಿ ಯಶಸ್ಸು ಪಡೆದಿದೆ.

ಪಂಪನ ಆದಿಪುರಾಣದಲ್ಲಿ ವೃಷಭನಾಥನ ಭವಾವಳಿಗಳ ಮೂಲಕ ವ್ಯಕ್ತಿತ್ವ ವಿಕಸನ ಚಿತ್ರಿತವಾಗುತ್ತದೆ. ಜೊತೆಗೆ ಭರತ – ಬಾಹುಬಲಿಗಳ ಪ್ರಸಂಗದಲ್ಲಿ ಅಧಿಕಾರ – ಅಹಂಕಾರಗಳ ಅಟ್ಟಹಾಸ ವೈರಾಗ್ಯದ ಮುಂದೆ ಮಣಿಯುವುದು ಚಿತ್ರಿತವಾಗಿದೆ. 'ಸುಕುಮಾರಚರಿತಂ'ನಲ್ಲಿ ಕೂಡ ಇಂಥ ಭವಾವಳಿಯ ಚಿತ್ರವಿದೆ. ಘೋರ ಪಾಪ (ಗುರುನಿಂದೆ)ದ ಪರಿಣಾಮವಾದ ಪರಿತಾಪ – ಪ್ರಾಯಶ್ಚಿತ್ತಗಳ ವಿವಿಧ ಘಟ್ಟಗಳನ್ನು ವಾಯುಭೂತಿಯ

ಭವಾವಳಿಯು ಚಿತ್ರಿಸುತ್ತದೆ. ಜಂಬೂದ್ವೀಪದ ವರ್ಣನೆ, ಸೂರ್ಯಮಿತ್ರನಿಗೆ ಸುಧಾರ್ಮಾಚಾರ್ಯರು ಮಾಡುವ ದ್ರವ್ಯಾನುಯೋಗದ ಉಪದೇಶ, ಹೊಲೆಯರ ಹುಡುಗಿಗೆ ಸೂರ್ಯಮಿತ್ರ ಮುನಿಯು ನೀಡುವ ಅಣುವ್ರತಗಳ ಉಪದೇಶ, ಅವನ ತಪಶ್ಚರ್ಯೆಯ ಬಣ್ಣನೆ, ಸಂಸಾರ ಸ್ವರೂಪ ನಿರೂಪಣೆ, ಚಂದ್ರವಾಹನ ರಾಜನಿಗೆ ಮಾಡಿದ ಜಿನತತ್ವಸ್ವರೂಪ, ನಾಗಶ್ರೀಯ ತಪಸ್ಸಿನ ವರ್ಣನೆ, ಯಶೋಭದ್ರರ ಚಾತುರ್ಮಾಸ, ತ್ರಿಲೋಕಪ್ರಜ್ಞಪ್ತಿ, ದ್ವಾದಶಾನು ಪ್ರೇಕ್ಷಾಸ್ಮರಣೆ – ಇವುಗಳನ್ನು ಉಲ್ಲೇಖಿಸಿರುವ ಡಿಎಲ್ಎನ್, ಇವೆಲ್ಲದರಿಂದ ಅವನ ಗ್ರಂಥ ಜಿನಮತಾಚಾರದ ಕೈಪಿಡಿಯಾಗಿಬಿಟ್ಟಿದೆ ಎಂದು ಹೇಳುವುದು ಸಮಂಜಸವಾಗಿಯೇ ಇದೆ. ಅಂದರೆ ಧರ್ಮ – ಕಾವ್ಯಧರ್ಮಗಳು ಇಲ್ಲಿ ಒಂದರೊಡನೊಂದು ಮಿಳಿತವಾಗದೆ, ಬೇರ್ಪಡಿಸಬಹುದಾದ ರೀತಿಯಲ್ಲಿರುವುದೇ ಕಾವ್ಯದ ಯಶಸ್ಸಿನ ಪರಿಮಿತಿಯನ್ನು ಸೂಚಿಸುತ್ತದೆ.

ಅಲ್ಲದೆ, ಶಾಂತಿನಾಥನ ಕಾವ್ಯ ಪ್ರತಿಭೆ ನಿಯಮೋಲ್ಲಂಘನೆ ಮಾಡುವಂಥದಲ್ಲ. ಹಾಗಾಗಿ ಅಷ್ಟಾದಶವರ್ಣನೆಗೂ ಇಲ್ಲಿ ಅವಕಾಶ ಕಲ್ಪಿಸಲಾಗಿದೆ. ಆದರೆ ಆ ವರ್ಣನೆಗಳು ಬಹು ಕಡಿಮೆ; ಇರಬೇಕಾದುದರಿಂದ ಇದೆ ಎಂಬಂತೆ. ಅದು ಪರಿಮಿತಿಯಿಂದ ಕೂಡಿದೆ ಎಂಬುದು ಅವನ ಎಚ್ಚರವನ್ನೂ ಸೂಚಿಸುತ್ತದೆ. ಅದರ ವರ್ಣನೆಯಲ್ಲಿ ಕವಿಸಮಯಗಳ ಪ್ರಾಚುರ್ಯ ಹೆಚ್ಚು. ಕತೆಯೇ ಮೂಲತಃ ಹೃದಯಂಗಮವಾಗಿದೆ. ವಿವಿಧ ಮನೋಧರ್ಮಗಳ ಪ್ರಕಟಣೆ ಕತೆಗೆ ಮೆರುಗನ್ನು ನೀಡುತ್ತದೆ. ಅಣ್ಣತಮ್ಮಂದಿರಾದರೂ ಅಗ್ನಿಭೂತಿ – ವಾಯುಭೂತಿಯರ ವ್ಯಕ್ತಿತ್ವಗಳಲ್ಲಿನ ವೈದೃಶ್ಯ, ಸೂರ್ಯಮಿತ್ರ ಉಂಗುರವನ್ನು ಕಳೆದುಕೊಂಡು ದೀಕ್ಷೆ ಪಡೆಯುವವರೆಗಿನ ಬೆಳವಣಿಗೆ ಅತ್ಯಪೂರ್ವವಾದ, ಆದರೆ ಸಹಜ ತಿರುವುಗಳನ್ನು ಪಡೆಯುತ್ತ ಅನಾವರಣಗೊಳ್ಳುವ ಸಹಜತೆ ಬೆರಗೊಳಿಸುವಂಥದು. ನಾಗಶ್ರೀ ಅಣುವ್ರತಗಳನ್ನು ಉಳಿಸಿಕೊಳ್ಳಲು ಕಾರಣವಾಗುವ ದೃಶ್ಯಾವಳಿ, ಸುಕುಮಾರನ ಭೋಗ – ಇವೆಲ್ಲ ಅಪೂರ್ವ ಸನ್ನಿವೇಶಗಳು.

ಶಾಂತಿನಾಥ ಕೇವಲ ನಿಪುಣ ಕವಿ ಮಾತ್ರವಲ್ಲದೆ ಕಲಾ ಕುಶಲನೂ, ರಸಾರ್ದ್ರ ಹೃದಯನೂ ಆಗಿದ್ದನು. ಅವನಲ್ಲಿ ಬುದ್ಧಿವಂತಿಕೆಗಿಂತಲೂ

ಮಿಗಿಲಾದ ಕಲಾವಂತಿಕೆ ಇತ್ತು. ಕಲಾವಂತಿಕೆಗಿಂತಲೂ ಹೆಚ್ಚಿನ ಹೃದಯವಂತಿಕೆಯಿತ್ತು. ಆದುದರಿಂದ ಶಾಂತಿನಾಥನಿಗೆ ಕೇವಲ ಮತೀಯ ಮಡಿವಂತಿಕೆಯನ್ನು ತೋರುವ ಆಡಂಬರದ ಶ್ರೀಮಂತಿಕೆ ಅಷ್ಟಾಗಿ ಹಿಡಿಸಲಿಲ್ಲ. ತನ್ನ ಕಲಾ ಕೌಶಲ, ರಸಿಕತೆ ಮತ್ತು ಪಳಗಿದ ಶೈಲಿಗಳನ್ನು ಯಥಾವತ್ತಾಗಿ ಪ್ರದರ್ಶಿಸಲು ಸಹಕಾರಿಯಾಗಬಲ್ಲ ಕತೆ ಶಾಂತಿನಾಥನಿಗೆ ಬೇಕಿತ್ತು. ಅಂಥ ಕತೆ ಈ ಸುಕುಮಾರಸ್ವಾಮಿಯ ಕತೆಯೆಂದು ಕವಿಗೆ ಬಹುವಾಗಿ ಹಿಡಿಸಿತೆಂದು ಕಾಣುತ್ತದೆ.

ಸುಕುಮಾರಸ್ವಾಮಿಯ ಮೂಲ ಕಥೆಯನ್ನು – ಸಂಸ್ಕೃತವೋ, ಪ್ರಾಕೃತವೋ, ಕನ್ನಡವೋ ಎಲ್ಲದರ ರಸಪಾಕವೋ – ಮತ್ತೆ ಮತ್ತೆ ಓದಿ ಮನಸಾರೆ ಮೆಚ್ಚಿ ಅದನ್ನು ಕಾವ್ಯದ, ಪದ್ಯದ, ಚಂಪುವಿನ ರೂಪದಲ್ಲಿ ಇಳಿಸಬೇಕೆಂದು ಅವನು ತೀರ್ಮಾನಿಸಿರಬೇಕು. ತನ್ನ ಧರ್ಮದ ಉದಾತ್ತ ತತ್ವಗಳ, ಪಂಚಾಣುವ್ರತಗಳ ಮಹಿಮೆ ಭವ್ಯತೆಗಳನ್ನು ಲೋಕಕ್ಕೆ ತಿಳಿಯಹೇಳಲು ಈ ಕಥೆಯೇ ತಕ್ಕ ಪ್ರಣಾಲಿಕೆಯೆಂದು ಅವನಿಗೆ ಅನ್ನಿಸಿದ್ದರೆ ಅತಿಶಯವಲ್ಲ. ಬಹುಶಃ ಶಾಂತಿನಾಥನು ವಡ್ಡಾರಾಧನೆ ಗದ್ಯಗ್ರಂಥವನ್ನೇ, ಕಥಾ ಸಂಕಲನವನ್ನೇ ಓದಿರಬೇಕು; ಅದರ ಮೊದಲನೆಯ ಕತೆಗೇ ಮಾರುಹೋಗಿರಬೇಕು. ಅಲ್ಲದೆ ಹರಿಷೇಣನ ಬೃಹತ್ಕಥಾಕೋಶದಲ್ಲಿ ಬರುವ 260 ಶ್ಲೋಕಗಳ ಅವಂತಿ ಸುಕುಮಾರನ ಕತೆಯನ್ನೂ ಓದಿರಬಹುದು. ಶಾಂತಿನಾಥನ "ಸುಕುಮಾರ ಚರಿತೆ"ಗೆ ಮೂಲ ವಡ್ಡಾರಾಧನೆಯ ಮೊದಲ ಕತೆಯಾದ ಸುಕುಮಾರಸ್ವಾಮಿಯ ಕತೆ. ಇಲ್ಲಿ ಮತ್ತೊಂದು ಸ್ವಾರಸ್ಯವನ್ನೂ ಗಮನಿಸಬೇಕು. ಶಾಂತಿನಾಥ ಕವಿ ಇಡೀ ವಡ್ಡಾರಾಧನೆ ಕೃತಿಯನ್ನೇ ಅಭ್ಯಾಸ ಮಾಡಿದ್ದಾನೆಂದು ಸೂಕ್ಷ್ಮ ಪರಿಶೀಲನೆಗೆ ಸ್ಪಷ್ಟವಾಗಿ ಕಾಣುತ್ತದೆ. ಏಕೆಂದರೆ ಅವನು ತನ್ನ ಕಾವ್ಯದಲ್ಲಿ ವಡ್ಡಾರಾಧನೆಯ ಸುಕುಮಾರ ಸ್ವಾಮಿಯ ಕತೆಯೊಂದನ್ನೇ ಆರಿಸಿಕೊಂಡಿದ್ದರೂ ಇತರ ಕೆಲವು ಕತೆಗಳಿಂದಲೂ ಅಲ್ಲಲ್ಲಿ ಕೆಲವು ಅಂಶಗಳನ್ನೂ, ಸೂಚನೆಗಳನ್ನೂ ಸ್ವೀಕರಿಸಿರುವುದು ಗೋಚರಿಸುತ್ತದೆ.

ವಡ್ಡಾರಾಧನೆಯ ಮೂವತ್ತು ಪುಟಗಳಲ್ಲಿರುವ ಸುಕುಮಾರ ಸ್ವಾಮಿಯ ಕತೆಯನ್ನು ಶಾಂತಿನಾಥ ಕವಿ ಸುಮಾರು ಒಂದು ಸಾವಿರ ಪದ್ಯಗಳಲ್ಲಿ ಹರಡಿದ್ದಾನೆ. ಹೀಗೆ ಹಿಂಜಿದರೂ ಅದರ ಮೂಲ ಸೌಂದರ್ಯ ಮಾಸಿಲ್ಲ.

ಬದಲು ಅಲ್ಲಲ್ಲಿ ಅದರ ಚೆಲುವು ಹೆಚ್ಚಿದೆ. ಇದಕ್ಕೆ ಮುಖ್ಯ ಕಾರಣವೇನೆಂದರೆ ಮೂಲಕತೆಯ ಸತ್ತ್ವ ಮತ್ತು ಶಾಂತಿನಾಥನ ಪ್ರತಿಭಾ ಸಾಮರ್ಥ್ಯ. ಕಥೆಯನ್ನು ಅವಲಂಬಿಸಿದರೂ ಅದರ ಸತ್ವವೇನೂ ಕಡಿಮೆಯಾಗದಂತೆ, ಜಾಳು ಜಾಳಾಗದಂತೆ, ಪೇಲವವಾಗದಂತೆ ಕವಿ ಶಾಂತಿನಾಥ ತನ್ನ ಕಾವ್ಯ ನಿರ್ಮಾಣಶಕ್ತಿಯಿಂದ ಅತ್ಯಂತ ನಿರರ್ಗಳವಾಗಿ ನಡೆಸಿಕೊಂಡು ಹೋಗಿದ್ದಾನೆ. ತಾನು ಹೊಸದಾಗಿ ಸೃಷ್ಟಿಸಿಕೊಂಡ ಸನ್ನಿವೇಶಗಳಲ್ಲಿ ಸೂಚಿಸಿರುವ ಸಂವಿಧಾನ ಕೌಶಲದಿಂದ ತನ್ನ ವಿಮರ್ಶನ ಶಕ್ತಿಯನ್ನೂ, ರಮಣೀಯವಾಗಿ ರೂಪುಗೊಂಡಿರುವ ವರ್ಣನಾ ಭಾಗಗಳಲ್ಲಿ ನವೀನವಾದ ಕಲ್ಪನಾ ಸಾಮರ್ಥ್ಯವನ್ನೂ ಶಾಂತಿನಾಥ ಪ್ರದರ್ಶಿಸಿದ್ದಾನೆ.

"ಮೂಲದ ಕತೆಯಲ್ಲಿನ ಕೆಲವು ಅಪ್ರಸಕ್ತವಾದ ಭಾಗಗಳನ್ನು ಶಾಂತಿನಾಥನು ಬಿಟ್ಟಿರುವುದು ಕಥಾಸರಣಿಯಲ್ಲಿ ದೊಡ್ಡ ತೊಡಕನ್ನು ಪರಿಹರಿಸಿದಂತಾಗಿದೆ; ಕತೆಯ ಓಟ ಸುಗಮವಾಗಿದೆ. ಅವನ ವಿಮರ್ಶನಶಕ್ತಿಗೂ, ಔಚಿತ್ಯಜ್ಞಾನಕ್ಕೂ ಸಾಕ್ಷಿಯಾಗಿದೆ. ಕತೆ ಹೇಳುವಾಗ ಕೆಲವು ನವೀನ ಸನ್ನಿವೇಶಗಳನ್ನು ತಂದಿರುವುದು ಶಾಂತಿನಾಥನ ಸಂವಿಧಾನ ಕೌಶಲವನ್ನು ವ್ಯಕ್ತಪಡಿಸುತ್ತವೆ." (ಪ್ರೊ॥ ಡಿ.ಎಲ್.ಎನ್.) ಬಾಣನ ಸಂಸ್ಕೃತ ಗದ್ಯಗ್ರಂಥವಾದ ಕಾದಂಬರಿಯ ರಸಗಂಗೆಯನ್ನು ಕವಿ ನಾಗವರ್ಮ ಕನ್ನಡದಲ್ಲಿ ಚಂಪೂಕಾವ್ಯದ ಕಾಲುವೆಯ ಮೂಲಕ ಹರಿಸಿದರೆ, ಸುಮಾರು ಎಪ್ಪತ್ತು ವರ್ಷಗಳಲ್ಲೇ ಶಾಂತಿನಾಥ ಗದ್ಯದಲ್ಲಿದ್ದ – ಕನ್ನಡದ್ದೇ ಆದ ಕತೆಯೊಂದನ್ನು ಪೂರ್ಣರೂಪದಲ್ಲಿ ರಮಣೀಯವಾಗಿ ಪ್ರತಿಪಾದಿಸಿದ್ದಾನೆ, ಪರಿವರ್ತಿಸಿದ್ದಾನೆ.

ಶಾಂತಿನಾಥನ ಗಮನ ಜನಸಾಮಾನ್ಯರ ಕಡೆಗಿದ್ದುದರಿಂದಲೂ, ವಸ್ತುವೂ ಪಾಂಡಿತ್ಯ ಪ್ರದರ್ಶನಕ್ಕೆ ತಗುವುದಲ್ಲವಾದುದರಿಂದಲೂ ಅವನು ತಕ್ಕಮಟ್ಟಿಗೆ ಸರಳ ಶೈಲಿಯ ಮಾರ್ಗವನ್ನು ಅನುಸರಿಸಿದ್ದಾನೆ. ಅವನಿಗೆ ಪ್ರೇರಕವಾಗಿ 'ವಡ್ಡಾರಾಧನೆ' ಇದ್ದಿರಲೂ ಸಾಕು. ಎಷ್ಟೋ ಕಡೆಗಳಲ್ಲಿ ಅವನ ವಾಕ್ಯಸರಣಿ ಅದನ್ನೇ ಬಹುಮಟ್ಟಿಗೆ ಅನುಸರಿಸುತ್ತದೆ. ಆದರೆ ಅವನ ಮೇಲೆ ಹಿಂದಿನ ಚಂಪೂ ಕವಿಗಳ ಶೈಲಿಯ ಪ್ರಭಾವವೂ ಆಗಿದೆ. ಇದಕ್ಕೆ ಕಾವ್ಯದಲ್ಲಿ ಸಾಕಷ್ಟು ಉತ್ತಮ ಉದಾಹರಣೆಗಳನ್ನು ಕಾಣಬಹುದು. ಅವನ

ಕಾವ್ಯ ಮಾರ್ಗದ ಮಾದರಿ ಪಂಪನಾದದರೂ, ಶೈಲಿಯಲ್ಲಿ ಶಾಂತಿನಾಥ ಅನೇಕ ಕಡೆಗಳಲ್ಲಿ ರನ್ನನನ್ನೂ ಅನುಸರಿಸುತ್ತಾನೆ.

ನಮ್ಮ ಹಿಂದಿನ ಎಲ್ಲ ಕವಿಗಳಂತೆಯೇ ಶಾಂತಿನಾಥನೂ ಉಭಯಕವಿ, ಅಂದರೆ ಎರಡು ಭಾಷೆಗಳಲ್ಲಿ – ಸಂಸ್ಕೃತ ಮತ್ತು ಕನ್ನಡ – ಕವಿತ್ವ ಮಾಡಬಲ್ಲ ಶಕ್ತಿಯಿದ್ದವನು. ಶಕ್ತಿಯಿದ್ದೂ ಇವರಾರೂ ಸಂಸ್ಕೃತದಲ್ಲಿ ಬರೆಯಲು ಹೋಗದಿರಲು ಕಾರಣ, ತಮ್ಮ ಕಾವ್ಯವು ಜನಸಾಮಾನ್ಯರನ್ನು ತಲುಪಬೇಕಾದರೆ ಆಡು ನುಡಿಯಾದ ಕನ್ನಡದಲ್ಲಿ ಬರೆಯಬೇಕೆಂಬ ಪ್ರಜ್ಞೆ, ಶಾಂತಿನಾಥನದು ಹಿಂದೆಯೇ ಸೂಚಿಸಿದಂತೆ, ಧರ್ಮಪ್ರಭಾವನೆಯ ಉದ್ದೇಶ, ಜೈನತತ್ವಗಳ ಪ್ರಚಾರ. ಹಾಗಾಗಿ ಸಹಜವಾಗಿಯೇ ಅವನ ಅಭಿವ್ಯಕ್ತಿ ಮಾಧ್ಯಮದ ಆಯ್ಕೆ ಕನ್ನಡವಾಯಿತು. ಅದಕ್ಕೆ ತಕ್ಕ ಪರಿಕರ ಅವನಲ್ಲಿತ್ತು, ಎಂದರೆ ಆ ಭಾಷೆಯ ಮೇಲಿನ ಪ್ರಭುತ್ವ ಮತ್ತು ವಸ್ತು ನಿರ್ವಹಣೆಯ ಕೌಶಲ. ಹಿಂದಿನ ಕವಿಗಳ ಮಾದರಿ ಅವನ ಕಣ್ಣ ಮುಂದಿದ್ದು ಅದನ್ನೇ ಅವನು ಅನುಸರಿಸಿದ. ಅಷ್ಟಾದಶ ವರ್ಣನೆಗಳು, ಆಶ್ವಾಸ ವಿಂಗಡಣೆ, ವೈವಿಧ್ಯಕ್ಕೆ ಮಧ್ಯೆ ಮಧ್ಯೆ ಅಕ್ಷರೇತರ ಛಂದಸ್ಸಿನ ರಚನೆಗಳು ಇತ್ಯಾದಿ. ಹಾಗಾಗಿ 'ಸುಕುಮಾರ ಚರಿತಂ' ಕಾವ್ಯದಲ್ಲಿ ನಾನಾ ಬಗೆಯ ಅಕ್ಷರವೃತ್ತಗಳು, ಕಂದ ಮತ್ತು ಗದ್ಯ ಭಾಗಗಳಲ್ಲದೆ, ತ್ರಿಪದಿ, ರಗಳೆ, ಷಟ್ಪದಿ, ಪಿರಿಯಕ್ಕರ ಮುಂತಾದ ರಚನೆಗಳೂ ಸೇರಿಕೊಂಡಿವೆ. ಅವನು ಬಳಸಿರುವ ಎರಡು ತ್ರಿಪದಿಗಳು ಅಂಶಗಣಘಟಿತವಾದವು. ಹಾಗೆಯೇ ಎಂಟು ಕಡೆ ಬಳಸಿರುವ ಪಿರಿಯಕ್ಕರಗಳೂ ಲಕ್ಷಣ ಬದ್ಧವಾಗಿವೆ, ನಾಲ್ಕು ಕಡೆ ರಗಳೆಗಳ ಬಳಕೆಯಿದೆ. ಈ ರಗಳೆಗಳಲ್ಲಿ ಎರಡು ಕಡೆ ಬಳಸಿರುವುದನ್ನು ರಗಳೆಯೆಂದೂ, ಒಂದು ಕಡೆಯುದನ್ನು ಪದ್ಧಳಿಯೆಂದೂ, ಮತ್ತೊಂದನ್ನು ಆದ್ಯಂತಪ್ರಾಸರಗಳೆಯೆಂದೂ ಕರೆದಿದೆ.

ಈ ಕಾವ್ಯದಲ್ಲಿ ಬಳಕೆಗೊಂಡಿರುವ ಷಟ್ಪದಿಯುಲ್ಲಿ ಒಂದು ವಿಶೇಷವಿದೆ. ಅದೇಂದರೆ ಇಲ್ಲಿರುವ ಒಂದೇ ಒಂದು ಷಟ್ಪದಿಯ ಪದ್ಯ ಸಂಪೂರ್ಣವಾಗಿ ಅಂಶಗಣಘಟಿತವಾಗಿದ್ದು ಅಪರೂಪದ ಉದಾಹರಣೆಯಾಗಿದೆ. ರಾಘವಾಂಕನ ನಂತರದ ಕಾಲದಲ್ಲಿ ಅಂಶಷಟ್ಪದಿಯ

ಬಳಕೆ ನಿಂತು ನಾನಾ ಬಗೆಯ ಮಾತ್ರಾಷಟ್ಪದಿಗಳಷ್ಟೇ ಬಳಕೆಗೊಂಡವು. ಆದರೆ ಇಲ್ಲಿನ ಈ ಪದ್ಯವು ನಾಗರ್ಮನ 'ಛಂದೋಂಬುಧಿ' ಯ ಲಕ್ಷಣಪದ್ಯದಲ್ಲಿ ಹೇಳಿರುವ ಲಕ್ಷಣಗಳಿಗೆ ಸಂಪೂರ್ಣವಾಗಿ ಬದ್ಧವಾಗಿದೆ. ಇದನ್ನು ಪ್ರೊ. ತೀನಂಶ್ರೀ ಅವರು 'ಅಪೂರ್ವ ಷಟ್ಪದಿ' ಎಂದು ಕರೆದರು; ಸಾಮಾನ್ಯವಾಗಿ ವಿದ್ವಾಂಸರು ಸಂಪೂರ್ಣ ಅಂಶಗಣಘಟಿತವಾದುದನ್ನು 'ಷಟ್ಪದ' ಎಂದು ಕರೆಯುತ್ತಾರೆ. ಮಿಕ್ಕ ಷಟ್ಪದಿಗಳಿಗಿಂತ ಇದು ಭಿನ್ನ ಎಂದು ಸೂಚಿಸಲು. ಇದು ಎಲ್ಲ ಷಟ್ಪದಿ ಪ್ರಭೇಧಗಳಿಗೆ ಮೂಲವೆಂಬುದು ಸಾವಾನ್ಯ ತಿಳಿವಳಿಕೆ. ಇಂತಹ ಸಂಪೂರ್ಣ ಲಕ್ಷಣಬದ್ಧವಾದ ಅಂಶಷಟ್ಪದಿಗಳು ಸಿಕ್ಕುವುದು ಅಪರೂಪ; ಇಡೀ ಕನ್ನಡ ಸಾಹಿತ್ಯದಲ್ಲಿ ಇಂತಹವು ಎರಡೇ, ಒಂದು ಶಾಸನದಲ್ಲಿ ಬರುವುದು, ಮತ್ತೊಂದು 'ಸುಕುಮಾರ ಚರಿತಂ' ಕಾವ್ಯದ್ದು (ನಾಗರ್ಮನ ಲಕ್ಷಣ ಪದ್ಯವೂ ಮಾತ್ರಾಗಣಘಟಿತವಾದಂತೆಯೂ ಕಾಣಿಸುತ್ತದೆ). ಹೀಗಾಗಿ ಶಾಂತಿನಾಥನ ಈ ಷಟ್ಪದಕ್ಕೆ ಕನ್ನಡ ಛಂದಸ್ಸಿನ ಇತಿಹಾಸದಲ್ಲಿ ವಿಶೇಷ ಮಹತ್ವವಿದೆ. ಆ ಷಟ್ಪದಿ ಹೀಗಿದೆ:

ಅದು ಪರಮಾಸ್ಪದ
ಮದು ಪುಣ್ಯಸಂಪದ
ಮದು ಮಹಾಭ್ಯುದಯ ವಿಲಾಸಾವಾಸಂ
ಅದು ದಿವ್ಯಮದು ಸೇಬ್ಯ
ಮದು ಸೌಮ್ಯಮದು ರಮ್ಯ
ಮದು ಸುಖಾಧಾರ ಸಂಸಾರಸಾರಂ (12.50)

ಶಾಂತಿನಾಥ ಹಳಗನ್ನಡವನ್ನು ಬಳಸಿದವನು. ಅವನ ಹೊತ್ತಿಗಾಗಲೇ ಕೆಲವು ಶಬ್ದಗಳು ಹಿಂದೆ ಸರಿದಿದ್ದವು. ಅದರೆ ಈತ ಅಂತಹ ಕೆಲವನ್ನು ಬಳಸಿ ತನ್ನ ಶಬ್ದಕೋಶವನ್ನು ಹಿಗ್ಗಲಿಸಿಕೊಂಡಿದ್ದಾನೆ. ಉದಾಹರಣೆಗೆ: 'ನೆಕ್ಕೊರವಟ್ಟಿ', 'ಎಕ್ಕಸಿಕ', 'ಕೊಡವಿ', 'ಮಾಸರ', 'ಪುಡುಕುಣರ್' ಮುಂತಾದವನ್ನು ಉಲ್ಲೇಖಿಸಬಹುದು. ಹಾಗಾಗಿ ಈ ಕವಿಯ ಕಾವ್ಯವನ್ನು ನಾವು ಕನ್ನಡ ಶಬ್ದ ಚರಿತ್ರೆಯ ದೃಷ್ಟಿಯಿಂದಲೂ ಅಭ್ಯಸಿಸಲು ಅವಕಾಶವಿದೆ.

ಒಟ್ಟಿನಲ್ಲಿ, 'ಸುಕುಮಾರ ಚರಿತಂ'ನ ಶಾಂತಿನಾಥ ಪಂಪನ ಆದರ್ಶವಿಟ್ಟುಕೊಂಡು ಹೊರಟರೂ ಅವನ ಯಶಸ್ಸನ್ನು ಪಡೆದವನಲ್ಲ. ಎಷ್ಟೋ ಜನರ ಹಾಗೆ ಮಹಾಮಂಡಲೇಶ್ವರನ ಆಪ್ತನಾಗಿ ವೈಭವ - ಅಧಿಕಾರಗಳಲ್ಲಿ ಮೈಮರೆಯದೆ ಜನಹಿತವನ್ನು ಗೈಯುವ ಕಾವ್ಯರಚನೆಯ ಕಡೆ ಗಮನ ಕೊಟ್ಟದ್ದು ಅವನ ಸದಭಿರುಚಿಯನ್ನು ತೋರಿಸುತ್ತದೆ; ಒಂದು ಒಳ್ಳೆಯ ಕಥಾಚೌಕಟ್ಟನ್ನು ತನ್ನ ಕಾವ್ಯದ ವಸ್ತುವನ್ನಾಗಿ ಆಯ್ದುಕೊಂಡದ್ದು ಅವನ ಔಚಿತ್ಯಜ್ಞಾನವನ್ನು ಸೂಚಿಸುತ್ತದೆ; ತಕ್ಕಮಟ್ಟಿಗೆ ತನ್ನ ಪ್ರಯತ್ನದಲ್ಲಿ ಯಶಸ್ಸು ಪಡೆದದ್ದು ಅವನ ಶಕ್ತಿಯನ್ನು ತೋರಿಸುತ್ತದೆ. ತೀರ್ಥಂಕರೇತರ ಕತೆಯನ್ನು ಚಂಪೂ ಕಾವ್ಯವಾಗಿ ರಚಿಸುವ ಹೊಸ ಮಾರ್ಗವನ್ನು ಅನುಸರಿಸಿದ್ದು ಅವನ ಹೊಸತನದ, ಸ್ವೋಪಜ್ಞತೆಯ ಪ್ರತೀಕವಾಗಿದೆ. ಹಾಗಾಗಿ ಈ ಕಾವ್ಯಕ್ಕೆ ಚಂಪೂ ಪರಂಪರೆಯಲ್ಲಿ ಒಂದು ಗಣನೀಯ ಸ್ಥಾನವಿದೆ.

ಗ್ರಂಥ ಋಣ:

1. ಶಾಂತಿನಾಥ - ಆಂಡಯ್ಯ ಸಂಪುಟ - ಸಂ. ಪಿ.ವಿ.ನಾರಾಯಣ
2. ಶಾಂತಿನಾಥ - ಲೇಖನ - ಮಹೇಶ. ಎಸ್, ಕನ್ನಡ ದೀವಿಗೆ.
3. ಕನ್ನಡ ಸಾಹಿತ್ಯ ಚರಿತ್ರೆ - ರಂ.ಶ್ರೀ. ಮುಗಳಿ
4. ಸಾಮಾನ್ಯನಿಗೆ ಸಾಹಿತ್ಯ ಚರಿತ್ರೆ - ಸಂಪುಟ 4- ಚಂಪೂ ಕವಿಗಳು- ಪಿ.ವಿ. ನಾರಾಯಣ

****

ರಾಮಚಂದ್ರ ಚರಿತ ಪುರಾಣದ ರಾವಣ–ಒಂದು ಜಿಜ್ಞಾಸೆ

ಡಾ. ಪೂರ್ಣಿಮಾ ಸುಧಾಕರ ಶೆಟ್ಟಿ
ಮುಂಬಯಿ ವಿಶ್ವವಿದ್ಯಾನಿಲಯ

ಕನ್ನಡ ಸಾಹಿತ್ಯಕ್ಕೆ ಸುದೀರ್ಘವಾದ ಇತಿಹಾಸವಿದೆ. ನಮ್ಮ ಸಾಹಿತ್ಯದಲ್ಲಿ ನೆಲದ ಸಂಸ್ಕೃತಿಯಿದೆ, ಪುರಾಣದ ಸೊಗಡಿದೆ. "ಸಾಹಿತ್ಯ ಎಂದರೆ ಕೇವಲ ಸೃಜನಾತ್ಮಕವಾದದ್ದಷ್ಟೇ ಅಲ್ಲ. ಅದು ನಾಡಿನ ಅಂತಃಪ್ರಜ್ಞೆ, ಎಷ್ಟೆಷ್ಟು ಮುಖಗಳಲ್ಲಿ ತನ್ನನ್ನು ತಾನು ಅಭಿವ್ಯಕ್ತಿಪಡಿಸಿಕೊಳ್ಳಬಹುದೋ ಆ ಎಲ್ಲ ಅಭಿವ್ಯಕ್ತಿ ವಾಙ್ಮಯ ರೂಪವೂ ಅಹುದು. ಸಾಹಿತ್ಯವನ್ನು ಅದು ನೀಡುವ ರಸಾನುಭವಕ್ಕಾಗಿ ಓದುವ ಮತ್ತು ವಿಶ್ಲೇಷಿಸುವ ರೀತಿ ಒಂದಾದರೆ ಇಡೀ ಸಾಹಿತ್ಯದ ಸಾಧನೆ–ಸಿದ್ಧಿಗಳನ್ನು ವಿಚಾರಪೂರ್ವಕವಾಗಿ, ತೌಲನಿಕವಾಗಿ, ಪರಿಶೀಲಿಸುವ ವಿಧಾನ ಇನ್ನೊಂದು." ಎಂಬ ಮಾತು ಸಾಹಿತ್ಯದ ಮೌಲ್ಯವನ್ನು, ಅಗತ್ಯವನ್ನು ಹೇಳುತ್ತದೆ. ಸಾಹಿತ್ಯರೂಪದಲ್ಲಿ ಚಂಪೂ ಯುಗವೆಂದೇ ಹೆಸರಾಗಿದ್ದ ಹತ್ತರಿಂದ ಹನ್ನೆರಡನೆಯ ಶತಮಾನದ ಅವಧಿಯಲ್ಲಿ ಕನ್ನಡದಲ್ಲಿ ಚಂಪು ಹುಲುಸಾಗಿ ಬೆಳೆಯಿತು. ಪಂಪನ ಕೃತಿಗಳು ಮುಂದಿನ ಎಲ್ಲ ಚಂಪು ಕವಿಗಳಿಗೆ ಸಿದ್ಧ ಚೌಕಟ್ಟನ್ನು ಒದಗಿಸಿದವು. ಪೊನ್ನನ ಶಾಂತಿ ಪುರಾಣವೂ ಚಂಪೂವಿನಲ್ಲಿ ಇದೆ. ರನ್ನ, ದುರ್ಗಸಿಂಹ, ನಾಗವರ್ಮ ಎಲ್ಲರೂ ಚಂಪೂಕವಿಗಳು. ಒಟ್ಟಿನಲ್ಲಿ ಹೇಳುವುದಾದರೆ ಗದ್ಯ, ಕಂದ, ವೃತ್ತ, ಅಷ್ಟಕ, ಶತಕ ಮುಂತಾದ ಬೇರೆ ಬೇರೆ ಸಾಹಿತ್ಯಕ ರೂಪಗಳನ್ನು ಈ ಅವಧಿಯ ಕವಿಗಳು ಬಳಸಿಕೊಂಡಿದ್ದರಾದರೂ ಈ ಶತಮಾನದಲ್ಲಿ

ಚಂಪೂವಿನದೇ ಮೇಲುಗೈ. ಆ ಕಾಲದ ಕವಿಗಳೆಲ್ಲರ ಮೆಚ್ಚಿನ ಮಾರ್ಗವೂ ಚಂಪೂ ಆಗಿತ್ತು ಎನ್ನುವುದನ್ನು ನಾವು ಮರೆಯುವಂತಿಲ್ಲ.

"ಹತ್ತನೆಯ ಶತಮಾನದ ಸಾಹಿತ್ಯಕ ಶ್ರೀಮಂತಿಕೆಯ ಮುಂದೆ ಹನ್ನೊಂದನೆಯ ಶತಮಾನ ಕೆಲಮಟ್ಟಿಗೆ ಕಾಂತಿ ಹೀನವಾಗಿ ಕಂಡರೂ ಹನ್ನೊಂದನೆಯ ಶತಮಾನದ ಅಂತ್ಯದ ವೇಳೆಗೆ ಹೊಸಸೃಷ್ಟಿಯ ಸೆಲೆ ಆರಂಭವಾಯಿತು. ಸಂಸ್ಕೃತ ಮೂಲದಲ್ಲಿದ್ದ ತೀರ್ಥಂಕರ ಚರಿತೆಗಳನ್ನು ಬಿಡಿಯಾಗಿ, ಚಂಪುವಿನಲ್ಲಿ ಬರೆಯುವ ಒಂದು ಸಂಪ್ರದಾಯದ ಹಿನ್ನೆಲೆಯಲ್ಲಿ ಬಂದ ಕವಿ ನಾಗಚಂದ್ರ. ಈ ಸಾಹಿತ್ಯ ಪರಂಪರೆ ಹಾಗೂ ತತ್ಕಾಲೀನ ಧಾರ್ಮಿಕ, ಸಾಮಾಜಿಕ ಅಂಶಗಳು ನಾಗಚಂದ್ರನ ಕಾವ್ಯಗಳ ಹಿನ್ನೆಲೆಯಲ್ಲಿವೆ"

ನಾಗಚಂದ್ರ ಹನ್ನೆರಡನೆಯ ಶತಮಾನದ ಪ್ರಸಿದ್ಧ ಜೈನಕವಿ. ಅಭಿನವ ಪಂಪ ಎನ್ನುವುದು ಈತನ ಬಿರುದು. ಮಲ್ಲಿನಾಥ ಪುರಾಣ ಮತ್ತು ರಾಮಚಂದ್ರ ಚರಿತ ಪುರಾಣ ಅಥವಾ ಪಂಪ ರಾಮಾಯಣ ಎಂಬ ಎರಡು ಜೈನ ಧಾರ್ಮಿಕ ಕಾವ್ಯಗಳನ್ನು ಈತ ರಚಿಸಿದ್ದಾನೆ.

ನಾಗಚಂದ್ರನ ಕಾಲಕ್ಕೆ ನಾವು ಬರುವ ವೇಳೆಗೆ ಕನ್ನಡ ಸಾಹಿತ್ಯ ನಸುಕು ನಸುಕಿನ ಪಂಪಪೂರ್ವಯುಗ ಹಾಗೂ ಕಾಂತಿಯುಕ್ತ ಪಂಪಯುಗ ಈ ಎರಡು ಹಂತಗಳನ್ನು ದಾಟಿತ್ತು. ಈ ಪೂರ್ವ ಹಂತಗಳಲ್ಲಿ ಜೈನಧರ್ಮ ಕನ್ನಡ ಸಾಹಿತ್ಯದ ಬೆನ್ನಲುಬಾಗಿತ್ತು. ಕನ್ನಡ ಭಾಷೆಯ ಸಾಹಿತ್ಯಕ ಅಭಿವ್ಯಕ್ತಿ ಪ್ರಯತ್ನದ ಪ್ರಾಚೀನ ದಾಖಲೆಗಳಾದ ಶ್ರವಣಬೆಳಗೊಳದ ಶಾಸನಗಳ ಹಿನ್ನೆಲೆ ಜೈನಧರ್ಮದ್ದೇ ಆಗಿದೆ. ನಾಗಚಂದ್ರ ತನ್ನ ಬಗ್ಗೆ ಹೇಳಿಕೊಂಡದ್ದು ಕಡಿಮೆ. ಅವನದು ತತ್ವನಿಷ್ಟ ವ್ಯಕ್ತಿತ್ವ. ಆತನಿಗೆ ಲೌಕಿಕ ಸುಖ ವರ್ಜ್ಯವಲ್ಲ. ಅಪಮಾರ್ಗದ ದಾರಿ ಆತನಿಗೆ ಪಥ್ಯವಾದುದಲ್ಲ. ಅಂಥ ಸನ್ನಿವೇಶಗಳನ್ನು ಆತ ಮುಲಾಜಿಲ್ಲದೆ ಟೀಕೆ ಮಾಡುತ್ತಾನೆ. ಹಣ ಗಳಿಕೆ, ಅದು ಮೋಸದಿಂದ ಮಾಡಬಾರದು, ಧರ್ಮನಿಷ್ಠೆಯಿಂದ ಮಾಡಬೇಕು ಎನ್ನುವುದು ಆತನ ತತ್ವ. **"ಧನಮಂ ಮರ್ಯಾದೆಯಿಂದಾರ್ಜಿಸಿ ವಿಷಯ ಸುಖಾಸ್ವಾದನಂದೋಷ ನಿಷ್ಪಾದನಮಲ್ತೆಂಬಂತೆಚಿತ್ತಕ್ಕೊದವಿಸೆ ಮುದಮಂ.."** ಎನ್ನುವ ಮಾತಿನಿಂದ ಆತನ ನಿಷ್ಠೆ ಏನು ಅನ್ನುವುದು ತಿಳಿಯುತ್ತದೆ.

ರಾಮಾಯಣದ ಮೂಲ ಹಂದರ ಒಂದೇ ಆದರೂ ಕಥನ ಸ್ವರೂಪ ಭಿನ್ನವಾಗಿರುತ್ತದೆ. ಈ ಕುರಿತು ಬಹಳಷ್ಟು ಹೊಸ ಹೊಸ ಸೃಷ್ಟಿಗಳಾಗಿವೆ. 'ಧರೆಯೊಳ್ ಎನಿತ್ತೊ ರಾಮಾಯಣಂಗಳ್ ಒಳವು'ಎಂದು ಮುದ್ದಣ ಹೇಳುವಂತೆ ರಾಮಾಯಣ ಬೇರೆ ಬೇರೆ ರೀತಿಯಲ್ಲಿ ಬಹಳಷ್ಟು ರಚಿಸಲ್ಪಟ್ಟಿದೆ. ಭಾರತೀಯ ಕಾವ್ಯ ಪ್ರಪಂಚದಲ್ಲಿ ಅತ್ಯಂತ ಪ್ರಾಚೀನ ಹಾಗೂ ಜನಪ್ರಿಯ ಮಹಾಕಾವ್ಯ ರಾಮಾಯಣ. ಈ ಕೃತಿಯಲ್ಲಿ ಬಹುರೂಪವಾದ ಮೌಲ್ಯ ಅಡಕವಾಗಿರುವುದನ್ನು ಗುರುತಿಸಬಹುದು. ಮೌಲ್ಯಗಳು ಸಾಮುದಾಯಿಕ ಬದುಕಿನ ಮಾರ್ಗಸೂತ್ರಗಳು. ಬದುಕು ಅರ್ಥಪೂರ್ಣವಾಗಲು, ವ್ಯವಸ್ಥಿತವಾಗಿರಲು ಕಾಲಕ್ರಮೇಣ ರೂಪಿಸಿಕೊಂಡ ಈ ಮೌಲ್ಯಗಳು ಜೀವನ ಸೂತ್ರಗಳೂ ಹೌದು. ಸತ್ಯ, ನ್ಯಾಯ, ಗುರು-ಹಿರಿಯರಲ್ಲಿ ಗೌರವಭಾವ, ಭ್ರಾತೃಪ್ರೇಮ, ದೈವನಿಷ್ಠೆ, ಪ್ರಾಮಾಣಿಕತೆ, ಪ್ರಕೃತಿಯ ಬಗ್ಗೆ ಪೂಜ್ಯಭಾವ ಎಲ್ಲಕ್ಕೂ ಮಿಗಿಲಾಗಿ ತಂದೆ-ತಾಯಿಯ ಮಾತನ್ನು ಮೀರದೇ ಇರುವುದು ಇವೆಲ್ಲವೂ ಸಾರ್ವಕಾಲಿಕ ಮೌಲ್ಯಗಳು. ಇದಕ್ಕೆ ನಾಂದಿ ರಾಯಾಯಣ ಎಂದರೆ ತಪ್ಪಾಗಲಾರದು.

ನಾಗಚಂದ್ರ ಹನ್ನೆರಡನೆಯ ಶತಮಾನದ ಪ್ರಸಿದ್ಧ ಜೈನಕವಿ. ಅಭಿನವ ಪಂಪ ಈತನ ಬಿರುದು. ಭಾರತಿಕರ್ಣಪೂರ, ಕವಿತಾ ಮನೋಹರ, ಸಾಹಿತ್ಯ ವಿಧ್ಯಾಧರ, ಜನಸ್ಥಾನರತ್ನಪ್ರದೀಪ, ಸೂಕ್ತಿ ಮುಕ್ತಾ ವಸಂತ ಮೊದಲಾದ ಬಿರುದುಗಳು ಕೂಡಾ ಈತನಿಗೆ ಇದ್ದವು. ಆತ ತನ್ನ ಕಾವ್ಯಗಳಲ್ಲಿ ಅಭಿನವ ಪಂಪ ಎಂದು ತನ್ನನ್ನು ಕರೆದುಕೊಂಡಿದ್ದಾನೆ. ಮಲ್ಲಿನಾಥ ಪುರಾಣ ಹಾಗೂ ರಾಮಚಂದ್ರಚರಿತ ಪುರಾಣ ಎಂಬ ಎರಡು ಮಹಾಕಾವ್ಯಗಳನ್ನು ಈತ ರಚಿಸಿದ್ದಾನೆ. ಇವುಗಳಲ್ಲಿ ಮಲ್ಲಿನಾಥ ಪುರಾಣ 19ನೆಯ ತೀರ್ಥಂಕರನಾದ ಮಲ್ಲಿನಾಥನ ಕಥೆಯನ್ನು ನಿರೂಪಿಸುವ ಕೃತಿಯಾಗಿದೆ. ಕವಿಯ ಪ್ರತಿಭೆಯನ್ನು ಬಿಂಬಿಸುವ ಸುಂದರವಾದ ಭಾವಗೀತೆಗಳಂತೆ ಈ ಕಾವ್ಯ ಮೂಡಿಬಂದಿದೆ. ಜೈನರಾಮಾಯಣವನ್ನು ಬರೆದ 'ನಾಗಚಂದ್ರನ ರಾಮಚಂದ್ರಚರಿತ ಪುರಾಣ ಕನ್ನಡದ ಮುಖ್ಯಕೃತಿ ಎನ್ನಬಹುದು. "ವಿಷಯಮೊಪ್ಪದೊಡೆ ಆವುದುಂ ಒಪ್ಪಲಾರ್ಕುಮೇ" ಎಂದು ಆತ ಕೇಳುತ್ತಾನೆ. ಅಂದರೆ ನಾಗಚಂದ್ರನ ದೃಷ್ಟಿಯಲ್ಲಿ ಕಾವ್ಯಕ್ಕೆ ಉದಾತ್ತ ನಾಯಕನು ಬೇಕು. ಉದಾತ್ತ

ವಿಷಯವಿರಬೇಕು. ಅದ್ದರಿಂದಲೇ ರಾವಣನಿಗೆ ವಿಶೇಷ ಪ್ರಾಧ್ಯಾನ್ಯತೆ ನೀಡಿ ಉದಾತ್ತನಾಯಕನಾಗಿ ಆತನನ್ನು ಸೃಷ್ಟಿಸಿದ್ದಾನೆ. "ನಾಗಚಂದ್ರನ ಜಿನಧರ್ಮ ಶ್ರದ್ಧೆಯೇ ಅವನ ಕಾವ್ಯರಚನೆಗೆ ಕಾರಕವೂ, ಪ್ರೇರಕವೂ, ಸ್ಫೂರ್ತಿಯೂ ಆಗಿದೆ. ಆತನ ಪದ ಪ್ರವಾಹವು ಅನುಪಮವಾದುದು. ಶಬ್ದಗಳು ಎಲ್ಲಿಯೂ ಮೊಟಕಾಗಿ ತಡೆಯಿಲ್ಲದೆ ತುಂಬಿರುವಂತದ್ದು" ಎಂಬ ಮಾತು ನಾಗಚಂದ್ರನ ಕಾವ್ಯದ ಹಿರಿಮೆಯನ್ನು ವಿವರಿಸುತ್ತದೆ.

ನಾಗಚಂದ್ರನ ಶೈಲಿ ವಿಶಿಷ್ಟವಾದುದು ಮತ್ತು ಅಷ್ಟೇ ಸುಂದರವಾದುದು. ಸರಳತೆ, ಮಾಧುರ್ಯ, ಗೇಯತೆ ಅವನ ಕಾವ್ಯ ಶೈಲಿಯ ಲಕ್ಷಣಗಳು. ರಾಮಚಂದ್ರಚರಿತ ಪುರಾಣ ವಾಲ್ಮೀಕಿ ರಚಿಸಿದ ರಾಮಾಯಣಕ್ಕಿಂತ ಭಿನ್ನವಾದುದು. ಇಲ್ಲಿ ಬರುವ ಪಾತ್ರಗಳು ಕೂಡಾ ಭಿನ್ನವಾದವು. ಇಲ್ಲಿ ರಾಮ ಲಕ್ಷ್ಮಣ ರಾವಣರು ಜೈನ ಶಲಾಕಪುರುಷರು. ಆದ್ದರಿಂದ ಇದೊಂದು ಅಪೂರ್ವ ರಾಮಕಥೆ. ಹಾಗಂತ ಇದು ಕವಿಯ ಸ್ವಂತ ಕೃತಿಯೆಂದೂ ಹೇಳುವಂತಿಲ್ಲ. ನಮಗೆ ದೊರೆಯುವ ದಾಖಲೆಗಳ ಪ್ರಕಾರ ವಿಮಲಸೂರಿ ಎಂಬ ಕವಿ ಪ್ರಾಕೃತದಲ್ಲಿ ಬರೆದ ಪಉಮಚರಿಯ ಇದಕ್ಕೆ ಪ್ರೇರಣೆ. ಇದು ಜೈನ ಪರಂಪರೆಗೆ ಸೇರಿದ ಕೃತಿ. ಅವನು ಮೂಲವನ್ನು ಆಧರಿಸಿಕೊಂಡಿದ್ದರೂ ಅಂಧಾನುಕರಣೆ ಮಾಡಲಿಲ್ಲ. ಶೈಲಿ, ಕಥಾ ವಸ್ತು, ನಿರೂಪಣಾಕ್ರಮ, ಪಾತ್ರ ಸೃಷ್ಟಿ, ಧರ್ಮ ವಿವರ, ವರ್ಣನೆಗಳಲ್ಲಿ ತನ್ನ ಸ್ವಂತಿಕೆಯನ್ನು ಮೆರೆದಿರುವನು. "ಜೈನ ಪರಂಪರೆಯ ರಾಮಾಯಣವನ್ನು ಕನ್ನಡಕ್ಕೆ ನೀಡಿದ ನಾಗಚಂದ್ರನ ಕಾಣ್ಕೆ ಅನುಪಮವಾದುದು" ಎಂದು ಎಸ್.ಎಸ್.ಬ್ಯಾತನಾಳ ಅವರು ಅಭಿಪ್ರಾಯ ಪಟ್ಟಿದ್ದಾರೆ.

ಸೀತಾಪಹರಣದ ಹಿನ್ನೆಲೆ

ರಾಮಾಯಣದ ಕಥೆಯಲ್ಲಿ ಸೀತಾಪಹರಣದ ಸಂದರ್ಭವೇ ಬಹಳ ಮುಖ್ಯವಾದುದು. ಅಯೋಧ್ಯೆಯಿಂದ ಕಾಡ ಹಾದಿಯಲ್ಲಿ, ಪತಿಯ ಬೆನ್ನ ಹಿಂದೆ ಬಂದ ಸೀತೆ ಮಾರ್ಗಾಯಾಸದಿಂದ ಬಳಲಿದರೂ ಸ್ವಲ್ಪವೂ ಬೇಸರಿಸದೆ ಪತಿಯ ಹಿಂದೆ ಹೋಗುವ ಆಕೆಯ ಸಹನೆ, ತಾಳ್ಮೆಯನ್ನು ಈ ಪದ್ಯದಲ್ಲಿ ನೋಡಬಹುದು.

"ಪರಲೊತ್ತೆ ಸೈರಿಸುತ್ತುಂ/ ಗುರುಜಘನಭರಂಗಳಿಂ ತಡಂ ಮೆಟ್ಟುತ್ತುಂ//
ಚರಣಕಮಳಂಗಳಂ ಸಂ/ವರಿಸುತ್ತುಂ ಸೀತೆ ಸೆಡೆದು ಮೆಲ್ಲನೆ ನಡೆದಳ್

(ಹರಳುಗಳು ಒತ್ತಿದರೆ ಸೈರಿಸಿಕೊಳ್ಳುತ್ತಲೂ, ದೊಡ್ಡ ಜಘನ ಭಾರದಿಂದ ತಡೆತಡೆದು ನಡೆಯುತ್ತಲೂ ಚರಣ ಕಮಲಗಳನ್ನು ಸಂವರಿಸುತ್ತಲೂ, ಸೀತೆ ಮೆಲ್ಲ ಮೆಲ್ಲನೆ ಅಳುಕುತ್ತ ನಡೆದಳು).

ಮೂರು ದಿವಸಗಳವರೆಗೆ ದಂಡಕಾರಣ್ಯದೊಳಗೆ ದಕ್ಷಿಣಾಭಿಮುಖರಾಗಿ ನಡೆದು, ಚಂಚಲವಾದ ತೆರೆಗಳ ಸಮೂಹದಿಂದ ಕೂಡಿದ ಕ್ರೌಂಚ ನದಿಯನ್ನು ದಾಟಿ, ಸೀತಾದೇವಿ ದಣಿದಳೆಂದು ಸರಿತ್ತಟವನದ ಬಳ್ಳಿವನೆಯಲ್ಲಿ ವಿಶ್ರಮಿಸಿ ಸುಖದಿಂದಿರಲು ಅಲ್ಲಿ ನಡೆವ ಘಟನೆಯೇ ಸೀತಾಪಹರಣಕ್ಕೆ ಕಾರಣವಾಗುತ್ತದೆ. ಆ ನದಿಯ ಸಮೀಪದಲ್ಲಿರುವ ಎಲ್ಲ ವಿಧದ ರತ್ನಗಳಿಗೂ ಆಗರವಾದ ದಂಡಗಿರಿಯ ಗುಹಾಗೃಹದಲ್ಲಿ ಒಂದು ಯೋಜನದ ಎಂಟನೆಯ ಭಾಗ ತಗ್ಗಿನಲ್ಲಿ ಪಾತಾಳ ಲಂಕೆ ಎಂಬ ಪಟ್ಟಣವಿತ್ತು. ಅದನ್ನು ಖರನೆಂಬವನು ಆಳುತ್ತಿದ್ದನು. ಆತನ ಹೆಂಡತಿ ರಾವಣನ ತಂಗಿಯಾದ ಚಂದ್ರನಖಿ. ಅವರಿಗೆ ಶಂಭುಕ. ಸೌಂದರ ಎಂಬ ಇಬ್ಬರು ಮಕ್ಕಳು. ಹಿರಿಯ ಮಗನಾದ ಶಂಭುಕನು ಹನ್ನೆರಡು ವರ್ಷಗಳಿಂದ ಕಠಿಣ ತಪಸ್ಸು ಮಾಡಿ ಸೂರ್ಯಹಾಸವೆಂಬ ಖಡ್ಗವನ್ನು ಸಾಧಿಸಿದನು. ಆ ಖಡ್ಗವನ್ನು ಆತನಿಗೆ ಹಸ್ತಾಂತರಿಸಲು ಸಾವಿರ ಯಕ್ಷ ದೇವತೆಗಳ ಆಗಮನವಾಗುತ್ತದೆ. ಶಂಭುಕನು ಇದ್ದ ಬಿದಿರ ಮೆಳೆಯ ಅಡಿಯಲ್ಲಿ ಆ ಖಡ್ಗವನ್ನು ಇಟ್ಟು ಪಾರಿಜಾತ, ನಮೇರು, ಮಂದಾರ ಮೊದಲಾದ ಪುಷ್ಪಗಳಿಂದ ಪೂಜಿಸುತ್ತಿರುತ್ತಾರೆ. ಅಲ್ಲಿಂದ ಬರುತ್ತಿದ್ದ ಹೂವಿನ ಸುವಾಸನೆಯನ್ನು ಆಘ್ರಾಣಿಸುತ್ತಾ, ಕುತೂಹಲದಿಂದ ಲಕ್ಷ್ಮಣನ ಚಿತ್ತ ಅತ್ತ ಹರಿಯುತ್ತದೆ.

ಪನ್ನೆರಡು ವರ್ಷಂ ಮೊದಲ್ಗೊಂಡು ಸೂರ್ಯಹಾಸಾಸಿಯೆಂ ಸಾಧಿಸುತ್ತಿರ್ಪುದುಮಾತಂಗಾ ಬಾಳನಿತ್ತು ಬೆಸಕೆಯ್ಯಲೆಂದು ಬಂದಯಕ್ಷಾಮರ ಸಹಸ್ರಮಾಖಡ್ಗ ರತ್ನಮನವನಿರ್ದ ಬಿದಿರ ಪೊದರ ಮೊದಲೊಳಿರಿಸಿ ನಮೇರುಮಂದಾರ ಪಾರಿಜಾತ ಸುಮನೋ ಮಂಜರಿಯಿನರ್ಚಿ

ಸುತ್ತಿರ್ಪುದುಮಿತ್ತ ಲಕ್ಷ್ಮಣಂ ವನವಿಳಾಸಿನೀನಿರೀಕ್ಷಣ ಕುತೂಹಲನಾಗಿ (ರಾಮಚಂದ್ರಚರಿತ ಪುರಾಣ, ಸೀತಾಪಹರಣ ವರ್ಣನಂ, ಪು–233)

ಸುರಿವೆಡೆಗೆ ಖಡ್ಗಸಿದ್ಧಿಗೆ/ ಬರಿಯಟ್ಟಿದ ಪುಣ್ಯದೇವತಾದೂತನವೋ–

ಲ್ಸುರಿಗಾಳಿಯೊಡನೆ ಹರ್ಷದ/ಮರೆ ಬರೆ ಬಂದತ್ತದೊಂದು ದಿವ್ಯಾಮೋದಂ//17//

ಲಕ್ಷ್ಮಣ ಸಹಜವಾಗಿ ವನಸಿರಿಯು ಸೌಂದರ್ಯವನ್ನು ಆಸ್ವಾದಿಸಲೆಂದು ಹೊರಡುತ್ತಾನೆ. ದಿವ್ಯವಾದ ಪರಿಮಳವೊಂದು ಅವನ ಮೂಗಿಗೆ ಬಡಿಯುತ್ತದೆ. ಆಗ ಲಕ್ಷ್ಮಣನು

ಇದು ಮನುಜಲೋಕವನಕುಸು/ಮದ ಸೌರಭಮಲ್ತು ದಿವಿಜಲೋಕದ

ಮಂದಾರದಕುಸುಮಸೌರಭಂ ಬಂ/ದುದೆತ್ತಣಿಂದೆಂದುಲಕ್ಷ್ಮಣಂ ಬರಿಸಂದಂ//18//

"ಇದು ಮನುಷ್ಯಲೋಕದ ವನಸುಮದ ಪರಿಮಳವಲ್ಲ, ದೇವಲೋಕದ ಮಂದಾರ ಪುಷ್ಪದ ಪರಿಮಳವು" ಎಂದು ಆ ಪರಿಮಳ ಬಂದ ದಿಕ್ಕಿನತ್ತ ಹೋದನು. ಆ ಸನ್ನಿವೇಶವನ್ನು ಕೂಡಾ ನಾಗಚಂದ್ರ ಬಹಳ ಸೊಗಸಾಗಿ ವರ್ಣಿಸಿದ್ದಾನೆ.

ಆ ಮಧುರವಾದ ಪರಿಮಳದ ಬೆಂಬತ್ತಿ ಹೂವಿನಲ್ಲಿ ಅನುರಾಗ ಹುಟ್ಟಿದ ಭ್ರಮರವು ಬರುವಂತೆ ಹೊಂಗೆಯ ತಳಿರಿನ ಮೈಕಾಂತಿಯುಳ್ಳ ಲಕ್ಷ್ಮಣನು ದೊಡ್ಡದಾದ ಬಿದಿರಿನ ಮೆಳೆಯ ಬಳಿಗೆ ಬಂದನು. ಅಲ್ಲಿ ಅವನಿಗೆ ಅಮೂಲ್ಯವಾದ ರತ್ನಮಾಲೆಗಳಿಂದ ಪೂಜಿಸಿದ ಸೂರ್ಯಹಾಸ ಖಡ್ಗ ಸಿಗುತ್ತದೆ. ಅದನ್ನು ಪರೀಕ್ಷಿಸುವ ಸಲುವಾಗಿ ಒಮ್ಮೆ ಖಡ್ಗವನ್ನು ಬೀಸಿದ ರಭಸಕ್ಕೆ ಆ ಬಿದಿರ ಮೆಳೆಗಳೆಲ್ಲ ಸವರಿ ಹೋಗಿ ಅದರೊಂದಿಗೆ ಅಲ್ಲಿಯೇ ಇದ್ದ ಶಂಭುಕನ ತಲೆಯೂ ಮುಂಡದಿಂದ ಚಿಮ್ಮಿತು. ಅಕಸ್ಮಾತ್ತಾಗಿ ಆದ ಈ ಘಟನೆಯೇ ಮುಂದೆ ಎಲ್ಲಾ ದುರಂತಕ್ಕೂ ಕಾರಣವಾಗುತ್ತದೆ.

ಹನ್ನೆರಡು ವರ್ಷಗಳಿಂದ ಆ ಖಡ್ಗಕಾಗಿ ತಪಸ್ಸು ಮಾಡಿದ ಶಂಭುಕನ ತಲೆ ಅದರ ಹರಿತದಿಂದಲೇ ಕಡಿಯಲ್ಪಡುವುದು ವಿಧಿ ನಿಯಮವೋ ಏನೋ. ಅದನ್ನೇ ಲಕ್ಷ್ಮಣ ತುಂಬಾ ದುಃಖಭರಿತನಾಗಿ ಹೇಳುತ್ತಾನೆ. ಇಲ್ಲಿ ಈ ಕಾವ್ಯದಲ್ಲಿ ಮೂಡಿಬಂದ ಕರುಣಾರಸ, ತಾಯಿ ಚಂದ್ರನಖಿಯ

ಮಿತಿಮೀರಿದ ದುಃಖದಿಂದ ಮೂರ್ಛೆ ಹೋಗುವ ಶೋಕರಸ ಆರ್ದ್ರವಾಗಿ ಮೂಡಿಬಂದಿದೆ. ಆದರೆ ಚಂದ್ರನಖಿ ಆ ದುಃಖದಲ್ಲಿಯೂ ಲಕ್ಷ್ಮಣನನ್ನು ನೋಡಿ ಅವನ ಸೌಂದರ್ಯಕ್ಕೆ ಮನಸೋತು ತಕ್ಷಣ ತನ್ನ ರೂಪ, ಸ್ವರೂಪವನ್ನು ಬದಲಾಯಿಸುತ್ತಾ ಅನಾಥೆಯಂತೆ ನಾಟಕವಾಡುತ್ತಾಳೆ. ಅವಳಂತರಂಗದ ನೋವನ್ನು ತೆರೆದಿಡುತ್ತಾ ತಾನೊಬ್ಬಳು ಅನಾಥ ಕನ್ಯೆ ಎಂಬಂತೆ ಬಿಂಬಿಸುತ್ತಾ ನಿಮ್ಮಿಬ್ಬರಲ್ಲಿ ಒಬ್ಬರು ನನ್ನನ್ನು ಗಂಧರ್ವ ವಿವಾಹ ವಿಧಿಯಿಂದ ಸ್ವೀಕರಿಸಬೇಕು" ಎನ್ನುತ್ತಾಳೆ. ಸತ್ತ ಮಗನ ದುಃಖದ ನಡುವೆ ಮೋಹದ ಬಲೆಗೆ ಸಿಗುವ ಚಂದ್ರನಖಿ ಸ್ವಾರ್ಥಿ ಹೆಣ್ಣಾಗಿ, ತಾಯಿ ಹೆಸರಿಗೆ ಕಳಂಕವೆಂಬಂತೆ ಇಲ್ಲಿ ಬಿಂಬಿತವಾಗಿದ್ದಾಳೆ. ಅವರು ನಿರಾಕರಿಸುತ್ತಾರೆ. ಸೀತೆ ನಕ್ಕು ಅವರಿಬ್ಬರ ಮುಖ ನೋಡುತ್ತಾಳೆ. ಇದರಿಂದ ತನಗೆ ಅವಮಾನವಾಯಿತೆಂದು ಅದನ್ನು ಸಹಿಸಲಾರದೆ ರಾವಣನ ಬಳಿ ಹೋಗಿ "ನಿನ್ನಂತಹ ಅಣ್ಣನಿದ್ದೂ ನಾನು ನನ್ನ ಮಗನನ್ನು ಕಳೆದುಕೊಂಡೆ. ನನ್ನ ಮಗನ ಸಾವಿಗೆ ಪ್ರತಿಕಾರ ತೀರಿಸಲು ಹೋದರೆ ನನಗೆ ಅವಮಾನವಾಯಿತು" ಎಂದು ಹೊಸ ಕಥೆಯನ್ನು ಕಟ್ಟಿ ಅವನಲ್ಲಿ ರೋಷವನ್ನು ಉಕ್ಕಿಸುವಲ್ಲಿ ಸಫಲಳಾಗುತ್ತಾಳೆ. ತಂಗಿಯ ದುಃಖವನ್ನು ನೋಡಲಾರದ ಅಣ್ಣನಾಗಿ ರಾವಣನ ಚಿತ್ರ ಪರಿಣಾಮಕಾರಿಯಾಗಿ ಈ ಕಾವ್ಯದಲ್ಲಿ ಮೂಡಿ ಬಂದಿದೆ.

ಬೆದರಿಸಿದತ್ತು ಕಾರಿರುಳನುರ್ವಿದ ಪುರ್ವಿನ ಗಂಟಿನೊಳ್ ಕರಂ
ಗಿದ ಮೊಗಮಂಜಿಸಿತ್ತು ಕಿಸುಸಂಜೆಯನಾಸುರಮಾಗೆ ಕೆಂಪುವೇ
ರಿದ ಬಿಡುಗಣ್ಣ ಬಣ್ಣ ಹೀಗೆ ಸಂವರ್ತ ಸಮಯದ ಸಮುದ್ರದಂತೆ ಕದಡಿದ.॥71॥

ಆ ಸಂದರ್ಭದಲ್ಲಿ ಆತನ ಕೋಪ, ಆಕ್ರೋಶ ಸಹಜವಾದುದು. ಸತ್ತವನು ಬೇರಾರು ಅಲ್ಲ. ತನ್ನ ಸೋದರಳಿಯ. ಅವನನ್ನು ಕೊಂದವರ ಪ್ರತಿ ಆತನ ಅನಿಸಿಕೆಗಳು, ವರ್ತನೆ ಎಲ್ಲವೂ ಸಹಜವಾಗಿ, ಪ್ರಾಮಾಣಿಕವಾಗಿಯೇ ಮೂಡಿಬಂದಿದೆ.

ಈ ಘಟನೆ ಮುಂದೆ ನಡೆಯುವ ಇಡೀ ಕಥೆಗೆ ಮುನ್ನುಡಿ ಬರೆದಂತಿದೆ. ಇಲ್ಲಿಂದ ರಾವಣನ ಗುಣಾವಗುಣಗಳ ಪರಿಚಯವಾಗುತ್ತಾ

ಹೋಗುತ್ತದೆ. ರಾವಣನ ಚಿತ್ರಣವನ್ನು ರಾಮಚಂದ್ರ ಚರಿತ ಪುರಾಣದಲ್ಲಿ ಕಟ್ಟಿಕೊಟ್ಟ ರೀತಿ ವೈವಿಧ್ಯಮಯವೂ, ವೈಶಿಷ್ಟ್ಯಪೂರ್ಣವೂ ಆಗಿದೆ. ಇಡೀ ಕೃತಿಯಲ್ಲಿ ರಾವಣನ ಭಿನ್ನ ಮುಖದ ಪರಿಚಯವನ್ನು ತನ್ನ ಕಾವ್ಯದಲ್ಲಿ ಆತ ಮಾಡಿದ ರೀತಿ ಅಪೂರ್ವವಾದುದು. ರಾವಣ ಕೆಟ್ಟವನೆಂದು ಬಿಂಬಿಸುವುದು ಅವನಿಗೆ ಇಷ್ಟವಿಲ್ಲ. ವಿಧಿಯ ಕೈವಾಡದಂತೆ ಎಲ್ಲವೂ ನಡೆದು ಹೋಯಿತು. ಅವನ ತಪ್ಪಲ್ಲ ಎನ್ನುವ ಭಾವವೇ ನಮಗೆ ಈ ಕಾವ್ಯವನ್ನು ಓದಿದಾಗ ಮೂಡುತ್ತದೆ.

ನಾಗಚಂದ್ರನ ರಾವಣ ಪಾತಾಳ ಲಂಕೆಯ ಅರಸು ರತ್ನಶ್ರವನ ಮಗ. ರಾವಣ ಅವನಿಗೆ ಭಾನುಕರ್ಣ ವಿಭೀಷಣರೆಂಬ ತಮ್ಮಂದಿರು ಹಾಗೂ ಚಂದ್ರನಖಿಯೆಂಬ ತಂಗಿಯೂ ಇದ್ದರು. ಮಂಡೋದರಿ ಆತನ ಪಟ್ಟದರಸಿ. ಅವನಿಗೆ ಇತರ ಸಹಸ್ರಾರು ಪತ್ನಿಯರೂ ಇರುತ್ತಾರೆ. ಆತ ಅನಂತವೀರ್ಯ ಕೇವಲಿಗಳಿಂದ ಪರವಧೂ ವಿರತಿವ್ರತವನ್ನು ಸ್ವೀಕರಿಸಿದ್ದಾನೆ. ಈ ವ್ರತವೇ ಸೀತೆಯನ್ನು ಬಲಾತ್ಕಾರಿಸಲು ಆತನಿಗೆ ಅಡ್ಡಿಯುನ್ನುಂಟುಮಾಡುತ್ತದೆ. ತನ್ನ ವ್ರತ ಪರಿಪಾಲನೆ ಆತನಿಗೆ ಮುಖ್ಯವಾಗುತ್ತದೆಯೇ ಹೊರತು ಸ್ತ್ರೀಮೋಹವಲ್ಲ. ಆದರೂ ಇಲ್ಲಿ ಯೋಚಿಸಬೇಕಾದ ವಿಷಯವೆಂದರೆ ಆತ ಸ್ತ್ರೀಮೋಹಿಯಾಗಿದ್ದ. ಒಲಿದು ಬಂದ ಹೆಣ್ಣನ್ನು ಭೋಗಿಸಬಹುದು. ಆದರೆ ಬಲಾತ್ಕಾರ ಮಾಡುವಂತಿಲ್ಲ ಎನ್ನುವುದು. ಬಹುಶ: ರಾವಣ ತನ್ನಲ್ಲಿ ಅಳವಡಿಸಿಕೊಂಡ ಈ ನೀತಿಯೇ ಸೀತೆಗೆ ರಕ್ಷಾಕವಚದಂತಾಯಿತು. ವ್ರತನಿಷ್ಠೆಯಿಲ್ಲದಿದ್ದರೆ ಸೀತೆಯನ್ನು ಬಲಾತ್ಕಾರ ಮಾಡುತ್ತಿದ್ದನೋ ಏನೋ ಎಂಬ ಪ್ರಶ್ನೆ ಒಂದೆಡೆಯಾದರೆ ಇನ್ನೊಂದು ಕಡೆ ಆತನಿಗೆ ಒಲಿದು ಬಂದ ನಳಕೂಬರನ ಮಡದಿಯನ್ನು ಆತ ಬುದ್ಧಿವಾದ ಹೇಳಿ ಕಳುಹಿಸುವುದು ಆತನ ಒಳ್ಳೆಯತನದ ಪರಮಾವಧಿಯೇ ಅಥವಾ ಅವನ ಇನ್ನೊಂದು ಮುಖವೇ ಎಂದು ಯೋಚಿಸಬೇಕಾಗುತ್ತದೆ.

ಇಲ್ಲಿ ನಾವು ಎರಡು ಸಂಗತಿಗಳನ್ನು ಗಮನಿಸಬೇಕಾಗುತ್ತದೆ. ಒಂದು ಉಪರಂಭೆಯ ವಿಷಯ, ಇನ್ನೊಂದು ಸೀತಾಪಹರಣದ ಸಂದರ್ಭ. ಉಪರಂಭೆಯ ಸಂಗತಿಯನ್ನು ನೋಡಿದರೆ ರಾವಣ ಬಹಳ ಎತ್ತರಕ್ಕೆ

ನಿಲ್ಲುತ್ತಾನೆ. ನಾಗಚಂದ್ರ ಸೃಷ್ಟಿಸಿದ ಉಪರಂಭೆಯ ಕಥೆ ರಾವಣ ಹೆಣ್ಣನ್ನು ಆಸೆ ಪಟ್ಟವನಲ್ಲ ಎಂಬುದನ್ನು ಸಾಬೀತು ಪಡಿಸಲೋಸುಗ ಸೃಷ್ಟಿಸಿದಂತಿದೆ. ನಳಕೂಬರನ ರಾಜಧಾನಿ ದುರ್ಲಂಘ್ಯಪುರವನ್ನು ರಾವಣನು ಮುತ್ತಿದಾಗ ಅವನಲ್ಲಿ ಬಹುಕಾಲದಿಂದ ಮೋಹಗೊಂಡಿದ್ದ ನಳಕೂಬರನ ಹೆಂಡತಿ ಉಪರಂಭೆ ಅವನಲ್ಲಿಗೆ ದೂತಿಯನ್ನು ಕಳುಹಿಸುತ್ತಾಳೆ. ರಾವಣನು ಪುರಪ್ರವೇಶಕ್ಕೆ ಅವಳಿಂದ ಅವಕಾಶವನ್ನು ಕಲ್ಪಿಸಿಕೊಂಡರೂ ಅವಳಲ್ಲಿ ಕಾಮವಶನಾಗುವುದಿಲ್ಲ. ಅವಳು ಅಪ್ರತಿಮ ಚೆಲುವೆ. "ಪೋಲಿಪೊಡೆ ರಂಭೆಗಗ್ಗಳಂ ಚೆಲ್ವೊಂದಾರುಪಮೆಗೆ ಪೆರನಿಪಳ್" ಎಂಬ ವರ್ಣನೆಯಲ್ಲಿ ಅವಳೆಷ್ಟು ಸೌಂದರ್ಯವತಿ ಎನ್ನುವುದು ತಿಳಿಯುತ್ತದೆ. ಇಂತಹ ಚೆಲುವೆಯನ್ನು ತಿರಸ್ಕರಿಸಿದ ರಾವಣ ಪರಿಶುದ್ಧ ಎನ್ನುವುದನ್ನು ಜೈನರಾಮಾಯಣದಲ್ಲಿ ಹೇಳಿದ್ದಾನೆ ನಾಗಚಂದ್ರ. ಅಷ್ಟೇ ಅಲ್ಲ ಅವಳಿಗೆ ಬುದ್ಧಿವಾದವನ್ನು ಹೇಳುತ್ತಾನೆ.

> **ರಹಸ್ಯದಿಂದಾಕೆಯಂಕರೆದು, ನೀನ್**
> **ವಿಶುದ್ಧಕುಲದಕುಶಧ್ವ**
> **ಜಂಗಂ ಮಧುಕಾಂತೆಗಂ ಪುಟ್ಟಿದುದರಿಂ**
> **ನಿಜಕುಲಾಚಾರಮಂ**
> **ಬಗೆದು ಶೀಲಪರಿಪಾಲನಮಂ ಮಾಳ್ಪುದು,**
> **ಅಂತಲ್ಲದೆಯುಂ**
> **ನೀನೆನಗೆ ವಿದ್ಯೋಪದೇಶಂಗೆಯ್ದುದರಿಂ**
> **ಗುರುವಾದೆ, ಪೆರ**
> **ತೇನುಮಂ ಬಗೆಯದೆ ನಳಕೂಬರನೊಳ್**
> **ಕೂಡಿ ಸುಖಮಿರು**

ಎಂದು ಆಕೆಗೆ ಧರ್ಮೋಪದೇಶ ಮಾಡಿ ನಳಕೂಬರನಲ್ಲಿಗೆ ಕಳುಹಿಸಿ ಆತನ ರಾಜ್ಯವನ್ನು ಕೂಡಾ ಹಿಂದಿರುಗಿಸುತ್ತಾನೆ.

ರಾವಣ ಪರಾಕ್ರಮಿಯಾಗಿದ್ದನು. ಆತ ಇಂದ್ರ, ಯಮ, ವರುಣ, ನಳಕೂಬರ, ಸಹಸ್ರಬಾಹು ಮುಂತಾದ ಖೇಚರ ರಾಜರನ್ನು ಗೆಲ್ಲುತ್ತಾನೆ. ಆತ ಎಷ್ಟು ಪರಾಕ್ರಮಿಯೋ ಅಷ್ಟೇ ನಯ ವಿನಯವುಳ್ಳವನಾಗಿದ್ದನು.

ತನ್ನ ಭುಜಬಲ, ವಿದ್ಯಾಬಲ, ನೀತಿಬಲಗಳಿಂದ ರಾವಣನು ಅಜೇಯನಾಗಿ ಮೆರೆಯುತ್ತಿದ್ದನು. ಇದೊಂದು ಪುಟ್ಟ ಪ್ರಸಂಗವಾದರೂ ರಾವಣನ ಚರಿತ್ರೆಗೆ ಪುಟವಿಟ್ಟ ಕಳಸದಂತಿರುವ ಮಹತ್ವದ ಸಂಗತಿಯೂ ಹೌದು. ಈ ಹಿಂದೆ ಶ್ರೀಪ್ರಭೆಯನ್ನು ಆತ ಕೇಳಿ ವರಿಸಿದ್ದ. ಮಂಡೋದರಿಯನ್ನು ಆತ ವಿವಾಹವಾಗಿದ್ದಾನೆ. ಅನೇಕ ಕನ್ಯೆಯರು ಆತನಿಗೆ ಒಲಿದು ಬಂದಿದ್ದಾರೆ. ಆದರೆ ಪರಸ್ತ್ರೀಯನ್ನು ಆತ ಒಲ್ಲೆ ಎಂದಿದ್ದಾನೆ. ಪರಸ್ತ್ರೀ ಮೋಹ ಎಲ್ಲಿಯೂ ಕಾಣುವುದಿಲ್ಲ. ಅದೇ ರೀತಿ ಉಪರಂಭೆಯ ಅಸಾಧಾರಣ ಚೆಲುವಿಗೂ ಮಾರುಹೋಗದೇ ಅವಳಿಗೇ ಬುದ್ಧಿ ಹೇಳುವ ನಾಗಚಂದ್ರನ ರಾವಣ ಶುದ್ಧ ಮನಸ್ಸಿನ, ಪರಿಶುದ್ಧಾತ್ಮದ ಸಾಕಾರ ಮೂರ್ತಿಯಾಗಿ ಕಂಗೊಳಿಸಿದ್ದಾನೆ. ಈ ಎಲ್ಲಾ ಒಳ್ಳೆಯ ಗುಣಗಳಿದ್ದ ರಾವಣ ಸೀತೆಯನ್ನು ಅಪಹರಿಸಿ ತನ್ನ ಚಾರಿತ್ರ್ಯಕ್ಕೆ ಕಳಂಕವನ್ನು ತಂದುಕೊಳ್ಳುತ್ತಾನೆ.

'ಸೀತಾಪಹರಣ' ಇದು ರಾವಣನ ಜೀವನದಲ್ಲಿ ಮಹತ್ತರವಾದ ತಿರುವು. ತಾನು ಚಿತ್ರಿಸಿರುವ ರಾವಣನನ್ನು ಸೀತಾಪಹರಣದ ಸಂದರ್ಭದಲ್ಲಿ 'ಪಾಣ್ಬನ್ ಪಾತಕನ್' ಎಂದು ಕರೆಯುತ್ತಾನೆ ಕವಿ. "ರಾವಣನ ಸಚ್ಚಾರಿತ್ರ್ಯ ಒಮ್ಮೆಲೇ ಕುಸಿದು ಬೀಳುವಾಗ ಕವಿಯ ಮನಸ್ಸು ನೊಂದಿದೆ; ಧರ್ಮದೃಷ್ಟಿ ಜಾಗೃತವಾಗಿದೆ. ತಾನು ಚಿತ್ರಿಸಲಿರುವ ಪ್ರತಿನಾಯಕ ಎಷ್ಟು ಎತ್ತರದಿಂದ ಎಷ್ಟು ಆಳಕ್ಕೆ ಬೀಳುವನೆಂಬುದು ಮೇಲಿನ ವಿಶೇಷಣಗಳ ಪ್ರಯೋಗದಿಂದ ಓದುಗನ ಮನದ ಮೇಲೆ ಮೂಡಿಸಿದ್ದಾನೆ. ಸೀತೆಯ ಮೇಲಿನ ಮೋಹದಿಂದ ರಾವಣ ಏನೆಲ್ಲ ಮಾಡಬಹುದೋ ಅದೆಲ್ಲವನ್ನು ಮಾಡುವುದು ಅವನ ಇನ್ನೊಂದು ಮುಖದ ಪರಿಚಯವನ್ನು ಮಾಡಿಸುತ್ತದೆ. ಹೇಗಾದರೂ ರಾವಣನಿಗೆ ಸೀತೆಯನ್ನು ಒಲಿಸಿಕೊಳ್ಳಬೇಕಾಗಿದೆ. ಮೊದಲು ಓಲೈಸುವ ಪ್ರಯತ್ನ, ನಂತರ ತನ್ನ ಸಿರಿವಂತಿಕೆ ಮರುಳಾಗಿಸುವ ಯತ್ನ, ಕೊನೆಗೆ ಬಹುರೂಪಿಣೀ ವಿದ್ಯೆ ತನ್ನಲ್ಲಿನ ಈ ಎಲ್ಲ ಅಸ್ತ್ರಗಳನ್ನು ಪ್ರಯೋಗಿಸಿದರೂ ಪ್ರಯೋಜನವಾಗುವುದಿಲ್ಲ. ಅರಣ್ಯದಲ್ಲಿ ಅಲೆದಾಡಿಸುವ ರಾಘವನಿಂದೇನು ಸುಖ ದೊರೆದೀತು ಎಂದು ತನ್ನ ಐಶಾರಾಮದ ಬಗ್ಗೆ ಹೇಳಿಕೊಳ್ಳುತ್ತಾನೆ ರಾವಣ.

ಸೀತೆಯ ವ್ಯಾಮೋಹದಿಂದ ವಿವಶನಾಗಿ ಹೇಗಾದರೂ ಅವಳನ್ನು ವಶೀಕರಿಸಬೇಕೆಂಬ ಪ್ರೇಮೋನ್ಮಾದದ ಆವೇಶದಲ್ಲಿದ್ದಾಗ ತನ್ನ ಸುಖ ಸಾಮ್ರಾಜ್ಯದ ವಿಲೋಭಿಗಳನ್ನೆಲ್ಲ ಅವಳ ಮುಂದೆ ಒಡ್ಡಿ ಆಡಿದ ಮಾತುಗಳಲ್ಲಿ ಕಾಮುಕತೆಯ ಘೋರ ಸತ್ಯವಿದೆ"

ಅದರೆ "ಅನುನಯಶತಂಗಳಿಂ ನುಡಿ/ದನುವಶೆ ಮಾಡಲ್ವಿಯಚ್ಚರೇಂದ್ರನುಮೇನಾ-
ರ್ತನೆ ಜನಕಜೆಯಂ ಗಗನಮ/ನನುಲೇಪಂಗೆಯ್ದೊಡಲ್ಲಿ ಮಸಿ
ಪತ್ತುಗುಮೇ//179//

ಎಷ್ಟೇ ಸಿರಿವಂತಿಕೆಯಿದ್ದರೂ ಸೀತೆ ಮರುಳಾಗುವವಳಲ್ಲ. ಅದನ್ನೇ ನಾಗಚಂದ್ರ ಗಗನಕ್ಕೆ ಮಸಿ ಬಳಿದರೆ ಅದು ಕಪ್ಪಾಗುವುದೇ ಎಂದು ಪ್ರಶ್ನಿಸುವುದು ಅವಳ ನಿರ್ವಿಕಾರ ಭಾವವನ್ನು ತೋರಿಸುತ್ತದೆ. ಅವನ ಮಾತಿಗೆ ಕೋಪಗೊಂಡ ಆಕೆ ತನ್ನ ಕ್ರೋಧಾಗ್ನಿಯನ್ನು ಮಾತಿನಿಂದಲೇ ಉಗುಳುತ್ತಾಳೆ.

"ಆ ದುರಾತ್ಮನ ದುರುಕ್ತಿಗೆ ಜನಕಸುತೆ ಕಡುಮುಳಿದುಂ ಮುನಿಸಂ ಮೊಗಕ್ಕೆ ತಾರದೆ,

ನುಡಿಯಲ್ತಕ್ಕುದೆ ಪಾರಿದಪ್ಪಿ ಪರಿಗಂ ಪಾಪಕ್ಕಮುಳ್ಳಳ್ಕದೀ
ನುಡಿಯಂ ಚಿ: ಪರದಾರಮನ್ಯ್ಯಯನಸ್ಥಾನಂ ಪೆರರ್ಮಿಂದ ನೀ
ರ್ಮುಡಿದುತ್ಫುಲ್ಲಕದಂಬಕಂ ತೊಡೆದ ಕಾಶ್ಮೀರಾಂಗಹಾರಾದಿಕಂ
ಮಡಗೂರ್ಬಿೀರುಡೆ ಬಾಯ ತಂಬುಲಮಿವಸ್ಪೃಶ್ಯಂಗಳೇನಲ್ಲಮೇ//181//

ಪರಸತಿ, ಪರರ ಶಯನಸ್ಥಾನ, ಪರರು ಮಿಂದ ನೀರು, ಅವರು ಮುಡಿದ ಹೂಮಾಲೆ, ಲೇಪಿಸಿ ತೆಗೆದ ಅಂಗರಾಗಾದಿಗಳು, ಎಂಜಲುಕೂಳು, ಹಳೆಯ ಬಿಟ್ಟ ಬಟ್ಟೆ, ಬಾಯ ತುಂಬ ತಾಂಬುಲ ಇವುಗಳೆಂದೂ ಅಸ್ಪೃಶ್ಯಗಳಲ್ಲವೇ? ಎಂದು ಪ್ರಶ್ನಿಸುವುದರಲ್ಲಿ ಅವಳಳೊಳಗಿನ ಸ್ತ್ರೀವಾದಿ ನಿಲುವು, ಪತಿವ್ರತ ಪರಿಪಾಲನೆ ಎದ್ದು ಕಾಣುತ್ತದೆ.

ಸೀತೆಯ ಕರುಳು ಹಿಂಡುವಂತಹ ಮಾತುಗಳಿಗೆ, ಅವಳ ಕಣ್ಣೀರಿಗೆ ರಾವಣನ ಮನಸ್ಸು ಕರಗುವುದಿಲ್ಲ. ತಾನು ಹಿಡಿದ ಪರಾಂಗನಾವಿರತಿ ವ್ರತದ ಭಂಗವನ್ನು ಬಗೆಯದ ಸೀತಾವ್ಯಾಮೋಹ ಅವನ ಮನವನ್ನು

ಮುತ್ತಿಕೊಂಡಿದೆ. "ಸೀತೆ ನಾಲಿಗೆ ಕಿತ್ತು ಸಾವೆನೆಂದು ಪರಿಚ್ಛೇದಿಸಿ ನುಡಿಯಲು ತನ್ನ ವ್ರತಪರಿಪಾಲನೆಯೂ ಸಾಧಿಸಬೇಕು. ಸೀತೆಯೂ ತನ್ನವಳಾಗಬೇಕು ಎಂಬ ಇಬ್ಬಗೆಯ ನಿಲುಮೆ ಅವನದು. ಅಂತೆಯೇ ಆವ ತೆರದೊಳು ಒಡಂಬಡಿಸುವುದಾವಗಹನವೆಂದು ಕೆಲಕಾಲ ತಳ್ಳಲು ಅನಿವಾರ್ಯವಾಗಿ ನಿರ್ಧರಿಸುವನು. ಪೆಂಡಿರು ನಿಸರ್ಗರಾಗಿಗಳೆಂದುಕೊಂಡ ರಾವಣ ತಾನೇ ನಿಸರ್ಗರಾಗಿಯಾಗಿರುತ್ತಾನೆ. ಸೀತೆ ಅದಕ್ಕೆ ಅಪವಾದವೆಂಬ ಅರಿವು ಮೂಡದು. **'ಏತೆರ್‌ದಿಂದಮ್ರ್‍ಂತೊಡಂ ಬಡಿಸುವೆ... ಮದೀಯ ಮನೋಜತಾಪಂ ಕಿಡಿಸುವೆ'** ಎಂಬುದೇ ಅವನ ಏಕಾಕಿ ಕಳವಳ. ಉಪರಂಭೆ ತಾನಾಗಿ ಒಲಿದು ಬಂದಾಗ ತಿರಸ್ಕರಿಸಿದ ರಾವಣ ಇವನೇನಾ ಎಂಬ ಪ್ರಶ್ನೆ ಓದುಗನಿಗೆ ಉದ್ಭವವಾಗಬಹುದು.

ಕೊನೆಯ ಹಂತದಲ್ಲಿ ನಯವಾದ ಮಾತುಗಳಿಂದ ಈಕೆಯನ್ನು ವಶಪಡಿಸಿಕೊಳ್ಳುವುದು ಸಾಧ್ಯವಿಲ್ಲ ಎಂದು ಅರಿತ ಆತ ಭಯವನ್ನು ತೋರಿಸಿ ವಶಪಡಿಸಿಕೊಳ್ಳುವ ಯೋಚನೆ ಬಂದದ್ದೇ ತಡ, ವಿದ್ಯಾಪತಿಯಾದ ಅವನು ಮಾಯಾ ವಿದ್ಯೆಯನ್ನು ಮನಸ್ಸಿನಲ್ಲಿ ಸ್ಮರಿಸಿದನು. ಬಹುರೂಪಿಣೀವಿದ್ಯೆಯನ್ನು ಸಾಧಿಸಿಕೊಂಡು ಬಂದ ರಾವಣ ಈಗ ತನಗಿಂತ ಶಕ್ತಿವಂತರೇ ಇಲ್ಲ ಎಂದು ಬೀಗುತ್ತಿದ್ದಾನೆ. ಅದೇ ಯುದ್ಧ ಭೂಮಿಗೆ ತೆರಳಲು ಅಣಿಯಾಗಿದ್ದವನು ಅದರ ಮೊದಲೊಮ್ಮೆ ಸೀತೆಯ ಮುಖವನ್ನು ನೋಡಿ ಬರುವೆ **"ಜಾನಕೀಮುಖಾಬ್ಜಮನವಲೋಕಿಸಲ್"** ಎಂದು ಬಂದವನು **"ಇನ್ನೆನಗಸಾಧ್ಯಮಪ್ಪ ಮರುವಕ್ಕಮಿಲ್ಲ.. ರಾಮನಾಸೆಯಂ ಬಿಡು"** ಎಂದು ನುಡಿದಾಗ ಸೀತೆ ಮೂರ್ಛಿತಳಾಗುತ್ತಾಳೆ. ಆಕೆಯ ಮೂರ್ಛಿತಸ್ಥಿತಿಯನ್ನು ನೋಡಿ ರಾವಣನಿಗೆ ಆಕೆಯ ಬಗೆಗಿದ್ದ ವ್ಯಾಮೋಹ ಕರಗಿಹೋಗುತ್ತದೆ. ತನ್ನ ಕೃತ್ಯಕ್ಕೆ ಪಶ್ಚತ್ತಾಪ ಪಟ್ಟುಕೊಳ್ಳುತ್ತಾನೆ. ಸೀತೆಯನ್ನು ಕಂಡು ಕದಡಿ ಕಲಕಿದ್ದ ಆತನ ಮನಸ್ಸು ಈಗ ಆಕೆ ಸ್ಮೃತಿತಪ್ಪಿ ಬಿದ್ದಿರುವುದನ್ನು ನೋಡಿ ಪರಿವರ್ತನೆಗೊಳ್ಳುತ್ತದೆ. ಈ ಸನ್ನಿವೇಶವನ್ನು ಎಂ.ಎಂ. ಕಲಬುರ್ಗಿ ಅವರು "ಸೀತೆಯ ಪ್ರಥಮ ದರ್ಶನದಿಂದ "ಕಲಂಕಿ ಕದಡಿದ" ಆತನ ಮಾನಸ ಸರೋವರ ಈಗ "ಕದಡಿದ ಸಲಿಲಂ ತನ್ನಿಂ ತಾನೆ ತಿಳಿವಂತೆ"

ಶುದ್ಧ, ಪರಿಶುದ್ಧಗೊಂಡಿತು. ಪಶ್ಚಾತ್ತಾಪದ ತೀರ್ಥಜಲದಲ್ಲಿ ಮಿಂದು ರಾವಣ, ಈಗ ಪರಿಶುದ್ಧನಾಗಿದ್ದಾನೆ. ಆದರೆ "ಸೌಮಿತ್ರಿಯಂ ರಾಮನಂ.. ರಣಾಗ್ರದೊಳ್ ಪಿಡಿದು ತಂದಾಂ ಕೊಟ್ಟಪೆಂ ಸೀತೆಯಂ" ಎಂಬ ಅಭಿಮಾನದ ತೆಕ್ಕೆಗೆ ಬಿದ್ದು, ತಿರುಗುಬಾಣದಂತೆ ಬಂದ ತನ್ನ ಚಕ್ರದಿಂದಲೆ ದುರಂತ ಮರಣವನ್ನಪ್ಪಿದ" ಎಂದು ಬಹಳ ಸುಂದರವಾಗಿ ವರ್ಣಿಸಿದ್ದಾರೆ. (ಎಂ.ಎಂ.ಕಲಬುರ್ಗಿ, ಮಾರ್ಗ-1, ರಾವಣನ ಜಲಧಾರೆ, ಪು-500) ಈ ಗ್ರಂಥದಲ್ಲಿ ರಾವಣನನ್ನು, ಆತನ ಪರಾಕ್ರಮವನ್ನು ವರ್ಣಿಸುವ ನಾಗಚಂದ್ರ ಜಲದ ಕುರಿತು ಬರೆದ ವರ್ಣನೆಗಳನ್ನು ಕಲಬುರ್ಗಿಯವರು ತಮ್ಮ ಜಲವರ್ಣದ ರಾವಣ ಲೇಖನದಲ್ಲಿ ಮಾರ್ಮಿಕವಾಗಿ ವಿಶ್ಲೇಷಿಸಿದ್ದಾರೆ.

ನಾಗಚಂದ್ರ ಸೀತೆಯ ಅಪಹರಣದ ನಂತರ ರಾವಣನ ಮನದ ತೊಳಲಾಟವನ್ನೂ ಅಷ್ಟೇ ಪರಿಣಾಮಕಾರಿಯಾಗಿ ಮೂಡಿಸಿದ್ದಾನೆ. ರಾವಣನ ಮನಸ್ಸಿನಲ್ಲಿ ಸರಿ ತಪ್ಪುಗಳ ಚಿಂತೆಗಿಂತಲೂ ಕಾಡುವ ಭಯ ಮಡದಿಯದ್ದು. ಸೀತೆಯ ಮೋಹದಿಂದ ಮರಗಟ್ಟಿ ಹೋಗಿರುವ ರಾವಣನ ಪರಿಸ್ಥಿತಿಯನ್ನು ನೋಡಿ ಮಂಡೋದರಿ ಕಾರಣ ಕೇಳುತ್ತಾಳೆ. ಆದರೆ ರಾವಣ 'ನಿನಗೆನ್ನ ತೆರನರಿಪಲಾಗದು' ಎನ್ನುತ್ತಾನೆ. ಇದರ ಹಿಂದೆ ತಾನು ಮಾಡಿದ್ದು ಸರಿಯಲ್ಲ ಎನ್ನುವ ಅರಿವು ಅವನಿಗಾಗಿದೆ. ತನ್ನ ಹೀನ ಕೃತ್ಯವನ್ನು ಮಡದಿಗೆ ಹೇಳುವುದಾದರೂ ಹೇಗೆ? ಪತಿವ್ರತೆಯಾಗಿರುವ ಆಕೆ ಇದನ್ನು ಹೇಗೆ ಸ್ವೀಕರಿಸಿಯಾಳು ಎಂಬ ಅಳುಕಿದೆ. ಆತನ ಮನಸ್ಥಿತಿಯನ್ನು ಪರಿಣಾಮಕಾರಿಯಾಗಿ ನಾಗಚಂದ್ರ ಚಿತ್ರಿಸಿದ್ದಾನೆ.

ಪರಸ್ತ್ರೀ ಒಲ್ಲೆ ಎನ್ನುತ್ತಲೇ ಬಂದ ರಾವಣ ಸೀತೆಯನ್ನು ಕಂಡೊಡನೆ ವಿಚಲಿತನಾಗುತ್ತಾನೆ. ಇದು ವಿಧಿನಿಯಮ ಎಂದೇ ಭಾವಿಸಬೇಕು.

ಆ ಸಮಯದೊಳ್ ದಶಾಸ್ಯನೊಂದು
ತಣ್ಬುಳಿಲ ತಾಣದೊಳ್ ಬರಸಿಡಿಲ
ಬಳಿವಿಡಿದು ಪೊಳೆವ ಕುಡುಮಿಂಚಿನಂತೆ ಬಲಭದ್ರನ
ಕೆಲದೊಳಿರ್ದ ಸೀತೆಯಂ ಕಂಡು
ಬಲೆ ದೃಷ್ಟಿಗೆ ವಜ್ರದ ಸಂ
ಕಲೆ ಹೃದ್ಯಯಕ್ಕೆನಿಪ ರೂಪವತಿ ಜಾನಕಿ ಕ
ಣ್ಬೊಲದೊಳಿರೆ ಪದ್ಮಪತ್ರದ ಜಲಬಿಂದುವಿನಂತೆ ಚಲಿತಮಾದುದು ಚಿತ್ತಂ ॥43॥

ತನ್ನ ಸುಂದರ ಕಲ್ಪನೆಯಿಂದ ರಾವಣನ ಪಾತ್ರವನ್ನು ಚಿತ್ರಿಸಿರುವ ನಾಗಚಂದ್ರ ಕಟುವಾದ ವಿಮರ್ಶೆಗೂ ಒಳಗಾಗಿದ್ದಾನೆ. ಅಷ್ಟೊಂದು ಉದಾತ್ತ ಮನೋಭಾವದ ರಾವಣನ ಸೃಷ್ಟಿ ಆತನದ್ದು. ಆದರೆ ಸೀತೆಯ ವಿಷಯ ಬಂದಾಗ ಆತನ ಉದಾತ್ತತೆ ಮಾಯವಾಗುತ್ತದೆ. ಪತ್ನಿ ಮಂಡೋದರಿಯಲ್ಲಿ ತನ್ನ ಮನದ ಬೇಗುದಿಯನ್ನು ಹೇಳಲಾರದೆ ಚಡಪಡಿಸುವ ಅವನನ್ನು ನೋಡಿ, ಅವನ ಮೌನವನ್ನು ಅರಿತ ಮಡದಿ ಆತ ಹೆಣ್ಣಿನ ಮೋಹದ ಬಲೆಗೆ ಸಿಕ್ಕಿರಬೇಕೆಂದು ಸರಿಯಾಗಿಯೇ ಗ್ರಹಿಸುತ್ತಾಳೆ. "ಸೀತೆಯ 'ಲಾವಣ್ಯ ಸುಧಾರಸಸೇವನೆ ಸಮನಿಸದಿರೆ ಸಾವು ಸಮನಿಸುಗುಂ' ಎಂಬ ರಾವಣ ಕಾಮುಕನಲ್ಲದೆ ಇನ್ನೇನು? ಕಾಮತೃಷೆ ತಣಿಯದಿದ್ದರೆ ತಾನು ಸಾವೆನೆಂದು ಧರ್ಮಪತ್ನಿಗೇ ಹೇಳುವುದು ರಾವಣನ ಕಾಮುಕತೆಯ ಅತಿರೇಕತೆಗೆ ಸಾಕ್ಷಿ. ಇಲ್ಲಿ ಯಾವುದೂ ಕವಿಯ ಎಚ್ಚರ ತಪ್ಪಿದ ಮಾತುಗಳಿಲ್ಲ. ಉದ್ದೇಶಪೂರ್ವಕವಾದ, ಪರಿಣಾಮಕಾರಿಯಾದ ಮಾತುಗಳು. ರಾವಣನ ಉದಾತ್ತತೆಯನ್ನು ನಿರೂಪಿಸುವ ಸಹಸ್ರಾರ ಮತ್ತು ಇಂದ್ರರ ಬಿಡುಗಡೆ; ಮರುತ್ತನ ಪ್ರಾಣಿಹಿಂಸೆಯನ್ನು ತಡೆದುದು, ಉಪರಂಭೆಯ ಪ್ರಸಂಗಗಳು ಸೀಪಾಹರಣದ ನಂತರ ಬಂದಿದೆ" ಎಂದು ನಾಗಚಂದ್ರ ಕಟು ವಿಮರ್ಶೆಗೆ ಒಳಗಾಗಲು ಕಾರಣ ಎನ್ನುವ ಅಂಶ ತಿಳಿದು ಬರುತ್ತದೆ.

ಇದುವರೆಗೆ ಬಂದ ಎಲ್ಲಾ ರಾಮಾಯಣಗಳಲ್ಲಿಯೂ ಈ ಸನ್ನಿವೇಶ ಸರ್ವೇ ಸಾಮಾನ್ಯವಾದುದರಿಂದ ನಾಗಚಂದ್ರನೂ ಅದನ್ನು ಬಿಡುವಂತಿಲ್ಲ. ಹಾಗಂತ ಅವನಿಗೆ ರಾವಣನನ್ನು ಅಯೋಗ್ಯನನ್ನಾಗಿ ಚಿತ್ರಿಸಲೂ ಮನಸ್ಸಿಲ್ಲ. ಅದ್ದರಿಂದ ಅವನು ಯೋಗ್ಯ, ಧರ್ಮಪರನಾಗಿದ್ದಾನೆ. ಇದಕ್ಕೆ ಮತ್ತಷ್ಟು ರಂಗೇರಿಸಿ ಕಾವ್ಯದಲ್ಲಿ ಉಜ್ವಲವಾಗಿ ಮೂಡಿಸಿದ್ದಾನೆ. ಸೀತಾಪಹರಣದ ಸನ್ನಿವೇಶ, ಸೀತೆಯ ದುಃಖವನ್ನು, ಮನಸ್ಸು ಪರಿವರ್ತನೆಗೊಂಡ ರಾವಣನ ಮನದ ಬೇಗುದಿಯನ್ನು ಈ ಕೃತಿಯಲ್ಲಿ ಮನಂಬುಗುವಂತೆ ಚಿತ್ರಿಸಿದ್ದಾನೆ.

ಹೀಗೆ ರಾಮಚಂದ್ರ ಚರಿತ ಪುರಾಣದ ರಾವಣ ಮೊದಲ ಹಂತದಲ್ಲಿ ಹಾಗೂ ಕೊನೆಯ ಹಂತದಲ್ಲಿ ಉದಾತ್ತ ವ್ಯಕ್ತಿತ್ವದವನಾಗಿ ಮೂಡಿಬಂದಿದ್ದಾನೆ. ಆದರೆ ಮಧ್ಯದ ಹಂತದಲ್ಲಿ ಸೀತೆಯನ್ನು ಕಂಡು ವ್ಯಾಮೋಹಿತನಾಗಿ ತಾನು ಮಾಡಬೇಕಾದ ಕೆಲಸವನ್ನೆಲ್ಲ ಮರೆತ ರಾವಣ

ತನ್ನ ಅಧಃಪತನಕ್ಕೆ, ಅವನತಿಗೆ ತಾನೇ ಕಾರಣನಾಗುತ್ತಾನೆ. ಇದರಿಂದ ಆತ ದುರಂತ ರಾವಣನೆಂದು ಕರೆಸಿಕೊಂಡಿದ್ದಾನೆ. ಇದರ ಬಗ್ಗೆಯೂ ಭಿನ್ನಾಭಿಪ್ರಾಯಗಳಿವೆ.

"ನಾಗಚಂದ್ರನ ಅಧ್ಯಯನ, ಅನುಭವ, ಕಾವ್ಯಶಕ್ತಿ, ವರ್ಣನಾವೈಖರಿ, ಮಾನವ ಹೃದಯದ ಒಳಹೊಕ್ಕು ನೋಡಬಲ್ಲ ಕೌಶಲ ಹಾಗೂ ಕುಸುರಿಗೆಲಸದ ಜಾಣ್ಮೆ"–ಇವೆಲ್ಲ ಕಾವ್ಯದ ಹಲವು ಸನ್ನಿವೇಶಗಳಲ್ಲಿ ಏಕೀಭವಿಸಿ ಸಹೃದಯರ ಮನಸ್ಸನ್ನು ಸೂರೆಗೊಳ್ಳುತ್ತವೆ. ಅದರಲ್ಲಿಯೂ 'ಸೀತಾಪಹರಣ'ದ ಪ್ರಸಂಗ ಮತ್ತು 'ರಾವಣನ ಮನಃಪರಿವರ್ತನೆಯ' ಪ್ರಸಂಗಗಳು ತುಂಬ ಮನೋಜ್ಞವಾಗಿ ಮೂಡಿಬಂದಿವೆ. ನಾಗಚಂದ್ರನ ರಾವಣನ ಪಾತ್ರಕಲ್ಪನೆ ಹೊಸತನದಿಂದ ಕೂಡಿದುದು. ಇಲ್ಲಿ ಅವನ ನಾನಾ ಮುಖಗಳ ಪರಿಚಯವಾಗುತ್ತದೆ. ಸಾಮಾನ್ಯ ಮನುಷ್ಯರಂತೆ ಕಾಮ, ಕ್ರೋಧ ಎಲ್ಲವೂ ಸಹಜವಾಗಿ ಬಂದಿದೆ. ತಪ್ಪಿನ ಅರಿವಾದಾಗ ಪಶ್ಚಾತ್ತಾಪವೂ ಆಗಿದೆ. ಹಾಗಂತ ಅದನ್ನು ಒಪ್ಪಿಕೊಳ್ಳಲು ಅವನೊಳಗಿನ ಹಠ ಬಿಡುತ್ತಿಲ್ಲ. ರಾವಣ ಚಕ್ರವರ್ತಿಯಾಗಿದ್ದವನು. ಹಾಗೇ ಹೀಗೇ ಸೋಲೊಪ್ಪಿಕ್ಕೊಳ್ಳಲಾರ. ಅದು ಅವನ ಘನತೆಗೆ ಕುಂದು ತಂದಂತೆ. ಈ ರಾವಣ ಆಳಕ್ಕಿಳಿದಷ್ಟೂ ಗಹನವಾಗುತ್ತಾನೆ; ಅರ್ಥೈಸ ಹೊರಟಷ್ಟೂ ಕಗ್ಗಂಟಾಗುತ್ತಾನೆ.

ನಾಗಚಂದ್ರನ ರಾವಣನ ಪಾತ್ರಚಿತ್ರಣದ ಕುರಿತು ಅನೇಕ ಜಿಜ್ಞಾಸೆಗಳು ಕಾಡುತ್ತವೆ. ಎತ್ತರದಲ್ಲಿ ಬಾಳಿದ ವ್ಯಕ್ತಿಯೊಬ್ಬನು ಬಿದ್ದ ಬೀಳನ್ನೂ ಅದರಿಂದಾದ ನೋವನ್ನೂ ಇಲ್ಲಿ ಕಾಣುತ್ತೇವೆ. ತನ್ನ ಪೌರುಷ, ಒಳ್ಳೆಯ ಗುಣ, ದಯೆ, ಗಾಂಭೀರ್ಯ, ಸೌಜನ್ಯದಿಂದ ಕೂಡಿತ ಈತ ತನ್ನ ದೌರ್ಬಲ್ಯದಿಂದ ಅವಸಾನ ಹೊಂದುತ್ತಾನೆ. ಸೀತಾ ವ್ಯಾಮೋಹಕ್ಕೆ ಸಿಕ್ಕ ಆತನ ಮನೋದೌರ್ಬಲ್ಯವನ್ನು ನೋಡಿದರೆ ಮೇಲಿನ ಸದ್ಗುಣ ರಾವಣ ಇವನೇನಾ ಎನ್ನುವ ಸಂಶಯವೂ ಮೂಡುತ್ತದೆ. ಒಟ್ಟಿನಲ್ಲಿ ಒಬ್ಬ ವ್ಯಕ್ತಿ ಮಾನಸಿಕವಾಗಿ ದುರ್ಬಲನಾದರೆ ಏನೆಲ್ಲ ದುರ್ಘಟನೆಗಳು ನಡೆಯುಬಹುದು, ಜೀವನ ಯಾವ ಮಟ್ಟದ ದುರಂತಕ್ಕೆ ಕಾರಣವಾಗಬಹುದು ಎನ್ನುವುದಕ್ಕೆ ನಾಗಚಂದ್ರನ ರಾವಣನ ಪಾತ್ರ ಉತ್ತಮ ನಿದರ್ಶನ.

ವಾಙ್ಮಯ ಸೂಚಿ

1. ಡಾ.ಎಚ್. ನರಸಿಂಹಯ್ಯ, ಉಪಕುಲಪತಿ, ಬೆಂಗಳೂರು, 1975
2. ವಿಜಯಾದಬ್ಬೆ, ನಾಗಚಂದ್ರ ಒಂದು ಅಧ್ಯಯನ, ಪು ಸ 63
3. ಆರ್.ಸಿ.ಹೀರೇಮಠ, ನಾಗಚಂದ್ರ ವಿರಚಿತ ಶ್ರೀರಾಮಚಂದ್ರ ಚರಿತಂ
4. ಡಿ.ವಿ.ಶೇಷಗಿರ್ರಿರಾವ್, ನಾಗಚಂದ್ರನ ಕಾವ್ಯ ಸಾಧನೆ,ಪು–259)
5. ಎಸ್.ಎಸ್.ಬ್ಯಾತನಾಳ, ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ , ನಾಗಚಂದ್ರನ ರಾಮಾಯಣ, ಪು–235)
6. ಜಿ.ಎಸ್.ಶಿವರುದ್ರಪ್ಪ(ಪ್ರ. ಸಂ) ನಾಗಚಂದ್ರನ ರಾಮಾಯಣ, ಸಮಗ್ರಕನ್ನಡ ಸಾಹಿತ್ಯ ಚರಿತ್ರೆ, ಪು.129,236, 237), 1975

8 ವಿ.ಜೀ.ಕುಲಕರ್ಣಿ, ನಾಗಚಂದ್ರ, ಪು–113)

9. ಎಂ.ಎಂ.ಕಲಬುರ್ಗಿ, ಮಾರ್ಗ–1, ನಾಗಚಂದ್ರನ ಜಲರಾವಣ, ಪು–498 , 500
10. ಜಿ.ಎಸ್.ಭಟ್ಟ (ಸಂ) ನಾಗಚಂದ್ರ ಒಂದು ಅವಲೋಕನ ಚೇತನ ಬುಕ್ ಹೌಸ್, 1992
11. ವಿ.ಸೀತಾರಾಮಯ್ಯ, (ಸಂ) ನಾಗಚಂದ್ರ ಸಪ್ನ ಬುಕ್ ಹೌಸ್,1976
12. ಆರ್.ಸಿ. ಹೀರೇಮಠ (ಸಂ) ನಾಗಚಂದ್ರ ವಿರಚಿತ ರಾಮಚಂದ್ರಪುರಾಣಂ, ಭಾರತೀಯ ಜ್ಞಾನಪೀಠ ಪ್ರಕಾಶನ, 1975

****

ನಯಸೇನನ ಧರ್ಮಾಮೃತ

– ವಸು ವತ್ಸಲೆ, ಬೆಂಗಳೂರು

ಕಥನ ಸಾಹಿತ್ಯದ ಇತಿಹಾಸವನ್ನು ಪಂಪ ಪೂರ್ವ ಯುಗದಿಂದ ಅರಸುತ್ತಾ ಹೋದರೆ ಇಲ್ಲಿಯವರೆಗೂ ದೊರೆತಿರುವ ಕನ್ನಡ ಗ್ರಂಥಗಳಲ್ಲಿ ಅತ್ಯಂತ ಪ್ರಾಚೀನವಾದದ್ದು ಶ್ರೀವಿಜಯನ 'ಕವಿರಾಜಮಾರ್ಗ'. ಈ ಗ್ರಂಥ ಕ್ರಿಸ್ತಶಕ 841 ರಿಂದ 877 ರವರೆಗೆ, ಅದಕ್ಕಿಂತಲೂ ಹಿಂದೆಯೂ ಕನ್ನಡದಲ್ಲಿ ಗದ್ಯ ಕಥೆಗಳು ಇದ್ದವೆಂದು ತಿಳಿಸುತ್ತದೆ. ಕನ್ನಡಕ್ಕೆ ಕಥನ ಕಲೆ ಬಹಳ ವಿಶಿಷ್ಟವಾದದ್ದು ಮತ್ತು ಹಳೆಯದೆಂದು ಹೇಳಬಹುದು. ಹಲ್ಮಿಡಿ ಶಾಸನದಿಂದ ಹಿಡಿದು ಸುಮಾರು 18 ನೇ ಶತಮಾನದವರಿಗೂ ಅಸಂಖ್ಯಾತ ಶಾಸನಗಳು ದೊರಕಿರುವುದು ಗದ್ಯ ಸಾಹಿತ್ಯದಲ್ಲೇ. ಆದ್ದರಿಂದ ಕಥನ ಪರಂಪರೆಗೆ, ಇತಿಹಾಸಕ್ಕೆ ಕುರುಹುಗಳನ್ನು ನೀಡುವಲ್ಲಿ ಶಾಸನಗಳೊಂದಿಗೆ ಜಾನಪದ ಕಥೆಗಳು ಪ್ರಮುಖವಾಗಿವೆ. ಪಂಪನ ಅನಂತರ ಬಂದ ಚಂಪು ಕಾವ್ಯಗಳಿಂದ ಕಥೆಯ ಬೆಳವಣಿಗೆ ದೃಷ್ಟಿ ವಿವರಗಳು ಅತ್ಯಂತ ಗಣನೀಯವಾಗಿ ಮುಖ್ಯವನಿಸಿದರೂ, ದುರ್ಗಸಿಂಹ, ನಯಸೇನರ ಚಂಪು ಕೃತಿಗಳಲ್ಲಿನ ಗದ್ಯದಲ್ಲಿರುವ ಸ್ಪಷ್ಟತೆ, ಹೃದ್ಯತೆ ವಿಶೇಷವಾದಂಥವು. ಜೈನ ಕಥೆಗಳನ್ನು ಒಳಗೊಂಡ ವಡ್ಡಾರಾಧನೆ

ಮತ್ತು ದುರ್ಗಸಿಂಹನ 'ಪಂಚತಂತ್ರ' ಗದ್ಯ ಪರಂಪರೆಗೆ ಬಹು ಮುಖ್ಯ ಕೃತಿಗಳೆನಿಸುತ್ತವೆ. ಪಂಚತಂತ್ರದಲ್ಲಿ ಪದ್ಯಕ್ಕಿಂತ ಗದ್ಯವೇ ಹೆಚ್ಚೆನಿಸಿದರೂ, ದುರ್ಗಸಿಂಹ ಕಥಾರೂಪಣೆಗೆ ಪ್ರಾಶಸ್ತ್ಯ ನೀಡಿ, ಪದ್ಯಕ್ಕಿಂತ ಗದ್ಯಕ್ಕೆ ಹೆಚ್ಚು ಒತ್ತು ನೀಡುವುದು ಸೂಕ್ತವೆಂಬುದನ್ನು ತನ್ನ ಕೃತಿಯಲ್ಲಿ ತೋರಿಸಿಕೊಟ್ಟಿದ್ದಾನೆ. ಇವನ ಗದ್ಯ ಪ್ರಕಾರವು ನಾಣ್ನುಡಿ ಮತ್ತು ಜಾಣ್ನುಡಿಗಳನ್ನು ಒಳಗೊಂಡ ಪರಿಯನ್ನು ವಿವೇಚಿಸಿದ ನಯಸೇನನೂ ಧರ್ಮಾಮೃತದಲ್ಲಿ ಇದೇ ಸಂಪ್ರದಾಯಗಳನ್ನು ರೂಢಿಸಿಕೊಂಡಿರುವುದು ಕಂಡುಬರುತ್ತದೆ.

ನಯಸೇನ

12ನೆಯ ಶತಮಾನದ ಮೊದಲ ಭಾಗದಲ್ಲಿ ಬರುವ ನಯಸೇನ ಆಧುನಿಕ ಪೂರ್ವ ಕನ್ನಡ ಸಾಹಿತ್ಯದ ಅಪ್ಪಟ ದೇಸೀ ಕವಿ. ಧರ್ಮಾಮೃತ ಕೃತಿ ಒಂದೇ ಅಲ್ಲದೆ ನಯಸೇನನು ಮತ್ತೊಂದು ವ್ಯಾಕರಣ ಗ್ರಂಥವನ್ನು ಬರೆದಿರುವಂತೆ ಕಂಡುಬರುತ್ತದೆ. ಜನ ಭಾಷೆಗೆ ಒತ್ತು ಕೊಟ್ಟ ನಯಸೇನನು ವ್ಯಾಕರಣ ಗ್ರಂಥವನ್ನು ಸರಳಗೊಳಿಸಿ ಬರೆದಿದ್ದಿರಬಹುದು. ಆದರೆ ಅದು ಇದುವರೆವಿಗೂ ದೊರೆತ್ತಿಲ್ಲದುದು ವಿಷಾದವೇ ಸರಿ. ನಯಸೇನನು 1112ರಲ್ಲಿ ಧಾರವಾಡ ಜಿಲ್ಲೆಯಲ್ಲಿರುವ ಮುಳಗುಂದ ಎಂಬ ಊರಿನಲ್ಲಿ ಇದ್ದವನು, ಧರ್ಮಾಮೃತ ಬರೆದಾಗ ಕವಿ ಸಂನ್ಯಾಸಿಯಾಗಿದ್ದಿರಬೇಕೆಂಬುದಕ್ಕೆ ಅವನ ಗ್ರಂಥದಲ್ಲಿಯೇ ಉಲ್ಲೇಖವಿದೆ. ಇದರ ಹೊರತಾಗಿ ಇವನ ತಂದೆ ತಾಯಿ, ಆಶ್ರಯದಾತ ಮುಂತಾದವರ ವಿಚಾರಗಳನ್ನೇನನ್ನೂ ಹೇಳಲಿಲ್ಲ. ಹಿಂದೆ ಕವಿಗಳು ರಾಜಾಶ್ರಯ ಪಡೆಯುವುದು ವಾಡಿಕೆಯಾಗಿತ್ತು. ಆದರೆ ನಯಸೇನ ಯಾವ ರಾಜಾಶ್ರಯದಲ್ಲೂ ಇದ್ದಂತೆ ಕಂಡುಬರುವುದಿಲ್ಲ. ತನ್ನನ್ನು ತಾನು 'ನಯಸೇನ' ನಯಸೇನ ದೇವ, 'ನಯಸೇನ ಮುನೀಂದ್ರ' ಎಂದು ವಿಧ ವಿಧವಾಗಿ ಕರೆದುಕೊಂಡಿದ್ದಾನೆ. ಇವನಿಗೆ ಸುಕವಿನಿಕರ ಪಿಕ ಮಾಕಂದ" "ವಾತ್ಸಲ್ಯ ರತ್ನಾಕರ", "ಸುಕವಿ ಜನಮನಃ ಪದ್ಮಿನಿ ರಾಜ ಹಂಸ", "ನೂತನ ಕವಿತಾ ವಿಳಾಸ" ಎಂಬ ಬಿರುದಗಳಿದ್ದ ಬಗ್ಗೆ ಆತನ ಗ್ರಂಥವೇ ಸಾಕ್ಷೀಕರಿಸುತ್ತದೆ.

ಧರ್ಮಾಮೃತ ರಚನೆಗೆ ಪ್ರೇರಣೆ : ಕ್ರಿ.ಪೂರ್ವ 3ನೇ ಶತಮಾನದಲ್ಲಿ ಭದ್ರ ಬಾಹುಮುನಿಗಳು ದಕ್ಷಿಣ ದೇಶಕ್ಕೆ ಬಂದಾಗ ಕರ್ನಾಟಕದಲ್ಲಿ ಜೈನ ಮತವು ಪ್ರಸಿದ್ಧವಾಗಿತ್ತು. ಮತ ಪ್ರಚಾರಕ್ಕೆ ಜನಸಾಮಾನ್ಯರ ಭಾಷೆಯ ಅತ್ಯುತ್ತಮವಾದ ಸಾಧನವೆಂಬುದನ್ನು ಅರಿತು, ಮುನಿಗಳು, ಕವಿಗಳು, ಪಂಡಿತರು ಕನ್ನಡದಲ್ಲಿಯೇ ಗ್ರಂಥ ರಚನೆಗೆ ಮುಂದಾದರು. ಜೈನರು ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಕೆಲಸ ಮಾಡಿದವರಲ್ಲಿ ಮೊದಲಿಗರು. ತಮ್ಮ ಮತವನ್ನು ಪಸರಿಸುವ ನಿಟ್ಟಿನಲ್ಲಿ ಧರ್ಮದ್ಯೋತಕವಾದ ಕಥೆಗಳನ್ನು ಬರೆದರು. ಇದರಲ್ಲಿ ಮೊದಲಗೊಂಡು ಅನೇಕ ಪುರಾಣಗಳು ಕನ್ನಡದಲ್ಲಿ ರಚಿತವಾದವು. 'ತ್ರಿಶಷ್ಠಿಶಲಾಕ ಪುರುಷ ಪುರಾಣ' ಎಂಬ ಹೆಸರಿನ 63 ಮಹಾಪುರುಷರ ಜೀವನ ಚರಿತ್ರೆಗಳು ರಚನೆಯಾದ ಬಗ್ಗೆ ಇಲ್ಲಿ ಸ್ಮರಿಸಬಹುದು. ಅಮೋಘವರ್ಷನ ಕಾಲದಲ್ಲಿ ಜಿನಸೇನ ಎಂಬವನು ಮಹಾಪುರಾಣವೆನಿಸಿದ 'ತ್ರಿಶಷ್ಟಿ ಪುರುಷ ಪುರಾಣ'ವನ್ನು ಬರೆದನಂತೆ. ನಂತರದ ಕವಿಗಳಿಗೆ ತಾವು ಬಯಸಿದ ಕಾವ್ಯ ಮಣಿಯನ್ನು ಆರಿಸಿಕೊಳ್ಳುವಲ್ಲಿ ಇದು ಗಣಿಯಾಯಿತೆಂಬ ಮಾತಿದೆ. ಪಂಪನು ಕೂಡಾ ಪೂರ್ವಪುರಾಣವನ್ನು ಸಂಗ್ರಹಿಸಿಯೇ ಆದಿಪುರಾಣವನ್ನು ಬರೆದನೆಂದು ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ.

ಈ ಬಗೆಯ ಕಥೆಗಳು ಆರಂಭವಾದದ್ದು ವಡ್ಡಾರಾಧನೆಯಲ್ಲಿ ಎಂದು ಕಂಡು ಬಂದರೂ ಅದಕ್ಕೆ ಕಳೆ ಉಂಟಾಗಿರುವುದು ನಯಸೇನನಿಂದ ಎಂದು ಹೇಳಬಹುದು. ನಯಸೇನನು ನರೇಂದ್ರಸೇನ ಮುನಿಯ ಆಪ್ತ ಶಿಷ್ಯನಾಗಿ ಮತ ಪ್ರಚಾರದಲ್ಲಿ ತನ್ನಾಯುಷ್ಯವನ್ನೆಲ್ಲ ಕಳೆದಂತಿದೆ. ಏಕೆಂದರೆ ಈತನ ಕಾಲದಲ್ಲಿ ಜೈನಮತವು ಇಳಿಮುಖವಾಗುತ್ತಿದ್ದು, ಬೇರೆ ಮತ ಪಂಥಗಳಿಗೆ ಜನ ಮತಾಂತರಗೊಳ್ಳುತ್ತಿದ್ದರೆಂಬ ಆಧಾರಗಳು ದೊರಕಿವೆ. ಜೈನಮತದ ಮಹತ್ವವನ್ನು ತಿಳಿಸಲು ಜನ ಭಾಷೆಯಲ್ಲಿ ಜಿನ ಮಹಾಪುರುಷರ ಕತಾವಳಿ ಬರೆಯುವುದು ಅಗತ್ಯವಾಗಿತ್ತು. ಆದ್ದರಿಂದ ನಯಸೇನ ಈ ಕೃತಿಯನ್ನು ಅತ್ಯಂತ ಧರ್ಮ ನಿಷ್ಠೆಯಿಂದ ಶ್ಲೇಷ, ಧ್ವನಿ, ಅಲಂಕಾರಗಳ ಮುಕ್ತತೆಯಲ್ಲಿ ಸ್ವಚ್ಛಂದ ವಿಹಾರಿಯಾಗಿ ರಚಿಸಿದ್ದಾನೆ.

ನಯಸೇನನಿಗಿಂತ ಮೊದಲು ಬಂದ ಎಲ್ಲ ಚಂಪು ಕವಿಗಳು, ಗದ್ಯವನ್ನು ಸುಮಾರಾಗಿ ಒಂದೇ ಶೈಲಿಯಲ್ಲಿ ಬರೆಯುತ್ತಾ ಹೋಗಿದ್ದರು. ಇವರೆಲ್ಲಾ ದೀರ್ಘವಾದ ಸಮಾಸಗಳು, ಶ್ಲೇಷೆ, ಮುಂತಾದ ಕ್ಲಿಷ್ಟವಾದ ಅಲಂಕಾರಗಳು, ಅಷ್ಟಾದಶ ವರ್ಣನೆಗಳು, ಕಠಿಣವಾದ ಭಾಷೆ, ಧರ್ಮವನ್ನು ಪ್ರತಿಪಾದಿಸುವ ಪ್ರೌಢವಾದ ರೀತಿಯನ್ನು ರೂಢಿಸಿಕೊಂಡಿದ್ದರು. ಇವೇ ಮುಂತಾದ ಕಾರಣಗಳಿಂದ ಜನಸಾಮಾನ್ಯರ ಕುತೂಹಲವನ್ನು ತೃಪ್ತಿಪಡಿಸುವಲ್ಲಿ ಆಗಿನ ಕಾವ್ಯಗಳು ಸೋತಿರುವುದನ್ನು ಅರಿತ ನಯಸೇನ, ತನ್ನ ಪ್ರತೀ ಕತೆಯನ್ನು ಜಾನಪದೀಯ ಪ್ರಕಾರಕ್ಕೆ ಒಗ್ಗಿಸಿಕೊಂಡು ಕಥಾ ನಿರೂಪಣೆಯನ್ನು ಕಲಾಕೃತಿಯಂತೆ ಅರಳಿಸಿದ್ದಾನೆ. ನಯಸೇನನಿಂದ ಪ್ರಾರಂಭವಾದ ಪರಮತ ವಿಡಂಬನೆ ವೃತ್ತ ವಿಲಾಸನಲ್ಲಿ ಪ್ರಮಾವಧಿ ಕಂಡಿದೆ. ವೃತ್ತ ವಿಲಾಸ ಬರೆದಿರುವ 'ಧರ್ಮ ಪರೀಕ್ಷೆ' ಕೃತಿಯಲ್ಲಿ ವೈದಿಕ ಧರ್ಮವನ್ನು ಹೇರಳವಾಗಿ ವಿಡಂಬನೆ ಮಾಡಿರುವುದನ್ನು ಗಮನಿಸಬಹುದು.

ನಯಸೇನನ ಶೈಲಿ : ನಯಸೇನ ಆರಿಸಿಕೊಂಡ ಕಾವ್ಯ ಶೈಲಿ ಚಂಪೂ ಸಂಪ್ರದಾಯ ಹಾಗೂ ನಡುಗನ್ನಡದ ವಚನ ಸಂಪ್ರದಾಯ. ಇವುಗಳ ಸಂಧಿಕಾಲದಲ್ಲಿ ಇದ್ದವನು ನಯಸೇನ. ಈತನ ಕೃತಿಯ ಹಲವಾರು ಉಕ್ತಿಗಳಿಗೂ ಬಸವಣ್ಣನವರ ವಚನಗಳಿಗೂ ಹೋಲಿಕೆಗಳು ಆಕಸ್ಮಿಕವಲ್ಲವಾದರೂ ಅನೇಕ ಸೂಚನೆಗಳನ್ನು ಸ್ವೀಕರಿಸಿದೆರಬಹುದು ಎಂಬ ಊಹೆ ಕೂಡ ಇದೆ. ನಯಸೇನ ತನ್ನ ಕಾವ್ಯದ ಆರಂಭದಲ್ಲಿ ಇಷ್ಟದೇವತೆಯನ್ನು ಸ್ಮರಿಸಿ, ಪೂರ್ವ ಕವಿಗಳಾದ ಅಸಗ, ಪೊನ್ನ, ಪಂಪ, ಗಜಾಂಕುಶ, ಗುಣವರ್ಮ ಮತ್ತು ರನ್ನ ಎಂಬ ಆರು ಕನ್ನಡ ಕವಿಗಳನ್ನು ಪ್ರಶಂಸಿಸಿ ಅವರ ಕಾವ್ಯಗುಣಗಳು ತನ್ನ ಕೃತಿಗೂ ಒದಗಿ ಬರಲೆಂದು ಪ್ರಾರ್ಥಿಸಿರುವುದು ಶ್ಲಾಘನೀಯ. ಪೂರ್ವ ಕವಿ ಸ್ಮರಣೆಯಾದ ಮೇಲೆ ಕನ್ನಡ ಸಂಸ್ಕೃತಗಳ ಸಂಬಂಧ ಹೇಗಿರಬೇಕೆಂದು ಚರ್ಚಿಸಿ, ಕಾವ್ಯರಚನೆಯ ವಿಚಾರದಲ್ಲಿ ಹೀಗೆ ಹೇಳುತ್ತಾನೆ.

ರಸಭಾವಂ ಗಮಕಂ ಕಾ

ಣಿಸೆ ನಾಣ್ನುಡಿ ದೇಸಿವೆತ್ತ ಪೊಸನುಡಿ ಮಾರ್ಗಂ।

ಕುಸತಿಯ ಬಗೆಯಿಂದಿನಿತರೊಳೆಸೆಯದ

ಕೃತಿ ಕೃತಿಯೇ ಬಗೆದು ನೋಳ್ಪೊಡೆ ಜಗದೋಳ್॥

ರಸಪೂರ್ಣವಾದ ಅರ್ಥಗರ್ಭಿತವಾದ ನಾಣ್ನುಡಿಗಳು ಜನಸಾಮಾನ್ಯರಿಗೆ ಪರಿಚಿತವಾಗಿರುವಂತಹ ಶಬ್ದ ಪ್ರಯೋಗಗಳ ಮೂಲಕ ಚಂದದ ಕಸೂತಿಯ ಕೆಲಸದಂತೆ ಹೃದಯ ಸ್ಪರ್ಶಿಯಾಗಿ ಭಾವ ಪ್ರಚೋದನೆ ಮಾಡಬಲ್ಲ ಕೃತಿ ಜನಪ್ರಿಯವಾಗಿ ಸಾರ್ಥಕವಾಗಬಲ್ಲುದೇ ಹೊರತು, ವಿಮರ್ಶಿಸಿ ನೋಡಿದರೆ ಇದಕ್ಕೆ ಹೊರತಾದ ಕಾವ್ಯವು ಈ ಜಗತ್ತಿನಲ್ಲಿ ಕಾವ್ಯ ಕೃತಿಯೆಂದು ಹೇಳಿಸಿಕೊಳ್ಳಲು ಸಮರ್ಥವಾಗಬಹುದೇ? ಎಂಬುದಾಗಿ ಕೇಳುತ್ತಾನೆ. ವಿಶಿಷ್ಟ ಗಾದೆ, ನಾಣ್ನುಡಿಗಳಿಂದ ತುಂಬಿರುವ ತನ್ನ ಕೃತಿಯನ್ನು ಮೆಚ್ಚದವರನ್ನು ಕುರಿತು ಹೀಗೆ ನುಡಿದಿದ್ದಾನೆ.

ಮಳೆಯಿಲ್ಲದೆ ಪೊಯ್ನೀರಿಂ

ಬೆಳಗುಮೆ ಧರೆ ಮರುಗಿ ಕುಡಿದು ಶಾಸ್ತ್ರದ ಜಲದಿಂ

ದಳಿಪಿಂ ಪೇಳ್ದೊಡಮದು ಕೋ

ಮಳ ಮಕ್ಕುಮೇ ಸಹಜಮಿಲ್ಲದಾತನ ಕಬ್ಬಂ?

ಮಳೆ ಇಲ್ಲದೆ ಕೇವಲ ಹೊಯ್ದ ನೀರಿನಿಂದ ಈ ಧರೆಯ ಸಸ್ಯ ಸಂಪತ್ತು ಬೆಳೆದು ಹಚ್ಚಹಸುರಾಗಿ ಹೇಗೆ ಬೆಳೆಯಲಾರದೋ ಹಾಗೆಯೇ ಸಹಜತೆ ಇಲ್ಲದೆ ಕೇವಲ ಶಾಸ್ತ್ರ ಜ್ಞಾನ ಪಾಂಡಿತ್ಯದ ಗರ್ವದಿಂದ ರಚಿಸಿದ ಕಾವ್ಯವು ಬೆಳಗಿ ಬೆಳಗಲಾರದು. ಕಾವ್ಯದಲ್ಲಿ ಸಹಜತೆ ಇಲ್ಲದಿದ್ದರೆ ಉತ್ತಮ ಕಾವ್ಯವಾಗದು ಎಂದು ಹೇಳುತ್ತಾ ತನ್ನ ಕಾವ್ಯದಲ್ಲಿ 'ಸಹಜತೆ ಇದೆ' ಎಂಬುದನ್ನು ನಯಸೇನ ಹೇಳಿಕೊಂಡಿದ್ದಾನೆ.

ಮಾಲೋಪಮೆ : ಹುಟ್ಟು ಕತೆಗಾರನಾದ ನಯಸೇನ ತನ್ನ ಕೃತಿಯಲ್ಲಿ ಮಾಲೋಪಮೆಗೆ ಹೆಚ್ಚು ಪ್ರಾಧಾನ್ಯತೆಯನ್ನು ಸೃಷ್ಟಿಸಿ ಓದುಗರನ್ನು ಸೆಳೆಯುವಲ್ಲಿ ಯಶಸ್ವಿಯಾದನು. ಒಂದು ಸಂಗತಿಯನ್ನು

ಸ್ಪಷ್ಟಪಡಿಸಲು ಸಾಮಾನ್ಯವಾಗಿ ಒಂದು ಉಪಮೆಯನ್ನು ತರುವುದು ರೂಢಿ. ಒಂದಕ್ಕಿಂತ ಹೆಚ್ಚು ಉಪಮೆಗಳನ್ನು ಬಳಸಿದರೆ ಅದನ್ನು ಮಾಲೋಪಮೆ ಎನ್ನುತ್ತಾರೆ. ಪ್ರತೀ ದೃಷ್ಟಾಂತಕ್ಕೂ ಸಾದೃಶ್ಯ ಮಾಲಿಕೆಗಳನ್ನು ತರುವುದು ನಯಸೇನನ ಬರವಣಿಗೆಯ ಶೈಲಿಯ ಗುಣ ವಿಶೇಷವೂ, ಅವನ ಪರಿಮಿತಿಯೂ ಆಗಿದೆ. ನಯಸೇನ ಧರ್ಮಾಮೃತದ ಪ್ರತೀ ಕತಾವಳಿಯಲ್ಲಿ, ಎಲ್ಲ ಸಂದರ್ಭಗಳಲ್ಲೂ ಮಾಲೋಪಮೆಗಳನ್ನು ಯಥೇಚ್ಛವಾಗಿ ಬಳಸಿಕೊಂಡಿದ್ದಾನೆ.

ನಯಸೇನನ ಭಾಷಾ ಪ್ರೇಮ : ನಯಸೇನ ಅಪ್ಪಟ ಕನ್ನಡ ಪ್ರೇಮವನ್ನು ಧರಿಸಿದಂತೆ ಕಾಣುತ್ತಾನೆ. ಧರ್ಮಾಮೃತದಲ್ಲಿ ಸಂಸ್ಕೃತವನ್ನು ಅಲ್ಲಲ್ಲಿ ಬಳಸಿದ್ದರೂ ಆತನ ಕೃತಿಯಲ್ಲಿ ತಿರುಳುಗನ್ನಡದ ಹೊಗರು ಹೆಚ್ಚಾಗಿ ಹೊರಹೊಮ್ಮುವ ಸೊಗಸನ್ನು ಕನ್ನಡಿಗರು ಆಸ್ವಾದಿಸಬಹುದು. ಒಂದು ವಿಧವಾದ ಸಂಪೂರ್ಣತೆ, ಐಕ್ಯಕಮನೀಯತೆಯನ್ನು ಸಾದರಪಡಿಸಿರುವುದು ಅವನ ಕನ್ನಡ ನುಡಿಯ ಪ್ರೇಮಕ್ಕೆ ಸಾಕ್ಷಿ.

ಸಕ್ಕದಮಂ ಪೇಳ್ವೊಡೆ ನೆರೆ

ಸಕ್ಕದಮಂ ಪೇಳ್ಗೆ ಸುದ್ದಗನ್ನಡದೊಳ್ತಂ

ದಿಕ್ಕುವುದೇ ಸಕ್ಕದಮಂ

ತಕ್ಕುದೆ ಬೆರಸಲ್ಕೆ ಘೃತಮುಮಂ ತೈಲಮುಮಂ

"ಸಂಸ್ಕೃತದಲ್ಲಿ ಹೇಳುವಂಥದ್ದನ್ನು ಸಂಸ್ಕೃತದಲ್ಲಿಯೇ ಹೇಳಬೇಕು; ಕನ್ನಡದಲ್ಲಿ ಹೇಳಬೇಕಾದದ್ದನ್ನು ಕನ್ನಡದಲ್ಲೇ ಹೇಳಬೇಕೇ ಹೊರತು ಸಂಸ್ಕೃತವನ್ನು ತಂದು ಬೆರೆಸಬಾರದು, ಹೀಗೆ ಬೆರೆಸಿದಾದಲ್ಲಿ ಎಣ್ಣೆ ಮತ್ತು ತುಪ್ಪವನ್ನು ಬೆರೆಸಿದಂತಾಗುತ್ತದೆ" ಎಂಬುದು ನಯಸೇನನ ವಾದ. ಆದರೆ 'ಧರ್ಮಾಮೃತ' ಎಂಬ ಶೀರ್ಷಿಕೆಯಲ್ಲಿಯೇ ಸಂಸ್ಕೃತ ಶಬ್ಧವನ್ನು ನಯಸೇನ ಮನಗಾಣಲಿಲ್ಲವೇ? ಎಂಬ ಪ್ರಶ್ನೆ ಉದ್ಭವಿಸುತ್ತದೆ. ಆದರೆ ನಯಸೇನನ ಆಲೋಚನೆ ಇಲ್ಲಿ ಸ್ಪಷ್ಟವಾದಂತಿದೆ, ಕವಿಯಾದವನು ಬೇಕಾಗುವಲ್ಲಿ ಮಾತ್ರ ಸಂಸ್ಕೃತವನ್ನು ಬಳಸಬೇಕೇ ಹೊರತು,

ಅನಾವಶ್ಯಕವಾಗಿ ತೋರ್ಪಡಿಕೆಗೆಂದೇ ಶಬ್ಧಗಳನ್ನು ತುರುಕಿ ಓದುಗರಿಗೆ ಕಿರಿ ಕಿರಿ ಉಂಟುಮಾಡಬಾರದೆಂಬುದೇ ಆಗಿದೆಯೇ ಹೊರತು, ಸಂಸ್ಕೃತದ ವಿಚಾರದಲ್ಲಿ ತನಗಾವುದೇ ಅನಾದರವಿಲ್ಲವೆಂಬುದನ್ನು ಅಲ್ಲಲ್ಲಿ ಸಂಸ್ಕೃತ ಪದಗಳನ್ನು ಬಳಸುತ್ತಲೇ ಸ್ಪಷ್ಟಪಡಿಸುತ್ತಾನೆ. ನಯಸೇನನ ಈ ಕೃತಿಯು ಚಂಪೂಕಾವ್ಯದಲ್ಲಿ ರಚನೆಯಾಗಿದ್ದರೂ ಜಾನಪದದ ಸೊಗಡಿನೊಂದಿಗೆ, ಕನ್ನಡತನದ ಕಂಪನ್ನು ಪಸರಿಸುವ ಪ್ರಯತ್ನ ಹೆಮ್ಮೆಯನ್ನುಂಟು ಮಾಡುತ್ತದೆ.

ಧರ್ಮಾಮೃತ:

ಕನ್ನಡದಲ್ಲಿರುವ ಅನೇಕ ಜೈನ ಗ್ರಂಥಗಳಿಗೆ ಸಂಸ್ಕೃತ ಅಥವಾ ಪ್ರಾಕೃತ ಗ್ರಂಥಗಳೆ ಆಧಾರವಾಗಿದ್ದವು. ಆದರೆ ನಯಸೇನ ಯಾವುದನ್ನೂ ಅನುವಾದ ಮಾಡಿದಂತೆ ತೋರುವುದಿಲ್ಲ. 13ನೇ ಶತಮಾನದಲ್ಲಿ ಅಶಾಧಾರನ ಧರ್ಮಾಮೃತವು ಶ್ವೇತಾಂಬರ ಮಠದ ಪ್ರಕಾರ ಸಾಗಾರರು ಮತ್ತು ಅನಾಗರರು ಅನುಸರಿಸಬೇಕಾದ ನಿಯಮಗಳನ್ನು ಹೇಳಿದೆ. ಆದರೆ ಕನ್ನಡ ಧರ್ಮಾಮೃತವು ದಿಗಂಬರ ಮತದ ಪ್ರಕಾರ ಜೈನ ಗೃಹಸ್ಥರು ಅನುಸರಿಸಬೇಕಾದ ವ್ರತ ಮುಂತಾದವುಗಳನ್ನು ಹೇಳುತ್ತದೆ. ಆದ್ದರಿಂದ ಕೇಳಿ, ಓದಿದ ಹಲವು ಕಥೆಗಳನ್ನು ಆದರಿಸಿ ಹೊಸ ಮಾರ್ಗದಿಂದ ಕೃತಿ ರಚಿಸಿರುವುದು ಸ್ಪಷ್ಟವಾಗುತ್ತದೆ.

ಪ್ರತಿಯೊಂದು ಆಶ್ವಾಸದಲ್ಲೂ ಜೈನ ಧರ್ಮದ ಮೇಲೆ ಪೂರ್ಣ ಶ್ರದ್ಧೆ ಭಕ್ತಿಯುಳ್ಳ ಧರ್ಮಾತ್ಮರ ಕಥೆಗಳಿವೆ. ಧರ್ಮ ಶ್ರದ್ಧೆ ಇಲ್ಲದವರು ಧರ್ಮ ಸಂಕಟಕ್ಕೆ ಸಿಲುಕಿ ತೊಳಲಾಡಿ ಕೊನೆಗೆ ಸ್ವಸಂತೋಷದಿಂದಲೇ ಜೈನ ಧರ್ಮವನ್ನು ಸ್ವೀಕರಿಸಿ ಆಚರಿಸುತ್ತಾ ಮೋಕ್ಷವನ್ನು ಪಡೆದ ವಿವರಣೆಗಳಿರುವ ಕಥೆಗಳು ಕೂಡ ಇವೆ. ಕೆಲವು ಕಥೆಗಳಲ್ಲಿ ಮತ ಪ್ರಸಾರಣಕ್ಕಾಗಿ ಪರಮತಗಳ ವಿಡಂಬನೆ ಮಾಡಿದ್ದರೂ ಅದು ಎಲ್ಲೂ ಕಟುವಾಗುವುದಿಲ್ಲ.

ಧರ್ಮಾಮೃತದಲ್ಲಿ ಜೈನ ದರ್ಶನಕ್ಕೆ ಸಂಬಂಧಿಸಿದ ಎಂಟು ಅಂಗಗಳು ಮತ್ತು 5 ಅಣುವ್ರತಗಳು ಇವೆ. ಇವುಗಳ ಮಹಿಮೆಯನ್ನು

ಎಲ್ಲಾ ಕತೆಗಳಲ್ಲೂ ಕವಿ ವರ್ಣಿಸಿದ್ದಾನೆ. ದರ್ಶನವೆಂದರೆ, ಜೈನಧರ್ಮದಲ್ಲಿ ವಿವೇಕಪೂರ್ಣ ನಂಬಿಕೆಯನ್ನಿಟ್ಟು, ಜೀವನದಲ್ಲಿ ಅಳವಡಿಸಿಕೊಳ್ಳುವಷ್ಟು ಅರಿತಿರಬೇಕಾದವು. ಆ ದರ್ಶನದ ಅಂಗಗಳು ಎಂಟು. ಅವು

* 'ನಿಶ್ಯಂಕೆ' – ಜೈನದರ್ಶನದಲ್ಲಿ ಸಂದೇಹವಿಲ್ಲದಿರುವುದು.
* 'ನಿರ್ವಿಚಿಕಿತ್ಸೆ' – ದೇಹದ ಮೇಲೆ ಪ್ರೀತಿ ಆಗಲಿ ದ್ವೇಷವಾಗಲಿ ಇಲ್ಲದಿರುವುದು
* 'ನಿಷ್ಕಾಂಕ್ಷೆ' – ಲೋಕದ ಸುಖ–ಭೋಗಗಳಿಗೆ ಆಸೆ ಇಲ್ಲದಿರುವುದು
* 'ಅಮೂಢ ದೃಷ್ಟಿತ್ವ' – ಜೈನ ಮಾರ್ಗವನ್ನು ಬಿಟ್ಟು ಬೇರೆ ಮಾರ್ಗಗಳಿಗೆ ಹೋಗದಿರುವುದು
* ಉಪಗೂಹನ' – ಜೈನ ಮತದಲ್ಲಿ ಸಂಪೂರ್ಣ ನಂಬಿಕೆ ಇಲ್ಲದಿರುವವರ ಸಂಶಯಗಳನ್ನು ನಿವಾರಣೆ ಮಾಡುವುದು.
* 'ಸ್ಥಿತಿಕರಣ' – ಆತ್ಮನು ಸರಿಯಾದ ನಂಬಿಕೆಯನ್ನು ಬಿಡದ ಹಾಗೆ ನೋಡಿಕೊಳ್ಳುವುದು.
* 'ವಾತ್ಸಲ್ಯ' – ಜೈನ ಶ್ರಾವಕರಲ್ಲಿ ಪ್ರೀತಿಪೂರ್ವಕವಾದ ಗೌರವವನ್ನು ತೋರಿಸುವುದು.
* 'ಧರ್ಮ ಪ್ರಭಾವನೆ' – ಜೈನ ಸಿದ್ಧಾಂತಗಳ ಮಹಿಮೆಯನ್ನು ಸಾರುವುದು.

ಕೊಲ್ಲದ ಪುಸಿಯದ ಕಳವಿನಿ

ಸಿಲ್ಲದ ಪರವನಿತೆಯರ್ಗೆ ಪದಪಿಂ ಚಿತ್ತಂ

ಸಲ್ಲದ ಪರಿಗ್ರಹಕ್ಕಳಿ

ಪಿಲ್ಲದ

ಐದು ಅಣು ವ್ರತಗಳು ಮತ್ತು 14 ವಿಷಯಗಳನ್ನು ಕವಿ ಒಂದೊಂದು ಆಶ್ವಾಸದಲ್ಲಿ ವಿವರಿಸಿದ್ದಾನೆ. ಪ್ರತಿ ಆಶ್ವಾಸದಲ್ಲಿಯೂ ಆಯಾ ವಿಷಯದಲ್ಲಿ

ಅತಿಶಯುವಾದ ಗೌರವ ಬಿಟ್ಟು ಮೋಕ್ಷ ಸಂಪಾದನೆ ಮಾಡಿದ ಮಹಾಪುರುಷರ ಕಥೆಗಳು ಬರುತ್ತವೆ.

ಧರ್ಮಾಮೃತದ ಮತ್ತೊಂದು ವಿಶೇಷತೆ ಎಂದರೆ ಧರ್ಮದ ಸ್ವರೂಪವನ್ನು ಮುನಿಗಳ ಮೂಲಕ ನಾಣ್ಣುಡಿಯನ್ನು ಹೇಳಿಸುತ್ತಾ, ಹೊಸ ದರ್ಶನವನ್ನೇ ತೆರೆದಿಡುವುದು. ಅವು ಸರ್ವ ಕಾಲಕ್ಕೂ ಸಲ್ಲುವಂತೆ ಸೃಷ್ಟಿಸಿದ ಬಗೆ ಅಪೂರ್ವ.

ಧರ್ಮಾಮೃತದಲ್ಲಿ ಬರುವ ಕತೆಗಳು:

ಸಂಕ್ಷಿಪ್ತವಾಗಿ 14 ಕತೆಗಳಲ್ಲಿ ಕೆಲವನ್ನು ತಿಳಿವಿಗಾಗಿ ಇಲ್ಲಿ ಉದಾಹರಿಸುವ ಪ್ರಯತ್ನ ಮಾಡಲಾಗಿದೆ.

ಸಮ್ಯಗ್ದರ್ಶನ – ವಸೂಭೂತಿಯ ಕಥೆ

ಜಂಬುದ್ವೀಪದ ಮೇರು ಗಿರಿಯ ದಕ್ಷಿಣ ಭಾಗದಲ್ಲಿ ದಯಾಮಿತ್ರ ಶೆಟ್ಟಿ ಎಂಬ ವ್ಯಾಪಾರಿಯು ವ್ಯಾಪಾರಕ್ಕಾಗಿ ಪರದೇಶ ಹೊರಟಿದ್ದ. ಅವನ ಜೊತೆಗೆ ವಸಭೂತಿ ಎಂಬ ಬ್ರಾಹ್ಮಣನು ಹೊರಟನು. ದಯಾಮಿತ್ರನು ಜೈನ ಮತದಲ್ಲಿ ಬಹಳವಾಗಿ ನಂಬಿಕೆ ಇಟ್ಟವನಾಗಿದ್ದನು. ಶೆಟ್ಟಿಯ ಜೈನ ಶ್ರಧ್ಧಾ ಭಕ್ತಿ ನೋಡಿದ ಬ್ರಾಹ್ಮಣ ಮನಸ್ಸಿನಲ್ಲೇ ದೂಷಿಸಿದನು. 'ಈ ಸೆಟ್ಟಿಯೂ ಒಬ್ಬ ವಿವೇಕಿ ಸರಿ ನಾಚಿಕೆಗೆಟ್ಟ ಜೈನಮನಿಗಳ ಮಾತಿಗೆ ಇವನು ಮರುಳ ಗೊಂಡಿರುವನು' ಎಂದು ಅಣಕವಾಡಿದನು. ಅಲ್ಲದ 'ಜೈನ ಧರ್ಮ ಮೂಲೆಗುಂಪಾಗಿದೆ. ಬಹು ಸಂಖ್ಯಾತರು ನಂಬಿರುವ ದೇವರನ್ನು ಧರ್ಮವನ್ನು ಕಡೆಗಣಿಸಿ ಇವನು ಜಿನ ಧರ್ಮವನ್ನು ನಂಬಿರುವವನಲ್ಲ. ಬೆವರು ಸುರಿಸದೆ ಅವರಿವರ ಮನೆಯಲ್ಲಿ ಬೇಡಿ ಪುಷ್ಕಳವಾದ ಊಟ ಮಾಡಿಕೊಂಡಿರುವ ಜೈನ ಮುನಿಗಳಿಗೆ ಈ ಶೆಟ್ಟಿ ಮರುಳಾಗಿ ಹಾಳಾಗುತ್ತಿರುವನಲ್ಲ. ಇವನಿಗೆ ಬುದ್ಧಿ ಹೇಳಿ ನಾನು ಹಾದಿಗೆ ತರುವೆನು ಆ ಪಾತ್ರದಾನವನ್ನು ತಡೆಯುವೆನು. ಅಷ್ಟೇ ಅಲ್ಲ ಇವನನ್ನು ವೈದಿಕ ಧರ್ಮದ ಕಡೆಗೆ ಸೆಳೆಯುವೆನು' ಎಂದು ವಸುಭೂತಿ

ತನ್ನಲ್ಲೇ ಒಂದು ತೀರ್ಮಾನಕ್ಕೆ ಬಂದು, ವಸುಭೂತಿ "ಶೆಟ್ಟರೆ ನೀವು ರತ್ನ ಪರೀಕ್ಷಕರು ಶ್ರೇಷ್ಠವಾದ ವಸ್ತುವನ್ನು ಅದರ ತೂಕ ಮತ್ತು ಬಣ್ಣವನ್ನು ನೀವು ನಿರ್ಧರಿಸುವ ವಿವೇಕಿಗಳು. ಇಂತಹ ಬುದ್ಧಿವಂತರಾದ ನೀವು ಜೈನ ಮುನಿಗಳ ಮಾತಿಗೆ ಮರುಳಾಗುವುದನ್ನು ಕಂಡು ನನಗೆ ಸೋಜಿಗವಾಗುತ್ತಿದೆ" ಎಂದು ಅಣಕಿಸುತ್ತಾನೆ. ಆಗ ದಯಾಮಿತ್ರ ಶೆಟ್ಟಿ ಮುಗುಳ್ನಕ್ಕೂ ಮನಸ್ಸಿನಲ್ಲಿ "ಬೇಡನಿಗೇನು ಗೊತ್ತು ಮಾಣಿಕ್ಯದ ಬೆಲೆ".. ಈ ವಸುಭೂತಿಗೆ ಲೌಕಿಕ ಧರ್ಮದ ಸದ್ಧರ್ಮವನ್ನು ಹೇಳಬಾರದು. ಬುದ್ದಿಯನ್ನೇ ಕಲಿಸಬೇಕೆಂದುಕೊಂಡನು.

ಒಂದು ದಿನ, ಶೆಟ್ಟಿಯು "ತಾನು ವಂಶಜರಿಂದ ಬಂದ ಒಂದು ವ್ರತ ಮಾಡಬೇಕಾಗಿತ್ತು. ಆದರೆ ಇಲ್ಲಿ ಜಿನ ಮುನಿಗಳು ದೊರಕದ ಕಾರಣ, ತಾವು ಬ್ರಾಹ್ಮಣರಾಗಿರುವುದರಿಂದ ಋಷಿಗಳಿದ್ದಂತೆ. ಲೋಕ ಪೂಜ್ಯರಾದ ತಮಗೆ ಮಾಡಿದ ದಾನ ಫಲವು ಹಾಲು ಉಕ್ಕಿಸಿದಂತೆ, ಹೆಚ್ಚುವುದಿಲ್ಲವೇ....ಅದಕ್ಕಾಗಿ ಈ ನೋಂಪಿಯನ್ನು ಯಶಸ್ವಿಯಾಗಿ ನಡೆಸಿಕೊಡಲು ವಸುಭೂತಿಯಲ್ಲಿ ಬೇಡಿದನು. ಬೇಕಾದಷ್ಟು ಹಣವನ್ನು ನೀಡುವುದಾಗಿ ವಿನಮ್ರವಾಗಿ ಕೇಳಿಕೊಂಡನು. ಹಣದ ವ್ಯಾಮೋಹಿಯಾದ ವಸುಭೂತಿ ಆನಂದದಿಂದ ಒಪ್ಪಿದ. ಸೆಟ್ಟಿ ನೋಂಪಿಯ ಕಠಿಣ ಕ್ರಮವನ್ನು ತಿಳಿಸಿದ. ಎರಡೇ ತಿಂಗಳು ತಾನೆ ಕಳೆದಾರಾಯಿತು, ಇಲ್ಲಿ ನನ್ನನ್ನು ನೋಡಿ ನಗುವವರು ಯಾರೆಂದುಕೊಂಡು ನೋಂಪಿ ಆರಂಭಿಸಿದ. ಹುಲ್ಲು ಮೆದೆಯಲ್ಲಿ ಕೋತಿಯನ್ನು ಬಂಧಿಸಿದಂತಾದನು. ಬಾಯಾರಿಕೆ ಸಹಿಸದೆ, ಬೆತ್ತಲೆಯಲ್ಲಿರಲಾರದೆ, ಸ್ನಾನಾದಿಗಳ ಕಾಣದೆ, ಕೂದಲು ಕೀಳಿಸಿಕೊಳ್ಳಲು ಚೀರಿ ನೊಂದ. ಹೀಗೆ ಏಳೆಂಟು ದಿನ ಹಣಕ್ಕಾಗಿ ನೋಂಪಿ ಸಹಿಸಿ ಮಾಡಿದನಷ್ಟೇ, ಕೊನೆಗೆ ಸೆಟ್ಟಿಯ ಬಳಿ ಬಂದು "ಹುಲಿಯ ಮೀಸೆಯಲ್ಲಿ ಕುಳಿತು ಉಯ್ಯಾಲೆ ಆಡಬಲ್ಲೆ, ವಿಷವನ್ನುಂಡು ದಕ್ಕಿಸಿಕೊಂಡೇನು, ಈ ವ್ರತವನ್ನು ಮಾಡಲಾರೆನೆಂದು ತಳಮಳವನ್ನು ತೋಡಿಕೊಂಡನು.

ಆಗ ಸೆಟ್ಟಿಯು ನಕ್ಕು "ಬೇರೆಯವರು ಒಂದು ಹುಲಿ ಹಿಡಿದರೂ ಮೆಚ್ಚಿಕೊಳ್ಳದೆ, ತಾವು ಮಾತ್ರವೇ ಒಂದು ಇಲಿ ಹಿಡಿದದ್ದನ್ನೇ

ಸಾಹಸವೆಂದು ಗರ್ವ ಪಡುತ್ತೀರಲ್ಲ. ಅಣ್ಣಾ ಜಿನಮಾರ್ಗದಲ್ಲಿ ನಡೆಯುವುದು ಸುಲಭವೇ? ಮಹಾಸತ್ಫಲವನ್ನು ನೀಡುವ ಹನ್ನೆರಡು ತಪಸ್ಸುಗಳು, ಸಹಿಸಲಸಾಧ್ಯ ಪರೀಷೇಹಗಳು ಇತರೆ ವ್ರತಾಚರಣೆ ನಿಮ್ಮಿಂದ ಸಾಧ್ಯವೇ ಎಂದು ಪರಿಹಾಸ್ಯ ಮಾಡಿದನು. ಕೊನೆಗೆ ಇದೇ ಸದ್ಧರ್ಮವೆಂದು ವಸುಭೂತಿ ಒಪ್ಪಿ, ನನಗೂ ಧರ್ಮದೀಕ್ಷೆ ಕೊಡು" ಎಂದು ಪ್ರಾರ್ಥಿಸುತ್ತಾನೆ. ಸಮ್ಯಕ್ ತತ್ವದ ಬಗ್ಗೆ ತಿಳಿ ಹೇಳಿ ಸೆಟ್ಟಿಯು ವಸುಭೂತಿಗೆ ಧರ್ಮಸೂಕ್ಷ್ಮವನ್ನು ತಿಳಿಸಿದನು. ಹೀಗೆ 'ಬಾಯ ತುಂಬುಲಂ ಸೊಸೆ ಕಳಕಳಿಸಿ ನಕ್ಕು' ವಸುಭೂತಿಗೆ ಹಾಸ್ಯ ಮಾಡಿ ಬುದ್ಧಿ ಕಲಿಸಿದುದು ಸ್ವಾರಸ್ಯಕರವಾಗಿದೆ.

ನಂತರ ಕೆಲವು ಬೇಡರ ದಾಳಿ ಪ್ರಸಂಗ ಬರುತ್ತದೆ. ಅದರಲ್ಲಿ ವಸುಭೂತಿ ಬಾಣ ತಗುಲಿ ಕೊನೆಯಾದಾಗಿ ಪಂಚ ನಮಸ್ಕಾರಗಳನ್ನು ಗಟ್ಟಿಯಾಗಿ ಹೇಳುತ್ತಾ, ಪಂಚಣಮೋಕಾರ ಆಲಿಸುತ್ತಾ ಶುಭ ಪರಿಣಾಮಿಯಾಗಿ ಸಮಾಧಿ ಮರಣ ಹೊಂದಿ, ಮಣಿಕುಂಡಲನಾಗಿ ಮರು ಹುಟ್ಟು ಪಡೆಯುತ್ತಾನೆಂದು ನಯಸೇನ ಕತೆಯನ್ನು ಹೆಣೆದಿದ್ದಾನೆ. 'ಸಮ್ಯಗ್ ದರ್ಶನವಿಲ್ಲದೆ ಸದಾ ಮುಕ್ತಿಶ್ರೀಯಂ ಲಭಿಸುವುದು ಹೇಗೆ' ಎಂಬ ಪ್ರಶ್ನೆಗೆ 'ಕಣ್ಣಿಲ್ಲದೆ ನೋಡಲಾದೀತೆ' ಮಣ್ಣಿಲ್ಲದೆ ಕೃಷಿ ಮಾಡಬಹುದೇ? ಕಾಲಿಲ್ಲದೆ ನಡೆವನೆ, ಕಿವಿಯಿಲ್ಲದೆ ಕೇಳ್ವನೆ, ಸತಿಯಿಲ್ಲದೆ ಸುತರಂ ಪಡೆಯಲಾದೀತೆ? ಬರಿ ಹೆಡ್ಡ ಅತಿದಡ್ಡನಂತಾಗಬಹುದು' ಎಂದು ಹೇಳುತ್ತಾ ಆಧ್ಯಾತ್ಮದ ಸಿರಿಯನ್ನು ಉದ್ದೀಪನಗೊಳಿಸಿ ಮೋಕ್ಷವನ್ನು ಪಡೆಯಲು ಶುದ್ಧವಾದ ದೈವಭಕ್ತಿಗಳಿರಬೇಕು ಎಂದು ಹೇಳಿರುವುದು ಧರ್ಮದರ್ಶನದ ನಾಂದಿಯೂ ಹೌದು.

ಆಶ್ವಾಸ–2 ನಿಶ್ಯಂಕೆ ಅಂಜನಾಚೋರನ ಕಥೆ

ವಿಜಯಪುರದ ರಾಜನಿಗೆ ಲಲಿತಾಂಗನೆಂಬ ಮಗನಿದ್ದನು. ಒಬ್ಬನೇ ಮಗನಾದ್ದರಿಂದ ಅತೀವ ಮುದ್ದಿನಿಂದ ಬೆಳೆದಿರುತ್ತಾನೆ. ಲಲಿತಾಂಗ ಬೆಳೆ ಬೆಳೆಯುತ್ತಾ ದುರ್ಜನರ ಸಹವಾಸ, ದುರ್ಗುಣಗಳ ಗಣಿಯಾಗಿ, ಮದವೇರಿದ ಆನೆಯಂತೆ ರಾಜ್ಯ ಕಂಟಕನಾದ. ಪ್ರಾರಂಭದ ದಿನಗಳಲ್ಲಿ

ಮಗನ ಈ ದುರ್ಗುಣಗಳು ತಿಳಿದಿದ್ದರೂ ರಾಜ ದಂಡಿಸದೆ ಇದ್ದುದು ದೊಡ್ಡ ಪ್ರಮಾದವಾಯಿತು. ಸದ್ಗುಣ ಸಂಪನ್ನನಾದ ರಾಜನ ಮಗ ಪ್ರಜಾ ಕಂಟಕನಾಗಿ ಜನರನ್ನು ಹಿಂಸಿಸುವುದು, ಲೂಟಿ ಮಾಡುವುದು ಅತಿಯಾಯಿತು. ರಾಜ ಮಗನ ಮೇಲಿನ ವ್ಯಾಮೋಹದಿಂದ ಸರಿಯಾಗಿ ದಂಡಿಸದೆ ಇದ್ದುದರಿಂದ, ಮಾನವತಿಯರ ಮಾನಹರಣ, ಪ್ರಾಣಹರಣ ವೇಶ್ಯೆಯರ ಸಂಗಕ್ಕೂ ಹಿಂಜರಿಯವನಾದ. ಜನರ ದೂರಿನ ಮೇರೆಗೆ ಎಚ್ಚೆತ್ತ ರಾಜ ಮಡಕೆಯ ಮೇಲಿನ ಇಲಿಯನ್ನು ಓಡಿಸಲಾರದ ಸಂಕಟಕ್ಕೊಳಗಾದ. "ಹೊಡೆದರೆ ಒಡೆಯುವುದು ಗಡಿಗೆ! ಹೊಡೆಯದಿರ್ದೊಡೆ ತುಪ್ಪ ಹರಿಯುವುದು ಹೊರಗೆ" ಎಂಬಂತೆ, ರಾಜ ಅವನನ್ನು ಕರೆದು ಬುದ್ಧಿವಾದ ಹೇಳಿದರೂ ಪ್ರಯೋಜನವಾಗದಿದ್ದಾಗ ಲಲಿತಾಂಗನು ರಾಜ್ಯದಿಂದ ಉಚ್ಚಾಟಿಸಲ್ಪಟ್ಟ. ಹೀಗೆ ಲಲಿತಾಂಗನ ಜಾರಚೋರತನ, ದುಷ್ಟತನದ, ಕೇಡಿಗತನದ ವಿವರಣೆ ಹೆಚ್ಚಾಗಿದೆ.

ಲಲಿತಾಂಗನು ವಿಜಯಪುರವನ್ನು ತೊರೆದು ಕಾಶ್ಮೀರ ದೇಶದಿಂದ ಹೊರಟು ನೇಪಾಳ ದೇಶಕ್ಕೆ ಬಂದನು. ರಾಜವಂಶದ ಎಲ್ಲಾ ಸದ್ಗುಣಗಳಿಗೂ ಎಳ್ಳು ನೀರು ಬಿಟ್ಟು ದುರಾಚಾರಿಯಾಗಿ ಕಳ್ಳರ ಬಳಗದಲ್ಲಿ ಸೇರಿಕೊಂಡು ಅಂಜನಘುಂಟಿಕೆಯನ್ನು ಸಿದ್ಧಿಸಿಕೊಂಡು, ಅದೃಶ್ಯನಾಗಿ ಕದಿಯುವ ವಿದ್ಯೆ ಕಲಿತು ಚೋರ ಪ್ರವೀಣನಾದ. ಇದು ಸಾಕಾಗದೆಂಬಂತೆ ಸೂಳೆಗೇರಿ ಹೊಕ್ಕು ಅನಂಗಸುಂದರಿಯ ಸಹವಾಸಕ್ಕೆ ಬಿದ್ದನು. ಅಂಜನಾವಿದ್ಯೆಯ ಬಗ್ಗೆ ಇವನಿಂದ ತಿಳಿದುಕೊಂಡ ವೇಶ್ಯೆ, ರಾಣಿಯ ಕೊರಳಲ್ಲಿರುವ ಅನನ್ಯ ಪ್ರಭೆಯ ಜ್ಯೋತಿಪ್ರಭಾ ಪದಕವನ್ನು ತಂದುಕೊಡುವಂತೆ ಒತ್ತಾಯಿಸುತ್ತಾಳೆ. ಅವನು ಅನಂಗಸುಂದರಿಯಲ್ಲಿ ಬೇಡವೆಂದು ಎಷ್ಟೇ ಬೇಡಿಕೊಂಡರೂ, ಪದಕ ಬೇಕೆಂದು ಹಠ ಹಿಡಿದಳು. ಅದರಂತೆ ಶುಕ್ಲಪಕ್ಷದ ಅಷ್ಟಮಿಯಂದು ಕದ್ದು ತರುವಾಗ, ಜ್ಯೋತಿ ಪ್ರಭಾ ಪದಕವು ಬೆಳಕನ್ನು ಸೂಸಿದ ಪರಿಣಾಮ, ಅಂಜನವಿದ್ಯೆ ನಿವಾರಿಸಲು ತಿಳಿದ ದಂಡಕನೆಂಬ ತಳವಾರನಿಗೆ ಸಿಕ್ಕಿ ಹಾಕಿಕೊಂಡನು. ತನ್ನ ಬಳಿ ಇದ್ದ ಪದಕವನ್ನು ಎಸೆದು ಅಂಜನಚೋರನು ಸ್ಮಶಾನಕ್ಕೆ ಬರುವನು. ಅಲ್ಲಿ ಗಗನಗಾಮೀ ವಿದ್ಯೆಯನ್ನು ವರಸೇನನಿಂದ ತಿಳಿದು,

ಆಕಾಶಗಾಮಿನಿ ವಿದ್ಯೆ ಸಿದ್ಧಿಸಿಕೊಂಡು ವಿದ್ಯಾದೇವತೆಯ ಸಹಾಯದಿಂದ ನಿರ್ಮಲ ಚಾರಿತ್ರವಂತನಾದ ಜಿನದತ್ತಸೆಟ್ಟಿಯ ಬಳಿ ಬರುವನು.

ಜಿನದತ್ತಸೆಟ್ಟಿಯು ಇಂತಹ ಕಳ್ಳನಿಗೆ ಹೇಗೆ ಆಕಾಶಗಾಮಿನಿ ವಿದ್ಯೆ ಸಿದ್ಧಿಸಿತು! ಎಂದು ಚಿಂತಿಸಿದ. ಅಂಜನಾಚೋರ ತನ್ನ ಪೂರ್ವಾಪರದ ಬಗ್ಗೆ ಹೇಳುತ್ತಾ, ತನಗೆ ಹೇಗೆ ಈ ವಿದ್ಯೆ ಸಿದ್ಧಿಸಿತು ಎಂದು ಹೇಳಿದನು. ನಂತರ ಜಿನದತ್ತನು ನಡೆದ ವೃತ್ತಾಂತವನ್ನೆಲ್ಲ ಅರುಹಿ, ಧನ್ವಂತರಿ ಮತ್ತು ವಿಶ್ವಾಲೋಮನ ಕತೆಗಳನ್ನು ಸ್ವಾರಸ್ಯಕರವಾಗಿ ಹೇಳಿದನು. ಧನ್ವಂತರಿಯು ವರ್ಧಮಾನ ಭಟ್ಟಾರಕರು ಹೇಳಿದ ಅಷ್ಟೂ ವ್ರತಗಳ ಪಾಲಿಸುತ್ತಾ ಕಂಡುಕೊಂಡ ಒಳಿತನ್ನು ಹೇಳಿದನು. ಅಂಜನಚೋರನು ವಿಸ್ಮಯದಿಂದ "ಜಿನದತ್ತನು ಗುಣಸಾಗರ ಅವನು ಯಾವ ಜೀವಿಗೂ ಕೇಡನು ಬಯಸದವನು. ಇನ್ನು ಜಿನೇಂದ್ರನಾದ ದೇವಾ ದೇವಾದಿ ದೇವನಾದ ಜನೆಂದ್ರನನ್ನು ಜಿನಾಗಮುವನ್ನು ಸಂಶಯರಹಿತನಾಗಿ ನಂಬಿದಲ್ಲಿ ಪಡೆದ ಉನ್ನತ ಸುಖ ಸೌಭಾಗ್ಯವನ್ನು ಕಾಣುವ ಮಹಾ ಮಹಿಮೆಯನ್ನು ಅಂತೂ ಇಂತೂ ಎನ್ನಬಹುದೆ?" ಎಂದು ಜಿನ ಧರ್ಮದಲ್ಲಿ ನಿಶ್ಯಂಕೆಯನ್ನು ತಾಳಿದನು. "ಹಿಂದೆ ಸಹವಾಸದಿಂದ ಮಾಡಿದ ಕುಕೃತ್ಯವನ್ನೆಲ್ಲ ತೊರೆದು ಜಿನನ ಚರಣಕಮಲದಲ್ಲಿ ಲೀನವಾಗುವೆನು" ಎಂಬ ನಿರ್ಧಾರವು ಅಂಜನಚೋರನ ಪ್ರಕರಣ ವೈರಾಗ್ಯಕ್ಕೆ ನಾಂದಿಹಾಡಿತು. ಕೊನೆಗೆ ಜಿನಮತದಲ್ಲಿ ಶ್ರದ್ಧೆ ಹುಟ್ಟಿ ಸರಿದಾರಿಗೆ ಬಂದ ಘಟನೆಗಳು, ಭವಾಂತರಗಳ ಕಥೆಯು ನೆನಪಿಟ್ಟುಕೊಂಡು ಸಾಗುವುದು ಗೊಂದಲವುಂಟು ಮಾಡುತ್ತದೆ. ಈ ಆಶ್ವಾಸದಲ್ಲಿ ಲಲಿತಾಂಗನ ದುಷ್ಟತನವನ್ನು ಅದೆಷ್ಟು ಲಂಬವಾಗಿ ವಿವರಿಸಲಾಗಿದೆಯೆಂದರೆ, ಕತೆ ಮುಗಿಯುವುದರೊಳಗೆ ಓದುಗ ಬೇಸರವಾಗುವುದೂ ಇದೆ.

ಆಶ್ವಾಸ–3 ಅನಾಸಕ್ತೆ ಅನಂತಮತಿ: ಧರ್ಮಾಮೃತವು ಜಿನಭಕ್ತಿಯ ಸಾರ ಸಂಗ್ರಹವನ್ನು ತನ್ನ ಕತೆಗಳಲ್ಲಿ ಹಿಡಿದಿಟ್ಟಿರುವುದು ಪ್ರತೀ ಕತೆಯಲ್ಲೂ ವೇದ್ಯವಾಗುತ್ತದೆ. ಅನಂತಮತಿ ಶ್ರೀಮಂತನಾದ ಪ್ರಿಯದತ್ತಸೆಟ್ಟಿ ಹಾಗೂ ಅಂಗಮತಿಯ ಸುಪುತ್ರಿ. ಒಮ್ಮೆ ಅನಂತಮತಿ ಗೆಳೆಯರನ್ನು ಕೂಡಿಕೊಂಡು

ಗೊಂಬೆಯೊಡನೆ ಆಡುತ್ತಿದ್ದಳು. ಮದುವೆಯಾಟವಾಡುತ್ತಿದ್ದ ಮಗಳನ್ನು ಕಂಡ ತಂದೆ ಪ್ರಿಯದತ್ತ ಆಕೆಯನ್ನು ಎತ್ತಿಕೊಂಡು ಮದುವೆಗೆ ತೋರಣ ಬೇಡವೇ? ಮಂಗಳವಾದ್ಯ ಮೊಳಗ ಬೇಡವೇ? ಬಂದು ಬಾಂಧವರು ಬರಬೇಡವೇ? ನಿನ್ನನ್ನು ನಾನಾ ರತ್ನಗಳಿಂದ ಸಿಂಗರಿಸಬೇಡವೇ? ನಾವು ಕಣ್ತುಂಬ ನಿನ್ನನ್ನು ನೋಡಬೇಡವೇ? "ಎಂದು ಪರಿಹಾಸ್ಯೆ ಮಾಡಿ ಮಗಳೊಡನೆ ಜಿನಾಲಯಕ್ಕೆ ಬಂದನು. ಮುನಿಯ ಬಳಿ ಬಂದು ಮುನೀಂದ್ರ ನನ್ನ ಮಗಳು ಯಾರಿಗೂ ಗೊತ್ತಿಲ್ಲದಂತೆ ಮದುವೆಯಾಗಲು ಹೊರಟಿದ್ದಾಳೆ. ಜಿನ ಪೂಜೆಯನ್ನು ಮಾಡಿಲ್ಲ, ಇವಳಿಗೆ ಬ್ರಹ್ಮಚರ್ಯ ವ್ರತವನ್ನು ಅನುಗ್ರಹಿಸಬೇಕು" ಎಂದು ಪ್ರಿಯದತ್ತನು ವಿನೋದಕ್ಕೆ ಕೇಳಿದನು. ಆಕೆಗೆ ಮುನಿಗಳು ಬ್ರಹ್ಮಚರ್ಯ ವ್ರತವನ್ನು ಘೋಷಿಸಿಯೇಬಿಟ್ಟರು.

ಈ ಕತೆಗೆ ಇಲ್ಲಿಂದ ಹೊಸ ತಿರುವೊಂದು ದೊರಕುತ್ತದೆ. ವಿನೋದಕ್ಕಾಗಿ ಹೇಳಿದ ಮಾತನ್ನು ಬಹು ಗಟ್ಟಿಯಾಗಿ ವೇದ್ಯ ಮಾಡಿಕೊಂಡ ಬಾಲೆ, ಅಂದಿನಿಂದ ಬ್ರಹ್ಮಚಾರಣಿಯಾಗಿಯೇ ಇರಲು ನಿರ್ಧರಿಸುತ್ತಾಳೆ. ನಯಸೇನ ಈ ಕತೆಯಲ್ಲಿ ಅನಂತಮತಿಯ ಸೌಮ್ಯ ಸೌಂದರ್ಯವನ್ನು ವಿಧ ವಿಧವಾಗಿ ವರ್ಣಿಸಿರುವುದು ಗಮನಾರ್ಹ. ಹಾಗೇ ಅವಳ ಬ್ರಹ್ಮಚರ್ಯದ ಬಗೆಗೂ ಅಷ್ಟೇ ಗಟ್ಟಿತನವನ್ನು ತನ್ನ ಹೋಲಿಕೆಗಳ ಮೂಲಕ ಕತೆಯುದ್ದಕ್ಕೂ ಕೊಡುತ್ತಾನೆ.

ವಿಮಾನದಲ್ಲಿ ಪತ್ನಿಯೊಂದಿಗೆ ಆಕಾಶ ಮಾರ್ಗದಲ್ಲಿ ಸಂಚರಿಸುತ್ತಿದ್ದ ಕುಂಡಲಮಂಡಿತ ವಿದ್ಯಾಧರನು ಉದ್ಯಾನವನದಲ್ಲಿ ಉಯ್ಯಾಲೆಯಾಡುತ್ತಿದ್ದ ಅನಂತಮತಿಯನ್ನು ಕಂಡು ಮೋಹಿತನಾಗುತ್ತಾನೆ. ತನ್ನ ಹೆಂಡತಿ ಸುಕೇಶಿನಿಯುನ್ನು ತಪ್ಪಿಸಿ, ವಿಮಾನದಲ್ಲಿ ಬಂದು ಇವಳನ್ನು ಅಪಹರಿಸುತ್ತಾನೆ. ಹೆಂಡತಿ ಇವನ ದುರ್ಬುದ್ಧಿ ತಿಳಿದು ಕೋಪಗೊಂಡು, ಪರ್ಣಲಘುವಿದ್ಯೆ ಉಪಯೋಗಿಸಿ ವಿದ್ಯಾಧರನ ಕೃತ್ರಿಮತೆಯ ಬಗ್ಗೆ ತಿಳಿದು ಶಿಕ್ಷಿಸಲು ಮುಂದಾಗುತ್ತಾಳೆ. ವಿಷಯ ತಿಳಿದ ವಿದ್ಯಾಧರ ಭೀಮವನದ ಬಳಿ ಅನಂತಮತಿಯನ್ನು ಬಿಟ್ಟು ಬರುತ್ತಾನೆ. ಬೇಡರ ಒಡೆಯನ ಕೈಗೆ ಅನಂತಮತಿ ಸಿಗುತ್ತಾಳೆ. ಅವಳ ಸೌಂದರ್ಯಕ್ಕೆ ಮರುಳಾದ ಈತನೂ ಇವಳನ್ನು ವಶ ಮಾಡಿಕೊಳ್ಳಲು ಪ್ರಯತ್ನಿಸಿದಾಗ, ಅವಳು

ನಾನು ಸಾಯುವೆನೇ ಹೊರತು, ಬ್ರಹ್ಮಚರ್ಯದ ವ್ರತ ಭಂಗ ಮಾಡಿಕೊಳ್ಳೆನೆಂದು ಸಂಕಲ್ಪ ಮಾಡುತ್ತಾಳೆ. ಅವಳನ್ನು ಪರೀಕ್ಷಿಸಲು ಯಕ್ಷಿಯು ಕಿರಾತನ ರೂಪ ಧರಿಸಿ, ನಂತರ ಅಭಿನವ ಕಾಮನ ರೂಪ ಧರಿಸಿದರೂ ಅವಳು ಬದಲಾಗದಿದ್ದಾಗ, ಅನಂತಮತಿಯ ಸತ್ಯವ್ರತಕ್ಕೆ ಮೆಚ್ಚಿ ಯಕ್ಷಿಯು ಬೇಡನ ಒಡೆಯನಿಂದ ಪಾರಾಗಲು ನೆರವಾಗುವಳು.

ಅಲ್ಲಿಂದ ಪಾರಾದ ಅನಂತಮತಿಯುನ್ನು ಪುಷ್ಪಕನೆಂಬ ವ್ಯಾಪರಿಯು ಪೂರ್ವಾಪರ ವಿಚಾರಿಸಿ, ಗೌರವಾಧರಗಳಿಂದ ಮನೆಗೆ ಕರೆದೊಯ್ದು ಸತ್ಕರಿಸಿ, ಹೆಂಡತಿಯ ಬಳಿ ಬಿಟ್ಟು ವ್ಯಾಪಾರಕ್ಕೆ ದೂರ ದೇಶಕ್ಕೆ ಹೋಗುವನು. ಅವನ ಹೆಂಡತಿ ಕುಟಿಲತೆಯಿಂದ ವ್ಯಾಳಿಯೆಂಬ ಕುಂಟಣಿಗೆ ಅನಂತಮತಿಯನ್ನು ಸಾವಿರ ಹೊನ್ನಿಗೆ ಮಾರುತ್ತಾಳೆ. ವೇಶ್ಯಾವೃತ್ತಿಗೆ ಒಪ್ಪದ ಅವಳನ್ನು ಹಣದಾಸೆಗೆ ಆ ಊರಿನ ರಾಜ ಸಿಂಹರಥನಿಗೆ ಒಪ್ಪಿಸುತ್ತಾಳೆ. ಇವಳ ಮೋಹಕ ರೂಪಿಗೆ ಶರಣಾದ ರಾಜ, ಅವಳನ್ನು ತನ್ನವಳಾಗಿ ಮಾಡಿಕೊಳ್ಳಲು ವಿವಿಧ ರೀತಿಯಲ್ಲಿ ಬೇಡಿದರೂ ಒಪ್ಪದಿದ್ದಾಗ, ಶಿಕ್ಷಿಸುತ್ತಾನೆ. ಅವನಿಗೆ ಯಾವ ಪ್ರಯೋಜನವೂ ಆಗುವುದಿಲ್ಲ. ನಗರಾಭಿಮಾನಿ ದೇವತೆಗಳು ಅವಳ ಜಿನ ನಿಷ್ಠೆಗೆ ಮರುಳಾಗಿ, ಅವಳ ಶಿಕ್ಷೆಯ ನೋವನ್ನು ರಾಜ ಮತ್ತು ಅವನ ಕುಟುಂಬಕ್ಕೆ ವರ್ಗಾಯಿಸಿದರು. ಅನಂತಮತಿಯುನ್ನು ದೇವತೆಗಳು ಅವಳ ದೃಢತೆಯನ್ನು ಮೆಚ್ಚಿ ಹೊಗಳಿದಾಗ ದೇವದುಂದುಭಿಗಳು ಮಳೆಗರೆದ ಪವಾಡವನ್ನು ನೋಡಿ ಜನ ಬೆಕ್ಕಸಬೆರಗಾದರು.ನಂತರ ಆಕೆ ರಾಜ ಸತ್ಕಾರದಿಂದ ಬಂದು ಕಮಲಶ್ರೀ ಕಂತಿಯವರ ಬಳಿ ಸೇರಿ ಜಿನೇಂದ್ರ ಸ್ಮರಣೆಯಲ್ಲಿ ತತ್ಪರಳಾದಳು.

ಇತ್ತ ಅನಂತಮತಿಯ ತಂದೆ ಪ್ರಿಯದತ್ತ ಮತ್ತು ತಾಯಿ ಅಂಗಮತಿ ಮಗಳ ಅಗಲಿಕೆಯಿಂದ ನರಳಿ ಹೋಗಿದ್ದರು. ಪ್ರಿಯದತ್ತ ಊರನ್ನೇ ತೊರೆದು ಸ್ಥಳ ಬದಲಾವಣೆಗೆ ತನ್ನ ತಂಗಿ ವಸುದೇವಿಯ ಬಳಿ ಬಂದಾಗ ಅಕಸ್ಮಾತ್ ಅನಂತಮತಿ ಜಿನ ದೇಗುಲದಲ್ಲಿ ಅನಂತಮತಿ ದೊರಕುತ್ತಾಳೆ. ತಂದೆ ತಾಯಿ ಇಬ್ಬರೂ ಆನಂದದಿಂದ ಮಗಳನ್ನು ಅಪ್ಪುತ್ತಾರೆ. ಕೆಲವು ದಿನಗಳ ಅವಳ ವಿವಾಹದ ಬಗ್ಗೆ

ಯೋಚಿಸಲಾರಂಭಿಸಿದರು. ಸೋದರಳಿಯ ಶ್ರುತಸಾಗರನೊಂದಿಗೆ ವಿವಾಹ ನಡೆಸಲು ಯೋಜಿಸಿ ನಿಶ್ಚಯಿಸಿದರು. ಇದನ್ನು ತಿಳಿದ ಅನಂತಮತಿ ವಿವಾಹವನ್ನು ಬಲವಾಗಿ ನಿರಾಕರಿಸಿ, ಎಲ್ಲರನ್ನು ಒಪ್ಪಿಸಿ, ಆರ್ಯಿಕೆಯ ದೀಕ್ಷೆ ಪಡೆದಳು. ಕರ್ಮರಾಜನ ಏಟಿಗೆ ಸಿಗದಂತೆ ಮಲಧಾರಿಯಾಗಿ ದೇಹವನ್ನು ರಕ್ಷಿಸಿಕೊಂಡಳು. ಒಟ್ಟಾರೆ ಇಲ್ಲಿ ಅನಂತಮತಿ, ತನ್ನೆಲ್ಲಾ ಕಷ್ಟ ನಷ್ಟದ ಸಂದರ್ಭದಲ್ಲೂ, ಬ್ರಹ್ಮಚರ್ಯದ ಸಾಮರ್ಥ್ಯವನ್ನು ಉಪಸರ್ಗದಲ್ಲೂ ಉಳಿಸಿಕೊಂಡಳೆಂಬುದು ಈ ಕಥೆಯ ಮುಖ್ಯಾಂಶ.

ನಿರ್ವಿಚಿಕಿತ್ಸೆಗೆ ಮಾದರಿ - ಮುನಿಭಕ್ತ ಒದ್ದಾಯನ - ಪತಿ ಭಕ್ತೆ ಪ್ರಭಾವತಿ.

ರೌರವಪುರದ ಮಹಾಮಂಡಲೀಕನಾಗಿದ್ದ ಒದ್ದಾಯನನು ಶತ್ರುಗಳಿಗೆ ಸಿಂಹಸ್ವಪ್ನವೂ, ಶರಣಾಗತ ರಕ್ಷಕನೂ, ಮಹಾ ಜಿನ ಭಕ್ತನೂ ಮತ್ತು ಚತುರ್ವಿದ ದಾನ ಪ್ರವರ್ತಕನಾಗಿದ್ದನು. ಇನ್ನು ಆತನ ಪತ್ನಿ ಪ್ರಭಾವತಿ ಸೌಶೀಲ್ಯೆ, ಸೌಂದರ್ಯವತಿಯಾಗಿದ್ದಳು. ಒಮ್ಮೆ ಸೌಧರ್ಮ ಕಲ್ಪದಲ್ಲಿದ್ದ ಸೌಧರ್ಮೇಂದ್ರನನ್ನು ದೇವತೆಗಳು ಒಡ್ಡೋಲಗದಲ್ಲಿ ಪ್ರವಚನವನ್ನು ನೀಡಲು ಕೇಳಿಕೊಂಡರು. ಸೌಧರ್ಮೇಂದ್ರನು "ಹುಟ್ಟಿಗಿಂತ ಆಚರಣೆಯೇ ಮುಖ್ಯ. ಮಾನವರಲ್ಲಿ ಕೀಳು ಮೇಲು ಎಂಬುದಿಲ್ಲ. ಶುದ್ಧ ಚಾರಿತ್ರ್ಯವುಳ್ಳವರ, ಧರ್ಮವಂತರ, ಧರ್ಮಾಚರಣೆಯೇ ಪುಣ್ಯಕ್ಕೆ ತಾಯಿ ಬೇರಾಗಿದೆ" ಎಂದು ಪ್ರವಚನ ನೀಡಿದನು. ಆಗ ದೇವತೆಗಳು "ಧರ್ಮದಲ್ಲೂ, ಧರ್ಮಾತ್ಮರಲ್ಲೂ ಅಸಹ್ಯ ಪಡೆದಿರುವುದನ್ನು ನಿರ್ವಿಚಿಕಿತ್ಸೆ ಎನ್ನುವರು. ನಿರ್ವಿಚಿಕಿತ್ಸೆಯಲ್ಲಿ ಹೆಸರು ಪಡೆದವನು ಭರತ ಖಂಡದಲ್ಲಿ ಯಾರಾದರೂ ಇರುವರೇ?" ಎಂದು ಕುತೂಹಲ ಚಿತ್ತರಾಗಿ ಪ್ರಶ್ನೆ ಮಾಡಿದರು. ಆಗ ಸೌಧರ್ಮೇಂದ್ರನು "ಭರತ ಕ್ಷೇತ್ರದಲ್ಲಿ ಒದ್ದಾಯನನೆಂಬ ಮಹಾರಾಜನಿರುವನು. ಇವನು ನಿರ್ವಿಚಿಕಿತ್ಸೆಯಲ್ಲಿ ಸೀಮಾಪುರುಷನಾಗಿರುವನು" ಎಂದು ಹೇಳಿದನು. ಈ ಮಾತನ್ನು ಕೇಳಿದ ವಾಸುದೇವನು ಸ್ವರ್ಗದಿಂದ ಹೊರಟು ರೌರವಪುರಕ್ಕೆ ಬಂದು ಒದ್ದಾಯನನ್ನು ಪರೀಕ್ಷಿಸಲು ದಿಗಂಬರ ಮುನಿಯ ರೂಪ ಧರಿಸಿದನು.

ಅತ್ಯಂತ ಭೀಕರ ರೂಪನಾಗಿ ಅಷ್ಟಾವಕ್ರನಾಗಿ, ಗಾಯದ ರಸಿಕೆಯ ದುರ್ನಾತದೊಂದಿಗೆ ಈ ಮಾಯಾ ತಪಸ್ವಿಯು ರೌರವ ನಗರದಲ್ಲಿ ಚರಿಗೆಗೆ ಹೊರಟನು. ಈ ಕುರೂಪು ದಿಗಂಬರನನ್ನು ಜನ ಹತ್ತಿರ ಸೇರಿಸದೆ, ಯಾರೂ ಆಹಾರ ಕೊಡದೇ ಇದ್ದಾಗ ಅರಮನೆಯತ್ತ ಬರುತ್ತಾನೆ. ಆಗ ಒದ್ದಾಯನನು ಅಸಹ್ಯಪಡದೆ, ಸಂತಸದಿಂದ ಭಕ್ತಿಪೂರ್ವಕವಾಗಿ ಮುನಿಯನ್ನು ಸ್ವಾಗತಿಸುತ್ತಾ ಪ್ರಭಾವತಿಯೊಂದಿಗೆ ಉಪಚರಿಸಿ ಆಹಾರ ನೀಡಿ ಸೇವೆ ಮಾಡುತ್ತಾನೆ. ಒದ್ದಾಯನ ಮತ್ತು ಪ್ರಭಾವತಿಯ ಅನನ್ಯ ಭಕ್ತಿಗೆ ಮೆಚ್ಚಿ, ಮಾಯಾ ರೂಪವನ್ನು ತ್ಯಜಿಸಿ ವಾಸುದೇವನು ದೇವತೆಯಾಗಿ ಶೋಭಿಸಿದನು. ವಾಸುದೇವನು ಒದ್ದಾಯನನ ನಿರ್ವಿಚಿಕಿತ್ಸಾ ಗುಣವನ್ನು ಹೊಗಳಿ ಕೊಂಡಾಡಿದನು.

ಒದ್ದಾಯನನು, ಪ್ರಭಾವತಿಯ ಬಾಲ್ಯದ ಗೆಳತಿ ನಾರಾಯಣದತ್ತೆಯು ಗಂಡನನ್ನು ಸೋಲಿಸಿದ್ದಕ್ಕಾಗಿ ಸೇಡು ತೀರಿಸಿಕೊಳ್ಳಲು ಸಮಯ ಕಾದಿದ್ದಳು. ಇವಳು ಮಹಾತಪಸ್ವಿನಿಯಂತೆ ನಟಿಸುತ್ತಾ ಜನರನ್ನು ಮರಳುಗೊಳಿಸಿದ್ದಳು. ಪ್ರಭಾವತಿಯನ್ನು ಮರಳುಗೊಳಿಸಿ ಶ್ರಾವಕ ವ್ರತದಿಂದ ಭ್ರಷ್ಟಾಳಾಗುವಂತೆ ಮಾಡುವೆನೆಂದು ಪಣತೊಟ್ಟು ನಾರಾಯಣದತ್ತೆಯು ರೌರವಪುರಕ್ಕೆ ಬಂದಿದ್ದಳು. ಗೆಳತಿಯ ಬಗ್ಗೆ ಎಲ್ಲವನ್ನು ತಿಳಿದ ಪ್ರಭಾವತಿ ಅಷ್ಟಾಗಿ ಗಮನಕೊಡದೆ ನಿರ್ಲಕ್ಷಿಸಿದಳು. ಪ್ರಭಾವತಿಯ ಈ ಬಗೆಯ ನಡೆಯಿಂದ ಕುಪಿತಳಾಗಿ, ಅವಳ ಜೈನ ಶ್ರದ್ಧೆ ಹಾಳುಮಾಡಲೇಬೇಕೆಂದು ಪಣ ತೊಟ್ಟಳು. ಮಾಳವದ ದೊರೆ ಚಂಡ ಪ್ರದ್ಯೋತನ ಮನಸ್ಸಿಗೆ ಕೆಟ್ಟ ಆಲೋಚನೆ ತುಂಬಿದಳು. ಚಂಡ ಪ್ರದ್ಯೋತನನು ಪ್ರಭಾವತಿಯ ಭಾವಚಿತ್ರವನ್ನು ನೋಡಿ, ಅವಳ ಸೌಂದರ್ಯಕ್ಕೆ ಮರುಳಾಗಿ ಒದ್ದಾಯನನು ಇಲ್ಲದ ಸಂದರ್ಭವನ್ನು ನೋಡಿ ರೌರವಪುರಕ್ಕೆ ಲಗ್ಗೆ ಇಟ್ಟನು. ಪ್ರಭಾವತಿಯ ಜಿನನಿಷ್ಠೆಯನ್ನು ಕಂಡು ವಾಸುದೇವ ದೇವಲೋಕದಿಂದ ಬಂದು ಚಂಡ ಪ್ರದ್ಯೋತನನ ಸೈನ್ಯವನ್ನೆಲ್ಲ ತರೆಗಲೆಯಂತೆ ತೂರಿ ಉಜ್ಜಯಿನಿಯ ಮುಂದೆ ಎಸೆದನು. ಪತಿವ್ರತೆಯಾದ ಪ್ರಭಾವತಿಯನ್ನು ಪರೀಕ್ಷಿಸಲು ತಾನೇ ಚಂಡ ಪ್ರದ್ಯೋತನನ ರೂಪ ಧರಿಸಿ ಅವಳನ್ನು ಪೀಡಿಸಿದನು. ಆದರೂ ಪ್ರಭಾವತಿ ಕಂಗೆಡಲಿಲ್ಲ. ಅವಳ ಜಿನನಿಷ್ಠೆಯನ್ನು ಕೊಂಡಾಡಿ ಕಲ್ಪತರುವಿನ ಪಾದ ಪೂಜೆ ಮಾಡಿ ಸ್ವರ್ಗಕ್ಕೆ ವಾಸುದೇವ ಹೋದನು.

ಒದ್ದಾಯನ ಮತ್ತು ಪ್ರಭಾವತಿಯರ ಈ ಜಿನ ನಿಷ್ಠೆ, ನಿರ್ವಿಚಿಕಿತ್ಸಾ ಗುಣ, ಸದ್ಧರ್ಮಾಸಕ್ತತೆ, ಚತುರ್ವಿಧಾನದ ಕುರಿತಾದ ಕತೆ ಇದಾಗಿದೆ. ಕೊನೆಯಲ್ಲಿ ಒದ್ದಾಯನನು ವಿರಕ್ತಿಗೊಂಡು ರಾಜ್ಯ ತೊರೆದು, ಮಹಾವೀರ ತೀರ್ಥಂಕರರ ಬಳಿ ದಿಗಂಬರ ಮುನಿಯಾಗಿ ಉಗ್ರ ತಪವೆಸಗಿ, ಅಷ್ಟಕರ್ಮಗಳನ್ನೂ ನಷ್ಟಗೊಳಿಸಿ ಸಿದ್ಧಪರಮೇಷ್ಠಿಯಾದನು. ಇತ್ತ ಪ್ರಭಾವತಿಯು ಸುವ್ರತಗಂತಿಯವರ ಸನ್ನಿಧಿಯಲ್ಲಿ ಆರ್ಯಿಕಾ ದೀಕ್ಷೆ ಪಡೆದು ಕಠಿಣ ತಪವೆಸಿಗೆ, ಕೊನೆಯಲ್ಲಿ ಶುಭ ಪರಿಣಾಮದಿಂದ ಸಲ್ಲೇಖನ ವ್ರತವನ್ನು ಸ್ವೀಕರಿಸಿ ಸಮಾಧಿಮರಣ ಪಡೆದು ಬ್ರಹ್ಮ ಕಲ್ಪದಲ್ಲಿ ಮಹರ್ದಿಕ ದೇವನಾಗಿ ಜನಿಸಿದಳು.

ರೇವತೀ ಮಹಾದೇವಿ - ಅಮೂಢ ದೃಷ್ಟಿ

ವಿಜಯಾರ್ಧ ಪರ್ವತದ ದಕ್ಷಿಣ ಶ್ರೇಣಿಯ ಮೇಘಕೂಟ ಪಟ್ಟಣದಲ್ಲಿ ಚಂದ್ರಬನು ವಿದ್ಯಾಧರ ರಾಜನಾಗಿದ್ದನು. ಇವನು ಅನುಪಮ ಜಿನಭಕ್ತನಾಗಿದ್ದನು. ಕಾಲಾ ನಂತರ ಇವನಿಗೆ ಸಾಂಸಾರಿಕ ವೈರಾಗ್ಯ ಉಂಟಾಗಿ 'ವೈಭವವು ಇಬ್ಬನಿಯಂತೆ, ದೇಹವು ಹೂವಿನಂತೆ, ಹಳ್ಳದೊಳಗಿರುವ ಮರದಂತೆ ಯಾವುದು ಶಾಶ್ವತವಲ್ಲ ಸ್ಥಿರವಲ್ಲ' ಎಂದು ಸಂಸಾರಕ್ಕೆ ಹೇಸಿ ಜಿಗುಪ್ಸಿಗೊಂಡನು. ತನ್ನ ಹಿರಿಯ ಮಗನಾದ ಚಂದ್ರಶೇಖರನಿಗೆ ಚಂದ್ರಬನು ರಾಜ್ಯವನ್ನು ಕೊಟ್ಟು ದಿಗಂಬರನಾಗಲು ಹೊರಟನು. ಚಂದ್ರಬನು ವಿಮಾನದಲ್ಲಿ ಹೊರಟು ಪಾಂಡ್ಯ ದೇಶದಲ್ಲಿದ್ದ ದಕ್ಷಿಣ ಮಧುರಗೆ ಆಗಮಿಸಿದನು. ಅಲ್ಲಿಯ ಜಿನದೇವ ಆಲಯಕ್ಕೆ ಭೇಟಿ ಕೊಟ್ಟಾಗ ಗುಪ್ತ ಭಟ್ಟಾರಕರು ಮುನಿ ಸಂಕುಲಕ್ಕೆ ಆಚಾರ್ಯರಾಗಿದ್ದು, ಅವರ ದರ್ಶನ ಮಾಡಿ ತನಗೂ ಮುನಿದೀಕ್ಷೆ ಕೊಡುವಂತೆ ಪ್ರಾರ್ಥಿಸಿದನು. ಆಗ ಭಟ್ಟಾರಕರು "ಮುನಿಯಾಗುವುದು ಹುಡುಗಾಟವಲ್ಲ. ವೈರಾಗ್ಯವು ಮುನಿ ದೀಕ್ಷೆಗೆ ಮೂಲ ಬಂಡವಾಳವಾಗಿದೆ. ವೈರಾಗ್ಯವಿಲ್ಲದವರಿಗೆ ತಪಸ್ಸು ಸಿದ್ದಿಸದು" ಎಂದು ವಿಧವಿಧವಾಗಿ ಹೇಳಿ, "ಮುನಿಯಾಗಲು ಆತುರ ಪಡಬೇಡ ಹಿಂದಿರುಗಿ ಕೇಚರ ರಾಜ್ಯವನ್ನು ಧರ್ಮದಿಂದ ಪಾಲಿಸು" ಎಂದು ಹಿತವಚನವನ್ನು ಹೇಳಿದರು. ಆದರೆ

ಚಂದ್ರಬನು ಒಪ್ಪದಿದ್ದಾಗ ಮನಸಾರೆ ಎಲ್ಲಾ ಆಸ್ತಿಯನ್ನು ತೊರೆದು ಬಿಡು ಎಂದು ಭಟ್ಟಾರಕರು ಸೂಚಿಸಿದರು. ಚಂದ್ರಬನು ಮುನಿಗಳ ಸನ್ನಿಧಿಯಲ್ಲಿ ಎಲ್ಲ ಸಂಪತ್ತನ್ನು ತ್ಯಜಿಸನಾದರೂ ಕೆಲವು ವಿದ್ಯೆಗಳನ್ನು ಮಾತ್ರ ಹಾಗೆ ಉಳಿಸಿಕೊಂಡನು. ಇದನ್ನು ಭಟ್ಟಾರಕರು ಗಮನಿಸಿದರು. ಆಗ ಭಟ್ಟಾರಕರಿಗೆ ಚಂದ್ರಬನು 'ಮಹಾಸ್ವಾಮಿ ಸದುದ್ದೇಶದಿಂದ ವಿದ್ಯೆಗಳನ್ನು ಉಳಿಸಿಕೊಂಡಿರುವೆನೆಂದು' ಹೇಳಿದನು. ಆಗ ಭಟ್ಟಾರಕರು "ಮಹಾವ್ರತಿ ಆಗದೆ ಅಣುವ್ರತಧಾರಿಯಾಗಿರು" ಎಂದು ಹೇಳಿ ಅಣು ವ್ರತಗಳ ಸ್ವರೂಪವನ್ನು, ಹಾಗೆ ಶ್ರಾವಕರ 11 ನೆಲೆಗಳನ್ನು ವಿವರಿಸಿದರು. ನಂತರ ಚಂದ್ರಬನು ಶೂರಸೇನ ದೇಶದ ರಾಜಧಾನಿ ಉತ್ತರ ಮಧುರಗೆ ಹೋಗಿ ಅಲ್ಲಿನ ಜನಮಂದಿರಗಳಿಗೆ ವಂದಿಸುವ ಅಪೇಕ್ಷೆಯನ್ನು ಭಟ್ಟರಕರಲ್ಲಿ ನಿವೇದಿಸಿದನು. ಭಟ್ಟಾರಕರು ಸಮ್ಮತಿಸಿ ರೇವತಿ ಮಹಾದೇವಿಗೆ ನಮ್ಮ ಹರಕೆಯನ್ನು ತಿಳಿಸಿ, ಅಲ್ಲಿರುವ ಉಂಡುರಲಿ ಭಟ್ಟಾರಕರಿಗೂ ನಮ್ಮ ನಮಸ್ಕಾರವನ್ನು ತಿಳಿಸಲು ಹೇಳಿ, ಇವೆರಡನ್ನು ಮರೆಯಬಾರದು ಎಂದು ಹೇಳಿ ತೀರ್ಥ ವಂದನೆಗಾಗಿ ಅನುಮತಿ ಕೊಟ್ಟರು. ಚಂದ್ರಬನು "ಮಹಾಸ್ವಾಮಿ, ಉತ್ತರ ಮಧುರೆಯ ತುಂಬಾ ಮಹಾ ಮುನಿಗಳಿರುವರು. ಆದರೆ ತಾವು ರೇವತಿ ಮಹಾದೇವಿಗೆ ಮಾತ್ರ ಹರಕೆ ಹೇಳಿರುವಿರಿ. ಸಾಮಾನ್ಯರಾದ ಉಂಡುರುಳಿ ಭಟ್ಟಾರಕರಿಗೆ ಮಾತ್ರ ವಂದನೆ ತಿಳಿಸಿರುವಿರಿ. ಇವರಿಬ್ಬರ ಮೇಲೆ ಮಾತ್ರ ತಮಗೆ ಪಕ್ಷಪಾತ ಏಕೆ" ಎಂದು ಕೇಳಿದನು. "ಭಟ್ಟಾರಕರು ಇವರಿಬ್ಬರ ಹೊರತಾಗಿ ಅಲ್ಲಿ ಉಳಿದವರೆಲ್ಲ ಬೇವಿನ ಸಸಿಗಳಂತೆ ಕಹಿ" ಎಂದುಬಿಟ್ಟರು.

ಖೇಚರನು ಉತ್ತರ ಮಧುರೆಯಲ್ಲಿ ಹಲವು ಮುನಿಗಳನ್ನು ಪ್ರಶ್ನಿಸಿ ಪರೀಕ್ಷಗೊಟ್ಟಿದನಾದರೂ ಅವರಲ್ಲಿ ಸಮ್ಯಕ್ತ್ವ ಅವನಿಗೆ ಯಾರಲ್ಲೂ ಕಾಣಿಸಲಿಲ್ಲ. ಉಂಡುರುಳಿ ಭಟ್ಟಾರಕರನ್ನು ಪರೀಕ್ಷಿಸುವ ನಿರ್ಧಾರ ಮಾಡಿದನು. ಖೇಚರನೊಡ್ಡಿದ್ದ ವಿಧ ವಿಧ ಪರೀಕ್ಷೆಗಳಲ್ಲಿ ಭಟ್ಟಾರಕರು ಗೆದ್ದಿದ್ದರು. ನಂತರ ರೇವತಿಮಹಾದೇವಿಯ ಸರದಿಯಾಗಿತ್ತು. ಚಂದ್ರಾಭನು ಚತುರ್ಮುಖ ಬ್ರಹ್ಮನಾಗಿ ಹಂಸಾರೂಢನಾಗಿ ಕಾಣಿಸಿಕೊಂಡನು. ಕೈಯಲ್ಲಿ ಕಮಂಡಲ ಹಿಡಿದು ಅರಮನೆಯ ಬೀದಿಯಲ್ಲಿ ಹೊರಟನು. ಇದನ್ನು

ಕಂಡ ಅರಸ ಆಶ್ಚರ್ಯಗೊಂಡು ಸೃಷ್ಟಿಕರ್ತ ಬ್ರಹ್ಮನೇ ಕರೆಯದಿದ್ದರೂ ನಮ್ಮ ನೆಲೆಗೆ ಬಂದಿರುವನಲ್ಲ ನಾವು ಹೋಗಿ ಆ ದೇವನನ್ನು ಪೂಜಿಸಿ ಬರೋಣ ಬಾ ಎಂದು ರೇವತಿಯನ್ನು ಕರೆದನು. ರೇವತಿಯು ಅರಸನ ದೇವತಾ ಮೂಢತನವನ್ನು ಕಂಡು ಯಾರೋ ವೇಷ ಕಟ್ಟಿ ಜನರ ಕಣ್ಣಿಗೆ ಮಣ್ಣೆರೆಚುತ್ತಿರುವರು, ಇವನು ಖೇಚರ ಇರಬಹುದು ಅಥವಾ ಮಾಯಾವಿಯೂ ಆಗಿರಬಹುದು. ಜನರನ್ನು ಮರಳುಗೊಳಿಸಿ ಪೂಜೆ ಗೌರವ ಪಡೆಯಲು ಇವನ ಆಶಯವಾಗಿರಬಹುದು, ಹಿಂದೆ ಆದಿ ಬ್ರಹ್ಮನು ನಮಗೆ ಪ್ರಪ್ರಥಮ ತೀರ್ಥಂಕರನಾಗಿದ್ದನು. ಆತನು ಕೈವಲ್ಯ ಪಡೆದು ಹಲವು ವರ್ಷಗಳಾಯಿತು ಎಂದು ರೇವತಿಯು ರಾಜನ ಸಮ್ಯತ್ವವನ್ನು ಅಲುಗಾಡದಂತೆ ಸದೃಢಪಡಿಸಿದಳು. ಆದರೆ ಖೇಚರನು ರೇವತಿಯನ್ನು ಹುಡುಕಿ ಎಲ್ಲೂ ಕಾಣದೆ ಇದ್ದಾಗ ಆಶ್ಚರ್ಯಗೊಂಡನು. ಮೂರನೆಯ ದಿನ ಇವನು ನಗರದ ದಕ್ಷಿಣ ಭಾಗದಲ್ಲಿ ಗರುಡಾರೂಢನಾಗಿ ವಿಷ್ಣು ರೂಪವನ್ನು ತೋರಿಸಿ, ಊರಿನ ಜನರು ವೈಕುಂಠವಾಸಿಯಾದ ವಿಷ್ಣುವೇ ಪ್ರತ್ಯಕ್ಷನಾಗಿರುವ ಎಂದು ಭಾವಿಸಿ, ಪರಮಾತ್ಮನ ಅನುಗ್ರಹಕಾಂಕ್ಷಿಗಳಾಗಿ ಪೂಜಿಸಿದರು ಆಗಲೂ ರೇವತಿ ನಂಬಲಿಲ್ಲ. ನಂತರ ಖೇಚರನು ಮುಕ್ಕಣ್ಣನಾಗಿ ಮೈದೋರಿದನು. ಆಗಲೂ ರೇವತಿ ಗಮನಕೊಡಲಿಲ್ಲ. ಆದರೆ ಪತಿ ವರ್ಣ ಮಹಾರಾಜನು ಶಿವನಿಗೆ ವಂದಿಸಲು ಹೋಗಲೇಬೇಕೆಂದು ಹಠ ಹಿಡಿದು ನಿಂತನು. ರೇವತಿ ಬಂದಿರುವವನು ಯಾರೋ ಮಾಯಾವಿ ಇರಬಹುದು ಎಂದು ಸಮಾಧಾನ ಪಡಿಸಿದಳು. ಖೇಚರನಿಗೆ ಹೇಗಾದರೂ ರೇವತಿಯನ್ನು ನಂಬಿಸುವ ಹಂಬಲವಾಯಿತು. ಅದಕ್ಕಾಗಿ ವರ್ಧಮಾನ ತೀರ್ಥಂಕರನ ಸಮವಸ್ತ್ರವನ್ನು ಆಗಸದಲ್ಲಿ

ತೇಲಿಸಿದನು. ಆಗಲೂ ರೇವತಿ ಮಣಿಯಲಿಲ್ಲ. ರೇವತಿ ಮೂಢತ್ರಯವಿರುವವರು ಜೈನರಲ್ಲ ಎಂದು ಹೇಳಿದಳು. ಮೂಡತ್ರಯರೆಂದರೆ ಮಾಯಾಚಾರಿಗಳನ್ನು ಸದ್ಗುರುಗಳೆಂದು ನಂಬಿ ಎರಗುವುದು, ಗುರುಮೂಢತನ ಸಮ್ಯಕ್ತ್ವವು ಪೂರ್ಣವಾಗಬೇಕಾದರೆ ನಾವು ದೇವಮೂಢತನ ಮತ್ತು ಗುರುಮೂಢತನಗಳಿಂದ ಪಾರಾಗಬೇಕು ಎಂದು ತನ್ನ ಪತಿಯ ಸಮ್ಯಕ್ ತತ್ವವನ್ನು ಶುಚಿಗೊಳಿಸಿದಳು. ಕೊನೆಗೆ

ಖೇಚರನು ಆಕೆಯ ಧರ್ಮಶ್ರದ್ಧೆಗೂ, ಸಮ್ಯಕ್ತ್ವಕ್ಕೂ ಬೆರಗಾಗಿ ವಂದಿಸಿದ. ಇತ್ತ ವರುಣ ಮಹಾರಾಜ ವಿರಕ್ತನಾಗಿ ದಿಗಂಬರ ಧೀಕ್ಷೆ ಪಡೆದನು. ರೇವತಿ ಮಹಾದೇವಿ ಆರ್ಯಿಕಾದೀಕ್ಷೆ ಪಡೆದು ತಪಸ್ಸಿನಲ್ಲಿ ನಿರತಳಾದಳು.

ಇನ್ನೂ ಅನೇಕ ಜೈನ ಮಹಾಪುರುಷರ ಕತೆಗಳಿಂದ ಆವೃತವಾಗಿರುವ ನಯಸೇನನ ಈ ಧರ್ಮಾಮೃತ ಅದ್ಭುತ ಕೃತಿಯಲ್ಲೊಂದು ಎನ್ನುವುದರಲ್ಲಿ ಸಂದೇಹವಿಲ್ಲ. ಒಂದೊಂದು ಆಶ್ವಾಸವು ಚಿತ್ತಾಹ್ಲಾದಕರವಾದ ಕಥೆಗಳಿಂದ ಕೂಡಿವೆ, ತತ್ವ ಪ್ರಚಾರಕ್ಕಾಗಿ ಬರೆದ ಕಥೆಗಳಾದರೂ ಓದುಗರ ಕುತೂಹಲವನ್ನು ಕೆರಳಿಸುತ್ತವೆ.

"ಈ ಕೃತಿಯು ಕುಮಾರವ್ಯಾಸ, ತೊರವೆ ರಾಮಾಯಣದಂತೆ ಜನರಂಜಕವಾಗಿದೆ"ಯೆಂದು ರಂ.ಶ್ರೀ ಮುಗುಳಿಯವರು ಅಭಿಪ್ರಾಯ ಪಡುತ್ತಾರೆ. ಇದರಲ್ಲಿ ಕಾವ್ಯ ಕಲ್ಪನೆಯ ಹೊಸ ಪ್ರಯೋಗಗಳನ್ನು ನಿರೀಕ್ಷಿಸುವಂತಿಲ್ಲವಾದರೂ, ನಯಸೇನ ತನ್ನ ಇಡೀ ಕೃತಿಯಲ್ಲಿ ತನ್ನ ಜೀವನಾನುಭವದ ಪರಿಪಕ್ವತೆಯ ಜೊತೆಗೆ ಜನಭಾಷೆ ಮತ್ತು ಜನಜೀವನೋಪದೇಶಗಳು ಅದ್ಭುತವಾಗಿ ಸಂಯೋಜನೆಗೊಂಡಿರುವುದರ ಬಗ್ಗೆ ವಿದ್ವಾಂಸರ ಪ್ರಶಂಸೆ ಇದೆ. ನಯಸೇನ ಹಲವಾರು ಕಡೆ ಅಸಂಬದ್ಧತೆಯ ಹೋಲಿಕೆಗಳನ್ನು, ವಸ್ತುಗಳ ಜೋಡಣೆಯ ವೈಪರೀತ್ಯಗಳನ್ನೂ ಮೀರುವಲ್ಲಿ ಸೋತಿದ್ದಾನೆ ಎನ್ನುವುದನ್ನು ಒಪ್ಪಿಕೊಳ್ಳುತ್ತಾರೆ. ಹಲವು ಕತೆಗಳು ಬಹಳ ಉದ್ದವಾಗಿವೆ. ಅರ್ಥೈಸಿಕೊಳ್ಳಲು ಜಟಿಲವಾಗಿವೆ. ಅವುಗಳಲ್ಲಿ ಅತಿ ಪ್ರಸಂಗ, ಅದ್ಭುತ ಸಂಗತಿ, ಇವು ಎದ್ದು ಕಾಣುತ್ತವೆ ಎಂಬ ವಾದವೂ ಇದೆ.

ಕೆಲವು ಕಡೆ ಅಡಕವಾದ ಹಾಸ್ಯ, ವಿಷಯ ಗಾಂಭೀರ್ಯಕ್ಕೆ ಚ್ಯುತಿಯನ್ನೂ ಉಂಟು ಮಾಡುತ್ತದೆ. ಉದಾ: 'ಪೆಣನಂ ಕಂಡ ಪರದೆಯಂತೆ ಕಣ್ಣಂ ಮುಚ್ಚುತಾ' ಅಮೃತವೂ ವಿಷವಾದಂತೆ, 'ಬಿನ್ನಪಗೆಯ್ದು ವೊಕ್ಕಲಿಗನಂತೆ ಬಿಕ್ಕುತುಂ' ಒಂದೆಡೆ ಇದ್ದರ, ಕಣ್ಣಿಲ್ಲದೆ ಕಾಂಬನೆಂಬ, ಮಣ್ಣಿಲ್ಲದೆ ಬೆಳೆವೆನೆಂಬ ಹೋಲಿಕೆಗಳಲ್ಲಿ ಒಂದು

ಸಮಾನಧರ್ಮವಿಲ್ಲದೆ ಅತ್ಯುಚಿತವಾಗಿವೆ. ಹೀಗೆ ಕಾವ್ಯ ಸಂಸ್ಕೃತಿ ಇತ್ತು ಜನಪದದ ದೇಸಿ ಮಾರ್ಗವನ್ನು ಒಟ್ಟಾಗಿಸುವಲ್ಲಿ ಸಂಪೂರ್ಣ ಸಾಫಲ್ಯ ಹೊಂದಿದ್ದಾನೆ.

ಆಧ್ಯಾತ್ಮಕ್ಕೆ ಹೆಚ್ಚಿನ ಪ್ರಾಶಸ್ತ್ಯ ಕೊಟ್ಟು ಸಾದೃಶ್ಯ ಮಾಲಿಕೆಯ ಮೂಲಕ ಕಾವ್ಯಸ್ವರೂಪವನ್ನಿತ್ತು, ಗದ್ಯವನ್ನೂ ಹೃದ್ಯ ಮಾಡಿಕೊಂಡು ಕೃತಿ ರಚಿಸಿದವನಲ್ಲಿ ನಯಸೇನ ಅಪ್ರತಿಮನೆನಿಸುತ್ತಾನೆ. ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಸರ್ವಜ್ಞನೊಬ್ಬನೇ ಇವನಿಗೆ ಜನಜೀವನಕ್ಕೆ ಹತ್ತಿರವಾದ ನಾಣ್ನುಡಿಗಳ ಅರಿವನ್ನು ನೀಡುವುದರಲ್ಲಿ ಸರಿಗಟ್ಟಿ ನಿಲ್ಲುವವನೆಂದು ವಿದ್ವಾಂಸರ ಅಭಿಪ್ರಾಯ.

ಅವನಂತೆ ನಯಸೇನನು ಸಂನ್ಯಾಸ ಜೀವನವನ್ನು ಒಗ್ಗಿಕೊಂಡಿರಬೇಕು. ಅದರಿಂದಲೇ ಬದುಕಿನ ಸೂತ್ರಗಳನ್ನು ದೂರದಲ್ಲೇ ನಿಂತು ಹೊಸೆದಿದ್ದಾನೆ.

ಒಟ್ಟಾರೆ ದೇಸೀಕವಿಯೊಬ್ಬನ, ಅಚ್ಚಕನ್ನಡದ ಕೃತಿಯುನ್ನು ಸಂಸ್ಕೃತಗಳ ಅಬ್ಬರವಿಲ್ಲದೆ 'ನಾಣ್ನುಡಿ ದೇಸಿವೆತ್ತ, ಪೊಸನುಡಿ ಮಾರ್ಗಂ' ಎನ್ನುತ್ತಾ, ಜನಾಧರೆಣೆಯ ಕೃತಿಯನ್ನು ನೀಡಿರುವುದು ಸಾಹಿತ್ಯ ಲೋಕದಲ್ಲಿ ವಿಶಿಷ್ಟ ಕೊಡುಗೆಯಾಗಿದೆ.

ಆಕರ ಗ್ರಂಥಗಳು

* ಧರ್ಮಾಮೃತ – ಸಂಪಾದಕರು ಶುಭ ಚಂದ್ರ
* ಧರ್ಮಾಮೃತ ದರ್ಶನ: ಕೆ.ಎನ್ ಭಟ್
* ಸರಳ ಧರ್ಮಾಮೃತ ಸಂಗ್ರಹ: ಡಾ.ಎಸ್.ಎಸ್ ಅಂಗಡಿ
* ನಯಸೇನನ ಧರ್ಮಾಮೃತ: ಡಾ.ರಮೇಶ್ ಆಚಾರ್
* ಧರ್ಮಾಮೃತ: ಪ.ವಿ ನಾರಾಯಣ್ ಪ್ರಧಾನ್

****

ಕವಿ ಬ್ರಹ್ಮಶಿವ

– ಡಾ. ಎಸ್. ವಿ. ಸುಜಾತ, ಬೆಂಗಳೂರು

ಬ್ರಹ್ಮಶಿವನೆಂದೇ ಖ್ಯಾತನಾಗಿರುವ ಈ ಕವಿಯ ಮೂಲ ಹೆಸರು ಬ್ರಹ್ಮ ಅಥವಾ ಬ್ರಹ್ಮದೇವ ಎಂದಿದ್ದಿರಬೇಕು. ತನ್ನ ಕಾವ್ಯದಲ್ಲಿ ಹೇಳಿಕೊಂಡಿರುವಂತೆ ಇವನ ಕಾಲ ಕ್ರಿ.ಶ. 1125–1200 ಎಂದು ವಿದ್ವಾಂಸರು ನಿರ್ಧರಿಸಿದ್ದಾರೆ. ಇವನು ವತ್ಸಗೋತ್ರಕ್ಕೆ ಸೇರಿದವನು. ತಾನು ಪಂಪರಾಜನ ಮೊಮ್ಮಗ ಎಂದು ಹೇಳಿಕೊಂಡಿದ್ದಾನೆ. ಬಹುಶಃ ಅಭಿನವ ಪಂಪನೆಂದು ಪ್ರಸಿದ್ಧನಾದ ನಾಗಚಂದ್ರನ ಮಗ ಸಿಂಗಿರಾಜನ ಮಗನಿರಬೇಕು. ಆ ಕಾಲದಲ್ಲಿ ತೀವ್ರವಾಗಿ ಪಸರಿಸುತ್ತಿದ್ದ ವೀರಶೈವ ಧರ್ಮದ ಆಕರ್ಷಣೆಗೆ ಒಳಗಾಗಿ ಮಹೇಶ್ವರ ಧರ್ಮವನ್ನು ಸ್ವೀಕರಿಸಿದರೂ ಕೆಲವು ಕಾಲದಲ್ಲಿ ಅದರಲ್ಲಿ ಒಳ್ಳುಗಾಣದೆ ಜೈನಧರ್ಮಕ್ಕೆ ಮರಳಿದನು. ಇವನ ಕಾವ್ಯಗಳು ಎರಡು 1. ಸಮಯ ಪರೀಕ್ಷೆ 2. ತ್ರೈಲೋಕ್ಯ ಚೂಡಾಮಣಿ ಸ್ತೋತ್ರ.

ಸಮಯ ಪರೀಕ್ಷೆ

ಇದು ಪದ್ಯಕಾವ್ಯ. ಕೆಲವು ವೃತ್ತಗಳನ್ನು ದೊರತು ಪಡಿಸಿದರೆ ಉಳಿದೆಲ್ಲವೂ ಕಂದಪದ್ಯಗಳು. ಕಾವ್ಯದಲ್ಲಿ 15 ಅಧಿಕಾರಗಳಿವೆ ಕೃತಿಯ ಹೆಸರು ಧ್ವನಿಪೂರ್ಣವೂ, ಉಚಿತವೂ ಆಗಿದೆ 'ಸಮಯ' ಎಂದರೆ

ಸಾಮಾನ್ಯವಾದ ಅರ್ಥ ವೇಳೆ, ಕಾಲ. ಈ ಅರ್ಥದಲ್ಲಿ ತನ್ನ ಕಾಲದ ಸಮಾಜದ ಆಚರಣೆಗಳು, ಜನರು, ಅವರ ನಂಬಿಕೆಗಳು ಇವೆಲ್ಲವನ್ನು ಪರೀಕ್ಷಾ ದೃಷ್ಟಿಯಿಂದ ಪರಿಶೀಲಿಸಿರುವ ಕೃತಿ ಇದಾಗಿದೆ. 'ಸಮಯ' ಎಂಬ ಪದಕ್ಕೆ 'ಧರ್ಮ' ಎಂಬ ಅರ್ಥವೂ ಇದೆ. ಈ ಹಿನ್ನೆಲೆಯಲ್ಲಿ ಕವಿ ತಾನು ನಂಬಿದ ಜೈನಧರ್ಮದ ಹಾಗೂ ಸಮಕಾಲಿನ ಪರಿಸ್ಥಿತಿಯಲ್ಲಿ ಅದಕ್ಕೆ ಸವಾಲೆಸೆಯುತ್ತಿದ್ದ ಇತರ ಧರ್ಮಗಳನ್ನು ಪರೀಕ್ಷಾ ದೃಷ್ಟಿಯಿಂದ ವಿಶ್ಲೇಷಿಸಿದ್ದಾನೆ. ಜೈನದರ್ಶನದಲ್ಲಿ 'ಸಮಯ' ಎಂಬ ಪದವನ್ನು 'ಆತ್ಮ' ಎಂಬ ಅರ್ಥದಲ್ಲೂ ಪ್ರಯೋಗಿಸಲಾಗುತ್ತದೆ- ಉದಾ: ಸಮಯಸಾರ (ಕುಂದಕುಂದಾಚಾರ್ಯರ ಪಾಕೃತ ದಾರ್ಶನಿಕ ಕೃತಿ), ಸ್ವಸಮಯ (ಆತ್ಮ) ಪರಸಮಯ (ಕರ್ಮದಿಂದ ಬಂಧಿತವಾಗಿರುವ ಆತ್ಮ) ಇತ್ಯಾದಿ. ಈ ಕೃತಿಯಲ್ಲಿ ಆ ವಿಚಾರದ ವಿವೇಚನೆಯೂ ಇದ್ದು ಕಾವ್ಯದ ಶೀರ್ಷಿಕೆ ಔಚಿತ್ಯ ಪೂರ್ಣವಾಗಿರುವುದೆನ್ನಲು ಪೂರಕವಾಗಿದೆ.

ವಸ್ತು

ಈ ಕೃತಿ ಒಂದು ಅಪೂರ್ವ ರೀತಿಯದಾಗಿದೆ. ಜೈನಧರ್ಮದ ತಾತ್ವಿಕ ಹಾಗೂ ಬೌದ್ಧಿಕ ನೆಲೆಗಳನ್ನು ವಿವರಿಸುವ, ಪ್ರಸಾರ ಮಾಡುವ ಉದ್ದೇಶದಿಂದ ಅಲ್ಲಿನ ಹಿರಿಮೆಯನ್ನು ಎತ್ತಿಹಿಡಿಯುತ್ತ, ಮಿಥ್ಯಾಧರ್ಮಗಳನ್ನು ನಿರಾಕರಿಸುತ್ತಾ ಓದುಗರು/ಕೇಳುಗರು ಜೈನಧರ್ಮವನ್ನು ಪುರಸ್ಕರಿಸಬೇಕು, ಜೈನರಾಗಿ ಹುಟ್ಟಿರುವವರೂ ಧರ್ಮದ ಒಳಗನ್ನು ಸರಿಯಾಗಿ ಅರಿತುಕೊಂಡು ಆಚರಿಸಬೇಕೆಂಬುದು ಕವಿಯ ಉದ್ದೇಶ.

ವಿಷಯದ ವ್ಯಾಪ್ತಿ ಹೀಗಿದೆ : ಆಪ್ತನ (ತೀರ್ಥಂಕರನ) ಹಿರಿಮೆ, ಲಕ್ಷಣ, ಜಿನಭಕ್ತಿಯ ಪ್ರಯೋಜನ ಇತ್ಯಾದಿ. ಜೈನ ಆಗಮಗಳು, ರತ್ನತ್ರಯ, ಸಪ್ತತತ್ವಗಳ ಸ್ವರೂಪ, ಶ್ರಾವಕರ ವ್ರತ ನಿಯಮಗಳು, ಮುನಿಗಳ ಆಚರಣೆಗಳು, ದಾನಗುಣದ ಪ್ರಶಂಸೆಗಳನ್ನು ಮೊದಲ ಏಳು ಅಧಿಕಾರಗಳಲ್ಲಿ ವಿವರಿಸಿದ್ದಾನೆ. ಮುಂದಿನ ಏಳು ಅಧಿಕಾರಗಳಲ್ಲಿ ಜೈನೇತರ ಪುರಾಣಗಳು, ಶಾಸ್ತ್ರ, ಗುರುಗಳು

ಹಾಗೂ ದೈವಗಳ ಅಸಾರತೆ, ದೈವ ಮೂಢತೆಯಿಂದ ಉಂಟಾಗುವ ಅನರ್ಥಗಳು, ಲೋಕ ಮೂಢತೆಯ ಸ್ವರೂಪ, ಜೈನೇತರರು ಜೈನಧರ್ಮದ ಬಗ್ಗೆ ತೋರುವ ಅಸಹನೆ ಅದರ ಖಂಡನೆ, ಕಪಟ ಸನ್ಯಾಸಿಗಳ ಕೆಟ್ಟ ವರ್ತನೆಗಳು ಇವುಗಳನ್ನು ವಿವರಿಸಿ ವಿಡಂಬನೆ ಮಾಡಿದ್ದಾನೆ. ಕೊನೆಯದಾದ 15ನೇ ಅಧಿಕಾರದಲ್ಲಿ ಜೈನಧರ್ಮದ ಶ್ರೇಷ್ಠತೆ ಸರ್ವಮಾನ್ಯತೆಗಳನ್ನು ಎತ್ತಿಹಿಡಿದಿದ್ದಾನೆ.

ಆಚಾರ್ಯರು / ಪೂರ್ವಕವಿಗಳ ಸ್ಮರಣೆ :

ಕಾವ್ಯದ ಆರಂಭದಲ್ಲಿ ವರ್ಧಮಾನ ತೀರ್ಥಂಕರರನ್ನು ಸ್ತುತಿಸಿ, ನಂತರ ಆಚಾರ್ಯರುಗಳಾದ ಉಮಾಸ್ವಾಮಿ, ಸಮಂತಭದ್ರ, ಜಟಾಚಾರ್ಯ, ಪೂಜ್ಯಪಾದ, ಆಕಳಂಕ, ಕೊಂಡಕುಂದ, ಸೋಮದೇವ, ವಾದಿರಾಜ, ಮೇಘಚಂದ್ರ, ವೀರಸೇನ, ಜಿನಸೇನ, ವೀರಣಂದಿ ಮುಂತಾದವರ ಗುಣಗಳನ್ನು, ಮಹಿಮೆಗಳನ್ನು ಭಕ್ತಿಯಿಂದ ವರ್ಣಿಸಿದ್ದಾನೆ. ಬಳಿಕ ಕನ್ನಡದ ಪೂರ್ವ ಕವಿಗಳಿಗೆ ಗೌರವ ಸಲ್ಲಿಸಿದ್ದಾನೆ. ಬಂಧುವರ್ಮನನ್ನು 3 ಪದ್ಯಗಳಲ್ಲಿ ಹೊಗಳುತ್ತಾ ಅವನನ್ನು 'ಭುವನಬಂಧು' ಎಂದು ಕರೆದಿದ್ದಾನೆ. ಪಂಪ, ಜಿನವಲ್ಲಭ, ಪೊನ್ನ, ರನ್ನ, ಅಗ್ಗಳ, ನಾಗಚಂದ್ರರನ್ನು ಸ್ಮರಿಸಿದ ನಂತರ ಮಹಾನ್ ವ್ಯಕ್ತಿತ್ವವುಳ್ಳ ಶಂಖನನ್ನು,ಅತ್ತಿಮಬ್ಬೆಯನ್ನು, ಚಾವುಂಡರಾಯ, ಮಂತ್ರಿ ಭರತ, ಬೊಮ್ಮ, ನಾಗದೇವ, ಕೀರ್ತಿದೇವರನ್ನು ಹೊಗಳಿದ್ದಾನೆ.

ಶೈಲಿ

ಕಾವ್ಯದ ಭಾಷೆ ಹಳೆಗನ್ನಡ, ಆದರೆ ಸರಳವಾಗಿದೆ. ಜಿನತತ್ವಗಳನ್ನು ಸಂದರ್ಭೋಚಿತವಾಗಿ, ಸಂಗ್ರಹವಾಗಿ ಅಲ್ಲಲ್ಲಿ ಹೇಳಿದ್ದಾನೆ. ಜಿನನ ಸ್ವರೂಪವನ್ನು ಹೀಗೆ ನಿರೂಪಿಸಿದ್ದಾನೆ.

ಗುಣಿಯಂ ತ್ರಿಲೋಕ ಚೂಡಾ
ಮಣಿಯಂ ಪರಮಾತ್ಮನಂ ಜಗಜ್ಜನ ಚಿಂತಾ
ಮಣಿಯನಘದೂರನಂ ಸುರ
ಗಣ ವಂದ್ಯನನಾಪ್ತನೆಂದು ಸೇವಿಪುದನಜೆವಂ (1–74)

(ಗುಣಸಹಿತನು, ಮೂರು ಲೋಕಗಳಲ್ಲಿ ಶ್ರೇಷ್ಠನು, ಜಗತ್ತಿನ ಜನರೆಲ್ಲರಿಗೂ ಚಿಂತಾಮಣಿಯಂತಿರುವವನು, ಪಾಪದೂರನು, ದೇವತೆಗಳಿಂದ ವಂದಿತನು ಆದ ಪರಮಾತ್ಮನೇ ಆಪ್ತನು ಎಂದು ತಿಳಿದು ಜ್ಞಾನಿಯಾದವನು ಪೂಜಿಸುತ್ತಾನೆ)

ಪಂಚನಮಸ್ಕಾರದ ಮಹಿಮೆಯನ್ನು ಕುರಿತ ಪದ್ಯ ಹೀಗಿದೆ –

ಯಮನಿಯಮ ಸ್ವಾಧ್ಯಾಯ
ಕ್ರಮದೆ ತಪಂಗೆಯ್ಯದೊಡಮಘಾರಾತಿಯನ
ಶ್ರಮದಿಂ ಗೆಲಲಿವೆ ಸಾಲ್ಗುಂ
ಣಮೋರಹಂತಾಣವೆನಿಸಿದಕ್ಕರಮೇಟುಂ(1–97)

(ಯಮ, ನಿಯಮ, ಸ್ವಾಧ್ಯಾಯ, ತಪಸ್ಸುಗಳನ್ನು ಆಚರಿಸದೆ ಇದ್ದರೂ ಣಮೋ ಅರಹಂತಾಣಂ (ಅಹರಹಂತರಿಗೆ ನಮಸ್ಕಾರ) ಎಂಬ ಏಳಕ್ಷರವೇ ನಿರಾಯಾಸವಾಗಿ ಪಾಪವೆಂಬ ಸೈನ್ಯವನ್ನು ಸೋಲಿಸಿಬಿಡುತ್ತದೆ.)

ಭವ್ಯ ಜೀವನ ಲಕ್ಷಣವನ್ನು ನಾಲ್ಕು ಸಾಲುಗಳಲ್ಲಿ ಹೀಗೆ ಚಿತ್ರಿಸಿದ್ದಾನೆ.

ಮದ ಮಾತ್ಸರ್ಯ ವಿದೂರಿತ
ಮೃದುವಚನಂ ಶಾಂತಮೂರ್ತಿ ನಿರ್ಮಳಮತಿ ಜೀ
ವದಯಾಪರಪ್ಪನನಿಜಿ
ವುದು ಭಾವಿಸಿ ಭವ್ಯನೀತನೆಂದಜಿವಾತಂ ॥ (4–147)

(ಅಹಂಕಾರ, ಅಸೂಯೆಗಳಿಲ್ಲದ, ಮೃದುಮಾತುಗಳನ್ನಾಡುವ, ಶಾಂತಮನಸ್ಕನೂ ನಿರ್ಮಲವಾದ ಬುದ್ಧಿಯುಳ್ಳವನೂ ಜೀವದಯಾಪರನೂ ಆದವನೇ ಭವ್ಯನು)

ಪರಮತದ ನಂಬಿಕೆಗಳನ್ನು, ಆಚರಣೆಗಳನ್ನು, ಪುರಾಣ ಪ್ರಸಂಗಗಳನ್ನು ಕವಿ ವಿಡಂಬನಾತ್ಮಕವಾಗಿ ಟೀಕಿಸಿದ್ದಾನೆ.

ತಾಂ ಕೊಲಲಾಱದೆಯುಂ ಮುಳಿ
ಸಿಂ ಕೌರವಬಲಮನಂದು ವೇಳೆತನಂಗೊಂ
ಡುಂ ಕೌಂತೇಯರಿನಾ ಬಲ
ಮಂ ಕೊಲಿಸಿದನಾಪ್ತನಪ್ಪನೆನಲಾಗಜಿವಂ (8–142)

ಅವಿವೇಕಿ ತೋಱಿಗೆ ಗಂಗಾ
ಸ್ತವಮೆಂಬುನೋರ್ವನಟ್ಟಿಯಿಂದುಸಿರ್ದೊಡಂ
ಕವಿ ಪುಂಗವರ್ಕಳೋದುವ
ರವಶ್ಯಮವಿವೇಕಿ ಬಱಿಯ ನೀರೆಂದಱಿಯರ್ (9–30)

ಈ ಟೀಕೆಯನ್ನು ಕವಿಯ ಸಮಕಾಲಿನ ಪರಿಸ್ಥಿಯ ಹಿನ್ನೆಲೆಯಲ್ಲಿ ಪರಿಭಾವಿಸುವುದು ಉತ್ತಮ. ಆಗ ಜೈನಧರ್ಮದ ಪರಿಸ್ಥಿತಿ ಕಳೆಗುಂದಿತ್ತು. ಶೈವಧರ್ಮ ವೀರಶೈವವಾಗಿ ಆ ಧರ್ಮದ ಅನುಯಾಯಿಗಳು ಆವೇಶದಿಂದ ಹಿಂಸಾಚಾರಕ್ಕೆ ಇಳಿದಿದ್ದರು. ಜೈನರಲ್ಲಿ ಕೆಲವರು ಆ ಧರ್ಮದ ಪ್ರಭಾವಕ್ಕೆ / ಬೆದರಿಕೆಗೆ ಸೋತು ತಮ್ಮ ಧರ್ಮವನ್ನು ತೊರೆಯುತ್ತಿದ್ದರು. ಕವಿ ತನ್ನ ಸಮಾಜವನ್ನು ಸ್ಥಿರವಾಗಿಸಿಕೊಳ್ಳುವ ಉದ್ದೇಶದಿಂದ ತನ್ನ ವಿಚಾರಗಳನ್ನು ಕಾವ್ಯದ ರೂಪದಲ್ಲಿ ವ್ಯಕ್ತಪಡಿಸಿದನು. ಸಾಮಾನ್ಯ ಜನರಲ್ಲಿ ಧರ್ಮಶ್ರದ್ಧೆಯನ್ನು ದೃಢಗೊಳಿಸಲು ಜೈನಧರ್ಮದ ಹಿರಿಮೆಯನ್ನು ಎತ್ತಿ ಹಿಡಿದನು. ಶ್ರಾವಕರ ಆಚರಣೆಗಳ ಶ್ರೇಷ್ಠತೆಗಳನ್ನು ಹೊಗಳುತ್ತಾ ಜೈನರು ತಮ್ಮ ಧರ್ಮದಲ್ಲೇ ಉಳಿಯುವಂತೆ ಮಾಡುವುದೇ ಅವನ ಗುರಿಯಾಗಿತ್ತು. ಅಹಿಂಸೆಯ ಬಗ್ಗೆ, ಅದರ ಶ್ರೇಷ್ಠತೆಯ ಬಗ್ಗೆ ಮುಕ್ತವಾಗಿ ಪ್ರಶಂಸಿಸಿದ್ದಾನೆ. ಜೈನರು ಮಾಂಸಾಹಾರಿ ಪ್ರಾಣಿಗಳನ್ನು ಸಾಕುವುದಿಲ್ಲ, ಮಾತಿನಲ್ಲೂ ಹಿಂಸಾತ್ಮಕವಾದ ಪದಗಳನ್ನು ಬಳಸುವುದಿಲ್ಲ, ಸತ್ತವರ್ಗಳ್ ಎರ್ದು ಬರ್ಪಡಮ್ ಎತ್ತಾನುಂ ಹಿಂಸೆಗಯ್ಯಲಱಿಯರ್ ಜೈನರ್ (5–19) ಜೈನರಿಂ ದಯಾಪರರೊಳರೇ (58) ಕಸಗುಡಿಸುವಾಗ, ಸಾರಿಸುವಾಗ, ಬತ್ತ ಕುಟ್ಟುವಾಗ, ಸಣ್ಣ ಕ್ರಿಮಿಕೀಟಗಳಿಗೂ ತೊಂದರೆಯಾಗದಂತೆ ಎಚ್ಚರಿಕೆಯಿಂದ ವರ್ತಿಸುತ್ತಾರೆ. (5–8) ಇದಕ್ಕೆ ಪ್ರತಿಯಾಗಿ ಶೈವರು ಮಾಡುವ ಕ್ರಿಯೆಗಳು ಹೇಗೆ ಉತ್ತಮವಲ್ಲ ಎಂದು ನಿರೂಪಿಸಿದ್ದಾನೆ. ಚರ್ಮದ ಚೀಲದಲ್ಲಿ ತುಂಬಿದ ನೀರನ್ನೇ ಲಿಂಗಕ್ಕೆ ಅಭಿಷೇಕ ಮಾಡುತ್ತಾರೆ. ಗೊರವರು ಚಾರಿತ್ರವೀಹೀನವಾಗಿದ್ದಾರೆ. ಕೌಲರು ಕುರಿ ಬಲಿ ಕೊಟ್ಟು ಮಾಂಸ, ಮದ್ಯ ಸೇವಿಸುತ್ತಾರೆ ಎಂದು ಮುಂತಾಗಿ ಪರಧರ್ಮಗಳ ದೋಷಗಳನ್ನು ಎತ್ತಿ ತೋರಿಸಿದ್ದಾನೆ.

ಕಾವ್ಯದಲ್ಲಿ ಪ್ರಮುಖವಾಗಿ ಕಾಣುವುದು ಆ ಕಾಲದ ಜನರ ಆಚರಣೆಗಳು. ಜೊತೆಗೆ ಇತಿಹಾಸದ ಕೆಲವು ಅಂಶಗಳೂ ಹುದುಗಿವೆ. ಕವಿ ಜೈನ ಪರ್ವಗಳಾದ ಅಕ್ಷಯ ತೃತೀಯಾ (2–42) ನಂದೀಶ್ವರ (2–42) ದೀಪಾವಳಿ (2–44,45)ಗಳ ಹಿನ್ನೆಲೆಯನ್ನು ತಿಳಿಸಿದ್ದಾನೆ. ಅನ್ಯಮತದ ಕೆಲವು ತೀರ್ಥಕ್ಷೇತ್ರಗಳು ಜೈನಮೂಲದವು ಎಂದು ಅಭಿಪ್ರಾಯ ಪಡುತ್ತಾನೆ. ಕೊಲ್ಲಾಪುರದ ಮಹಾಲಕ್ಷ್ಮಿ ಚಂದ್ರಪ್ರಭ ತೀರ್ಥಂಕರರ ಭಕ್ತೆ (2–69) ಪುಲಿಗೆರೆಯ ನಂದಿವಾಹನ ರುದ್ರನ ಮೂಲ ವೃಷಭ ಯಕ್ಷ (2–67) ಮುಳುಗುಂದ, ಬಂದಣಿಕೆ ಮುಂತಾದ ಕ್ಷೇತ್ರಗಳಿಗೂ ಜೈನೀಯ ಮೂಲ ಹೇಳಿರುವನು. ಇವು ಸಂಶೋಧನೆಗಳಿಂದ ಪುಷ್ಟಿಗೊಳ್ಳಬಹುದು.

ಮತಗಳ ಚೌಕಟ್ಟನ್ನು ಮೀರಿ ಸರ್ವಕಾಲಿಕ ಮೌಲ್ಯ, ನೀತಿಗಳನ್ನು ಎತ್ತಿಹಿಡಿದಿರುವ ಹಲವಾರು ಪದ್ಯಗಳು ಕವಿಯ ವಿಶಾಲ ದೃಷ್ಟಿಗೆ ಸಾಕ್ಷಿಯಾಗಿವೆ. ದಯೆಯನ್ನು ಕುರಿತದ್ದು ಈ ಪದ್ಯ – ಭಾವಿಸುವನಾವನೆಲ್ಲಾ

ಜೀವಮುಮಂ ತನ್ನ ಮಕ್ಕಳೆಂತವನಂ
ಭಾವಿಸುಗುಂ ಭೂವಳಯಂ
ದೇವನಿನಂ ಮನುಜನಲ್ಲನೆಂದಾ ಪೊಟಿಸ್ತುಂ ॥ 5–23॥

(ಯಾರು ಎಲ್ಲ ಜೀವಿಗಳನ್ನು ತನ್ನ ಮಕ್ಕಳೆಂದೇ ಭಾವಿಸುವನೋ ಅವನನ್ನು ಲೋಕ ಮನುಷ್ಯನಲ್ಲ, ದೇವರೆಂದು ತಿಳಿಯುತ್ತದೆ.)

ಕಲಬೆರಕೆ ಕುರಿತ ಪದ್ಯ –

ತುಪ್ಪದೊಳಗೆಣ್ಣೆಯಂ ಲೇ
ಸಪ್ಪಾ ಹೊನ್ನೊಳಗೆ ಬೆಳ್ಳಿಯಂ ಧನದಳುಪಿಂ
ದುಪ್ಪಿನೊಳು ಮಣ್ಣನೆಂತುಂ
ತಪ್ಪಿಲ್ಲದೆ ನಡೆವೆನೆಂಬನಾಗಲ್ ಬೆರೆಸಲ್ ॥5–64॥

(ಹಣದ ಆಸೆಯಿಂದ ತುಪ್ಪದಲ್ಲಿ ಎಣ್ಣೆಯನ್ನು, ಚೊಕ್ಕ ಬಂಗಾರದಲ್ಲಿ ಬೆಳ್ಳಿಯನ್ನು, ಉಪ್ಪಿನಲ್ಲಿ ಮಣ್ಣನ್ನು ಬೆರೆಸುವುದು ಯೋಗ್ಯವಲ್ಲ. ಅದೂ ಒಂದು ರೀತಿಯ ಕಳ್ಳತನವೇ)

ಜಾತಿ ಪದ್ಧತಿಯನ್ನು ಕುರಿತ ಪದ್ಯ –

ಪೊಲೆಯಂ ನರಕಕ್ಕಿಳಿಗುಮೆ
ಕುಲಜಂ ಸ್ವರ್ಗಕ್ಕೆ ನೆಗೆಗುಮೇನೆಗೇಯಂ ನಿ
ರ್ಮಳ ಚರಿತನಾವಾತನೆ
ಕುಲಜಂ ಸ್ವರ್ಗಮವಂಗೆಯಿದಿರ್ಬಂದಿರ್ಕುಂ ॥11–136॥

(ಹೊಲೆಯನು ನರಕಕ್ಕೆ ಹೋಗುವನೇ? ಕುಲಜನು ಸ್ವರ್ಗಕ್ಕೆ ಏರುವನೇ? ಇಲ್ಲ, ನಿರ್ಮಲ ಚಾರಿತ್ರ್ಯವುಳ್ಳವನು ಮಾತ್ರವೇ ಸ್ವರ್ಗಕ್ಕೆ ಹೋಗಬಲ್ಲನು)

ಕವಿ ಜನಸಾಮಾನ್ಯರ ನಡೆನುಡಿಗಳನ್ನು ಹತ್ತಿರದಿಂದ ಗಮನಿಸಿರುವುದರ ಪರಿಣಾಮವಾಗಿ ಜನರ ಮಾತಿನಲ್ಲಿ ಬಳಕೆಯಾಗುತ್ತಿದ್ದ ಹಲವಾರು ನಾಣ್ನುಡಿ, ಗಾದೆ ಮಾತುಗಳು ಕಾವ್ಯದಲ್ಲಿ ಹಾಸುಹೊಕ್ಕಾಗಿವೆ. ಜ್ವರಿತಂಗೆ ದುಗ್ಧಪಾನಂ ಪಿರಿದುಂ ಸೊಗಯಿಸದು (3–65) (ಜ್ವರ ಬಂದವನಿಗೆ ಹಾಲೂ ರುಚಿಸುವುದಿಲ್ಲ) ಅತಿಮೋಹಂ ಗತಿಕೆಡಿಸುಗುಂ (5–82), ನೀರಂ ಪೊಸೆದುಂ ಬೆಣ್ಣೆಯನಾರಾರುಂ ಪಡೆದರೊಳರೆ? (9–128) ಪಜೆಗೋಲೊಳ್ಪಾಯ್ವಂತಿರೆ ತೊಜೆಯಂ ಮೊಱದಿಂದೆ ಪಾಯಲೇಂ ಬಂದಪುದೇ? (15–20) (ನದಿಯನ್ನು ಹರಿಗೋಲಿನಿಂದ ದಾಟುವಂತೆ ಮೊರದಿಂದ ದಾಟಲು ಸಾಧ್ಯವೇ) ಮೊರಡಿಯಲ್ಲಿ ಮಾದು ಫಲವಾಗದು, ಪೊನ್ನ ಸುರಗಿಯೆನೆ ಮೂಗನಿರಿಸಿಕೊಳ್ಳುವುದು ಚದುರೆ?(5–64)

ಕಾವ್ಯಗುಣದ ಲಕ್ಷಣಗಳಲ್ಲಿ ಒಂದಾದ ಅಲಂಕಾರಗಳ ಪ್ರಯೋಗವೂ ಕಾವ್ಯದಲ್ಲಿ ಗಮನಾರ್ಹವಾಗಿದೆ. ಮುಕ್ತಿ ತಂದುಕೊಡಬಲ್ಲ ತಪಸ್ಸಿನಿಂದ ಅಲ್ಪ ಸುಖದ (ಪ್ರತಿಫಲ) ಪ್ರತಿಫಲವನ್ನು ಪಡೆಯುವುದು 'ಮಾಣಿಕವಂ ತವುಡಿಂಗೆ ಮಾರುವಂತಾಗಿರ್ಕು' (4–23) ಜೈನರು ಭ್ರಷ್ಟ ಜೀವರನ್ನು ಕಂಡು ಪ್ರೀತಿ ತೋರಿಸುವುದು 'ಎಳಗಱುಗಳ ಕಂಡ ಪಯಂಗಳೆಂತು ರಾಗಿಸುಗುಮಂತೆ' (4–46) ದರ್ಶನಶುದ್ಧಿಯುಳ್ಳವನ ದೃಢತೆ 'ಪ್ರಳಯಾನಿಲನಿಂ ಕನಕಾಚಳಮೆಂತುಂ ತಳರದಂತೆ' ಕಲಿಗಾಲದಲ್ಲಿ ಜೈನರು ಹೇಗೆ ಬೆಳಗುತ್ತಿದ್ದಾರೆಂದರೆ 'ದೀವಳಿಗೆಯ ಕಟ್ಟಿಲೆಯೊಳ್ ದೀವಿಗೆಗಳು

ಬೆಳಪ ತೆಱದೆ' ಜೈನಧರ್ಮನೊಲ್ಲದವರಿಗೆ ಇತರ ಧರ್ಮಗಳು ಹೇಗೆ ಶ್ರೇಷ್ಠವೆನಿಸುತ್ತವೆ ಎಂದರೆ 'ಮರುಳ ಕಣ್ಗೆ ಸಾಸುವೆಯೆ ನಾಡೆ ಕೊಡದ ತೋರಂಮೆಂಬ ನುಡಿವೊಲ್'.

ಕವಿಯು ಜೈನ, ವೈದಿಕ ಪುರಾಣಗಳನ್ನು ಅಧ್ಯಯನ ಮಾಡಿದ್ದು, ತತ್ವಗಳನ್ನೂ ವಿವರಿಸಿದ್ದಾನೆ. ಪ್ರಾಚೀನ ಕರ್ನಾಟಕದ ಜನಪದ ಆಚಾರ, ವಿಚಾರಗಳು, ಪಂಥಗಳು, ಪಂಗಡಗಳು, ವ್ಯಾಪಾರ, ವಹಿವಾಟು, ಬೇಸಾಯ, ಸ್ಥಳ, ಪ್ರಾಣಿ, ಸಸ್ಯ, ಕಾಯಿಲೆ ಹೀಗೆ ವೈವಿಧ್ಯಪೂರ್ಣ ಸಂಗತಿಗಳನ್ನು ಈ ಕಾವ್ಯದಲ್ಲಿ ಕಾಣಬಹುದಾಗಿದೆ. ಇವುಗಳ ಅಧ್ಯಯನದಿಂದ ಕನ್ನಡ ನಾಡಿನ ಸಾಮಾಜಿಕ ಪರಿಸ್ಥಿತಿ, ಇತಿಹಾಸಗಳನ್ನು ಅರಿಯಬಹುದಾಗಿದೆ. ಸಮಾಜೋ–ಧಾರ್ಮಿಕ ಅಧ್ಯಯನಕ್ಕೆ ಈ ಕಾವ್ಯವೊಂದು ಉತ್ತಮ. ಆಕರಗ್ರಂಥವಾಗಿದೆ.

ತ್ರೈಲೋಕ್ಯ ಚೂಡಾಮಣಿ ಸ್ತೋತ್ರ

28 ವೃತ್ತಗಳನ್ನು ಒಳಗೊಂಡ ಚಿಕ್ಕ ಕೃತಿ. ಜಿನನ ಗುಣಗಳ ಸ್ತುತಿ, ಅವನ ಶ್ರೇಷ್ಠತೆಯ ಬಗ್ಗೆ ಪ್ರಶಂಸೆ, ತನ್ನ ಮನಸ್ಸಿನಲ್ಲಿ ಸದಾ ಅವನು ನೆಲೆ ನಿಂತಿರಲಿ ಎಂಬ ಭಕ್ತಿ ಇವುಗಳಲ್ಲಿ ತುಂಬಿದೆ. ಪರಿಗ್ರಹದಿಂದ ಕೂಡಿರುವ ಅನ್ಯದೈವಗಳನ್ನು ನಿರಾಕರಿಸಲಾಗಿದೆ. ಜಿನನ ಶ್ರೇಷ್ಠತೆಯನ್ನು ಬಗೆಬಗೆಯಾಗಿ ಕವಿ ವರ್ಣಿಸಿದ್ದಾನೆ. ದೇವೇಂದ್ರ, ನಾಗೇಂದ್ರ ಪದವಿಗಳಿಗೆ ಏರುವುದು ಹೆಚ್ಚೇನು? ನಿನ್ನನ್ನು ಆಶ್ರಯಿಸಿದವರಿಗೆ ಆ ಇಂದ್ರರುಗಳೇ ನಮಸ್ಕರಿಸುತ್ತಾರೆ.

ಜಿನಮಾರ್ಗಂ ಪೊಱಗಾಗಿ ಧರ್ಮಮೊಳವೆ ಜೈನಾಗಮಂ ಬಿಟ್ಟು ಮಿ
ಕ್ಕಿನ ಕೌಳಂ ನುಡಿವಾಗಮಂಗಳೊಳವೆ ನಿರ್ಗ್ರಂಥ ಮಾರ್ಗಕ್ಕೆ ಮ
ತ್ತೆನಸುಂ ದಿವ್ಯ ತಪಂಗಳೆಂಬಿವೊಳವೆ ಸರ್ವಜ್ಞನಿಂದತ್ತಲಿಂ
ದ್ರನರೇಂದ್ರಾದಿಗಳೆಂಬ ದೇವರೊಳರೆ ತ್ರೈಲೋಕ್ಯಚೂಡಾಮಣೀ (34)

ನಿನ್ನನ್ನು ದೇವತೆಗಳೆಲ್ಲರೂ ಸ್ತುತಿಸುತ್ತಾರೆ. 'ನೀನಲ್ಲದಾರ್ ತ್ರಿಲೋಕ ಗುರುಗಳ್?' ನಿನ್ನ ನುಡಿಗಳು ಕಿವಿಗಳಿಗೆ ರಸಾಯನ, ನಿನ್ನ ಶರೀರ ಕಂಗಳಿಗೆ

ಪ್ರಿಯ, ದೀನರಲ್ಲಿ ನಿನಗೆ ದಯೆ, ಜ್ಞಾನಿಗಳಲ್ಲಿ ಆದರ, ನಿನ್ನ ಬಗ್ಗೆ ಅಜ್ಞಾನಿಗಳು ಏಕೆ ಮುನಿಯುತ್ತಾರೋ?

ಮರ, ಕಲ್ಲು, ಕೆರೆಗಳನ್ನು ದೈವವೆಂದು ಪೂಜಿಸುವವರನ್ನು ಕವಿ ಅಜ್ಞಾನಿಗಳೆಂದು ದೂಷಿಸುತ್ತಾನೆ. ಅವರಿಗೆ ಹೇಗೆ ಮುಕ್ತಿ ಪ್ರಾಪ್ತವಾಗುತ್ತದೆ ಎಂದು ಸಂದೇಹಪಡುತ್ತಾನೆ. ಹರಿಹರ ಬ್ರಹ್ಮಾದಿಗಳು ಜನ್ಮಾಂತರವನ್ನು ಗೆದ್ದವರಲ್ಲ, ಅವತಾರಗಳನ್ನು ತಾಳಿದ್ದಾರೆ. ಆದುದರಿಂದ ಭವಗಳನ್ನು ಜಯಿಸುವ ಜಿನನೇ ಶ್ರೇಷ್ಠ ಎಂದು ದೃಢವಾಗಿ ಘೋಷಿಸುತ್ತಾನೆ. ಆಡಿನ ಮರಿಯನ್ನು ಬಲಿಗೊಟ್ಟು ಅದು ಸ್ವರ್ಗಕ್ಕೆ ಹೋಗುತ್ತದೆ ಎನ್ನುವವರು ತಮ್ಮ ಮಕ್ಕಳನ್ನೇ ಏಕೆ ಬಲಿಕೊಡುವುದಿಲ್ಲ? ಎಂದು ಕಟುವಾಗಿ ಟೀಕಿಸುತ್ತಾನೆ. ಜಿನನ ಬಗ್ಗೆ ಕವಿಗೆ ಎಂಥ ಭಕ್ತಿ ಎಂದರೆ ನಿನ್ನನ್ನು ಅರ್ಚಿಸಲು ನನಗೆ ಐದು, ಆರುಸಾವಿರ ಕೈಗಳಾಗಲಿ, ನಿನ್ನನ್ನು ತೃಪ್ತಿಯಾಗುವಂತೆ ನೋಡುತ್ತಿರಲು ಕಣ್ಣುಗಳು ಆರು, ಏಳು ಸಾವಿರಗಳಾಗಲಿ ನಿನ್ನನ್ನು ವರ್ಣಿಸಲು ನಾಲಿಗೆ 7–8 ಸಾವಿರವಾಗಲಿ ಎಂದು ಹಾರೈಸುತ್ತಾನೆ. ಭಾಷೆ ಹಳೆಗನ್ನಡವೇ ಆಗಿದ್ದರೂ ಸುಭವಾಗಿ ಅರ್ಥವಾಗುವಂತಿದೆ..

ಆಧಾರ ಗ್ರಂಥಸೂಚಿ :

1. ಕವಿ ಬ್ರಹ್ಮಶಿವ – ಎಸ್.ಪಿ. ಪಾಟೀಲ, ಕರ್ನಾಟಕ ವಿ.ವಿ.ಧಾರವಾಡ 1974
2. ಸಾಮಾನ್ಯನಿಗೆ ಸಾಹಿತ್ಯ ಚರಿತ್ರೆ ಸಂ.4, ಚಂಂಪೂಕವಿಗಳು – ಸಂ: ಡಾ.ಪಿ.ವಿ. ನಾರಾಯಣ, ಪ್ರಸಾರಾಂಗ, ಬೆಂ.ವಿ.ವಿ. 200(ದ್ವಿಮು)
3. ಬ್ರಹ್ಮಶಿವ – ವೃತ್ತವಿಲಾಸ ಸಂಪುಟ – ಸಂ.ಡಾ.ಟಿ.ವಿ. ವೆಂಕಟಾಚಲಶಾಸ್ತ್ರೀ, ಪ್ರಸಾರಾಗ, ಕನ್ನಡ ವಿ.ವಿ ಹಂಪಿ, 2016
4. ಕನ್ನಡ ಜೈನ ಸಾಹಿತ್ಯ ಚರಿತ್ರೆ ಸಂ 2 – ಸಂ & ಪ್ರ. .ಡಾ.ಎಸ್.ಪಿ. ಪದ್ಮಪ್ರಸಾದ್, 2021

****

ಕರ್ಣಪಾರ್ಯ ವಿರಚಿತ ನೇಮಿನಾಥ ಪುರಾಣ

– ಕಲ್ಪನಾ
ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಬೆಂಗಳೂರು

ಕನ್ನಡ ಭಾಷೆಯಲ್ಲಿ 'ನೇಮಿನಾಥಪುರಾಣ'ವನ್ನು ಹಲವು ಕವಿಗಳು ರಚಿಸಿದ್ದಾರೆ. ನಮಗೆ ಕನ್ನಡದಲ್ಲಿ ಸಿಕ್ಕಿರುವ ನೇಮಿನಾಥ ತೀರ್ಥಂಕರನ ಪುರಾಣಗಳು ಎಂಟು. ಅವುಗಳಲ್ಲಿ ಮೊದಲನೆಯದನ್ನು ರಚಿಸಿದ ಕವಿ ಕರ್ಣಪಾರ್ಯ. ಇವನು ಪ್ರತಿಭಾ ಸಂಪನ್ನನಾದ ಕವಿಯಲ್ಲವಾದರೂ ಹೃದ್ಯವೂ ಸರಸವೂ ಆದ ಕಥನಕಲೆ, ಸರಳವೂ ಸ್ಪಷ್ಟವೂ ಆದ ರೀತಿಯ ಅಭಿವ್ಯಕ್ತಿಕೌಶಲ, ಹೃದಯಂಗಮವಾದ ಮಾನವೀಯ ದೃಷ್ಟಿ, ಆಕರ್ಷಕವಾದ ನಾಟಕೀಯತೆ, ವಸ್ತುವಿನ್ಯಾಸದಲ್ಲಿಯೂ ಶೈಲಿಯಲ್ಲಿಯೂ ಪ್ರತಿಬಿಂಬಿಸಿರುವ ದೇಶ್ಯ – ಇವು ಕಾರಣವಾಗಿ ಕನ್ನಡ ಸಾಹಿತ್ಯದಲ್ಲಿ ಒಬ್ಬ ಶ್ರೇಷ್ಠ ಕವಿಯಾಗಿದ್ದಾನೆ.

ಕರ್ಣಪಾರ್ಯ

ಕವಿಯ ಕಾಲ ಸುಮಾರು 1165. ಕೊಲ್ಲಾಪುರ ಶಾಖೆಯ ಶಿಲಾಹಾರ ರಾಜರಲ್ಲಿ ಒಬ್ಬನಾದ ವಿಜಯಾದಿತ್ಯನೆಂಬವನ ಕಾಲದಲ್ಲಿದ್ದ ಒಬ್ಬ ಜೈನಕವಿ. ಈತನು ತನ್ನ ಸ್ಥಳ ಹಾಗೂ ತಂದೆ ತಾಯಿಯ ಬಗ್ಗೆ ಎಲ್ಲಿಯೂ ಹೇಳಿಕೊಂಡಿಲ್ಲ. ಜಗನ್ನಾಥ ವಿಜಯದ ಕವಿ ರುದ್ರಭಟ್ಟನು (ಸು.1185) "ಕಣ್ಣಮಯ್ಯನ ಜಾಣ್ನುಡಿ" ಯನ್ನು ಮೆಚ್ಚಿಕೊಂಡಿದ್ದಾನೆ. ಆಂಡಯ್ಯ ಕವಿ

(1235) ಕಬ್ಬಿಗರ ಕಾವದಲ್ಲಿ "ಕಣ್ಣಪಯ್ಯನ ಕಡುಜಾಣ್" ಮಿಗಿಲಾದುದೆಂದು ಕೊಂಡಾಡಿದ್ದಾನೆ. ಪಾರ್ಶ್ವಪಂಡಿತ ಕವಿ ಕಣ್ಣಪನ "ಇಂಪುಂ ಪುದಿದರ್ಥ ಗೌರವ ಗುಣ" ದೊಡ್ಡದೆಂದು ತುಂಬ ಇಷ್ಟಪಟ್ಟಿದ್ದಾನೆ. ಜೊತೆಗೆ ಮೂರನೆಯ ಮಂಗರಸ ಮತ್ತು ದೊಡ್ಡಯ್ಯ ಎಂಬ ಕವಿಗಳು ಸಹ ಈ ಕಣ್ಣಪ್ಪನನ್ನೂ, ಇವನ ಕೃತಿಯನ್ನೂ ಹೆಸರಿಸಿ ನೆನೆದಿದ್ದಾರೆ.

ಕವಿಯ ಪೋಷಕ ಲಕ್ಷ್ಮ ಎಂಬ ಹೆಸರಿನ ಪ್ರತಿಷ್ಠಿತ. ಈ ಲಕ್ಷ್ಮನ ದೊರೆ ವಿಜಯಾದಿತ್ಯ. ಈ ರಾಜ ಶಿಲಾಹಾರ ವಂಶದವನು. ಇವರು ಆಳಿದ ಪ್ರದೇಶ ಈಗಿನ ಬೆಳಗಾವಿ ನಗರದಿಂದ ಹಿಡಿದು ಕೊಲ್ಲಾಪುರದವರೆಗೆ ಬರುವ ಮತ್ತು ಸಾತಾರವನ್ನೂ ಒಳಗೊಂಡ ಸೀಮೆಯೆಂದು ಚರಿತ್ರಕಾರರು ತಿಳಿಸಿದ್ದಾರೆ. ದೊರೆ ವಿಜಯಾದಿತ್ಯನು ಆಳಿದ ಕಾಲ 1140–1175 ಎಂದು ಇತಿಹಾಸಕಾರರು ಹೇಳಿದ್ದಾರೆ. ಈಗ ಸಿಗುವ ಕಾರಣವನ್ನು ಉಪಯೋಗಿಸಿಕೊಂಡು ಕರ್ಣಪಾರ್ಯನ ಕಾಲವನ್ನು ಸು. 1165 ಎಂದು ಹೇಳಬಹುದೇ ಹೊರತು ಅದಕ್ಕಿಂತ ನಿರ್ದಿಷ್ಟಗೊಳಿಸಿ ಹೇಳಲು ಕಷ್ಟವಿದೆ.

ಈ ಕವಿ ನೇಮಿನಾಥ ಪುರಾಣ ಮತ್ತು ವೀರೇಶ ಚರಿತ ಎಂಬ ಎರಡು ಕೃತಿಗಳನ್ನು ಬರೆದಿರುವಂತೆ ತಿಳಿದುಬಂದಿದ್ದು, ಅವುಗಳಲ್ಲಿ ಮೊದಲನೆಯದು ಮಾತ್ರ ಲಭ್ಯವಾಗಿ ಪ್ರಕಟವಾಗಿದೆ. ವೀರೇಶ ಚರಿತೆ ಲಭ್ಯವಿಲ್ಲ.

ನೇಮಿನಾಥ ಪುರಾಣದಿಂದ ತಿಳಿಯುವ ಕವಿಯ ವಿಷಯದ ಬಗೆಗಿನ ವಿವರಗಳು ಹೀಗಿವೆ: ಸಮಂತಭದ್ರ, ಗುಣಭದ್ರ, ಗೃಧ್ನಪಿಂಛ, ವೀರಸೇನ ಕೊಂಡಕುಂದಾಚಾರ್ಯ, ಮಲಧಾರಿದೇವ, ಕಲ್ಯಾಣಕೀರ್ತಿ, ಶುಭಚಂದ್ರ, ಬೆಟ್ಟದ ವ್ರತಿ, ಭುವನಬ್ಬೆ, ನೇಮಿಚಂದ್ರ, ಅಕಳಂಕಚಂದ್ರ – ಇವರು ಕವಿಯಿಂದ ಸ್ತುತಿಸಲಾಗಿರುವ ಯತಿಗಳು. ಪಂಪ, ಪೊನ್ನ, ರನ್ನ ಮತ್ತು ನಾಗಚಂದ್ರ – ಉಲ್ಲೇಖವಾಗಿರುವ ಪೂರ್ವಕವಿಗಳು. ಜೀಮೂತವಾಹನ ವಿದ್ಯಾಧರ ಚಕ್ರಿವಂಶತಿಳಕನೆನ್ನಿಸಿದ ಗಂಡರಾದಿತ್ಯನ ಪುತ್ರ ವಿಜಯಾದಿತ್ಯನಲ್ಲಿ ಕರಣಾಗ್ರಣಿಯೂ ಮಂತ್ರಿಯೂ ಆಗಿದ್ದ ಲಕ್ಷ್ಮನೆಂಬವನು (ಲಕ್ಷ್ಮಣ, ಲಕ್ಷ್ಮೀಧರ

ಎಂದೂ ಈತನ ಹೆಸರನ್ನು ಹೇಳಿದೆ) ಕವಿಯ ಆಶ್ರಯದಾತ. ಕವಿಯ ಕೃತಿರಚನೆಗೆ ಸಹಾಯಕ. ಲಕ್ಷ್ಮನ ತಂದೆ ಶ್ರೀಭೂಷಣಾರ್ಯ ಮೊದಲಾದವರು ಪ್ರೋತ್ಸಾಹಿಸಲಾಗಿ ಕರ್ಣಪಾರ್ಯ ನೇಮಿನಾಥ ಪುರಾಣದ ರಚನೆಗೆ ಸಂಕಲ್ಪಿಸಿದ. ಗುರು ಕಲ್ಯಾಣಕೀರ್ತಿ. ಈತ ಕೃತಿಯ ನಾಂದೀಮುಖದ ಪೂರ್ವಾಚಾರ್ಯಶ್ರೇಣೀಯಲ್ಲಿ ಸ್ತುತನಾಗಿರುವ ಮಲಧಾರಿ ದೇವರ ಶಿಷ್ಯ ಇರಬಹುದೇ ಎಂಬುದು ನಿಶ್ಚಯವಿಲ್ಲ.

ನೇಮಿನಾಥ ಪುರಾಣದ ಆಶ್ವಾಸಾದಿ ಪದ್ಯಗಳಲ್ಲಿ ಕಾಣಿಸಿಕೊಳ್ಳುವ ಭವ್ಯವನಜವನ ಮಾರ್ತಾಂಡಂ ಎಂಬುದೂ, ಆಶ್ವಾಸಾಂತ್ಯಪದ್ಯಗಳಲ್ಲಿ ಕಾಣಿಸಿಕೊಳ್ಳುವ ಪರಮ ಜಿನಮತ ಕ್ಷೀರವಾರಾಶಿಚಂದ್ರಂ ಎಂಬುದೂ, ಅಲ್ಲಿಯೇ ಗದ್ಯಭಾಗದಲ್ಲಿ ಕಾಣಿಸಿಕೊಳ್ಳುವ ಸಹಜ ಕವಿತಾರಸೋದಯಂ ಎಂಬುದೂ ಕರ್ಣಪಾರ್ಯನಿಗೆ ಮೆಚ್ಚಿಕೆಯಾಗಿರುವ ಬಿರುದುಗಳಾಗಿರುವಂತೆ ತೋರುತ್ತದೆ. ಇವುಗಳಲ್ಲಿ ಮೊದಲಿನವೆರಡೂ ಕವಿಯ ಆಶ್ರಯದಾತನಿಗೆ ಹಾಗೂ ಕಾವ್ಯಶರೀರದಲ್ಲಿಯ ಇಷ್ಟವ್ಯಕ್ತಿಗೆ ಅನ್ವಯವಾಗಿರುವುದುಂಟು. ನೇಮಿನಾಥಪುರಾಣದಲ್ಲಿ ಕರ್ಣಪಾರ್ಯನ ಕಾಲದ ವಿಷಯವಾಗಿ ನೇರವಾದ ಉಲ್ಲೇಖವಿಲ್ಲ. ಪಂಪರಾಮಾಯಣದ ಕವಿ ನಾಗಚಂದ್ರನ ಕಾಲ, ಕರ್ಣಪಾರ್ಯನ ಗುರು ಕಲ್ಯಾಣಕೀರ್ತಿಯ ಕಾಲ ಮತ್ತು ಪೋಷಕವ್ಯಕ್ತಿ ಲಕ್ಷ್ಮ ಹಾಗೂ ಆತನ ಅರಸನಾದ ವಿಜಯಾದಿತ್ಯನ ಸಂಬಂಧವಾದ ಕೆಲವು ಚಾರಿತ್ರಿಕ ವಿವರಗಳನ್ನು ಅವಲಂಬಿಸಿ ಈ ಕವಿಯ ಕಾಲವನ್ನು ಗೊತ್ತುಮಾಡುವ ಪ್ರಯತ್ನ ನಡೆದಿದೆ.

ಕರ್ಣಪಾರ್ಯನ ಕಾಲನಿರ್ಧಾರದಲ್ಲಿ ಎಲ್ಲ ವಿದ್ವಾಂಸರೂ ನಾಗಚಂದ್ರನ ಕಾಲವನ್ನು ಒಂದು ಮುಖ್ಯ ಆಧಾರವನ್ನಾಗಿ ಗ್ರಹಿಸಿದ್ದಾರೆ. ಆದರೆ ನಾಗಚಂದ್ರನ ಕಾಲ ವಿಷಯದಲ್ಲೇ ಅವರಲ್ಲಿ ಭಿನ್ನಮತವಿದೆ. ಈಚೆಗೆ ನಾಗಚಂದ್ರನ ಪ್ರಸಿದ್ಧಿಯ ಕಾಲ 12ನೆಯ ಶತಮಾನದ ಪೂರ್ವಾರ್ಧವೆಂದೂ ಆತನ ಕೃತಿ ಪಂಪರಾಮಾಯಣ ಕ್ರಿ.ಶ. ಸುಮಾರು 1140ರಲ್ಲಿ ಬಲುಮಟ್ಟಿಗೆ ರಚಿತವಾಗಿರಬೇಕೆಂದೂ ತಿಳಿಯಲಾಗಿದೆ. ಈ ಕವಿ ಕರ್ಣಪಾರ್ಯ ನಾಗಚಂದ್ರನ ಸಮಕಾಲೀನನೋ

ಸಮೀಪವರ್ತಿಯೋ ಆಗಿರುವಂತೆ ತಿಳಿಯುವುದಕ್ಕೆ ಆಸ್ಪದವಿದೆ. ನಾಗಚಂದ್ರನನ್ನು ಪ್ರತ್ಯೇಕವಾದೊಂದು ಪದ್ಯದಲ್ಲಿ ಉಲ್ಲೇಖಿಸಿ ಮನ್ನಿಸಿರುವುದನ್ನು ನೋಡಿದರೆ ಆತನ ಖ್ಯಾತಿಯು ಪ್ರಭಾವ ವಿದ್ವದ್ವಲಯದಲ್ಲಿ ಇನ್ನೂ ಮುನ್ನೆಲೆಯಲ್ಲಿದ್ದಿತೆಂದು ಹೇಳಬಹುದು. ಅಲ್ಲದೆ ಆತನ ಶೈಲಿಯ ಪ್ರಭಾವವೂ ಅಲ್ಲಲ್ಲಿ ಪಂಪ ರಾಮಾಯಣದ ಅನುಕರಣವೂ ಕರ್ಣಪಾರ್ಯನ ನೇಮಿನಾಥಪುರಾಣದಲ್ಲಿ ಕಾಣುತ್ತದೆ. ಈ ಕಾರಣಗಳಿಂದ ಕರ್ಣಪಾರ್ಯ ಪ್ರ.ಶ.ಸು. 1140ಕ್ಕಿಂತ ಹತ್ತಿಪ್ಪತ್ತು ವರ್ಷಗಳಷ್ಟಾದರೂ ಈಚೆಗೆ ಇದ್ದಿರಬಹುದು. ಅಲ್ಲದೆ ಕರ್ಣಪಾರ್ಯನಿಗೆ ಆಶ್ರಯದಾತನಾಗಿದ್ದ ಶಿಲಾಹಾರರ ವಿಜಯಾದಿತ್ಯರಾಜ ಪ್ರ.ಶ.ಸು. 1140ರಲ್ಲಿ ಪಟ್ಟವೇರಿ ಪ್ರಾಯಶಃ ಪ್ರ.ಶ.ಸು. 1155ರ ವರೆಗೆ ಆಳಿದನೆಂತಲೂ ಪ್ರ. ಶ. ಸು. 1140ರ ಮೊದಲು ಆತ ಸಿಂಹಾಸನವೇರಲಿಲ್ಲವೆಂತಲೂ ಚರಿತ್ರಕಾರರು ಸಾಧಾರವಾಗಿ ಅಭಿಪ್ರಾಯಪಟ್ಟಿದ್ದಾರೆ. ಆದ್ದರಿಂದ ಕರ್ಣಪಾರ್ಯನ ಅಸ್ತಿತ್ವದ ಕಾಲ ಪ್ರ.ಶ.ಸು. 1140–75 ಎಂದಾಗುತ್ತದೆ. ಇಮ್ಮಡಿ ನಾಗವರ್ಮನ (ಪ್ರ.ಶ.ಸು. 1145) ಭಾಷಾಭೂಷಣದಲ್ಲಾಗಲಿ ಕಾವ್ಯಾವಲೋಕನದಲ್ಲಾಗಲಿ ಕರ್ಣಪಾರ್ಯನ ನೇಮಿನಾಥ ಪುರಾಣದ ಪದ್ಯಗಳು ಉದಾಹೃತವಾಗಿರುವುದರಿಂದ ಪ್ರ.ಶ.ಸು. 1145 ರಿಂದೀಚೆಗೆ, ಪ್ರ.ಶ.ಸು. 1140ರಲ್ಲಿ ರಚಿತವಾಗಿರಬಹುದಾದ ಪಂಪ ರಾಮಾಯಣಕ್ಕೆ ಕನಿಷ್ಠ ಹತ್ತಿಪ್ಪತ್ತು ವರ್ಷಗಳಷ್ಟು ಈಚೆಗೆ ಎಂದರೆ ಪ್ರ.ಶ.ಸು. 1150ರ ಅನಂತರದಲ್ಲಿ, ಅಲ್ಲಲ್ಲಿ ಅರ್ವಾಚೀನ ಭಾಷಾ ಪ್ರಯೋಗಗಳು ಪ್ರಾಚುರ್ಯವಿರುವುದರಿಂದ 12ನೆಯ ಶತಮಾನದ ಉತ್ತರಾರ್ಧದಲ್ಲಿ, ಪ್ರಾಯಶಃ 1160–70ರ ಅವಧಿಯಲ್ಲಿ ಕರ್ಣಪಾರ್ಯನ ಕೃತಿ ನೇಮಿನಾಥಪುರಾಣ ರಚಿತವಾಗಿರಬಹುದು.

ಕರ್ಣಪಾರ್ಯ ಯಾವ ಸ್ಥಳದವನೆಂದು ತಿಳಿಯಲು ಗ್ರಂಥಾಧಾರವಿಲ್ಲ. ದೊರೆತಿರುವ ವಿಜಯಾದಿತ್ಯನ ಶಾಸನಗಳೆಲ್ಲವೂ ಆತ ವಳವಾಡವನ್ನು ಸ್ಥಿರ ಶಿಬಿರವಾಗಿಸಿಕೊಂಡು ರಾಜ್ಯವಾಳುತ್ತಿದ್ದನೆಂದು ಉಲ್ಲೇಖಿಸಿವೆ. ಈ ವಳವಾಡ ಕೊಲ್ಲಾಪುರದ ನೈಋತ್ಯಕ್ಕೆ 25.6 ಕಿ.ಮೀ. ಅಂತರದಲ್ಲಿರುವ, ಅದೇ ಪ್ರಾಂತಕ್ಕೆ ಸೇರಿದ ಇಂದಿನ ವಳವಾಡ ಎಂಬ

ಸ್ಥಳವಾಗಿರಬಹುದು ಎಂಬ ಗ್ರಹಿಕೆಯಿದೆ. ಈ ವಿಜಯಾದಿತ್ಯನ ಕರಣಾಗ್ರಣಿಯಾದ ಲಕ್ಷ್ಮನೂ ಇಲ್ಲಿಯೇ ಇದ್ದಿರುವುದು ಸಹಜವಾದ್ದರಿಂದ ಈತನ ಪೋಷಣೆಯು ಕವಿಗೂ ಇದೇ ವಾಸಸ್ಥಳವಾಗಿದ್ದು ನೇಮಿನಾಥಪುರಾಣದ ರಚನೆಯೂ ಇಲ್ಲಿಯೇ ನಡೆದಿರಬಹುದು. ಆದರೆ ಇದು ಬರಿಯ ಊಹೆ.

ಕೃತಿವಿಚಾರ

'ನೇಮಿನಾಥಪುರಾಣ' ಅಥವಾ 'ಹರಿವಂಶಪುರಾಣ'ವೆಂಬ ಹೆಸರಿನ ಈ ಕವಿಯ ಕೃತಿಯು ಹದಿನಾಲ್ಕು ಆಶ್ವಾಸಗಳಿಂದ ಕೂಡಿ ಚಂಪೂ ರೂಪದಲ್ಲಿ ಇಪ್ಪತ್ತೆರಡನೆಯ ತೀರ್ಥಂಕರನಾದ ನೇಮಿನಾಥನ ಚರಿತೆಯನ್ನೂ ಒಂಬತ್ತನೆಯ ಬಲದೇವ, ವಾಸುದೇವರಾದ ಕೃಷ್ಣ – ಬಲರಾಮರ ಹರಿವಂಶ ಚರಿತೆಯನ್ನೂ ವರ್ಣಿಸುತ್ತದೆ. ಕರ್ಣಪಾರ್ಯ ವಿವಿಧ ಕಥಾಮೂಲಗಳನ್ನು ಬಳಸಿಕೊಂಡಿರುವ ದೃಷ್ಟಿ ಶ್ಲಾಘ್ಯವಾಗಿದೆ. ಹರಿವಂಶದ ಕತೆಯೊಡನೆ ಕುರುವಂಶದ ಕತೆಯೂ ಈ ಪುರಾಣದಲ್ಲಿ ಹೆಣೆದುಕೊಂಡಿದೆ. ಆದರೆ ಈ ಕತೆಯು ಮಹಾಭಾರತ 0– ಭಾಗವತಗಳ ಕತೆಗಳಿಗಿಂತ ಹಲವಾರು ಅಂಶಗಳಲ್ಲಿ ಭಿನ್ನವಾಗಿದೆ:

(1) ವಸುದೇವನು ಸಮುದ್ರ ವಿಜಯನೆಂಬುವವನ ಕಿರಿಯ ತಮ್ಮ; ಇವನು ಸ್ವಯಂವರಗಳಲ್ಲಿ ಅನೇಕ ಸುಂದರಿಯರನ್ನು ಗೆಲ್ಲುತ್ತಾನೆ. (2) ಉಗ್ರಸೇನ–ಪದ್ಮಾವತಿಯರ ಮಗನಾದ ಕಂಸನು ತಾಯಿಯ ಬಸಿರಿನಲ್ಲಿರುವಾಗಲೇ ತಂದೆಯ ಮಾಂಸವನ್ನು ತಿನ್ನಬೇಕೆಂಬ ಬಯಕೆಯನ್ನು ತಾಯಿಯಲ್ಲಿ ಉಂಟುಮಾಡಿದ್ದರಿಂದ, ಆ ಮಗುವನ್ನು ಹುಟ್ಟಿದೊಡನೆ ಪೆಟ್ಟಿಗೆಯೊಂದರಲ್ಲಿಟ್ಟು ನದಿಯಲ್ಲಿ ತೇಲಿಬಿಟ್ಟ ನಂತರ ಮದ್ಯ ಮಾರುವ ಹೆಂಗಸಿಗೆ ಆ ಪೆಟ್ಟಿಗೆಯು ಸಿಕ್ಕಿದಾಗ, ಅವಳು ಆ ಮಗುವಿಗೆ ಕಂಸನೆಂಬ ಹೆಸರನ್ನಿಟ್ಟು ಸಾಕುತ್ತಾಳೆ. (3) ಕಂಸನು ಮುಂದೆ ಜರಾಸಂಧನ ಮಗಳಾದ ಜೀವಂಜಸೆಯನ್ನು ಮದುವೆಯಾಗಿ ಮಾವನ ಸಹಾಯದೊಡನೆ ತನ್ನ ತಂದೆಯಾದ ಉಗ್ರಸೇನನನ್ನು ಸೆರೆಯಲ್ಲಿಟ್ಟು ತಾನೇ

ರಾಜ್ಯವನ್ನು ವಹಿಸಿಕೊಳ್ಳುತ್ತಾನೆ. ಚಿಕ್ಕಪ್ಪನ ಮಗಳಾದ ದೇವಕಿಯನ್ನು ವಸುದೇವನಿಗೆ ಕೊಟ್ಟು ಮದುವೆಯನ್ನು ಮಾಡಿಸುತ್ತಾನೆ. (4) ದೇವಕಿಯ ಮಗುವಿನಿಂದಲೇ ತನ್ನ ಸಾವುಂಟಾಗುತ್ತದೆಂಬುದನ್ನು ತಿಳಿದು ಅವಳ ಆರು ಮಕ್ಕಳನ್ನು ಹುಟ್ಟಿದೊಡನೆ ಕೊಲ್ಲಿಸುತ್ತಾನೆ; ವಸುದೇವನು ಏಳನೆಯ ಮಗುವಾದ ಶ್ರೀಕೃಷ್ಣನನ್ನು ನಂದಗೋಕುಲದಲ್ಲಿ ಬಚ್ಚಿಟ್ಟು ಬೆಳೆಯುವಂತೆ ಮಾಡುತ್ತಾನೆ. (5) ನಂದನ ಮನೆಯಲ್ಲಿ ಬೆಳೆದ ಶ್ರೀಕೃಷ್ಣನನ್ನು ಪೂರ್ವ ಜನ್ಮಗಳ ವಿದ್ಯಾಬಲದಿಂದ ಕೊಲ್ಲಲು ಯತ್ನಿಸಿ ವಿಫಲನಾದ ಕಂಸನು ಕೊನೆಗೆ ಮಲ್ಲಯುದ್ಧದಲ್ಲಿ ತಾನೇ ಕೃಷ್ಣನಿಂದ ಸಾವಿಗೀಡಾಗುತ್ತಾನೆ. (6) ಜರಾಸಂಧನ ಕಿರುಕುಳವನ್ನು ತಾಳಲಾರದ ಕೃಷ್ಣನು ನೇಮಿನಾಥನೊಡನೆ ದ್ವಾರವತಿಗೆ ಹೋಗಿ ನೆಲೆಸುತ್ತಾನೆ. (7) ಕುರುಕ್ಷೇತ್ರದಲ್ಲಿ ಜರಾಸಂಧ ಕೃಷ್ಣರು ಯುದ್ಧ ಮಾಡುತ್ತಾರೆ; ಮೊದಲಿನಿಂದಲೂ ವೈರಿಗಳಾಗಿದ್ದ ಕೌರವ ಪಾಂಡವರೂ ಯುದ್ಧ ಮಾಡುತ್ತಾರೆ. ಕೌರವರು ಜರಾಸಂಧನ ಪಕ್ಷಕ್ಕೂ, ಪಾಂಡವರು ಕೃಷ್ಣನೊಡನೆಯೂ ಸೇರುತ್ತಾರೆ. ಯುದ್ಧದಲ್ಲಿ ಜರಾಸಂಧನೂ ಕೌರವರೂ ಸಾಯುತ್ತಾರೆ. ಪಾಂಡವರು ಕೃಷ್ಣನೊಡನೆ ಗೆದ್ದು ರಾಜ್ಯವನ್ನಾಳುತ್ತಾರೆ. (8) ಶ್ರೀಕೃಷ್ಣನು ದುರ್ಮರಣದಿಂದ ಸತ್ತು ನರಕವನ್ನು ಸೇರಿದರೆ, ಪಾಂಡವರು ಜಿನದೀಕ್ಷೆಯನ್ನು ಪಡೆದು ಸ್ವರ್ಗವನ್ನು ಸೇರುತ್ತಾರೆ.

ಕರ್ಣಪಾರ್ಯನ ಕೃತಿಯ ಮೊದಲೆರಡು ಆಶ್ವಾಸಗಳಲ್ಲಿ ನೇಮಿನಾಥನ ಪೂರ್ವಜನ್ಮಗಳ ವೃತ್ತಾಂತವೂ, ಹರಿವಂಶದ ಜರಾಸಂಧ ಹಾಗೂ ಸಮುದ್ರ ವಿಜಯಾದಿಗಳ ಜನ್ಮವೃತ್ತಾಂತವೂ ವರ್ಣಿತವಾಗಿದೆ. ಮೂರನೆಯ ಆಶ್ವಾಸದಲ್ಲಿ ಬರುವ ಕಥಾಭಾಗವೆಂದರೆ ಕೌರವ ಪಾಂಡವರ ಜನ್ಮವೃತ್ತಾಂತಗಳು. ವಸುದೇವನ ದೇಶಾಂತರ ವಿಚಾರ, ಅವನು ಕೈಹಿಡಿದ ಕನ್ಯೆಯರು ಮುಂತಾದವುಗಳು. ನಾಲ್ಕನೆಯ ಆಶ್ವಾಸದಲ್ಲಿ ಗಂಧರ್ವದತ್ತೆಯ ಸ್ವಯಂವರ ಹಾಗೂ ಚಾರುದತ್ತನ ಉದಾತ್ತ ಗುಣಗಳ ನಿರೂಪಣೆಯಿದೆ. ಐದನೆಯ ಆಶ್ವಾಸದಲ್ಲಿ ಗಂಧರ್ವದತ್ತೆ ವಸುದೇವರ ಮದುವೆ, ಸಮುದ್ರ ವಿಜಯ – ವಸುದೇವರ ಪುನಸ್ಸಮಾಗಮ, ಕಂಸನು ವಸುದೇವನಲ್ಲಿ ಧನುರ್ವಿದ್ಯೆಯನ್ನು ಕಲಿತದ್ದು, ಕಂಸ – ಜೀವಂಜಸೆಯರ ವಿವಾಹ,

ಕಂಸನು ತಂದೆಯ ಮೇಲಿನ ವೈರದಿಂದ ಅವನನ್ನು ಬಂಧಿಸಿದ ವಿಚಾರ ಇವುಗಳಿವೆ. ಆರನೆಯ ಆಶ್ವಾಸದಲ್ಲಿ ವಸುದೇವ–ದೇವಕಿಯರ ವಿವಾಹ, ಕೃಷ್ಣಜನನ ವೃತ್ತಾಂತ, ಕಂಸವಧೆ–ಈ ವಿಷಯಗಳ ನಿರೂಪಣೆಯಿದೆ.

ಜರಾಸಂಧನು ತನ್ನ ಅಳಿಯನನ್ನು ಕೊಂದ ಕೃಷ್ಣನ ಮೇಲೆ ಸಾಧಿಸಿದ ಹಗೆತನ, ಶ್ರೀಕೃಷ್ಣನು ಸಮುದ್ರಮಧ್ಯದಲ್ಲಿ ದ್ವಾರಕೆಯನ್ನು ನಿರ್ಮಿಸಿ ಅಲ್ಲಿ ನೆಲೆಸಿದುದು, ಕೃಷ್ಣ ಸತ್ಯಭಾಮೆಯರ ಪರಿಣಯ, ರುಕ್ಮಿಣಿಯೊಡನೆ ವಿವಾಹವಾದದ್ದು, ಪ್ರದ್ಯುಮ್ನನ ಚರಿತ್ರೆ – ಇವುಗಳು ಏಳನೆಯ ಆಶ್ವಾಸದ ವಸ್ತು. ಎಂಟನೆಯ ಆಶ್ವಾಸದಲ್ಲಿ ಪ್ರದ್ಯುಮ್ನ ಉದಧಿಯರ ಕಲ್ಯಾಣ, ಪ್ರದ್ಯುಮ್ನನು ರುಕ್ಮಿಣಿಯ ಅಣ್ಣನ ಮಗಳಾದ ವಿದರ್ಭೆಯನ್ನು ಅಪಹರಿಸಿದುದು ಈ ವಿಷಯಗಳ ನಿರೂಪಣೆಯಿದೆ. ಇದೇ ಆಶ್ವಾಸದಲ್ಲಿ ನೇಮಿನಾಥನ ಗರ್ಭಾವತರಣ, ಜನನ, ನಾಮಕರಣ ವಿಷಯಗಳಿವೆ. ಒಂಬತ್ತನೆಯ ಆಶ್ವಾಸವು ನೇಮಿನಾಥನ ಬಾಲ್ಯವರ್ಣನೆ, ಕೌರವ ಪಾಂಡವ ವೃತ್ತಾಂತ, ಅವರಿಬ್ಬರ ದ್ವೇಷ, ಅರ್ಜುನ – ದ್ರೌಪದಿ ವಿವಾಹ, ಇಂದ್ರಪ್ರಸ್ಥದಲ್ಲಿ ಪಾಂಡವರ ರಾಜ್ಯಭಾರ ಈ ವಿಷಯಗಳನ್ನೊಳಗೊಂಡಿದೆ. ಹತ್ತನೆಯ ಆಶ್ವಾಸದಲ್ಲಿ ಸುಭದ್ರಾಕಲ್ಯಾಣ, ದ್ಯೂತ ಪ್ರಕರಣ, ಪಾಂಡವರ ವನವಾಸ ಅಜ್ಞಾತವಾಸಗಳು, ಅವುಗಳ ನಂತರ ದ್ವಾರಾವತಿಗೆ ಬಂದದ್ದು, ಕುಂತಿ – ಕರ್ಣರ ಸಮಾಗಮ ಇವುಗಳನ್ನು ವರ್ಣಿಸಲಾಗಿದೆ. ಹನ್ನೊಂದನೆಯ ಆಶ್ವಾಸದಲ್ಲಿ ಯಾದವರು ಇನ್ನೂ ಬದುಕಿರುವ ವಿಷಯವು ಜರಾಸಂಧನಿಗೆ ತಿಳಿದದ್ದು, ಕೃಷ್ಣ ದೌತ್ಯ, ಯುದ್ಧಸನ್ನಾಹ, ಯುದ್ಧಾರಂಭ – ಈ ವಿಷಯಗಳಿವೆ. ಹನ್ನೆರಡನೆಯ ಆಶ್ವಾಸದಲ್ಲಿ ಬರುವ ವಿಷಯಗಳೆಂದರೆ ಕುರುಕ್ಷೇತ್ರ ಯುದ್ಧ ವರ್ಣನೆ ಹಾಗೂ ಪಾಂಡವರ ವಿಜಯಗಳು. ಹದಿಮೂರನೆಯ ಆಶ್ವಾಸವು ನೇಮಿನಾಥನ ಚರಿತ್ರ ನಿರೂಪಣೆಗೆ ಮೀಸಲಾಗಿದೆ. ಅವನ ವಿವಾಹಸಿದ್ಧತೆ, ಅದು ನಿಂತು ಅವನು ದೀಕ್ಷೆಪಡೆದು ತಪಸ್ಸು ಮಾಡಿ ಕೈವಲ್ಯವನ್ನು ಪಡೆದದ್ದು – ಈ ವಿಷಯಗಳು ಇಲ್ಲಿವೆ. ಕೃಷ್ಣನ ಮರಣ, ಪಾಂಡವರ ಭವಾವಳಿ ಮತ್ತು ದೀಕ್ಷೆ ವಹಿಸಿದ ವಿಚಾರ, ಅವರಿಗೆ ಕೈವಲ್ಯ ಪ್ರಾಪ್ತಿಯಾದದ್ದು,

ನೇಮಿನಾಥ ನಿರ್ವಾಣ - ಇವುಗಳು ಹದಿನಾಲ್ಕನೆಯ ಆಶ್ವಾಸದಲ್ಲಿ ನಿರೂಪಿತವಾದ ವಿಷಯಗಳು.

ಕಾವ್ಯನಿರೂಪಣಾ ಶೈಲಿ

ಕರ್ಣಪಾರ್ಯ ಕೃತವಾದ ನೇಮಿನಾಥಪುರಾಣ ಪ್ರತ್ಯೇಕವಾಗಿಯೂ ಸಮಗ್ರವಾಗಿಯೂ ರಚಿತವಾಗಿದ್ದು ಈಗ ದೊರೆಯುತ್ತಿರುವ ನೇಮಿಚರಿತ್ರೆಗಳಲ್ಲಿ ಮೊತ್ತಮೊದಲನೆಯದಾಗಿದೆ. ಕರ್ಣಪಾರ್ಯ ತನ್ನ ಕೃತಿರಚನೆಗೆ ತನಗೆ ಮೊದಲಿದ್ದ ಸಂಸ್ಕೃತ, ಪ್ರಾಕೃತ ಮತ್ತು ಕನ್ನಡ ಜೈನಕವಿಗಳ ನೇಮಿಕಥಾಮೂಲಗಳಲ್ಲಿ ಕೆಲವನ್ನು ಉಪಯೋಗಿಸಿಕೊಂಡಿರುವಂತೆ ತೋರಿದರೂ ಅವುಗಳಲ್ಲಿ ಎಲ್ಲವನ್ನೂ ಗುರುತಿಸುವುದು ಸಾಧ್ಯವಾಗಿಲ್ಲ. ಪುನ್ನಾಟಸಂಘದ ಜಿನಸೇನಾಚಾರ್ಯರ ಹರಿವಂಶಪುರಾಣ ಮತ್ತು ಚಾವುಂಡರಾಯ ಕೃತವಾದ ಚಾವುಂಡರಾಯಪುರಾಣ ಇವನ್ನು ನೋಡಿರುವುದಕ್ಕೆ ಆಧಾರಗಳು ತೋರುತ್ತವೆ. ಕರ್ಣಪಾರ್ಯನ ಈ ಕೃತಿ ಜಿನಸೇನರ ಹರಿವಂಶಪುರಾಣವನ್ನೂ ಚಾವುಂಡರಾಯಪುರಾಣದ ಮೂಲಕವಾಗಿ ಗುಣಭದ್ರಾಚಾರ್ಯರ ಮಹಾಪುರಾಣ ಮಾರ್ಗವನ್ನೂ ಯಥೋಚಿತವಾಗಿ ಸಮ್ಮಿಳನ ಮಾಡಿಕೊಂಡಿರುವ ಕೃತಿ. ಹೀಗಿದ್ದೂ ಈ ಆಚಾರ್ಯದ್ವಯರ ಕಥಾಮಾರ್ಗಗಳಲ್ಲಾಗಲಿ ಪೂರ್ವಕಾಲೀನ ಅನ್ಯ ನೇಮಿಚರಿತ್ರೆಗಳಲ್ಲಾಗಲಿ ಕಂಡುಬರದಿರುವ ಕೆಲವು ಪ್ರಮುಖ ಕಥಾಸಂದರ್ಭಗಳೂ ಅದರಲ್ಲಿ ಕಂಡುಬಂದಿವೆ.

ಜೈನೇತರವಾದ ಎಂದರೆ ವೈದಿಕ ಸಂಪ್ರದಾಯದ ಭಾರತ ಕಥೆಯನ್ನು ಒಳಗೊಂಡಿರುವುದೂ ಈ ಕೃತಿಯ ಒಂದು ವಿಶೇಷ. ಪಂಪಭಾರತ ಮತ್ತು ಗದಾಯುದ್ಧಗಳ ಮೂಲಕವಾಗಿ ಅದು ಇಲ್ಲಿ ಅನುಸರಿಸಲ್ಪಟ್ಟಿದೆ. ಆದರೆ ಪೂರ್ತಿಯಾಗಿ ವೈದಿಕ ಸಂಪ್ರದಾಯದ ಭಾರತಕಥೆಯನ್ನೇ ಅನುಸರಿಸಿದ ಪ್ರಮುಖ ಘಟ್ಟಗಳಲ್ಲಿ ಜೈನ ಭಾರತ ಕಥಾಂಶಗಳನ್ನೂ ಹಾಸುಹೊಕ್ಕಾಗಿ ಕೂಡಿಸಿದೆ. ಕೆಲಮಟ್ಟಿಗೆ ಕ್ರಾಂತಿಕಾರಕವೆನ್ನಬಹುದಾದ ಈ ಬದಲಾವಣೆಗಳಿಂದ ಕರ್ಣಪಾರ್ಯ ಸಂಪ್ರದಾಯ ಶರಣನಲ್ಲ, ಸ್ವಾತಂತ್ರ್ಯಪ್ರಿಯನೂ, ಕಾವ್ಯಕಲಾದೃಷ್ಟಿಯಲ್ಲಿ ಆಸಕ್ತಿಯುಳ್ಳವನೂ

ಆಗಿದ್ದಾನೆಂಬ ಸಂಗತಿ ತಿಳಿಯುತ್ತದೆ. ಈಗ ತಿಳಿದಿರುವಂತೆ ಸಮ್ಮಿಶ್ರಕಥಾ ಸಂಪ್ರದಾಯದ ವಿಭಿನ್ನ ಕಥಾವಾಹಿನಿಗಳ ಒಂದು ಸುಂದರವಾದ ಮಾದರಿಯನ್ನಾಗಿ ಆತ ತನ್ನ ಕೃತಿಯನ್ನು ಕಟ್ಟಿ, ಈಚಿನ ಕನ್ನಡ ನೇಮಿಚರಿತ್ರಕಾರರಿಗೆ ಮಾರ್ಗದರ್ಶಕನಾದಂತೆ ತೋರುತ್ತದೆ.

ಕಥಾವಸ್ತುವಿನ ಅಂಗೋಪಾಂಗಗಳಿಗೆ ಕೊರತೆಯಾಗದಂತೆ ರಸದೃಷ್ಟಿ, ಪಾತ್ರಪರಿಪುಷ್ಟಿ, ಸನ್ನಿವೇಶ ಸೃಷ್ಟಿಗಳನ್ನು ಆತನ ಕೃತಿಯಲ್ಲಿ ಕಾಣಬಹುದಾಗಿದೆ. ಯುದ್ಧವರ್ಣನೆ ಕಾವ್ಯಾಂಗಗಳಾದ ಇತರ ವರ್ಣನೆಗಳಿಗೆ ಯಾವ ಪ್ರಾಶಸ್ತ್ಯವೂ ಇಲ್ಲದೆ ಇಲ್ಲಿ ಕಥೆ ಮುನ್ನಡೆದಿದೆ. ಮೂಲದ ಕಥಾಭಾಗಗಳು ಪರಿಷ್ಕಾರಗೊಂಡು ಹೊಸ ತೇಜಸ್ಸಿನಿಂದ ಕಳೆಗೊಂಡಿರುವುದಕ್ಕೆ ಸರಳ ಸುಂದರವಾದ ಕವಿಯ ಶೈಲಿಯೂ ಒಂದು ಕಾರಣ.

ಈ ದೀರ್ಘ ಕಾವ್ಯವನ್ನು ಕರ್ಣಪಾರ್ಯನು ಜಿನಸೇನಾಚಾರ್ಯರ 'ಹರಿವಂಶಪುರಾಣ' ಹಾಗೂ ಗುಣಭದ್ರಾಚಾರ್ಯರ 'ಮಹಾಪ್ರರಾಣ' ಇವೆರಡನ್ನೂ ಅನುಸರಿಸಿ ರಚಿಸಿದ್ದಾನೆ ಎಂದು ಈಗಾಗಲೇ ಹೇಳಲಾಗಿದೆ. ಕತೆಯು ದೀರ್ಘವಾಗಿದ್ದು ಕವಿಯು ಯಾವ ವಿವರವನ್ನೂ ಬಿಡಲಾರದವನಾದ್ದರಿಂದ ಅವನು ದೀರ್ಘವರ್ಣನೆಗಳ ಗೋಜಿಗೂ ಹೋಗಿಲ್ಲ. ಅನವಶ್ಯಕ ಭಾಗಗಳನ್ನು ಕುಗ್ಗಿಸಲಾಗಲೀ ಬಿಡುವುದಾಗಲೀ ಅವನಿಂದ ಆಗಿಲ್ಲ. ಹೀಗಾಗಿ ಇಲ್ಲಿ ಕತೆಯು ಪ್ರಧಾನವಾಗಿ, ಪುರಾಣಾಂಶಗಳು ತುಂಬಿ, ಕಾವ್ಯಾಂಶಗಳು ಕಡಿಮೆಯಾಗಿವೆ. ಆದರೆ ಅವನು ಕಥನಕಲೆಯನ್ನು ಮೈಗೂಡಿಸಿಕೊಂಡು ಸರಸವಾಗಿ ಕತೆಗಳನ್ನು ನಿರೂಪಿಸಬಲ್ಲ ಶಕ್ತಿಯುಳ್ಳವನು. ವಿಂಧ್ಯಕ-ವಾಗುರೆಯರ ಪ್ರಸಂಗ, ಪ್ರದ್ಯುಮ್ನ ವಿದರ್ಭೆಯರ ವಿವಾಹ ಪ್ರಸಂಗ, ವಸುದೇವ-ರೋಹಿಣಿಯರ ವಿವಾಹ ಸನ್ನಿವೇಶ - ಇಂತಹವುಗಳಲ್ಲಿ ಸನ್ನಿವೇಶ ರಚನೆಯು ಮನೋಜ್ಞವಾಗಿದೆ.

ಕವಿಯು ಅಲ್ಲಲ್ಲಿ ಮಧುರವಾದ ಪದ್ಯಗಳನ್ನು ರಚಿಸಿದ್ದಾನೆ. ಇಂತಹ ಕಡೆಗಳಲ್ಲಿ ಅವನ ಕಾವ್ಯಶಕ್ತಿಯು ವಿದಿತವಾಗುತ್ತದೆ. ಸ್ನಾನ ಮಾಡಿ ಬಿಳಿಯ ರೇಷ್ಮೆವಸ್ತ್ರವನ್ನುಟ್ಟಿದ್ದ ದ್ರೌಪದಿಯ ವರ್ಣನೆ ಈ ಕೆಳಗಣ ಪದ್ಯದಲ್ಲಿದೆ:

ಎಸೆದ ದುಕೂಲಾಂಬರಮಂ
ಬಿಸರುಹಮುಖಿಗುಡಿಸೆ ಚಂದ್ರಲೇಖೆಯಿನಂದಾ
ಗಸದ ನದಿ ಘೂರ್ಣಿಸುತ್ತಿ
ರ್ದೆಸಕಮನಾಂತು ಸಮಂತು ಕನ್ಯಾರತ್ನಂ

(ಸುಂದರವಾದ ರೇಷ್ಮೆಯ ಬಟ್ಟೆಯನ್ನು ಚಂದ್ರಮುಖಿಯಾದ ದ್ರೌಪದಿಗೆ ಉಡಿಸಲು ಚಂದ್ರಲೇಖೆಯನ್ನು ಧರಿಸಿರುವ ಆಕಾಶಗಂಗೆಯ ತೆರೆಗಳಂತೆ ಅದು ಶೋಭಿಸುತ್ತಿದ್ದಿತು.)

ನೇಮಿನಾಥಕುಮಾರನ ಕಾಂತಿಯನ್ನು ಕವಿಯು ವರ್ಣಿಸಿರುವ ರೀತಿಯಿದು:

ಚರಮತನು ದೀಪ್ತಿಯಿಂಭಾ
ಸುರ ಭೂಷಣಗಣ ಮರೀಚಿಚಯಮುಂ ಸೆಣಸಲ್
ಕರಮೆಸೆದಿರ್ದಂ ಭುವನೇ
ಶ್ವರನ್ ಅತುಳೋದಾರನಪ್ಪ ನೇಮಿಕುಮಾರಂ

(ಇದೇ ಕೊನೆಯ ಜನ್ಮವಾಗಿ ಪಡೆದು ಮುಂದೆ ಕೈವಲ್ಯವನ್ನು ಸಂಪಾದಿಸುವ ನೇಮಿನಾಥನ ದೇಹಕಾಂತಿಯೂ, ಅವನು ಧರಿಸಿದ್ದ ಅನೇಕ ಆಭರಣಗಳ ಹೊಳಪೂ ಪರಸ್ಪರ ಸ್ಪರ್ಧಿಸುತ್ತಿರಲು ಆತನು ಕಂಗೊಳಿಸುತ್ತಿದ್ದನು.)

ವಸುದೇವನು ವಿಜಯೆ – ವಿಜಯಸೇನೆಯರೆಂಬ ಇಬ್ಬರು ಕನ್ಯೆಯರನ್ನು ಒಟ್ಟಿಗೇ ಮದುವೆಯಾಗುತ್ತಾನೆ. ಅವರಿಬ್ಬರ ಸೌಂದರ್ಯವನ್ನು ಈ ಕವಿ ಚಮತ್ಕಾರವಾಗಿ ಈ ರೀತಿ ವರ್ಣಿಸುತ್ತಾನೆ:

ಸುರಕನ್ನೆಯರ್ ಈ ಕನ್ನೆಯ
ರುರು ಸೌಂದರ್ಯಕ್ಕೆ ಸೋಲ್ತು ಬಿಟ್ಟರ್ ಧರೆಯಂ;
ವರ ನಾಗಕನ್ನೆಯರ್ ಭೀ
ಕರಿಯರ್ ಕಿಳ್ಪಟ್ಟು ಪೋಗಿ ಪೊಕ್ಕರ್ ನೆಲನಂ

(ಈ ಕನ್ಯೆಯರ ಅಗಾಧ ಸೌಂದರ್ಯಕ್ಕೆ ಸೋತು ನಾಚಿದ

ದೇವಕನ್ಯೆಯರು ಭೂಮಿಯನ್ನು ಬಿಟ್ಟು ದೇವಲೋಕಕ್ಕೆ ಹೋದರು; ಇವರ ಲಲಿತ ಸೌಂದರ್ಯದ ಮುಂದೆ ಭಯಂಕರರಂತೆ ಕಾಣುತ್ತಿದ್ದ ನಾಗಕನ್ನಿಕೆಯರು ನೆಲದೊಳಗೆ ಹೋಗಿ ಅಡಗಿಕೊಂಡರು.)

ಒಟ್ಟಿನ ಮೇಲೆ ಕರ್ಣಪಾರ್ಯನು ಒಳ್ಳೆಯ ಕವಿಗಿಂತ ಹೆಚ್ಚಾಗಿ ಒಳ್ಳೆಯ ಪುರಾಣಕಾರನಾಗಿದ್ದಾನೆ. ಪುರಾಣರಚನೆಯನ್ನು ವರ್ಣನೆಗಳ ಕಾಡಿನಲ್ಲಿ ಕೈಬಿಟ್ಟು, ಗೊಂದಲವನ್ನುಂಟುಮಾಡದೆ, ಕತೆಯನ್ನು ನೇರವಾಗಿ ನಿರೂಪಿಸಿ ಇವನು ಸುಲಭಗ್ರಾಹ್ಯನಾಗಿದ್ದಾನೆ. ಪುರಾಣ ರಚನೆಯಲ್ಲಿಯೇ ಕವಿಯ ಸ್ವಾತಂತ್ರ್ಯಕ್ಕೆ ಹೆಚ್ಚು ಅವಕಾಶವಿಲ್ಲ; ಅದರಲ್ಲಿಯೂ ಸ್ವಾತಂತ್ರ್ಯವನ್ನು ವಹಿಸಲೂ ಇಷ್ಟಪಡದ ಕರ್ಣಪಾರ್ಯನ ಈ ಕಾವ್ಯದಲ್ಲಿ ಕಾವ್ಯ ಧರ್ಮವನ್ನು ನಾವು ಹೆಚ್ಚಾಗಿ ನಿರೀಕ್ಷಿಸಲು ಸಾಧ್ಯವಿಲ್ಲ. ಬಹು ಜನಪ್ರಿಯವಾದ ನೇಮಿನಾಥನ ಕತೆಯನ್ನು ಹೇಳುವ ಕಾವ್ಯಗಳಲ್ಲಿ, ನಮಗೆ ಸಿಕ್ಕಿರುವ ಗ್ರಂಥಗಳನ್ನು ದೃಷ್ಟಿಯಲ್ಲಿರಿಸಿಕೊಂಡು ಹೇಳಿದರೆ, ಕರ್ಣಪಾರ್ಯನ ಪುರಾಣವೇ ಮೊದಲನೆಯದು. ಈ ಐತಿಹಾಸಿಕ ಮಹತ್ವವಂತೂ ಇವನ ಕಾವ್ಯಕ್ಕೆ ಇದ್ದೇ ಇದೆ.

ಗ್ರಂಥಋಣ:

1. ಚಂಪೂ ಕವಿಗಳು: ಸಾಮಾನ್ಯನಿಗೆ ಸಾಹಿತ್ಯ ಚರಿತ್ರೆ: ಸಂಪುಟ – 4 – ಸಂ. ಪಿ. ವಿ. ನಾರಾಯಣ, ಪ್ರಕಟಣ ಮತ್ತು ಪ್ರಚಾರೋಪನ್ಯಾಸ ವಿಭಾಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.
2. ಹಳಗನ್ನಡ ಕಾವ್ಯ ಸಂಗ್ರಹ – ಕೆ.ಎನ್. ನಿಂಗಯ್ಯ
3. ಕರ್ಣಪಾರ್ಯ – ವಿಕಿಪೀಡಿಯ ಮಾಹಿತಿ

****

ಕರ್ಣಾಟಕ ಭಾಷಾ ಭೂಷಣ – ಎರಡನೇ ನಾಗವರ್ಮ

– ಮಂಜುನಾಥ ಕೆ

ಪದವಿಪೂರ್ವ ಕಾಲೇಜು, ಉಡುಪಿ

ಮಾನವ ಸಂಘ ಜೀವಿ. ಅವನಿಗೆ ಮಾತು ಬೇಕು. ಮಾತನಾಡುವ ಶಕ್ತಿಯಿಂದಲೇ ಮಾನವ ಉಳಿದ ಜೀವಿಗಳಿಂದ ಭಿನ್ನವಾಗಿದ್ದಾನೆ. ಮನುಷ್ಯನ ಭಾವಾಭಿವ್ಯಕ್ತಿಗೆ ಭಾಷೆ ಬೇಕು. ವ್ಯವಹಾರಕ್ಕೆ ಭಾಷೆ ಬೇಕು. ಮಾನವ ಮತ್ತು ಭಾಷೆಯ ಸಂಬಂಧ ಅನನ್ಯ. ಭಾಷೆಯ ಇತಿಹಾಸ ಮಾನವ ಇತಿಹಾಸದಷ್ಟೇ ಪ್ರಾಚೀನ ಮತ್ತು ಪ್ರಾಮುಖ್ಯ. ಭಾಷೆಯು ಬೆಳೆದಂತೆ ಭಾಷೆಯ ರಚನೆಯ ಬಗೆಗೆ ಅಧ್ಯಯನವೂ ಬೆಳೆದಿವೆ. ಮಾನವನು ಭಾಷೆಯನ್ನು ತನ್ನ ಅನುಕೂಲಕ್ಕಾಗಿ, ಅಭಿವ್ಯಕ್ತಿಗಾಗಿ ಬಳಸುತ್ತಾ ಪರಿಷ್ಕರಿಸುತ್ತಾ ಸಾಗಿದ. ಭಾಷೆಯ ಹುಟ್ಟು ಮೊದಲು–ವ್ಯಾಕರಣದ ಹುಟ್ಟು ನಂತರ. ಭಾಷೆಯ ರಚನಾ ಶಾಸ್ತ್ರವಾಗಿ ವ್ಯಾಕರಣವು ಪ್ರಯೋಗಕ್ಕೆ ಬಂದಿತು. ಭಾಷೆಯ ವೈಜ್ಞಾನಿಕ ಅಧ್ಯಯನವೇ ವ್ಯಾಕರಣ. ವ್ಯಾಕರಣ ಒಂದು ರಚನಾ ಶಾಸ್ತ್ರ.

ಕನ್ನಡ ಎರಡುವರೆ ಸಾವಿರ ವರುಷಗಳ ಇತಿಹಾಸವನ್ನು ಹೊಂದಿರುವ ಪ್ರಾಚೀನ ಮತ್ತು ಸಮೃದ್ಧ ಭಾಷೆ. ಕನ್ನಡ ಸಾಹಿತ್ಯದ ಇತಿಹಾಸವನ್ನು ಗಮನಿಸಿದರೆ ಪ್ರಾಚೀನ ಕಾಲದ ಭಾಷೆ ಮತ್ತು ಸಾಹಿತ್ಯ

ಶಿಷ್ಟವಾಗಿ ವ್ಯಾಕರಣ ಬದ್ಧವಾಗಿ ರಚನೆಯಾಗಿರುವುದು ಕಂಡುಬರುತ್ತದೆ. ಕನ್ನಡ ಭಾಷಾ ರಚನೆಯ ಸ್ವರೂಪ ಹೇಗಿತ್ತೆಂಬುದನ್ನು ಪ್ರಾಚೀನರು ಬರೆದಿದ್ದಾರೆ.

ಕನ್ನಡದ ಮೊದಲ ಲಾಕ್ಷಣಿಕ ಕೃತಿ ಶ್ರೀವಿಜಯನ (ಕ್ರಿ.ಶ.850) ಕವಿರಾಜಮಾರ್ಗ. ನಂತರದಲ್ಲಿ ಎರಡನೇ ನಾಗವರ್ಮ (1042) ರಚಿಸಿರುವ ಕರ್ಣಾಟ ಭಾಷಾಭೂಷಣ ಮತ್ತು ಕಾವ್ಯಾವಲೋಕನ, ಕೇಶಿರಾಜ ರಚಿಸಿರುವ (1260) ಶಬ್ದಮಣಿದರ್ಪಣಂ, ಭಟ್ಟಾಕಳಂಕನ (1604) ಶಬ್ದಾನುಶಾಸನ ಗ್ರಂಥಗಳು ಪ್ರಮುಖ ವ್ಯಾಕರಣ ಗ್ರಂಥಗಳು.

2ನೇ ನಾಗವರ್ಮ

"-----ಸ್ವನುಗತ ಶುಭಶರ್ಮಂ ನಿರ್ಮಳಂ ನಾಗವರ್ಮಂ" ಎಂದು ಹೆಮ್ಮೆಯಿಂದ ಹೇಳಿಕೊಂಡಿರುವ ನಾಗವರ್ಮ ತನ್ನ ತಂದೆ 'ವಿಪ್ರಕುಳಪ್ರದೇಪನನಘಂ ದಾಮೋದರಂ' ಎಂದೂ, ತಾಯಿ 'ವಿನಯಾಳಂಕೃತೆ ವೀರಕಬ್ಬೆ' ಎಂದು ತನ್ನ ಕಾವ್ಯಗಳಲ್ಲಿ ಪರಿಚಯಿಸಿಕೊಂಡಿದ್ದಾನೆ.

"ಜಿನಮತವನಹಂಸಂ ವಿಪ್ರವಂಶಾವತಂಸಂ" ಎಂದು ತನ್ನ ಮತವನ್ನು ತಿಳಿಸಿದ್ದಾನೆ. "ಜನನಾಥಂ ಜಗದೇಕನಲ್ಲಿ ಕಟಕೋಪಾಧ್ಯಾಯನಾ ನಾಗವರ್ಮಂ" ಎಂಬ ಆಧಾರದಲ್ಲಿ ಚಾಲುಕ್ಯ ದೊರೆ ಜಗದೇಕ ಮಲ್ಲನಲ್ಲಿ ಕಟಕೋಪಾಧ್ಯಾಯನಾಗಿದ್ದನೆಂದು ತಿಳಿದು ಬರುತ್ತದೆ.

ಈತ ಶ್ರೀವಿಜಯ, ಗುಣವರ್ಮ, ಪಂಪ, ನಾಗದೇವರನ್ನು ತನ್ನ ಕಾವ್ಯಗಳಲ್ಲಿ ಸ್ತುತಿಸಿದ್ದಾನೆ. ತನಗಿಂತ ಹಿಂದೆ ಇದ್ದ ಕವಿಗಳಲ್ಲಿ "ದೀರ್ಘೋಕ್ತಿರ್ನಯಸೇನ್ಯ" ಎಂಬ ಸೂತ್ರದಲ್ಲಿ ನಯಸೇನನ್ನು "ಹರಿಪಾಲಸ್ಯಪ್ರಯೋಗ: ತಥಾಗುಣವರ್ಮಕ ವೇಭುರ್ವನ್ಯೈಕ ವೀರಸ್ಯ ಪ್ರಯೋಗ:" ಎಂದು ಹೇಳುತ್ತಾ ಹರಿಪಾಲ, ಗುಣವರ್ಮರನ್ನು ಹೆಸರಿಸಿದ್ದಾನೆ.

ಕಾವ್ಯಾವಲೋಕನ ಮತ್ತು ಭಾಷಾ ಭೂಷಣಗಳಲ್ಲಿ ಪಂಪ, ಪೊನ್ನ, ರನ್ನ, ಹಂಸರಾಜ, ನಾಗಚಂದ್ರ ಮೊದಲಾದ ಕವಿಗಳ ಗ್ರಂಥಗಳಿಂದ ಅನೇಕ ಪದ್ಯಗಳನ್ನು ಉದಾಹರಣೆಯಾಗಿ ನೀಡಲಾಗಿದೆ. ಈತನನ್ನು ಆಚಣ್ಣ

(ಸು.1195) ಜನ್ನ ಸಾಳ್ವ (ಸು.1600) ದೇವೋತ್ತಮ (ಸು.1600) ಮೊದಲಾದ ಕವಿಗಳು ಸ್ತುತಿಸಿದ್ದಾರೆ.

ಈ ಎಲ್ಲಾ ಆಧಾರಗಳಿಂದ ಈತನ ಕಾಲವನ್ನು 1015 ರಿಂದ 1042 ಎಂದು ಕ್ರೋಢೀಕರಿಸಿ ಮೊದಲು ನಿರ್ಣಯಿಸಲಾಗಿತ್ತು. ನಾಗವರ್ಮನ ಕೃತಿ 'ವರ್ಧಮಾನ ಪುರಾಣ'ದ ಹಸ್ತಪ್ರತಿಯಿಂದ ಕಾಲವನ್ನು 1042 ಎಂದು ಗುರುತಿಸಲಾಗಿದೆ. ನಾಗವರ್ಮನಿಗೆ ಅಭಿನವಶ್ರವರ್ಮ, ಕವಿಕರ್ಣಪೂರ, ಕವಿಕಂಠಾಭರಣ, ಕವಿತಾಗುಣೋದಯ ಎಂಬ ಬಿರುದುಗಳು ಇರುವುದನ್ನು ಕಾಣಬಹುದು.

ಈತನು ಬರೆದ ಗ್ರಂಥಗಳು 1. ವರ್ಧಮಾನ ಪುರಾಣ, 2. ಕಾವ್ಯಾವಲೋಕನ (ಶಬ್ದಸ್ಮೃತಿ–ವ್ಯಾಕರಣ ಭಾಗ) 3. ಅಭಿಧಾನ ವಸ್ತುಕೋಶ. 4. ಕರ್ಣಾಟಕ ಭಾಷಾ ಭೂಷಣ 5. ಛಂದೋವಿಚಿತಿ (ಉಪಲಬ್ಧವಿಲ್ಲ)

ಇವುಗಳಲ್ಲಿ 1) ವರ್ಧಮಾನ ಪುರಾಣವು 24ನೇ ತೀರ್ಥಂಕರನಾದ ವರ್ಧಮಾನ ಮಹಾವೀರನ ಮೇಲಿನ ಮೊದಲ ಪುರಾಣವಾಗಿದೆ. 2) ಕಾವ್ಯಾವಲೋಕನ ಒಂದು ಲಕ್ಷಣ ಗ್ರಂಥ. ಇದರಲ್ಲಿ ವ್ಯಾಕರಣವನ್ನು ಸಂಗ್ರಹವಾಗಿ ಹೇಳಲಾಗಿದೆ. ಇದರಲ್ಲಿ ಶಬ್ದಸ್ಮೃತಿ, ಕಾವ್ಯಮಲವ್ಯಾವೃತ್ತಿ, ಗುಣವಿವೇಕ, ರೀತಿಕ್ರಮರಸನಿರೂಪಣ, ಕವಿಸಮಯ ಎಂಬ ಐದು ಅಧಿಕರಣಗಳಿವೆ. ಶಬ್ದಸ್ಮೃತಿ ಇದರಲ್ಲಿನ ವ್ಯಾಕರಣ ವಿಭಾಗವಾಗಿದೆ. ಇದರಲ್ಲಿ ಸಂಧಿ, ನಾಮ, ಸಮಾಸ, ತದ್ಧಿತ, ಆಖ್ಯಾತ, ಎಂಬ ಐದು ಅಧ್ಯಾಯಗಳಿವೆ. ಕರ್ಣಾಟಕ ಭಾಷಾ ಭೂಷಣಕ್ಕಿಂತ ಮೊದಲೇ ವ್ಯಾಕರಣ ಭಾಗವನ್ನೊಳಗೊಂಡ 'ಶಬ್ದಸ್ಮೃತಿ' ಕಾವ್ಯಾವಲೋಕನದಲ್ಲಿದೆ. 3) ಅಭಿಧಾನ ವಸ್ತುಕೋಶ ಕನ್ನಡದಲ್ಲಿ ಉಪಯೋಗದಲ್ಲಿರುವ ಸಂಸ್ಕೃತ ಪದಗಳಿಗೆ ಅರ್ಥವನ್ನು ಹೇಳುವ ಪದ್ಯರೂಪದ ಸಂಸ್ಕೃತ–ಕನ್ನಡ ನಿಘಂಟು.

4) ಕನ್ನಡ ವ್ಯಾಕರಣ ಗ್ರಂಥಗಳಲ್ಲಿ ಮೊದಲನೆಯ ಗ್ರಂಥ ಕರ್ಣಾಟಕ ಭಾಷಾ ಭೂಷಣ. ಇದು ಕನ್ನಡ ಭಾಷಾ ಭೂಷಣವೇ ಹೌದು. ಕನ್ನಡ ವ್ಯಾಕರಣದ ಸತ್ವವನ್ನು ಸಂಸ್ಕೃತದವರಿಗೆ ತಿಳಿಯುಪಡಿಸುವ

ಸೂತ್ರರೂಪದಲ್ಲಿರುವ ಒಂದು ಶ್ರೇಷ್ಠ ಗ್ರಂಥ. ಇದರಲ್ಲಿ ಸೂತ್ರವೃತ್ತಿಗಳು ಸಂಸ್ಕೃತದಲ್ಲಿದ್ದು, ಉದಾಹರಣೆಗಳು ಕನ್ನಡ ಕಾವ್ಯಗಳಿಂದ ಆಯ್ದುವುಗಳಾಗಿವೆ.

ಈ ಕೃತಿಯನ್ನು ಅನುಸರಿಸಿ ಭಟ್ಟಾಕಳಂಕನು (1604) ಶಬ್ದಾನುಶಾಸನ ಎಂಬ ವ್ಯಾಕರಣ ಕೃತಿಯನ್ನು ರಚಿಸಿದ್ದಾನೆ. ಈ ವ್ಯಾಕರಣ ಕೃತಿಯು ಮುಂದಿನ ವ್ಯಾಕರಣ ಕೃತಿಗಳಿಗೆ ಪ್ರಭಾವ ಬೀರಿದೆ. ಅಥವಾ ವ್ಯಾಕರಣಕಾರರು- ಈ ಕೃತಿಯನ್ನು ಉಲ್ಲೇಖಿಸಿದ್ದಾರೆ.

ಸಂಪಾದನೆ : ಬ್ರಿಟಿಷ್ ಇತಿಹಾಸಕಾರ, ಪುರಾತತ್ವ ಶಾಸ್ತ್ರಜ್ಞ, ಹಾಗೂ ಶಿಕ್ಷಣ ತಜ್ಞರಾದ ಬೆಂಜಮಿನ್ ಲೆವಿನ್ ರೈಸ್ (17 ಜುಲೈ 1837 ರಿಂದ 10 ಜುಲೈ 1927) ಅವರು ನಾಗವರ್ಮನ ಕರ್ಣಾಟಕ ಭಾಷಾ ಭೂಷಣವನ್ನು ಸಂಪಾದಿಸಿದ್ದಾರೆ. ಇವರು ಸಂಪಾದಿಸಿದ ಕೃತಿಯಲ್ಲಿ ಒಟ್ಟು 280 ಸೂತ್ರಗಳಿವೆ. 10 ಪರಿಚ್ಛೇದಗಳಿವೆ.

ಆರ್. ನರಸಿಂಹಾಚಾರ್ಯರು ಪರಿಷ್ಕರಿಸಿದ ಕೃತಿಯಲ್ಲಿ ಒಟ್ಟು 269 ಸೂತ್ರಗಳಿವೆ. 11 ಸೂತ್ರಗಳ ಭಿನ್ನತೆ ಈ ಎರಡು ಕೃತಿಗಳಲ್ಲಿ ಕಂಡುಬರುತ್ತದೆ. ಪ್ರತಿಸೂತ್ರಕ್ಕೆ ನಾಗವರ್ಮನೇ ಬರೆದ ವೃತ್ತಿ ಪ್ರಯೋಗಳಿವೆ. ಅವೆಲ್ಲವೂ ನಾಗವರ್ಮನಿಗಿಂತ ಹಿಂದೆ ಬರೆದವರ ಕೃತಿಗಳಿಂದ ಆರಿಸಿಕೊಂಡವುಗಳಾಗಿವೆ.

ಕರ್ಣಾಟಕ ಭಾಷಾ ಭೂಷಣದಲ್ಲಿ ಒಟ್ಟು 10 ಪರಿಚ್ಛೇದಗಳಿವೆ.

1. ಸಂಜ್ಞೆ 2. ಸಂಧಿ 3. ವಿಭಕ್ತಿ 4. ಕಾರಕ 5. ಶಬ್ದರೀತಿ 6. ಸಮಾಸ 7. ತದ್ಧಿತ 8. ಆಖ್ಯಾತ 9. ಆವ್ಯಯ 10. ನಿಪಾತ

1. ಸಂಜ್ಞಾ ವಿಧಾನಂ

ವರ್ಣಸಮಾಮ್ನಾಯವನು ಶಾಸ್ತ್ರೀಯವಾಗಿ ಹೇಳಿದ್ದಾನೆ ಎನಿಸುತ್ತದೆ. ಯಾವುದೇ ಸಂದೇಹಕ್ಕೆ ಎಡೆಮಾಡಿಕೊಡುವಂತಿರದೆ ಖಚಿತವಾಗಿ ನಿರೂಪಿಸಲಾಗಿದೆ. ಸಂಜ್ಞಾವಿಧಾನದಲ್ಲಿ 17 ಸೂತ್ರಗಳಿವೆ. ಕನ್ನಡ ವರ್ಣಮಾಲೆಯ ಸಂಖ್ಯೆ 46 ಎಂದಿವೆ. ಕೇಶಿರಾಜ 47 ಎಂದಿದ್ದಾನೆ. ಅ ದಿಂದ ಹ ಕಾರದವರೆಗೆ ಅಕ್ಷರಗಳ ಬಗ್ಗೆ ಹೇಳಲಾಗಿದೆ. ಸಂಸ್ಕೃತದ ಳ ಕಾರವನ್ನು ಸೇರಿಸಿಕೊಳ್ಳದಿರುವುದು ಕೇಶಿರಾಜ ಮತ್ತು ನಾಗವರ್ಮನಿಗೂ

ಇರುವ ವ್ಯತ್ಯಾಸ. ಕೇಶಿರಾಜನ ದೇಶಿಯಾಕ್ಷರಗಳ ವ್ಯಾಖ್ಯಾನಕ್ಕೆ ನಾಗವರ್ಮನ ಈ ಕೃತಿ ಪ್ರಭಾವ ಬೀರಿದೆ ಎಂದು ವೈಯಾಕರಣರು ಸಂಶೋಧಿಸಿದ್ದಾರೆ. ಕರ್ಣಾಟಕ ಭಾಷಾ ಭೂಷಣದ ಸಂಜ್ಞಾ ವಿಧಾನದಲ್ಲಿ ಕನ್ನಡದ ವರ್ಣಮಾಲೆಗೆ ಸಂಸ್ಕೃತದ ಕೆಲವು ಅಕ್ಷರಗಳು ಅನಗತ್ಯವೆಂದು ಕೂಡಿ ಕಳೆಯುವ ಕ್ರಮ ಭೂಷಣದಿಂದ ಪ್ರಾರಂಭವಾಯಿತೇನೋ. ಇಲ್ಲಿ ಸ್ವರ, ಹ್ರಸ್ವ-ದೀರ್ಘ-ಪ್ಲುತ ಸಮಾನಾಕ್ಷರಗಳು, ಸಂಧ್ಯಾಕ್ಷರಗಳು, ವ್ಯಂಜನಗಳು, ಅಲ್ಪಪ್ರಾಣಗಳು, ಅನುನಾಸಿಕ ಅವರ್ಗೀಯ ವ್ಯಂಜನಗಳು, ದೇಶೀಯಾಕ್ಷರಗಳ ಬಗ್ಗೆ ಸ್ಪಷ್ಟ ಚಿತ್ರಣವಿದೆ. ದೇಶೀಯ ಅಕ್ಷರಗಳಂತಹ ವಿಷಯ ಪ್ರಸ್ತಾವನೆಯಿಂದ ಕನ್ನಡದ ಅಭಿಮಾನ ಗೋಚರಿಸಿದೆ ಎಂಬುವುದು "ಕರ್ನಾಟ ಭಾಷಾಭೂಷಣಂ ಮತ್ತು ಆಂಧ್ರ ಭಾಷಾ ಭೂಷಣಂ : ಒಂದು ತೌಲನಿಕ ಅಧ್ಯಯನ" ಕೃತಿಯ ಕರ್ತೃಗಳಾದ ಟಿ. ಶಂಭುಲಿಂಗಪ್ಪ ಅವರ ಅಭಿಪ್ರಾಯ.

2. ಸಂಧಿ ವಿಧಾನಂ

ಎರಡನೆಯ ಪರಿಚ್ಛೇದದಲ್ಲಿ ಕನ್ನಡ ಸಂಧಿಗಳಾದ ಲೋಪ, ಆಗಮ, ಆದೇಶ ಸಂಧಿಗಳ ಬಗ್ಗೆ ವಿವರಿಸಲಾಗಿದೆ. ಒಟ್ಟು 19 ಸೂತ್ರಗಳಲ್ಲಿ ಹೇಳಲಾಗಿದೆ. 18 ರಿಂದ 36 ರವರೆಗಿನ ಸೂತ್ರಗಳಲ್ಲಿ ಸಂಧಿ ಪ್ರಕರಣವನ್ನು ವಿವರಿಸಲಾಗಿದೆ. ಪರಸ್ಪರ ಸನ್ನಿಕರ್ಷ ಸಂಹಿತಾ(ಸೂತ್ರ-17) ಸ್ವರೋ ಸ್ವರಸ್ಯ ಲೋಪ (ಸೂತ್ರ-19) ಗಳ ಮೂಲಕ ಲೋಪಸಂಧಿಯ ಬಗ್ಗೆ ಹೇಳಲಾಗಿದೆ. 22,23,24 ಸೂತ್ರಗಳಲ್ಲಿ ಆಗಮ ಸಂಧಿಗಳ ಬಗ್ಗೆಯೂ 25,26,27 ರ ಸೂತ್ರಗಳಲ್ಲಿ ಸಂಧಿ ನಿಷೇಧಗಳ ಬಗ್ಗೆಯೂ ಹೇಳಲಾಗಿದೆ. 28ರಿಂದ 36ರವರೆಗಿನ ಸೂತ್ರಗಳಲ್ಲಿ ಆದೇಶ ಸಂಧಿಗಳ ಬಗ್ಗೆ ಹೇಳಲಾಗಿದೆ. ಸಂಧಿ ವಿಧಾನಂ ಸೂಕ್ಷ್ಮವಾಗಿ ಪ್ರಯೋಗ ಕಡಿಮೆ ಇದ್ದು ಸಂಕ್ಷೇಪವಾಗಿದೆ.

3. ವಿಭಕ್ತಿ ವಿಧಾನಂ

ಸೂತ್ರ 37ರಿಂದ 73ರವರೆಗೆ ವಿಭಕ್ತಿಗಳ ವಿಚಾರ ಬರುತ್ತದೆ. ಮೊದಲ ಸೂತ್ರದಲ್ಲಿ ನಾಮಲಿಂಗವನ್ನು ಹೇಳಲಾಗಿದೆ. ಪ್ರಥಮ ವಿಭಕ್ತಿ ಮ್ ಪ್ರತ್ಯಯವು ಅಕಾರಾಂತ ಲಿಂಗಗಳ ಮುಂದೆ ಬಿಂದು ರೂಪದಲ್ಲಿದ್ದು ಇತರ ಕಡೆ ಲೋಪ ಪಡೆಯುವುದು ಎಂದಿದ್ದಾನೆ. ದ್ವಿತೀಯ ವಿಭಕ್ತಿ

ಅಮ್(ಅಮ್,ಅನ್,ಅನ್,ಅ), ಹಾಗೆಯೇ ದಂ ತೃತೀಯಾ ಎಂದೂ, ಚತುರ್ಥಿ ವಿಭಕ್ತಿಗೆ ಗೆ ಇಗೆ, ಕ್ಕೆ ಎಂದೂ, ಪಂಚಮೀ ವಿಭಕ್ತಿಗೆ ಅತ್ತಣಿಂ ಎಂದೂ, ಷಷ್ಠೀ ವಿಭಕ್ತಿಗೆ ಅ, ಸಪ್ತಮಿ ವಿಭಕ್ತಿಗೆ ಒಳ್ ಎಂದೂ ಸೂತ್ರಗಳಲ್ಲಿ ವಿವರಿಸಿದ್ದಾನೆ. ನಾಗವರ್ಮನು ಸಂಬೋಧನೆಗೆ ಒಟ್ಟು 4 ಸೂತ್ರ (70,71,72,73)ಗಳನ್ನು ಬಳಸಿಕೊಂಡಿದ್ದಾನೆ. ಉಳಿದಂತೆ ವಿಭಕ್ತಿ ವಿಧಾನಂನಲ್ಲಿ ವಚನ ಪ್ರತ್ಯಯ, ಗುಣವಚನ, ಸರ್ವನಾಮಗಳ ಬಗ್ಗೆ ಹೇಳಲಾಗಿದೆ.

4. ಕಾರಕ ವಿಧಾನಂ

ಸೂತ್ರ 74 ರಿಂದ 91ರವರೆಗೆ 18 ಸೂತ್ರಗಳಲ್ಲಿ ಕಾರಕಗಳ ಬಗ್ಗೆ ಹೇಳಲಾಗಿದೆ. ವಿಭಕ್ತಿಗಳು ಕಾರಕ ವಿಧಾನದಿಂದ ಹೇಗೆ ಹತ್ತುತ್ತವೆ ಎಂಬುದನ್ನು ತಿಳಿಸಿದ್ದಾನೆ. ಕಾರಕ ವಿಧಾನಂ ಪ್ರಕಾರ ಮುಖ್ಯ ಕಾರಕಗಳೆಂದರೆ 1.ಕರ್ತೃಕಾರಕ 2.ಕರ್ಮಕಾರಕ 3.ಕರಣಕಾರಕ 4.ಸಂಪ್ರದಾನಕಾರಕ 5.ಅಪಾದಾನಕಾರಕ 6.ಸ್ವಾಮ್ಯಕಾರಕ 7.ಅಧಿಕರಣಕಾರಕ.

ಕಾರಕದ ಬಗ್ಗೆ "ಕ್ರಿಯಾ ನಿಮಿತ್ತಂ ಕಾರಕಂ, ಲೋಕತಃ ಸಿದ್ಧಮ್-ಕ್ರಿಯಾ ಕರೋತೀತೇ ಕಾರಕಮ್ಃ ಕ್ರಿಯಾನ್ವಿತತ್ವಂ ಕಾರಕತ್ವಮ್" ಎಂದು ಹೇಳಲಾಗಿದೆ.

5. ಯುಷ್ಮದಾದಿ ವಿಧಾನಂ (ಶಬ್ದರೀತಿ ವಿಧಾನಂ)

ಸೂತ್ರ 92 ರಿಂದ 97 ರವರೆಗೆ 6 ಸೂತ್ರಗಳಲ್ಲಿ ಸರ್ವನಾಮಗಳ ಬಗ್ಗೆ ಹೇಳಲಾಗಿದೆ. ಆದರೆ ಸರ್ವನಾಮ ಎಂಬ ಸಂಜ್ಞೆ ಬಳಸಿಲ್ಲ. ವಿಭಕ್ತಿ ಪ್ರಕರಣದ 41ನೇ ಸೂತ್ರದಲ್ಲಿ ಈ ಸಂಜ್ಞೆ ಇದೆ. ಸರ್ವನಾಮಗಳಲ್ಲಿ ಪುರುಷಾರ್ಥ ಸರ್ವನಾಮ, ಲಿಂಗಗಳು, ಪ್ರಶ್ನಾರ್ಥಕ ಮತ್ತು ಆತ್ಮಾರ್ಥಕ ಸರ್ವನಾಮಗಳ ಬಗ್ಗೆ ವಿವರಣೆ ಇದೆ.

ತತ್ಸಮ ತದ್ಭವಗಳು : ಸಂಸ್ಕೃತದಿಂದ ಕನ್ನಡಕ್ಕೆ ಬಂದ ಶಬ್ದಗಳಿಗಾಗಿ ನಾಗವರ್ಮನು ಬಳಸಿಕೊಂಡಿರುವ ಒಟ್ಟು ಸೂತ್ರಗಳು 14. 98 ರಿಂದ 111 ರವರೆಗೆ ಇವುಗಳ ಬಗ್ಗೆ ವಿವರಿಸಲಾಗಿದೆ. 116 ರಿಂದ 123ರವರೆಗೆ

ತದ್ಭವ ಶಬ್ದಗಳ ವಿಧಾನದ ಬಗ್ಗೆ ಹೇಳಲಾಗಿದೆ.

ನಾಗವರ್ಮನ ಯುಷ್ಮದಾದಿ ವಿಧಾನಂ ಪ್ರಕರಣದಲ್ಲಿ ಸರ್ವನಾಮ ತತ್ಸಮ ತದ್ಭವ ಸಮ ಸಂಸ್ಕೃತ ವಿಧಾನ, ಬಿಂದು ವರ್ಣವತ್ಯಯಗಳ ಬಗ್ಗೆ ನೋಡಬಹುದು. ಮನಯೋರ್ಬಿಂದು(112) ವರ್ಗೆ ತದ್ವಗ್ರಾಂತ್ಯ: (113) ಣೋ ನಸ್ಯ ಣೀನ (114) ಮೇ ಹೋ ವಾ (115) ಸೂತ್ರಗಳ ಮೂಲಕ ಣ ಕಾರ, ಪ ಕಾರಗಳ ಬಗ್ಗೆ ಹೇಳಲಾಗಿದೆ.

6. ಸಮಾಸ

124 ರಿಂದ 165 ರವರೆಗೆ ಸಮಾಸದ ಬಗ್ಗೆ ತಿಳಿಸಲಾಗಿದೆ. 132ನೇ ಸೂತ್ರದಲ್ಲಿ ಸಮಸಂಸ್ಕೃತದ ಬಗ್ಗೆ ಇದೆ. ನಾಗವರ್ಮ ಆರು ಸಮಾಸಗಳನ್ನು ಹೇಳಿದ್ದಾನೆ. ಸಂಸ್ಕೃತದ ಸಮಾಸ ಚಕ್ರದಲ್ಲಿರುವ ತತ್ಪುರುಷ, ಕರ್ಮಧಾರೆಯ, ದ್ವಿಗು, ಅವ್ಯಯೀಭಾವ, ದಂದ್ವ, ಬಹುವ್ರೀಹಿ ಇವುಗಳನ್ನು ಸಂಸ್ಕೃತದಲ್ಲಿ ನಿರೂಪಿಸಿದ್ದಾನೆ. ಅವ್ಯಯೀಭಾವ ಸಂಸ್ಕೃತದಲ್ಲಿ ಎರವಲು ಪಡೆದಿದ್ದರೂ ಕನ್ನಡತನವನ್ನು ಗುರುತಿಸಿದ್ದಾನೆ. ಕನ್ನಡ ಕ್ರಿಯಾಸಮಾಸದ ಬಗ್ಗೆ ಸೂಚಿಸಿದ್ದಾನೆ. ನಾಗವರ್ಮ ನಿರೂಪಿಸಿದ ಸಮಾಸಗಳ ಸಂಖ್ಯೆ 6. ಇದರಲ್ಲಿ ಕ್ರಿಯಾಸಮಾಸ ವಿಧಾನವನ್ನು ಹೇಳಿರುವುದೇ ಹೊರತು ಸಮಾಸದ ಹೆಸರನ್ನು ಹೇಳಿಲ್ಲ (ಕಾರಕಂ ಪರೇಣ ಸಮಸ್ತ ಕ್ರಿಯಾ ಪದೇನ (ಕ,ಭಾ, ಭೂ,ಸೂತ್ರ 133)

132ನೇ ಸೂತ್ರದಂತೆ (ಸಮ ಸಂಸ್ಕೃತಂ ದೇಶೀಯ ಪದೇನ ಸಮಂ ಸಮಸತ್ಯೇ) ಸಂಸ್ಕೃತ ಪದವು ಕನ್ನಡದೊಡನೆ ಸೇರಿ ಸಮಾಸವಾಗಬಾರದು. ಸಂಸ್ಕೃತಕ್ಕೆ ಸಮವಾಗಿರುವ ಶಬ್ದಗಳು ಕನ್ನಡ ಶಬ್ದಗಳ ಜೊತೆ ಸೇರಿ ಸಮಾಸವಾಗಬಹುದು. ಅಲ್ಲಿ ಅರಿಸಮಾಸ ದೋಷವಿಲ್ಲ.

7. ತದ್ಧಿತ ವಿಧಾನಂ

ಸೂತ್ರ 166 ರಿಂದ 193 ಸೂತ್ರಗಳವರೆಗೆ ತದ್ಧಿತ ಪ್ರತ್ಯಯಗಳ ಬಗ್ಗೆ ಇದೆ. ತದ್ಧಿತ ಪ್ರತ್ಯಯಗಳಿಗೆ ಒಂದು ಪ್ರತ್ಯೇಕ ಪ್ರಕರಣವಿದೆ. 20 ತದ್ಧಿತ ಪ್ರತ್ಯಯಗಳನ್ನು 15 ಸೂತ್ರಗಳಲ್ಲಿ ನಿರೂಪಿಸಲಾಗಿದೆ. ಒಂದೊಂದು

ಪ್ರತ್ಯಯದ ಲಕ್ಷಣ ಹೇಳಿ ನಂತರ ಪ್ರಯೋಗಗಳು ಇದೆ. ಇದರಲ್ಲಿ ಇಗ, ವಳಿ ಗಾರ, ಇಚ, ಅಳಿ ಇತಿ, ಇತ್ಯಾದಿ ತದ್ಧಿತ ಪ್ರತ್ಯಯಗಳು ಪುಂ ಸ್ತ್ರೀಲಿಂಗಗಳ ಜಾತಿ ವಸ್ತು ಉದ್ಯೋಗ ಗುಣಶೀಲ ಸ್ವಭಾವಗಳನ್ನು ನಿರ್ದೇಶಿಸುತ್ತದೆ. ತನ, ಇಕೆ, ಕೆ, ಮೆ, ಪು, ತ ತದ್ಧಿತ ಭಾವನಾಮಗಳಿವೆ. ದಂತ ಆನೆಯ ಪ್ರತ್ಯಯಗಳು ಪ್ರಮಾಣವಾದಿ ಸಂಖ್ಯಾವಾದಿ ಪದಗಳಿಗೆ ಸೇರಿಕೊಂಡ ತದ್ಧಿತಾಂತ ವಿಶೇಷಣಗಳು ಇವೆ. ವೊಲೆ, ವೊಲ್ ಬೊಲ್ ತದ್ಧಿತಾಂತ ಅವ್ಯಯಗಳಿವೆ.

8. ಆಖ್ಯಾತ ವಿಧಾನಂ

ಪ್ರಾರಂಭದಲ್ಲಿ 194ನೇ ಸೂತ್ರದಲ್ಲಿ "ಕ್ರಿಯಾರ್ಥೋ ಧಾತು" ಎಂದಿದೆ. ಕೊನೆಯ ಸೂತ್ರ "ಅಬಿಧಾನತೋವ್ಯವಸ್ಥಿತಾ ಸಿದ್ಧಿಃ" (ಸೂತ್ರ-240) ಎಂದಿದೆ. ಒಟ್ಟು 47 ಸೂತ್ರಗಳನ್ನು ಬಳಸಿಕೊಳ್ಳಲಾಗಿದೆ. ಕ್ರಿಯಾ ಪ್ರಕರಣದ ವಿಭಜನೆಗಳಾದ ಧಾತು, ಕಾಲ ಸೂಚಕ ಪ್ರತ್ಯಯಗಳನ್ನು ವಿಭಜಿಸಲಾಗಿದೆ. ಅಖ್ಯಾತ ಪ್ರತ್ಯಯಗಳಾದ 'ಅದು ಅವು'ಗಳಿಗೆ ನಾಗವರ್ಮ 'ಉದು ಉವು' ಎಂಬೆರಡು ಪ್ರತ್ಯಯಗಳನ್ನು ಹೆಸರಿಸಿದ್ದಾನೆ.

9. ಅವ್ಯಯ ವಿಧಾನಂ

ಸೂತ್ರ 241ರಿಂದ 257ರವರೆಗೆ ಅವ್ಯಯಗಳ ಬಗ್ಗೆ ಇದೆ. 241ನೇ ಸೂತ್ರದಲ್ಲಿ 'ಅಸಂಖ್ಯಮವ್ಯಯಂ' ಎಂದಿದ್ದಾನೆ. ನಾಗವರ್ಮ 16 ಸೂತ್ರಗಳಲ್ಲಿ 16 ಅವ್ಯಯಗಳ ಶಬ್ದಗಳನ್ನು ಕುರಿತು ಹೇಳಿದ್ದಾನೆ. ಆದಂ, ಏಗಂ, ಹುಂ, ಚಿ, ಮತ್ತೆ ಕೆನ್ನಂ, ಬೋಂಕಲ್, ತೊಟ್ಟನೆ, ವೋಲ್, ಮೇಣ್, ವಲಂ, ಗಡ; ಗಳ, ಅಮ್ ಅ; ಉಂ ಉ, ಅಕ್ಕಟ, ಕಲ್ಕನೆ, ನೆಟ್ಟನೆ, ದಲ್ ಮುಂತಾದ ಅವ್ಯಯಗಳಿವೆ.

10. ನಿಪಾತ ವಿಧಾನಂ

ಅವ್ಯಯ ಮತ್ತು ನಿಪಾತಗಳು ಮೇಲ್ನೋಟಕ್ಕೆ ಒಂದೇ ಆಗಿದ್ದರೂ ಕರ್ನಾಟಕ ಭಾಷಾ ಭೂಷಣದಲ್ಲಿ ನಿಪಾತಕ್ಕೆ ಪ್ರತ್ಯೇಕ ಪ್ರಕರಣವಿದೆ. ನಿಪಾತಗಳ ವಿವರಣೆ ಸೂತ್ರ 258 ರಿಂದ 269 ರವರೆಗೆ ಸಾಗುತ್ತದೆ. ಇದು ಕೊನೆಯ ಪ್ರಕರಣ 'ಅಲ್ತೆ ಸಂಪ್ರಶ್ನಾನ ಮಾನಯೋಃ' ಎಂಬ 269ಗೆ ಸೂತ್ರದೊಂದಿದೆ ಗ್ರಂಥವು ಸಂಪೂರ್ಣವಾಗುತ್ತದೆ

ಕರ್ನಾಟಕ ಭಾಷಾ ಭೂಷಣ ವ್ಯಾಕರಣ ಕೃತಿಯಾದರೂ ಸ್ವಂತಿಕೆ ಇದೆ. ಮುಂದಿನ ವ್ಯಾಕರಣಕಾರರಿಗೆ ಒಂದು ಕೈದೀವಿಗೆಯಂತಿದೆ. ಸಂಸ್ಕೃತಕೆ ಸರಿ ಸಮಾನವಾಗಿ ಕನ್ನಡದ ವ್ಯಾಕರಣದ ಕೃತಿಯನ್ನು ಸಂಸ್ಕೃತದಲ್ಲಿ ರಚಿಸಿದ ಹೆಗ್ಗಳಿಕೆ ನಾಗವರ್ಮನದು. ಉದಾಹರಣೆಗಳನ್ನು ಕನ್ನಡ ಕಾವ್ಯಗಳಿಂದಲೇ ಆಯ್ದು ಕನ್ನಡ ವ್ಯಾಕರಣವನ್ನು ಹೇಳಿದ್ದಾನೆ. ಆಗಿನ ಕಾಲಕ್ಕೆ ಸಂಸ್ಕೃತದ ಪ್ರಭಾವವನ್ನು ಹೊರತು ಪಡಿಸಿ ವ್ಯಾಕರಣ ಕೃತಿ ಅಥವಾ ಇತರ ಕೃತಿ ರಚಿಸಲಾಗದ ಪರಿಸ್ಥಿತಿ ಇದ್ದರೂ ಸ್ವಂತಿಕೆಯನ್ನು ಮರೆಯಲಿಲ್ಲ

ಕೇಶಿರಾಜ, ಭಟ್ಟಾಕಳಂಕ ಅಥವಾ ಇತರ ವೈಯಾಕರಣರು ಭಾಷಾ ಭೂಷಣದ ಸಹಾಯವನ್ನು ಪಡೆದವರೇ ಆಗಿದ್ದಾರೆ. ವಿಭಕ್ತಿ ಪ್ರತ್ಯಯಗಳ ಜೊತೆಗೆ 'ಕಾರಕ ವಿಧಾನಂ' ಎನ್ನುವ ಪ್ರತ್ಯೇಕ ಪರಿಚ್ಛೇದ ನಾಗವರ್ಮನ ವಿಶೇಷ. ಸಮಾಸ ವಿಧಾನಂನಲ್ಲಿ ಗಮಕ ಸಮಾಸದ ಬಗ್ಗೆ ಏನನ್ನು ಹೇಳದೇ ಇದ್ದಾನೆ. ಮುಂದಿನ ವ್ಯಾಕರಣಕಾರ ಕೇಶಿರಾಜ ಇದನ್ನು ಅಸಾಧಾರಣ ಲಕ್ಷಣಗಳಲ್ಲಿ ಒಂದಾಗಿ ಸ್ವೀಕರಿಸಿದ್ದಾನೆ.

ಕನ್ನಡ ಶುದ್ಧತೆಗೆ ನಾಗವರ್ಮನ ಪ್ರಥಮ ಕಾಣಿಕೆ 'ಯುಷ್ಮದಾದಿ ವಿಧಾನಂ' ಕನ್ನಡ ವ್ಯಾಕರಣವನ್ನು ಸಂಸ್ಕೃತದಿಂದ ಪ್ರತ್ಯೇಕಿಸುವ ಪ್ರಕರಣವಾಗಿದೆ. ವ –ಮ –ಹ –ಪ –ಭೇದ, ದೇಶಿಯಾಕ್ಷರಗಳು, ಬಿಂದು ಈ ಮೊದಲಾದವುಗಳಿಂದ ಕನ್ನಡ ವ್ಯಾಕರಣವನ್ನು ಸ್ವಲ್ಪ ಮಟ್ಟಿಗಾದರೂ ಪ್ರತ್ಯೇಕಿಸುವ ಸ್ವಂತಿಕೆಯನ್ನು ನಾಗವರ್ಮನು ತೋರಿದ್ದಾನೆ.

ನಾಗವರ್ಮ ಕಾವ್ಯ ಪ್ರಯೋಗಗಳನ್ನು ಅನುಲಕ್ಷಿಸಿಯೇ ವ್ಯಾಕರಣ ಗ್ರಂಥವನ್ನು ರಚಿಸಿದ. ಇದರಿಂದ ಅವನ ಕಾಲದವರೆಗಿನ ಕನ್ನಡ ಭಾಷಾ ಸ್ವರೂಪ ತಿಳಿಯುತ್ತದೆ.

ಅವನ ಕಾಲದವರೆಗೆ ರಚಿತವಾದ ಶ್ರೇಷ್ಠ ಕೃತಿಗಳು ಮತ್ತು ತತ್ಸಮ ತದ್ಭವಗಳೊಂದಿಗೆ ದೇಶ್ಯ ಶಬ್ದಗಳು ಹೇರಳವಾಗಿ ಬಳಕೆಯಾಗಿದ್ದನ್ನು ಗಮನದಲ್ಲಿಟ್ಟು ಕೊಂಡು ಕನ್ನಡ ಮತ್ತು ಸಂಸ್ಕೃತವನ್ನು ಬಳಸಿ ವ್ಯಾಕರಣ ಕೃತಿ ರಚಿಸಿದ ಹೆಗ್ಗಳಿಕೆ ನಾಗವರ್ಮನದು.

ನಾಗವರ್ಮನ ವರ್ಣಸಮಾಮ್ನಾಯವು ಖಚಿತತೆಯಿಂದ ಕೂಡಿದೆ. ಯಾವುದೇ ಸಂದೇಹಕ್ಕೆ ಎಡೆ ಇಲ್ಲ. ಇದು ಮುಂದಿನ ವ್ಯಾಕರಣಕಾರರ ಮೇಲೆ ಪ್ರಭಾವ ಬೀರಿದೆ. ದೇಶೀಯ ಅಕ್ಷರಗಳ ಸ್ಪಷ್ಟಕಲ್ಪನೆ ಕೇಶಿರಾಜ ನಂತಹ ವೈಯಾಕರಣಿಯ ಮೇಲೆ ಪ್ರಭಾವ ಬೀರಿತು.

ನಾಗವರ್ಮನು ಕನ್ನಡದಲ್ಲಿ ಮಹಾಪ್ರಾಣಗಳು ಇಲ್ಲ ಎಂದು ಹೇಳಿ ವಿವರಣೆಯನ್ನು ನೀಡಿದುದು ವಿಶೇಷ. ಕೆಲವು ಕಡೆ ಮಹಾಪ್ರಾಣಗಳು ಇದ್ದ ಮಾತ್ರಕ್ಕೆ ಅವುಗಳನ್ನು ಕನ್ನಡ ವರ್ಣಮಾಲೆಗೆ ಸ್ವೀಕರಿಸಬೇಕಾಗಿಲ್ಲವೆಂದು ತಿಳಿಸಿ ಕನ್ನಡದ ಸ್ವಂತಿಕೆಯನ್ನು ಎತ್ತಿಹಿಡಿದಿದ್ದಾನೆ.

ಯೋಗವಾಹಗಳ ಹೆಸರನ್ನು ಎಲ್ಲಿಯೂ ಎತ್ತಿಹಿಡಿಯದಿದ್ದರೂ ಅದಕ್ಕೆ ಸಂಬಂಧಿಸಿದ ಅನುಸ್ವಾರ ವಿಸರ್ಗಗಳ ಕುರಿತು ತನ್ನ ಕೃತಿಯಲ್ಲಿ ತಿಳಿಸಿದ್ದಾನೆ.

ಸಮಾಸದ ವಿಚಾರದಲ್ಲಿ ಕರ್ಮಧಾರೆಯ ಮತ್ತು ತತ್ಪುರುಷ ದ್ವಿಗು ಸಮಾಸಗಳು ಒಂದು ಪ್ರಭೇದ ಎಂಬುದು ನಾಗವರ್ಮನ ಅಭಿಪ್ರಾಯ.

ಕರ್ನಾಟಕ ಭಾಷಾ ಭೂಷಣ ಸಂಸ್ಕೃತ ವ್ಯಾಕರಣ ಪ್ರಭಾವದಿಂದ ರಚಿಸಲ್ಪಟ್ಟ ಮೊದಲ ಕನ್ನಡ ವ್ಯಾಕರಣ ಒಂದು ಶ್ರೇಷ್ಠ ಕೃತಿ. ನಾಗವರ್ಮ ಶ್ರೇಷ್ಠ ವ್ಯಾಕರಣ ಶಾಸ್ತ್ರಜ್ಞ. ಸ್ವತಂತ್ರ ದ್ರಷ್ಟಿಯುಳ್ಳ ನಾಗವರ್ಮನಿಂದ ರಚಿತವಾದ ಸ್ವತಂತ್ರ ವ್ಯಾಕರಣ ಕೃತಿ ಇದಾಗಿದೆ.

ಗ್ರಂಥ ಋಣ :

1. ಕರ್ನಾಟಕ ಭಾಷಾ ಭೂಷಣ –ನರಸಿಂಹಚಾರ್ ಆರ್ (ಸಂ)

2. ಕರ್ನಾಟಕ ಭಾಷಾ ಭೂಷಣ ಮತ್ತು ಆಂಧ್ರ ಭಾಷಾ ಭೂಷಣಮ –ಒಂದು ತೌಲನಿಕ ಅಧ್ಯಯನ – ಶಂಭುಲಿಂಗಪ್ಪ

****

ಕಾವ್ಯಾವಲೋಕನಂ – ಒಂದು ಸಮೀಕ್ಷೆ

– ಡಾ. ಜ್ಯೋತಿ ಶಂಕರ್,
ಮುಕ್ತ ಗಂಗೋತ್ರಿ ಮೈಸೂರು

'ಕಾವ್ಯಾವಲೋಕನಂ' ಪ್ರಾಚೀನ ಕನ್ನಡ ಲಕ್ಷಣ ಗ್ರಂಥಗಳಲ್ಲಿಯೇ ಅತ್ಯಂತ ಪ್ರಮುಖವೂ ಮತ್ತು ಮಹತ್ವಪೂರ್ಣವೂ ಆದ ಕೃತಿಯಾಗಿದೆ. ಇದರ ಕರ್ತೃ ನಾಗವರ್ಮ. ಕಾವ್ಯಾವಲೋಕನ ಅಲಂಕಾರಶಾಸ್ತ್ರವನ್ನು ಕುರಿತಂತಿರುವ ಗ್ರಂಥವಾದರೂ, ನಾಗವರ್ಮ ಒಂದು ಭಾಷೆಯನ್ನು ತಿಳಿಯಲು ಬೇಕಾಗಿರುವಂತಹ ಎಲ್ಲ ವ್ಯಾಕರಣಾಂಶಗಳನ್ನೂ ತನ್ನ ಕೃತಿಯಲ್ಲಿ ವಿವರಿಸಿದ್ದಾನೆ. ಅಷ್ಟೇ ಅಲ್ಲದೆ ತಾನು ನೀಡುವಂತಹ ಎಲ್ಲ ವಿವರಣೆಗಳಿಗೆ, ಕನ್ನಡ ಕಾವ್ಯಗಳು ಮತ್ತು ಶಾಸ್ತ್ರಗ್ರಂಥಗಳಿಂದ ಸೂಕ್ತವಾದಂತಹ ಉದಾರಣೆಗಳನ್ನೂ ಆಯ್ದು ನೀಡಿದ್ದಾನೆ. ಕನ್ನಡ ಭಾಷೆ – ವ್ಯಾಕರಣ – ಅಲಂಕಾರಗಳನ್ನು ಅಭ್ಯಾಸ ಮಾಡುವರೆಲ್ಲರಿಗೂ ಇದು ಅತ್ಯಂತ ಉಪಯುಕ್ತವಾದ ಒಂದು ಕೋಶದ ಮಾದರಿಯ ಗ್ರಂಥವೆನ್ನುವುದನ್ನು ಕವಿಯೇ ಆರಂಭದಲ್ಲಿಯೇ ತಿಳಿಸಿದ್ದಾನೆ.

ಸಕಲ ಬುಧಸಮಿತಿ ನೆಱೆಕೊಂ
ಡುಕೊನೆದು ನಲವಿಂದೆ ಕೀರ್ತಿಸುತ್ತಿರೆ ಮುದದಿಂ
ಸುಕರಮದಾಗಿರೆ ಕರ್ಣಾ
ಟಕದಿಂ ಕಾವ್ಯಾವಲೋಕಮಂ ರಚಿಸುವೆಂ

ಕವಿಗಳ್ಗಿದು ಕೈಗನ್ನಡಿ
ಕವಿತೆಗೆ ಬಾಟಿಕ್ಕೊದಲುದಾತ್ತ ವಾಗ್ದೇವತೆಗು
ದ್ಭವಹೇತು ಕೋಶಗೃಹಮೆನೆ
ಭುವನದೊಳಿದು ಪಜಿೀಸಿದು ನಿಲ್ವುದೊಂದಚ್ಚರಿಯೇ

ಎಲ್ಲ ವಿದ್ವಾಂಸರು ಕೀರ್ತಿಸುವಂತೆ ಕಾವ್ಯಾವಲೋಕನವನ್ನು ರಚಿಸುವೆ, ಕಾವ್ಯರಚನೆಯನ್ನು ಮಾಡುವಂತಹ ಕವಿಗಳಿಗೆ ಇದು ಕೈಗನ್ನಡಿಯಾಗುತ್ತದೆ. ಕಾವ್ಯವನ್ನು ರಚಿಸಲು ಇಲ್ಲವೆ ಅರ್ಥಮಾಡಿಕೊಳ್ಳಲು ಭಾಷೆ, ವ್ಯಾಕರಣ, ಎಲ್ಲವೂ ತಿಳಿದಿರಲೇಬೇಕೆಂದು ತನ್ನ ಈ ಅಲಂಕಾರ ಕೃತಿಯನ್ನು ರಚಿಸಿದವನು ನಾಗವರ್ಮ. ಈತನ ಬಗ್ಗೆ ವಿವರಗಳು, ಇದೇ ಕೃತಿಯಲ್ಲಿರುವುದರಿಂದ ನಾಗವರ್ಮನ ವೈಯಕ್ತಿಕ ವಿವರಗಳು ಸ್ವಲ್ಪಮಟ್ಟಿಗೆ, ನೇರವಾಗಿಯೇ ದೊರೆತಿದೆಯೆನ್ನಬಹುದು.

ಸಾರವಿಚಾರ ಬಂಧುರಮತಿಪ್ರಸರಂ ಪರಿಪಕ್ವಶಾಸ್ತ್ರಸಂ
ಸ್ಕಾರನುಪೇತ ಕೌತುಕರಸಂ ವಿದಿತಾಗಮ ಲೋಕವೃತ್ತನು
ತ್ಸಾರಿತಮತ್ಸರಂ ಸುಜನವತ್ಸಲನೆಲ್ಲಿಯುಮೀತನೆಂದು ಕೆ
ಯ್ವಾರದೆ ಬಣ್ಣಿಕುಂ ವಿಭುದಮಂಡಳಿಪಂಡಿತನಾಗವರ್ಮನಂ ॥

ದ್ವಿಜವಂಶಾರ್ಣವ ಪಾರಿಜಾತಕುಜದೇಶೀಯಂ ಜನೇಂದ್ರಕ್ರಮಾಂ
ಬುಜಚಂಚನ್ನದಚಂಚರೀಕ ಯುವ ಲೀಲೋದ್ದಾಮನೈದಂಯುಗೀ
ನಜನೋದಾಹರಣ ಪ್ರಸಾಧಿತ ಧರಿತ್ರೀಮಂಡಲ ಸತ್ಕವಿ
ವ್ರಜ ಚೂಡಾಮಣಿ ನಾಗವರ್ಮನಿದನುರ್ವೀಸಂಸ್ತುತಂ ಮಾಡಿದಂ ॥

ಸಕಲಕಲಾವಿದಂ ಮದವಿದೂರನುದಾರನಮತ್ಸರಂ ಗುಣಾ
ಧಿಕನಭಿಮಾನ ತುಂಗನವದಾತಯಶಂ ವಿಬುಧೈಕವತ್ಸಲಂ
ಸುಕವಿ ಸರಸ್ವತೀವದನ ಮಂಗಳದರ್ಪಣನೆಂದು ಕೂರ್ತು ಕೀ
ರ್ತಿಕುಮನುರಾಗದಿಂ ವಸುಮತೀವಳಯಂ ಕವಿನಾಗವರ್ಮನಂ ॥

ಈ ನಾಗವರ್ಮ 'ಛಂದೋಂಬುಧಿ, ಕಾದಂಬರಿ'ಗಳನ್ನು ರಚಿಸಿದ ನಾಗವರ್ಮನಿಗಿಂತ ಭಿನ್ನವಾದವನು ಎನ್ನುವುದಕ್ಕೆ ಸಾಕಷ್ಟು ಆಧಾರಗಳು ದೊರೆಯುತ್ತವೆ.

* ಈತ ದಾಮೋದರನೆಂಬುವನ ಮಗ – ಪೇಟ್ದಿಂ ದಾಮೋದರತನಯನೀ ವಚೋಲಂಕೃತಿಯಂ
* 1134 ರಿಂದ 1150ರ ವರೆಗೆ ಆಳ್ವಿಕೆಯನ್ನು ನಡೆಸಿದ ಚಾಲುಕ್ಯರ ಅರಸ ಜಗದೇಕಮಲ್ಲನಲ್ಲಿ ಕಟಕೋಪಾಧ್ಯಾಯನಾಗಿದ್ದನು.
* ಕನ್ನಡದ ಪ್ರಸಿದ್ಧ ಕವಿ ಜನ್ನ ತನ್ನ ಕಾವ್ಯ ಅನಂತನಾಥಪುರಾಣದಲ್ಲಿ "ಜನನಾಥಂ ಜಗದೇಕನಲ್ಲಿ ಕಟಕೋಪಾಧ್ಯಾಯನಾ ನಾಗವರ್ಮನಿದಾನೀಂತನ ಶರ್ವವರ್ಮನೆ ಗಡಂ ಜನ್ನಂಗುಪಾಧ್ಯಾಯಂ" ಎಂದು ಸ್ಮರಿಸಿದ್ದಾನೆ.
* ಕವಿತಾಗುಣೋದಯ, ಕರ್ಣಪೂರ, ಸತ್ಕವಿವ್ರಜಚೂಡಾಮಣಿ ಮುಂತಾದ ಬಿರುದುಗಳು ನಾಗವರ್ಮನಿಗಿದ್ದವು.

ಮೇಲಿನ ಸಂಗತಿಗಳನ್ನು ಗಮನಿಸಿದಾಗ ಕವಿಯ ಕಾಲ ಸು. 1145 ಎಂದು ಊಹಿಸಬಹುದು. ಈತನ ಕೃತಿಗಳನ್ನು ಕುರಿತ ಸಂದೇಹ ಬಾರದ ರೀತಿಯಲ್ಲಿ ಅವನೇ ತಿಳಿಸಿದ್ದಾನೆ.

ಛಂದೋವಿಚತಿಯಲಂಕೃತಿ
ಸಂದಭಿದಾ (ವಸ್ತು) ಕೋಶಮೆಂಬಿವು ವಾಕ್ ಶ್ರೀ
ಸುಂದರಿಗೆ ರತ್ನಮಂಡನ
ದಂದದೊಳಿರ್ದಪುವು ನಾಗವರ್ಮನ ಕೃತಿಗಳ್

ಛಂದೋವಿಚತಿ, ಅಲಂಕೃತಿ, ಅಭಿದಾನಕೋಶಗಳು ಆತ ರಚಿಸಿರುವ ಕೃತಿಗಳು. ಅಲಂಕೃತಿಯೇ – ಕಾವ್ಯಾವಲೋಕನ, ಛಂದೋವಿಂಚತಿ ಲಭ್ಯವಿಲ್ಲ. ಇದಲ್ಲದೆ ಈತ "ಕರ್ಣಾಟಕ ಭಾಷಾಭೂಷಣ" ಮತ್ತು ಜೈನಪುರಾಣವೊಂದನ್ನು ರಚಿಸಿದ್ದಾನೆ. ತನ್ನ ಕೃತಿ ಕಾವ್ಯಾವಲೋಕನಕ್ಕೆ ಆಧಾರವಾಗಿರುವಂತಹ ಪ್ರಾಚೀನ ಗ್ರಂಥ ಕರ್ತೃಗಳನ್ನೂ ಸ್ಮರಿಸಿದ್ದಾನೆ.

ವಾಮನನುಂ ರುದ್ರಟನುಂ
ಭಾಮಹನುಂ ದಂಡಿಯುಂ ಮನಂಗೊಳೆ ಪೇಟ್ದಿಂ
ತೀ ಮಹಿಗೆ ನೆಗಟಿ ಪೇಟ್ದಿಂ
ದಾಮೋದರತನಯನೀ ವಚೋಲಂಕೃತಿಯಂ

ವಾಮನ, ರುದ್ರಟ, ಭಾಮಹ, ದಂಡಿಯಲ್ಲದೆ, ನಾಟ್ಯಶಾಸ್ತ್ರದ ಮತ್ತು ಕಾವ್ಯಮೀಮಾಂಸೆಯ ಪ್ರಭಾವವನ್ನೂ ಕಾವ್ಯಾವಲೋಕನದಲ್ಲಿ ಕಾಣಬಹುದು. ಗ್ರಂಥದಲ್ಲಿನ ಅಧ್ಯಾಯಗಳನ್ನು ವಿಭಜಿಸಿರುವುದನ್ನು ನೋಡಿದಾಗ, ವಾಮನ ಮತ್ತು ರುದ್ರಟರನ್ನು ಅನುಸರಿಸುವುದು ನಿಚ್ಚಳವಾಗಿ ಕಂಡರೆ, ಕವಿಸಮಯಾಧಿಕರಣದ ಭಾಗವು, ರಾಜಶೇಖರನಿಂದ ರಚಿಸಲ್ಪಟ್ಟ ಕಾವ್ಯಮೀಮಾಂಸೆಯಲ್ಲಿನ ಕವಿಸಮಯಾಧಿಕರಣವನ್ನು ಅನುವಾದ ಮಾಡಿರುವಂತೆ ಭಾಸವಾಗುತ್ತದೆ. "ಆದರೂ ನಾಗವರ್ಮನ ಗ್ರಂಥದಲ್ಲಿ ಕವಿಯ ವೈಶಿಷ್ಟ್ಯವೂ ವ್ಯಕ್ತಿತ್ವವೂ ಗೋಚರವಾಗದೇ ಇಲ್ಲ. ಅವನು ಸಂಸ್ಕೃತ ಸಾಹಿತ್ಯದಲ್ಲಿ ಪ್ರಾಚೀನ ಕನ್ನಡ ಕವಿಗಳಾದ ಪಂಪ, ಪೊನ್ನ, ರನ್ನ, ಗುಣವರ್ಮ, ಹಂಸರಾಜ ಮೊದಲಾದವರ ಗ್ರಂಥಗಳಿಂದಲೂ ಶಾಸನಗಳಿಂದಲೂ ಪದ್ಯಗಳನ್ನು ಆಯ್ದು ತೋರಿಸಿ, ಕಾವ್ಯಶಾಸ್ತ್ರಭ್ಯಾಸಿಗಳಿಗೆ ಮಹೋಪಕಾರವನ್ನು ಮಾಡಿರುತ್ತಾನೆ. ಅಲ್ಲದೆ ಕನ್ನಡ ಸಾಹಿತ್ಯಕ್ಕೆ ಮಾತ್ರವೇ ಸೇರಿರುವ ಮೆಲ್ವಾಡು, ಬೆದಂಡೆ, ಬಾಜನಗಬ್ಬ ಮೊದಲಾದ ಕಾವ್ಯಭೇದಗಳನ್ನೂ ಅವುಗಳ ಲಕ್ಷಣವನ್ನೂ ನಿರೂಪಿಸಿರುತ್ತಾರೆ". (ಕಾವ್ಯಾವಲೋಕನಂ xi)

ತನ್ನ ಕೃತಿ ಕಾವ್ಯಾವಲೋಕನವನ್ನು ನಾಗವರ್ಮ ಐದು ಅಧಿಕರಣಗಳಲ್ಲಿ ವಿಭಾಗಿಸಿ, ಅದನ್ನು ಮತ್ತೆ ಉಪವರ್ಗೀಕರಣಗೊಳಿಸಿದ್ದಾನೆ ಅದು ಹೀಗಿದೆ:

1. ಪ್ರಥಮಾಧಿಕರಣಂ – ಶಬ್ದಸ್ಮೃತಿ
   ಸಂಜ್ಞಾಪ್ರಕರಣಂ
   ಸಂಧಿ ಪ್ರಕರಣಂ
   ನಾಮ ಪ್ರಕರಣಂ
   ಸಮಾಸ ಪ್ರಕರಣಂ
   ತದ್ಧಿತ ಪ್ರಕರಣಂ
   ಆಖ್ಯಾತ ಪ್ರಕರಣಂ

2. ಕಾವ್ಯಮಲವ್ಯಾವೃತ್ತ್ಯಧಿಕರಣಂ

ಪದ ಪದಾರ್ಥ ಸಂಧಿದೊಷ ವಿನಿಶ್ಚಯ ಪ್ರಕರಣಂ

ವಾಕ್ಯ ವಾಕ್ಯಾರ್ಥ ದೋಷಾನುಕೀರ್ತನ ಪ್ರಕರಣಂ

3. ಗುಣವಿವೇಕಾಧಿಕರಣಂ

ಮಾರ್ಗ ವಿಭಾಗದರ್ಶನ ಪ್ರಕರಣಂ

ಅರ್ಥಾಲಂಕಾರ ನಿರ್ಣಯ ಪ್ರಕರಣಂ

4. ರೀತಿಕ್ರಮರಸ ನಿರೂಪಣಾಧಿಕರಣಂ

ರೀತಿ ಪ್ರಕರಣಂ

ರಸ ಪ್ರಕರಣಂ

5. ಕವಿ ಸಮಯಾಧಿಕರಣಂ

ಅಸದಾಖ್ಯಾತಿ ಪ್ರಕರಣಂ

ಸದಕೀರ್ತನ ಪ್ರಕರಣಂ

ನಿಯಮಾರ್ಥ ಪ್ರಕರಣಂ

* **ಪ್ರಥಮಾಧಿಕರಣಂ ಶಬ್ದಸ್ಮೃತಿ –**

ಮೊದಲನೆಯ ಅಧ್ಯಾಯವು ಪೂರ್ಣವಾಗಿ ಕನ್ನಡ ಭಾಷೆಯ ವ್ಯಾಕರಣವನ್ನು ವಿವರಿಸುವುದಕ್ಕಾಗಿಯೇ ಮೀಸಲಾಗಿದೆ. ಆರಂಭದಲ್ಲಿಯೇ ಕವಿ, ಅಕ್ಷರ, ಸಂಧಿ, ನಾಮ, ಸಮಾಸ, ತದ್ಧಿತ, ಆಖ್ಯಾತಗಳನ್ನು ವಿವರಿಸಿದ್ದಾನೆ. ಭಾಷೆಯ ಮೂಲಭೂತ ಸ್ವರೂಪವಾದ ಅಕ್ಷರಗಳಿಂದಲೇ, ವ್ಯಾಖ್ಯಾನವು ಆರಂಭವಾಗಿದೆ. 'ಸಂಜ್ಞಾ ಪ್ರಕರಣ'ದ ಮೊದಲ ಸೂತ್ರವಿದು.

ಸ್ವರಮೆಂದುಂ ವ್ಯಂಜನಮಂ
ದೆರಡಕ್ಕುಂ ವರ್ಣಭೇದಮಾದ್ಯಕ್ಷರದಿಂ
ಬರೆ ಪದಿನಾಲ್ಕುಂ ಸ್ವರ ಮಿಂ
ಪರಿಶೇಷಂ ವ್ಯಂಜನಂಗಳರೆ ಮಾತ್ರಿಕೆಗಳ್

ಕನ್ನಡದ ಅಕ್ಷರಗಳು ಎರಡು ರೀತಿಯಲ್ಲಿ ವಿಭಾಗವಾಗಿದೆ, ಅದು ಸ್ವರ ಮತ್ತು ವ್ಯಂಜನವೆಂದು. ಬರಿಯ ಹದಿನಾಲ್ಕು ಅಕ್ಷರಗಳು ಮಾತ್ರ ಸ್ವರಗಳಾಗಿದ್ದು, ಮಿಕ್ಕವೆಲ್ಲವೂ ಅರ್ಧಮಾತ್ರೆಗಳನ್ನೂ ಹೊಂದಿರುವ

ವ್ಯಂಜನಾಕ್ಷರಗಳಾಗಿವೆ. ಇಲ್ಲಿ ವ್ಯಂಜನಕ್ಕೂ ಒಂದು ಉದಾಹರಣೆಯನ್ನು ನೀಡಲಾಗಿದೆ.

ಉದ್ಯೋತಿತ ವಿಶ್ವರ್ ಕೃತ
ವಿದ್ಯರ್ ಸೋಷ್ಮ ಪ್ರತಾಪರಖಿಲಾಂತ ಪದ
ಕ್ಕಾದ್ಯರ್ ವ್ಯಂಜನದಂತನ
ವದ್ಯರ್ ಮೂವತ್ತುಮೂರಾದರ್ ದೇವರ್

ಇಲ್ಲಿ ವ್ಯಂಜನಾಂತ ಅಕ್ಷರಗಳನ್ನು ಹಾಗೆಯೇ ತಂದಿರುವುದು ವಿಶೇಷವೆನಿಸುತ್ತದೆ. ಎರಡನೆಯ ಭಾಗವಾದ 'ಸಂಧಿ ಪ್ರಕರಣ'ದಲ್ಲಿಯೂ ಸೂತ್ರಗಳಿಗೆ ಅನುಗುಣವಾದ ಉದಾಹರಣೆಗಳನ್ನು ಇದೇ ಮಾದರಿಯಲ್ಲಿಯೇ ನೀಡಲಾಗಿದೆ.

ಪದವಿಧಿಯಿಂ ನೆರೆದುತ್ತರ
ಪದದಾದಿಯೊಳೊಂದಿ ನಿಂದ ವರ್ಗಪ್ರಥಮ
ಕ್ಕದಱ ತೃತೀಯಾಕ್ಷರಂ ಮ
ಪ್ಪುದದಕ್ಕುಂ ಬಹುಳ ಮುೞಿಯೆ ಚಟವರ್ಗಂಗಳ್

ಸಂಧಿಯಾಗಬೇಕಾದಾಗ, ಪದದ ಆದಿಯಲ್ಲಿರುವ ವರ್ಗದ ಪ್ರಥಮ ಅಕ್ಷರಗಳಿಗೆ, ಅದೇ ವರ್ಗದ ತೃತೀಯಾಕ್ಷರಗಳು ಆದೇಶವಾಗಿ ಬರುವುದಲ್ಲದೆ ಚ ಮತ್ತು ಟ ವರ್ಗಗಳು ಇದಕ್ಕೆ ಪ್ರತಿಷೇಧವಾಗಿ ನಿಲ್ಲುತ್ತವೆ. ಇದರ ಒಂದು ಉದಾಹರಣೆ 'ಕ ಕಾರ ಗ' ಕಾರವಾಗುವುದಕ್ಕೆ ಅತ್ಯಂತ ಪ್ರಸಿದ್ಧವಾದ ಪದ್ಯವನ್ನೇ ಉದಾಹರಣೆಯಾಗಿ ನೀಡಲಾಗಿದೆ.

ಪಱಗನ್ನಡಂ ಪುದುಂಗೊಳೆ
ಕೊಟಿಸಕ್ಕದಮಂ ತಗುಳ್ಚಿ ಜಾಣ್ಕಿಡೆ ಮುತ್ತಂ
ಮೆಱಸಂ ಕೋದಂತಿರೆ ಪೇ
ಱ್ವಿಟಿಗವಿಗಳ ಕವಿತೆ ಬುಧರನೆರ್ದೆಗೊಳಿಸುಗುಮೇ

ವಿಭಕ್ತಿಗಳನ್ನು ಪಲ್ಲಟಮಾಡಿಹೇಳುವಂತಹ ಮುಖ್ಯ ಅಂಶವನ್ನೂ ಈ ಕೃತಿಯ ನಾಮಪ್ರಕರಣದಲ್ಲಿ ತರಲಾಗಿದೆ. ವಿಭಕ್ತಿಪ್ರತ್ಯಯಗಳು ಹೇಗೆ ಸಾಮಾನ್ಯವಾಗಿ ಪ್ರಯೋಗದಲ್ಲಿವೆ ಎಂದು ವಿವರಿಸಿ ಪಂಚಮಿ ಮತ್ತು

ತೃತೀಯ ವಿಭಕ್ತಿಯ ಏಕಕ್ರಮದ ಪ್ರಯೋಗವನ್ನು ನಾಗವರ್ಮ ವಿವರಿಸುತ್ತಾನೆ.

ಅತ್ತಣಿಮೆಂದನುಸಂಧಿಸಿ
ಯೊತ್ತಂಬರದಿಂ ತಗುಳ್ಬುವರ್ ಪಂಚಮಿಯೊಳ್
ಬಿತ್ತರಿಸುವರ್ ತೃತೀಯಾ
ವೃತ್ತಿಯುಮಂ ಪಂಚಮೀ ಪ್ರಯೋಗದೊಳರೆಬರ್

ಪಂಚಮಿ ವಿಭಕ್ತಿಯಲ್ಲಿ ಹೇಳಬೇಕಾದರೆ ಅತ್ತಣಿಂ ಎಂದು ಸರಿಯಾದ ರೀತಿಯಲ್ಲಿಯೇ ಬಳಸಬೇಕು, ಆದರೆ ಈಗ ತೃತೀಯಾ ವಿಭಕ್ತಿಯನ್ನೇ ಪಂಚಮೀ ವಿಭಕ್ತಿಯ ಜಾಗದಲ್ಲಿ ಬಳಸಿದರೆ, ಪಂಚಮೀ ಪ್ರಯೋಗವೇ ಆಗುವುದಿಲ್ಲವೆಂದು ಎರಡನ್ನೂ ಉದಾಹರಿಸಿದ್ದಾನೆ. ಅದರಲ್ಲಿ 'ಪಂಚಮ್ಯರ್ಥದ ತೃತೀಯೆ'ಯ ಪದ್ಯವನ್ನು ನೋಡಬಹುದು.

ಮತ್ತ ಹಸ್ತಿಗಳ ಮಸ್ತಕದಿಂ ಬಿದಿರಂ ಫಣೀಂ
ದ್ರೋತ್ತಮಾಂಗದಿನಗುರ್ವಿಪ ಪಂದಿಯಕೋಟ್ಟಿಳಿಂ
ಪತ್ತುವಿಟ್ಟಗನಿ ಕುಂಜದೊಳಕ್ಕೆಳಮುತ್ತನಾ
ಯುತ್ತುಮಿರ್ಪ ಶಬರಪ್ರಿಯ ಕಾಮಿನಿಯರ್ಕಳಂ

ಸಮಾಸ ಪ್ರಕರಣವೂ ಕೂಡಾ ನಾಮ ಪ್ರಕರಣದಷ್ಟೇ ದೀರ್ಘವಾಗಿ ಬಂದಿದೆ. ಪ್ರತಿಯೊಂದು ಸಮಾಸ ಮತ್ತು ಅಲ್ಲಿನ ಸೂಕ್ಷ್ಮಸಂಗತಿಗಳನ್ನೂ ಸೇರಿಸಿದಂತೆ ಪ್ರಯೋಗದ ಉದಾಹರಣೆಗಳನ್ನು ನೀಡಿರುವುದರಿಂದ, ಅಧ್ಯಯನ ಮಾಡುವವರಿಗೆ ಗೊಂದಲಗಳುಂಟಾಗುವುದಿಲ್ಲ. ಬಹುವ್ರೀಹಿ ಮತ್ತು ದ್ವಂದ್ವ ಸಮಾಸದ ಸೂತ್ರವನ್ನು ನಾಗವರ್ಮ ಬಹು ಸಂಕ್ಷಿಪ್ತವಾಗಿ, ಆದರೆ ಸ್ಪಷ್ಟವಾಗಿಯೇ ವಿವರಿಸಿದ್ದಾನೆ.

ದ್ವಿಪದಂ ಮೇಣ್ ಬಹುಪದಮ
ನ್ಯ ಪದಾರ್ಥದೊಳೊಂದಿ ನಿಲೆ ಬಹುವ್ರೀಹಿ ಸಮ
ಸ್ತಪದಾರ್ಥಂ ದ್ವಂದ್ವಂ ಪೂ
ರ್ವಪದಪ್ರಾಧಾನ್ಯಮವ್ಯಯೀ ಭಾವಾಖ್ಯಂ

ಎರಡು ಪದಗಳು ಅಥವಾ ಅದಕ್ಕಿಂತ ಹೆಚ್ಚುಪದಗಳು

ಸಮಾಸವಾಗುವಲ್ಲಿ ಬಂದಿದ್ದು, ಆ ಎಲ್ಲ ಪದಗಳಿಗಿಂತಲೂ ವಿಭಿನ್ನವಾದ ಮತ್ತೊಂದು ಪದವನ್ನು ವಿಗ್ರಹವಾಕ್ಯವಾಗಿ ಪಡೆದರೆ ಅದನ್ನು ಬಹುವ್ರೀಹಿ ಸಮಾಸವೆನ್ನಬಹುದು. ಅದೇ ರೀತಿಯಲ್ಲಿ ಎಲ್ಲ ಪದಗಳೂ ಎರಡಿದ್ದು, ಪೂರ್ವಪದದ ಅರ್ಥವೇ ಪ್ರಧಾನವಾಗಿರುವುದನ್ನು ದ್ವಂದ್ವ ಸಮಾಸವೆಂದು ಕರೆಯುತ್ತಾರೆ. ಈ ಸಮಾಸಗಳಿಗೆ ಪ್ರಯೋಗ ಕ್ರಮವಾಗಿ ಹೀಗಿದೆ.

ಕಡುವಿಲ್ಲನೆಚ್ಚ ಸರಲಿಂ
ನಡದು ದಲಂದೊರ್ವನೆರ್ದೆಯನೊಳ್ಗಬ್ಬಮುಮೊ
ಳ್ನುಡಿಯಂ ಗೇಯಮುಮುರ್ಚದ
ಕಡುಗಲ್ಲೆರ್ದೆಯೆರ್ದೆಯನಂಬು ಮೇಣಾರ್ಚುಗುವೇ

ಕಱಿ ಮಱಿಗಳೊಳವು ನೋಟ್ಪೊಡೆ
ಪೆಱಪೆಱರ ಕುಲಕ್ಕೆ ಕೊಂಡಕೊಟ್ಟೆಡೆಗಳೊಳಂ
ಕಱಿಯಿಲ್ಲ ತೈಲನಲ್ಲದೆ
ಪೆಱನಾವೊಂಪಿಕ್ಕಿ ನೋಟ್ಪೊಡಿರ್ತಲೆಗೋಜಂ

ಶಬ್ದಸ್ಮೃತಿಯ ಮುಂದಿನ ಪ್ರಕರಣ ತದ್ಧಿತ, ಇದರ ಅನೇಕ ಪ್ರಯೋಗಗಳನ್ನು ನಾಗವರ್ಮ ತಿಳಿಸಿದ್ದಾನೆ. 'ಇಗ' ಪ್ರತ್ಯಯದಿಂದ ಈ ಪ್ರಕರಣ ಆರಂಭವಾಗಿದೆ. ಸ್ತ್ರೀಲಿಂಗಕ್ಕೆ ಬರುವಂತಹ 'ಇತಿ' ಪದವನ್ನೂ ಕಾವ್ಯಾವಲೋಕನದಲ್ಲಿ ಉಲ್ಲೇಖಿಸಲಾಗಿದೆ.

ಈ ಪೇಟ್ದನಿತುಂ ಶಬ್ದಕ
ಳಾಪಂ ಸ್ತ್ರೀವಿಷಯ ಮಾದೊಡಿತಿ ಪರಮಕ್ಕುಂ
ರೂಪಾನ್ಯತ್ವದೊಳಾದಿಗೆ
ಲೋಪಂ ತತ್ಪ್ರತ್ಯಯಕ್ಕೆ ಸಂಭವಿಸಿರ್ಕುಂ

ಹಿಂದಿನ ಸೂತ್ರಗಳಲ್ಲಿ ಕಾಱ, ವಳ, ಗಾಱ ಪ್ರತ್ಯಯಗಳನ್ನು ಹೇಳಲಾಗಿದ್ದು, ಈ ಶಬ್ದಗಳನ್ನು ವಿವರಿಸುವಾಗ ಸ್ತ್ರೀಲಿಂಗವನ್ನು ಹೇಳಬೇಕಾಗಿ ಬಂದರೆ, ಅಲ್ಲಿ 'ಇತಿ' ಪರವಾಗಿರುತ್ತದೆ. ಹಾಗೆ ಇತಿಯನ್ನು ಸೇರಿಸುವಾಗ ಅಂತಹ ಪ್ರತ್ಯಯ್ಯಗಳಲ್ಲಿ ಕೊನೆಯಲ್ಲಿ ಲೋಪಸಂಭವಿಸಿ ಇತಿ ಎನ್ನುವುದು ಸೇರಿಕೊಳ್ಳುತ್ತದೆ. ಇತಿ ಪ್ರತ್ಯಯದ ಆದಿವರ್ಣಲೋಪಕ್ಕೆ ಪ್ರಯೋಗದ ಪದ್ಯ;

ಮಡಿಯಂ ಮಡಿವಳ್ತಿಯವೋಲ್
ಬಿಡದಮೃತಾನ್ನಮನೊಱಲ್ದು ಬಾಣಸಿಗಿತಿವೊಲ್
ಕುಡುತಿರ್ದಳು ಪೂಮಾಲೆಯ
ನಡೆಯುಡಯಗದೆ ಮಾಲೆಗಾರ್ತಿವೊಲ್ ಮತ್ತೊರ್ವಳ್

ಶಬ್ದಸ್ಮೃತಿಯ ಕೊನೆಯ ಪ್ರಕರಣ 'ಆಖ್ಯಾತ ಪ್ರಕರಣ'. ಕಾಲ, ಲಿಂಗ, ವಚನಗಳೆಲ್ಲವನ್ನೂ ಇಲ್ಲಿ ವಿಸ್ತೃತವಾಗಿಯೇ ಚರ್ಚಿಸಲಾಗಿದೆ. ಕಾಲವನ್ನು 'ಭೂತವತಿ, ವರ್ತಮಾನ, ಭವಿಷ್ಯಂತಿ ಮತ್ತು ವಿದ್ಯಾಥಿ', ಎಂದು ವಿಭಾಗಿಸಲಾಗಿದ್ದು. ಪ್ರಥಮ - ಮಧ್ಯಮ ಮತ್ತು ಉತ್ತಮ ಪುರುಷದಲ್ಲಿ ಆಗುವಂತಹ ಬದಲಾವಣೆ ಹಾಗೂ ವಿಭಕ್ತಿಯ ಪ್ರತ್ಯಯಗಳು ಸೇರಿದಾಗ ಪದವೊಂದರ ಮಾರ್ಪಾಡುಗಳು ಇಲ್ಲಿ ಬಂದಿವೆ. 'ಅಲ್' ಎನ್ನುವ ಪ್ರಯೋಗದ ಸೂತ್ರವೊಂದನ್ನು ಉದಾಹರಣೆಗಾಗಿ ನೋಡಬಹುದು

ಪ್ರತಿಷೇಧದೊಳಮ ಕೆಲಬರ
ಮತದಿಂ ದಲ್ ವರ್ತಿಕುಂ ಪದಾಂತರದಿಂ ಸಂ
ಗತಿಯಾಗಲ್ಲೋಪಂ ಮೇಣ್
ಚತುರ್ಥಿ ಸಮಸಲ್ಗುಮೆಂಬರದಱಿಕೊಳ್ ಕೆಲಬರ್

ಐದು ಪ್ರಕರಣಗಳೂ ಸಾಕಷ್ಟು ವಿಸ್ತಾರವಾಗಿದ್ದು, ಪ್ರಯೋಗಗಳನ್ನೂ ನೀಡಿರುವುದರಿಂದ ಒಂದು ಉತ್ತಮ ವ್ಯಾಕರಣದ ಕೃತಿಯನ್ನೇ ಅಭ್ಯಸಿಸಿದಂತಾಗುತ್ತದೆ.

* ಕಾವ್ಯಮಲವ್ಯಾವೃತ್ತ್ಯಧಿಕರಣಂ

ಎರಡನೆಯ ಅಧ್ಯಾಯ ಕಾವ್ಯಮಲವ್ಯಾವೃತ್ತಿ ಪ್ರಕರಣ. ಇಲ್ಲಿ ಒಂದು ಪದದಿಂದ ಮೊದಲ್ಗೊಂಡು ಕಾವ್ಯದವರೆಗೂ ರಚನೆಯಲ್ಲಾಗುವ ದೋಷಗಳನ್ನು ಕುರಿತು ಚರ್ಚಿಸಲಾಗಿದೆ. ಅದನ್ನು ಇನ್ನೂ ಸ್ಪಷ್ಟಗೊಳಿಸುವುದಕ್ಕಾಗಿಯೇ ಎರಡು ವಿಭಾಗಗಳನ್ನಾಗಿ ಮಾಡಿದ್ದು, ಮೊದಲನೆಯದು ಪದ ಪದಾರ್ಥ ಸಂಧಿದೋಷ ವಿನಿಶ್ಚಯ ಪ್ರಕರಣವಾಗಿದೆ. "ಕೃತಿಸತಿಯ ಮೆಯ್ಯೊಳೆಳ್ಳನಿತು ತಾನದೊಂದಱಿಯೆ ದೋಷವಾಗೆ" ಗಳಿಸಿದ ಕೀರ್ತಿಯೆಲ್ಲವೂ ನಿಂದಿತವಾಗುತ್ತದೆ. ಆದ್ದರಿಂದ ಉಪೇಕ್ಷೆಯನ್ನು

ಮಾಡದೆ ಉದಾತ್ತ ಕೀರ್ತಿಯನ್ನು ಬಯಸುವರು, ಪದ, ವಾಕ್ಯದಲ್ಲಿ ದೋಷವಿಲ್ಲದೆ ಕೃತಿ ರಚನೆ ಮಾಡಬೇಕೆಂದು, ಇಡೀ ಪ್ರಕರಣದ ಉದ್ದೇಶವನ್ನು ತಿಳಿಸಲಾಗಿದೆ.

ಅಸಮರ್ಥಮಪ್ರತೀತಂ
ವಿಸಂಧಿ ವಿಪರೀತಕಲ್ಪನಂ ಕಷ್ಟಂ ನೀ
ರಸಮೆಂದು ದೋಷಮಿವು ಸಮ
ನಿಸುಗುಂ ಪದದೊಳ್ ಪದಾಗಮಜ್ಞರ್ಮತದಿಂ

ಅಸಮರ್ಥವಾದ, ಪ್ರತೀತಿಯಲ್ಲಿಲ್ಲದ, ವಿಸಂಧಿ, ವಿಪರೀತ ಕಲ್ಪನೆ, ಕಷ್ಟ, ನೀರಸವಾಗಿರುವುದು ಇವು ಕಾವ್ಯ ರಚನೆಯಲ್ಲಿ ದೋಷಗಳಾಗುತ್ತದೆ. ಅದರ ಪ್ರಯೋಗ ಹೀಗಿರುತ್ತದೆ

ಉರಗಾಳಿ ನಂದನಾವಳಿ
ತರತರದಿಂದೆಱಗಿ ಜಳಭೃದಂತಿಕದೊಳ್ ಮಾ
ಣ್ದಿರದೆ ಕುಡಿದುಪ್ಪು ನೀರಂ
ಧರೆಗಿನಿದಂ ಕಱೆವುದಿಂತಿದೇಂ ವಿಸ್ಮಯಮೋ

ಮೇಲಿನ ದೋಷಗಳಲ್ಲದೆ ಶ್ರುತಿವಿರಸ, ಪದಕ್ಷೇಪ, ಸ್ಥಿತಿಕಷ್ಟಂ, ಗ್ರಾಮ್ಯಶಬ್ದಸಂದರ್ಭ, ಅಸಭ್ಯಾರ್ಥ, ನೀರಸವಾಗಿರುವುದು ಕೂಡಾ ದೋಷವಾಗುತ್ತದೆ.

ಕಾವ್ಯಮಲವ್ಯಾವೃತ್ತಿಯ ಎರಡನೆಯ ಭಾಗ ವಾಕ್ಯವಾಕ್ಯಾರ್ಥ ದೋಷಾನುಕೀರ್ತನ ಪ್ರಕರಣಂ. ಇಲ್ಲಿ ವಾಕ್ಯಗಳಲ್ಲಿ ಬರಬಹುದಾದ ದೋಷಗಳನ್ನು ಕುರಿತು ವಿವರಿಸಲಾಗಿದೆ. ಒಂದೇ ಅರ್ಥಬರುವ ಅನೇಕ ವಾಕ್ಯಗಳ ಪ್ರಯೋಗದಿಂದ ವ್ಯರ್ಥ ರಚನೆಯಾಗಬಲ್ಲುದಷ್ಟೆ, ಲೋಕಶಾಸ್ತ್ರಕ್ಕೆ ವಿರುದ್ಧವಾಗಿರುವುದು, ಯತಿಭಂಗವಾಗಿರುವುದು ವಾಕ್ಯದೋಷವಾಗುತ್ತದೆ.

ಮಿಗೆ ದಲ್ ವಲಂ ವೆಱಂ ಮ
ತ್ತೆಗಡಂಗಳ ಕೆನ್ನಮೆಂಬನರ್ಥಕಪದಮಂ
ಸೊಗಯಿಸೆ ವಾಕ್ಯಾಲಂಕೃತಿ
ನೆಗೞ್ವೆಡೆಯೊಳ್ ಪೇೞ್ಗೆ ಪೇೞದಿರ್ಕುೞಿದೆಡೆಯೊಳ್

ದಲ್, ವಲ, ಗಡ ಇಂತಹ ಶಬ್ದಗಳಿಗೆ ಯಾವ ವಿಶೇಷವಾದ ಅರ್ಥವಿಲ್ಲದಿದ್ದರೂ, ವಾಕ್ಯಾಲಂಕೃತಿಯಿರುವ ಎಡೆಗಳಲ್ಲಿ ಬಳಸಿದರೆ, ಅದು ಬಹು ಸೊಗಸಾಗಿ ಕಾಣುವುದು, ಆದರೆ ವಾಕ್ಯಾಲಂಕೃತಿ ಬಾರದ ಕಡೆಯಲ್ಲಿ ಬಳಸಬಾರದು ಅದಕ್ಕೆ ಪ್ರಯೋಗ;

ಮಾವಿನ ಕೊನೆ ಮಾವಿನ ನನೆ
ಮಾವಿನ ಪೂ ಮಾವಿನೆಳೆಯ ಮಿಡಿ ಮಾವಿನ ಕಾಯ್
ಮಾವಿನ ಪಣ್ಣೆಂದು ಜನಂ
ಭಾವಿಸೆ ಸರ್ವಾಂಗಸುಂದರಂ ಮಾವೆ ವಲಂ

ಈ ಎರಡೂ ಪ್ರಕರಣಗಳಲ್ಲಿ ದೋಷವಿರುವಂತಹ ಪದ ಮತ್ತು ವಾಕ್ಯಗಳಾವುವು ಎಂದು ತಿಳಿಸಿರುವುದರಿಂದ, ಅವುಗಳನ್ನು ಕವಿತೆಯ ರಚನೆಯಲ್ಲಿ ಅಳವಡಿಸದಿದ್ದಲ್ಲಿ, ಕಾವ್ಯದ ಗುಣಮಟ್ಟವೂ ಹೆಚ್ಚುವುದು ಜೊತೆಗೆ ಕಾವ್ಯ ನೀರಸವಾಗುವುದಿಲ್ಲ.

* **ಗುಣವಿವೇಕಾಧಿಕರಣಂ**

ಈ ಅಧ್ಯಾಯವನ್ನು ಮೂರು ಭಾಗಗಳಾಗಿ ವಿಭಾಗಿಸಲಾಗಿದೆ. ಮೊದಲನೆಯದು ಮಾರ್ಗ ವಿಭಾಗ ದರ್ಶನ ಪ್ರಕರಣಂ. ಈ ಭಾಗದಲ್ಲಿ ಕಾವ್ಯದಲ್ಲಿರಲೇಬೇಕಾದ ಗುಣಗಳನ್ನು "ನಿರತಿಶಯ ಕಾವ್ಯಶೋಭಾ ಕರಂಗಳಾಗಿರ್ಪ ಧರ್ಮವುವು ಗುಣಮುಕ್ಕು" ಎಂದು ತಿಳಿಸಿ ಸೂತ್ರವೊಂದರಲ್ಲಿ ಅವುಗಳನ್ನು ಜೋಡಿಸಲಾಗಿದೆ.

ಸಮಸಂಶ್ಲಿಷ್ಟಾರ್ಥವ್ಯ
ಕ್ತಿಮಧುರಕಾಂತ ಪ್ರಸನ್ನ ಸುಕುಮಾರೋಜ
ಸ್ವಮಭಿಮತೋದಾರಾಹ್ವಯ
ಸಮಾಧಿಗಳ್ ಕೃತಿಗುಣಂಗಳೀರಯ್ದಕ್ಕುಂ

ಸಮ–ಮೃದು–ಸ್ಫುಟ ಮತ್ತು ಮಿಶ್ರಬಂಧ, ಸಂಶ್ಲಿಷ್ಟ, ಅರ್ಥವ್ಯಕ್ತಿ, ನೇಯ, ಮಧುರ, ಕಾಂತ, ಓಜ, ಉದಾರ, ಶ್ಲಾಘ್ಯ ಗುಣ ಇವು ಒಂದು ಕಾವ್ಯದಲ್ಲಿ ಇರಲೇಬೇಕಾದಂತಹ ಧರ್ಮಗಳೆಂದು ಹೇಳಿ ಅವುಗಳ ಪ್ರಯೋಗದ ಉದಾಹರಣೆಯನ್ನು ನೀಡಿದೆ. ಇದೇ ಮಾದರಿಯ ಉಲ್ಲೇಖ

ಕವಿರಾಜಮಾರ್ಗದಲ್ಲೂ ಬಂದಿದೆ-

ಸಮಮಧುರನಿಬಿಡಕಾಂತ ಸು
ಕುಮಾರ ಸುಸಮಾಹಿತ ಪ್ರಸನ್ನೋದರ
ಪ್ರಮಿತಗ್ರಾಮ್ಯೋಜಸ್ವಿ
ಕ್ರಮದಿಂ ದಶಭೇದಮಲ್ಲಿ ದಕ್ಷಿಣಮಾರ್ಗಂ ॥
ಅವರ ವಿಪರ್ಯಯವೃತ್ತಿ
ಪ್ರವಿಭಕ್ತವಿಕಲ್ಪಮಕ್ಕು ಮುತ್ತರಮಾರ್ಗಂ

ಆರ್. ನರಸಿಂಹಾಚಾರ್ಯರು ಈ ಪದ್ಯಗಳನ್ನು ಕುರಿತು ತಮ್ಮ ಅಭಿಪ್ರಾಯವನ್ನು ಹೀಗೆ ಮಂಡಿಸಿದ್ದಾರೆ. "Strange as it may appear, Nagavarma makes no allusion to the earlier work kavirajamarga, nor does he quote a single verse from it". ಇಲ್ಲಿರುವ ಎರಡು ಪದ್ಯಗಳು ಈ ದೃಷ್ಟಿಯಿಂದ ಬಹುಮುಖ್ಯವಾದುದು

ಇವು ನಿಯತಂ ದಕ್ಷಿಣದೇ
ಶವರ್ತಿ ಕವಿರಾಜಮಾರ್ಗದೊಳ್ ನೆಗಱ್ಗುಂ ಮ
ತ್ತವಱ ವಿಪರ್ಯಯವೃತ್ತಿಯೆ
ಬವರಿಸುಗುಮುದೀಚ್ಯಮಾರ್ಗದೊಳ್ ಪ್ರಚುರತೆಯಿಂ

ವೈದರ್ಭಗೌಡಮಾರ್ಗ ವಿ
ಭೇದಂ ಬಗೆವೊಡೆ ಗತಾನುಗತಿಕಮಿದೆಂದೊ
ಲ್ದಾದರಿಪರ್ ಕೆಲಬರ್ ಸಂ
ವಾದದೊಳೆರಡುಂ ಸಮರ್ಥಮಪ್ಪುದಱಿಂದಂ

ನರಸಿಂಹಾಚಾರ್ಯರು ಈ ಕುರಿತು "The context, however, clearly shows that the expression Kavirajamarga does not refer to any work of that name; But that it simply means the path of excellent poets. Nor does the verse allude, as is generally supposed, to the two schools in Kannada the north-

ern and the southern" ಮುಂದಿನ ಸೂತ್ರದಲ್ಲಿರುವ ವೈದರ್ಭೀ ಮತ್ತು ಗೌಡೀ ಹಾಗೂ ದಶಲಕ್ಷಣಗಳು ಕವಿರಾಜಮಾರ್ಗಕಾರ ಹಾಗೂ ಕಾವ್ಯಾವಲೋಕನಕಾರನಿಗೆ ದೊರೆತಿರುವುದು ದಂಡಿಯಿಂದ. ದಂಡಿಯ ಕಾವ್ಯಾದರ್ಶದ ಪದ್ಯಗಳು ಇಂತಿವೆ

ಶ್ಲೇಷಃ ಪ್ರಸಾದಸ್ಸಮತಾ ಮಾಧುರ್ಯಂ ಸುಕುಮಾರತಾ
ಅರ್ಥವ್ಯಕ್ತಿರುದಾರತ್ವಮೋಜಃ ಕಾನ್ತಿ ಸಮಾಧಯಃ ॥
ಇತಿ ವೈಧರ್ಭಮಾರ್ಗಸ್ಯ ಪ್ರಾಣಾ ದಶಗುಣಾಸ್ಮೃತಾಃ
ಏಷಾಂ ವಿಪರ್ಯಯಃ ಪ್ರಾಯೋ ದೃಶ್ಯತೆ ಗೌಡವರ್ತ್ಮನಿ ॥

ಕಾವ್ಯಾವಲೋಕನದಲ್ಲಿ ಕವಿರಾಜಮಾರ್ಗದ ಪ್ರಸ್ತಾಪವಿಲ್ಲದಿದ್ದರೂ ಕೂಡ, ಎರಡೂ ಕಾವ್ಯಗಳಲ್ಲಿ ಸಾಮ್ಯತೆ ಇರುವಂತಹ ಅನೇಕ ಸೂತ್ರಗಳು ಮತ್ತು ಪ್ರಯೋಗಗಳನ್ನು ಕಾಣಬಹುದು. ಒಂದೇ ವಿಷಯವನ್ನು ಕುರಿತು ಪ್ರಬುದ್ಧರಿಬ್ಬರು ವ್ಯಾಖ್ಯಾನಿಸಿದಾಗ ಮಾತ್ರ ಇಂತಹ ಸಾಮ್ಯತೆಗಳನ್ನು ಕಾಣಲು ಸಾಧ್ಯ.

ಅದರಲ್ಲೂ ಎರಡನೆಯದು ಬಹುಮುಖ್ಯವಾದ ಶಬ್ದಾಲಂಕಾರದ ನಿರ್ಣಯ ಪ್ರಕರಣಂ. ಮೊದಲನೆಯ ಸೂತ್ರದಲ್ಲಿಯೇ ನಾಗವರ್ಮ "ಕೃತಿ ಸತಿಗೆ ಶಬ್ದಾರ್ಥ ಜಾತಮಂತೆರಡು ತೆರದಲಂಕೃತಿಯಕ್ಕುಂ" ಎಂದು ಶಬ್ದಾಲಂಕಾರ ಮತ್ತು ಅರ್ಥಾಲಂಕಾರಗಳ ಬಗೆಗೆ ತಿಳಿಸಿ "ಅವಱೊಳ್ ಶಬ್ದಾಲಂಕಾರ ವಿಭಾಗಂ ಯಮಕಮೆಸೆವನುಪ್ರಾಸಂ ಚಿತ್ರವಿಚಿತ್ರಭಿತ್ತಿ ವಕ್ರೋಕ್ತಿ ವಿಶೇಷಮುಮೆನೆ ಚತುರ್ವಿಧಂ ತಾನಕ್ಕುಂ" ಎಂದು ತಿಳಿಸಿದ್ದಾನೆ. ಯಮಕಕ್ಕೆ ಅನೇಕ ಪ್ರಯೋಗಗಳನ್ನು ನೀಡಲಾಗಿದೆ ಜೊತೆಗೆ

ಸದೃಶಾಕ್ಷರವಿನ್ಯಾಸಂ
ಪದದೊಳ್ ಪಾದಂಗಳೊಳ್ ಪೊದಟ್ಟಿಸೆದಿರೆ ಪೇ
ೞ್ವುದನುಪ್ರಾಸಂ ನಿಯಮದಿ
ನದನಾದ್ಯಂತಂ ವಿಭಾಷೆಯ ರಚಿಸುವೆಂ

ಪದ ಅಥವಾ ಪಾದದಲ್ಲಿ ಎರಡು ವ್ಯಂಜನಗಳ ಅಂತರದಲ್ಲಿದ್ದು, ಸ್ವರ ನಿಯಮಿತವಾಗಿರದೆ, ನಿರಂತರವಾಗಿ ಎಲ್ಲಿ ವ್ಯಂಜನವು ಆವೃತ್ತಿ ಹೊಂದುವುದೋ ಅದೇ ಅನುಪ್ರಾಸ. ದಂಡಿಯ ಕಾವ್ಯಾದರ್ಶದ ಶ್ಲೋಕ

ಅನುಪ್ರಾಸವನ್ನು ಕುರಿತು

ವರ್ಣಾವೃತ್ತಿರನು ಪ್ರಾಸಃ । ಪಾದೇಷು ಚ ಪದೇಷು ಚ
ಪೂರ್ವಾನುಭವ ಸಂಸ್ಕಾರ । ಬೋಧಿನೀ ಯದ್ಯ ದೂರತಾ

ಚರ್ಚಲ್ ಶಶಿಶಿಶುವಂ ಕಱ್ಚಿ
ಗರ್ಚಲ್ ಘನಘಟೆಯನುರ್ಚಲಮರದ್ರುಮಮಂ
ಸಾರ್ಚಲಿನನೆಂಬ ಸೊಡರನೊ
ಡರ್ಚಿದುವೆನೆ ನೀಳ್ದುವಿದಱ ಶಿಖರಕರಂಗಳ್

"ಶರ ಶೂಲ ಚಾಪ ಚಕ್ರಾಸಿರೂಪಮಿಭರಥತುರಂಗ ಪದಗತಪಾಠಂ ಮುರಜಂ ಗೋಮೂತ್ರಕೆ ಪುಷ್ಕರಮರ್ಧಭ್ರಮಣ ಸರ್ವತೋಭದ್ರಂಗಳ" ಎಂದು ಹೇಳಿದ ನಾಗವರ್ಮ 'ದ್ವ್ಯಕ್ಷರಿ, ಯೇಕಾಕ್ಷರಂ, ನಿರೋಷ್ಠ'ಗಳನ್ನೂ ಪ್ರಯೋಗಗಳ ಮೂಲಕ ಸೂಚಿಸಿದ್ದಾನೆ. ಎರಡು ಅಕ್ಷರಗಳನ್ನು ಮಾತ್ರ ಬಳಸಿ ಒಂದೇ ಅಕ್ಷರವನ್ನು ಬಳಸಿ ರಚಿಸಿರುವ ಪದ್ಯಗಳು ಅಪೂರ್ವವೆನಿಸುತ್ತವೆ. ನಿರೋಷ್ಠಿ – ತುಟಿಗಳನ್ನು ಸೇರಿಸುವ ಅಕ್ಷರಗಳನ್ನು ಬಳಸದೇ ರಚಿಸುವ ರಚನೆಗಳು. ಇವುಗಳ ಉದಾಹರಣೆಗಳು –

ದ್ವ್ಯಕ್ಷರಿ: ನಿಂದಾನಂದದೊಂದೂನಂ
ನಿಂದಂದೇನಿಂದಿನಂದದಿಂ
ನಂದನಂದನ ನಿನ್ನಿಂದಂ
ನಂದನುಂದನುನಂದನಂ

ಏಕಾಕ್ಷರಿ: ನಿನ್ನಿನೇನಿನ್ನನಾನನ್ನ
ನಿನ್ನನೆನ್ನನನೂನನಂ
ನುನ್ನ ನೈ ನನ್ನನೈನೇನೇ
ನೆನ್ನಿನ್ನಂ ನಿನ್ನೆನಾನುನಂ

ಮೂರನೆಯ ಅಧ್ಯಾಯದ ಮೂರನೆಯ ಪ್ರಕರಣ 'ಅರ್ಥಾಲಂಕಾರ'. "ಪ್ರವರಾರ್ಥಾಲಂಕಾರ ವಿಕಲ್ಪಪ್ರಪಂಚಿತಂ ಕ್ರಮದಿಂ ವಾಸ್ತವಮುಪಮೆಯುತಿಶಯುಂ ಶ್ಲೇಷವೆಂದು ನಾಲ್ಕು ಪ್ರಕಾರದಿಂ

ನೆಜೆದಿರ್ಕುಂ", ಎಂದು ಆರಂಭಿಸಿ ಮೊದಲು ಜಾತಿಯನ್ನು ವಿವರವಾಗಿ ನೀಡಿದ್ದು 'ಜಾತಿಸ್ವಭಾವ, ದ್ರವ್ಯಸ್ವಭಾವ, ಕ್ರಿಯಾ ಸ್ವಭಾವ, ಗುಣ ಸ್ವಭಾವ'ಗಳಿಗೆ ಮತ್ತು 'ಸಹೋಕ್ತಿ – ಭಾವ, ಪರಿವೃತ್ತಿ ಯಥಾಕ್ರಮ, ಪರ್ಯಾಯ ಪೇತು – ಹೇತುವಿನ ಬಗೆಗಳು, ಸಮುಚ್ಚಯ' ಮೊದಲಾದವುಗಳ ಅರ್ಥಕ್ಕೆ ಸೂತ್ರ ಹಾಗೂ ಪ್ರಯೋಗಗಳನ್ನೂ ನೀಡಲಾಗಿದೆ. ಪರ್ಯಾಯ ಮತ್ತು ಆವಳಿಯ ಸೂತ್ರ

ನುಡಿಯದೆ ಮನದರ್ಥಮನದು
ನುಡಿದಂತಿರೆ ನುಡಿದ ನುಡಿಯೆ ಪರ್ಯಾಯಂ ಮ
ತ್ತಡಕಿಲ್ಗೊಳೆ ಪಲವುಮನೊಂ
ದೆಡೆಯೊಳ್ ಸಮಗೊಳಿಸಿ ಪೇಟ್ಟುದಾವಳಿ ಪೆಸರಿಂ

ಮನಸಿನಲ್ಲಿದ್ದುದನ್ನು ಹೇಳದೆ, ಆಡಿದ ಮಾತೇ ಆ ಭಾವಕ್ಕೆ ಪರ್ಯಾಯವಾಗಿರುತ್ತದೆ. ಹಾಗೆಯೇ ಹಲವನ್ನು ಒಂದುಕಡೆಯಲ್ಲಿ ಸೇರಿಸಿ ಹೇಳುವುದು ಆವಳಿಯಾಗುತ್ತದೆ. ಈ ಸೂತ್ರವನ್ನು ಪೂರ್ಣ ಪ್ರಮಾಣದಲ್ಲಿ ಧ್ವನಿಸುವಂತೆ ಪ್ರಯೋಗಗಳಿವೆ:

ಪರ್ಯಾಯಕ್ಕೆ: ಬನದೊಳಗೆ ಪೋಗಿ ಪೊಸ ಪೂ
ವಿನ ಗೊಂಚಲನಕ್ಕ ನಿನಗೆ ತಂದಪ್ಪೆಂ ನೀ
ನಿನಿತೊಂದು ಬೇಗಮಂ ನಿ
ನ್ನಿನಿಯನ ಪಕ್ಕದೊಳಿರೆಂದು ಸಖಿ ತೊಲಗುವುದುಂ
ಆವಳಿಗೆ:   ಕೊಳಗಳ್ ದಳಿತಾಬ್ಜಂಗಳ್
ದಳಿತಾಬ್ಜಂಗಳ್ ಸಮೃದ್ಧಮಧುಗಳ್ ಮಧುಗಳ್
ವಿಳಸದಳಿ ಪ್ರಕರ ಮಧುರ ವಿರುತಿಯೆ ಬನದೊಳ್

ಪ್ರಸಿದ್ಧವಾದ ಉಪಮಾಲಂಕಾರವನ್ನು "ಉಪಮಾನ ಪ್ರತಿವಸ್ತುರೂಪ ಸಮಾಸೋಕ್ತಿ ಕ್ರಮಾಕ್ಷೇಪ ಸಾಮ್ಯ ಪರಾಖ್ಯಾನ ನಿದರ್ಶನೋತ್ತರ ಸಸಂದೇಹ ಭ್ರಮಾಪಹ್ನುತಿ ವ್ಯಪದೇಶ ಸ್ಮರಣ ಪ್ರತೀಪ ಸಮಯೋಗಾಪ್ರಸ್ತುತ ಸ್ತೋತ್ರಮೆಂದು ಪಮಾಭೇದಮಿವಕ್ಕುಮಂತೆ ದೊರೆವೆತ್ತರ್ಥಾಂತರ ನ್ಯಾಸಮುಂ" ಎಂದು ಸೂತ್ರದಲ್ಲಿ ನಿಬದ್ಧಗೊಳಿಸಲಾಗಿದೆ. ಇಲ್ಲಿ ನಾಗವರ್ಮನ ಮೇಲೆ ಪ್ರಭಾವ ಬೀರಿರುವ ರುದ್ರಟನ ಕಾವ್ಯಾಲಂಕಾರದ ಶ್ಲೋಕ;

ಉಪಮೋತ್ಪ್ರೇಕ್ಷಾರೂಪಕಮಪಹ್ನುತಿಃ ಸಂಶಯಃ ಸಮಾಸೋಕ್ತಿಃ ।
ಮತಮುತ್ತರಮನ್ಯೋಕ್ತಿಃ ಪ್ರತೀಪಮರ್ಥಾಂತರನ್ಯಾಸಃ ॥
ಉಭಯನ್ಯಾಸಭ್ರಾಂತಿ ಮದಾಕ್ಷೇಪ ಪ್ರತ್ಯನೀಕ ದೃಷ್ಟಾಂತಾಃ ।
ಪೂರ್ವಸಹೋಕ್ತಿ ಸಮುಚ್ಚಯಸಾಮ್ಯ ಸ್ಮರಣಾನಿ ತದ್ಭೇದಾಃ ॥
ಭಾಮಹನ ಕಾವ್ಯಾಲಂಕಾರ ಸೂತ್ರ
ವಿರುದ್ಧೇನೋಪಮಾನೇನ ದೇಶಕಾಲ ಕ್ರಯಾದಿಭಿಃ
ಉಪಮೇಯಸ್ಯ ಯತ್ಸಾಮ್ಯಂ ಗುಣಲೇಶೇನ ಸೋಪಮಾ ॥
ಕಾವ್ಯಾವಲೋಕನದಲ್ಲಿ
ಉಪಮೇಯಂ ಗುಣಲೇಶದಿ
ನುಪಮಾನಕ್ಕೆಣೆಗೆವರ್ಪೊಡುಪಮೆಯೆನಿಕ್ಕುಂ
ವ್ಯುಪಸರ್ಗವಿಷಯರೂಪ
ಪ್ರಪಂಚಿ ತಮನೇಕಭೇದಮನದು ತಾನಕ್ಕುಂ

ಒಂದು ವಸ್ತುವಿನ ಸ್ವರೂಪವನ್ನು ಸ್ಪಷ್ಟಪಡಿಸಲು ಅದಕ್ಕೆ ಸಮಾನವಾದ ಬೇರೆ ಒಂದು ವಸ್ತುವಿನ ಪ್ರತಿಪಾದನೆಯೂ ಇದ್ದರೆ ಅದು ಹೋಲಿಕೆಯೆನಿಸಿಕೊಳ್ಳುತ್ತದೆ. ಹೋಲಿಸಲ್ಪಡುವುದು ಉಪಮೇಯ; ಹೋಲಿಸಲು ಆರಿಸಿಕೊಂಡಿರುವ ಬೇರೆ ವಸ್ತು ಉಪಮಾನ. ಉಪಮಾನ – ಉಪಮೇಯಗಳಿಗೆ ಸಾಧಾರಣವೂ, ಅದ್ವಿತೀಯವು ಆದ ಒಂದು ಗುಣವು ಯಾವ ಪ್ರಕಾರದಲ್ಲಿ ಉಪಮಾನದಲ್ಲಿ ಸಿದ್ಧವಾಗಿದೆಯೋ ಆ ಪ್ರಕಾರದಲ್ಲೇ ಉಪಮೇಯದಲ್ಲೂ ಸಾಧ್ಯವಾಗುತ್ತದೆ. ಅದೇ ಉಪಮಾ, ಅಲ್ಲಿನ ಉಪಸರ್ಗ, ವಿಷಯ, ರೂಪಗಳ ಮೂಲಕ 'ಧರ್ಮೋಪಮೆ, ಹೇತೂಪಮೆ, ವಸ್ತೂಪಮೆ, ಶ್ಲೇಪೋಪಮೆ, ಅನನ್ಯೋಪಮ, ವಿಪರ್ಯಾಸೋಪಮೆ, ಬಹೂಪಮೆ, ಮಾಲೋಪಮೆ, ಕಲ್ಪಿತೋಪಮೆ, ವಾಕ್ಯೋಪಮೆ, ಪ್ರತ್ಯಯೋಪಮೆ, ಸವಾಸೋಪಮೆ" ಎನ್ನುವ ಭೇದಗಳಾಗುತ್ತವೆ. ಮಾಲೋಪಮೆಯ ಪ್ರಯೋಗ;

ಎಂತು ಬಸಂತಮದರ್ಕೆ ತೆಂಬೆಲರೆಂತದ
ರ್ಕೆಂತು ತಳಿರ್ ತಳಿರ್ಗೆಂತಲರ್ ಕುಸುಮೋತ್ಕರ
ಕ್ಕೆಂತಳಿ ಮತ್ತೆ ಮದಾಳಿಗೆಂತು ನಿನಾದಮಂ
ತಂತೆ ತರಂತರಮೊಪ್ಪಿತೋಱಿದಳಗ್ಗಳಂ

ಉಳಿದ ಅಲಂಕಾರಗಳನ್ನೂ ಕಾವ್ಯಾವಲೋಕನವು ಸೂತ್ರೀಕರಿಸಿ ಹೇಳಿದೆ. ಅಲಂಕಾರಗಳಿಂದ ಕಾವ್ಯ ಸೌಂದರ್ಯಹೆಚ್ಚುವ ಬಗೆಯನ್ನೂ ಮತ್ತು ಎಲ್ಲಿ ಯಾವ ಅಲಂಕಾರಗಳನ್ನು ಬಳಸಬಾರದೆಂಬ ವಿವೇಚನೆಯೂ ಇರುವುದರಿಂದಲೇ, ಕಾವ್ಯಾಭ್ಯಾಸಿಗಳಿಗೆ, ಕಾವ್ಯ ರಚಿಸುವವರಿಗೆ, ಇದು ಸಾಕಷ್ಟು ಉಪಕೃತಿಯನ್ನು ಮಾಡಿರುವುದರಲ್ಲಿ ಯಾವ ಸಂದೇಹವೂ ಇಲ್ಲ, ಲೇಖನವಾಗಿರುವುದರಿಂದ ಎಲ್ಲವನ್ನೂ ಇಲ್ಲಿ ದಾಖಲಿಸಲಾಗಿಲ್ಲವಷ್ಟೆ.

* **ರೀತಿಕ್ರಮರಸ ನಿರೂಪಣಾಧಿಕರಣಂ**

ನಾಲ್ಕನೆಯ ಅಧ್ಯಾಯ 'ರೀತಿಕ್ರಮ – ರಸ ನಿರೂಪಾಧಿಕರಣಂ: ಇದನ್ನು ಪುನಃ ಎರಡು ವಿಭಾಗಗಳನ್ನಾಗಿ ಮಾಡಲಾಗಿದೆ ಮೊದಲನೆಯದು 'ರೀತಿ' ಪ್ರಕರಣ. "ರೀತಿ ವಿನೂತನವಸ್ತುಕೃತಿಗೊಪ್ಪುವ ಮೆಯ್ ರಸಭಾವವೃತ್ತಿ ನಿರ್ಣೀತಿಯೆಂ ಜೀವಮಂತದಜೆನನ್ವಿತನಪ್ಪ ಕವೀಶ್ವರಂ ಬುಧವ್ರಾತಮೊಱಲ್ದುಬಿಚ್ಚಟಿಸಿನಚ್ಚುವಳಂಕೃತಿ ಕೂಡದಿರ್ದೊಡಂ ರೀತಿಯೊಳೊಂದೆ ಪೇೞ್ವುದು ರಸಂ ಬಿಡೆ ಬಂಧುರಕಾವ್ಯ ಬಂಧಮಂ". ಪದರಚನೆಯಲ್ಲಿ ನಿಷ್ಠತೆಯಿರುವುದೇ ರೀತಿ, ಅದೇ ಕಾವ್ಯದ ಆತ್ಮ 'ರೀತಿರಾತ್ಮಾ ಕಾವ್ಯಸ್ಯ'. ರೀತಿಯಲ್ಲಿ ಮೂರುವಿಧ

ಪದರಚನಾತಿಶಯಂ ರೀ
ತಿ ದಲದುವುಂ ನಿಯತವರ್ಣ ಗುಂಫನಗುಣದೊಂ
ದೊದವಿಂ ಮೂದೆಱನಕ್ಕುಂ
ವಿದರ್ಭಪಾಂಚಾಲಗೌಡವಿಷಯನಿಬದ್ಧಂ

ವಾಮನನ ಕಾವ್ಯಾಲಂಕಾರ ಸೂತ್ರದಲ್ಲಿಯೂ ಇದೇ ಮೂರು ವಿಧಗಳನ್ನು ಹೇಳಲಾಗಿದೆ – "ವಿಶಿಷ್ಟಾ ಪದರಚನಾ ರೀತಿಃ, ವಿಶೇಷೋ ಗುಣಾತ್ಮಾ, ಸಾತ್ರಿಧಾ – ವೈದರ್ಭೀ ಗೌಡೀಯಾ ಪಾಂಚಾಲೀ ಚ". ಇದರಲ್ಲಿ ಗೌಡರೀತಿಯನ್ನು ಉದಾಹರಣೆಗಾಗಿ ನೋಡಬಹುದು.

ಅತಿದೀರ್ಘಸಮಾಸಾಂಚಿತ
ಗತಿಶಬ್ದಾಡಂಬರಾನುವಿದ್ಧಂ ಕ್ರೋಧಾ
ದ್ಭುತ ರೌದ್ರವೀರರಸಸಂ
ಗತಮಂತದು ಗೌಡರೀತಿ ಪರುಷ ಪ್ರಾಯಂ

ಅತಿದೀರ್ಘವೂ ಸಮಾಸೋಕ್ತವೂ ಆದ ಪದಗಳ ಬಳಕೆ, ಶಬ್ದಾಡಂಬರ, ಕ್ರೋಧ, ಅದ್ಭುತ, ರೌದ್ರ, ವೀರ ರಸಗಳನ್ನು ಗೌಡರೀತಿಯು ಸಮರ್ಥವಾಗಿ ತರಬಲ್ಲುದು ಅದರ ಪ್ರಯೋಗ

ವಂಗಾಂಗಾಂಧ್ರ ಕಳಿಂಗ ಕೊಂಗವಿಸರತ್ಫಾದಾತಪಾಠೀನಮು
ದ್ರಂಗತ್ತುಂಗತುರಂಗಭಂಗುರತರಂಗಾಕೀರ್ಣಮುಚ್ಛೃಂಖಳೋ
ತ್ತುಂಗೋನ್ಮತ್ತಮತಂಗಜ ಪ್ರಕರಯಾಸ್ಸಂಕುಳಂ ಕೂಡೆ ನೋ
ಟ್ಟಿಂಗಂದದ್ಭುತಮಾಗಿ ತೋಱೆ ಮಸಗಿತ್ತುರ್ವೀಶ ಸೈನ್ಯಾರ್ಣವಂ

ಎರಡನೆಯ ಭಾಗ 'ರಸ ಪ್ರಕರಣ', "ಶೃಂಗಾರಾದಿಗಳಪ್ಪ ರಸಂಗಳ್ ವರ್ತಿಸುಗುಮಂತವೆಂಟೆವಲಂ ಕಾವ್ಯಾಂಗಕ್ಕೆ ಸತ್ಕೃಯಾ ರೂಪಂಗಳ್ ರತ್ಯಾದಿಭಾವಸಂಪನ್ನಂಗಳ್". ಹೃದಯದ ಭಾವಗಳೊಡನೆ ಐಕ್ಯಹೊಂದುವ ಮತ್ತು ಭಾಷೆಯ ಗರ್ಭದಲ್ಲಿ ಸ್ಫುರಿಸುವ ಭಾವದ ಸಂವೇದನೆಯಿಂದ ಉಂಟಾಗಿರುವುದೇ ರಸ. ಇಲ್ಲಿ ಭಾವವೆನ್ನುವ ಮಾತನ್ನು ಸ್ಥಾಯೀಭಾವವೆಂದು ಅನ್ವಯಿಸಿಕೊಳ್ಳಬೇಕು. ರಸದ ಶಾಸ್ತ್ರೀಯ ವಿಮರ್ಶೆಯ ಪ್ರಥಮ ಗ್ರಂಥ 'ನಾಟ್ಯಶಾಸ್ತ್ರ'ದಂತೆಯೇ

"ವಿಭಾನುಭಾವವ್ಯಭಿಚಾರಿಸಂಯೋಗಾದ್ ರಸನಿಷ್ಪತ್ತಿಃ
ರತಿರ್ಹಾಸಶ್ಚ ಶೋಕಶ್ಚ ಕ್ರೋಧೋತ್ಸಾಹೌ ಭಯಂತಥಾ
ಜಗುಪ್ಸಾ ವಿಸ್ಮಯಶ್ಚೈವ ಸ್ಥಾಯಿಭಾವಾಃ ಪ್ರಕೀರ್ತಿತಾಃ ॥
ರತಿ ಪರಿಹಾಸಂ ಶೋಕೋ
ದ್ಧತಮುತ್ಸಾಹಂ ಭಯಂ ಪ್ರಕೋಪಂ ವಿಜುಗು
ಪ್ಸತೆ ವಿಸ್ಮಯಾಶಯತ್ವಂ
ಪ್ರತಿನಿಯತಸ್ಥಾಯಿಭಾವಮಿವು ತಾಮಕ್ಕುಂ

ನಾಗವರ್ಮನೂ 'ರತಿ, ಹಾಸ, ಶೋಕ, ಉತ್ಸಾಹ, ಭಯ, ಪ್ರಕೋಪ, ಜುಗುಪ್ಸೆ, ವಿಸ್ಮಯ'ವೆನ್ನುವ ಸ್ಥಾಯೀಭಾವಗಳನ್ನು ತಿಳಿಸಿ, ಇದರಿಂದಲೇ ಎಂಟು ರಸಗಳಾಗುತ್ತವೆ ಎಂದಿದ್ದಾನೆ. ಇವುಗಳೇ ಮನುಷ್ಯನಲ್ಲಿ ಸುಪ್ತವಾಗಿ ಅಡಗಿರುವಂತಹ ಸ್ಥಾಯಿಯಾದ ಭಾವಗಳು. ಇವುಗಳಲ್ಲದೆ ಆಗಾಗ್ಗೆ ಬಂದು ಹೋಗುವಂತಹ ವ್ಯಭಿಚಾರಿ ಅಥವಾ ಸಂಚಾರೀ ಭಾವಗಳೂ ಇವೆ. ಅವುಗಳು

ಮತಿನಿರ್ವೇದಾವಹಿತ್ಥಶ್ರಮ ಮದ ಜಡತಾ ಗ್ಲಾನಿಚಿಂತೋಗ್ರತೇರ್ಷ್ಯಾ
ಧೃತಿ ನಿದ್ರಾವೇಗಶಂಕಾತ್ರಸನಚಪಲತಾಲಸ್ಯಸುಪ್ತಾವಬೋಧ
ಸ್ಮೃತಿ ಗರ್ವಾಮರ್ಷದೈನ್ಯೋತ್ಸುಕ ರತಿ ಮುದಪಸ್ಮಾರ ಲಜ್ಜಾವಿಷಾದ
ಸ್ಥಿತಿ ಚಿತ್ತಭ್ರಂಶ ಮೋಹಾಮಯಮೃತಿಗಳಿವಿಂತೆಯ್ದೆಸಂಚಾರಿ ಭಾವಂ

ಈ ಸಂಚಾರಿಭಾವಗಳು ಮತ್ತು ಸ್ಥಾಯೀಭಾವಗಳೂ ಸೇರಿಯೇ ರಸಗಳುಂಟಾಗುವುದು. ಇದನ್ನು ನಾಗವರ್ಮ "ಭಾವಂ ವಿಭಾವಮೆಸೆವನುಭಾವಂ ಸಂಚಾರಿಭಾವ ಮೆಂದಿಂತಿವಱಿಂದಾ ವಿಷ್ಕೃತಮಕ್ಕುಂ ರಸಮಾವುದು ಮಂದಱಿಗೆ ಭರತಶಾಸ್ತ್ರಕ್ರಮದಿಂ" ಎಂದು ಈ ರಸಪ್ರಕರಣಕ್ಕೆ ತನಗೆ ಆಧಾರವಾಗಿರುವುದೇ ಭರತನ ನಾಟ್ಯಶಾಸ್ತ್ರ ಎನ್ನುವುದನ್ನು ಸ್ಪಷ್ಟಪಡಿಸಿದ್ದಾನೆ. ವಿಶೇಷವಾಗಿ ಶಾಂತರಸವನ್ನು ವಿವರಿಸುವಾಗ ರುದ್ರಟನ ಕಾವ್ಯಾಲಂಕಾರವನ್ನೂ ನಾಗವರ್ಮ ಬಳಸಿದ್ದಾನೆ.

ಸಮ್ಯಗ್ ಜ್ಞಾನಪ್ರಕೃತಿಃ ಶಾಂತೋ ವಿಗತೇಚ್ಛ ನಾಯಕೋ ಭವತಿ
ಸಮ್ಯಗ್ ಜ್ಞಾನಂ ವಿಷಯೇ ತಮಸೋ ರಾಗಸ್ಯ ಚಾಪಗಮಾತ್

ಕಾವ್ಯಾಲಂಕಾರದ ಸೂತ್ರ ಮತ್ತು ಪ್ರಯೋಗಗಳು ಇಂತಿವೆ –

ಸಮಭಾವಪ್ರಭವಂ ಶಾಂ
ತಮಕ್ಕುಮಂತಾ ಸಮತ್ವಮುಂ ವರ್ತಿಸುಗುಂ
ಸಮನಿಸಿ ಸಮ್ಯಗ್‌ಜ್ಞಾನಂ
ತಮಮಂ ರಾಗಮುಮನಲೆದು ತೊಲಗಿಸೆ ಮನದಿಂ

ಪ್ರಯೋಗ: ಬಗೆಯಂ ತಾರದೆ ತಾಪಸಾಶ್ರಮಪದಕ್ಕಜ್ಞಾನದಿಂ ಮೂರ್ಖರೇ
ಕೆಗಡಂ ಮಾಣ್ಬರೊ ಮುಪ್ಪಟಿಲ್ ಬಡತನಂ ರೋಗಂ ವಿಯೋಗಂಗಳಿ
ನ್ನೆಗಮಿಕ್ಕಿರ್ದೊಡಲಂ ಬಿಸುಟ್ಟುಪೆಱದಂ ಕೈಕೊಂಡು ಸಂಸಾರದೊಳ್
ಮಗುಳ್ದುಂ ಪುಟ್ಟುವರೆಂಬ ಗಾಂಪಿದೆ ವಲಂ ಧೀರಂಗೆ ಲಜ್ಜಾಕರಂ

ರಸಗಳ ಸಂಖ್ಯೆಯಲ್ಲಿಯೇ ಅಲಂಕಾರಿಕರಲ್ಲಿ ಸಾಕಷ್ಟು ಚರ್ಚೆಗಳು ನಡೆಯುತ್ತಲೇ ಬಂದಿದೆ. ಅದರಲ್ಲೂ ಶಾಂತರಸವನ್ನು ಕುರಿತಂತೆ ಅನೇಕ ಚರ್ಚೆಗಳು ನಡೆದಿರುವುದುಂಟು. ಶಾಂತದ ಸ್ಥಾಯೀಭಾವ, ಶಮ, ವಿರಾಗ ಮತ್ತು ಸಮ್ಯಕ್‌ಜ್ಞಾನವೆನ್ನಬಹುದು. ಒಟ್ಟಿನಲ್ಲಿ ರಸಾನುಭವವಾಗುವುದೇ ಸ್ಥಾಯಿಭಾವ ಮತ್ತು ಸಂಚಾರಿ, ಇಲ್ಲವೇ ವ್ಯಭಿಚಾರೀಭಾವಗಳ ಮೂಲಕ

ಎನ್ನುವುದನ್ನು ಎಲ್ಲ ಅಲಂಕಾರಿಕರೂ ಒಪ್ಪಿದ್ದಾರೆ. ಕಾವ್ಯಾಲಂಕಾರವೂ ಇದಕ್ಕೆ ಹೊರತಾಗಿಲ್ಲ.

* **ಕವಿಸಮಯಾಧಿಕರಣ**

ಐದನೆಯ ಅಧ್ಯಾಯ 'ಕವಿಸಮಯಾಧಿಕರಣ'. ಕವಿಸಮಯವೆಂದರೇನು ಎನ್ನುವುದನ್ನು ನಾಗವರ್ಮ ಆರಂಭದ ಸೂತ್ರದಲ್ಲಿಯೇ ಸ್ಪಷ್ಟಪಡಿಸುತ್ತಾನೆ.

ಆವುದಶೇಷಲೋಕವಿಷಯಸ್ಥಿತಿಯಲ್ತಖಿಳಾಗಮಾರ್ಥಮುಂ
ಭಾವಿಪೊಡಲ್ತು ಸತ್ಕವಿಪರಂಪರೆಯಿಂ ಪರಿಗೀತಮಾಗಿ ನಿ
ಷ್ಕೇವಳಮಾದ ರೂಢಿವಶದಿಂ ಸಲೆ ಸಲ್ವುದಿದಲ್ತೆ ಶಿಷ್ಟ ಸಂ
ಭಾವಿತಮಪ್ಪ ಕವಿಸಮಯಂ ಭುವನತ್ರಯ ವಸ್ತುಗೋಚರಂ

ಯಾವುದು ಸತ್ಕವಿಪರಂಪರೆಯಿಂದ, ಪರಿಗೀತವಾಗಿ, ರೂಢಿವಶದಿಂದ ಹೇಳಲ್ಪಟ್ಟಿರುವುದೋ, "ಆವುದಶೇಷಲೋಕವಿಷಯ ಸ್ಥಿತಿಯಲ್ತಖಿಳಾಗಮಾರ್ಥಮುಂ ಭಾವಿಪೊಡಲ್ತು" ಎಂದು ಕಾವ್ಯ ಸಮಯವನ್ನು ವಿವರಿಸಿದ್ದಾನೆ ಇದಕ್ಕೆ ಆತನಿಗಿರುವ ಆಧಾರ ಕಾವ್ಯಮೀಮಾಂಸೆ ಅಲ್ಲಿನ ಸೂತ್ರ

ಅಶಾಸ್ತ್ರೀಯಮಲೌಕಿಕಂ ಚ ಪರಂಪರಾಯಾತಂ, ಯಮರ್ಥ
ಮುಪನಿಬಧ್ನಂತಿ ಕವಯಃ ಸ ಕವಿಸಮಯಃ
ಕವಿಸಮಯಶ್ಚಾಯಂ ಮೂಲಮಪಶ್ಯದ್ಭಿಃ ಪ್ರಯೋಗಮಾತ್ರ
ದರ್ಶಿಭಿಃ ಪ್ರಯುಕ್ತೋ ರೂಢಶ್ಚ

ಯಾವುದು ಅಲೌಕಿಕವಾಗಿರುವುದೋ, ಪ್ರಯೋಗದಿಂದಲೇ ದರ್ಶನವನ್ನು ಕೊಡಬಲ್ಲಂತಹುದೋ ಅದೇ ಕವಿಸಮಯವಾಗಿದೆ. ಅಂತಹ ಕವಿಸಮಯವು, ಬಳಕೆಯಾಗುವ ಗುಣಧರ್ಮಗಳಿಂದ ಹೀಗೆ ವಿಭಾಗವಾಗಿದೆ.

ಆತತ ಸತ್ಕವಿಸಮಯಂ
ಜಾತಿದ್ರವ್ಯ ಕ್ರಿಯಾಗುಣಾಶ್ರಯಮಸದಾ
ಖ್ಯಾತಿ ಸದಕೀರ್ತನಂ ನಿ
ರ್ಣೀತಂ ನಿಯಮಾರ್ಥಮೈಕ್ಯಮೆನೆ ನಾಲ್ಕು ತೆಱಂ

ಕವಿಸಮಯವನ್ನು ಜಾತಿ, ದ್ರವ್ಯಕ್ರಿಯೆ ಮತ್ತು ಗುಣಗಳಿಗಾಧಾರವಾಗಿ ಅಸದಾಖ್ಯಾತಿ, ಸದಕೀರ್ತನಂ, ನಿರ್ಣೀತಂ, ನಿಯಮಾರ್ಥಮೈಕ್ಯವೆಂದು ನಾಲ್ಕುಭಾಗಗಳಾಗಿ ವಿಂಗಡಿಸಲಾಗಿದೆ

ಕಾವ್ಯಮೀಮಾಂಸೆ –

ಸ ಚ ತ್ರಿಧಾ ಸ್ವರ್ಗ್ಯೋ, ಭೌಮಃ ಪಾತಾಲೀಯಶ್ವ । ಸ್ವರ್ಗ್ಯ
ಪಾತಾಲೀಯಯೋಃ ಭೌಮಃ ಪ್ರಧಾನಃ । ಸಹಿಮಹಾವಿಷಯಃ
ತ್ಯೇಪಿ ಪ್ರತ್ಯೇಕಂ ತ್ರಿಧಾ ಅಸತೋಃ ನಿಬಂಧನಾತ್, ಸತೋಪ್ಯನಿ
ಬನ್ಧನಾತ್, ನಿಯಮತಶ್ಚ ।

ಕಾವ್ಯಮೀಮಾಂಸೆಯ ಈ ಸಿದ್ಧಾಂತವನ್ನೇ ನಾಗವರ್ಮನೂ ಅನುಸರಿಸಿದ್ದಾನೆ. ಮೊದಲನೆಯ 'ಅಸದಾಖ್ಯಾತಿ ಪ್ರಕರಣ'ದ ಸೂತ್ರ

ಇರುಳೊಳ್ ಚಕ್ರಾಹ್ವಯಯುಗ
ವಿರಹಾರ್ತಿ ಚಕೋರ ಚಂದ್ರಿಕಾಪಾನಮಿವಿಂ
ತೆರಡು ಕ್ರಿಯಾತ್ಮಕಂಗಳ್
ವಿರಚಿಸೆ ಪೆಡೆಗುಂ ಪ್ರಯೋಗಗತಿ ಲಕ್ಷ್ಯಂಗಳ್
ಪ್ರಯೋಗ –ಸರಸಿಜಷಂಡರ ತೆರೆಗಳ್
ತೆರಳ್ವಿನಂ ಕಮಳಪತ್ರಚಮೆನಿತನಿತುಂ
ಕೊರಗುವಿನಂ ಬಿಸುಸುಯ್ದೀಂ
ಭೀರಯಿಸಿದವೊ ಚಕ್ರವಾಕಮಿಥುನವಿರುಳೊಳ್

ಕಾವ್ಯದ ಸೌಂದರ್ಯ ಹೆಚ್ಚುವುದೇ ಕವಿಯ ಇಂತಹ ಸೃಷ್ಟಿಗಳಿಂದ. ಚಕೋರ ಪಕ್ಷಿಗಳು ಚಂದ್ರಿಕೆಯನ್ನು ಪಾನ ಮಾಡುತ್ತವೆಯೋ ಇಲ್ಲವೋ ಎನ್ನುವಂತಹ ಯೋಚನೆಗಿಂತ, ಕಾವ್ಯದ ರಸವನ್ನು ಹೆಚ್ಚಿಸಬಲ್ಲಂತಹ ಆನಂದಮಯವಾದ ಅನುಭವ ವಿಶೇಷಗಳಿವು ಎಂದೇ ಪರಿಗಣಿಸಬೇಕು.

ಸದಕೀರ್ತನ ಪ್ರಕರಣ : ಇಲ್ಲಿ ಯಾವುದು ನಿಜವಾಗಿಯೇ ಪ್ರಪಂಚದಲ್ಲಿ ಇರುವುದೋ, ಅದನ್ನು ಕಾವ್ಯದಲ್ಲಿ ಇಲ್ಲವೆನ್ನುವ ರೀತಿಯಲ್ಲಿ ಹೇಳದೇ ಇರುವುದು. ಉದಾಹರಣೆಗೆ

ಅಸುಕೆಯ ಕುಜದೊಳ್ ಫಳಮಂ
ವಸಂತದೊಳ್ ಜಾತಿಕುಸಮಮಂ ಚಂದನದೊಳ್
ಕುಸುಮಫಲಮೆಂಬಿವಂ ಬ
ಣಿಸದಿರ್ಪುದು ತಾಮವಲ್ಲಿ ಸಂಭವಿಸುವೊಡಂ
ಪ್ರಯೋಗ –ಕುಸುಮಕಿಸಲಯಮೆ ಲೋಕ
ಕ್ಕೆಸೆವುತಂ ಸಾವತಂಸಮನೆ ಸಾಲದೆ ಸಂ
ದಸುಕೆಗೆ ನಿಸ್ಸಾರಫಲಂ
ಪ್ರಸೂತಿ ಮತ್ತಂತಾದಾದೊಡೇಂ ನಾಗದೊಡೇಂ

ಅಶೋಕ ವೃಕ್ಷದಲ್ಲಿರುವ ಫಲಗಳನ್ನು, ವಸಂತಕಾಲದಲ್ಲಿ ಒಳ್ಳೆಯ ಜಾತಿಯ ಹೂವನ್ನು, ಚಂದನದಲ್ಲಿ ಕುಸುಮಗಳು ಇವುಗಳೆಲ್ಲವೂ ಇದ್ದರೂ ಕೂಡಾ, ಹೇಳದೇ ಇರುವುದೇ ಸದಕೀರ್ತನ.

ನಿಯಮಾರ್ಥ ಪ್ರಕರಣ ಇಡೀ ಭಾಗವು ಕವಿಗಳು ಸಮಯ ಅಥವಾ ಸ್ಥಾನವನ್ನು ಕುರಿತಂತೆ ಮಾಡಿಕೊಂಡಿರುವ ನಿಯಮಗಳನ್ನು ಕುರಿತಾಗಿದೆ. ಪ್ರಕೃತಿಯಲ್ಲಿ ಅಂತಹ ಯಾವ ನಿಯಮವೂ ಇಲ್ಲ. ಉದಾಹರಣೆಗೆ ಶ್ರೀಗಂಧ ಮಲಯಾಚಲದಲ್ಲಿಯೇ ಹುಟ್ಟಬೇಕು, ಕೋಗಿಲೆ ವಸಂತದಲ್ಲೇ ಹಾಡಬೇಕು, ಮೇಘಕ್ಕೆ ಕೃಷ್ಣನದೇ ರೂಪ, ಇಂತಹುದು ನಿಯಮವಾಗಬೇಕಿಲ್ಲ

ಅವಿಶೇಷದಿನುದ್ಗಮದೊಳ್
ಧವಳತೆ ಮಾಣಿಕ್ಯನಿಕರದೊಳ್ ಶೋಣತೆ ಮೇ
ಘವಿತಾನದೊಳ್ ವಿನೀಳತೆ
ವಿವಿಕ್ತವರ್ಣವ್ಯವಸ್ಥೆಯಿಂದೊಂದಿರ್ಕು

ಈ ಸೂತ್ರಕ್ಕೆ ಕಾವ್ಯಮೀಮಾಂಸೆ ಮತ್ತು ಅಮರಚಂದ್ರನ ಕಾವ್ಯ ಕಲ್ಪಲತಾವೃತ್ತಿ ಎರಡೂ ಆಧಾರವಾಗಿದೆ. ಅವುಗಳಲ್ಲಿನ ವಿವರವಿಂತಿದೆ

ಕಾವ್ಯಮೀಮಾಂಸೆ – ಗುಣನಿಯಮವಸ್ತು ತದ್ಯಥಾ – ಸಾಮಾನ್ಯೋಪದಾನೇ

ಮಾಣಿಕ್ಯಾನಾಂ ಶೋಣತಾ, ಪುಷ್ಪಾಣಾಂ ಶುಕ್ಲತಾ, ಮೇಘಾನಾಂ ಕೃಷ್ಣತಾ

ಅಮರಚಂದ್ರ – ಸಾಮಾನ್ಯಗ್ರಹಣೇ ವಾರಿಮುಚಾಂ ಕೃಷ್ಣತ್ವಮೇವಹಿ ತಕ್ತತ್ವಮೇವ ರತ್ನಾನಾಂ ಪುಷ್ಪಾಣಾಂ

ಶೌಕ್ಲ್ಯಮೇವಚ

ಮೇಘಕ್ಕೆ ಕೃಷ್ಣತ್ವವನ್ನು ಆರೋಪಿಸಿರುವ ಪ್ರಯೋಗ

ಈ ಪುರುಷೋತ್ತಮ ನವನೀ
ಳೋಪಳ ಸಚ್ಛಾಯಕಾಯದೊಳ್ ಪೆಣೆದು ಘನ
ವ್ಯಾಪಿತಗಭೀರ ರುಚಿಗನು
ರೂಪಂತಾನಕ್ಕೆ ನಿನ್ನ ತನು ತನುಮಧ್ಯೇ

ಕೊನೆಯದು ಐಕ್ಯಪ್ರಕರಣ. ಇಲ್ಲಿ ಕವಿಸಮಯದ ಜೊತೆಯಲ್ಲಿಯೇ ಅನೇಕ ವಿಧದ ಬಂಧಗಳನ್ನೂ ನಾಗವರ್ಮ ಉಲ್ಲೇಖಿಸಿದ್ದಾನೆ. "ದೊರೆವೆತ್ತ ಪದ್ಯದಿಂದಂ ವಿರಚಿಸಿದುದು ಸರ್ಗಬಂದಮಕ್ಕುಂ ಕಾವ್ಯಬೆರಸಿಬರೆ ಗದ್ಯಪದ್ಯಮವೆರಡುಂ ಕೃತಿ ಚಂಪುವೆಂಬ ಪೆಸರಂ ಪಡೆಗುಂ". ಇದು ಚಂಪೂ ಕಾವ್ಯವನ್ನು ಕುರಿತಂತಹ ಸೂತ್ರ. ಹಾಗೆಯೇ ಕನ್ನಡದ ವಿಶಿಷ್ಟ ಬಗೆಯ ಛಂದೋಬಂಧಗಳನ್ನೂ ವಿವರಿಸುವ ಅನೇಕ ಸೂತ್ರಗಳಿದ್ದು, ಅದರಲ್ಲಿ ಕೆಲವನ್ನು ಉದಾಹರಣೆಗಾಗಿ ಗಮನಿಸಬಹುದು.

ಸಂದಿಸಿರೆ ಕಂದಮುಂ ಪೆಱ
ತೊಂದಜಿಕೆಯ ವೃತ್ತಜಾತಿಯುಂ ಪದಮವು ತ
ಳ್ತೊಂದಿರೆ ಪನ್ನೆರಡುವರಂ
ಸಂದುದು ಮೆಲ್ವಾಡೆನಿಕ್ಕುಮದು ಕನ್ನಡದೊಳ್

ಪಾಡುಗಳಿಂದಂ ತಿಳಿಸಲೆ
ಮಾಡಿದುದಂ ಪಾಡುಗಬ್ಬಮೆಂದು ಬುಧರ್ ಕೊಂ
ಡಾಡುವರದಱಿಂ ಮೆ
ಲ್ವಾಡುಂ ರೂಢಿಯ ಬೆದಂಡೆಗಬ್ಬಮುಮಕ್ಕುಂ

ಪಲತೆಱದ ಪದ್ಯದಿಂದಂ
ಲಲಿತವಚೋರಚನ ನಿಚಯ ಪದ್ಧತಿಕೆಗಳಿಂ
ಸಲೆ ನಿಲೆ ಸಮೆದುದು ಸರಸಾ
ಖಿಲವರ್ಣನ ಮಾದೊಡದುವೆ ಬಾಜನೆಗಬ್ಬಂ

ಕನ್ನಡದಲ್ಲಿನ ಈ ಪದ್ಯಬಂಧ'ದ ಪ್ರಕಾರಗಳು ಕವಿರಾಜಮಾರ್ಗದಲ್ಲಿಯೂ ಉಕ್ತವಾಗಿದೆ. "ಕಂದಪದ್ಯವೂ 'ಅಮಳಿನ' (ದೋಷರಹಿರವಾದ) ವೃತ್ತವೂ ಒಂದೊಂದು ಎಡೆಗೆ ಒಂದೊಂದರಂತೆ ಕೂಡಿ, 'ಜಾತಿಜಾಣು' (ದೇಸಿಗೆ ವಿಶಿಷ್ಟವಾದ ಕೌಶಲ) ಇವುಗಳಲ್ಲಿ ಬೆಡಗಿನಿಂದ ಸೇರಿಕೊಂಡಿದ್ದರೆ, ಅದು ಬೆದಂಡೆಗಬ್ಬವೆನಿಸುವುದು. ಹಲವು ಕಂದಗಳು, ಚೆಲುವಾದ ವೃತ್ತ ಅಕ್ಕರ ಚೌಪದಿ ಗೀತಿಕೆ ತ್ರಿಪದಿ – ಇವು ಸೊಗಸುವಡೆದು ಮೆರೆಯುತ್ತಿದ್ದರೆ ಅದು ಚತ್ತಾಣ. ಬೆದಂಡೆ – ಚತ್ತಾಣಗಳು ಹಿಂದಿನ ದೇಸಿಗಬ್ಬದ ನಾಮಗಳಾಗಿರಬಹುದೆಂದೂ ಎರಡನೆಯ ನಾಗವರ್ಮ ತನ್ನ 'ಕಾವ್ಯಾವಲೋಕನ'ದಲ್ಲಿ ವಿವರಿಸಿರುವ 'ಬಾಜನೆಗಬ್ಬ'ವು 'ಚತ್ತಾಣ'ದ ನಾಮಾಂತರವಾಗಿರಬಹುದೆಂದೂ ಅವನು ಹೇಳುವ 'ಪಾಡುಗಬ್ಬ'ದ ಒಳಪ್ರಭೇದಗಳಿವೆಯೆಂದೂ ಈ ಭಾಜನೆಗಬ್ಬ ಮುಂತಾದ ದೇಸಿಗಬ್ಬದ ಸಂತತಿಯಲ್ಲಿಯೆ ಇಂದಿನ 'ಯಕ್ಷಗಾನ ಪ್ರಬಂಧ' ಇಲ್ಲವೆ ಬಯಲಾಟದ ಪ್ರಬಂಧ'ವು ತಲೆದೋರಿರಬೇಕೆಂದೂ, ಒಟ್ಟಿನ ಮೇಲೆ 'ಬೆದಂಡೆ – ಚತ್ತಾಣ'ಗಳೆಂದರೆ ಹಿಂದಣ ದೇಸಿಯಾದ ದೃಶ್ಯ – ಶ್ರವ್ಯಗಳೆಂಬ ಕಾವ್ಯಭೇದಗಳಾಗಿರಬೇಕೆಂದೂ ಮುಳಿಯ ತಿಮ್ಮಪ್ಪಯ್ಯನವರು ಅಭಿಪ್ರಾಯಪಟ್ಟಿದ್ದಾರೆ. 'ಬೆದಂಡೆ' ಎಂಬುದು "ಕೇಳಲಿಕ್ಕೂ ನೋಡಲಿಕ್ಕೂ ಇರುವ ದೇಸೀಗಾನದ ದೃಶ್ಯಕಲೆ" ಎಂದು ಕೆ.ಪಿ. ವೆಂಕಟಪ್ಪಶೆಟ್ಟಿ ಅವರ ಮತ. 'ನಾಳ್ಪಗರಣ' ದಲ್ಲಿ ರೂಢಿಗೊಂಡ ಅತ್ಯುತ್ತಮವಾದ 'ಮೋಹಿನೀಕಲೆ'ಯಾದ ಯಕ್ಷಗಾನವೇ ಈ 'ಬೆದಂಡೆ'ಯಾಗಿರಬಹುದು. 'ನಾಡಹಗರಣ'ದೇಸೀನಾಟಕವೆ ಇದ್ದಿರಬೇಕು". (ಕವಿರಾಜಮಾರ್ಗ, ಪು 187)

ಕನ್ನಡದಲ್ಲಿದ್ದಿರಬಹುದಾದ ಇಂತಹ ದೇಸೀ ಸಂಗತಿಗಳನ್ನೂ ಚರ್ಚೆ ಮಾಡಿರುವುದು, ಗಮನಿಸಿರುವುದು ಕಾವ್ಯಾವಲೋಕನದ ಹೆಗ್ಗಳಿಕೆ. ಇವುಗಳಿಗೆ ಪ್ರಯೋಗಗಳನ್ನೂ ನೀಡಿದ್ದರೆ, ಅದು ಮತ್ತಷ್ಟು ಖಚಿತವಾಗುತ್ತಿತ್ತು.

ಕಾವ್ಯಾವಲೋಕನ ಬಹು ವಿಶೇಷವಾದಂತಹ ಕೃತಿ. ಕನ್ನಡವನ್ನು ಅಭ್ಯಾಸ ಮಾಡುವವರಿಗೆ ಸಿದ್ಧಪಡಿಸಿಟ್ಟ ಕೈಪಿಡಿಯಾಗಿದೆ. ಆವರೆಗೆ ಇದ್ದಂತಹ ಅನೇಕ ಲಕ್ಷಣಗ್ರಂಥಗಳನ್ನೆಲ್ಲ ಪರಿಶೀಲಿಸಿ, ಅವುಗಳೊಳಗಿನ

ಅಗತ್ಯವಿರುವ, ಮುಖ್ಯವಾದ, ಸಾರವತ್ತಾದ ಭಾಗವನ್ನು ಗ್ರಹಿಸಿ, ಕನ್ನಡ ಭಾಷೆಯಲ್ಲಿ, ಕಂದ ಪದ್ಯದಲ್ಲಿ ಜೋಡಿಸಿ ನೀಡಿದ್ದಾನೆ ಕವಿ. ಒಂದೊಮ್ಮೆ ಸೂತ್ರವನ್ನು ಅರಿಯುವುದರಲ್ಲಿ ತೊಡಕುಂಟಾದರೂ, ಆತ ನೀಡಿರುವ ಪ್ರಯೋಗಗಳ ಉದಾಹರಣೆಗಳು ಅದನ್ನು ಪರಿಹರಿಸಿಬಿಡುತ್ತವೆ. ನಾಗವರ್ಮನ ಅನಂತರ ಕನ್ನಡದಲ್ಲಿ ಬಂದಂತಹ ಅನೇಕ ಲಕ್ಷಣಗ್ರಂಥಗಳಿಗೆ ಕಾವ್ಯಾವಲೋಕನವೇ ಮಾದರಿ ಎನಿಸಿದರೂ, ಕನ್ನಡದಲ್ಲಿ ಲಕ್ಷಣಗಳನ್ನು ಇಷ್ಟೊಂದು ವಿಸ್ತಾರವಾಗಿ ತಿಳಿಸಿರುವ ಗ್ರಂಥಗಳೇ ವಿರಳ. ಆದ್ದರಿಂದ ಕನ್ನಡ ಭಾಷೆಯ ಕಾವ್ಯ, ಲಕ್ಷಣಗಳನ್ನು ಅಭ್ಯಸಿಸುವರಿಗೆ, ಆ ಹಾದಿಯಲ್ಲಿ ಕಾರ್ಯನಿರ್ವಹಿಸುವವರಿಗೆ ಮಾರ್ಗದರ್ಶನ ಮಾಡುವ, ಪ್ರಮಾಣಸಿದ್ಧ ಗ್ರಂಥವಾಗಿದೆ 'ಕಾವ್ಯಾವಲೋಕನಂ'.

ಪರಾಮರ್ಶನ ಗ್ರಂಥಗಳು

1. ಭಾರತೀಯ ಕಾವ್ಯಮೀಮಾಂಸೆ, ತೀ. ನಂ. ಶ್ರೀಕಂಠಯ್ಯ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, 1953.
2. ಅಲಂಕಾರಶಾಸ್ತ್ರ, ಬಿ.ಕೆ.ಶಿವರಾಮಯ್ಯ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, 1987.
3. ಕವಿರಾಜಮಾರ್ಗಂ, ಸಂ. ಎಂ.ವಿ.ಸೀತಾರಾಮಯ್ಯ, ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ, ಬೆಂಗಳೂರು, 1994.
4. ಕಾವ್ಯಾವಲೋಕನಂ, ಸಂ. ಎಚ್. ದೇವೀರಪ್ಪ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, 2004.
5. ಕರ್ನಾಟಕ ಕವಿಚರಿತೆ, 3. ಸಂಪುಟಗಳು, ಆರ್. ನರಸಿಂಹಾಚಾರ್ಯ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, 2015
6. ಅಂಗ್ಶೈಯಲ್ಲಿ ಅಲಂಕಾರ ಶಾಸ್ತ್ರ, ಸಿ.ಪಿ.ಕೆ, ಅಖಿಲಾ ಏಜನ್ಸೀಸ್, ಮೈಸೂರು, 2018.

****

ಅಭಿದಾನ ವಸ್ತುಕೋಶ

ಡಾ. ಜ್ಯೋತಿ ಶಂಕರ್,

ಮುಕ್ತ ಗಂಗೋತ್ರಿ ಮೈಸೂರು

ಕ್ರಿ.ಶ. 1145ರಲ್ಲಿದ್ದ ಎರಡನೆಯ ನಾಗವರ್ಮನ ಕೃತಿ **ಅಭಿದಾನ ವಸ್ತುಕೋಶ**. ಇದೇ ಗ್ರಂಥದ ಆರಂಭದಲ್ಲಿಯೇ ಕವಿಯು **ವಿರಚಿಸಿದಂ ಕವಿ ಕಂಠಾಭರಣನಿದಂ ನಾಗವರ್ಮನೆನೆ ಮೆಚ್ಚದರಾರ್** ಎಂದು ತಿಳಿಸಿದ್ದಾನೆ. ಅಲ್ಲದೆ **ಶ್ರೀನಾಗವರ್ಮ** ವಿರಚಿತಮಪ್ಪಭಿದಾನಕೋಶದೊಳ್ ಎಂದು ಪ್ರತಿಕಾಂಡದ ಕೊನೆಯಲ್ಲೂ ಹೇಳಿದ್ದಾನೆ. ಈತನಿಗೆ ನಾಕಿಗ, ನಾಕಿ, ಪಂಡಿತ ನಾಗವರ್ಮ, ಕವಿ ನಾಗವರ್ಮ ಎನ್ನುವ ಹೆಸರುಗಳಿದ್ದದ್ದು ಆತನ ಕೃತಿಯಿಂದಲೇ ತಿಳಿದು ಬರುತ್ತದೆ.

ದೇವಾದಿದೇವನಭವಂ ।
ಕೇವಳಬೋಧಪ್ರಬುದ್ಧತತ್ವಂ ಮುಕ್ತಿ ॥
ಶ್ರೀವಲ್ಲಭನೆಮಗೀಗ ಸು ।
ಖಾವಾಪ್ತಿಯನೊಸದು ವರ್ಧಮಾನಜಿನೇಂದ್ರಂ ॥

ದ್ವಿಜವಂಶಾರ್ಣವ ಜಿನೇಂದ್ರಕ್ರಮಾಂಬುಜಚಂಚನ್ನವಚಂಚರೀಕ ಎಂದು ಹೇಳಿಕೊಂಡಿರುವುದರಿಂದ ಈತ ದ್ವಿಜವಂಶಕ್ಕೆ ಸೇರಿ ಜೈನ ಮತವನ್ನು ಅವಲಂಭಿಸಿದವನೆಂದು ತಿಳಿದು ಬರುತ್ತದೆ. ದಾಮೋದರ ಈತನ ತಂದೆ, ಕಾವ್ಯಾವಲೋಕನ, ಛಂದೋವಿಚಿತಿ, ಕರ್ಣಾಟಕ ಭಾಷಾಭೂಷಣ ಕೃತಿಗಳು

ನಾಗವರ್ಮನದೇ ಎನ್ನುವುದಕ್ಕೆ ಕಾವ್ಯಾವಲೋಕನದ ಪದ್ಯವೇ ಅಧಿಕೃತವಾಗಿದೆ.

ಛಂದೋವಿಚಿತಿ ಯಲಂಕೃತಿ ।
ಸಂದಭಿದಾ (ವಸ್ತು) ಕೋಶ ಮೆಂಬಿವು ವಾಕ್ಸ್ತ್ರೀ ॥
ಸುಂದರಿಗೆ ರತ್ನ ಮಂಡನ ।
ದಂದದೊಳಿರ್ದುಪುವು ನಾಗವರ್ಮನ ಕೃತಿಗಳ್ ॥

ಇವನಿಗೆ ಕವಿತಾಗುಣೋದಯ, ಅಭಿನವಶರ್ವವರ್ಮ, ಕವಿಕಂಠಾಭರಣ ಮೊದಲಾದ ಬಿರುದುಗಳಿದ್ದುದು ತಿಳಿದು ಬರುತ್ತದೆ. ಕೃತಿಯ ಆರಂಭದಲ್ಲಿಯೇ ನಾಗವರ್ಮ ತನ್ನ ಕೋಶಕ್ಕೆ ಸಹಾಯಕವಾದ ಕೃತಿಗಳು ಯಾವುವು ಎನ್ನುವುದನ್ನು ಉಲ್ಲೇಖಿಸಿದ್ದಾನೆ.

ವರರುಚಿ ಹಲಾಯುಧಂ ಭಾ ।
ಗುರಿ ಶಾಶ್ವತಮಮರಕೋಶವೆಂಬಿವು ಮೊದಲಾ ॥
ಗಿರೆ ಪೂರ್ವಶಾಸ್ತ್ರಮಂ ಸಂ ।
ಹರಿಸಿ ಮನಂಗೊಳೆ ನಿಘಂಟುವಂ ವಿರಚಿಸುವೆಂ ॥

ಹಲಾಯುಧನ ಅಭಿದಾನ ರತ್ನಮಾಲೆ, ಅಮರಸಿಂಹನ ನಾಮಲಿಂಗಾನುಶಾಸನ, ವರರುಚಿಯ ಕೋಶ, ಶಾಶ್ವತ, ಧನಂಜಯ ಕೋಶ, ವಾಗುರಿ ಕೋಶ ಇವು ಸಹಾಯಕ ಗ್ರಂಥಗಳು.

ಪುದಿದ ಮನಸ್ತಮಮಂ ಬಿಡೆ ।
ಬೆದರಿ ಸದರ್ಥಪ್ರಕಾಶಮಂ ಮಾಡುಗುಮ ॥
ಪ್ಪುದರಿಂ ಸಮಸ್ತವಿದ್ಯಾ ।
ಪ್ರದೀಪಮಭಿಧಾನಕೋಶಮಲ್ಲದೆ ಪೆರತೇಂ ॥

“ವಸ್ತುಕೋಶವೆಂದರೆ ಪದಾರ್ಥಗಳನ್ನು ಸಂಗ್ರಹಿಸಿಟ್ಟಿರುವ ಎಡೆ. ಪ್ರಕೃತವಾದ ಅಭಿದಾನ ವಸ್ತುಕೋಶವೆಂಬ ಈ ಶಬ್ದಕ್ಕೆ (ಅಭಿಧಾನಗಳ) ಪದಾರ್ಥಗಳ ಸ್ವರೂಪವನ್ನು ತಿಳಿಸುವ ಶಬ್ದಗಳನ್ನು ಸಂಗ್ರಹಿಸಿರುವ ಗ್ರಂಥವೆಂದು ತಾತ್ಪರ್ಯವು. ಈ ಕೋಶವು ಕಂದ, ವೃತ್ತಗಳಲ್ಲಿ ಬರೆಯಲ್ಪಟ್ಟಿದೆ, ಕಂದಗಳೇ ವಿಶೇಷವಾಗಿರುವುವು. ಕರ್ಣಾಟಕ ಭಾಷೆಯಲ್ಲಿ ಪ್ರಸಿದ್ಧವಾಗಿರುವ ಸಂಸ್ಕೃತ ವೃತ್ತ ಜಾತಿಗಳಲ್ಲಿ ಉತ್ಪಲ ಮಾಲೆ, ಶಾರ್ದೂಲ, ಸ್ರಗ್ಧರೆ, ಮಹಾಸ್ರಗ್ಧರೆ, ಮತ್ತೇಭ, ಚಂಪಕಮಾಲೆ, ಮಾಲಿನಿ, ಮಂದಾಕ್ರಾಂತ,

ವಸಂತ ತಿಲಕ, ಶಾಲಿನಿ, ಶಿಖರಿಣಿ, ಹರಿಣಿ, ಪ್ರಹರ್ಷಿಣಿ, ವಂಶಸ್ಥ, ಉಪೇಂದ್ರವಜ್ರ, ಎಂಬ ಸಮ ವೃತ್ತಗಳೂ, ಉಪಜಾತಿ ವೃತ್ತಗಳೂ, ಅರ್ಧ ಸಮ ವೃತ್ತವೂ, ಕನ್ನಡ ಭಾಷೆಯಲ್ಲಿ ಅಸಾಧಾರಣಗಳಾದ ಅಕ್ಕರ, ತ್ರಿಪದಿಗಳೂ ಅಲ್ಲಲ್ಲಿ ಇರುವವು. ಆದರೆ ದ್ರಾವಿಡ ಭಾಷಾ ಪ್ರಪಂಚದ ಛಂದಸ್ಸಿಗೆ ಪ್ರಾಣಭೂತವಾದ, ಪ್ರಾಸ ನಿಯಮಕ್ಕೆ ವಿರುದ್ಧವಾಗಿರುವ ಉಪಜಾತಿ ವೃತ್ತವನ್ನೂ, ಕನ್ನಡ ಕಾವ್ಯಗಳಲ್ಲಿ ಎಲ್ಲಿಯೂ ದೊರಕದಿರುವ ಅರ್ಧ ಸಮ ವೃತ್ತವನ್ನೂ ಈ ಕವಿಯು ಪ್ರಯೋಗಿಸಿರುವ ವಿಶೇಷ ಸಂಗತಿಯನ್ನು ಗಮನಿಸಬೇಕಾದುದೊಂದು ಮುಖ್ಯಾಂಶವು". (ಅಭಿದಾನ ವಸ್ತುಕೋಶ, ಮುನ್ನುಡಿ ಪು, 5)

ಅವಿಭಿನ್ನಾರ್ಥರ್ಂ ಸಾಮಾ ।
ನ್ಯವಾಚಕಂ ಭಿನ್ನ ವಾಚಿಯಂಬುದುವೆಂದಿಂ ॥
ತಿವು ಮೂಲ ಮಲ್ಲಿ ಕಂಡ ।
ಪ್ರವಿಭಾಗದೊಳೊಂದಿ ತೋರ್ಕ್ಕುಮನುಗತಿಯಿಂದಂ ॥

ಅಭಿದಾನ ವಸ್ತುಕೋಶದ ವಿಭಾಗ ಕ್ರಮ ವಿಸ್ತಾರವಾಗಿದ್ದು ಕೆಳಕಂಡ ಕಾಂಡಗಳನ್ನು ಹೊಂದಿದೆ:

ಕಾಂಡದ ಹೆಸರು	ವರ್ಗದ ಹೆಸರು
ಅವಿಭಿನಾರ್ಥಕಾಂಡಂ	೧. ಸ್ವರ್ಗವರ್ಗಂ ೨. ಕಾಲವರ್ಗಂ ೩. ಸಂಸರ (ಣ) ವರ್ಗ ೪. ಸಲಿಲವರ್ಗಂ ೫. ಭೂವರ್ಗಂ ೬. ಕಾಲಾಯನಾದಿಧಾತುವರ್ಗಂ ೭. ವನವರ್ಗಂ ೮. ವೃಕ್ಷಾದಿವರ್ಗಂ ೯. ಮೃಗಪಕ್ಷಿವರ್ಗಂ ೧೦. ಪುರಗೃಹೋಪಕರಣಾದಿವರ್ಗಂ ೧೧. ಮನುಷ್ಯವರ್ಗಂ ೧೨. ದೇಹಾವಯವಾದಿವರ್ಗಂ ೧೩. ಭೂಷಣಾದಿವರ್ಗಂ ೧೪. ಸಮರಾದಿಸಂಪ್ರಕೀರ್ಣವರ್ಗಂ ೧೫. ಪಶುವರ್ಗಂ ೧೬. ಧಾನ್ಯವರ್ಗಂ- ಕಾಂಡದ ಉಪಸಂಹೃತಿ
ಸಾಮಾನ್ಯಕಾಂಡಂ	೧. ವಿಶೇಷಣವರ್ಗಂ ೨. ವಿಶೇಷ್ಯವರ್ಗರ್ಂ
ನಾನಾರ್ಥಕಾಂಡಂ	೧. ನಾನಾರ್ಥವರ್ಗಂ

ವೇದಂಭಂದಂ ಶ್ರುತಿ ತ।
ದ್ಭೇದಂ ಸಾಮರ್ಗ್ಯಜುಸ್ತ್ರಯಂ ತ್ರಯಿ ಯೆನಿಕುಂ ॥
ವೇದಾಂಗ ಷಟ್ತಯಂ ಶಿ ।
ಕ್ಷಾದಿಗಳುಪನಿಷದವೆಂಬುದದು ವೇದಾನ್ತಂ ॥

ವಸ್ತುಕೋಶಕಾರನು ವೇದದ ವಿಭಾಗ ಕ್ರಮವನ್ನು ಮೇಲಿನ ಪದ್ಯದಲ್ಲಿ ವಿವರಿಸಿದ್ದಾನೆ. ವೇದ, ಛಂಧ, ಶ್ರುತಿ ಎನ್ನುವ ಮೂರು ಭೇದಗಳು ಇರುವ ರೀತಿಯಲ್ಲಿಯೇ, ವೇದಗಳು ಸಾಮ, ಋಗ್ ಮತ್ತು ಯಜು ಎನ್ನುವ ಭೇದಗಳನ್ನು ಹೊಂದಿದ್ದು, ಶಿಕ್ಷಾ, ವೇದಾಂಗ ಮತ್ತು ಉಪನಿಷತ್ತುಗಳು ವೇದಾಂತವನ್ನು ತಿಳಿಸುತ್ತವೆ. ಇವುಗಳನ್ನು ಅರ್ಥೈಸಿಕೊಳ್ಳಬೇಕಾದರೆ, ದೇವತೆಗಳ ಸ್ವರೂಪವನ್ನು ತಿಳಿದಿರಲೇಬೇಕು, ಅದಕ್ಕಾಗಿ ಶಿವನ ವಿವಿಧ ರೂಪಗಳನ್ನು ತಿಳಿಸುವ ಪ್ರಯತ್ನವನ್ನು ಮೂರು ಪದ್ಯ ಭಾಗಗಳಲ್ಲಿ ವಿವರಿಸಲಾಗಿದೆ. ಅದರಲ್ಲಿ ಒಂದು ವೃತ್ತ ಹೀಗಿದೆ.

ಭವನೀಶಂ ಶಂಭು ರುದ್ರಂ ಪಶುಪತಿ ಗಿರಿಶಂ ಶೂಲಿ ಭರ್ಗಂ ಭವಾನೀ ।
ಧವನುಗ್ರಂ ವ್ಯೋಮಕೇಶಂ ಹರಂ ನತನುಹರಂ ಶಂಕರಂ ನೀಲಕಂಠಂ ॥
ಶಿವ ನೀಶಾನಂ ತ್ರಿಣೇತ್ರಂ ತ್ರಿಪುರಜಯಿ [ಗಿರೀಶಂ] ಕ್ರತುಧ್ವಂಸಕಂ ಸ್ಥಾ ।
ಣು ವಿರೂಪಾಕ್ಷಂ ಮೃಡಂ ಧೂರ್ಜಟಿ ಫಣಿಕಟಕಂ ವಾಮದೇವಂ ವೃಷಾಂಕಂ॥

ಇದೊಂದು ಪದ್ಯವೇ ಶಿವನ ವಿವಿಧ ಲೀಲೆಗಳನ್ನು, ಸ್ವರೂಪವನ್ನು ಬಹುಸೊಗಸಾಗಿಯೇ ವಿವರಿಸಿದೆ. ಯಾರು ಭವವನ್ನು ದಾಟಿದವನು ಅವನು ಅಭವ ಎಂದು ಪದ್ಯ ಆರಂಭವಾಗಿ ಪರಶಿವನ ವಿಶೇಷ ಗುಣಗಳನ್ನು ಮತ್ತು ಅದಕ್ಕಿರುವ ಪಾರಿಭಾಷಿಕ ಶಬ್ದಗಳನ್ನು ಮೇಲಿನಂತೆ ದಾಖಲಿಸಿದೆ. ಪಾರ್ವತಿ, ಗಣಪತಿ, ಸ್ಕಂದ, ಚಾಮುಂಡಿಯ ಮತ್ತು ಸಪ್ತಮಾತೃಕೆಯರ ಹೆಸರುಗಳನ್ನು ಹೇಳಿದ ನಂತರ, ವಿಷ್ಣುವಿನ ರೂಪಗಳನ್ನು ವಿವರಿಸಲಾಗಿದೆ.

ವನಜಾಕ್ಷಂ ಪುರುಷೋತ್ತಮಂ ನಗಧರಂ ಶ್ರೀವತ್ಸಲಕ್ಷ್ಮಂ ಜನಾ ।
ರ್ದನ ನಿಂದ್ರಾವರಜಂ ಚತುರ್ಭುಜ ನುಪೇಂದ್ರಂ ವಿಷ್ಣು ನಾರಾಯಣಂ ॥
ದನುಜಾರಾತಿ ಮುಕುಂದ ನಬ್ಧಿಶಯನಂ ಗೋವರ್ಧನಂ ದೇವಕೀ ।
ತನಯಂ ಕೇಶವ ನಚ್ಯುತಂ ಮುರಹರಂ ವೈಕುಂಠ ನಬ್ಜೋದರಂ ॥

ವಿಷ್ಣುವನ್ನು ಕುರಿತು ಎರಡು ವೃತ್ತ ಮತ್ತು ಒಂದು ಕಂದದಲ್ಲಿ ವರ್ಣಿಸುವ

ಕೋಶಕಾರನು, ನಾರಾಯಣನ ಗದೆ – ಕೌಮೋದಕಿ, ಚಕ್ರ – ಸುದರ್ಶನ, ಧನು – ಶಾರ್ಙ್ಗಂ, ಅಲಂಕಾರ – ಕೌಸ್ತುಭ, ವಾಹನ – ಗರುಡ, ಶಂಖ – ಪಾಂಚಜನ್ಯಗಳನ್ನು ವಿವರವಾಗಿಯೇ ತಿಳಿಸಿ, ಕೃಷ್ಣನ ತಂದೆ – ವಸುದೇವ, ತಾಯಿ – ದೇವಕಿ, ಸಾಕಿದ ನಂದ, ಬಲದೇವರ ಕುರಿತು ತಿಳಿಸಿರುವುದು ವಿಶೇಷವಾಗಿದೆ.

ಶ್ರೀರಾಮೆ ಲಕ್ಷ್ಮಿ ಗೋಮಿನಿ ।
ವಾರಿರುಹಾವಸಥೆ ಪದ್ಮೆ ರಮೆ ಕಮಲೆ ಸುಧಾಂ ।
ಭೋರಾಶಿತನಯೆ ಸಿರಿ ದನು ।
ಜಾರಿಪ್ರಿಯೆ ಯೆಂದಿವಿಂದಿರಾ ನಾಮಂಗಳ್ ॥

ವಿಷ್ಣು ಪತ್ನಿ ಲಕ್ಷ್ಮಿಯ ರೂಪದ ಉಲ್ಲೇಖವಿರುವ ಈ ಪದ್ಯವು ಲಕ್ಷ್ಮಿಯ ಸಹಸ್ರನಾಮಗಳಿರುವ ಸಂಸ್ಕೃತದ ನಾಮಾವಳಿಗಳನ್ನು ನೆನಪಿಗೆಬರುವಂತೆ ಮಾಡುತ್ತದೆ. ಪ್ರದ್ಯುಮ್ನ, ರತಿ, ಮನ್ಮಥರನ್ನೂ ಬೇರೆ ಬೇರೆ ಹೆಸರುಗಳಿಂದ ಕರೆದಿರುವುದು, ಕಾವ್ಯ ಇಲ್ಲವೇ ಪುರಾಣಗಳನ್ನು ಅಭ್ಯಾಸಮಾಡುವವರಿಗೆ ಸಾಕಷ್ಟು ಉಪಯುಕ್ತವಾಗುವಂತಿದೆ. ಈ ಎಲ್ಲ ದೇವತೆಗಳು ಸ್ವರ್ಗದಲ್ಲೇ ಇರುವುದರಿಂದ ಸ್ವರ್ಗಕ್ಕೆ ಇರುವ ಬೇರೆ ಹೆಸರುಗಳು ಈ ಕಂದದಲ್ಲಿದೆ.

ತ್ರಿದಿವಂ ಸ್ವ ಸ್ವರ್ಗಂ ಸುರ ।
ಸದನಂ ನಾಕಂ ತ್ರಿವಿಷ್ಟಪಂ ದಿವಮೆಂದಿಂ ॥
ತಿದು ತಾ ನಮರ್ತ್ಯಭವನಂ ।
ತದುದ್ಭವ [ರ್ಕಳ್] ದಿವೌಕಸರ್ ದೇವರ್ಕಳ್ ॥

ಯಾರು ಮನುಷ್ಯರಲ್ಲವೋ ಅವರು ದೇವರು, ಅವರಿರುವ ಜಾಗ ಸ್ವರ್ಗ, ಇನ್ನೊಂದು ಕಂದದಲ್ಲಿ ಕವಿ ದೇವತೆಗಳೆಲ್ಲರೂ ಅದಿತಿಯ ಸಂತಾನವಾಗಿ ದೇವ ಲೋಕದಲ್ಲಿದ್ದರೆ, ದಿತಿಯ ಮಕ್ಕಳು ಅಸುರರು ಪಾತಳದಲ್ಲಿ ವಾಸಿಸುತ್ತಾರೆ. ಅವರೆಲ್ಲರೂ ಶುಕ್ರಾಚಾರ್ಯರ ಶಿಷ್ಯರಾಗಿದ್ದಾರೆ ಎಂದು ಸ್ವರ್ಗವನ್ನು ವರ್ಣಿಸುತ್ತಾನೆ. ಮುಂದಿನ ಅನೇಕ ವೃತ್ತ ಮತ್ತು ಕಂದಗಳಲ್ಲಿ ಇಂದ್ರನ ವಿವಿಧ ನಾಮಗಳು, ಆತನ ಪತ್ನಿ ಶಚಿ, ರಾಜಧಾನಿ – ಅಮರಾವತಿ, ಪರ್ವತ – ಮೇರು, ಪುಷ್ಪ – ಪಾರಿಜಾತ, ಕುದುರೆ – ಉಚ್ಚೈಶ್ರವಸ, ಆನೆ – ಐರಾವತ ಎಂದು ವಿವರಿಸಿ ಅಗ್ನಿ, ಯಮ,

ವರುಣ ಮುಂತಾದವರನ್ನು ವಿಶೇಷವಾಗಿ ತಿಳಿಸುತ್ತಾನೆ. ಅದರಲ್ಲಿ ವಾಯುವಿನ ವಿವರವನ್ನು ನೋಡಬಹುದು.

ಪವಮಾನಂ ಶ್ವಸನಂ ಗಂ ।
ಧವಹಂ ಸತತಗತಿ ಮಾತರಿಶ್ವಂ ಮರುತಂ ॥
ಪವನಂ ಪ್ರಭಂಜನಂ ವಾ ।
ಯು ವಾತ ಮನಿಲಂ ಸಮೀರಣಂ ಪೃಷದಶ್ವಂ ॥

ಭೌತಿಕ ದೇಹದಲ್ಲಿ ಪ್ರಾಣವಾಯು ಸಂಚರಿಸಬೇಕಾದರೆ ವಾಯುವಿನ ಸಹಾಯವಿರಲೇಬೇಕು ಎನ್ನುವುದನ್ನು. ಧನಪತಿ ಕುಬೇರ, ದಿಕ್ಪಾಲಕರು, ಅಪ್ಸರೆಯರು, ಆದಿಚಿಕಿತ್ಸಕರಾದ ಅಶ್ವಿನಿದೇವತೆಗಳು, ಕಿನ್ನರ, ಯಕ್ಷ, ಗಂದರ್ವರು, ಅಮೃತದ ಮಹಿಮೆ, ಮಂದರ ಪರ್ವತ ದೇವನದಿ ಗಂಗೆ, ಮೂರು ಕಾಲಗಳ ವಿವರಣೆ ಬಹುಚೊಕ್ಕವಾಗಿ ಮೂಡಿಬಂದಿದೆ. ಹಗಲು ರಾತ್ರಿಗಳ ವ್ಯತ್ಯಾಸವನ್ನು ತಿಳಿಸುವ ಕವಿ, ರಾತ್ರಿ – ಸೂರ್ಯ – ಚಂದ್ರರ ಬಹುರೂಪಗಳನ್ನು ಹಲವು ಪದ್ಯಗಳಲ್ಲಿ ವರ್ಣಿಸಿದ್ದಾನೆ.

ತಿಮಿರಂ ಸಂತಮಸಂ ಧ್ವಾಂ ।
ತಮಂಧಕಾರಂ ತಮಂ ತಮಿಸ್ರ ಮದಕ್ಕುಂ ॥
ಸಮುದಿತಘನಬಹುಳತಮಂ ।
ತಮಿಸ್ರ ಮಂತಂಧತಮಸಮಕ್ಕುಂ ಪೆಸರಿಂ ॥
ರವಿ ಮಾರ್ತಂಡಂ ಪತಂಗಂ ತಪಿ ತಪನ ನಿನಂ ಭಾನು ಪೂಷಂ ಸಹಸ್ರಾಂ ।
ಶು ವಿವಸ್ವಂತಂ ಖಗಂ ಭಾಸ್ಕರನಹಿಮಕರಂಸೂರ್ಯನಂಭೋಜಮಿತ್ರಂ॥
ದಿವಸೇಂದ್ರಂ ಬ್ರಧ್ನ ನಂಶು ಗ್ರಹಪತಿ ಹರಿದಶ್ವಂ ತಮೋವೈರಿ ಹಂಸಂ ।
ಸವಿತಾರಂ ಸೂರ್ಯ ನರ್ಕಂ ದ್ಯುಮಣಿ ತರಣಿ ಸಪ್ತಾಶ್ವ ನಾದಿತ್ಯನಕ್ಕುಂ ॥
ವಿಧು ಚಂದ್ರಂ ರಜನಿಕರಂ ।
ಸುಧಾಂಶು ಮೃಗಲಕ್ಷ್ಮಿ ನಿಂದು ಹಿಮರಶ್ಮಿ ಕಳಾ ॥
ನಿಧಿ ಸೋಮ ನಮೃತಮಯ ನೋ ।
ಷಧೀಶ್ವರಂ ಕುಮುದಬಂಧು ತಾರಾಧೀಶಂ ॥

ಚಂದ್ರನ ಲಕ್ಷಣಗಳು, ಸೂರ್ಯನ ಕಿರಣದ ತೇಜಸ್ಸು, ರಾಹು ಮತ್ತು ಕೇತುಗಳಿಂದಾಗುವ ಗ್ರಹಣದ ರೀತಿ, ನವಗ್ರಹಗಳ ಚಲನೆ, ಬೃಹಸ್ಪತಿಯ ಬುದ್ಧಿಮತ್ತೆ, ಮಹರ್ಷಿಗಳು ಮತ್ತು ಅವರ ಪತ್ನಿಯರನ್ನು ಕುರಿತು ಉಲ್ಲೇಖಿಸಿರುವ ಕವಿ, ನಕ್ಷತ್ರಗಳ ರೀತಿಯನ್ನು ಚರ್ಚಿಸಿದ್ದಾನೆ.

ರಿಕ್ಷ ಮುಡು ತಾರೆ ತಾರಗೆ ।
ನಕ್ಷತ್ರಂ ಜ್ಯೋತಿ ತಾರಕಂ ಭಂ [ಧಿಷ್ಣ್ಯಂ] ॥
ದಾಕ್ಷಾಯಣಿಗಳವೆಂದುಪ ।
ಲಕ್ಷಿಸುಗಂತವಳಶ್ವಿನೀಪ್ರಭೃತಿಗಳಂ ॥

ಮೊದಲನೆಯ ವರ್ಗ ಇಲ್ಲಿಗೆ ಮುಕ್ತಾಯವಾಗುತ್ತದೆ. ಸ್ವರ್ಗ ಮತ್ತು ಆ ಪ್ರದೇಶದಲ್ಲಿ ಇರಬಹುದಾದ ಎಲ್ಲ ವಿಷಯಗಳನ್ನು ಕೋಶಕಾರ ನಿರ್ವಹಿಸಿರುವ ರೀತಿ ಆಶ್ಚರ್ಯವನ್ನುಂಟುಮಾಡುತ್ತದೆ. ಯಾವ ಸಣ್ಣ ವಿವರವನ್ನೂ ಬಿಡದ ರೀತಿಯಲ್ಲಿ ಗಮನ ಹರಿಸಿರುವುದು ವಿಶೇಷವೇ. ಎರಡನೆಯ ಭಾಗ ಅವಿಭಿನ್ನಾರ್ಥಕಾಂಡ, ಅದರಲ್ಲಿ ಮೊದಲನೆಯ ಪಟಲ ಕಾಲ ವರ್ಗಂ. ಕಾಲದ ಗಣನೆಯ ಮಾಪಕ ಕೆಳಕಂಡಂತಿದೆ.

ಸಮಯಮನೇಹಂ ಕಾಲಂ ।
ನಿಮೇಷಕಾಷ್ಠಾದಿ ತದ್ವಿಶೇಷಮದೆನಿಕುಂ ॥
ಸಮರಾತ್ರಿಂದಿವಮಾಗಿರೆ ।
ಸಮನಿಸುಗುಂ [ವಿಷುವ] ವಿಷುವದಾಖ್ಯೆಗಳೆ [ರಡುಂ] ॥
ಹದಿನೆಂಟು ನಿಮೇಷದಿ ನಂ ।
ತದೊಂದು ತಾಂ ಕಾಷ್ಠೆ ಕಾಷ್ಠೆ ಮೂವತ್ತಾರಿಂ ॥
ದದು ಕಳೆ ಕಳೆಗಳ್ ಮೂವ ।
ತ್ತದು ಕ್ಷಣಂ ಕ್ಷಣಮದಾರು ಘಳಿಗೆ ಯೆನಿಕ್ಕುಂ ॥

ಒಂದು ಘಳಿಗೆಯಾಗಲು ಬೇಕಾಗುವ ಕಾಲದ ಮಾಪನವನ್ನು ನೀಡಿದ ಕವಿ, ಮುಹೂರ್ತವನ್ನು ಹೇಗೆ ಘಳಿಗೆಯಿಂದ ನಿಶ್ಚಯಿಸಬೇಕು, ಆಹೋರಾತ್ರಿಗಳು ಆಗುವ ಪರಿ ಮತ್ತು ದಿವಸವನ್ನು ಹೇಗೆ ನೋಡಬೇಕು ಎಂದು ತಿಳಿಸಿದ್ದಾನೆ.

ದಿವಸಂ ದಿನಂ ದಿವಾಹಂ ।
ದ್ಯು ವಾಸರಂ ಘಸ್ರಮೆನೆ ಪಗಲ್ ಪ್ರತ್ಯೂಷಂ ॥
ದಿವಸಮುಖಂ ಪ್ರಾತಃ ಕಾ ।
ಲ್ಯವುಷಃಸಮಯಂ ಪ್ರಭಾತಮದು ಗೋಸರ್ಗಂ ॥

ಹಗಲಿನ ಮಾದರಿಯಲ್ಲಿ ರಾತ್ರಿಯ ವಿವರಣೆಯೂ ಇದ್ದು ಮೂರು ಯಾಮದ ವಿಭಾಗ, ಪ್ರದೋಷ – ನಿಶೀಥ – ವ್ಯುಷ್ಟ, ಪಕ್ಷ, ತಿಥಿ, ಪರ್ವ, ಕುಹೂ ಸಮಯ ಮತ್ತು ಅಮಾವಾಸ್ಯೆಯನ್ನು ಹೇಳಿ

ಅನುಮತಿ ಯೆನಿಕುಂ ಪೂರ್ಣೆಮೆ ।
ಯಿನಿಸಾನುಂ ಕುಂದಿ ತೋರುತಿರೆ ಚಂದ್ರಂ ನೆ ॥
ಟ್ಟನೆ ನೆರೆದು ಬಿಂಬದಿಂ ಪೂ ।
ರ್ಣನಾಗೆ ರಾಕಾಖ್ಯೆ ಪೌರ್ಣಮಾಸಿ ಯದಕ್ಕುಂ ॥

ಮೂವತ್ತು ದಿವಾರಾತ್ರಂ ।
ತೀವಿದೊಡದು ಮಾಸ ಎರಡುವಾಸಂ ಋತುವಂ ॥
ತಾವವು ಮತ್ತಾರೂಗ ಕ ।
ಳಾವೇದಿಗಳಂತದೊಂದು ವತ್ಸರಮೆಂಬರ್ ॥

ಬಹು ವೈಜ್ಞಾನಿಕವಾಗಿ ನೋಡಿದಾಗ ಹುಣ್ಣಿಮೆ, ಅಮಾವಾಸ್ಯೆಗಳು ಒಂದು ಆವರ್ತದಲ್ಲಿ ಬಂದಾಗ ಮೂವತ್ತು ದಿನ ಮತ್ತು ರಾತ್ರಿಗಳಾಗುತ್ತವೆ. ಇದನ್ನೇ ಮಾಸವೆನ್ನುವುದು, ಎರಡು ಮಾಸಗಳು ಸೇರಿದರೆ ಒಂದು ಋತು, ಅವು ಆರಾದಾಗ ಒಂದು ವರ್ಷವಾಗುತ್ತದೆ.

ಕ್ರಮದೊಳೊಂದಿರೆ ಮಧು ಮಾಧವಂ ಶುಕ್ರಂ ಶುಚಿ ನಭೋಮಾಸಂ ನಭಸಾಖ್ಯೆ ಮ
ತ್ತಮಿಷ ಮೂರ್ಜಂ ಸಹಃಸಹಸ್ಯಂಗಳ್ ತಪಮುಂ ತಪಸ್ಯ ಮೆಂದಿಂತು ॥
ಸಮನಿಕ್ಕುಂ ಚೈತ್ರಾದಿನಾಮಂಗಳ್ ವಸಂತಂ ಗ್ರೀಷ್ಮಂ ಪ್ರಾವೃಟ್ಶರ ।
ತ್ಸಮಯಂ ಹೇಮಂತಂ ಶಿಶಿರ ಮೆಂಬಂತವು ತಾವಕ್ಕುಂ ಋತುಗಳ್ ಮತ್ತಾರುಂ ॥

ಚೈತ್ರ ವೈಶಾಖಕ್ಕೆ ಪರ್ಯಾಯವಾಗಿರುವ ಪ್ರತಿ ಮಾಸದ ಹೆಸರುಗಳನ್ನು ಮತ್ತು ಋತುಗಳ ಹೆಸರನ್ನು ನೀಡಲಾಗಿದೆ ಇದಲ್ಲದೇ ಬ್ರಹ್ಮನ ಒಂದು ದಿವಸ, ಯುಗ, ಮನ್ವಂತರಗಳನ್ನೂ ಇಲ್ಲಿ ದಾಖಲಿಸಲಾಗಿದೆ. ಯುಗಗಳು ಪೂರ್ಣಗೊಂಡಾಗ ಆಗಬಹುದಾದ ಪ್ರಳಯದ ಕಾಲ ಹೀಗಿರಬಹುದು

ಲಯಸಮಯಂ ಸಮಸಂಸು ।
ಪ್ತಿ ಯುಗಾಂತಂ ವಿಳಯ ಮಂತಕಾಲಂ ಕಲ್ಪಂ ॥
ಕ್ಷಯ ಮುಪಸಂಹೃತಿ (ಸರ್ಗಾ ।
ತ್ಯಯಂ) ಮಹಾಪ್ರಳಯ ಮೆಂಬುದದು ಸಂವರ್ತಂ ॥

ಇದರೊಂದಿಗೆ ಕಾಲದ ವಿವರಣೆ ಮುಕ್ತಾಯವಾಗುತ್ತದೆ. ಮುಂದಿನದು **ಸಂಸರಣ ವರ್ಗಂ,** ಇಲ್ಲಿ ಜಗತ್ತಿನ ವಿಷಯಗಳನ್ನು ಕುರಿತು ಅನೇಕ ಸಂಗತಿಗಳನ್ನು ಕವಿ ಚರ್ಚಿಸುತ್ತಾನೆ.

ಭುವನಂ ಲೋಕಂ ವಿಷ್ಟಪ ।
ಮಿವು ಜಗದೊಳಭಿನ್ನವೃತ್ತಿಯಿಂದಂ ನೆಗಟ್ಟುಂ ॥
ಭವ ಸಂಸೃತಿ ಸಂಸರಣಂ ।
ಜವಂಜವಂ ಜನ್ಮ ಮೆಂಬುದದು ಸಂಸಾರಂ ॥

ಲೋಕದ ರೀತಿ ಮತ್ತು ಹುಟ್ಟು ಸಾವುಗಳನ್ನು ಸಂಸಾರವೆಂದು ಕರೆಯುವ ಕ್ರಮವನ್ನು ತಿಳಿಸಿದ ಕವಿ, ಜನನದ ಪ್ರಕ್ರಿಯೆಗಾಗಿ ಒಂದು ಕಂದವನ್ನು ಮೀಸಲಿಟ್ಟಿದ್ದಾನೆ.

ಜನನಂ ಜನ್ಮಂ ಪ್ರಸವಂ ।
ಜನಿ ಜನು ರುತ್ಪತ್ತಿ ಸೂತಿ ಯೇಕಾರ್ಥ ಮಿವಿಂ ॥
ತಿನಿತುಂ ಕ್ಷೇತ್ರಜ್ಞಂ ಚೇ ।
ತನ ನಾತ್ಮಂ ಪ್ರಾಣಿ ಜಂತು ದೇಹಿ ಯೆನಿಕ್ಕುಂ ॥

ಜನನ, ಜನ್ಮ, ಪ್ರಸವ, ಜನಿ, ಜನು, ಉತ್ಪತ್ತಿ, ಸೂತಿ ಇವೆಲ್ಲವೂ ಒಂದೇ ಅರ್ಥವನ್ನು ಕೊಡುವಂತಹ ಪದಗಳು, ಹುಟ್ಟಿದ ಮೇಲೆ ಚೇತನ ಪ್ರದವಾದ ಆತ್ಮವನ್ನು ಪ್ರಾಣಿ, ದೇಹಿ ಎಂದು ಕರೆಯಲಾಗುತ್ತದೆ. ಹಾಗೆಯೇ ಸರ್ಪಗಳ ಆವಾಸಸ್ಥಾನ ಪಾತಳವಾಗಿರುತ್ತದೆ. ಅದು ಉರಗ ಲೋಕ, ಅಧೋಭುವನ ಎಂದು ಖ್ಯಾತವಾಗಿದೆ. ಹಾವುಗಳಿರುವ ಜಾಗವನ್ನು ಕುಹರ, ಬಿಲ, ರಂಧ್ರ, ದರ ಎಂದೆಲ್ಲ ಕರೆಯಲಾಗಿದೆ. ಅಲ್ಲಿರುವ ಹಾವುಗಳನ್ನು ಹೀಗೆ ಕರೆಯಲಾಗಿದೆ;

ಉರಗಂ ಭೋಗಿ ಸರೀಸೃಪಂ ಫಣಿ ಭುಜಂಗಂ ಚಕ್ರಿ ದರ್ವೀಕರಂ।
ಹರಿಯುಂ ಕುಂಡಲಿ ಕಾದ್ರವೇಯ ನಹಿ ನಾಗಂ ವ್ಯಾಳ ನಾಶೀವಿಷಂ॥
ಪುರುಪೃಷ್ಟಂ ಫಣಭೃತ್ಪೃದಾಕು ಭುಜಗಂ ಕುಂಭೀನಸಂ ಪನ್ನಗಂ ।
ಮರುದಾಶಂ ಶನಿ ಗೂಢಪಾದ್ವಿಷಧರಂ ಸರ್ಪಂ ದ್ವಿಜಿಹ್ವಾಹ್ವಯಂ॥

ಇಲ್ಲಿನ ಪ್ರತಿಯೊಂದು ಹೆಸರೂ ಹಾವಿನ ರೀತಿಗೆ ಅನುಗುಣವಾಗಿ ಇರುವಂತಹುದು. ಹಾವಿನ ವಿಷ ಹಲ್ಲಿನ ಮೂಲಕ ಬರುತ್ತದೆ, ಅದು ಎರಡು ನಾಲಿಗೆಯನ್ನು ಹೊಂದಿರುತ್ತದೆ, ಅದರ ಚಲನೆ ತಿಳಿಯುವುದೇ ಇಲ್ಲ, ಹಾವಿನ ವಿಷವನ್ನು ಗರಲ, ನಂಜು, ವಿಷ, ಗರ ಎಂದೆಲ್ಲ ಕರೆಯಲಾಗಿದೆ. ವಿಷದ ಪ್ರಭೇದವನ್ನೂ ವೈಜ್ಞಾನಿಕವಾಗಿ ವಿಶ್ಲೇಷಿಸಲಾಗಿದೆ. ಇಲ್ಲಿಂದ ಮುಂದೆ ಧರ್ಮ – ಅಧರ್ಮವನ್ನು ಕುರಿತು ವಿವೇಚನೆ ಮಾಡಲಾಗಿದೆ.

ದುರಿತಂ ಪಾಪ ಮಧರ್ಮ ।
ಸ್ವರೂಪಮಘ ಮಂಹಮೇನಸಂ ವೃಜಿನಂ ದು ॥
ಶ್ಚರಿತಂ ಕಿಲ್ಬಿಷ ಮಯಶ ।
ಸ್ಕರ ವಶುಭಂ ನಾರಕಂ ಮಳೆಂ ದುಷ್ಕರ್ಮಂ ॥

ಭವಿತವ್ಯತೆ ಭಾಗ್ಯಂ ಪು ।
ಣ್ಯ ವಯಂ ಶ್ರೇಯಂ ವೃಷಂ ಸುಕರ್ಮಂ ಧರ್ಮಂ ॥
ವಿವಿಧವ್ರತೋಪವಾಸಾ ।
ದಿವಿಕಲ್ಪಂ ತತ್ಫಲಂ ಸುಖಂ ಶಂ ಶರ್ಮಂ ॥

ಕೆಟ್ಟ ಕೆಲಸವನ್ನು ಮಾಡುವುದು ಯಾವುದು ಅದೇ ಅಧರ್ಮ, ಅದು ಎಂದೂ ಯಶಸ್ಸನ್ನು ತಂದು ಕೊಡುವುದಿಲ್ಲ, ಅದು ಅಶುಭವಾಗಿಯೇ ಪರಿಣಮಿಸುತ್ತದೆ. ಹಾಗೆಯೇ ಒಳ್ಳೆಯ ಕೆಲಸಗಳು ಸುಖವನ್ನು, ಯಶಸ್ಸನ್ನು ತಂದು ಕೊಡುತ್ತವೆ. ಕವಿ ಮುಂದೆ ಸರೂಪ ವಾಚಿ ಶಬ್ದವನ್ನು ತಿಳಿಸಿದ್ದಾನೆ.

ಪ್ರತಿರೂಪಂ ಪ್ರತಿಬಿಂಬಂ ।
ಪ್ರತಿಮ ಪ್ರತಿಯಾತನಾಪ್ರತಿಚ್ಛಂದಂಗಳ್ ॥
ಪ್ರತಿಮಾನಂ ಪ್ರತಿಕಾಯಂ ।
ಪ್ರತಿನಿಧಿ ಯೆಂದಿವೆ ಸರೂಪವಾಚಿಗಳೆನಿಕುಂ ॥

ಜ್ಞಾನಂ ಮೋಕ್ಷಾಧಿಗಮ ಮ ।
ನೂನಕಳಾ ಶಿಲ್ಪಶಾಸ್ತ್ರಕೌಶಳ ಮದು ವಿ ॥
ಜ್ಞಾನಂ ಸಮಾಧಿ ಸಂಪ್ರಣೆ ।
ಧಾನಂ ತತ್ವಾದಿಚಿಂತನಂ ತಾಂ ಧ್ಯಾನಂ ॥

ಕೊನೆಯ ಭಾಗದಲ್ಲಿ ಮೋಕ್ಷ, ಕೈವಲ್ಯಪದವಿ, ನಿರ್ವಾಣ, ಶಿವಗತಿಗಳನ್ನು ವಿವರಿಸಿ ಅಧ್ಯಾಯವನ್ನು ಮುಕ್ತಾಯಗೊಳಿಸುತ್ತಾನೆ. ಮುಂದಿನ ಅಧ್ಯಾಯ ಸಲಿಲ ವರ್ಗಂ ಈ ಭಾಗದಲ್ಲಿ ನೀರಿಗೆ ಸಂಬಂಧಪಟ್ಟ ಹಲವು ವಿವರಗಳನ್ನು ಕೋಶಕಾರ ನೀಡಿದ್ದಾನೆ.

ಸಲಿಲಂ ಜೀವನಮಂಬು ತೋಯ ಮುದಕಂ ಪಾಥಂ ಕುಶಂ ವಾರಿ ಕೋ।
ಮಳ ಮರ್ಣಂ ಭುವನಂ ದಕಂ ಘನರಸಂ ನೀರಂ ಶರಂ ಪುಷ್ಕರಂ॥
ಜಲ ವಾಪಂ ವಿಷ ಮಂಭಸಂ ಕ ಮಮೃತಂ ಬಾನೀಯ ಮೆಂದಿಂತನಾ
ಕುಳದಿಂದಂ ತಜೆಸಲ್ಗೆ ನೀರ್ಗೆ ಪೆಸರಂ ಪರ್ಯಾಯದಿಂ ವಾಗ್ವಿದರ್ ॥

ನೀರು, ಸಮುದ್ರದ ವಿವಿಧ ಹೆಸರುಗಳು, ಅಲ್ಲಿನ ತೆರೆಗಳು ಮತ್ತು ಅದರೊಳಗೆ ಇರಬಹುದಾದಂತಹ ಮೀನು, ಮೀನಿನ ಬಗೆಗಳು, ಮೊಸಳೆ, ಆಮೆ ಮುಂತಾದವುಗಳನ್ನು ಕೋಶದಲ್ಲಿ ಹೇಳಲಾಗಿದೆ.

ಮೀನಂ ಶಫರಂ ತಿಮಿ ಪಾ ।

ಠೀನಂ ಝುಷ ಮನಿಮಿಷಂ ವಿಶಾರಂ ಮತ್ಸ್ಯಂ ॥

ಮೀನವೆಸರ್ ತದ್ಭೇದಮು ।

ನೂನತಿಮಿತಿಮಿಂಗಿಳಾದಿಪೃಥುರೋಮಂಗಳ್ ॥

ಎಳೆಮೀಂಗಳ್ ಶಕುಲಂಗಳ್ ।

ನಳಮೀನಂ ಚಿಲಿಚಿಮಾಭಿಧಾನಮದಕ್ಕುಂ ॥

ಚಳುಕಿಯನೆ ಶಿಂಶುಮಾರಂ ।

ಕುಳೀರ ಮದು ಕರ್ಕಿ ತರ್ಕಿನಲ್ ಕರ್ಕಟಕಂ ॥

ಸಮುದ್ರದ ಆಳದಲ್ಲಿ ಅನೇಕ ವಸ್ತುಗಳು ಪ್ರಕೃತಿ ಜನ್ಯವಾಗಿ ದೊರೆಯುತ್ತವೆ. ಅಮೂಲ್ಯವಾದ ಮುತ್ತು, ಬೆಲೆಬಾಳುವ ಕಲ್ಲುಗಳಿಂದ ಮೊದಲ್ಗೊಂಡು ಶಂಖದವರೆಗೆ ಅನೇಕ ರೀತಿಯ ಸಮುದ್ರದ ಸ್ವಾಭಾವಿಕ ಉತ್ಪನ್ನಗಳು ಬಹು ಉಪಯುಕ್ತವಾಗಿವೆ. ಅದರಲ್ಲಿ ಶಂಖ ಪೂಜನೀಯ ಸ್ಥಾನವನ್ನು ಪಡೆದುಕೊಂಡಿದೆ.

ಮುಕ್ತಾಸ್ಫೋಟಂ ಶುಕ್ತಿ ಶಂಬೂಕಮಂಭ ।

ಶ್ಯುಕ್ತಪ್ರಖ್ಯಂ ವಿದ್ರುಮಂ ತಾಂ ಪ್ರವಾಳಂ ॥

ಮುಕ್ತಾನಾಮಂ ಮೌಕ್ತಿಕಂ ಕಂಬು ಶಂಖಂ ।

ವ್ಯಕ್ತಂ ಪ್ರೋಕ್ತಂ ಕುಲ್ಲಕಂ ಕುದ್ರಶಂಖಂ ॥

ಕೋಶಕಾರನ ಸೂಕ್ಷ್ಮ ದೃಷ್ಟಿಗೆ ಮುಂದಿನ ಪದ್ಯಗಳು ಉತ್ತಮ ಉದಾಹರಣೆಯಾಗಿವೆ. ಜಲದಿಂದ ಕೂಡಿದ ಒಂದು ಪ್ರದೇಶದಲ್ಲಿ ಆಗಬಹುದಾದ ಎಲ್ಲ ಬಗೆಯ ಪ್ರಕೃತಿಕ ಪ್ರಕಾರಗಳನ್ನು ಗಮನಿಸಿ ಅದನ್ನು ಅನೇಕ ಪದ್ಯಗಳಲ್ಲಿ ವಿವರಿಸಲಾಗಿದೆ. ಜಲಾಶಯ, ಪ್ರವಾಹ, ತೊರೆ, ಸರೋವರ, ತಟಾಕ, ಸೇತುವೆ, ಕೂಪ ಎಲ್ಲವು ಇಲ್ಲಿ ಜಾಗ ಪಡೆದಿವೆ.

ಹ್ರದಿನಿ ತರಂಗಿಣಿ ನಿಮ್ನಗೆ ।
ನದಿ ಸರಿದಾಪಗೆ ಸಮುದ್ರಸತಿ ಧುನಿ ತೊಱೆ ಪೊ ॥
ರ್ದಿದ ಕಾಲ್ ತಾಂ ಕುಲ್ಯಾಹ್ವಂ ।
ಹ್ರದ ಮೆಂಬುದಗಾಧತರಜಲಾಶಯಮಕ್ಕುಂ ॥

ಪೂರಂ ಪ್ರವೃದ್ಧಸಲಿಲಂ ।
ತೀರಂ ರೋಧಂ ತಟಂ ಪ್ರಪಾತಂ ಕೂಲಂ ॥
ಪಾರಂ ಪರತಟ ಮರ್ವಾ ।
ಕ್ತೀರ ಮವಾರಾಖ್ಯ ಮಂತರೀಪಂ ದ್ವೀಪಂ ॥

ದ್ವೀಪವು ಆಗುವ ಕ್ರಮವನ್ನೂ ಹೇಳಿದ ಕೋಶಕಾರ, ನೀರು ತಾಡನದಿಂದ ಉಂಟುಮಾಡುವ ಜಲನೀಲಿಕೆ, ನಿರಂತವಾಗಿ ನೀರು ಹರಿಯುವುದರಿಂದ ಬೆಳೆಯುವ ಹಾವಸೆಯನ್ನೂ ತಿಳಿಸಿದ್ದಾನೆ. ಇಷ್ಟೆಲ್ಲ ವಿವರಗಳನ್ನು ಕೊಟ್ಟಮೇಲೆ ನೀರಿನಲ್ಲಿ ಬೆಳೆಯುವ ಹೂವುಗಳನ್ನು ಪರಿಚಯಿಸಲೇಬೇಕು.

ಅರವಿಂದಂ ರಾಜೀವಂ ।
ಸರಸಿರುಹಂ ಸಾರಸಂ ಮಹೋತ್ಪಳ ಮಬ್ಜಂ ॥
ಖರದಂಡಂ ಕಮಳಂ ತಾ ।
ಮರಸಂ ನಳಿನಂ ಕುಶೇಶಯಂ ಶತಪತ್ರಂ ॥
ಇಂದೀವರ ಮುತ್ಪಳ ಮೆಂ ।
ಬಂದವಿಭಿನ್ನಾ ರ್ಥಮಸಿತವದು ಕುವಳಯಸಂ ॥
ಜ್ಞಂ ದಲ್ ಕುಮುದಂ ಕೈರವ ।
ಮೆಂದು ಸಿತೋತ್ಪಲ ವದಲ್ಲಿ ಪೇೞಲ್ಪಡುಗುಂ ॥

ಕಮಲದ ವಿವಿಧ ಬಗೆ, ಸೌಗಂಧಿಕ ಪುಷ್ಪಗಳು, ಕಮಲ ಪತ್ರಗಳು ಇಲ್ಲಿ ಬಹುಸುಂದರವಾಗಿ ವಿವರಿಸ್ಪಟ್ಟಿವೆ. ಮುಂದಿನ ವರ್ಗ **ಭೂ ವರ್ಗಂ.** ಭೂಮಿಯನ್ನು ಕುರಿತು ಒಂದು ವರ್ಗವನ್ನು ಮೀಸಲಿಡಲಾಗಿದೆ, ಏಳು ಕಂದ ಪದ್ಯಗಳಲ್ಲಿ ಭೂಮಿಯ ಎಲ್ಲ ವಿವರಗಳನ್ನು ಕೋಶಕಾರ ನೀಡುವುದು ಅಚ್ಚರಿ ಮೂಡಿಸುತ್ತದೆ.

ಸ್ಥಿರೆ ಧರಣಿ ಧಾತ್ರಿ ಮೇದಿನಿ ।
ಧರಿತ್ರಿ ಧರೆ ಯವನಿ ಪೃಥಿ ರಸೆ ವಸುಧೆ ವಸುಂ ॥
ಧರೆ ಕು ಮಹಿ ಜಗತಿ ವಿಶ್ವಂ ।
ಭರೆ ಗೋ ಕ್ಷ್ಮಾ ಕ್ಷೋಣಿ ಭೂಮಿ ಭೂ ಗೋತ್ರೆ ನೆಲಂ ॥

ಎರೆಯುಳ್ಳುದೊಂದು ಭೂಮ್ಯಂ ।
ತರಮದು [ತಾಂ] ಕೃಷ್ಣ ಭೂಮಿ ಯಕ್ಕುಂ ಬೆಳ್ಮೆ ॥
ಣ್ಬೆರಸಿದ ಮಹೀಪ್ರದೇಶಂ ।
ನಿರಂತರಂ ಪಾಂಡುಭೂಮಿ ಯೆಂಬುದದನಿಕುಂ ॥

ಪಶುಗಳ್ಗೆ ಹಿತಮೆನಿಪ್ಪುದು ।
ಪಶೀಯಮದು ನಡ್ವೆಳಂ ನಳಾನ್ವಿತಮಕ್ಕುಂ ॥
ವೃಶಶಾಕಪ್ರಭವಂ ಶಾ
ಕಶಾಕದಂ ಶಾಕಶಾಕಿನಂ ತಾನೆನಿಕುಂ ॥

ಭೂಮಿಯನ್ನು ಅನೇಕ ಹೆಸರುಗಳಿಂದ ಕರೆಯಲಾಗಿದೆ, ಮಣ್ಣನ್ನು ಮೃತ್ತಿಕೆ ಎಂದೂ ಕರೆಯಲಾಗುತ್ತದೆ. ನದಿಯ ನೀರು ತಾಡನವಾಗುವ ಪ್ರದೇಶಗಳು ಬಹಳವಾಗಿ ಫಲವತ್ತಾಗಿರುತ್ತದೆ. ಕಪ್ಪು ಮಣ್ಣಿನ ಭೂಮಿಯನ್ನು ಎರೆ ಭೂಮಿಯೆಂದು, ಬಿಳಿಯ ಮಣ್ಣು ಬರೆತಿರುವ ಪ್ರದೇಶವನ್ನು ಪಾಂಡು ಭೂಮಿಯೆಂದು ಕರೆದಿರುವುದು ವಿಶೇಷವೆನಿಸುತ್ತದೆ. ಮುಂದಿನ ವರ್ಗ **ಕಾಲಾಯಸಾದಿ ಧಾತುವರ್ಗಂ.** ಈ ಭಾಗದಲ್ಲಿ ಒಟ್ಟು ಹನ್ನೆರಡು ಕಂದ ಪದ್ಯಗಳಿದ್ದು ಭೂಮಿಯ ಮೇಲಿನ ಪ್ರದೇಶ ಮತ್ತು ಇತರ ವಸ್ತುಗಳನ್ನು ಪ್ರಸ್ತಾಪಿಸಲಾಗಿದೆ.

ಗಿರಿ ಗೋತ್ರಂ ಶಿಖರಿ ಧರಂ ।
ಸ್ಥಿರಂ ನಗಂ ಪರ್ವತಂ ಶಿಲೋಚ್ಚಯ ಮುರ್ವೀ ॥
ಧರ ಮದ್ರಿ ಶೈಲ ಮಚಲಂ ।
ದರಿಮಂತಂ ಶೃಂಗಿ ಸಾನುಮಂತ ಮಹಾರ್ಯಂ ॥

ದರಿ ಕಂದರಂ ಬಿಲಂ ಗ ।
ಹ್ವರಂ ಗುಹಾಕುಹರ ಮದ್ರಿಕುಂಜಂ ಕೊಳ್ಳಂ ॥
ಗಿರಿಪರ‍್ಯಂತಂ ಪಾದಂ ।
ಪರಿಸರ [ದ ತೊರೆಯದು ನಿರ್ಝರಂ ಪ್ರ] ಸ್ರವಣಂ ॥

ಗಿರಿಜೋತ್ತಮ ಕಾಂಚನ ಜಾ ।
ತರೂಪ ತಪನೀಯ ಭರ್ಮ ಹಾಟಕ ಚಾಮೀ ॥
ಕರ ಶಾತಕುಂಭ ಕಾರ್ತ ।
ಸ್ವರ ಕನಕ ಸುವರ್ಣ ರುಕ್ಮನಾಮಮಂ ಹೇಮಂ ॥

ಭೂ ಪ್ರದೇಶದಲ್ಲಿರುವ ಬೆಟ್ಟ ಗುಡ್ಡಗಳು, ಶಿಖರ, ಪ್ರಸ್ಥಭೂಮಿ, ಅನೇಕ ಕಾರಣದಿಂದ ಭೂಮಿಯಲ್ಲಿ ಉಂಟಾಗುವ ಬಿಲ, ಕಂದರ, ಗುಹೆಗಳು, ಭೂಮಿಯ ಅಡಿಯಲ್ಲಿ ಸಿಗುವ ಶಿಲೆಗಳು, ಖನಿಜಗಳು ಅನೇಕ. ಅದರ ಜೊತೆಯಲ್ಲಿ ಭುವಿಯಲ್ಲಿ ಕಲ್ಲುಗಳೊಡನೆ ದೊರೆಯುವ ಚಿನ್ನ ಅದರ ಅದಿರಿನ ಸ್ವರೂಪ ಇಲ್ಲಿ ದಾಖಲಾಗಿದೆ.

ಶ್ವೇತಂ ರಜತಂ ತಾಂ ಕಳೆ ।
ಧೌತಾಖ್ಯಂ ತಾರ ಮೆಂಬುದಕ್ಕುಂ ರೂಪ್ಯಂ ॥
ರೀತಿಕೆ ಯದಾರಕೂಟಂ ।
ಖಾತಂ ತಾಂ ವೃತ್ತಿಲೋಹಮೆನೆ ವೃತ್ತಕಮುಂ ॥

ಮರಕತ ಮದಶ್ಮಗರ್ಭಂ ।
ಗರುಡೋದ್ಗಾರಂ ಹರಿನ್ಮಣಿಸಮಾಖ್ಯಂ ಮ ॥
ತ್ತರುಣಾಶ್ಮಂ ಕಿಸುಗಲ್ ಪ ।
ದ್ಮರಾಗಮಣಿ ವಾಳವಾಯಜಂ ವೈಡೂರ್ಯಂ ॥

ದ್ರವಿಣಂ ದ್ರವ್ಯಂ ವಸ್ಯ ।
ರ್ಥ ವಿತ್ತ ರೈ ರಿಕ್ಥ ಸಾರ ಧನ ವೇಕಾರ್ಥಂ ॥
ನವನಿಧಿಗಳ ಶೇವಧಿಗಳ್ ।
ಸುವಿಹಿತ ನಿಕ್ಷೇಪಮಂತದುವನಿಧಿ ಯೆನಿಕುಂ ॥

ಸುವರ್ಣದಷ್ಟೇ ಮುಖ್ಯವಾದ ರಜತ, ಸೀಸ, ತಾಮ್ರ, ಅತಿ ಬೆಲೆಬಾಳುವ ಮರಕತ, ಪದ್ಮರಾಗ, ನವನಿಧಿಗಳು ನೆಲದಲ್ಲಿ ಅಡಗಿದ್ದು, ಅದರಿಂದಲೇ ಭೂಮಿ ಸಂಪದ್ಭರಿತವಾಗಿರುತ್ತದೆ. ಮುಂದಿನ ವರ್ಗ **ವನವರ್ಗ,** ಕಾಡಿಗೆ ಸಂಬಂಧಿಸಿದ ಅನೇಕ ವಿಷಯಗಳನ್ನು ಹದಿನೈದು ಪದ್ಯಗಳಲ್ಲಿ ವಿಸ್ತೃತವಾಗಿ ಹೇಳಲಾಗಿದೆ. ಅದರಲ್ಲೂ ಒಂದು ವಿಷಯಕ್ಕೆ ಸಂಬಂಧಿಸಿದ ಅನೇಕ ಸಮಾನಾರ್ಥಕ ಪದಗಳನ್ನು ಕೊಡಲಾಗಿದೆ.

ತರು ಶಾಖಿ ಪಾದಪಂ ವಿ ।
ಷ್ಟರ ಮದ್ರಿ ಕುಜಂ ದ್ರುಮಮಂ ದ್ರು ಶಾಳ ಮಗಂ ಭೂ ॥
ಮಿರುಹಂ ವಿಟಪಿ ವನಸ್ಪತಿ ।
ಮರಂ ನಗಂ ಕುಟ ಮನೋಕಹಂ ಶಿಖಿ ವೃಕ್ಷಂ ॥

ಅಂಕುರ ಮಂಕೂರಂ ಪ್ರಥ ।
ಮಾಂಕುರ ಮಕ್ಕುಂ ಪ್ರರೋಹನಾಮಂ ಕಳಿಕಾ ॥
ಸಂಕುಳ ಮಂತವೆ ಜಾಳಕ ।
ಮುಂ ಕೊನರುಂ ಮುಕುಳ ಕೋರಕಂಗಳವೆನಿಕುಂ ॥

ಒಂದು ವೃಕ್ಷ ಅನೇಕ ಹೆಸರುಗಳನ್ನು ಹೊಂದಿರುತ್ತದೆ, ಅದು ಏನನ್ನು ಕೊಡುತ್ತದೆ ಎನ್ನುವುದೂ ಆ ಹೆಸರಿನಲ್ಲಿಯೇ ಅಡಕವಾಗಿರುತ್ತದೆ. ಯಾವುದು ಫಲವನ್ನು ನೀಡುತ್ತದೋ ಅದು ಫಳಿನವಾದರೆ, ಪುಷ್ಪಗಳಿಲ್ಲದಿರುವುದು ವನಸ್ಪತಿಯಾಗುತ್ತದೆ. ಚಿಗುರು ಅಂಕುರವಾದರೆ, ಮೊದಲನೆಯ ಚಿಗುರು ಪ್ರಥಮಾಂಕುರವಾಗುತ್ತದೆ. ಲತಾ, ವಲ್ಲರೀ, ಗೊಂಚಲಿರುವ ಬಳ್ಳಿಗಳು ಮೊದಲಾದವುಗಳನ್ನು ಬೇರೆ ಬೇರೆಯಾಗಿಯೇ ವಿಂಗಡಿಸಲಾಗಿದೆ.

ಪೊಸಮಿಡಿ ಶಲಾಟು ತಾನದು ।
ಪಸುರಾಜಿದ ಫಳನಿಕಾಯಮಕ್ಕುಂ ವಾನಂ ॥
ಪೊಸದಳಿರೆನೆ ಪಲ್ಲವ ಮೆನೆ ।
ಕಿಸಲಯ ಮೆನೆ ತಾಂ ಪ್ರವಾಳ ಮೆನೆ ಸದೃಶಾರ್ಥ0 ॥

ಕುಸುಮಂ ಪ್ರಸೂನ ಸುಮನಃ ।
ಪ್ರಸವಾಖ್ಯಂ ಪುಷ್ಪಮೆಸೆವ ಗುಚ್ಛಂ ಸ್ತಬಕಂ ॥
ಕುಸುಮದ ರಜಂ ಪರಾಗಂ ।
ಕುಸುಮಾಸವರಸ ಮದಲ್ತೆ ಮಧು ಮಕರಂದಂ ॥

ಹೊಸದಾದ ಮಿಡಿಗೆ ಶಲಾಟುವೆಂದು ಕರೆಯಲಾಗುತ್ತಿತ್ತು, ಹೊಸ ತಳಿರನ್ನು ಪಲ್ಲವವೆಂದು ಕರೆದರೆ ಹೂವಿನ ಗುಚ್ಛವನ್ನು ಸ್ತಬಕವೆನ್ನಲಾಗಿದೆ. ಹೂವಿನ ಗಿಡಗಳಿರುವಂತಹ ಪ್ರದೇಶವನ್ನು ಹೂದೋಟವೆಂದರೆ, ಅಲ್ಲಿಗೆ ಬರುವ ಅಳಿಗಳನ್ನು ಅಳಿಮಾಲಿಕೆಯೆಂದು ಕೋಶಕಾರ ಸೊಗಸಾಗಿ ಹೇಳಿದ್ದಾನೆ. ಮುಂದುವರೆದು

ಪ್ರಮದವನಂ ಶುದ್ಧಾಂತ ।
ಪ್ರಮದಾಜನದೊಡೆನೆ ಕೂಡಿ ವಿಹರಿಪ್ಪ ವನಂ ॥
ಸಮುದಿತ ಸಮಸ್ತಲೋಕಂ ।
ರಮಿಯಿಸುವ ವನಾಂತ ಮಂತದುದ್ಯಾನವನಂ ॥

ಕಾಂತಾರ ವಿಪಿನ ಗಹನ ।
ಪ್ರಾಂತರಕಾನನ ವನಾಟವೀ ಕಕ್ಷ ಸಮಾ ॥
ಖ್ಯಂ ತಾ ನರಣ್ಯಮಿವು ಮ ।
ತ್ತುಂತದರಣ್ಯಾನಿ ಯೆನಿಕುಮೊಡವಿದ ಪೆರ್ಚಿಂ ॥

ಪ್ರಮದೆಯರೊಡನೆ ವಿಹರಿಸುವ ವನಗಳು ಪ್ರಮದವನವಾದರೆ, ಸಮಾಜದ ಎಲ್ಲರೂ ವಿಹರಿಸುವ ಜಾಗವನ್ನು ಉದ್ಯಾನವನವೆಂದು ಕರೆಯಲಾಗಿದೆ. ಹಾಗೆಯೇ ಅರಣ್ಯಕ್ಕೆ ಇರುವ ಅನೇಕ ಹೆಸರುಗಳನ್ನು ಈ ಭಾಗ ಒಳಗೊಂಡಿದೆ. ಮುಂದಿನ ವರ್ಗ **ವೃಕ್ಷಾದಿ ವರ್ಗಂ**. ಈ ಭಾಗದಲ್ಲಿ ಅನೇಕ ರೀತಿಯ ವೃಕ್ಷ ಮತ್ತು ಅದರ ಎಲೆ, ಕಾಂಡ, ಹೂವು, ಹಣ್ಣು ಎಲ್ಲವನ್ನೂ ವಿಶೇಷವಾಗಿ ನೀಡಲಾಗಿದೆ.

ಚೂತಂ ಮಾಕಂದಮಹೀ ।
ಜಾತಂ ಸಹಕಾರ ಮಾಮ್ರ ಮೆನಿಕುಂ ಮತ್ತಾ ॥
ಮ್ರಾತಕ ಪೀತನಕಂ ರಾ ।
ಜಾತನಮಕ್ಕುಂ ಪ್ರಿಯಾಳಮೇ ಚಳದಳಕಂ ॥

ಚಲದಳ ಮಶ್ವತ್ಥಂ ಪಿ ।
ಪ್ಪಲ ಮರಳಿ ಪಲಾಶಕಾಖ್ಯಂ ಮುತ್ತಂ ॥
ತಳಮುಂ ತಾಳಮು ಮೆನೆ ಪನೆ ।
ಫಳಿನಿ ಶ್ಯಾಮಂ ಪ್ರಿಯಂಗು ನಾಮಂ ನೆಗಟ್ಟುಂ ॥

ಮಾವು, ಅಶ್ವತ್ಥ, ಬಕುಳ ಮುಂತಾದ ಮರಗಳು, ನಾಗಲತೆ, ಪುನ್ನಾಗ, ಲವಂಗ ಮುಂತಾದ ಲತೆಯುಳ್ಳಂತಹ ವಿಶೇಷವಾದ ಬಳ್ಳಿಗಳನ್ನೂ, ಹೆಚ್ಚು ಬೀಜಗಳಿರುವ ಫಲಗಳನ್ನು ಹಾಗೂ

ಕ್ರಿಮಿಫಳ ಮುದುಂಬರಂ ನ ।
ಕ್ತಮಾಳ ಮಕ್ಕುಂ ಕರಂಜಭೂಜಂ ಭಲ್ಲಾ ॥
ತ ಮರುಷ್ಕರಂ ಕದಂಬ ।
ದ್ರುಮ ಮದು ನೀಪಂ ಮಧೂಕತರು ಗುಡಪುಷ್ಪಂ ॥

ಔದುಂಬರದ ಫಲದಲ್ಲಿ ಕ್ರಿಮಿಗಳಿರುವುದರಿಂದ ಅದನ್ನು ಎಚ್ಚರಿಕೆಯಿಂದ ಗಮನಿಸಲೇಬೇಕು, ಹಾಗೆಯೇ ಹುಳಿಯ ಗುಣವಿರುವ ನಿಂಬೆಯಂತಹ ಫಲಗಳು ಇರುತ್ತವೆ, ಒಗರಿನ ರುಚಿಯ ನೇರಳೆ, ತಾಳೆಯ ಅನೇಕ ತಳಿಗಳು, ಬಿಲ್ವ ಫಲ, ಪನಸ ಫಲ, ತೇಗ, ಭೂರ್ಜ್ವ, ಹುಣಿಸೆ, ಶಿಂಶುಪ, ಶಮೀ, ವೃಕ್ಷಗಳ ರೀತಿಯನ್ನು ಕೋಶದಲ್ಲಿ ಕಾಣಬಹುದು.

ತಾಳಂ ಖರ್ಜೂರಂ ಹಿಂ ।
ತಾಳಂ ಕೇತಕಿ ಸನಾರಿಕೇಳಂ ಕ್ರಮುಕಂ ॥
ತಾಳೆದ್ರುಮಮೆಂದಿವು ಭೂ ।
ಜಾಳಿಗಳೊಳ್ ತೃಣಮಹೀರುಹಂಗಳೆನಿಕ್ಕುಂ ॥

ತಾಳೆಯ ವಿವಿಧ ತಳಿಗಳು ತೃಣ ಮಹೀರುಹಗಳೆಂದು ಕೋಶಕಾರ ಕರೆದಿದ್ದಾನೆ. ಕರವೀರ, ದ್ರಾಕ್ಷಿ, ಮಂಜಿಷ್ಠ, ಗುಲಗಂಜಿ, ಶತಪುಷ್ಪ, ಭೃಂಗಿ, ತೊಂಡೆ ಮುಂತಾದ ಬಳ್ಳಿಯಾಧಾರಿತ ಪುಷ್ಪ ಮತ್ತು ಫಲಗಳನ್ನು ತಿಳಿಸುವ ಕೋಶಕಾರ ಔಷಧಿಯುಕ್ತ ಪದಾರ್ಥಗಳನ್ನು ಒಟ್ಟಿಗೆ ಹೇಳಿದ್ದಾನೆ.

ಮರಿಚಾಹ್ವ ಮೂಷಣಂ ಮಗ ।
ಧರುಹಂ ಕೃಷ್ಣಾಕಣಾಹ್ವಯಂ ಪಿಪ್ಪಲಿ ನಾ ॥
ಗರಕಂ ಮಹೌಷಧಂ ಶುಂ ।
ಠಿ ರಾಮಠಂ ಹಿಂಗು ಜರಣಕಂ ಬಾಹ್ಲೀಕಂ ॥

ಅಜಮೋದ ಮದೋವ ಮಜಾ ।
ಜಿ ಜೀರಕಂ ಧಾನ್ಯಮಜೆಗೆ ಕುಸ್ತುಂಬುರು ತಾಂ ॥
ಬಜೆ ಪಡ್ಗ್ರಂಥಿಕೆ ಕುಷ್ಠಮ ।
[ದ] ಜಾಹ್ವಯಂ ಮಾಣಿಮಂಥರಂ ಸಿಂಧೂತ್ಥಂ ॥

ಇಲ್ಲಿರುವ ಹಿಪ್ಪಲಿ, ಶುಂಠಿ, ಹಿಂಗು, ಅಜವಾನ, ಜೀರಿಗೆ, ಕೊತ್ತಂಬರಿ ಇಂದಿಗೂ ಅತಿ ಹೆಚ್ಚು ಬಳಕೆಯಲ್ಲಿರುವಂತಹ ಔಷಧೀಯ

ಪದಾರ್ಥಗಳಾಗಿವೆ ಹಾಗೆಯೇ, ನಿತ್ಯದ ಅಡುಗೆಯಲ್ಲಿ ಬಳಸುವ ಮುಖ್ಯ ಸಾಂಬಾರು ಪದಾರ್ಥಗಳಾಗಿವೆ. ಆನಂತರ ಈ ವರ್ಗದಲ್ಲಿ ಕೋಶಕಾರ ಹೂವುಗಳ ವಿಪುಲ ದರ್ಶನವನ್ನೇ ಮಾಡಿಸುತ್ತಾನೆ.

ಜಾತಿ ಮಾಳತಿ ವಾಸಂತಿ ಮಾಧವಿ ಮಲ್ಲಿಗೆ ವಿಚಕಿಳಂ ಮೊಲ್ಲೆಕುಂದಂ।
ಕೇತಕ್ಯಾಹ್ವಯಂ ಕೇದಗೆ ಯೂಧಿಕೆ ಮಾಗಧಿ ಬಂಧೂಕಂ ಬಂಧುಜೀವಂ॥
ಮಾತೇಂ ತಾಂ ಕುರಂಟಕ ಮಮ್ಮಾನಮೆ ರಕ್ತಂ ಕುರವಕಂ ನೀಲಂ ಬಾಣಂ।
ಪೀತಂ ಸಹಚರಿ ಯೆನಿಸುಗುಂ ಮತ್ತದು ವಿಳಕ್ಕೈಳಭಿಕೆ ಪಿಕ್ಕೆಯಕ್ಕುಂ ॥

ದಾಸವಾಳ, ಜಪಾಕುಸುಮಗಳ ಬಳಕೆಯನ್ನು ತಿಳಿಸಿದ ಕೋಶಕಾರ ವಿಷಯುಕ್ತವಾದ ಗಿಡಗಳನ್ನು ಗಮನಿಸಿರುವುದು ವಿಶೇಷವಾಗಿದೆ. ಅದರ ಜೊತೆಯಲ್ಲಿ ಚಿಕ್ಕದಾದರೂ ಬಹು ಉಪಯೋಗಿಯಾಗಿರುವ ಗರಿಕೆಯ ಬಳಕೆಯನ್ನೂ ಈ ಕೋಶ ಹೊಂದಿದೆ.

ಉತ್ತರಣೆ ಯಪಾಮಾರ್ಗಂ ।
ಬೆತ್ತಂ ವೆತ್ತಂ ಕುಟನ್ನಟಂ ಪಳವಕತಾಂ ॥
ದುತ್ತೂರಂ ಕಾಂಚನ ಮು ।
ನ್ಮತ್ತಂ ಕಿಂಪಾಕಮದು ಮಹಾಕಾಳಾಖ್ಯಂ ॥

ಶರಮದು ಮುಂಜಂ ದೂರ್ವಾ ।
ಹರಿತಾಳೀ ನಾಮಕಂ ಕಱುಂಕೆ ಯೆನಿಕ್ಕುಂ ॥
ತರುಣತೃಣಂ ಶಷ್ಪಂ ಯವ ।
ಸರಾಜಿ ಘಾಸಂ ಸಮಸ್ತತೃಣ ಮರ್ಜನಕಂ ॥

ಮುಂದಿನ ವರ್ಗ **ಮೃಗಪಕ್ಷಿ ವರ್ಗಂ** – ಈ ವರ್ಗದಲ್ಲಿ ಕೋಶಕಾರ ಇಪ್ಪತನಾಲ್ಕು ಪದ್ಯಗಳಲ್ಲಿ ಮೃಗಗಳು, ಪಕ್ಷಿಗಳು, ಅವುಗಳ ಚರ್ಯೆ, ದೈಹಿಕ ಸ್ವಭಾವ, ಕೂಗುವ ಧ್ವನಿ, ವಿಹರಿಸುವ ಜಾಗ ಮುಂತಾದವುಗಳನ್ನು ಅತಿ ಸೂಕ್ಷ್ಮವಾಗಿ ಗಮನಿಸಲಾಗಿದೆ. ಈ ವರ್ಗ ಅರಂಭವಾಗಿರುವುದೇ ಮೃಗರಾಜನಿಂದ

ಶರಭ ಮದಷ್ಟಾಪದ ಮಿಭ ।
ವಿರೋಧಿ ಕಂಠೀರವಂ ಮೃಗಾಧೀಶಂ ಕೇ ॥
ಸರಿ ಹರಿ ಸಿಂಹಂ ವ್ಯಾಘ್ರಂ ।
ತರಕ್ಷು ಮೃಗರಿಪು ಚಮೂರ ವೆನೆ ಶಾರ್ದೂಲಂ ॥

ಶಿವೆ ಮೃಗಧೂರ್ತಂ ಗೋಮಾ ।
ಯು ವಂಚಕಂ ಜಂಬುಕಂ ಸೃಗಾಲಂ ನರಿ ಫೇ ॥
ರವ ಮಱಿಗೆ ಬಳ್ಳು ಭಲ್ಲೂ ।
ಕ ವಚ್ಛಭಲ್ಲ (ಮೆನಿಕರಡಿ) ಭಾಲ್ಲುಕ ಮಕ್ಕುಂ ॥

ಹುಲಿ, ಸಿಂಹಗಳ ವಿವಿಧ ರೂಪಗಳು, ನರಿಗೆ ವಂಚಕನೆಂದು ಕರೆದಿರುವುದು, ಸಾರಂಗ, ಕರಡಿ, ಮಹಿಷ, ಬೆಕ್ಕು, ಕಪಿ, ಅದರಲ್ಲಿರುವ ವಿವಿಧ ಜಾತಿ ಮತ್ತು ಹಂದಿಗಳು ವನದಲ್ಲಿ ಇರುವ ರೀತಿಯಲ್ಲಿಯೇ

ಖನಕೋಂದುರು ಮೂಷಿಕ (ಮಾ
ಖು) ನಾಮಮಿಲಿ ಮತ್ಕುಣಾಖ್ಯ (ಮುದ್ದಂಶಂ) ತಾ ॥
ನೆನಿಕುಂ ಲೂತಾಹ್ವಯ ಮೂ ।
ರ್ಣನಾಭ ಮದು ವೃಶ್ಚಿಕಂ ದ್ರುಣಂ ಕ್ರಿಮಿ ಕೀಟಂ ॥

ಗಗನಾಂತರದೊಳವಾಡುವ ।
ಖಗಗತಿ ಡೀನಂ ಪ್ರಡೀನ ಮುಡ್ಡೀನಂ ಮ ॥
ತ್ತೊಗೆದ ತದಂಡಂ ತಾಂ ತ ।
ತ್ತಿ ಗೂಡು ನೀಡಂ ಕುಲಾಯ ಮವಱುಲಿ ವಿರುತಂ ॥

ಇಲಿಯಿಂದ ಮೊದಲ್ಗೊಂಡು ಚೇಳು, ಕೀಟದವರೆಗೆ ಅನೇಕ ಕ್ರಿಮಿಗಳು, ಪ್ರಾಣಿಗಳು ಪ್ರಕೃತಿಯಲ್ಲಿ ಜನಿಸುತ್ತವೆ. ಪ್ರತಿ ಪ್ರಾಣಿ ಇಲ್ಲವೇ ಪಕ್ಷಿಯ ರೀತಿಗೆ ಅನುಗುಣವಾಗಿ ಅದರ ಹೆಸರುಗಳಿರುವುದೇ ಈ ಭಾಷೆಯ ವೈಶಿಷ್ಟ್ಯ – ಗಗನದಲ್ಲಿ ಹಾರುವುದು ಉಡ್ಡೀನ, ಪಕ್ಕದಲ್ಲಿ ರೆಕ್ಕೆಯಿರುವುದು ಪಕ್ಷಿ. ಮೇಲೆ ಇರುವ ಜುಟ್ಟು ಶಿಖೆಯಾದರೆ ಅದನ್ನು ಹೊಂದಿರುವ ನವಿಲು ಶಿಖಿ, ಕಾಗೆಯ ಗೂಡಿನಲ್ಲಿ ಬೆಳೆಯುವ ಕೋಗಿಲೆ ಪರಪುಟ್ಟ.

ಮೌಕುಳಿ ಕೃಷ್ಣಧ್ವಾಂಕ್ಷಂ ।
ಕಾಕೋಳಂ ದ್ರೋಣ ನಿನತನೂಜ ನೆನಿಕ್ಕುಂ ॥
ಕಾಕಾರಿ ಕೌಶಿಕಾಖ್ಯ ಮು ।
ಲೂಕಂ ಪಿಂಗಲಿ ನಿಶಾಟನಂ ತಾನಕ್ಕುಂ ॥

ಕೊಂಚೆ ಯದಕ್ಕುಂ ಪೆಸರಿಂ ।
ಕ್ರೌಂಚಂ ಕೃಕವಾಕು ತಾಮ್ರಚೂಡಾಭಿಖ್ಯಂ ॥
ತಾಂ ಚರಣಹೇತಿ ಕುಕ್ಕುಟ ।
ನಂಚೆ ಸಿತಚ್ಛದಖಗಂ ಮರಾಳಂ ಹಂಸಂ ।

ಗಿಳಿಗೆ ಕೀರವೆಂಬ ಹೆಸರಿದೆ, ಬಕ ಬಕೋಟ, ಕೊಂಚೆಗೆ ಕ್ರೌಂಚ, ಪೊಣರ್ವಕ್ಕಿ ಚಾತಕ ಪಕ್ಷಿ ಇವುಗಳ ಜೊತೆಗೆ ಶಕುಂತ ಪಕ್ಷಿಗಳೂ ಕೂಜನ ಮಾಡುತ್ತಿರುತ್ತವೆ. **ಈ ಭಾಗದಲ್ಲಿ ಕೋಶಕಾರನು ಉಪಜಾತಿಯೆನ್ನುವ ವೃತ್ತವನ್ನು ಬಳಸಿದ್ದಾನೆ. ಅದು ಇಂದ್ರವಜ್ರೋಪೇಂದ್ರ ವಜ್ರ ವೃತ್ತಂಗಳಿಂದಾದುಪಜಾತಿವೃತ್ತಮಿದು ಎಂದಿದ್ದಾನೆ** ಮತ್ತು ಕನ್ನಡ ಕಾವ್ಯಗಳಲ್ಲಿ ಈ ಬಗೆಯ ಉಪಜಾತಿ ವೃತ್ತಗಳನ್ನು ಪ್ರಾಯಿಕವಾಗಿ (ಪ್ರಾಯೋಗಿಕವಾಗಿ) ಯಾರೂ ಪ್ರಯೋಗಿಸಿಲ್ಲ ಎಂದು ಕವಿ ಹೇಳಿದ್ದಾನೆ.

ವರಟಾ ವರಾಳನಾಮಿಕೆ ।
ಮರಾಳವಧು ತದ್ವಿಲಾಸ ಕೇಳೀನಿಳಯಂ ॥
ಸರಸವನಕಮಳಿನೀವನ ।
ವಿರಾಜಿತಂ ಮಾನಸಂ ಸರೋವರಮಕ್ಕುಂ ॥

ಚೀರೀಃ ಝಿಲ್ಲೀಕಾ ಭೃಂ ।
ಗಾರೀ ಶಬ್ದಂ ಸಮಾನವಾಚ್ಯಂ ತದ್ಗಂ ॥
ಭೀರಾರಾವಂ ತಾಂ ಚೀ ।
ತ್ಕಾರಂ ಶಲಭಂ ಪತಂಗ ಮೆಂದಱುಗಿವಱಿಕೊಳ್ ॥

ಹಂಸೆಗಳು ವಿಹರಿಸುವ ಕಮಲದ ಸರೋವರವನ್ನು ಮಾನಸ ಸರೋವರವೆಂದು ಕರೆಯಲಾಗಿದೆ. ಆನಂತರ ದುಂಬಿಗಿರುವ ಅನೇಕ ಸಮಾನಾರ್ಥಕ ಪದಗಳನ್ನು ನೀಡಿ, ಪಕ್ಷಿಗಳ ಕೂಜನ ಮತ್ತು ಪ್ರಾಣಿಗಳು ಮಾಡುವ ಗಂಭೀರವಾದ ನಿನಾದವನ್ನು ಕವಿ ಹೇಳಿದ್ದಾನೆ. ಮುಂದಿನದು **ಪುರ ಗೃಹೋಪಕರಣಾದಿ ವರ್ಗಂ.** ಒಂದು ಊರು ಮತ್ತು ಅಲ್ಲಿನ ವಿಭಾಗಗಳು ಜೊತೆಯಲ್ಲಿ ಮನೆಯಲ್ಲಿ ಬಳಸಬಹುದಾದ ಅನೇಕ ಉಪಕರಣಗಳನ್ನು ಈ ವರ್ಗದಲ್ಲಿ 38 ಪದ್ಯಗಳಲ್ಲಿ ತಿಳಿಸಲಾಗಿದೆ. ಆರಂಭದಲ್ಲಿಯೇ ಗ್ರಾಮದಿಂದ ಸೀಮೆಯವರೆಗೆ ಇರುವ ವಿವಿಧ ವಿಭಾಗಗಳಿವೆ.

ಗ್ರಾಮಂ ಸಂವಸಥಾಖ್ಯಂ ।
ಗ್ರಾಮೀಣಂ ಗ್ರಾಮ್ಯ ನೆನಿಸುಗುಂ ತತ್ಪ್ರಭವಂ ।
ಗ್ರಾಮಾಂತಿಕ ಮುಪಶಲ್ಯಂ ।
ಗ್ರಾಮಾಂತರ ಮವಧಿ ಸೀಮೆ ಸೀಮಾಘಾಟಂ ॥

ಮುನಿಜನ ನಿವಾಸ ಮಾಶ್ರಮ ।
ಮೆನಿಕ್ಕು ಮಾಭೀರಪಲ್ಲಿ ಘೋಷ ಮದಕ್ಕುಂ ।
ವನಮಧ್ಯಗತಂ ಶಬರೋ ।
ಪನಿಚಿತ ಮದು ಪಕ್ಕಣಂ ಪುಳಿಂದಸ್ಥಾನಂ ॥

ಒಂದು ಪ್ರದೇಶವನ್ನು ಕ್ರಮಿಸಬೇಕಾದರೆ ಮಾರ್ಗವಿರಬೇಕು, ಆ ಮಾರ್ಗಕ್ಕೆ ಪಥವೆಂದು ಹೆಸರು, ಅದರಲ್ಲಿ ಸಂಚರಿಸುವವನು ಪಥಿಕ. ಮುನಿಗಳ ಆಶ್ರಮ, ಗ್ರಾಮದಿಂದ ಬಾಡದವರೆಗೆ ಇರಬೇಕಾದ ಪುರ, ರಾಟ್ಟಾಳ, ತಲೆ, ಖೇಡ ಮುಂತಾದವುಗಳನ್ನು ತಿಳಿಸಲಾಗಿದೆ. ಒಂದು ಪುರಕ್ಕೆ ಸುರಕ್ಷತೆಗಾಗಿ ಇರಬಹುದಾದ ಪ್ರಾಕಾರಗಳು ಮತ್ತು ಪುರದ ಒಳಗಿನ ವೈವಿಧ್ಯ ಹೀಗಿದೆ

ಪುರಮಧ್ಯದೊಳೊದವಿದ ಬೀ।
ದಿ ರಥ್ಯೆ ವಿಶಿಖಾಹ್ವಯಂ ಪ್ರತೋಳೀಮುಖ ನಿ ।
ಸ್ಸರಣಂ ಚತುಷ್ಪಥಂ ಚ ।
ತ್ವರಮಕ್ಕುಂ ವಿಪಣಿ ಪಣ್ಯವೀಥೀನಾಮಂ ॥

ಭವನಂ ಸದನಂ ಸದ್ಮಂ ।
ನಿವಾಸ ಮಾವಸಥ ಮಾಸ್ಪದಂ ನಿಳಯಂ ವೇ ।
ಶ್ಮ ವಗಾರಂ ಶರಣಂ ಗೇ ।
ಹ ವಾಲಯಂ ಕುಟಿ ನಿಕೇತನಂ ಗೃಹ ಮುಟಜಂ ॥

ದೇವಾಲಯ ಮಾಯತನಂ ।
ದೇವನರಾಧಿಪನಿಕೇತನಂ ಪ್ರಾಸಾದಂ ।
ತಾವುಜಿದ ನೆಲೆಯ ಸೌಧಗೃ ।
ಹಾವಳಿಗಳ್ ಹರ್ಮ್ಯವೆಂಬಿವಕ್ಕುಂ ಕ್ರಮದಿಂ ॥

ಪುರದೊಳಗಿನ ವಿಸ್ತಾರವನ್ನು ಹೇಳುವಾಗ, ನಾವು ಈಗ ಹೇಳುವ ಚತುಷ್ಪಥ ಎನ್ನುವ ಪದವನ್ನು ಕೋಶ ಬಂದಕಾಲದಲ್ಲಿಯೇ ಬಳಸಿರುವುದು ವಿಶೇಷವೆ. ಹುಲ್ಲಿನ ಗುಡಿಸಲು ಪುಲ್ಗುಡಿಯಾದರೆ, ಗೃಹ ಮತ್ತು ಭೂಮಿಯನ್ನು ಸರಿಯಾದ ಕ್ರಮದಲ್ಲಿ ಆಯೋಜಿಸುವುದು ವಾಸ್ತುವಾಗಿದೆ. ಅರಸರ ಒಳಗಿನ ಕಕ್ಷೆ ಕೋಷ್ಠ, ಹತ್ತುವ ಮೆಟ್ಟಿಲು ಸೋಪಾನ, ದ್ವಾರದ ಮುಂದೆ ಮೇಲ್ಭಾಗದಲ್ಲಿ ಕಟ್ಟುವ ಮಾಲೆ ತೋರಣ, ಯಾವುದು ಮಣಿ

ಕನಕ ರಜತಗಳನ್ನು ಸಂಗ್ರಹಿಸುವ ಜಾಗವೋ ಅದು ಕೋಶಗೃಹ ಎನಿಸಿಕೊಳ್ಳುತ್ತದೆ. ಮುಂದುವರೆದು,

ಅಂತಃಪುರಮೆನಿಕುಂ ಶು ।
ದ್ಧಾಂತಂ ರಾಜ್ಞೀನಿವಾಸಮುವರೋಧಂ ಮ ।
ತ್ತಂತದು ಶಯನಗೃಹಂ ಪ್ರಘ ।
ಣಾಂತರದೊಳ್ ವಾಸಭವನ ಮೆನೆ ಪೆಸರ್ವಡೆಗುಂ ॥

ಯತಿಕುಟೀರಕ ಮದು ಪರ್ಣಶಾಲೆ ದಲ್ ಮಂದುರಂ ತುರಂಗಮಶಾಲೆ।
ಶ್ರಿತಹಟ್ಟ, ಮಾಪಣಂ ಪಣ್ಯ ವಿಕ್ರಯಶಾಲೆ[ಯಾ]ವೇಶನಾಹ್ವಯಂ ಶಿಲ್ಪಶಾಲೆ॥
ಪ್ರತಿದೇಶಿಕಾಶ್ರಯಂ ಸತ್ತ್ರಶಾಲೆ ಪ್ರತಿ ಯೆಂಬುದಜೆಗೆ ಪಾನೀಯಶಾಲೆ ।
ಸತತಂ ವಿದ್ಯಾರ್ಥಿಜನೋಚಿತಾಸ್ಪದಮಕ್ಕುಂ ಮಠಂ ಶಾಸ್ತ್ರಶಾಲೆ ॥

ರಾಣಿಯರು ವಾಸಮಾಡುವ ಜಾಗಕ್ಕೆ ಅಂತಃಪುರವೆಂದು ಕರೆಯುತ್ತಾರೆ, ಅದು ಅರಸುಗಳ ಶಯನ ಶಾಲೆಯೂ ಹೌದು. ಯತಿಗಳಿರುವ ಕುಟೀರವನ್ನು ಎಲೆಗಳಿಂದ ಮಾಡುವುದರಿಂದ ಅದನ್ನು ಪರ್ಣಶಾಲೆ ಎನ್ನುತ್ತಾರೆ. ಹೊರಗಿನಿಂದ ಬರುವ ಜನರಿಗೆ ಆಶ್ರಯ ನೀಡುವುದು ಸತ್ರಶಾಲೆ, ಪ್ರಪೆಯನ್ನುವುದು ಪಾನೀಯ ಶಾಲೆ ಮತ್ತು ವಿದ್ಯಾರ್ಥಿಗಳು ಓದುವ ಜಾಗ ಶಾಸ್ತ್ರಶಾಲೆ. ಮುಂದಿನ ಭಾಗದಲ್ಲಿ ಮನೆಗೆ ಬಳಸುವ ಅನೇಕ ಉಪಕರಣಗಳನ್ನು ಕೋಶಕಾರ ಹೇಳುತ್ತಾ ಹೋಗಿದ್ದಾನೆ.

ಪಾತ್ರಂ ಭಾಂಡಂ ಸ್ಥಾಲಿ ಯ ।
ಮತ್ರಂ ಭಾಜನ ಮೆನಿಕ್ಕುಮಂತೆ ಸಮಸ್ತಾ ।
ಮತ್ರಮ ದಾವಪನಂ ಮಧು ।
ಪಾತ್ರಂ ಚಷಕಂ ಪತದ್ಗ್ರಹಾಖ್ಯಂ ಪಡಿಗಂ ॥

ಮಂಥಣಿ ಗರ್ಗರಿ ಕಡೆಗೋಲ್ ।
ಮಂಥಾನಂ ಮಂತು ವಂತದಕ್ಕುಂ ಖಜಕಂ ॥
ಕಂಥೆ ಕವುಂದಿ ಕೃಶಾನುವಿ ।
ಮಂಥನಕಾಷ್ಠ ಮುಮದರಣಿಯೆನೆ ಪೆಸರ್ವಡೆಗುಂ ॥

ನೆಲದ ಮೇಲ್ಭಾಗದಲ್ಲಿ ಮಲಗಲು ಬಳಸುವ ಉಪಕರಣವೇ ಪರ್ಯಂಕ, ಕಾಲಿನ ರಕ್ಷಣೆಮಾಡುವುದು ಪಾದುಕೆ, ಕೋಣೆಗಳನ್ನು ಮುಚ್ಚುವ ಕ್ರಮದಲ್ಲಿ ಬಳಸುವ ಬಟ್ಟೆ ಜವನಿಕೆ, ಮಂಗಳಕರವಾದ ಕುಂಭ ಪೂರ್ಣಕುಂಭ,

ಪಾತ್ರವಾಗಿ ಬಳಕೆಯಾಗುವುದು ಘಟ, ಅದಕ್ಕಿಂತ ಚಿಕ್ಕದ್ದು ಕಳಶ. ಮಲ್ಲಿಗೆ ಮುಂತಾದ ಬಳ್ಳಿಗಳನ್ನು ಬೆಳಸುವ ಮಣ್ಣಿನ ಪಾತ್ರೆಗೆ ಕುಂಡವೆಂಬ ಹೆಸರಿದೆ. ಮೃಗಗಳನ್ನು ಬಂಧಿಸುವ ವಸ್ತುವಿಗೆ ಬಲೆ ಎಂದು ಕರೆದರೆ ಪಕ್ಷಿಗಳನ್ನು ಹಿಡಿಯುವುದಕ್ಕೆ ಜಾಳವನ್ನು ಬಳಸುತ್ತಾರೆ. ಒಟ್ಟಾರೆ ನೋಡಿದರೆ ಗೃಹೋಪಕರಣಗಳ ದೊಡ್ಡ ಪಟ್ಟಿಯೇ ದೊರೆಯುತ್ತದೆ. ಮುಂದಿನ ವರ್ಗ ಮನುಷ್ಯ ವರ್ಗಂ.

ನೃ ನರ ಮನುಜನ್ಮ ಮಾನವ ।
ಮನುಷ್ಯ ಪಂಚಜನ ಮರ್ತ್ಯಸಂಜ್ಞಂ ಪುರುಷಂ ॥
ವನಿತೆ ವಧು ನಾರಿ ಸೀಮ ।
ನ್ತಿನಿ ಯೋಷಿದ್ವಾಮೆ ಕೇವಳಂ ಸ್ತ್ರೀನಾಮಂ ॥

ಪ್ರಮದೆ ನಿತಂಬಿನಿ ಭಾಮಿನಿ ।
ರಮಣಿ ವರಾರೋಹೆ ರಾಮೆ ವಾಮಾಕ್ಷಿ ಮನೋ ॥
ರಮೆ ಲಲನೆ ಕಾನ್ತೆ ಎಂದಿ ।
ನ್ತು ಮತ್ತಮಬಲಾವಿಶೇಷ (ಮುಂ ತಾಮ) ಕ್ಕುಂ ॥

ಈ ವರ್ಗ ಅತ್ಯಂತ ವಿಸ್ತಾರವಾಗಿದ್ದು 88 ಪದ್ಯಗಳನ್ನು ಹೊಂದಿದೆ. ಮನುಷ್ಯನಲ್ಲಿ ಇರಬಹುದಾದ ಎಲ್ಲ ರೀತಿಯ ಪದ ಪ್ರಯೋಗಗಳನ್ನು ಅಲ್ಲಲ್ಲಿ ಸಮಾನಾರ್ಥಕ ಪದಗಳೊಂದಿಗೆ ವಿವರಿಸಲಾಗಿದೆ. ಆರಂಭದಲ್ಲಿ ಪುರುಷ ಮತ್ತು ಸ್ತ್ರೀಗೆ ಇರುವ ವಿವಿಧ ಹೆಸರುಗಳನ್ನು ಹೇಳಿ, ವಿಶೇಷವಾಗಿ ಸ್ತ್ರೀಗೆ ಪರ್ಯಾಯವಾಗಿ ಬಳಸುವ ಅನೇಕ ನಾಮಪದಗಳನ್ನು ಉಲ್ಲೇಖಿಸಲಾಗಿದೆ. ತದನಂತರ ಪತ್ನಿಯನ್ನು ಕರೆಯುವ ರೀತಿಯನ್ನು ಕೋಶಕಾರ ಸುಂದರವಾಗಿ ನೀಡಿದ್ದಾನೆ.

ಸಹಚರಿ ಭಾರ್ಯೆ ಕುಟುಂಬಿನಿ ।
ಸಹಧರ್ಮಿಣಿ ಪತ್ನಿ ಜಾಯೆ ದಾರಂ ಕ್ಷೇತ್ರಂ ॥
ಮಹಿಳೆ ಪುರಂಧ್ರಿ ಕಳತ್ರಂ ।
ಗೃಹಿಣಿ ಗೃಹಂ ಸಜ್ಜನಕ್ಕೆ ಪೆಸರಿಂತಿನಿಸುಂ ॥
ಪ್ರಿಯತಮೆ ಸುಭಗೆ ವಿಳಾಸಿನಿ ।
ದಯಿತೆ ಮನಃಪ್ರೀತೆ ರುಚಿರೆ ವಲ್ಲಭೆ ತಾಂ ಹೃ ॥
ತ್ಪ್ರಿಯೆ ಯಕ್ಕುಂ ನಯನ (ಮನಃ)
ಪ್ರಿಯೆ ಸುಂದರಿ ಸುತನು ರೂಪವತಿ ಯೆನೆ ಪಡೆಗುಂ ॥

ಪತ್ನಿಯನ್ನು ಗೌರವದಿಂದ ಸಂಬೋಧಿಸುವ ಅನೇಕ ಹೆಸರುಗಳನ್ನು ಈ ಪದ್ಯಗಳಲ್ಲಿ ಕಾಣಬಹುದು. ಸಜ್ಜನಳಾದ ಸ್ತ್ರೀಯನ್ನು ಸಾಧ್ವೀ, ಪತಿವ್ರತೆ, ಸತಿ ಎಂದು ಕರೆದರೆ, ಸಜ್ಜನಳಲ್ಲದಾಕೆಯನ್ನು ಕುಲಟೆ, ಜಾರೆ, ವಾರಂಗನೆ ಮುಂತಾದ ಪದಗಳಿಂದ ಸೂಚಿಸಲಾಗಿದೆ. ಹೆಣ್ಣು ಮಕ್ಕಳನ್ನು ಪ್ರೀತಿಯಿಂದ ಕುಮಾರಿಕೆ, ಕನ್ನಿಕೆ, ಗೌರಿ ಎಂದೇ ಕರೆಯುತ್ತಿದ್ದರು. ಮುಂದಿನ ಅನೇಕ ಪದ್ಯಗಳಲ್ಲಿ ಮಹಿಳೆ ಹಾದುಹೋಗುವ ಜೀವನ ಕ್ರಮಕ್ಕೆ ಅನುಗುಣವಾಗಿ – ಸುವಾಸಿನಿ, ವಿಧವೆ, ಗರ್ಭಿಣಿ, ಸೂತಿಕೆ ಎನ್ನಲಾಗುತ್ತಿತ್ತು. ಸಂಬಂಧ ವಾಚಕಗಳನ್ನೂ ಕೋಶಕಾರ ವಿವರಿಸಿರುವುದು ಹೀಗಿದೆ –

ಜನನಿ ಸವಿತ್ರಿ ಮಾತೃ ಸುಷು ತಾಯ್‌ಜನಕಂ ಪಿತೃವಪ್ಪ ತಂದೆ ನಂ ।
ದನ ತನುಜನ್ಮ ತೋಕ ಸುತ ಪುತ್ರ ತನೂಭವ ಸೂನು ನಾಮಕಂ ॥
ತನಯನಾದಲ್ಲಿ ಪೆಣ್ ದುಹಿತೃ ನಂದನೆ ಪುತ್ರಿ ತನೂಜೆ ಸೂತಿ ತಾ ।
ನೆನಿಕು ಮಪತ್ಯಶಬ್ದಮದು ಕೇವಲಮಾತ್ಮಜವರ್ಗವಾಚಕಂ ॥

ಸೋದರ್ಯಂ ಭ್ರಾತೃ ಸಮಾ ।
ನೋದರ್ಯಂ ಸೋದರಂ ಸಗರ್ಭ್ಯಂ ಪೆಣ್ಗೆ ॥
ಸಾದಂದು ಸ್ವಸೃ ಸಹಜೆ ಸ ।
ಹೋದರಿ ಸಹಜಾತೆ ಭಗಿನಿ ಯೆನೆ ಪೆಸ (ರಕ್ಕುಂ) ॥

ಮಗಳಮಗಂ ದೌಹಿತ್ರಂ ।
ಮಗನ ಮಗಂ ನಪ್ತೃ ಪಾತ್ರ ನೆನಿಕುಂ ಸ್ನುಷೆ ತಾಂ ॥
ಮಗನ ವಧು ಮಗಳೆ ವರನುಂ ।
ನೆಗಳ್ಗುಂ ಜಾಮಾತೃವೆಂಬ ಸಂಜ್ಞಾಂತರದಿಂ ॥

ಈ ಭಾಗದಲ್ಲಿ ಕೋಶಕಾರನು ಅನೇಕ ಸಂಬಂಧವಾಚಕಗಳನ್ನು ವಿವರಣೆಯೊಂದಿಗೆ ನೀಡಿದ್ದಾನೆ – ನಂಬಿಕೆಯ ಸೋದರ ಮಾತುಲ, ತಂದೆಯ ತಂದೆ ಪಿತಾಮಹ, ತಾಯಿಯ ತಂದೆ ಮಾತಾಮಹ, ನವವಯಸಂ ತರುಣಂ, ಯಾತಯಾಮಂ ವೃದ್ಧಂ ಮುಂತಾದವು. ನೆಂಟರು, ನಾಲ್ಕು ಆಶ್ರಮಗಳು ಮತ್ತು ಅವುಗಳ ಕಾರ್ಯವನ್ನು ಈ ಭಾಗದಲ್ಲಿ ಪ್ರಸ್ತಾಪಿಸಲಾಗಿದೆ.

ಬಂಧು ಸನಾಭಿ ಸಗೋತ್ರಂ ।
ಬಾಂಧವ ನಾತ್ಮೀಯ ನೆನಿಸುಗುಂ ಜ್ಞಾತಿ ಯವಂ ॥
ಬಂಧುಸಮೂಹಂ ಕೃತ ಸಂ ।
ಬಂಧಂ ಬಂಧುತೆ ನಿಜಾಪ್ತವರ್ಗಂ ನಂಟರ್ ॥

ಸಲೆ ಭೈಕ್ಷ ವಶನ ಮಜಿನಂ ।
ಪಲಾಶದಂಡಂ ಜಟಾಳಿ ಕೌಪೀನಂ ಮೇ ॥
ಖಳೆ ಯೆಂಬಿಂತಿವೆ ಪೇಟ್ದಾ ।
ತ್ಮಲಿಂಗದೊಳ್ ಬ್ರಹ್ಮಚಾರಿ ವರ್ಣಿ ಯೆನಿಕ್ಕುಂ ॥

ದೇವಾತಿಥಿ ಪಿತೃಪೂಜಕ ।
ನಾವಿರ್ಭೂತ ಸ್ವಕೀಯ ಕರ್ಮಾಜೀವಂ ॥
ಪಾವನಚರಿತಂ ಸಕಲಗು ।
ಣಾವಸಥಂ ಗೃಹಸ್ಥ ನಂತವನಕ್ಕುಂ ॥

ಯುವಕನೊಬ್ಬ ಕೌಪೀನ, ದಂಡವನ್ನು ಹಿಡಿದಿದ್ದರೆ ಆತ ಬ್ರಹ್ಮಚಾರಿಯೆಂದು ಸುಲಭವಾಗಿ ತಿಳಿದುಬಿಡುತ್ತದೆ, ಯಾರು ದೇವತೆಗಳನ್ನು, ಅತಿಥಿಗಳನ್ನು, ಪಿತೃಗಳನ್ನು ಪೂಜಿಸುತ್ತಾನೊ ಅವನು ಸದ್ಗೃಹಸ್ತ ಎನಿಸಿಕೊಳ್ಳುತ್ತಾನೆ. ವೃದ್ಧರಾದನಂತರ ಅವರು ವಾನಪ್ರಸ್ತಕ್ಕೆ ಹೋಗುವ ಒಂದು ಉತ್ತಮ ಸಂಸ್ಕಾರವನ್ನು ನಾವಿಲ್ಲಿ ಕಾಣಬಹುದು.

ದ್ವಿಜ ವಿಪ್ರ ಭೂಮಿದೇವಾ ।
ಗ್ರಜನ್ಮ ಬಾಡವ ಸಮಾಹ್ವಯಂ ಬ್ರಾಹ್ಮಣ ನಾ ॥
ದ್ವಿಜರೊಳಗೆ ಜಾತಿಮಾತ್ರೋ ।
ಪಜೀವಿಯುಂ ಬ್ರಾಹ್ಮಣವ್ರತಂ ತಾವೆಂಬರ್ ॥

ಪಿತೃದಾನ ಮದು ನಿವಾಪಂ ।
ಪ್ರತಿನಿಯತಂ ಶಾಸ್ತ್ರವಿಹಿತಕರ್ಮಂ (ಶ್ರಾದ್ಧಂ)
ಪಿತೃಸವನ ಮುಪಸ್ನಾತಂ ।
ಮೃತದಿನದೊಳ್ಮಾಳ್ಪುದೌರ್ಧ್ವದೈಹಿಕ ಮಕ್ಕುಂ ॥

ಈ ಭಾಗದಲ್ಲಿ ವರ್ಣಾಶ್ರಮ ಧರ್ಮವನ್ನು ಕುರಿತು ವಿವೇಚಿಸಲಾಗಿದೆ. ಬ್ರಾಹ್ಮಣ ಎನ್ನುವ ಪದಕ್ಕೆ ಇರುವ ಅರ್ಥ ಬ್ರಹ್ಮ ವರ್ಚಸ್ಸನ್ನು

ಹೊಂದಿರುವವನು, ವೇದಗಳನ್ನು ತಿಳಿದು ವೇದಾಂತವನ್ನು ಅರ್ಥಮಾಡಿಕೊಂಡು, ಯಾಗ ಯಜ್ಞಗಳನ್ನು ಮಾಡುತ್ತಾ, ಅಧ್ಯಯನ ಮತ್ತು ಅಧ್ಯಾಪನವನ್ನು ಸದಾ ಮಾಡುತ್ತಿರುವವನು ಮತ್ತು ಪಿತೃಕರ್ಮದಲ್ಲಿ ನಿರತನಾಗಿರುವವನು ಎಂದು. ಪಿತೃಗಳನ್ನು ನೆನೆಯುವುದು ಎಂದರೆ ಪ್ರತಿ ಕುಟುಂಬದ ಚರಿತ್ರೆಯನ್ನು ನಿರ್ಮಿಸಿದ ಹಿರಿಯರನ್ನು ಗೌರವಿಸುವುದು ಎಂದು, ಇದಲ್ಲದೆ ಮೃತ ಅವಸ್ಥೆಯನ್ನು, ಪರಲೋಕದ ಸ್ಥಿತಿಯನ್ನು ಹಾಗೂ ಧರ್ಮ, ಅರ್ಥ, ಕಾಮ, ಮೋಕ್ಷಗಳನ್ನು ಪಡೆಯುವುದನ್ನೂ ಇಲ್ಲಿ ವಿಶ್ಲೇಷಿಸಲಾಗಿದೆ.

ಅವನೀಪತಿ ರಾಜಂ ಪಾ ।
ರ್ಥಿವಂ ನೃಪಂ ಕ್ಷತ್ರಿಯಂ ಜನಾಧಿಪ ನರಸಂ ॥
ಭುವನೈಕವಲ್ಲಭಂ ಚ ।
ಕ್ರವರ್ತಿ ಮೂರ್ಧಾಭಿಷಕ್ತ ನವನಧಿರಾಜಂ ॥

ಭಟ್ಟಿನಿಯರ್ ನೃಪಸತಿಯರ್ ।
ಪಟ್ಟಮಹಾದೇವಿ ಯಗ್ರಮಹಿಷಿ ಯೆನಿಕ್ಕುಂ ॥
ಪಟ್ಟಕ್ರಮಕ್ಕೆ ಮುನ್ನಂ ।
ಪಟ್ಟದ ನೃಪತನಯನನ್ತವಂ ಯುವರಾಜಂ ॥

ಕೃಷಿಕಂ ಕ್ಷೇತ್ರಾಜೀವಂ ।
ಕೃಷೀವಳಂ ಕರ್ಷಕಂ ಕುಟುಂಬ ಯೆನಿಕ್ಕುಂ ॥
ಕೃಷಿ ತತ್ಕರ್ಮ ಮದಕ್ಕುಂ ।
ವಿಷಯಂ ಕೇದಾರ ಭೂಮಿ ವಪ್ರಂ ಕ್ಷೇತ್ರಂ ॥

ಈ ಭಾಗದಿಂದ ಕೋಶಕಾರ ವಿವಿಧ ವೃತ್ತಿಗೆ ಸಂಬಂಧಿಸಿದಂತಹ ಪದಗಳನ್ನು ಚರ್ಚಿಸಿದ್ದಾನೆ. ರಾಜನಿಗೆ ಮಂತ್ರಿಯಾಗಿರುವವನು ಬುದ್ಧಿ ಸಚಿವ, ಅಡುಗೆ ಮಾಡುವವ, ಬಾಣಸಿಗ, ಅಂತಃಪುರದಲ್ಲಿ ಕಾರ್ಯನಿರ್ವಯಿಸುವವನು ಕಂಚುಕಿ, ದ್ವಾರನಿಯುಕ್ತನಾದವನು ದೌವಾರಪಾಳಕ, ಶಾಸನಗಳನ್ನು ಬರೆಯುವವನು ಲಿಪಿಕಾರ, ಮಾಲಿ, ಕುಂಭಕಾರ, ವಣಿಜ, ಜಾಲಿಕ, ಸೂತ, ವೈತಾಳಿಕ, ಸ್ತುತಿಪಾಠಕ, ಮಣಿಕಾರ, ಲೋಹಕಾರ, ನೈಕಾಗಾರಿಕಂ, ಚಿತ್ರಕಾರ, ಬೇಟೆಕಾರ, ಇಂದ್ರಜಾಲಿಕ ಮುಂತಾದ ಅನೇಕ ವೃತ್ತಿಗಳ ಆಚರಣೆಮಾಡುವವರನ್ನು ಕೃತಿ ದಾಖಲಿಸಿದೆ.

ಮುಂದಿನ ವರ್ಗ **ದೇಹಾವಯವಾದಿವರ್ಗಂ** – ಅಭಿದಾನ ವಸ್ತು ಕೋಶದ ವಿಶೇಷವೆಂದರೆ ಇದು ಎಲ್ಲ ವಿಷಯಗಳನ್ನೂ ಒಳಗೊಂಡಿರುವುದು, ಅದಕ್ಕೆ ಉತ್ತಮ ಉದಾಹರಣೆ ಈ ವರ್ಗ. ದೇಹದ ಅವಯವಗಳನ್ನು 42 ಪದ್ಯಗಳಲ್ಲಿ ವಿಸ್ತಾರವಾಗಿಯೇ ನೀಡಲಾಗಿದೆ –

ಉರಂ ವತ್ಸಂ ವಕ್ಷಂ ಹೃದಯ ಮೆದೆ ಮುಯ್ಯಂಸಯುಗಳಂ ।
ಕೊರಳ್ ಕಂಠ ಗ್ರೀವಾಗಳ ನಿಗರಳಂ ಕಂಧರವೆನಲ್ ॥
ಕರಂ ದೋ ರ್ಬಾಹ್ವಾಖ್ಯಂ ಭುಜಿ ಭುಜ ಮವೇಕಾರ್ಥವಚನಂ ।
ಕರಾಗ್ರಂ ತಾಂ ಹಸ್ತಂ ಶಯಸಮಭಿದಂ ಪಾಣಿ ಕರಮುಂ ॥

ಈಕ್ಷಣ ನಯನ ವಿಲೋಚನ ।
ಚಕ್ಷುರ್ನೇತ್ರಾಂಬಕಾಕ್ಷಿಗಳ್ ದೃಜ್ಞಾಮಂ ॥
ವೀಕ್ಷಣಮಕ್ಕುಂ ದೃಷ್ಟಿ ಕ ।
ಟಾಕ್ಷಂ ಕೇಕರ ಮಪಾಂಗ ಮೆನಿಕುಂ ಕಡೆಗಣ್ ॥

ಪ್ರತಿ ದೇಹದ ಭಾಗವನ್ನು ಹೇಳುವಾಗಲೂ ಅತ್ಯಂತ ಸೂಕ್ಷ್ಮವಾಗಿ ಗಮನಿಸಲಾಗಿದೆ ಎನ್ನುವುದು ಈ ವರ್ಗದಲ್ಲಿ ವಿದಿತವಾಗುತ್ತದೆ. ಒಂದೆರೆಡು ಉದಾಹರಣೆಗಳನ್ನು ನೋಡಬಹುದಾದರೆ – ತಲೆರೋಮಂ – ಕೇಶ, ಅಳಕಗಳ್, ಕುರುಳುಗಳ್, ಬಾಳಕರ ಶಿಖೆ ಶಿಖಂಡಂ, ನಯನರೋಮಂ – ಪಕ್ಷ್ಮಂ ಇತ್ಯಾದಿ. ಅದೇ ರೀತಿಯಲ್ಲಿ ಮನ, ಚಿತ್ತ, ಅಂತಃಕರಣ, ಆತ್ಮವನ್ನು ವಿಶ್ಲೇಷಿಸಲಾಗಿದೆ.

ರೋಗಾತಂ (ಕಂ) ವ್ಯಾಧಿ ರು ।
ಜಾ ಗದ ಮುಪತಾಪನಾಮ ಮಾಮಯಕಕ್ಕುಂ ॥
ರೋಗಾರ್ತ ನಾತುರಂ ತಾಂ ।
ರೋಗವಿನಿರ್ಮುಕ್ತ ನಪ್ಪನವಮಲ್ಲಾಘಂ ॥

ವಿಕಲಾಂಗಂ ಪೋಗಂಡಂ ।
ಕುಕರಂ ಕುಣಿ ಪಂಗು ಪೆಟಿವ ನೆನಿಕುಂ ಖಂಜಂ ॥
ವಿಕೃತಾಂಘ್ರಿಯುತಂ ನತನಾ ।
ಸಿಕ ನವಟೀಟಂ ವ್ಯಪೇತನಾಸಂ ವಿಗ್ರಂ ॥

ಎಲುಬಿನಿಂದ ಮೊದಲ್ಗೊಂಡು ವಿಕಲಾಂಗತೆಯವರೆಗೆ ಎಲ್ಲವನ್ನು ಕೋಶ ತಿಳಿ ಹೇಳುತ್ತದೆ. ದೇಹಕ್ಕೆ ಬರಬಹುದಾದ, ಅದರಲ್ಲೂ ಯಾವ ಭಾಗಕ್ಕೆ ಯಾವ ರೋಗ ಬರಬಹುದು ಎನ್ನುವ ಸೂಚನೆ ಇದ್ದು,

ಅವೆಲ್ಲವನ್ನು ತೆಗೆದುಹಾಕಬಲ್ಲವನು ವೈದ್ಯ ಎಂದು ಈ ವರ್ಗವನ್ನು ಮುಕ್ತಾಯಮಾಡುತ್ತಾನೆ. ಮುಂದಿನ ವರ್ಗ ಸಾಮಾನ್ಯವಾಗಿ ಎಲ್ಲರಿಗೂ ಅಗತ್ಯವಿರುವ **ಭೂಷಣಾದಿವರ್ಗಂ**. 40 ಪದ್ಯಗಳಲ್ಲಿ ವಿವಿಧ ಬಗೆಯ ಭೂಷಣಗಳನ್ನು, ಅವುಗಳ ರೀತಿಯನ್ನು ಕೋಶಕಾರ ಪ್ರಸ್ತುತಪಡಿಸಿದ್ದಾನೆ.

ಅಂಗದ ಮೆನೆ ಕೇಯೂರ ಮ ।
ದುಂಗುರ ಮೂರ್ಮಿಕೆಯು ಮಂಗುಳೀಯಕ ಮಕ್ಕುಂ ॥
ಸಂಗತಲಿಖಿತಾಕ್ಷರಚಯ ।
ಮಂಗುಳಿಮುದ್ರಿಕೆ ಯೆನಿಪ್ಪುದಕ್ಕುಂ ಪೆಸರಿಂ ॥

ತಿಳಕಂ ತಮಾಲಪತ್ರಂ ।
ಲಲಾಟಕಾಖ್ಯಂ ಲಲಾಮಕಾದ್ಯಂ ಪತ್ರಾಂ ॥
ಗುಳಿ ಪತ್ರಲೇಖೆ ಚರ್ಚಾ ।
ನುಲೇಪನಂ ಸ್ಥಾಸಕಂ ಪ್ರಬೋಧನ ಮಕ್ಕುಂ ॥

ಉಂಗುರದ ಮೇಲೆ ಅಕ್ಷರಗಳನ್ನು ಮುದ್ರಿಸುತ್ತಿದ್ದ ಪರಿಪಾಠ ಕ್ರಿ.ಶ. 1145ರಲ್ಲಿಯೇ ಇತ್ತು ಎನ್ನುವುದು ಗಮನಿಸಬೇಕಾದ ಅಂಶ, ಮೈಗೆ ಪೂಸುವ ಸುಗಂಧಕ್ಕಾಗಿ ಕಸ್ತೂರಿಯನ್ನು, ಕರ್ಣಪೂರದಂತಹ ಆಭರಣಗಳ ಬಳಕೆ, ಮೇಲ್ಹೊದಿಕೆಯನ್ನು ದುಕೂಲವೆಂದು ಕರೆಯಲಾಗುತ್ತಿತ್ತು. ರಂಗ ಪರಿಕರದಲ್ಲಿ ಗೀತ, ವಾದ್ಯಗಳನ್ನು ಬಳಸಿ ಲಾಸ್ಯ ಮತ್ತು ತಾಂಡವ ನೃತ್ಯಗಳನ್ನು ಆಡಲಾಗುತ್ತಿತ್ತು. ತಾಳ ಪದಕ್ಕೆ ಸಮಾನವಾಗಿ ಲಯವೆಂಬ ಶಬ್ದವನ್ನು ಬಳಸಿದರೆ, ವೀಣೆಯಲ್ಲಿ ವರಿವಾದಿನಿ, ವಲ್ಲಕಿ, ವಿಪಂಚಿ ಎನ್ನುವ ವೀಣೆಗಳು ಬಳಕೆಯಲ್ಲಿದ್ದವು.

ತತ ಮೆಂಬುದು ತಂತ್ರಿಯೊಳ ।
ನ್ವಿತ ಮಾದುದು ಸುಷಿರ ಮೆಂಬುದದು ವಂಶಾದ್ಯಂ ॥
ವಿತತ ಮವನದ್ಧ ಚರ್ಮಾ ।
ವೃತಂ ಘನಂ ಕಾಂಸ್ಯ ವಿನಿತೆ ವಾದ್ಯ ವಿಭೇದಂ ॥

ಮುರಜಂ ಮೃದಂಗ ವಾನಕ ।
ಮುರುಪವಹಂ ಡಿಂಡಿಮಾಭಿಧಾನಂ ಪಟಿವಂ ॥
ಪಿರಿದಪ್ಪ ಭೇರಿ ದುಂದುಭಿ ।
ಪರಿಶೇಷಂ ವಾದ್ಯ ಮಿವಱಿಕೊಳೊಳಪೊಕ್ಕಿರ್ಕುಂ ॥

ನಾದಂ ಶಬ್ದಂ ಧ್ವಾನಂ ।

ಹ್ರಾದಂ ಸ್ವಾನಂ ರವಂ ಸ್ವರಂ ಘೋಷಂ ತ ॥

ದ್ಭೇದಂ ವಚನಂ ವ್ಯಾಹಾ ।

ರೋದೀರಣ ಕಥನ (ಭಾಷ) ಣಾದಿಕ ಮಕ್ಕುಂ ॥

ವಾದ್ಯಗಳನ್ನು ತತ, ಸುಷಿರ ಮತ್ತು ಅವನದ್ಧವೆಂದು ವಿಭಾಗಿಸಲಾಗಿದೆ, ತತವೆಂದರೆ ತಂತಿಗಳನ್ನು ಬಳಸಿ ಮಾಡಿರುವ ವಾದ್ಯ, ಸುಷಿರವೆಂಬುದು ಗಾಳಿಯನ್ನು ಬಳಸಿಕೊಂಡು ನುಡಿಸುವ ವಾದ್ಯ, ಅವನದ್ಧವೆಂದರೆ ಚರ್ಮವನ್ನು ಬಳಸಿಕೊಂಡು ತಾಳವನ್ನು ತೋರಿಸಲು ನಿರ್ಮಾಣವಾಗಿರುವ ಮೃದಂಗ, ಮುರಜ ಮುಂತಾದ ವಾದ್ಯಗಳು. ಲೋಹದಿಂದ ನಿರ್ಮಾಣವಾದ ತಾಳದಂತಹ ವಾದ್ಯಗಳು ಬಳಕೆಯಲ್ಲಿವೆ. ಸಂಗೀತದ ಹೃದಯ ಭಾಗವೇ ನಾದ, ನಾದೋಪಾಸನೆಯೇ ಸಂಗೀತಗಾರರ ಮುಖ್ಯಗುರಿ. ಸ್ತೋತ್ರ, ಸ್ತವನ, ಕೀರ್ತನೆ, ಝೇಂಕಾರ ಮುಂತದಾವುಗಳ ವಿವರಗಳು ಈ ಭಾಗದಲ್ಲಿ ದೊರೆಯುತ್ತವೆ. ಮುಂದಿನ ವರ್ಗ **ಸಮರಾದಿಸಂಪ್ರಕೀರ್ಣವರ್ಗಂ,** ಈ ವರ್ಗದಲ್ಲಿ ಕೋಶಕಾರ ಸಮರಕಲೆಯನ್ನು ಕುರಿತು ಮತ್ತು ಸಮರದಲ್ಲಿ ಬಳಕೆಯಾಗುವ ಆಯುಧಗಳನ್ನು ಮೊದಲ್ಗೊಂಡು ಯುದ್ಧ ಪ್ರಾಣಿಗಳವರೆಗೆ ಎಲ್ಲ ವಿವರಗಳನ್ನು ತಂದಿದ್ದಾನೆ.

ಸಮರಾಂಗಣದಿಂ ತೊಲಗದ ।

ಸಮ (ಯರ್ ಸಂ) ಸಪ್ತಕರ್ ಬಲಂಗಳ್ ತಾಮ ॥

ಕ್ರಮದಿಂ ತಳ್ತಿಱೆವುದು (ತಾಂ)

ತುಮುಳ ರಣಂ ಬಾಹುಯುದ್ಧ ಮಾರಣಯುದ್ಧಂ ॥

ಅಸಿ ಖಡ್ಗಂ ಬಾಳ್‌ಹಾಸಂ ।

ಪೆಸರಿಂ ಕೌಕ್ಷೇಯಕಂ ಕೃಪಾಣಾಹ್ವಂ ಮ ॥

ತ್ತಸಿ ನಿಸ್ತ್ರಿಂಶಂ ಕರವಾ ।

ಲ ಸಾಯಕಂ ರಿಷ್ಟ ಮಂಡಲಾಗ್ರಂ ಖಳ್ಗಂ ॥

ಧನು ಕೋದಂಡಂ ಬಾಣಾ ।

ಸನ ಮಸ್ತ್ರಂ ಕಾರ್ಮುಕಾಖ್ಯ ಮದು ಚಾಪಂ ಸಿಂ ॥

ಜಿನಿ ಜೀವೆ ಮೌರ್ವಿ ಗುಣ ಮೆಂ ।

ಬಿನಿತುಂ ಜ್ಯಾನಾಮ ಮಟನಿ ಕೊಪ್ಪೆಱೆಗದಱಿಕೊಳ್ ॥

ಯುದ್ಧಕ್ಕೆ ಸಮರ, ಸಂಗ್ರಾಮ, ರಣ ಮುಂತಾದ ಹೆಸರುಗಳಿವೆ. ಯುದ್ಧವನ್ನು ತುಮುಳ, ಬಾಹು ಮತ್ತು ಮಾರಣ ಯುದ್ಧದ ರೀತಿಯಲ್ಲಿ ಮಾಡುತ್ತಿದ್ದರು, ಯುದ್ಧ ಭೂಮಿಯಿಂದ ವಿಶ್ರಾಂತಿಗಾಗಿ ಹೋಗದೇ ಯುದ್ಧ ಮಾಡುವವರನ್ನು ಸಮ ಸಪ್ತಕರು ಎಂದು ಕರೆಯಲಾಗುತ್ತಿತ್ತು. ಯುದ್ಧ ಮಾಡುವವರ ಧ್ವಜ ಅತಿ ಮುಖ್ಯವಾಗಿರುತ್ತಿತ್ತು ಮತ್ತು ಅಕ್ಷೋಹಿಣಿ ಸೇನೆ ಎನ್ನುವುದು ಅತ್ಯಂತ ಪ್ರಚಲಿತವಾಗಿತ್ತು –

ಒಂದು ಸಮಾಜ ವೊಂದು ತೇರ್ ಮೂರಶ್ವಮಯ್ದು ಕಾಲಾಳ್ಗಳ್ ಪತ್ತಿಯಕ್ಕುಂ ।
ಸಂದ ಪತ್ತಿ ಮೂರಾಗೆ ಸೇನಾಮುಖಂ, ಆ ಮೂರು ಗುಲ್ಮಂ, ಮೂರು ಗುಲ್ಮ ।
ಕ್ಕೊಂದು ಗಣಂ, ಅವು ಮೂರು ವಾಹಿನಿ, ತತ್ ಪ್ರಯಂ ಪೃತನಾಖ್ಯೆ, ಪೃತನೆಗಳ್ ಮೂ ।
ರೊಂದಿ ತೋರಿ ಚಮು ಮೂರ ನೀಕಿನಿ ಪತ್ತನೀಕಿನಿಯಕ್ಷೌಹಿಣಿಯೆನಿಕ್ಕುಂ ।

	ಪತ್ತಿ	ಸೇನಾಮುಖ	ಗುಲ್ಮ	ಗಣ	ವಾಹಿನಿ	ಪೃತನಾ	ಚಮು	ಅನೀಕಿನಿ	ಅಕ್ಷೋಹಿಣಿ
ಆನೆ	೧	೩	೯	೨೭	೮೧	೨೪೩	೭೨೯	೨೧೮೭	೨೧೮೭೦
ತೇರು	೧	೩	೯	೨೭	೮೧	೨೪೩	೭೨೯	೨೧೮೭	೨೧೮೭೦
ಕುದುರೆ	೩	೯	೨೭	೮೧	೨೪೩	೭೨೯	೨೧೮೭	೬೫೬೧	೬೫೬೧೦
ಕಾಲಾಳು	೫	೧೫	೪೫	೧೩೫	೪೦೫	೧೨೧೫	೩೬೪೫	೧೦೯೩೫	೧೦೯೩೫೦

ಖಡ್ಗಕ್ಕಿರುವ ಅನೇಕ ಹೆಸರುಗಳು, ಬಿಲ್ಲು ಬಾಣಗಳಿಗಿರುವ ಸಮಾನಾರ್ಥಕ ಶಬ್ದಗಳು, ರಥ ಬಂಡಿ ಚಕ್ರದ ವಿವರಗಳು ಶಾಸ್ತ್ರದ ಪ್ರಕಾರವೇ ಮೂಡಿಬಂದಿದೆ. ಆನೆ, ಕುದುರೆ, ಅವುಗಳ ಪಡೆ ಮತ್ತು ವ್ಯೂಹ ರಚನೆಯನ್ನು ಕುರಿತು ನಾಗವರ್ಮ ವಿವರಗಳನ್ನು ನೀಡಿದ್ದಾನೆ. ಮುಂದಿನ ವರ್ಗ **ಪಶುವರ್ಗಂ,** ಇದೊಂದು ಚಿಕ್ಕ ಅಧ್ಯಾಯಾವಾಗಿದ್ದು 14 ಪದ್ಯಗಳಲ್ಲಿ ಪಶುಗಳ ವಿವರಗಳನ್ನು ಕೋಶಕಾರ ತಂದಿದ್ದಾನೆ.

ಪಸು ಗವ್ಯಸ್ರಾ (ಗೌ) ಸುರ ।
ಭಿ ಸೌರಭೇಯೀ ಸಮಾಖ್ಯೆ ವರ್ತಿಸುಗುಂ ಗೃ ॥
ಷ್ಟಿ ಸಕೃತ್ರಸೂತಿ ಬಹು (ಳ) ।
ಪ್ರಸೂತಿ ತಾನದು ವರೇಷ್ಟುಕಾಹ್ವಯಮಕ್ಕುಂ ॥

ಅವಿ ಮೇಷ ಪುರಭ್ರಂ ಮೇಂ ।
ಡ ವದೇಳಕ ವೃಷ್ಣ್ಯುರಣ(ಕ) ಮೇಕಾರ್ಥಂ ಛಾ ॥
ಗ ವಜಂ ಮೇಷಂ ಬಸ್ತಭ ।
ಗವೆಂಬಿವೆ ಛಗಳ (ಕ) (ನಾಮವಾಚಿಗಳಕ್ಕುಂ) ॥

ಗೋಮಹಿಷ ಪ್ರಭೃತಿ ಪಶು ।
ಸ್ತೋಮಂ ಪ್ರಧನಂ ಧನಾಹ್ವಯಂ ಜೀವಧನಂ ॥
ಗೋಮಿ ಬಹುಗೋಧನಂ ಗೋ ।
ಸ್ವಾಮಿ ಗವಾಧಿಪತಿ ತಾನವಂ ಗೋವಳಿಗಂ ॥

ವೃಷಭನಿಗಿರುವ ವಿವಿಧ ಹೆಸರುಗಳ ಜೊತೆಗೆ ಅದರ ಶೃಂಗ ಎಂದರೆ ಹಿಣಿಲನ್ನು ಕುರಿತು ನಾಗವರ್ಮ ದಾಖಲಿಸಿದ್ದಾನೆ. ಪುಚ್ಛಕ್ಕೆ ಇರುವ ಲಾಂಗುಲವೆಂಬ ಹೆಸರು, ಹಸು, ಗೋಧನ, ಗೋವ್ರಜಗಳನ್ನು ಹೇಳಿ ಶ್ವಾನ, ಮೇಷವನ್ನು ಹೇಳಿ, ಗೋಮಯ ಅದರಿಂದಾಗುವ ಭಸ್ಮದ ವಿಧಗಳನ್ನು ತಿಳಿಸಿದ್ದಾನೆ. ಪಶುಧನವೆ ಜೀವಧನ, ಗೋವುಗಳಿಗೆ ಅಧಿಪತಿಯಾದವನು ಗೋವಳಿಗ ಎನ್ನುವ ವಿವರಗಳು ಇಲ್ಲಿ ದೊರೆಯುತ್ತವೆ.

ಮುಂದಿನ ವರ್ಗ **ಧಾನ್ಯವರ್ಗಂ** – 22 ಪದ್ಯಗಳಲ್ಲಿ ಧಾನ್ಯವನ್ನು ನಾಗವರ್ಮ ವಿವರಿಸಿದ್ದಾನೆ. **ಕ್ಷೀರಂ ದುಗ್ಧಂ ಪಾಲ್ ದಧಿ । ಸಾರಂ ಹಯ್ಯಂಗವೀನ ಮೆನೆ ನವನೀತಂ ॥ ಗೋರಸ ದಂಡಾಹತೆ ಮಥಿ । ತಾರಿಷ್ಟೋದಶ್ವಿದಾಹ್ವ ಮಂತದು ತಕ್ರಂ ॥** ವಿಶೇಷವೆಂದರೆ ಹಾಲು, ಮೊಸರು, ಬೆಣ್ಣೆ, ತುಪ್ಪ ಮತ್ತು ಇವುಗಳಿಂದ ಮಾಡಿದ ಖಾದ್ಯ ಪದಾರ್ಥಗಳನ್ನು, ಕಳ್ಳನ್ನೂ ಸೇರಿಸಿದಂತೆ ಕೋಶಕಾರ ತಿಳಿಸಿದ್ದಾನೆ.

ಅರಳಾಗಿ ಪುರಿದ ಧಾನ್ಯೋ ।
ತ್ಕರಮಂತವೆ ಲಾಜೆ ಪೃಥುಕ ಮೆನಲವನಕ್ಕುಂ ॥
ದರಪಕ್ವಮದಭ್ಯೂಷಂ ।
ಪರಿಭೃಷ್ಟಂ ಯವ ಮದಜೆಗೆ ಧಾನಾ ನಾಮಂ ॥

ತುವರಂ ತಿಕ್ತಂ ಮಧುರಂ ।
ಲವಣಂ ಕಟು ಕಾರಮೆಂದು ರಸಮಾಱು ತೆಱಂ ॥
ನವವಿಧ ಮಕ್ಕುಂ ಶೃಂಗಾ ।
ರ ವೀರ ರೌದ್ರಾದಿ ಭೇದದಿಂ ನಾಟ್ಯರಸಂ ॥

ಅಲಸಂದೆ ರಾಜಾಮಾಷಂ ।
ಕುಳುತ್ಥಕಂ ಕೊಳ್ಳು ಮಸೂರಕಂ ಮಂಗಲ್ಯಂ ॥
ತಿಳ ಮೆಳ್ಳು ವನಜ ಮದು ಜ ।
ತ್ತಿಳ ಮತಸೀ ನಾಮಮುಮೆ ಕುಸುಮೆ ಕುಸುಂಬಂ ॥

ಅಡುಗೆಯಲ್ಲಿ ಅನೇಕ ಬಗೆಯ ರಸಗಳು – ಉಪ್ಪು, ಖಾರ, ಕಹಿ, ಮಧುರ, ಹುಳಿ ಎಲ್ಲವು ಇರುತ್ತಿದ್ದವು. ನಾಗವರ್ಮನ ಕಾಲದಲ್ಲಿಯೇ ಜೋಳ, ಜೋಳದ ಅಡಿಗೆಗಳು, ಅಲಸಂದೆ ರಾಜಮಾ, ಈಗ ಹೆಚ್ಚು ಬಳಸುವ ಮಸೂರ್, ಬೇಳೆ, ಸಾಸಿವೆ, ಸೊಪ್ಪುಗಳಿಂದ ಮಾಡಬಹುದಾದಂತಹ ಪಾಕ ವೈವಿಧ್ಯವೂ ಇಲ್ಲಿದೆ. ಅಕ್ಕಿಯಿಂದ ಮಾಡುವ ಅಕ್ಷತೆ, ಹಿಟ್ಟಿನ ಪ್ರಸ್ತಾಪವೂ ಇಲ್ಲಿ ಆಗಿದೆ. ಇದರೊಂದಿಗೆ ನಾಗವರ್ಮ ಈ ಕಾಂಡವನ್ನು ಮುಕ್ತಾಯಮಾಡಿದ್ದಾನೆ.

ದ್ವಿತೀಯಂ – ಸಾಮಾನ್ಯಕಾಂಡಂ
ಪ್ರಕೃತಿ ವಿಶೇಷ್ಯಾಧೀನಂ ।
ಪ್ರಕೀರ್ಣವರ್ಗಂ ಕ್ರಿಯಾಗುಣ ದ್ರವ್ಯಪರಂ ॥
ಪ್ರಕಟಾರ್ಥಮಿದೆನೆ ಸಾಮಾ ।
ನ್ಯಕಾಂಡಮಂ ಸಪ್ರಪಂಚಮಂ ವರ್ಣಿಸುವೆಂ ॥

ಎರಡನೆಯ ಕಾಂಡದಲ್ಲಿ ಮೊದಲನೆಯ ವರ್ಗ **ವಿಶೇಷಣ ವರ್ಗಂ**, ಇದರಲ್ಲಿ ಭಾಷೆಯಲ್ಲಿ ಬಳಸಬಹುದಾದ ಎಲ್ಲ ವಿಶೇಷಣಗಳನ್ನೂ 72 ಪದ್ಯಗಳಲ್ಲಿ ಸುದೀರ್ಘವಾಗಿ ನಾಗವರ್ಮ ಚರ್ಚಿಸಿದ್ದಾನೆ.

ಆರಂಭದಲ್ಲಿಯೇ ಈ ಕಾಂಡದಲ್ಲಿ ಚರ್ಚಿಸುವ ವಿಷಯಗಳನ್ನು ಕಂದ ಪದ್ಯದಲ್ಲಿ ಉಲ್ಲೇಖಿಸಿದ್ದಾನೆ. ಚರ್ಚಿಸಿರುವ ಎಲ್ಲ ವಿಶೇಷಣಗಳು ಕೂಡ, ಭಾಷೆ ಮತ್ತು ಕಾವ್ಯಾಭ್ಯಾಸದ ದೃಷ್ಟಿಯಿಂದ ಮುಖ್ಯವಾಗಿರುವಂತಹುದೆ ಆಗಿದೆ.

ಗ್ರಾಮ ಸಮೂಹಂ ಗ್ರಾಮತೆ ।
ಧೂಮಾವಳಿ ಧೂಮ್ಯೆ ಜನತೆ ಜನಸಮಿತಿ ಖಲ ॥
ಸ್ತೋಮಮಂ ಖಲ್ಯಾಖ್ಯಂ ಗಣೆ ।
ಕಾಮಂಡಳಿ ಸಮುಚಿತೋಕ್ತಿಯಿಂ ಗಾಣಿಕ್ಯಂ ॥

ದಶ ದಶ ಶತಂ ಸಹಸ್ರಂ ।
ದಶಶತ ವಯುತಂ ಸಹಸ್ರದಶಕಂ ಲಕ್ಷಂ ॥
ದಶಗುಣ ವಯುತಂ ಪ್ರಯುತಂ ।
ದಶಲಕ್ಷಂ ಕೋಟ ತಾಂ ದಶಘ್ನಂ ನಿಯುತಂ ॥

ಗಣಿತಂ ಸಂಖ್ಯಾತಂ ಬಹು ।
ಗಣ ಶಬ್ದಂ ಭೇದದಲ್ಲಿ ಸಂಖ್ಯೆ ಯದಕ್ಕುಂ ॥
ಗಣನೀಯಂ ಸಂಖ್ಯೇಯಂ ।
ಗಣನಾತಿಕ್ರಾಂತ ಮಂತದಕ್ಕು ಮಸಂಖ್ಯಂ ॥

ಅಗ್ರಗಣ್ಯದಿಂದ ಈ ವರ್ಗ ಆರಂಭವಾಗುತ್ತದೆ, ಪ್ರತಿಭೇ, ಮೇಧಾ, ಕವಿ, ವಾಗ್ಮಿ, ವಿದ್ವಾಂಸ, ಕುಶಲ, ಮೂರ್ಖ, ಮೂಢ, ಲಂಪಟ, ಉದಾತ್ತ, ದುರ್ಮನ, ಪ್ರಭು, ಶತ್ರು, ಶೂರ, ವಾಚಾಳಿ, ದಾನಿ, ಕರ್ಮಶೂರ, ಚಪಲ, ದುರ್ಮುಖ, ಅಹಂಕಾರಿ, ಜಿಪುಣ, ಪರವಶವರ್ತಿ, ಕುಟಿಲ, ಅತಿಥಿ ಮುಂತಾದ ಎಲ್ಲ ಬಗೆಯ ವಿಶೇಷಣಗಳನ್ನು ಕೋಶ ಹೊಂದಿದೆ. ನಿವಹಕ್ಕಾಗಿ ನಾಗವರ್ಮ ಒಂದು ವೃತ್ತವನ್ನೇ ಮೀಸಲಾಗಿರಿಸಿದ್ದಾನೆ. ಅಲ್ಲಿಂದ ಮುಂದೆ ಭಾರತೀಯ ಪ್ರಾದೇಶಿಕ ವಿಭಜನೆಗಳನ್ನು ಗ್ರಾಮ – ಹಳ್ಳಿ, ಗ್ರಾಮಗಳ ಸಮೂಹ ಗ್ರಾಮತೆ, ಧೂಮಾವಳಿಗಳು ಧೂಮ್ಯೆಯಾದರೆ ಜನತೆ ಜನಸಮಿತಿಯಾಗುತ್ತದೆ ಅದೇ ಮುಂದುವರೆದು ಸ್ತೋಮವಾಗುತ್ತದೆ.

ಕಮನೀಯಂ ಚಾರು ರಮ್ಯಂ ರುಚಿರ ಮತಿಮನೋಹಾರಿ ಹೃದ್ಯಂ ಪ್ರಶಸ್ತಂ।
ರಮಣೀಯಂ ಸುಂದರಂ ಪೇಶಲ ಮತಿಶಯಶೋಭಾನ್ವಿತಂ ದರ್ಶನೀಯಂ ॥
ಕಮನಂ ಕಮ್ರಂ ಸುರೂಪಂ ಶುಭತಮ ಮಭಿರಾಮಂ ಪ್ರಹೃಷ್ಟಂಪರಾರ್ಧ್ಯಂ ।
ಸುಮನೋಜ್ಞಂ ವಲ್ಗು ವಾಮಂ ಪ್ರಿಯ ಮದು ಮಧುರಂ ಮಂಜುಳಂ ಮಂಜು ಸೌಮ್ಯಂ॥

ಮಲಿನಂ ಮಲೀಮಸಂ ಕ ।
ಶ್ಮಲ ಮೆನಿಕುಂ (ಮಲ) ವಿದೂಷಿತಂ ಶುದ್ಧ ಮದು ॥
ಜ್ಜ್ವಲ ಮತಿಮೇಧ್ಯಂ ವೀಧ್ರಂ ।
ಮಲರಹಿತಂ ಶುಚಿತಮಂ ಪವಿತ್ರಂ ಪೂತಂ ॥

ಅವದಾತಂ ಶುಭ್ರಂ ಶ್ವೇ ।
ತ ವರ್ಜುನಂ ಪಾಂಡು ಪಾಂಡರಂ ಶುಚಿ ಶುಕ್ಲಂ ॥
ಧವಳಂ ವಳಕ್ಷಮೆನೆ ಗೌ ।
ರವರ್ಣಮಾಪಾಂಡು ದೂಸರಂ ತಾನೆನಿಕುಂ ॥

ಗಣಿತದ ಸಂಖ್ಯೆಗಳ ಪ್ರಸ್ತಾಪ ಭಾರತೀಯ ಪದ್ಧತಿಯ ಪೂರ್ಣತ್ವದ ವಿವರ, ನೂತನ, ಗುಪ್ತ, ಲುಪ್ತ, ಲಿಪ್ತಗಳ ವ್ಯತ್ಯಾಸ ಶಾಂತ, ಶಮಿತ ರೀತಿ ಅಣುವಿನಿಂದ ಮಹತ್ತಿನವರೆಗಿನ ಆರೋಹಕ್ರಮ, ಮಲಿನ – ಶುದ್ಧ, ಶುಭ್ರ ಮತ್ತು ಶ್ಯಾಮಳಕ್ಕಿರುವ ಬೇರೆ ಬೇರೆ ನಾಮಗಳು ಮುಂತಾದ ವಿಶೇಷಣಗಳ ಚರ್ಚೆಯಾಗಿವೆ. ಮುಂದಿನದು **ವಿಶೇಷ್ಯವರ್ಗಂ** – ವಿಶೇಷಣಗಳನ್ನು ಹೇಳಿದ ನಂತರ ನಾಗವರ್ಮ ವಿಶೇಷ್ಯಗಳನ್ನು 36 ಪದ್ಯಗಳಲ್ಲಿ ವಿವರಿಸಿದ್ದಾನೆ

ಸ್ನೇಹ ಮಜರ್ಯಂ ಸಖ್ಯಂ ।
ಸೌಹಾರ್ದಂ ಪ್ರೀತಿ ಮೈತ್ರಿ ಸಾಪ್ತಪದೀನಂ ॥
ಸೌಹೃದ ಮದು ವಿದ್ವೇಷಂ ।
ದ್ರೋಹಂ ವೈರಂ ವಿರೋಧ ಮೆನೆ ಪಗೆ ಯಕ್ಕುಂ ॥

ಶಂಕೆ ಭಯಂ ಸಾಧ್ವಸ ಮಾ ।
ಶಂಕಂ ತ್ರಾಸಂ ದರಂ ವಿಭೀತಿ ಸಮಾನಾ ॥
ರ್ಥಂ ಕಲುಷಂ ದೋಷಂ ಪ್ರತಿ ।
ಘಂ ಕೋಪ (ಮಮರ್ಷ) ಮೆಂಬುದದು ತಾಂ ಕ್ರೋಧಂ ॥

ಬಹುತೆರನಾದ ವಿಶೇಷಗಳನ್ನು ಹೇಳುತ್ತಾ ಹೋಗುವ ಕೋಶದಲ್ಲಿ, ಆ ಶಬ್ದಗಳಿಗೂ ಸಮಾನವಾದ ಪದಗಳನ್ನು ನೀಡಲಾಗಿದೆ – ಅನುಭವ – ಉಪಭೋಗ, ಅನಾದರ – ತಿರಸ್ಕಾರ, ಮನೋರಥ – ವಾಂಛೆ, ಕೌತುಕ – ಕುತೂಹಲ ಇತ್ಯಾದಿ. ಕೆಲವೆಡೆಯಲ್ಲಿ ಒಂದು ಶಬ್ದವನ್ನು ವಿವರಿಸುವಾಗ, ವಿವರಣೆಗಾಗಿ ಪದ ಪುಂಜಗಳನ್ನೇ ಬಳಸಲಾಗಿದೆ – ವಿಕ್ರಾಂತ – ಸಾಹಸ ಪರಾಕ್ರಮಂ ತೇಜೋ ಗುರುಭುಜ ಪ್ರತಾಪಂ, ಅತಿಸ್ಫುಟಂ ಸ್ಪಷ್ಟ ವಿನಿಶ್ಚಿತಾರ್ಥಂ ಪ್ರತೀತ ಶಬ್ದಂ ವಿಶದಾರ್ಥಮಕ್ಕುಂ.

ವಿಸ್ತೀರ್ಣತೆ ತಾನಂತಪ್ಪುದು ।
ವಿಸ್ತಾರಂ ಶಬ್ದವಿಷಯಮಾದಂದಕ್ಕುಂ ॥
ವಿಸ್ತರ ಮೆಂಬೀಶಬ್ದಂ ।
ವಾಸ್ತವ ಮೆಂದಱಿಗೆ ವಸ್ತು ತತ್ವಸ್ಥಿತಿಯಂ ॥

ದ್ರಾಘಿಮ ಮಕ್ಕುಂ ಪ್ರಾಂಶುತೆ ।
ಲಾಘವ ಮದು ಲಘುತೆ ಬಂಹಿಮಂ ಬಹುಲತ್ವಂ ॥
ಮೋಘತೆ ತಾಂ ವೈಯರ್ಥ್ಯಂ ।
ಶ್ಲಾಘಿಮ ಮೆಂಬುದು ಗುಣಪ್ರಶಂಸಾ ವಚನಂ ॥

ಶಬ್ದದ ಅರ್ಥ ಬರುವುದಕ್ಕೆ ಇರುವ ಕಾರಣವನ್ನೂ ತಿಳಿಸಲಾಗಿದೆ – ಚೇತನೆ – ಚೈತನ್ಯ, ಪೀತಿಮಮೆನೆ – ಪೀತತ್ವಂ, ಶ್ವೇತಿಮಮದು – ಶೌಕ್ಲ್ಯ, ಗರಿಮಮದುತಾಂ – ಗುರುತ್ವಂ ಇತ್ಯಾದಿ. ಒಂದೊಂದು ವಾಕ್ಯದಲ್ಲಿ ವಿಶೇಷ್ಯಗಳನ್ನು ಈ ಮಾದರಿಯಲ್ಲಿ ವಿಶ್ಲೇಷಿಸಲಾಗಿದೆ ಒಂದೊರ್ವರೊಡೆ ನ(ಹಂ) ಕೃತಿಯಿಂದಂ ಮಾಡುವುದು ತಾ ನ(ದ) ಹಮಹಮಿಕೆ ಸ್ಯೆ, ಜ್ಞಾತಿತ್ವಂ ತಾನಕ್ಕುಂ ಜ್ಞಾತೇಯಂ, ರಾಮಣೀಯಕಂ ರಮ್ಯತ್ವಂ ಮುಂತಾದವು. ಕೊನೆಯಲ್ಲಿ ಕವಿ ಅಧ್ಯಾಯವನ್ನು ಮುಕ್ತಾಯ ಮಾಡುವುದು ಸಾಮಾನ್ಯಮಪ್ಪ ಜನಮುಂ ತಿಳಿವಂತು ಪೇೞ್ದಂ ದಾಮೋದರ ಪ್ರಿಯಸುತಂ ಕವಿಕರ್ಣ ಪೂರಂ.

ಮುಂದಿನ ಕಾಂಡ **ನಾನಾರ್ಥಕಾಂಡಂ** ಅದರಲ್ಲಿ **ನಾನಾರ್ಥವರ್ಗಂ** – ಅಭಿದಾನವಸ್ತು ಕೋಶದ ಕೊನೆಯ ಕಾಂಡವಿದು, ಹಾಗಾಗಿಯೇ 136 ಪದ್ಯಗಳ ವಿಸ್ತಾರದಲ್ಲಿ ನಿಬದ್ಧವಾಗಿದೆ. ಈ ವರ್ಗದ ರೀತಿಯನ್ನು ನಾಗವರ್ಮ ಮೊದಲನೆಯ ಪದ್ಯದಲ್ಲಿಯೇ ಹೇಳಿದ್ದಾನೆ.

ಪಲವುಂ ಶಬ್ದಂಗಳ್ ಕೇ ।
ವಲ ಮಪ್ಪಂತೇಕಶಬ್ದದೊಳ್ ವಿರಚಿಸಿದೆಂ ॥
ಪಲವರ್ಥಂಗಳು (ಮಿ) ನ್ನಿ ।
ರ್ಮಲ ಮಪ್ಪಂತೇಕಶಬ್ದದೊಳ್ ವಿಱಚಿಸುವೆಂ ॥

ಹಲವು ಶಬ್ದಗಳನ್ನು ಒಂದು ಶಬ್ದದಲ್ಲಿ ಇರುವಂತೆ ವಿರಚಿಸಿದ ನಾನು, ಹಲವು ಅರ್ಥಗಳು ಬರುವಂತಹ ಏಕ ಶಬ್ದವನ್ನೂ ವಿರಚಿಸುವೆ, ಇದರಿಂದ ಸಾಕಷ್ಟು ಪ್ರಯೋಜನವಾಗುತ್ತದೆ ಎನ್ನುವುದು ನಾಗವರ್ಮನ ಅಭಿಪ್ರಾಯವಾಗಿದೆ. ಜಿನ, ಅರ್ಹಂತರು, ಉತ್ಸುಗತರು, ಕಮಳನಾಭ, ರುದ್ರನು, ವೃಷಾಕವಿಗಳ್, ಶಿವೆ, ಗೌರೀ, ಹರಿತಕಿಯು ಶಿವೆಯಕ್ಕುಂ, ಅದೇ ಮಾದರಿಯಲ್ಲಿ

ಪ್ರಭುವುಂ ದಿನಪತಿಯು ಮಿನರ್ ।
ಪ್ರಭುವುಂ ತಾರಾಧಿನಾಥನುಂ ರಾಜಾಖ್ಯರ್ ॥
ಪ್ರಭುವುಂ ಭೂಭೃತ್ತನಯಾ ।
ಪ್ರಭೂತನುಂ ಸ್ವಾಮಿಸಂಜ್ಞಕರ್ ತಾವಪ್ಪರ್ ॥

ಸುರರ್ಗಂ ಮತ್ಸ್ಯಾಳಿಗಂ ಸಂಧಿಸುಗು ಮನಿಮಿಷಾಭಿಖ್ಯೆ ವಿಖ್ಯಾತಿಯಿಂದಂ ।
ಗರುಡಂಗಂ ಪಕ್ಷಿಗಳ್ಗಂ ನೆಗಱ್ಗಿಮನುಗತಾರ್ಥಂ ಗರುತ್ಮಾಹ್ವಮಾದಂ ॥
ವರುಣಂಗಂ ಕ್ರೋಷ್ಟುಗಂ ಜಂಬುಕ ನೆನಿಸುವ ಸಂಜ್ಞಾಂತರಂ ತಾನದಕ್ಕುಂ ।
ಧರಣೀಧ್ರಂಗಳ್ಗ ಮಬ್ದಪ್ರತತಿಗ (ಮೆಸೆಗುಂ) ಕೂಡೆ ಜೀಮೂತನಾಮಂ ॥

ಜೈವಾತೃಕ ಎಂದರೆ ಚಂದ್ರ ಮತ್ತು ಚಿರಾಯುವಪ್ಪನುಮಕ್ಕುಂ, ಹಾಗೆಯೇ ಜೀವನ ಎಂದರೆ ಪಾನೀಯ ಮತ್ತು ಜೀವಿತವ್ಯವಾಗುತ್ತದೆ. ಮುಂದಿನ ಪದ್ಯಗಳಲ್ಲಿ ಒಂದು ಪದ ಹೇಗೆ ವಿವಿದಾರ್ಥವನ್ನು ನೀಡಬಲ್ಲುದು ಎನ್ನುವುದನ್ನು ಕಾಣಬಹುದು

ಧಾಮಂ ನಿವಾಸ ತೇಜೋ ।
ನಾಮಂ ಧಿಷ್ಣ್ಯಂ ಗೃಹರ್ಕ್ಷಪಾವಕನಾಮಂ ॥
ನಾಮಂ ಪ್ರತೀಪ ಶೋಭನ ।
ನಾಮಂ ಕಾಮಂ ಮನೋರಥ ಸ್ಮರನಾಮಂ ॥

ಸೊದೆ ಯಮ್ಮತಂ ಸೊದೆ ಲೇಪಂ ।
ವಿಧು ದನುಜಾರಾತಿ ವಿಧು ಸುಧಾಸಂಭವನುಂ ॥
ವಧು ಸೊಸೆ ವಧು ಸೀಮಂತಿನಿ ।
ವಿಧಿ ವೇದಂ ವಿಧಿ ವಿಧಾನ ಮಕ್ಕುಂ ಪೆಸರಿಂ ॥

ಲೋಕಂ ಜನಮುಂ ಜಗಮುಂ ।
ನಾಕಂ ದಿವಿಜಾಧಿವಾಸಮುಂ ಘನಪಥಮುಂ ॥
ಶ್ಲೋಕಂ ಯಶಮುಂ ಪದ್ಯಮು ।
ಮೋಕಂ ಸ್ಥಾನಮು ಮಗಾರಮುಂ ತಾನಕ್ಕುಂ ॥

ಅನೇಕ ಪದ್ಯಗಳಲ್ಲಿ ಈ ಮಾದರಿಯನ್ನು ನಾಗವರ್ಮ ನೀಡಿದ್ದಾನೆ, ಒಂದೆರಡು ಶಬ್ದಗಳನ್ನು ಉದಾಹರಣೆಗಾಗಿ ನೋಡಬಹುದು, ಸಾಧನ – ಸೇನಾಂಗ – ಸಿದ್ಧಸಾಧನ, ಕೋಶಂ – ಖಡ್ಗಪಿಧಾನಂ – ನೀರೇಜ ಕುಟ್ಮಳ – ದಿವ್ಯವಿಶೇಷಂ – ಅಶೇಷರ್ಥ ನಿಚಯ ವಾಚಿಯುಮಕ್ಕುಂ, ಕರ – ಸಿದ್ಧಾಯಂ – ಅಗ್ರದೀಪ್ತಿ – ಕೈ – ದ್ವಿರದಕರಂ.

ನಾಗವರ್ಮನ ಈ ನಿಘಂಟು ವಿಶೇಷವಾದ ಕೋಶವಾಗಿದೆ, ಆದರೆ ಕೋಶ ಪೂರ್ಣ ಪ್ರಮಾಣದಲ್ಲಿ ದೊರೆತಿದೆ ಎಂದು ಹೇಳಲಾಗುವುದಿಲ್ಲ. ಹಳೆಗನ್ನಡ ಲಿಪಿಯಾಗಿರುವುದರಿಂದ, ಒತ್ತಕ್ಷರಗಳನ್ನು ಅರ್ಥ ಮಾಡಿಕೊಳ್ಳಲು, ಪದ ಭೇದಮಾಡಲು ಸರಳವಾಗೇನಿಲ್ಲ. ಶಾಸನದ ಮಾದರಿಯ ಸಾಲುಗಳು ಮತ್ತು ಅಕ್ಷರಗಳು ಓದನ್ನು ಸರಾಗಗೊಳಿಸುವುದಿಲ್ಲ. ಆದರೆ ಒಂದು ನಿಘಂಟನ್ನು ಸಿದ್ಧ ಪಡಿಸಿ ಅದನ್ನು ಕಂದ ಮತ್ತು ಇತರ ವೃತ್ತಗಳಲ್ಲಿ ಸೇರಿಸಿರುವುದು, ಬರವಣಿಗೆ ಪ್ರಾಸಬದ್ಧವಾಗಿರುವುದು ವಿಶೇಷವೆನಿಸುತ್ತದೆ. ಸಂಸ್ಕೃತದ ಮೂಲ ರೂಪಗಳನ್ನು ನೀಡಿರುವುದು, ಕಾಂಡಗಳಲ್ಲಿ ಎಲ್ಲ ವಿಷಯಗಳನ್ನೂ ಇಡಿಕಿರಿಸಿರುವುದು ನಾಗವರ್ಮನ ಸಾಮರ್ಥ್ಯವನ್ನು ಎತ್ತಿ ಹಿಡಿದಿದೆ. ಅಭಿದಾನ ವಸ್ತು ಕೋಶವನ್ನು

ಪೂರ್ಣಪ್ರಮಾಣದ ಅಧ್ಯಯನಕ್ಕೆ ಒಳಪಡಿಸಿ ಸರಳ ಗದ್ಯದಲ್ಲಿ ಅರ್ಥೈಸಿದರೆ, ಸಾಕಷ್ಟು ಪ್ರಯೋಜನವಾಗಬಹುದು. ಬೇರೆ ಬೇರೆ ನಿಘಂಟುಗಳಲ್ಲಿರುವ ಉತ್ತಮ ಅಂಶಗಳನ್ನು ಆಯ್ದುಕೊಂಡು ಅದನ್ನು ಸಮರ್ಪಕವಾಗಿ ವಿರಚಿಸಿ, ಪಂಡಿತ ಮತ್ತು ಪಾಮರರಿಗೂ ಬೇಕಾಗುವ ಮಾದರಿಯಲ್ಲಿ ಕೋಶವನ್ನು ರಚಿಸಿರುವುದರಿಂದ ನಾಗವರ್ಮ ಅಭಿನಂದನೆಗೆ ಪಾತ್ರನಾಗುತ್ತಾನೆ.

ಪರಾಮರ್ಶನ ಗ್ರಂಥ

1. ಅಭಿದಾನ ವಸ್ತುಕೋಶ, ಸಂ.ಎ. ವೆಂಕಟರಾವ್,
ಪಂಡಿತ್ ಎಚ್. ಶೇಷಯ್ಯಂಗಾರ್, ಮಡ್ರಾಸ್ ವಿಶ್ವವಿದ್ಯಾನಿಲಯ, ಮಡ್ರಾಸ್ – 1933.

****

ನಾಗ ವರ್ಮನ – ಅಭಿಧಾನ ವಸ್ತು ಕೋಶಂ

– ಪಿ.ವಿ. ಆನಂದ, ಸಾಲಿಗ್ರಾಮ

ನಾಗ ವರ್ಮನ 'ಅಭಿಧಾನ ವಸ್ತು ಕೋಶಂ' ಕೃತಿಯನ್ನು ಮದ್ರಾಸ್ ವಿಶ್ವವಿದ್ಯಾಲಯವು 1933 ರಲ್ಲಿ ಹಿರಿಯ ಉಪನ್ಯಾಸಕರಾಗಿದ್ದ ಎ. ವೆಂಕಟರಾವ್ ಮತ್ತು ಪಂಡಿತ್ ಎಚ್. ಶೇಷ ಅಯ್ಯಂಗಾರ್ ಅವರ ಸಂಪಾದಕತ್ವದಲ್ಲಿ ಪ್ರಕಟಿಸಿದೆ. ನಾಗವರ್ಮನ ಪ್ರಸ್ತುತ ಕೃತಿಯನ್ನು "ವಸ್ತು ಕೋಶಂ" ಎಂದೂ "ಅಭಿಧಾನ ಕೋಶಂ" ಎಂದೂ ಎರಡು ಹೆಸರಿನಿಂದಲೂ ಕರೆಯಲಾಗುತ್ತದೆ. ಕೃತಿಯನ್ನು ಮೂರು ಭಾಗಗಳಾಗಿ ವಿಂಗಡಿಸಲಾಗಿದೆ. ಮೊದಲನೆಯದಾಗಿ ಅವಿಭಿನ್ನಾರ್ಥಕಾಂಡಂ. ಇದರಲ್ಲಿ ಸ್ವರ್ಗವರ್ಗಂ, ಕಾಲವರ್ಗಂ, ಸಂಸರಣವರ್ಗಂ, ಸಲಿಲವರ್ಗಂ, ಭೂವರ್ಗಂ, ಕಾಲಾಯಿ ಸಾದಿ ಧಾತುವರ್ಗಂ, ವನವರ್ಗಂ, ವೃಕ್ಷದಿವರ್ಗಂ, ಮೃಗಪಕ್ಷಿವರ್ಗಂ, ಪುರಗೃಹೋಪಕರಣಾದಿವರ್ಗಂ, ಮನುಷ್ಯವರ್ಗಂ, ದೇಹಾವಯವಾದಿವರ್ಗಂ, ಭೂಷಣಾದಿವರ್ಗಂ, ಸಂಪ್ರಕೀರ್ಣಸಮರಾದಿ ಸಂಪ್ರಕೀರ್ಣವರ್ಗಂ, ಪಶುವರ್ಗಂ, ಧ್ಯಾನವರ್ಗಂ, ಎಂಬುದಾಗಿ 16 ವರ್ಗಗಳಿವೆ. ಎರಡನೆಯುದನ್ನು ಸಾಮಾನ್ಯ ಕಾಂಡಂ ಎಂದು ಹೆಸರಿಸಲಾಗಿದ್ದು, ಇದರಲ್ಲಿ ವಿಶೇಷಣವರ್ಗಂ ಮತ್ತು ವಿಶೇಷ್ಯವರ್ಗಂ

ಎಂದು ಎರಡು ವಿಧಗಳಿವೆ. ಮೂರನೆಯದಾಗಿ ನಾನಾರ್ಥಕಾಂಡಂ ಎಂಬ ಕಾಂಡದಲ್ಲಿ 'ನಾನಾರ್ಥವರ್ಗಂ' ಎಂಬ ಒಂದೇ ವರ್ಗವನ್ನು ಮಾಡಲಾಗಿದೆ.

ಇನ್ನು ಕೃತಿಯ ಮುನ್ನುಡಿ ಭಾಗವನ್ನು ಗಮನದಲ್ಲಿರಿಸಿಕೊಂಡು ಈ ಕೆಳಗಿನ ವಿಚಾರಗಳನ್ನು ಅರಿತು ಕೊಳ್ಳಬಹುದಾಗಿದೆ. ಅಭಿದಾನವಸ್ತುಕೋಶ ಎಂಬ ನಿಘಂಟನ್ನು ನಾಗವರ್ಮ ಎಂಬ ಹೆಸರಿನವನೇ ಬರೆದಿದ್ದಾನೆ ಎಂಬುದಕ್ಕೆ ಪ್ರಸ್ತುತ ಕೃತಿಯಿಂದಲೇ ಮಾಹಿತಿ ದೊರೆಯುತ್ತದೆ. "ವಿರಚಿಸಿದಂ ಕವಿಕಂಠಾ ಭರಣನಿದಂ 'ನಾಗವರ್ಮ'ನನೆ ಮೆಚ್ಚುದರಾರ್, ಶ್ರೇಯಸ್ನನಾ 'ನಾಗವರ್ಮಂ' ವಿಬುಧ ಮಂಡಳಿ ಪಂಡಿತ 'ನಾಗವರ್ಮನಂ'., 'ಶ್ರೀ ನಾಗವರ್ಮ' ವಿರಚಿತಮಪ್ಪಭಿಧಾನವಸ್ತುಕೋಶದೊಳ್" ಎಂಬ ಉಲ್ಲೇಖಗಳು ಇದನ್ನು ನಾಗವರ್ಮ ಎಂಬವನು ಬರೆದಿದ್ದಾನೆ ಎಂಬುದಾಗಿ ಸ್ಪಷ್ಟಪಡಿಸುತ್ತವೆ. ಆದರೆ ಕರ್ನಾಟಕ ಕವಿ ಚರಿತವನ್ನು ಬರೆದಿರುವ ರಾವ್ ಬಹದ್ದೂರ್ ಆರ್. ನರಸಿಂಹಾಚಾರ್ಯರವರು 'ನಾಗವರ್ಮ' ಎಂಬ ಹೆಸರಿನ ಕವಿಗಳ ವಿಷಯವನ್ನು ವಿಮರ್ಶಿಸುವ ಸಂದರ್ಭದಲ್ಲಿ ಈ ಹೆಸರಿನ ಕವಿಗಳು ಇಬ್ಬರಿದ್ದಾರೆ ಎಂದು ತಿಳಿಸುತ್ತಾರೆ. ಕ್ರಿಸ್ತಶಕ 990 ರಲ್ಲಿ ನಾಗವರ್ಮನೆಂಬವನು 'ಕನ್ನಡ ಕಾದಂಬರಿ' ಎಂಬ ಗ್ರಂಥವನ್ನು ಬರೆದಿದ್ದಾನೆ. ಹಾಗೆಯೇ ಕ್ರಿಸ್ತ ಶಕ1145ರಲ್ಲಿ ಎರಡನೆಯ ನಾಗವರ್ಮ ಅಥವಾ ಪಂಡಿತ ನಾಗವರ್ಮನು 'ವಸ್ತುಕೋಶ', 'ಕಾವ್ಯಾವಲೋಕನ' ಮತ್ತು 'ಛಂದೋವಿಚಿತಿ' ಎಂಬ ಗ್ರಂಥಗಳನ್ನು ಬರೆದಿದ್ದಾನೆ ಎಂದು ಉಲ್ಲೇಖಿಸುತ್ತಾರೆ. ಆದರೆ 'ಛಂಧೋವಿಚಿತಿ' ಗ್ರಂಥವು ಪ್ರಸ್ತುತ ಉಪಲಬ್ಧವಿಲ್ಲವೆಂದೂ ತಿಳಿಸುತ್ತಾರೆ. ಹಾಗಾಗಿ ಪ್ರಸ್ತುತ ಕೃತಿಯನ್ನು ಎರಡನೆಯ ನಾಗವರ್ಮ ಅಥವಾ ಪಂಡಿತ ನಾಗವರ್ಮ ಬರೆದಿದ್ದಾನೆ ಎಂಬುದಾಗಿ ಸ್ಪಷ್ಟಪಡಿಸಿಕೊಳ್ಳಬಹುದು.

ಕೆಲವೆಡೆ 'ನಾಕಿಗ' ಇನ್ನು ಕೆಲವೆಡೆ 'ನಾಕಿ'ಎಂಬ ಹೆಸರುಗಳು ಇವನಿಗೆ ಉಂಟು. ("ಶಿಗ್ಗುಂಪದೊಳ್ ನಾಕಿಗಂ-ಅಭಿಧಾನ ವಸ್ತು ಕೋಶ (ನಾನಾರ್ಥ ಕಾಂಡ)", "ಭೂ ಭಾಗದೊಳ್ ನಾಕಿಗಂ-ಕಾಂಡ ಪ್ರಶಸ್ತಿ" "ತಿರ್ದ ವಿವೇಕಿ ನಾಕಿಗಂ-ಕಾವ್ಯವ ಲೋಕನಂ") ಇದಲ್ಲದೆ ಪಂಡಿತ

ನಾಗವರ್ಮ, ಕವಿ ನಾಗವರ್ಮ ಎಂಬ ಹೆಸರು ವಿಶೇಷಣಯುಕ್ತವಾಗಿ ಬಳಕೆಯಲ್ಲಿತ್ತು ಎಂದು ತಿಳಿದು ಬರುತ್ತದೆ. "ಪಂಡಿತ ನಾಗಮರ್ಮನಂ ಭೂತಳದೊಳ್ ಸೀಲೆ, ನಾಗವರ್ಮಂ ಛಂದೋವಿಚಿತಿ, ನಾಗವರ್ಮನ ಕೃತಿಗಳ್" ಇವೆಲ್ಲವೂ ಕಾವ್ಯವಲೋಕನಂನಲ್ಲಿ ಉಲ್ಲೇಖಿತ. ಈ ನಾಗವರ್ಮನು ಜೈನ ಮತಕ್ಕೆ ಸೇರಿದವನು ಎಂದು ತಿಳಿದು ಬರುತ್ತದೆ. ಶರ್ವವರ್ಮನೆಂಬ ಜೈನ ವ್ಯಾಕರಣಕಾರನು ಸಂಸ್ಕೃತದಲ್ಲಿ 'ಕಾತಂತ್ರ ವ್ಯಾಕರಣ' ಎಂಬ ಕೃತಿಯನ್ನು ಬರೆದ ಕಾರಣಕ್ಕೆ ಪ್ರಸಿದ್ಧನು. ಆತನ ಮಟ್ಟಕ್ಕೆ ತಲುಪಿದ ಕಾರಣಕ್ಕೆ ನಾಗವರ್ಮನಿಗೆ 'ಅಭಿನವ ಶರ್ವವರ್ಮ' ಎಂಬ ಬಿರುದು ಇತ್ತು. ಈ ಹಿನ್ನೆಲೆಯಲ್ಲೂ ನಾಗವರ್ಮನು ಜೈನನಾಗಿದ್ದ ಎಂಬುದನ್ನು ಅರಿಯಬಹುದು. ಅಭಿನವ ಶರ್ವವರ್ಮ ಮಾತ್ರವಲ್ಲದೆ, ಕವಿತಾ ಗುಣೋದಯಂ (ಸಮುಚಿತ.... ಅಮಳಿನ ಕವಿತಾ ಗುಣೋದಯ), ಕವಿಕರ್ಣ ಪೂರ (ದಾಮೋದರ ಪ್ರಿಯ ಸುತಂ ಕವಿ ಕರ್ಣ ಪೂರಂ), ಕವಿಕಂಠಾಭರಣಂ (ವಿರಚಿಸಿದಂ ಕವಿ ಕಂಠಾಭರಣನಿದಂನಾಗವರ್ಮನನೆ ಮೆಚ್ಚದರಾರ್), ಪಂಡಿತ ನಾಗವರ್ಮ (ಬಣ್ಣಿಕುಂ ವಿಬುಧ ಮಂಡಳಿ ಪಂಡಿತ ನಾಗವರ್ಮನಂ, ಸುಕವಿಜನ ಮನಸ್ಸರೋಜಿನೀ ರಾಜಹಂಸಾಯಮಾನಾನೂನ ಕವಿತಾ ಗುಣೋದಯ ಶ್ರೀ.....).... ಹೀಗೆ ಬಿರುದುಗಳಿದ್ದರೂ ಕವಿತಾ ಗುಣೋದಯಂ ಎಂಬುದು ಈತನಿಗೆ ಅತ್ಯಂತ ಪ್ರೀತಿ ಪಾತ್ರವಾದ ಬಿರುದು ಎಂದು ಹೇಳಲಾಗಿದೆ.

ಈ ಕೃತಿಯ ಕರ್ತೃ ನಾಗವರ್ಮನು ತನ್ನ ಗ್ರಂಥದ ಪೀಠಿಕೆಯಲ್ಲಿ ತಾನು ಸಂಗ್ರಹಿಸಿರುವುದಾಗಿ ಹೇಳುವ ಸಂಸ್ಕೃತ ಭಾಷಾತ್ಮಕವಾದ ಹಲಾಯುಧನ ಅಭಿಧಾನ ರತ್ನಮಾಲೆ, ಅಮರಸಿಂಹನ ನಾಮ ಲಿಂಗಾನು ಶಾಸನ, ವರರುಚಿಯ ಕೋಶ, ಧನಂಜಯ ಕೋಶ, ವಾಗುರಿಕೋಶ, ಮುಂತಾದ ಕೃತಿಗಳು ಹಾಗೂ ಈ ವಸ್ತುಕೋಶವನ್ನೇ ಆದರ್ಶವಾಗಿಟ್ಟುಕೊಂಡು ಭಾಮಿನೀ ಷಟ್ಪದಿಯಲ್ಲಿ ಬರೆದಿರುವ ಕರ್ನಾಟಕ ಮಂಗರಾಜನ ನಿಘಂಟು ಮತ್ತು ಹೇಮಚಂದ್ರನ ಸಂಸ್ಕೃತಿ ಭಾಷಾತ್ಮಕವಾದ ಹೇಮಕೋಶ ಕೃತಿಯು ಪ್ರಸ್ತುತ ಗ್ರಂಥದ ಅಧ್ಯಯನಕ್ಕೆ ಸಾಕಷ್ಟು ಸಹಕಾರವನ್ನು ನೀಡುತ್ತದೆ. ಮುನ್ನುಡಿಯಲ್ಲಿ ಉಲ್ಲೇಖಿತವಾದಂತೆ

ನಿಘಂಟು ಎಂಬುದು ವ್ಯವಹಾರ ಯೋಗ್ಯವಾದ ಭಿನ್ನಾರ್ಥಕ, ಸಮನಾರ್ಥಕ, ನಾಮಪದಗಳ ವಾಚ್ಯವಾಚಕ ಭಾವವನ್ನು ಪರ್ಯಾಯ ಪದಗಳೊಡನೆ ತಿಳಿಸುವ ಗ್ರಂಥವೆಂದು ಲಕ್ಷಣಕಾರರು ನಿರೂಪಿಸಿದ್ದಾರೆ. ಪ್ರಕೃತ ಗ್ರಂಥವು ಕರ್ನಾಟಕ ಭಾಷೆಯಲ್ಲಿ ರೂಪವಾಗಿ ಕನ್ನಡ ಕಬ್ಬಗಳಲ್ಲಿ ಪ್ರಯೋಗಿಸಬಹುದಾದ ಸಮ ಸಂಸ್ಕೃತ ಶಬ್ದಗಳ ಸ್ವರೂಪವನ್ನು ತಿಳಿಸುವ ಕೋಶವಾಗಿದೆ. ಇದರಲ್ಲಿ ಸಮ ಸಂಸ್ಕೃತ ಶಬ್ದಗಳು ಮಾತ್ರವಲ್ಲದೆ ಹಲವು ದೇಶಿಯ ಶಬ್ದಗಳು ದೊರಕುತ್ತವೆ. ನಾಗವರ್ಮನು ಈ 'ಅಭಿಧಾನ ವಸ್ತುಕೋಶ' ಎಂಬ ಹೆಸರನ್ನು ಕೃತಿಗೆ ನೀಡುವಾಗ ತನಗೆ ವಿಶೇಷಾಭಿನಂದನನನೀಯವಾದ ಹಲಾಯುಧನ "ಅಭಿಧಾನ ರತ್ನ ಮಾಲಾ" ಎಂಬ ಕೃತಿಯ ಆಕರ್ಷಣೆಗೆ ಒಳಗಾಗಿರುವುದರಿಂದ ಅದೇ ರೀತಿಯ "ಅಭಿಧಾನವಸ್ತುಕೋಶ" ಎಂಬ ಹೆಸರನ್ನು ಕೊಟ್ಟಿದ್ದಾನೆ ಎಂದು ವಿವಿಧ ಮೂಲಗಳಿಂದ ತಿಳಿದು ಬರುತ್ತದೆ. ಒಂದರ್ಥದಲ್ಲಿ, "ಪದಾರ್ಥಗಳ ಸ್ವರೂಪವನ್ನು ತಿಳಿಸುವ ಶಬ್ದಗಳನ್ನು ಸಂಗ್ರಹಿಸಿರುವ ಗ್ರಂಥ" ಎಂದೇ ಈ ಕೃತಿಯ ಕುರಿತು ಅರಿತುಕೊಳ್ಳಬೇಕು. ಪ್ರಸ್ತುತ ಕೃತಿಯು ಬಹುಪಾಲು 'ಕಂದ' ಪ್ರಕಾರದ ಮಾತ್ರ ಗಣದಲ್ಲಿ ಬರೆಯಲ್ಪಟ್ಟಿದೆ. ಕಂದವೇ ವಿಶೇಷವಾಗಿರುವ ಕರ್ನಾಟಕ ಭಾಷೆಯಲ್ಲಿ ಪ್ರಸಿದ್ಧವಾಗಿರುವ, ಸಂಸ್ಕೃತ ವೃತ್ತ ಜಾತಿಗಳಲ್ಲಿ ಉತ್ಪಲಮಾಲೆ, ಶಾರ್ದೂಲ, ಸೃಗ್ಧರೆ, ಮಹಾಸೃಗ್ಧರೆ, ಮತ್ತೇಭ, ಚಂಪಕಮಾಲೆ, ಮಾಲಿನಿ, ಮಂದಾಕ್ರಾಂತ, ವಸಂತತಿಲಕ, ಶಾಲಿನಿ, ಶಿಖರಿಣೆ, ಹರಿಣೆ, ಪ್ರಹರ್ಷಣೆ, ವಂಶಸ್ಥ, ಉಪೇಂದ್ರ ವಜ್ರ ಎಂಬ ಸಮವೃತ್ತಗಳೂ, ಉಪಜಾತಿ ವೃತ್ತಗಳು, ಅರ್ಧಸಮ ವೃತ್ತವೂ, ಕನ್ನಡ ಭಾಷೆಯಲ್ಲಿ ಅಸಾಧಾರಣಗಳಾದ ಅಕ್ಕರ, ತ್ರಿಪದಿಗಳೂ ಅಲ್ಲಲ್ಲಿ ಇರುವವು. ಆದರೆ, ದ್ರಾವಿಡ ಭಾಷಾ ಪ್ರಪಂಚದ ಛಂದಸ್ಸಿಗೆ ಪ್ರಾಣ ಭೂತವಾದ ಪ್ರಾಸ ನಿಯಮಕ್ಕೆ ವಿರುದ್ಧವಾಗಿರುವ ಉಪಜಾತಿ ವೃತ್ತವನ್ನು, ಕನ್ನಡ ಕಾವ್ಯಗಳಲ್ಲಿ ಎಲ್ಲಿಯೂ ದೊರಕದಿರುವ ಅರ್ಧಸಮ ವೃತ್ತವನ್ನು ಈತ ಪ್ರಯೋಗಿಸಿರುವುದು ವಿಶೇಷ ಸಂಗತಿಯಾಗಿದೆ.

ಕೆಲವು ಕಡೆ, ಕರ್ನಾಟಕ ಲಾಕ್ಷಣಿಕರ ಸಿದ್ಧಾಂತಕ್ಕೆ ವಿರುದ್ಧವಾಗಿ ಸಂಸ್ಕೃತ ನಿಪಾತಾವ್ಯಯಗಳನ್ನು ಸಮ ಸಂಸ್ಕೃತ ಪದಗಳಂತೆಯೇ ಕನ್ನಡ

ಗ್ರಂಥಗಳಲ್ಲಿ ವ್ಯಸ್ತವಾಗಿ ಪ್ರಯೋಗಿಸಬಹುದೆಂಬ ವಿಷಯುವನ್ನು ಜ್ಞಾಪಿಸಿರುತ್ತಾನೆ.. ಸಂಸ್ಕೃತ ಸಮಸ್ತ ಪದಗಳಲ್ಲಿ ಸೇರಿರುವ ಸಂಸ್ಕೃತ ನಿಪಾತಾವ್ಯಯಗಳ ಅರ್ಥವು ತನ್ನ ಕೋಶವನ್ನು ಓದ ತಕ್ಕ ಕನ್ನಡಿಗರಿಗೆ ಸುಲಭವಾಗಿ ತಿಳಿಯಬೇಕೆಂಬುದೇ ಅಂತಹ ಶಬ್ದಗಳನ್ನು ಈ ಕೃತಿಯಲ್ಲಿ ಸೇರಿಸಿರುವುದಕ್ಕೆ ಮುಖ್ಯ ಕಾರಣವಾಗಿದೆ. ತಾತ್, ಉಪೇಂದ್ರ, ವಜ್ರ ಎಂಬ ಸಮವೃತ್ತಗಳೂ, ಉಪಜಾತಿ ವೃತ್ತಗಳು, ಅರ್ಧಸಮ ವೃತ್ತವೂ, ಕನ್ನಡ ಭಾಷೆಯಲ್ಲಿ ಅಸಾಧಾರಣಗಳಾದ ಅಕ್ಕರ, ತ್ರಿಪದಿಗಳೂ ಅಲ್ಲಲ್ಲಿ ಇರುವವು. ಆದರೆ, ದ್ರಾವಿಡ ಭಾಷಾ ಪ್ರಪಂಚದ ಛಂದಸ್ಸಿಗೆ ಪ್ರಾಣ ಭೂತವಾದ ಪ್ರಾಸ ನಿಯಮಕ್ಕೆ ವಿರುದ್ಧವಾಗಿರುವ ಉಪಜಾತಿ ವೃತ್ತವನ್ನು, ಕನ್ನಡ ಕಾವ್ಯಗಳಲ್ಲಿ ಎಲ್ಲಿಯೂ ದೊರಕದಿರುವ ಅರ್ಧ ಸಮವೃತ್ತವನ್ನು ಈತ ಪ್ರಯೋಗಿಸಿರುವುದು ವಿಶೇಷ ಸಂಗತಿಯಾಗಿದೆ. ಕೆಲವು ಕಡೆ, ಕರ್ನಾಟಕ ಲಾಕ್ಷಣಿಕರ ಸಿದ್ಧಾಂತಕ್ಕೆ ವಿರುದ್ಧವಾಗಿ ಸಂಸ್ಕೃತ ನಿಪಾತಾವ್ಯಯಗಳನ್ನು ಸಮ ಸಂಸ್ಕೃತ ಪದಗಳಂತೆಯೇ ಕನ್ನಡ ಗ್ರಂಥಗಳಲ್ಲಿ ವ್ಯಸ್ತವಾಗಿ ಪ್ರಯೋಗಿಸಬಹುದೆಂಬ ವಿಷಯವನ್ನು ಜ್ಞಾಪಿಸಿರುತ್ತಾನೆ.

ಸಂಸ್ಕೃತ ಶಬ್ದಗಳು ಲಿಂಗ, ವಿಭಕ್ತಿ ಇತ್ಯಾದಿಗಳ ಪರಿಚಯವು ಕಡಿಮೆಯಾಗಿರುವುದರಿಂದ ಸಂಸ್ಕೃತ ಕೋಶಗಳ ಉಪಯೋಗವನ್ನು ಪಡೆಯಲು ಶಕ್ತಿ ಸಾಲದಿರುವ ಕನ್ನಡಿಗರಿಗೆ ಈ ಕೋಶವು ಹೆಚ್ಚು ಪ್ರಯೋಜನಕಾರಿಯಾಗಿರುತ್ತದೆ. ಕೃತಿಯು ಪೀಠಿಕಾ ಭಾಗದಲ್ಲಿ ಉಲ್ಲೇಖಿಸಿದಂತೆ ವರರುಚಿ, ಬಾಗುರಿ, ಹಲಾಯುಧ, ಶಾಶ್ವತ, ಧನಂಜಯ, ಅಮರಕೋಶ ಮೊದಲಾದ ಸಂಸ್ಕೃತ ಕೋಶಗಳಿಂದ ಶಬ್ದಗಳನ್ನು ಸಂಗ್ರಹಿಸಿ ಬರೆದಿದ್ದೇನೆ ಎಂದು ಹೇಳಿದ್ದರೂ ವಿಶೇಷವಾಗಿ ಹಲಾಯುಧನ ಕೋಶವನ್ನೇ ಅನುಸರಿಸಿದ್ದಾನೆ ಎಂದು ಬಹುತೇಕ ದೃಢಪಡಿಸಿ ಕೊಳ್ಳಬಹುದು. ಈ ಕೃತಿಯಲ್ಲಿ ಕಾಂಡ, ವರ್ಗ, ವಿಭಾಗ ಕ್ರಮವು ಅಮರಕೋಶ ಮತ್ತು ಹಲಾಯುಧ ಕೋಶದ ಕ್ರಮಕ್ಕಿಂತಲೂ ಭಿನ್ನ ಮತ್ತು ವಿಲಕ್ಷಣವಾದುದಾಗಿದೆ. ಹೇಗೆಂದರೆ ಸ್ವರ್ಗ ಭೂಮಿ ಪಾತಾಳ ಕಾಂಡಗಳಲ್ಲಿಯ ಶಬ್ದಗಳನ್ನು ಒಟ್ಟು ಗೂಡಿಸಿ ಒಂದು ಕಾಂಡದಲ್ಲಿ ಅಡಕ ಮಾಡಿ ಅವಿಭಿನ್ನಾರ್ಥ ಕಾಂಡವೆಂದು ಅದಕ್ಕೆ ಹೆಸರನ್ನು ಕೊಟ್ಟಿರುವನು. ಉಳಿದ ಸಾಮಾನ್ಯ, ನಾನಾರ್ಥಕಾಂಡಗಳ

ಹೆಸರನ್ನು ಶಬ್ದ ಸಮುದಾಯವನ್ನು ಮಾರ್ಪಡಿಸದೆ ಹೇಳಿರುವನು. ಅಮರಸಿಂಹನ ಕೋಶದ ಮೊದಲೆರಡು ಕಾಂಡದ ವಿಷಯವನ್ನು ಈತನು ತನ್ನ ಕೋಶದ ಮೊದಲನೆಯ ಕಾಂಡದಲ್ಲಿ ಮತ್ತು ಅಮರ ಕೋಶದ ಮೂರನೆಯ ಕಾಂಡದ ವಿಷಯವನ್ನು ತನ್ನ ಎರಡನೆಯ ಕಾಂಡದಲ್ಲಿಯೂ ಹಾಗೂ ನಾನಾರ್ಥ ಅವ್ಯಯ ವರ್ಗಗಳಲ್ಲಿಯ ವಿಷಯವನ್ನು ಮೂರನೆಯ ಕಾಂಡದಲ್ಲಿಯೂ ಸಂಗ್ರಹಿಸಿರುವನೆಂದು ತಿಳಿದುಕೊಳ್ಳಬಹುದಾಗಿದೆ. ಕಾಂಡಗಳ ಸಂಖ್ಯೆಯಲ್ಲಿ ಮತ್ತು ಅವುಗಳನ್ನು ವರ್ಗಿಕರಿಸುವುದರಲ್ಲಿ ಈತ ಅಮರಸಿಂಹನನ್ನು ಅನುಸರಿಸಿದ್ದಾನೆ. ಆದರೆ ಶಬ್ದಗಳನ್ನು ವರ್ಗೀಕರಿಸುವುದರಲ್ಲಿ ಮಾತ್ರ ಭಿನ್ನ ಮಾರ್ಗವನ್ನು ಅವಲಂಬಿಸಿದ್ದಾನೆ.

ಒಟ್ಟಿನಲ್ಲಿ ನಾಗವರ್ಮನು ಪ್ರಸ್ತುತ ಅಭಿದಾನವಸ್ತು ಕೋಶಕೃತಿಯನ್ನು ದುಂಬಿಯೊಂದು ವಿವಿಧ ಹೂವುಗಳಿಂದ ಸಾರವತ್ತಾದ ಮಕರಂದವನ್ನು ಹೀರಿ ತಂದು ಜೇನನ್ನು ಸಂಗ್ರಹಿಸಿ ಕೊಡುವ ರೀತಿಯಲ್ಲಿ ರಚಿಸಿದ್ದಾನೆ. ಹಲವು ಕೃತಿಗಳ ಉತ್ತಮ ಅಂಶವನ್ನು ಆಯ್ದು ಕವಿಗಳಿಗೆ ಪಂಡಿತರಿಗೆ ಸವಿಯಾದುದನ್ನೇ ಉಣಬಡಿಸಿದ್ದಾನೆ ಎಂಬುದರಲ್ಲಿ ಎರಡು ಮಾತಿಲ್ಲ.

****



ಪ್ರಾಚೀನ ಕನ್ನಡ ಸಾಹಿತ್ಯ ಶಿಲ್ಪ ಒಂದು ವಿನೂತನ ಪ್ರಯತ್ನ. ಪ್ರಾಚೀನ ಕನ್ನಡ ಸಾಹಿತ್ಯವನ್ನು ಕನ್ನಡಿಗರಿಗೆ ಪರಿಚಯಿಸುವ ನೆಲೆಯಲ್ಲಿ ಇದೊಂದು ಮೈಲಿಗಲ್ಲು. ಇದರ ಪ್ರಧಾನ ಸಂಪಾದಕಿ ಸಾಧನಕೇರಿ ಸಾಹಿತ್ಯ ಪ್ರತಿಷ್ಠಾನದ ಅಧ್ಯಕ್ಷೆಯಾಗಿರುವ ಮಹತ್ವಾಕಾಂಕ್ಷಿ ಮಹಿಳೆ ಶ್ರೀಮತಿ ವಸುವತ್ಸಲಾ. ಈಗಾಗಲೇ ಹಲವಾರು ಕನ್ನಡ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ನಡೆಸಿರುವ ವತ್ಸಲಾರವರು ಇದೀಗ ಸು. ಎರಡುಸಾವಿರ ವರ್ಷಗಳ ಪ್ರಾಚೀನತೆಯುಳ್ಳ ಕನ್ನಡ ನುಡಿ ಹಾಗೂ ನುಡಿಯಿಂದ ಮುಂದುವರಿದ ಶಾಸನ, ಸಾಹಿತ್ಯಕೃತಿಗಳನ್ನು ಕನ್ನಡಿಗರಿಗೆ ವಿಮರ್ಶಾತ್ಮಕ ನೆಲೆಯಲ್ಲಿ ಪರಿಚಯಿಸುವ ಬೃಹತ್ ಯೋಜನೆಯನ್ನು ಹಮ್ಮಿಕೊಂಡಿದ್ದಾರೆ. ನಾಡಿನ ಹಿರಿಯ ವಿದ್ವಾಂಸರು, ಪಂಡಿತರು, ಸಾಹಿತ್ಯಾಭಿಮಾನಿಗಳು, ಅಧ್ಯಾಪಕರು, ಸಂಶೋಧಕರು ಹೀಗೆ ಹಲವರಿಂದ ಲೇಖನಗಳನ್ನು ಬರೆಯಿಸಿ ಮೂರು ಸಂಪುಟಗಳಲ್ಲಿ ಕನ್ನಡ ಪ್ರಾಚೀನ ಸಾಹಿತ್ಯವನ್ನು ಕಟ್ಟಿಕೊಡುವ ಈ ಬಹುದೊಡ್ಡ ಜವಾಬ್ದಾರಿಯನ್ನು ವಹಿಸಿರುವ ಶ್ರೀಮತಿ ವಸು ವತ್ಸಲಾರವರ ಸಾಹಿತ್ಯಪ್ರೀತಿ ಅನನ್ಯ. ಸಾಮಾನ್ಯ ಕನ್ನಡಿಗರಿಂದ ಆಗದ ಕಾರ್ಯಭಾರವನ್ನು ಅವರು ನಿರ್ವಹಿಸುತ್ತಿದ್ದಾರೆ. ಓರ್ವ ಶಾಲ ಶಿಕ್ಷಕಿಯಾಗಿದ್ದುಕೊಂಡು ಇತರ ಜವಾಬ್ದಾರಿಗಳ ನಡುವೆಯೂ ಅವರು ಸಾಹಿತ್ಯದ ಬಗ್ಗೆ ತೋರಿಸುವ ಉತ್ಸಾಹ, ಮುತ್ಸದ್ಧಿತನಗಳು ಅನುಸರಣೀಯ. ಇಂಥ ಶ್ಲಾಘನೀಯ ಪ್ರಯತ್ನಕ್ಕಾಗಿ ಅವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಕನ್ನಡ ಸಾಹಿತ್ಯ ಕ್ಷೇತ್ರಕ್ಕೆ ಒಂದು ಅಪೂರ್ವ ಕೊಡುಗೆಯಾಗಲಿರುವ ಈ ಕೃತಿ ಕನ್ನಡಿಗರೆಲ್ಲ ಮನೆ, ಮನಗಳನ್ನು ಮುಟ್ಟಲಿ, ಆದಷ್ಟು ಶೀಘ್ರವಾಗಿ ಉಳಿದೆರಡು ಸಂಪುಟಗಳೂ ಪ್ರಕಟವಾಗಿ ವತ್ಸಲಾರವರ ಪರಿಶ್ರಮ, ಪ್ರಯತ್ನ, ಉದ್ದೇಶಗಳು ಸಾರ್ಥಕವಾಗಿ ಈಡೇರಲಿ ಎಂದು ಹಾರೈಸುತ್ತೇನೆ.

ಡಾ. ಪ್ರಮೀಳಾ ಮಾಧವ್
ಖ್ಯಾತ ಹಿರಿಯ ಲೇಖಕಿ
ಬೆಂಗಳೂರು

ಪ್ರಕಾಶನ

978-81-964207-9-6

Rs. 599/-